# ಕರ್ನಾಟಕ ವಿಧಾನಮಂಡಲ

**ಕರ್ನಾಟಕ ಶಾಸಕಾಂಗ ಪತ್ರಿಕೆ**

**(ತ್ರೈಮಾಸಿಕ ಪತ್ರಿಕೆ)**

**ಏಪ್ರಿಲ್, ಮೇ ಮತ್ತು ಜೂನ್ – 2022**

**ಸಂಪುಟ–IV ಸಂಖ್ಯೆ –2**

**ಪ್ರಕಟಣೆ:**

**ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ,**

**ಕರ್ನಾಟಕ ವಿಧಾನ ಸಭೆ ಸಚಿವಾಲಯ, ವಿಧಾನಸೌಧ,**

**ಬೆಂಗಳೂರು – 560 233.**

## ವಿಶೇಷ ಸೂಚನೆ

ಕರ್ನಾಟಕ ಶಾಸಕಾಂಗ ಪತ್ರಿಕೆಯು ಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್ತಿನ ಸದಸ್ಯರುಗಳ ಪರಾಮರ್ಶೆಗಾಗಿ ಪ್ರಕಟಿಸಲಾಗುತ್ತಿದ್ದು, ಇದು ಆಂತರಿಕ ಪ್ರಕಟಣೆಗೆ ಮಾತ್ರ ಸೀಮಿತವಾಗಿರುತ್ತದೆ.

ಈ ಪತ್ರಿಕೆಯಲ್ಲಿ ಅಳವಡಿಸಲಾಗಿರುವ ಮಾಹಿತಿಗಳು ವಿವಿಧ ದಿನ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಸುದ್ದಿಗಳ ಆಧಾರಿತವಾಗಿದ್ದು, ಇದರಲ್ಲಿ ನ್ಯೂನತೆ, ವ್ಯತ್ಯಾಸಗಳಿಂದ ಅಥವಾ ನಿಖರತೆಯ ಕೊರತೆಯಿಂದ ಯಾವುದೇ ವ್ಯಕ್ತಿಗೆ ಉಂಟಾಗಬಹುದಾದ ನಷ್ಟ/ಹಾನಿಗೆ ವಿಧಾನ ಸಭಾ ಸಚಿವಾಲಯವು ಯಾವುದೇ ರೀತಿ ಜವಾಬ್ದಾರವಾಗುವುದಿಲ್ಲ.

**ಸೂಚನೆ:–** ಪತ್ರಿಕೆಯು ವಿಧಾನ ಮಂಡಲದ ಅಂತರ್ಜಾಲ **http://kla.kar.nic.in** ನಲ್ಲೂ ಲಭ್ಯವಿದೆ

# ಮುನ್ನುಡಿ

ಕರ್ನಾಟಕ ವಿಧಾನಮಂಡಲದ ಸಂಶೋಧನಾ ಮತ್ತು ಉಲ್ಲೇಖನಾ ಶಾಖೆಯು ಉಭಯ ಸದನಗಳ ಮಾನ್ಯ ಸದಸ್ಯರುಗಳ ಉಪಯೋಗಕ್ಕಾಗಿ ಕರ್ನಾಟಕ ಶಾಸಕಾಂಗ ತ್ರೈಮಾಸಿಕ ಪತ್ರಿಕೆಯ ಸಂಪುಟ – IV ರ ಎರಡನೇ ಸಂಚಿಕೆಯನ್ನು ಪ್ರಕಟಪಡಿಸುತ್ತಿದೆ.

ತ್ರೈಮಾಸಿಕ ಶಾಸಕಾಂಗ ಪತ್ರಿಕೆಯು ಮುಖ್ಯವಾಗಿ ಕರ್ನಾಟಕ ವಿಧಾನಮಂಡಲದ ಎರಡೂ ಸದನಗಳ ಶಾಸಕಾಂಗದ ಸುದ್ದಿಗಳು, ಲೋಕಸಭೆ, ರಾಜ್ಯಸಭೆಗಳ, ಸಂಸದೀಯ ವ್ಯವಹಾರಗಳಿಗೆ ಸಂಬಂಧಿಸಿದ ಪ್ರಮುಖ ಸುದ್ದಿಗಳು, ರಾಜ್ಯಗಳ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಹಾಗೂ ಇತರೆ ವಿಷಯಗಳನ್ನೊಳಗೊಂಡಿರುತ್ತದೆ.

ಈ ಸಂಚಿಕೆಯಲ್ಲಿ 2022ನೇ ಸಾಲಿನ ಏಪ್ರಿಲ್, ಮೇ ಮತ್ತು ಜೂನ್ ತಿಂಗಳ ಅವಧಿಯಲ್ಲಿನ ಪ್ರಮುಖ ಸುದ್ದಿ, ಮಾಧ್ಯಮಗಳಲ್ಲಿ ಪ್ರಕಟವಾದ ದೈನಂದಿನ ಸುದ್ದಿಗಳನ್ನು ಸಂಗ್ರಹಿಸಿ ಪ್ರಕಟಿಸಲಾಗಿದೆ.

ಸಂಶೋಧನಾ ಮತ್ತು ಉಲ್ಲೇಖನಾ ವಿಭಾಗವು ಸಿದ್ಧಪಡಿಸಿ ಹೊರತರುತ್ತಿರುವ ಈ ಪತ್ರಿಕೆಯ ಗುಣಮಟ್ಟವನ್ನು ಉನ್ನತೀಕರಿಸಲು ಹಾಗೂ ಹೆಚ್ಚು ವಿಷಯಾಸಕ್ತವಾಗಿಸಲು ಇದರ ಬೆಳವಣಿಗೆಯ ಸುಧಾರಣೆಗೆ ಮಾನ್ಯ ಸದಸ್ಯರುಗಳಿಂದ ಅಮೂಲ್ಯ ಸಲಹೆ ಮತ್ತು ಸೂಚನೆಗಳನ್ನು ಬರಹ ರೂಪದಲ್ಲಿ ಸ್ವೀಕರಿಸಲು ಸದಾ ಸ್ವಾಗತವಿರುತ್ತದೆ.

**ಎಂ.ಕೆ.ವಿಶಾಲಾಕ್ಷಿ**
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ.

ಬೆಂಗಳೂರು
ದಿನಾಂಕ: 16–08–2022

## ಕರ್ನಾಟಕ ಶಾಸಕಾಂಗ ತ್ರೈಮಾಸಿಕ ಪತ್ರಿಕೆಯ ಸಂಪಾದಕ ವರ್ಗ

### ಕರ್ನಾಟಕ ವಿಧಾನ ಸಭೆ ಸಚಿವಾಲಯ

1. ಶ್ರೀಮತಿ ಎಂ.ಕೆ. ವಿಶಾಲಾಕ್ಷಿ : ಕಾರ್ಯದರ್ಶಿ
2. ಶ್ರೀಮತಿ ಬಿ.ಎಸ್. ಮಂಜುಳ : ಜಂಟಿ ನಿರ್ದೇಶಕರು
3. ಶ್ರೀಮತಿ ವಿ. ಭಾಗ್ಯ : ಉಪ ನಿರ್ದೇಶಕರು
4. ಶ್ರೀಮತಿ ಜಿ. ಮಮತ : ಸಹಾಯಕ ನಿರ್ದೇಶಕರು

### ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ

1. ಶ್ರೀಮತಿ ಕೆ. ಆರ್. ಮಹಾಲಕ್ಷ್ಮಿ : ಕಾರ್ಯದರ್ಶಿ
2. ಶ್ರೀಮತಿ ಎಸ್. ನಿರ್ಮಲ : ಅಪರ ಕಾರ್ಯದರ್ಶಿ

# ಕರ್ನಾಟಕ ಶಾಸಕಾಂಗ ಪತ್ರಿಕೆ
## (ತ್ರೈಮಾಸಿಕ ಪತ್ರಿಕೆ)
## ಏಪ್ರಿಲ್, ಮೇ ಮತ್ತು ಜೂನ್ – 2022

**ಸಂಪುಟ–IV ಸಂಖ್ಯೆ – 2**

## ಪರಿವಿಡಿ

### ಭಾಗ–1

### ವಿಧಾನ ಮಂಡಲದ ಸುದ್ದಿಗಳು


| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 1. | 26 ದಿನ, 116 ತಾಸು ಅಸೆಂಬ್ಲಿ ಕಲಾಪ : ಕಾಗೇರಿ | 1 |
| 2. | ಪರಿಷತ್ ಸ್ಥಾನಕ್ಕೆ ಸಿಎಂ ಇಬ್ರಾಹಿಂ ರಾಜೀನಾಮೆ | 1 |
| 3. | ಚುನಾವಣೆ ಸುಧಾರಣೆ ಕುರಿತು ಸಂಸತ್ತಿನಲ್ಲಿ ಚರ್ಚಿಸಲು ಮನವಿ | 2 |
| 4. | ಪೀಠಾಸೀನಾಧಿಕಾರಿಗಳ ಸಮ್ಮೇಳನದಲ್ಲಿ ಪ್ರಸ್ತಾಪ | 2 |
| 5. | ಇವಿಎಂ ನಾಪತ್ತೆ: ಚುನಾವಣಾ ಆಯೋಗಕ್ಕೆ ಪತ್ರ | 3 |
| 6. | ಪ್ರಜಾಪ್ರಭುತ್ವ ಯಶಸ್ಸಿಗೆ ಯುವಕರ ಪಾಲ್ಗೊಳ್ಳುವಿಕೆ ಅಗತ್ಯ : ಕಾಗೇರಿ | 3 |
| 7. | ಗುವಾಹಟಿ ಅಸ್ಸಾಂನಲ್ಲಿ ನಡೆದ 8ನೇ ಭಾರತ ವಲಯದ ಕಾಮನ್ವೆಲ್ತ್ ಸಂಸದೀಯ ಸಂಘದ ಕಾರ್ಯಕಾರಿ ಸಭೆಯಲ್ಲಿ ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಅವರ "ಮುಖ್ಯ ವಾಹಿನಿಯ ಯುವ ಕೇಂದ್ರಿತ ನೀತಿಗಳು" ಕುರಿತು ಅಭಿಪ್ರಾಯ ಮಂಡಿಸಿರುವುದು | 6 |
| 8. | ಪತ್ರಕರ್ತರು ಜಲ್ವಂತ ಸಮಸ್ಯೆಗೆ ಸ್ಪಂದಿಸಿ: ಹೊರಟ್ಟಿ | 8 |
| 9. | ಎಸ್ಸಿ/ಎಸ್ಟಿ ಕಲ್ಯಾಣ ಸಮಿತಿ ಸಭೆಗೆ ನುಗ್ಗಿ ವಕೀಲ ಹಿರೇಮಠ ಗಲಾಟೆ | 9 |
| 10. | ಆಧುನಿಕ ಕರ್ನಾಟಕ ಕನಸು ಕಂಡಿದ್ದ ರೆಡ್ಡಿ | 10 |
| 11. | 19 ಲಕ್ಷ ಇವಿಎಂ ಯಂತ್ರಗಳು ನಾಪತ್ತೆ: ತನಿಖೆಗೆ ಒತ್ತಾಯ | 10 |
| 12. | ಸಚಿವರ ಕಛೇರಿ ಮುಂದೆ ಮೇಲ್ಮನೆ ಸದಸ್ಯರ ಧರಣಿ | 11 |
| 13. | ಶಾಸನ ಸಮಿತಿ ಅಧಿಕಾರ ಪಾರದರ್ಶಕತೆ ಮೊಟಕು | 12 |
| 14. | BJP inches closer to majority in Council with polls coming up | 12 |
| 15. | ಸಭಾಪತಿ ಸ್ಥಾನಕ್ಕೆ ಹೊರಟ್ಟಿ ರಾಜೀನಾಮೆ | 13 |
| 16. | ಮಲಕಾಪೂರೆ ಹಂಗಾಮಿ ಸಭಾಪತಿ | 14 |

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 17. | ಜೆಡಿಎಸ್ ತೊರೆದು ಬಿಜೆಪಿ ಸೇರ್ಪಡೆಯಾದ ಹೊರಟ್ಟಿ | 15 |
| 18. | ರಾಜ್ಯಸಭಾ ಚುನಾವಣೆಗೆ ಅಧಿಸೂಚನೆ ಪ್ರಕಟ | 16 |
| 19. | ಸ್ಪೀಕರ್ ಕಾಗೇರಿ ಪೀಠಾಸೀನಾಧಿಕಾರಿಗಳ ಸಮಿತಿ ಅಧ್ಯಕ್ಷ | 16 |
| 20. | ರಾಜ್ಯ ಭವನದಲ್ಲಿ ಅಂಬೇಡ್ಕರ್ ಪ್ರತಿಮೆ ಅನಾವರಣ | 16 |
| 21. | ವಿಧಾನ ಮಂಡಲ ಸಮಿತಿ ಸಭೆಗೆ ಗೈರಾಗಲು ಪ್ರಿಯಾಂಕ್ ತೀರ್ಮಾನ | 18 |
| 22. | ಇಂದು ಕೆಂಪೇಗೌಡ ಲೇಔಟ್‌ಗೆ ವಿಧಾನಸಭೆ ಅಹವಾಲು ಸಮಿತಿ | 18 |
| 23. | ನನ್ನ ಜೀವನ ತೆರೆದ ಪುಸ್ತಕ | 19 |
| 24. | ಕಾಗೇರಿ ನೇತೃತ್ವದಲ್ಲಿ ಪೀಠಾಸೀನಾಧಿಕಾರಿಗಳ ಸಭೆ | 19 |
| 25. | ಪರಿಷತ್ ನೂತನ ಸದಸ್ಯರಿಂದ ಪ್ರಮಾಣ ವಚನ | 22 |
| 26. | ವಿಧಾನಸಭೆಗೆ 70ರ ಸಂಭ್ರಮ | 23 |
| 27. | 70 ವರ್ಷ ಪೂರೈಸಿದ ವಿಧಾನಸಭೆ | 24 |
| 28. | ಶಾಸಕರ ವೇತನ ರೂ.2.5 ಲಕ್ಷಕ್ಕೆ ಹೆಚ್ಚಳ | 24 |
| 29. | ವಿಧಾನ ಸಭೆಯ 70 ಸಂಭ್ರಮಕ್ಕೆ ವಿ.ಕ. ತೋರಣ | 25 |
| | **ಭಾಗ – 2**<br>**ಸಂಸತ್ ಸುದ್ದಿಗಳು** | |
| 1. | ರಾಜ್ಯಸಭೆ 72 ಸದಸ್ಯರು ನಿವೃತ್ತಿ | 49 |
| 2. | Criminal identification bill in LS today | 49 |
| 3. | Release MPLAD funds for 2023-24 in advance: Parl panel | 50 |
| 4. | ಅಲ್ಪಸಂಖ್ಯಾತರ ವಿರುದ್ಧ ದ್ವೇಷ ಭಾಷಣ ರಾಜ್ಯಸಭೆಯಲ್ಲಿ ಕಾಂಗ್ರೆಸ್ ಪ್ರಸ್ತಾಪ | 51 |
| 5. | Budget session ends on productive note | 51 |
| 6. | ಫಲಪ್ರದ ಅಧಿವೇಶನ ಅವಧಿಪೂರ್ವ ಅಂತ್ಯ | 52 |
| 7. | ಸಂಸತ್ತಿನಲ್ಲಿ 13 ಮಸೂದೆ ಅಸ್ತು | 53 |
| 8. | ಒಂದು ದಿನ ಮುನ್ನವೇ ಬಜೆಟ್ ಅಧಿವೇಶನ ಮುಕ್ತಾಯ | 53 |
| 9. | Enact laws only after through debate and discussion: Birla | 54 |
| 10. | ಹೊಸ ಪಾರ್ಲಿಮೆಂಟಲ್ಲಿ ಅಕ್ಕ ವರ್ಣಚಿತ್ರ | 55 |
| 11. | LS Speaker urged to act on ‘intimidation’ of Karti | 56 |

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 12. | ಲೋಕಸಭೆ ಡಿಜಿಟಲೀಕರಣ, ರೂ.668 ಕೋಟಿ ಉಳಿಕೆ | 57 |
| 13. | No resolutions against other countries in Parliament | 57 |
| | **ಭಾಗ – 3**<br>**ಕೇಂದ್ರ ಸರ್ಕಾರದ ಸುದ್ದಿಗಳು** | |
| 1. | India, Russia talk payment options | 61 |
| 2. | ಪಕ್ಷಾಂತರ ನಿಷೇಧ ಕಾಯ್ದೆಗೆ ತಿದ್ದುಪಡಿ ಅಗತ್ಯ | 61 |
| 3. | ಕಾಶ್ಮೀರಕ್ಕೆ ಭರ್ಜರಿ ಪ್ಯಾಕೇಜ್ | 63 |
| 4. | ರಕ್ಷಣಾ ವೆಚ್ಚ : ವಿಶ್ವದಲ್ಲೇ ಭಾರತ ನಂ.3 | 64 |
| 5. | ನಾಲ್ಕನೇ ಅಲೆ ತಡೆತಂತ್ರ | 65 |
| 6. | ರಸಗೊಬ್ಬರಕ್ಕೆ 60,939 ಕೋಟಿ ಸಬ್ಸಿಡಿ | 67 |
| 7. | ಸಮಾನ ನಾಗರಿಕ ಸಂಹಿತೆ ಜಾರಿಗೆ ಕೇಂದ್ರ ಸರ್ಕಾರ ಒಲವು | 68 |
| 8. | ಜಿಎಸ್‌ಟಿ ರೂ. 1.68 ಲಕ್ಷ ಕೋಟಿ | 70 |
| 9. | ರಾಷ್ಟ್ರಪತಿ ಚುನಾವಣೆ, ಪ್ರತಿಪಕ್ಷಗಳ ಬವಣೆ | 71 |
| 10. | ಪೌರತ್ವ ತ್ಯಜಿಸಿದ 7,50,000 ಭಾರತೀಯರು | 73 |
| 11. | ರಾಜೀವ್ ಕುಮಾರ್ ಮುಖ್ಯ ಚುನಾವಣಾ ಆಯುಕ್ತ | 75 |
| 12. | ಮತದಾರರ ಪಟ್ಟಿಗೆ ಆಧಾರ್ ಜೋಡಣೆ, ಶೀಘ್ರವೇ ನಿಯಮ | 75 |
| 13. | Kovind becomes first Indian president to visit Jamaica | 76 |
| 14. | ಆಧಾರ್ : ನಿಲುವು ಬದಲು | 76 |
| 15. | ಒಂದೇ ಪೋರ್ಟಲ್‌ನಲ್ಲಿ ಸರ್ಕಾರಿ ಸಾಲ ಯೋಜನೆ ಮಾಹಿತಿ | 77 |
| 16. | ಜುಲೈ 18ರಂದು ರಾಷ್ಟ್ರಪತಿ ಚುನಾವಣೆ | 78 |
| 17. | ರಾಷ್ಟ್ರಪತಿ ಗದ್ದುಗೆ ಯಾರಿಗೆ | 78 |
| 18. | Presidential polls: special cell set up | 81 |
| 19. | ಭೂಸೇನೆ ಅಧಿಸೂಚನೆ | 81 |
| 20. | ರೂ.20 ಸಾವಿರ ಕೋಟಿ ಯೋಜನೆಗೆ ಚಾಲನೆ | 82 |
| 21. | ವಿನಾಯಿತಿಗೆ ಎಳ್ಳು ನೀರು | 82 |
| | **ಭಾಗ – 4**<br>**ರಾಜ್ಯ ಸರ್ಕಾರದ ಸುದ್ದಿಗಳು** | |
| 1. | ರಾತ್ರೋರಾತ್ರಿ 10,000 ಕೋಟಿ ಬಜೆಟ್ ಮಂಡನೆ | 85 |
| 2. | ಮೇಕೆದಾಟು : ಕೇಂದ್ರಕ್ಕೆ ಮನವರಿಕೆ ಯತ್ನ | 90 |

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 3. | ದೆಹಲಿಯಲ್ಲಿ ನಿರ್ಮಲಾ – ಸಿಎಂ ಭೇಟಿ | 91 |
| 4. | ಮಹಿಳಾ ಸ್ವಸಹಾಯ ಸಂಘಗಳಿಗಾಗಿ ಆ್ಯಂಕರ್ ಬ್ಯಾಂಕ್: ಮುಖ್ಯಮಂತ್ರಿ | 92 |
| 5. | ಒಂದು ರಾಷ್ಟ್ರ ಒಂದು ಚುನಾವಣೆ ಪದ್ಧತಿ ಅತ್ಯಗತ್ಯ ಎಂದ ಜೋಶಿ | 93 |
| 6. | ನಮ್ಮಲ್ಲೇ ತಯಾರಾದ ಉತ್ಪನ್ನ ಬಳಸಿ | 94 |
| 7. | ಕಳಸಾ ಬಂಡೂರಿ ಶೀಘ್ರ ಆರಂಭ | 94 |
| 8. | ಹುದ್ದೆ ಬಿಟ್ಟಿಳಿದ ಈಶ್ವರಪ್ಪ | 95 |
| 9. | ಸಂಚಾರಿ ಪಶು ಚಿಕಿತ್ಸಾಲಯ ಯೋಜನೆಗೆ ಚಾಲನೆ | 96 |
| 10. | ಬೊಕ್ಕಸಕ್ಕೆ ಭರ್ಜರಿ ವರಮಾನ | 97 |
| 11. | ಕಾರ್ಯಶೈಲಿ ಬದಲಿಸಿಕೊಳ್ಳಿ | 98 |
| 12. | ಟೆಂಡರ್ ಪರಿಶೀಲನೆ ಸಮಿತಿ: ನ್ಯಾ. ರತ್ನಕಲಾ ನೇತೃತ್ವ | 99 |
| 13. | ಸೌಂಡ್‌ಗೆ ಬ್ರೇಕ್ | 100 |
| 14. | State issues guideliness on loudspeaker | 101 |
| 15. | ಅಟಲ್ ಪರಿವರ್ತನಾ ಅಭಿಯಾನ | 102 |
| 16. | ದೇಶದ ಪ್ರಥಮ ಸೌಲಭ್ಯಕ್ಕೆ ಚಾಲನೆ | 104 |
| 17. | ಬಲವಂತದ ಮತಾಂತರ: ಸುಗ್ರಿವಾಜ್ಞೆಗೆ ಅಂಕಿತ | 104 |
| 18. | ರಾಜಕಾಲುವೆ ಅಭಿವೃದ್ಧಿಗೆ 1600 ಕೋಟಿ ಅನುದಾನ | 105 |
| 19. | ಮಳೆಗೆ 9 ಬಲಿ, 635 ಹೆಕ್ಟೇರ್ ಬೆಳೆ ಹಾನಿ | 106 |
| 20. | ಕೆನಡಾ ಸಂಸತ್ತಿನಲ್ಲಿ ಕನ್ನಡದ ಕಂಪು ಹರಡಿದ ಚಂದ್ರ ಆರ್ಯ | 107 |
| 21. | ರೂ.28,000 ಕೋಟಿ ಯೋಜನೆಗೆ ಒಪ್ಪಿಗೆ | 108 |
| 22. | ಹಣದುಬ್ಬರ ಏನು ಪರಿಹಾರ | 110 |
| 23. | ಸಿಟಿಗಳಿಗೂ ವಿಮಾನ ಭಾಗ್ಯ | 111 |
| 24. | ದಾವೋಸ್‌ನಿಂದ ರಾಜ್ಯದೆಡೆಗೆ ಹರಿಯಲಿದೆ ರೂ.52 ಸಾವಿರ ಕೋಟಿ ಬಂಡವಾಳ ಹೂಡಿಕೆ | 113 |
| 25. | ರಾಜ್ಯ ಸರ್ಕಾರಕ್ಕೆ ಮಹಿಳಾ ಮುಖ್ಯ ಕಾರ್ಯದರ್ಶಿ | 114 |

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 26. | ಸರ್ಕಾರಿ ಹುದ್ದೆಗೆ ಡಿಪ್ಲೊಮಾ ಪರಿಗಣಿಸಲು ಆದೇಶ | 114 |
| 27. | ಪಾಲಿಕೆ ಕಾಯ್ದೆಯ ಮೀಸಲು ದೋಷ ನಿವಾರಣೆಗೆ ಸಚಿವ ಸಂಪುಟ ನಿರ್ಧಾರ | 115 |
| 28. | ಸೇವೆಗೆ ಸೇರದಿದ್ದರೆ ಹೊಸ ಖಾಲಿ ಹುದ್ದೆ | 116 |
| 29. | ಮುಖ್ಯಮಂತ್ರಿ ಮಧ್ಯಪ್ರವೇಶ | 117 |
| 30. | ಕಿಸಾನ್ ಸಮ್ಮಾನ್ : 47.83 ಲಕ್ಷ ರೈತರ ಖಾತೆಗಳಿಗೆ ರೂ.956.71 ಕೋಟಿ ಪಾವತಿ | 119 |
| 31. | ಪಠ್ಯ ಸಮಿತಿ ವಿಸರ್ಜನೆ ಅಂತೂ ವಿವಾದಕ್ಕೆ ಕೊನೆ | 121 |
| 32. | 2 ವರ್ಷದಲ್ಲಿ ನರಗೋತ್ಥಾನ ಯೋಜನೆ ಮುಗಿಸಿ | 122 |
| 33. | ಹೊಸ ಪಠ್ಯ ಸಮಿತಿ ಇಲ್ಲ | 123 |
| 34. | ಕಾಪಸೆ, ಆಳ್ವಗೆ ಪುಸ್ತಕ ಪ್ರಾಧಿಕಾರ ಪ್ರಶಸ್ತಿ | 124 |
| 35. | ಗಾಲಿ ಮೇಲೆ ಆಸ್ಪತ್ರೆ, ಪ್ರಯೋಗಾಲಯ | 125 |
| 36. | ಪಿಯು ಪಠ್ಯ ಪರಿಷ್ಕರಣೆ ಇಲ್ಲ | 126 |
| 37. | ಜಾಗತಿಕ ಭೂಪಟ : ಕರ್ನಾಟಕಕ್ಕೆ 5ನೇ ಸ್ಥಾನ | 128 |
| 38. | ಲೋಕಾಯುಕ್ತಕ್ಕೆ ಹೊಸ ಸಾರಥಿ | 128 |
| 39. | ಬಿ.ಎಸ್.ಪಾಟೀಲ್ ಪ್ರಮಾಣವಚನ | 130 |
| 40. | 'ನಾಡಪ್ರಗತಿಗೆ ಕೇಂದ್ರದ ಹೆಗಲು' | 131 |
| 41. | ರೂ. 6,000 ಕೋಟಿ ಕ್ರಿಯಾ ಯೋಜನೆಗೆ ಸರ್ಕಾರ ಅಸ್ತು | 133 |
| 42. | ಮೋದಿ ಬಂದಿದ್ದಕ್ಕೆ ಗುಂಡಿಗಳಿಗೆ ಮುಕ್ತಿ | 135 |
| 43. | ಪ್ರಧಾನಿ ಮೋದಿ ಜೊತೆ ಯೋಗಾಭ್ಯಾಸಿಗಳ ಯೋಗ | 136 |
| 44. | ಸ್ತ್ರೀಶಕ್ತಿ ಸ್ವಸಹಾಯ ಸಂಘಗಳಿಗೆ 1.5 ಲಕ್ಷ ರೂ. ಧನ ಸಹಾಯ | 137 |
| 45. | ಬರಗೂರು ಪಠ್ಯ ಸಮಿತಿಯ ತಪ್ಪು ಬಿಚ್ಚಿಟ್ಟ ಸರ್ಕಾರ | 138 |
| 46. | ಬೊಮ್ಮನಹಳ್ಳಿ, ಆರ್.ಆರ್.ನಗರಕ್ಕೆ 14 ವಾರ್ಡ್ | 140 |
| 47. | 13 ಜಿಲ್ಲೆಗಳಲ್ಲಿ ಹಿಂದುಳಿದ ವರ್ಗಗಳ ಸ್ಥಿತಿಗತಿ ಅಧ್ಯಯನ | 142 |
| 48. | ಮೂವರಿಗೆ ಕೆಂಪೇಗೌಡ ಪ್ರಶಸ್ತಿ | 142 |

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 49. | ಸೌಧದಲ್ಲಿ ಕೆಂಪೇಗೌಡ ಪ್ರತಿಮೆ | 143 |
| 50. | ಜಿ.ಎಸ್.ಟಿ. ಕೌನ್ಸಿಲ್ಗೆ ಮಧ್ಯಂತರ ವರದಿ ಸಲ್ಲಿಕೆ | 144 |
| 51. | 40 ಪರ್ಸೆಂಟ್ ಕಮಿಷನ್ ದಾಖಲೆ ಕೇಳಿದ ಕೇಂದ್ರ | 145 |
| | **ಭಾಗ – 5**<br>**ರಾಜ್ಯ ನೆಲ, ಜಲ, ಭಾಷೆ ಸುದ್ದಿಗಳು** | |
| 1. | Mekedatu to bleed state of prized forests | 147 |
| 2. | ಪಶ್ಚಿಮ ಘಟ್ಟ: ಹೊಸ ಸಮಿತಿ ರಚನೆ | 148 |
| 3. | ನದಿ ಜೋಡಣೆ ಯೋಜನೆ ಜಾರಿಗೊಳಿಸದಿರಿ | 149 |
| 4. | ಕೇಂದ್ರದಿಂದ ರೂ. 9,675 ಕೋಟಿ ನೆರವು | 150 |
| 5. | ಕನ್ನಡ ಭಾಷೆ ಕಡ್ಡಾಯ ಕಲಿಕೆಗೆ ಹೈಕೋರ್ಟ್ ತಡೆ | 151 |
| | **ಭಾಗ – 6**<br>**ನ್ಯಾಯಾಲಯ ಸುದ್ದಿಗಳು** | |
| 1. | ಮೀಸಲು ಗಿಫ್ಟ್‌ಗೆ ಲಗಾಮು | 154 |
| 2. | ನ್ಯಾಯಾಲಯದಲ್ಲಿ ಸ್ಥಳೀಯ ಭಾಷೆ ಬಳಕೆ | 156 |
| 3. | ಮೀಸಲಾತಿ ತೊಡಕು ನಿವಾರಣೆಗೆ ನ್ಯಾಯ ಮೂರ್ತಿ ಭಕ್ತವತ್ಸಲ ನೇತೃತ್ವದ ಆಯೋಗ | 156 |
| 4. | ಸ್ಥಳೀಯ ಸಂಸ್ಥೆ ಚುನಾವಣೆ ನಡೆಸಿ | 157 |
| 5. | ದೇಶದ್ರೋಹ ಕಾಯ್ದೆಯೆಂದರೇನು | 159 |
| 6. | ಜ್ಞಾನವಾಪಿ ವಿಚಾರಣೆಗೆ ಸುಪ್ರೀಂ ತಾತ್ಕಾಲಿಕ ತಡೆ | 161 |
| 7. | HC: Can't let free speech violate citizens' rights | 162 |
| 8. | Minority govt's dissolution of House | 163 |
| 9. | Floor test will prevent horse-trading | 163 |
| 10. | ನ್ಯಾಯಾಂಗಕ್ಕೆ ಬೇಕಾದ ತಂತ್ರಜ್ಞಾನ ಅಭಿವೃದ್ಧಿಗೆ ಸರ್ಕಾರ ಬದ್ಧ: ಆರ್ ಸಿ | 165 |
| | **ಭಾಗ – 7**<br>**ಚುನಾವಣಾ ಸುದ್ದಿಗಳು** | |
| 1. | ಮೇಲ್ಮನೆ 7 ಸ್ಥಾನಗಳಿಗೆ ಜೂನ್ 3ರಂದು ಚುನಾವಣೆ | 167 |
| 2. | ಮೇಲ್ಮನೆಗೆ 18 ನಾಮಪತ್ರ | 167 |

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 3. | ವಿಧಾನಪರಿಷತ್‌ಗೆ ಅವಿರೋಧ ಆಯ್ಕೆ | 168 |
| 4. | Nirmala, Jaggesh BJP's RS candidates from Karnataka | 168 |
| 5. | ಕಾಂಗ್ರೆಸ್‌ನಿಂದ ಜೈರಾಂ, ಮನ್ಸೂರ್ ನಾಮಪತ್ರ | 169 |
| 6. | ರಂಗೇರಿತು ರಾಜ್ಯಸಭಾ ಕಣ | 170 |
| 7. | ಕೈ 2ನೇ ಅಭ್ಯರ್ಥಿ ಸೋತ್ರೆ ಯಾರು ಹೊಣೆ | 171 |
| 8. | ರಾಜ್ಯಸಭೆ ಚುನಾವಣೆ: ನಾಮಪತ್ರ ಸಲ್ಲಿಕೆ | 174 |
| 9. | ಎಲ್ಲ ಪಕ್ಷಗಳಿಗೂ ಅಡ್ಡಮತ ಭೀತಿ | 175 |
| 10. | ರಾಜ್ಯಸಭೆ : ನಾಲ್ಕನೇ ಸ್ಥಾನಕ್ಕೇ ತೀವ್ರ ಹಣಾಹಣಿ | 177 |
| 11. | How voting happens | 179 |
| 12. | ನಾಮಪತ್ರ ಕ್ರಮಬದ್ಧ | 179 |
| 13. | ರಾಜ್ಯಸಭೆ : ಚಿದಂಬರಂ, ಶುಕ್ಲಾ ಅವಿರೋಧ ಆಯ್ಕೆ | 180 |
| 14. | ರಾಜ್ಯಸಭೆ : ಫಾರ್ಮುಲಾ ಪ್ರಕಾರ ಮತ ಬರಬೇಕು | 181 |
| 15. | ಕೈ–ದಳ ಜಿದ್ದು : ಲಹರ್‌ಗೆ ಲಾಟರಿ | 181 |
| 16. | ವಿಧಾನ ಪರಿಷತ್ 4 ಕ್ಷೇತ್ರ ಚುನಾವಣೆ : 74.39% ಮತ | 183 |
| 17. | Result shows come in Cong and JD(S) voted for BJP | 184 |
| 18. | ಮೇಲ್ಮನೆ 2 ಸ್ಥಾನ ಬಿಜೆಪಿ, 2 ಕೈ ತೆಕ್ಕೆಗೆ | 185 |
| 19. | ರಾಷ್ಟ್ರಪತಿ ಚುನಾವಣೆ : ವಿಶೇಷ ಪೆನ್ ಬಳಕೆ | 188 |
| 20. | ಮತದಾನ ಹಕ್ಕು : ಎಡವಿದ ಪದವೀಧರರು, ಶಿಕ್ಷಕರು | 188 |
| 21. | ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಸ್ಪರ್ಧಿಸುವುದಕ್ಕೆ ನಿರ್ಬಂಧ | 190 |
| 22. | Droupadi Murmu is NDA Pick; Opposition parties field Sinha | 191 |
| 23. | ಉಪಸಮರದಲ್ಲಿ ಬಿಜೆಪಿ ಜಯಭೇರಿ | 193 |
| 24. | ರಾಜ್ಯಸಭೆ: ಶೇ. 31 ಸದಸ್ಯರಿಗೆ ಕ್ರಿಮಿನಲ್ ಹಿನ್ನಲೆ | 194 |
| 25. | ರಾಷ್ಟ್ರಪತಿ ಚುನಾವಣೆ: 115 ನಾಮಪತ್ರ ಸಲ್ಲಿಕೆ | 195 |

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 26. | ಆಗಸ್ಟ್ 6 ರಂದು ಉಪರಾಷ್ಟ್ರಪತಿ ಎಲೆಕ್ಷನ್, ಅಂದೇ ಫಲಿತಾಂ | 195 |
| | **ಭಾಗ – 8**<br>**ಹೊರ ರಾಜ್ಯಗಳ ಸುದ್ಧಿಗಳು** | |
| 1. | Punjab passes resolution to transfer Chandigarh to itself | 196 |
| 2. | TMC pushes for long-pending women's reservation bill | 196 |
| 3. | All 24 Ministers in A.P Cabinet submit their resignations to CM | 197 |
| 4. | 25 Minister take oath in A.P Cabinet | 198 |
| 5. | TN passes bills to clip Guv'spower to appoint vice-chancellors | 199 |
| 6. | ಹಿಮಾಚಲ ವಿಧಾನಸೌಧಕ್ಕೆ ಖಲಿಸ್ತಾನ್ ಉಗ್ರರ ಧ್ವಜ | 200 |
| 7. | ರಾಜ್ಯಪಾಲರ ಜೊತೆ ಡಿಎಂಕೆ ಡಿಶುಂ ಡಿಶುಂ | 201 |
| 8. | Manik Saha replaces Biplab as Tripura CM | 203 |
| 9. | ದಿಲ್ಲಿ ಲೆ. ಗವರ್ನರ್ ರಾಜೀನಾಮೆ | 204 |
| 10. | Meghalaya govt. under fire after Assembly dome collapse | 204 |
| 11. | ಅನ್ನದಾತರ ಅಭಿವೃದ್ಧಿಗೆ ಸರ್ಕಾರದ ನೆರವು | 205 |
| 12. | BJP suspends Rajasthan MLA for cross-voting in RS polls | 206 |
| 13. | Bengal assembly passes bill removing guv as chancellor of varsities | 207 |
| 14. | ಮಹಾಮೈತ್ರಿಗೆ ಶಿಂಧೆ ಮಹಾಘಾತ | 208 |
| 15. | 'ಅಘಾಡಿ' ಸರ್ಕಾರ ಅತಂತ್ರ | 210 |
| 16. | ಬಿಕ್ಕಟ್ಟಲ್ಲೂ ಭರ್ಜರಿ ಅನುದಾನ | 211 |
| 17. | ಸುಪ್ರಿಂ ಅಂಗಳಕ್ಕೆ ಮಹಾ ಬಂಡಾಯ | 212 |
| 18. | SC relief for Maha rebel MLAs | 213 |
| 19. | ಉದ್ಧವ್ ರಾಜೀನಾಮೆ | 214 |
| | **ಭಾಗ – 9**<br>**ಶ್ರದ್ಧಾಂಜಲಿ** | |
| 1. | ಜಿ.ವಿ.ಶ್ರೀರಾಮರೆಡ್ಡಿ, ಚಳವಳಿಗಳ ಜನಕ | 217 |

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 2. | ಈಶಣ್ಣ ಗುಳಗಣ್ಣವರ, ಮಾಜಿ ಶಾಸಕ | 217 |
| 3. | ಪಂಡಿತ ರಾಜಶೇಖರ ಮನಸೂರ ಖ್ಯಾತ ಹಿಂದುಸ್ತಾನಿ ಗಾಯಕ | 218 |
| 4. | ಶಿವಕುಮಾರ್ ಶರ್ಮಾ, ಖ್ಯಾತ ಸಂತೂರ್ ವಾದಕ | 218 |
| 5. | ಸಿ.ಎಂ. ದೇಸಾಯಿ, ಮಾಜಿ ಶಾಸಕ | 218 |
| 6. | ಸುಖರಾಂ, ಮಾಜಿ ಕೇಂದ್ರ ಸಚಿವ | 218 |
| 7. | ಡಿ.ಎಸ್. ನಾಗಭೂಷಣ, ಸಾಹಿತಿ | 219 |
| 8. | ಭಜನ್ ಸೋಪೋರಿ, ಪ್ರಸಿದ್ಧ ಸಂತೂರ್ ವಾದಕ | 219 |
| 9. | ಎ.ಜಿ. ಕೊಡ್ಗಿ, ಮಾಜಿ ಶಾಸಕ | 220 |
| | **ಭಾಗ – 10**<br>**ಪ್ರಮುಖ ಲೇಖನಗಳು** | |
| 1. | Spending on SC/ST welfare: A story of money lost in transit | 221 |
| 2. | ಅಂಬೇಡ್ಕರ್ ಈ ಯುಗದ ಶ್ರೇಷ್ಠ ದಾರ್ಶನಿಕ | 223 |
| 3. | ಕರಗುತ್ತಿದೆ ಪಶ್ಚಿಮ ಘಟ್ಟ | 226 |
| 4. | ಪರೀಕ್ಷೆಯಲ್ಲಿ ಅಕ್ರಮಗಳು ಯಾಕಾಗಿ ನಡೆಯುತ್ತವೆ | 228 |
| 5. | ಕೋರ್ಟ್ ಕನ್ನಡೀಕರಣ ಸಾಧ್ಯವೇ | 231 |
| 6. | ಪಕ್ಷಾಂತರ ನಿಷೇಧ ಕಾನೂನಿಗೆ ಬೇಕು ಬಲ | 234 |
| 7. | ಕೋರ್ಟುಗಳಲ್ಲಿ ಪ್ರಾದೇಶಿಕ ಭಾಷೆ ಕಲರವ ಕೇಳೀತೆ | 236 |
| 8. | ದೇಶದ್ರೋಹ ಕಾನೂನು ಕಳಚಿತೇ ವ್ಯಾಮೋಹ | 238 |
| 9. | BRIEF HISTORY OF A LAW USED TO SILENCE INDIANS FOR 150 YEARS | 240 |
| 10. | You can't suppress voices': Oppn hails SC order | 242 |
| 11. | ಚರ್ಚೆಯಲ್ಲದೆ ಸೊರಗುತ್ತಿದೆ ಸಂಸದೀಯ ವ್ಯವಸ್ಥೆ | 245 |
| 12. | ಆಧುನಿಕ ಶಿಕ್ಷಣದ ಗುರಿ ಹೇಗಿರಬೇಕು | 247 |
| 13. | ಪೂಜಾ ಸ್ಥಳಗಳ ನಿರ್ವಹಣೆಗೂ ಕಾಯಿದೆಯುಂಟು | 250 |
| 14. | Why Misuse of Aadhaar Information Is A Real Danger | 252 |
| 15. | FRESH AND FROZEN DECIDE RAJYA SABHA CHOICES | 254 |
| 16. | ಮೇಲ್ಮನೆಯ ನಾಲ್ಕು ಸ್ಥಾನಕ್ಕೆ ಸಮರ್ಥರ ಬೇಟೆ | 256 |

| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 17. | ಹೆರಾಲ್ಡ್ ಕೇಸ್: ಏನಿದರ ರಹಸ್ಯ | 258 |
| 18. | ನಮ್ಮ ಮಕ್ಕಳಿಗೆ ಎಂತಹ ಶಿಕ್ಷಣ ನೀಡಬೇಕು | 260 |
| 19. | ಚುನಾವಣೆ ಸುಧಾರಣೆ ಅಗತ್ಯ | 263 |
| 20. | ನಮ್ಮ ಸೇನೆಗೆ ಅಗ್ನಿಪಥ ಅನಿವಾರ್ಯವೇ | 264 |
| 21. | ನ್ಯಾಷನಲ್ ಹೆರಾಲ್ಡ್ ಪ್ರಕರಣದ ಸುತ್ತಮುತ್ತ | 267 |


**ಸೂಚನೆ: – ಇಲ್ಲಿ ಆಯ್ಕೆ ಮಾಡಿರುವ ಲೇಖನಗಳು ಪ್ರಮುಖ ದಿನಪ್ರತಿಕೆಗಳಿಂದ ಆಯ್ದು ಪ್ರಕಟಿಸಲಾಗಿದೆ.**

**ಇಲ್ಲಿನ ಅಭಿಪ್ರಾಯಗಳು ಸಂಪೂರ್ಣ ಲೇಖಕರದ್ದಾಗಿರುತ್ತದೆ.**

# ಭಾಗ – 1

# ವಿಧಾನಮಂಡಲ ಸುದ್ದಿಗಳು

## 1. 26 ದಿನ, 116 ತಾಸು ಅಸೆಂಬ್ಲಿ ಕಲಾಪ : ಕಾಗೇರಿ

ಬಜೆಟ್ ಕಲಾಪವು 26 ದಿನದಲ್ಲಿ 116 ಗಂಟೆಗಳ ಕಾಲ ನಡೆದಿದ್ದು, ಅರ್ಥಪೂರ್ಣವಾಗಿ ಚರ್ಚೆ ನಡೆದಿದೆ. ಸದನದ ಗೌರವ ಹೆಚ್ಚಿಸಿದ ಅಧಿವೇಶನ ಇದಾಗಿದೆ ಎಂದು ವಿಶ್ವೇಶ್ವರ ಹೆಗಡೆ ಕಾಗೇರಿ ಹರ್ಷಿಸಿದ್ದಾರೆ.

ವಿಧಾನಸೌಧದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಅರ್ಥಪೂರ್ಣವಾಗಿ ಚರ್ಚೆ ನಡೆಯಲು ಕಾರಣರಾದ ಆಡಳಿತ ಮತ್ತು ಪ್ರತಿಪಕ್ಷದ ಸದಸ್ಯರನ್ನು ಅಭಿನಂದಿಸುತ್ತೇನೆ. ಸದಸ್ಯರು ಉತ್ಸಾಹದಿಂದ ಕಾರ್ಯಕಲಾಪದಲ್ಲಿ ಪಾಲ್ಗೊಂಡರು. ಅಧಿವೇಶನಗಳು ಉತ್ತಮವಾಗಿ ನಡೆದರೆ ಜನಸಾಮಾನ್ಯರಲ್ಲಿ ವಿಶ್ವಾಸ ಹೆಚ್ಚಿಸಲು ಕಾರಣವಾಗಲಿದೆ. ಈ ವರ್ಷ ಕನಿಷ್ಠ 60 ದಿನ ಅಧಿವೇಶನ ನಡೆಸುವ ವಿಶ್ವಾಸ ಇದೆ. ಮುಖ್ಯಮಂತ್ರಿಗಳು ಈ ವ್ಯವಸ್ಥೆ ಬಲಪಡಿಸುವ ಪ್ರಯತ್ನ ನಡೆಸಿದ್ದಾರೆ ಎಂದರು. ಈ ಬಾರಿ ಅಧಿವೇಶನದಲ್ಲಿ ಶೇ.82 ರಷ್ಟು ಹಾಜರಾತಿ ಇತ್ತು ಎಂದು ಹೇಳಿದರು.

ಬಜೆಟ್ ಮೇಲೆ ಮುಖ್ಯಮಂತ್ರಿ ಭಾಷಣ ಮಾಡಿದ ಬಳಿಕ ಸದಸ್ಯರು 23 ಗಂಟೆಗಳ ಕಾಲ ಚರ್ಚೆ ನಡೆಸಿದ್ದಾರೆ. ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ 27 ಗಂಟೆ ಚರ್ಚೆಯಲ್ಲಿ ಪಾಲ್ಗೊಂಡಿದ್ದರು. ಈ ಬಾರಿ ಸಚಿವರು ಉತ್ತರ ನೀಡಿದ್ದಾರೆ. ಹೊಸ ಶಾಸಕರಿಗೆ ಈ ಬಗ್ಗೆ ಒಂದು ವ್ಯವಸ್ಥೆ ಇದೆ ಎನ್ನುವುದು ಮನವರಿಕೆಯಾಗಿದೆ. ಸದಸ್ಯರಿಗೆ ಹೇಗೆ ಚರ್ಚೆಯಲ್ಲಿ ಪಾಲ್ಗೊಳ್ಳಬೇಕು ಎಂಬುದು ತಿಳಿದಿದೆ. ಸಮಿತಿಗಳ ವರದಿಗಳು, 13 ವಿಧೇಯಕಗಳ ಅಂಗೀಕಾರ, 405 ಪ್ರಶ್ನೆಗಳ ಪೈಕಿ 355 ಪ್ರಶ್ನೆಗಳಿಗೆ ಉತ್ತರ ನೀಡಲಾಗಿದೆ. ಶೂನ್ಯವೇಳೆಯಲ್ಲಿ 46 ವಿಷಯಗಳ ಬಗ್ಗೆ ಚರ್ಚೆ ಮಾಡಿದ್ದೇವೆ, ಕಲಾಪ ವೀಕ್ಷಿಸಲು ಸಾರ್ವಜನಿಕರಿಗೆ ಮುಕ್ತ ಅವಕಾಶ ಕಲ್ಪಿಸಲಾಗಿದ್ದು 10,419 ಜನರು ಸದನವನ್ನು ನೋಡಿದ್ದಾರೆ. ಕೆಲವು ವಿದೇಶಿ ಗಣ್ಯರು, ಹೊರ ರಾಜ್ಯಗಳ ಗಣ್ಯರು ಆಗಮಿಸಿದ್ದನ್ನು ಗಮನಿಸಿದ್ದೇವೆ ಎಂದು ತಿಳಿಸಿದರು.

ಈ ಬಾರಿಯ ಅಧಿವೇಶನದಲ್ಲಿ ಚುನಾವಣಾ ವ್ಯವಸ್ಥೆಯಲ್ಲಿ ಸುಧಾರಣೆ ತರುವ ವಿಷಯದ ಮೇಲೆ ಎರಡು ದಿನ ಚರ್ಚೆ ನಡೆದಿರುವುದು ಹೆಮ್ಮೆಯ ವಿಷಯವಾಗಿದೆ. ಅನೇಕ ಹೊಸ ರೀತಿಯ ವಿಷಯಗಳ ಚರ್ಚೆ ನಡೆಸಲಾಗುತ್ತಿದೆ. 17 ಸದಸ್ಯರು 10 ಗಂಟೆಗಳ ಕಾಲ ಚರ್ಚಿಸಿದ್ದಾರೆ. ಎಲ್ಲರೂ ಮುಕ್ತವಾಗಿ ಮಾತನಾಡಿದ್ದಾರೆ. ಏಪ್ರಿಲ್ 10 ರಿಂದ ಗೌಹಾತಿಯಲ್ಲಿ ವಿಧಾನಸಭಾಧ್ಯಕ್ಷರ ಸಭೆ ಇದೆ. ನಮ್ಮ ವಿಧಾನಸಭೆಯಲ್ಲಿ ಇಷ್ಟೆಲ್ಲಾ ವಿಷಯಗಳ ಬಗ್ಗೆ ಚರ್ಚೆಯಾಗುತ್ತಿರುವ ಬಗ್ಗೆ ಎಲ್ಲಾ ರಾಜ್ಯಗಳ ವಿಧಾನಸಭೆಗಳಲ್ಲಿ ಚರ್ಚೆಯಾಗುವ ಬಗ್ಗೆ ಎಲ್ಲಾ ಮಾತುಗಳು ಕೇಳಿ ಬರುತ್ತಿವೆ. ಈ ಬಾರಿ ಅಧಿವೇಶನದಲ್ಲಿ ಶೇ.82 ರಷ್ಟು ಹಾಜರಾತಿ ಇತ್ತು ಎಂದರು.

ಆಧಾರ:ಕನ್ನಡ ಪ್ರಭ, ದಿನಾಂಕ:01.04.2022

## 2. ಪರಿಷತ್ ಸ್ಥಾನಕ್ಕೆ ಸಿಎಂ ಇಬ್ರಾಹಿಂ ರಾಜೀನಾಮೆ

ಕಾಂಗ್ರೆಸ್ ಪ್ರಾಥಮಿಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ಸಿ.ಎಂ.ಇಬ್ರಾಹಿಂ ವಿಧಾನಪರಿಷತ್ ಸ್ಥಾನಕ್ಕೂ ರಾಜೀನಾಮೆ ನೀಡಿದ್ದಾರೆ. ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರನ್ನು ಭೇಟಿಯಾದ ಇಬ್ರಾಹಿಂ ಅವರು ತಮ್ಮ ರಾಜೀನಾಮೆ ಪತ್ರವನ್ನು ನೀಡಿದರು. ಸಿದ್ದರಾಮಯ್ಯ ಅವರು ಮನವೊಲಿಸಲು ಪ್ರಯತ್ನಿಸಿದರೂ, ಅದು ಫಲಪ್ರದವಾಗಿಲ್ಲ. ಪರಿಷತ್ ಸ್ಥಾನಕ್ಕೆ ರಾಜೀನಾಮೆ ನೀಡುವ ಜೊತೆಗೆ, ಜೆಡಿಎಸ್‌ಗೆ ಸೇರ್ಪಡೆಯಾಗುವ ಬಗ್ಗೆಯೂ ಸ್ಪಷ್ಟ ಸಂದೇಶವನ್ನು ರವಾನಿಸಿದ್ದಾರೆ.

ರಾಜೀನಾಮೆ ಸಲ್ಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಎಲ್ಲಾ ಧರ್ಮಗಳು ಶ್ರೇಷ್ಠವಾದದ್ದು, ಆದ್ದರಿಂದ ರಾಜೀನಾಮೆ ಕೊಟ್ಟಿದ್ದೇನೆ. ನನ್ನ ಮುಂದಿನ ನಡೆ ಇಲ್ಲಿಂದ ಆರಂಭ ಎಂದು ಹೇಳಿದರು. ಇಲ್ಲಿಯವರೆಗೆ ನನ್ನ ಮೇಲೆ ಏನು ಹೊರೆಯಿತ್ತೋ ಅದನ್ನು ಕಳಚಿಕೊಂಡಿದ್ದೇನೆ. ನನ್ನ ಮುಂದಿನ ನಡೆಯನ್ನು ಜೆಡಿಎಸ್ ವರಿಷ್ಠ ದೇವೇಗೌಡರ ಪಾಲಿಗೆ ಬಿಟ್ಟಿದ್ದೇನೆ. ಅವರು ಮಾರ್ಗದರ್ಶಕರು,

ದೇಶಕ್ಕೆ ಮಾರ್ಗದರ್ಶನ ಕೊಟ್ಟವರು, ಅಜಾತಶತ್ರು. ಕರ್ನಾಟಕ ರಾಜ್ಯದಲ್ಲಿ ವಯೋವೃದ್ಧ ರಾಜಕಾರಣಿ, ನಮ್ಮ ನಡೆ ಅವರ ಜೊತೆಯಲ್ಲಿ ಇರುವುದು ಸರ್ವಸಮ್ಮತ ಅಭಿಪ್ರಾಯ ಎಂದರು.

**ಜೆಡಿಎಸ್ ನನ್ನ ಮನೆ:** ಜೆಡಿಎಸ್ ಪಕ್ಷಕ್ಕೆ ಯಾವುದೇ ಷರತ್ತು ಹಾಕದೇ ಹೋಗುತ್ತಿದ್ದೇನೆ. ಜೆಡಿಎಸ್ ನನ್ನ ಮನೆ, ನನ್ನ ಮನೆಗೆ ಏನಾದರೂ ಷರತ್ತು ಹಾಕಿ ಹೋಗ್ತಿವಾ? ಎಲ್ಲಿ ಬಾಗಿಲು ಇದೆ. ಎಲ್ಲಿ ಕಿಟಕಿ ಇದೆ, ಎಲ್ಲಿ ಅಡುಗೆ ಮನೆ ಇದೆ ಅನ್ನೋದು ನನಗೆ ಗೊತ್ತಿಲ್ವಾ? ನನ್ನ ಮನೆಗೆ ಹೋಗಬೇಕಾದರೆ ದಾರಿ ತೋರಿಸುವ ಅವಶ್ಯಕತೆ ಇಲ್ಲ ಎಂದರು. ಸ್ವತಂತ್ರವಾಗಿ ನಾವೇ ಸರ್ಕಾರ ಮಾಡಬೇಕು ಎಂಬ ಶಕ್ತಿ ಜೆಡಿಎಸ್‌ಗೆ ಇದೆ. ಮೊದಲು ಜೆಡಿಎಸ್ ನಂತರ ಬಿಜೆಪಿ ಕೊನೆಯಲ್ಲಿ ಕಾಂಗ್ರೆಸ್. ಕಾಂಗ್ರೆಸ್ ಪ್ರಜಾಪ್ರಭುತ್ವದ ತಳಹದಿಯ ನಾಯಕರನ್ನು ಆರಿಸಬೇಕಿತ್ತು. ಆದರೆ ಅದನ್ನು ಅವರು ಮಾಡಲಿಲ್ಲ. ಅದಕ್ಕೆ ನಾನು ಹೊರಗಡೆ ಬಂದೆ. ಜೆಡಿಎಸ್‌ನಲ್ಲಿ ಖಂಡಿತವಾಗಿಯೂ ಪ್ರಜಾಪ್ರಭುತ್ವ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜೆಡಿಎಸ್‌ಗೆ ಚುನಾವಣೆ ಸಮೀಪಿಸುತ್ತಿದ್ದಂತೆ ಅನೇಕರು ಬರುತ್ತಾರೆ. ನಾನು ಅದನ್ನು ಈಗಲೇ ಹೇಳೋದಿಲ್ಲ. ಎಲ್ಲಾ ಕಡೆಯಿಂದಲೂ ಬರುತ್ತಾರೆ. ಅವರಿಗೆ ಬಲವಂತ ಮಾಡಲು ಹೋಗಲ್ಲ. ಯುಗಾದಿ ಬಳಿಕ ದೊಡ್ಡ ಪ್ರವಾಹ ಬರುತ್ತದೆ. ನಾನು ಹೇಳಿದ್ದು ಯಾವತ್ತೂ ಸುಳ್ಳಾಗಿಲ್ಲ ಎಂದರು.

ಆಧಾರ:ವಿಶ್ವವಾಣಿ, ದಿನಾಂಕ:01.04.2022

## 3. ಚುನಾವಣೆ ಸುಧಾರಣೆ ಕುರಿತು ಸಂಸತ್ತಿನಲ್ಲಿ ಚರ್ಚಿಸಲು ಮನವಿ

ವಿಧಾನಸಭೆಯ ಬಜೆಟ್ ಅಧಿವೇಶನ ಅತ್ಯಂತ ಯಶಸ್ವಿಯಾಗಿ ನಡೆದಿದ್ದು, ಚುನಾವಣೆ ಸುಧಾರಣೆ ಕುರಿತು ನಡೆದ ಚರ್ಚೆಯನ್ನು ಸಂಸತ್ತಿನಲ್ಲಿಯೂ ಮಾಡುವಂತೆ ಲೋಕಸಭಾ ಸ್ಪೀಕರ್‌ಗೆ ಮನವಿ ಮಾಡಲಾಗುವುದು ಎಂದು ವಿಧಾನಸಭಾಧ್ಯಕ್ಷರು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಈ ವರ್ಷ 26 ದಿನ ಅಧಿವೇಶನ ನಡೆದಿದ್ದು 116 ಗಂಟೆ ಕಲಾಪ ನಡೆದಿದೆ. ಕಲಾಪದಲ್ಲಿ ಅರ್ಥಪೂರ್ಣ ಚರ್ಚೆ ನಡೆದಿದ್ದು ಇದಕ್ಕೆ ಕಾರಣರಾದ ಪ್ರತಿಪಕ್ಷದ ನಾಯಕರನ್ನು ಅಭಿನಂದಿಸುತ್ತೇನೆ. ಸದಸ್ಯರು ಉತ್ಸಾಹದಲ್ಲಿ ಕಾರ್ಯಕಲಾಪದಲ್ಲಿ ಪಾಲ್ಗೊಂಡರು. ಸದನದ ಗೌರವ ಹೆಚ್ಚಿಸಿದ ಅಧಿವೇಶನ ಇದಾಗಿತ್ತು ಎಂದು ತಿಳಿಸಿದರು. ಆಯವ್ಯಯದ ಮೇಲೆ ಸಿಎಂ ಭಾಷಣ ಮಾಡಿದ ಮೇಲೆ ಸದಸ್ಯರು 23 ಗಂಟೆ ಚರ್ಚೆ ಮಾಡಿದ್ದಾರೆ. ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ 27 ಗಂಟೆ ಚರ್ಚೆಯಲ್ಲಿ ಪಾಲ್ಗೊಂಡಿದ್ದರು. ಈ ಬಾರಿ ಸಚಿವರು ಉತ್ತರ ಕೊಟ್ಟಿದ್ದಾರೆ. ಹೊಸ ಶಾಸಕರಿಗೆ ಈ ಬಗ್ಗೆ ಒಂದು ವ್ಯವಸ್ಥೆ ಇದೆ ಅನ್ನುವುದನ್ನು ಮನವರಿಕೆಯಾಯಿತು. ಸದಸ್ಯರಿಗೆ ಹೇಗೆ ಚರ್ಚೆಯಲ್ಲಿ ಪಾಲ್ಗೊಳ್ಳಬೇಕೆಂದು ತಿಳಿಯಿತು ಎಂದು ಹೇಳಿದರು.

ಈ ಬಾರಿ ಕಲಾಪ ನೋಡಲು ಸಾರ್ವಜನಿಕರಿಗೆ ಮುಕ್ತ ಅವಕಾಶ ಕಲ್ಪಿಸಲಾಗಿತ್ತು. ಅಧಿವೇಶನದಲ್ಲಿ ಚುನಾವಣಾ ವ್ಯವಸ್ಥೆಯಲ್ಲಿ ಸುಧಾರಣೆ ತರುವ ವಿಷಯದ ಮೇಲೆ ಎರಡು ದಿನ ಚರ್ಚೆ ನಡೆದಿರುವುದು ಹೆಮ್ಮೆಯ ವಿಷಯ. ಎಲ್ಲಾ ರಾಜ್ಯಗಳ ವಿಧಾನಸಭೆಗಳಲ್ಲಿ ಚರ್ಚೆಯಾಗುವ ಬಗ್ಗೆ ಮಾತುಗಳು ಕೇಳಿ ಬರುತ್ತಿವೆ. ಈಗಾಗಲೇ ಈ ವಿಷಯವನ್ನು ಸಂಸತ್ತಿನಲ್ಲಿ ಚರ್ಚಿಸುವಂತೆ ಲೋಕಸಭಾಧ್ಯಕ್ಷರಿಗೆ ಪತ್ರ ಬರೆದಿದ್ದೇನೆ. ಈಗ ಮತ್ತೊಂದು ಬಾರಿ ಮನವಿ ಮಾಡುವೆ ಎಂದು ಹೇಳಿದರು.

ಆಧಾರ:ಉದಯವಾಣಿ, ದಿನಾಂಕ:01.04.2022

## 4. ಪೀಠಾಸೀನಾಧಿಕಾರಿಗಳ ಸಮ್ಮೇಳನದಲ್ಲಿ ಪ್ರಸ್ತಾಪ

ದೇಶದ ಇತಿಹಾಸದಲ್ಲಿಯೇ ಮೊದಲ ವಿಧಾನಸಭೆಯಾಗಿ ಕರ್ನಾಟಕದಲ್ಲಿ ಚುನಾವಣೆ ವ್ಯವಸ್ಥೆ ಸುಧಾರಣೆ ಬಗ್ಗೆ ನಡೆದ ವಿಶೇಷ ಚರ್ಚೆ ಯಶಸ್ವಿಯಾಗಿದೆ. ಇದನ್ನು ದೇಶಮಟ್ಟದಲ್ಲಿ ನಡೆಸುವ ಕುರಿತು ಮುಂದಿನ ತಿಂಗಳು ಅಸ್ಸಾಂನ ಗೌಹಾತಿಯಲ್ಲಿ ನಡೆಯಲಿರುವ ಅಖಿಲ ಭಾರತ ಪೀಠಾಸೀನಾಧಿಕಾರಿಗಳ ಸಮ್ಮೇಳನದಲ್ಲಿ ಪ್ರಸ್ತಾಪಿಸುವ ಚಿಂತನೆಯಿದೆ ಎಂದು ವಿಶ್ವೇಶ್ವರ ಹೆಗಡೆ, ಕಾಗೇರಿ ತಿಳಿಸಿದರು.

ವಿಧಾನಸೌಧದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಆಗಲೇಬೇಕಾದ ವ್ಯವಸ್ಥೆ ಬಗ್ಗೆ ಪರಿಣಾಮಕಾರಿ ಮತ್ತು ಗಂಭೀರ ಚರ್ಚೆ ಪಕ್ಷಾತೀತವಾಗಿ ಆಗಿದೆ. ಸಾರ್ವಜನಿಕವಾಗಿಯೂ ಇದು

ಚರ್ಚೆಯಾಗಬೇಕಿದೆ. ಲೋಕಸಭೆಯಲ್ಲೂ ಚರ್ಚೆಯಾಗಿಸಲು ಲೋಕಸಭಾಧ್ಯಕ್ಷರಿಗೂ ಪತ್ರ ಬರೆಯುತ್ತೇನೆ. ಆದರೆ ನಮ್ಮ ಮೇಲ್ಮನೆಯಲ್ಲಿ ಈ ಸಂಬಂಧ ನನ್ನ ಪ್ರಾಸ್ತಾವಿಕ ಭಾಷಣದ ಪುಸ್ತಕದ ಪ್ರತಿ ಸ್ವೀಕರಿಸಲು ವಿರೋಧಿಸುವುದು ಒಳ್ಳೆ ಬೆಳವಣಿಗೆ ಅಲ್ಲ ಎಂದು ಬೇಸರಿಸಿದರು.

ಆಧಾರ:ಉದಯವಾಣಿ, ದಿನಾಂಕ:01.04.2022

## 5. ಇವಿಎಂ ನಾಪತ್ತೆ: ಚುನಾವಣಾ ಆಯೋಗಕ್ಕೆ ಪತ್ರ

19 ಲಕ್ಷ ಇವಿಎಂಗಳು ನಾಪತ್ತೆ ಆಗಿವೆ ಎಂದು ಕಾಂಗ್ರೆಸ್ ಶಾಸಕ ಹೆಚ್.ಕೆ.ಪಾಟೀಲ್ ಅವರು ಎತ್ತಿರುವ ಪ್ರಶ್ನೆಯ ಬಗ್ಗೆ ಚುನಾವಣಾ ಆಯೋಗಕ್ಕೆ ಪತ್ರ ಬರೆದು ಮಾಹಿತಿ ತರಿಸುವುದಾಗಿ ವಿಧಾನಸಭಾಧ್ಯಕ್ಷರಾದ ವಿಶ್ವೇಶ್ವರ ಹೆಗಡೆ, ಕಾಗೇರಿ ತಿಳಿಸಿದರು.

ವಿಧಾನಸೌಧದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು 'ಇಷ್ಟು ದೊಡ್ಡ ಪ್ರಮಾಣದಲ್ಲಿ ಇವಿಎಂಗಳು ನಾಪತ್ತೆ ಆಗಿದ್ದರೆ ದೇಶದಲ್ಲಿ ವಿರೋಧ ಪಕ್ಷಗಳು ಮತ್ತು ಸಾಮಾನ್ಯ ಜನರು ಸುಮ್ಮನೆ ಕೂರಲು ಸಾಧ್ಯವಿತ್ತೇ? ದೊಡ್ಡ ಗದ್ದಲವೇ ಆಗುತ್ತಿತ್ತು. ಅವರೊಂದು ಸಂಶಯದ ಬೀಜ ಬಿತ್ತಿದ್ದಾರೆ. ಅದಕ್ಕೆ ಸೂಕ್ತ ಉತ್ತರ ತರಿಸಿ, ಸದಸ್ಯರಿಗೆ ಕೊಡುವುದು ನಮ್ಮ ಜವಾಬ್ದಾರಿ' ಎಂದು ಅವರು ಹೇಳಿದರು.

ಚುನಾವಣೆ ವ್ಯವಸ್ಥೆಯ ಬಗ್ಗೆ ವಿಧಾನಸಭೆಯಲ್ಲಿ ಎಲ್ಲಾ ಸದಸ್ಯರು ಉತ್ತಮವಾಗಿ ಮಾತನಾಡಿದರು. ಆರಂಭದಲ್ಲಿ ಕೆಲವು ಶಾಸಕರು ಬೇರೆಯದೇ ರೀತಿಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದರು. ದಿಕ್ಸೂಚಿ ಭಾಷಣವನ್ನು ಓದಿದ ಬಳಿಕ ಎಲ್ಲರೂ ಉತ್ಸಾಹದಿಂದ ಮಾತನಾಡಿದರು ಎಂದರು.

ವಿಧಾನಪರಿಷತ್ತಿಗೆ ನೂರಾರು ವರ್ಷದ ಇತಿಹಾಸವಿದೆ. ಇತ್ತೀಚೆಗೆ ಪರಿಷತ್ತಿನ ಚುನಾವಣೆಗಳು ಹೇಗೆ ನಡೆದಿವೆ. ವಿಧಾನಪರಿಷತ್ತಿನಲ್ಲಿ ನಡೆದ ಘಟನೆಗಳನ್ನು ಜನರು ನೋಡಿದ್ದಾರೆ. ವಿಧಾನಮಂಡಲದ ಅಧ್ಯಕ್ಷನಾಗಿ ಅದರ ಸುಧಾರಣೆಗೆ ಪ್ರಯತ್ನಿಸಬೇಕು. ಚುನಾವಣಾ ವ್ಯವಸ್ಥೆ ಬಗ್ಗೆ ಅಲ್ಲಿಯೂ ಚರ್ಚೆ ನಡೆಯಬೇಕು ಎಂಬ ಕಾರಣಕ್ಕೆ ಭಾಷಣದ ಪ್ರತಿಗಳನ್ನು ಕಳುಹಿಸಿದ್ದೆ. ಅದಕ್ಕೆ ವಿರೋಧ ವ್ಯಕ್ತಪಡಿಸುವ ಮನಸ್ಥಿತಿ ಇದ್ದರೆ, ಅವರ ಮಾನಸಿಕ ಸ್ಥಿತಿ ಹೇಗಿದೆ ಎಂಬುದನ್ನು ಬಿಡಿಸಿ ಹೇಳಬೇಕಾಗಿಲ್ಲ ಎಂದು ಕಾಗೇರಿ ಹೇಳಿದರು.

ಈ ಬಾರಿ ಅಧಿವೇಶನ ಸುಗಮವಾಗಿ ಮತ್ತು ಉತ್ತಮವಾಗಿ ನಡೆಯಿತು. ಫೆಬ್ರವರಿ 14 ರಿಂದ 22 ವರೆಗೆ ಮತ್ತು ಮಾರ್ಚ್ 4 ರಿಂದ 30ರ ವರೆಗೆ ಒಟ್ಟು 26 ದಿನಗಳ ಕಾಲ 116 ಗಂಟೆ 20 ನಿಮಿಷ ಕಾರ್ಯಕಲಾಪ ನಡೆಸಲಾಯಿತು. ಒಟ್ಟು 13 ಮಸೂದೆಗಳನ್ನು ಮಂಡಿಸಿ ಅಂಗೀಕಾರ ಪಡೆಯಲಾಯಿತು. ಒಟ್ಟು 4769 ಪ್ರಶ್ನೆಗಳಲ್ಲಿ ಸದನದಲ್ಲಿ ಉತ್ತರಿಸಬೇಕಾದ 405 ಪ್ರಶ್ನೆಗಳ ಪೈಕಿ 385ಕ್ಕೆ ಉತ್ತರಿಸಲಾಗಿದೆ. ಲಿಖಿತ ಮೂಲಕ ಉತ್ತರಿಸಬೇಕಾದ 4264 ಪ್ರಶ್ನೆಗಳಲ್ಲಿ 3489 ಪ್ರಶ್ನೆಗಳಿಗೆ ಉತ್ತರ ಸ್ವೀಕರಿಸಲಾಗಿದೆ ಎಂದು ಅವರು ತಿಳಿಸಿದರು.

ಆಧಾರ:ಪ್ರಜಾವಾಣಿ, ದಿನಾಂಕ:01.04.2022

## 6. ಪ್ರಜಾಪ್ರಭುತ್ವ ಯಶಸ್ಸಿಗೆ ಯುವಕರ ಪಾಲ್ಗೊಳ್ಳುವಿಕೆ ಅಗತ್ಯ : ಕಾಗೇರಿ

ರಾಜಕೀಯ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಯುವಕರ ಪಾಲ್ಗೊಳ್ಳುವಿಕೆಯಿಂದ ಪ್ರಜಾಪ್ರಭುತ್ವವನ್ನು ಇನ್ನಷ್ಟು ಬಲಗೊಳಿಸಬಹುದು ಎಂದು ವಿಧಾನಸಭಾಧ್ಯಕ್ಷರು ಅಭಿಪ್ರಾಯಪಟ್ಟಿದ್ದಾರೆ. ಅಸ್ಸಾಂನ ಗುವಾಹಟಿಯಲ್ಲಿ ನಡೆದಿರುವ 8ನೇ ಕಾಮನ್‌ವೆಲ್ತ್ ಸಂಘದ ಸಮ್ಮೇಳನದಲ್ಲಿ ಕರ್ನಾಟಕದ ಪ್ರತಿನಿಧಿಯಾಗಿ ಮುಖ್ಯವಾಹಿನಿಯ ಯುವ ಕೇಂದ್ರಿತ ನೀತಿಗಳ ಕುರಿತು ವಿಷಯ ಮಂಡಿಸಿದರು. ಸಾರ್ವಜನಿಕ ವಿಷಯಗಳಲ್ಲಿ ಸಾಮಾನ್ಯ ಜನರ ಪಾಲ್ಗೊಳ್ಳುವಿಕೆಯಿಂದ ಪ್ರಜಾಪ್ರಭುತ್ವ ಯಶಸ್ವಿಯಾಗಲಿದೆ. ಯುವಕರನ್ನು ಸಾರ್ವಜನಿಕ ವಿಷಯಗಳಲ್ಲಿ ತೊಡಗುವಂತೆ ಮಾಡಿ ಆ ಮೂಲಕ ಯುವಕರು ಸರ್ಕಾರದ ನಿರ್ಧಾರಗಳಲ್ಲಿ ತಾವು ಭಾಗಿಯಾಗಿದ್ದೇವೆ ಎನ್ನುವ ಭಾವನೆ ಮೂಡಿಸಬೇಕಿದೆ ಎಂದು ಹೇಳಿದರು.

ಯುವಕರನ್ನು ಹೆಚ್ಚಾಗಿ ಸಾರ್ವಜನಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಸಮಾಜದ ಸಮಸ್ಯೆಗಳ ಕುರಿತು ಚರ್ಚಿಸಿ ಅದಕ್ಕೆ ಸಾಮೂಹಿಕವಾಗಿ ಅಭಿವೃದ್ಧಿ ಕೈಗೊಳ್ಳಲು ಸಾಧ್ಯವಾಗುತ್ತದೆ. ಯುವ ನೀತಿಯನ್ನು ಜಾರಿಗೆ ತರುವ ಮೂಲಕ ಹೆಚ್ಚಿನ ಪ್ರಮಾಣದಲ್ಲಿ ಸಾರ್ವಜನಿಕ ಆಡಳಿತ ಮತ್ತು ಸೇವೆಯಲ್ಲಿ

ಯುವಕರನ್ನು ತೊಡಗಿಸಿಕೊಳ್ಳುವ ಕೆಲಸವಾಗಬೇಕು. ಯುವಕರನ್ನು ಚುನಾವಣಾ ಮತದಾನ ಪ್ರಕ್ರಿಯೆ ಹಾಗೂ ರಾಜಕೀಯದಲ್ಲಿ ಹೆಚ್ಚಾಗಿ ತೊಡಗಿಸಿಕೊಳ್ಳಲು ಪ್ರೋತ್ಸಾಹಿಸಿ, ಈ ಮೂಲಕ ಬಲಿಷ್ಠ ದೇಶ ನಿರ್ಮಾಣ ಮಾಡಬೇಕು ಎಂದು ತಿಳಿಸಿದರು.

ಚುನಾವಣಾ ಸುಧಾರಣೆಯ ಕುರಿತು ಎಲ್ಲರೂ ಚರ್ಚಿಸುವ ಅಗತ್ಯವಿದ್ದು, ನಾನು ಈ ನಿಟ್ಟಿನಲ್ಲಿ ಕರ್ನಾಟಕದಲ್ಲಿ ಚರ್ಚೆ ಆರಂಭಿಸಿದ್ದೇನೆ. ಈ ಪ್ರಕ್ರಿಯೆಗೆ ಸಾಕಷ್ಟು ಬೆಂಬಲ ವ್ಯಕ್ತವಾಗಿದೆ. ವಿಶೇಷವಾಗಿ ಯುವಕರಿಂದಲೂ ಹೆಚ್ಚಿನ ಬೆಂಬಲ ದೊರೆತಿದೆ ಎಂದು ಹೇಳಿದರು.

ಆಧಾರ:ಉದಯವಾಣಿ, ದಿನಾಂಕ:12.04.2022

**ದಿನಾಂಕ: 10/04/2022 ರಂದು ವಿಧಾನ ಪರಿಷತ್ತಿನ ಸನ್ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ ಹೊರಟ್ಟಿರವರು ಹಾಗೂ ವಿಧಾನ ಸಭೆಯ ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿರವರು ಗುವಾಹಟಿ–ಅಸ್ಸಾಂನಲ್ಲಿ ನಡೆದ 8ನೇ ಭಾರತ ವಲಯದ ಕಾಮನ್ವೆಲ್ತ್ ಸಂಸದೀಯ ಸಂಘದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಭಾಗವಹಿಸಿ "ಮುಖ್ಯ ವಾಹಿನಿಯ ಯುವ ಕೇಂದ್ರಿತ ನೀತಿಗಳು" (mainstreaming youth centric policies) ಎಂಬ ವಿಷಯದ ಕುರಿತು ತಮ್ಮ ಅಭಿಪ್ರಾಯವನ್ನು ಮಂಡಿಸಿದ ಸಂದರ್ಭ;**








CPA INDIA UNION
MAHARASHTRA

## 7. ಗುವಾಹಟಿ–ಅಸ್ಸಾಂನಲ್ಲಿ ನಡೆದ 8ನೇ ಭಾರತ ವಲಯದ ಕಾಮನ್ವೆಲ್ತ್ ಸಂಸದೀಯ ಸಂಘದ ಕಾರ್ಯಕಾರಿ ಸಭೆಯಲ್ಲಿ ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಅವರ "ಮುಖ್ಯ ವಾಹಿನಿಯ ಯುವ ಕೇಂದ್ರಿತ ನೀತಿಗಳು" ಕುರಿತು ಅಭಿಪ್ರಾಯ ಮಂಡಿಸಿರುವುದು

**Subject:- "Mainstreaming Youth Centric Policies".**

Hon'ble Speaker, Lok Sabha and Chairman of this august CPA Conference Sri Om Birla ji, and the respected delegates and one and all gathered here. First of all I heartily congratulate the Hon'ble Speaker Lok Sabha and the Sri **Biswajit Daimary**, Hon'ble Speaker, Assam Legislative Assembly for having organized this conference in a befitting manner by extending their able guidance. It is a great privilege to be here and share my views and thoughts on the subject of discussion "**Mainstreaming Youth Centric Policies**" in the midst of this august gathering.

We are all aware that the aims of the commonwealth Parliamentary Association are to promote knowledge of the Constitutional, Legislative, economic, social and cultural aspects of parliamentary democracy, with particular reference to the countries of the Commonwealth of Nations. Ours is a democratic form of Government is meant a Government based on the consent of the Governed. It is a system in which free public opinion is the main source of law and in which the Government depends upon public opinion and responds to changes in public opinion. Democracy derives its vitality from the freedom of opinion and discussion which it tolerates.

- In democracy it is believed that truth emerges from the competition of ideas. The outstanding merit of democracy is that by making people participatory in public affairs and compelling the people to consider public issues and form their opinion on them.
- Engaging young people in open government initiatives can result in an increasing understanding and interest among young people in civic and political affairs and foster active citizenship. Young people feel that they are actively involved in governance and decision making and that their concerns are taken seriously by government. This can contribute to social wellbeing at an individual level, by building self-esteem and a sense of empowerment, and bring about important benefits for societies such as an increased awareness for common challenges and a joint commitment to identify solutions that work in the long run. Ultimately, it also benefits

society as a whole by reinforcing positive civic behavior. Participation in civil society and politics, staying informed on politics, and voting or encouraging young people to run for official positions in elections. Engaging people at a young age builds strong citizens and a strong nation.

- New initiatives in youth policy formulation and their translation into programs and practice will be a significant role in engaging young people meaningfully in development processes.
- On the same lines the Government Karnataka has initiated following mainstreaming youth centric policies, which has 30-40% of youth aging between 15 and 29 years of our total population. Karnataka Government has taken some initiatives to bring out a new State Youth Policy on the lines of National Youth Policy. Our aim is to understand the 'constraints and challenges' faced by our youth today and to provide them 'physical, mental and financial support' to help them realise their true potential.
- The Government will release the **Karnataka Youth Policy, 2022** soon. It will focus on building humane socio-economic, political and cultural capital among the state's youth. The policy contains many novel recommendations which include the following:
    1. **Karnataka State Youth's Development Index** to track the state of youth education, health, and employment across the entire state. This data will help in formulating future youth-focused policies.
    2. **Credit-based volunteering system** which rewards them with credits will certainly inspire young people to volunteer & invest their time in many ways including education, training and employment.
    3. **Yuva budget**, a separate budget that will focus on youth-centric programs and policies in the state.
- **The Karnataka Skill Development Policy 2019** lays out a roadmap for skill development among the state's youth till 2030. Karnataka is going to conduct a skill demand assessment survey to collect region-wise data on skill requirement.
- The Karnataka State Sports Policy, 2018 focuses on promoting active participation of the state's youth in sports and supporting them in many different ways including employment.
- Apart from the above, recently, I have initiated a discussion on the necessity in bringing reforms in the electoral system. I have taken district-wise campaign by involving district administration and the vice-chancellors of the Universities so as to

educate the youth and to bring them to the political mainstream for giving the suggestions in the matter, thus ensuring participatory democracy. In this regard I have received over whelming support from the organizers as well as from the youth. On $28^{th}$ March 2022 with my introductory speech I paved way for a discussion on “Electoral Reforms” in the Karnataka Legislative Assembly. The discussion took place for two days and about 17 members participated in the discussion by giving various suggestions on the subject. In my introductory speech as well as, wherever I organized the programs I have stressed for compulsory voting by the voters and to educate the youth to bring them into the mainstream of our democratic system. I also stressed for collective participation of the youth community to create a sense of duty and responsibility among them. My personal opinion is that, if the younger generation do not guard our democratic system there are, all the signs that the whole system will collapse.

I thank the Commonwealth Parliamentary Association headquarters, London, UK for initiating various programs and policies for ensuring socio-economic, political & cultural equality and justice for young people both in Global and National Planning. With these words I conclude. I thank the Hon’ble Chairman of the Conference for providing me this great opportunity.

Thank you one and all.

*******

## 8. ಪತ್ರಕರ್ತರು ಜಲ್ವಂತ ಸಮಸ್ಯೆಗೆ ಸ್ಪಂದಿಸಿ: ಹೊರಟ್ಟಿ

ಮಾಧ್ಯಮದವರು ಇಡೀ ಸಮಾಜದ ಕಣ್ಣು ತೆರೆಯುವ ರೀತಿಯಲ್ಲಿ ವಸ್ತು ನಿಷ್ಟೆಯಿಂದ ವರದಿ ಮಾಡಿದಾಗ ಮಾತ್ರ ಸಮಾಜ ಉತ್ತಮ ದಾರಿಯಲ್ಲಿ ನಡೆಯಲು ಸಾಧ್ಯ ಎಂದು ಸಭಾಪತಿ ಬಸವರಾಜ ಹೊರಟ್ಟಿ ಅಭಿಪ್ರಾಯಪಟ್ಟರು.

ಕನ್ನಡ ಭವನದ ನಯನ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ನೂತನ ಪದಾಧಿಕಾರಿಗಳಿಗೆ, ಕಾರ್ಯಕಾರಿಣಿ ಸದಸ್ಯರಿಗೆ ಪ್ರತಿಜ್ಞಾ ವಿಧಿಯನ್ನು ಬೋಧಿಸಿ ಅವರು ಮಾತನಾಡಿದರು.

ಪತ್ರಕರ್ತರು ಎಷ್ಟೇ ಸವಾಲಿನ ಒತ್ತಡದಲ್ಲಿದ್ದರೂ ದಿನನಿತ್ಯದ ಜ್ವಲಂತ ಸಮಸ್ಯೆಗಳಿಗೆ ಸ್ಪಂದಿಸುವ ಹೊಣೆಗಾರಿಕೆ ಮತ್ತು ಛಲವನ್ನು ತೋರಬೇಕು. ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಅಗತ್ಯವಾದ ವರದಿಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಹೇಳಿದರು.

**ಇತರೆ ಜಿಲ್ಲೆಗಳಿಗೂ ಅನುದಾನ**: ಈಗಾಗಲೇ ಉತ್ತರ ಕನ್ನಡ, ಹಾವೇರಿ, ಗದಗ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಪತ್ರಕರ್ತರ ಸಂಘಗಳಿಗೆ ನಮ್ಮ ಟ್ರಸ್ಟ್ ವತಿಯಿಂದ ರೂ. 1.9 ಲಕ್ಷ ದೇಣಿಗೆ ನೀಡಲಾಗಿದೆ.

ಉತ್ತಮ ಕಾರ್ಯನಿರ್ವಹಿಸಿದ ಪತ್ರಕರ್ತರಿಗೆ ಪ್ರಶಸ್ತಿ ಪ್ರದಾನ ಮಾಡಲಾಗಿದೆ. ಮಾಧ್ಯಮದವರಿಗೆ ಅನುಕೂಲವಾಗುವಂತೆ ಮುಂದಿನ ದಿನಗಳಲ್ಲಿ ಇತರೆ ಜಿಲ್ಲೆಗಳಿಗೂ ಅನುದಾನ ಕೊಡಲಾಗುವುದು ಎಂದರು.

ಹಿರಿಯ ಪತ್ರಕರ್ತ ಪಿ.ರಾಮಯ್ಯ ಮಾತನಾಡಿ, ಪತ್ರಿಕೋದ್ಯಮ ಹಿಂದಿನಂತಿಲ್ಲ. ಪ್ರಸ್ತುತ ಪತ್ರಕರ್ತರು ಪತ್ರಿಕಾ ವೃತ್ತಿಯಲ್ಲಿ ಅತ್ಯಂತ ಕಠಿಣ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಆದರೂ ವಸ್ತುನಿಷ್ಠೆ, ಸತ್ಯಾಧಾರಿತ ವರದಿಗಳನ್ನು ಮಾಡುತ್ತಾ ವೃತ್ತಿ ಘನತೆಯನ್ನು ಕಾಪಾಡಿಕೊಳ್ಳಬೇಕು. ಪತ್ರಿಕೋದ್ಯಮ ಸಮಾಜದ ಕೈಗನ್ನಡಿಯಂತೆ. ಸಾರ್ವಜನಿಕರೊಂದಿಗೆ ಬೆರೆತು ಸತ್ಯನಿಷ್ಠೆ, ವಸ್ತುನಿಷ್ಠೆ ವರದಿಗಳಿಗೆ ಹೆಚ್ಚಿನ ಆದ್ಯತೆ ನೀಡುವತ್ತ ಗಮನ ಹರಿಸಬೇಕು ಎಂದು ಸಲಹೆ ನೀಡಿದರು.

ವಾರ್ತಾ ಇಲಾಖೆ ಆಯುಕ್ತರು ಮಾತನಾಡಿ, ಪತ್ರಕರ್ತರಿಗೆ ಅನುಕೂಲವಾಗುವಂತೆ ಆರೋಗ್ಯ ಕಾರ್ಡ್, ಪತ್ರಕರ್ತರ ಮಾನ್ಯತಾ ಪತ್ರ (ಅಕ್ರೆಡೇಷನ್ ಕಾರ್ಡ್) ಸೇರಿದಂತೆ ಇತರೆ ಎಲ್ಲಾ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸುತ್ತೇನೆ. ಕಾರ್ಯನಿರತ ಪತ್ರಕರ್ತರ ಸಂಘದ ಮೂಲಕ ಪತ್ರಕರ್ತರ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ವಾರ್ತಾ ಮತ್ತು ಪ್ರಚಾರ ಇಲಾಖೆ ತ್ವರಿತವಾಗಿ ಸ್ಪಂದಿಸಲಿದೆ ಎಂದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಭಾರತೀಯ ಕಾರ್ಯನಿರತ ಪತ್ರಕರ್ತರ ಒಕ್ಕೂಟದ ಅಧ್ಯಕ್ಷ, ಬಿ.ವಿ.ಮಲ್ಲಿಕಾರ್ಜುನ, ರಾಜ್ಯ ಪ್ರಧಾನ ಕಾರ್ಯದರ್ಶಿ, ಬಿ.ಸಿ.ಲೋಕೇಶ್, ರಾಜ್ಯ ಕಾರ್ಯದರ್ಶಿ ಮತ್ತಿಕೆರೆ ಜಯರಾಮ್ ಇತರರಿದ್ದರು.

ಆಧಾರ:ಕನ್ನಡ ಪ್ರಭ, ದಿನಾಂಕ:22.04.2022

## 9. ಎಸ್ಸಿ/ಎಸ್ಟಿ ಕಲ್ಯಾಣ ಸಮಿತಿ ಸಭೆಗೆ ನುಗ್ಗಿ ವಕೀಲ ಹಿರೇಮಠ ಗಲಾಟೆ

ಎಸ್ಸಿ/ಎಸ್ಟಿ ಹೆಸರಿನಲ್ಲಿ ಪ್ರಮಾಣಪತ್ರ ಪಡೆದ ಬೇಡ ಜಂಗಮ ಸಮುದಾಯದ ವಿರುದ್ಧ ಕ್ರಮ ಅನ್ಯಾಯ ಎಂದು ಆರೋಪಿಸಿ ವಿಧಾನಸಭೆಯ ಎಸ್‌ಸಿ/ಎಸ್‌ಟಿ ಕಲ್ಯಾಣ ಸಮಿತಿ ಸಭೆ ನಡೆಯುತ್ತಿದ್ದ ಸ್ಥಳಕ್ಕೆ ಬೇಡ ಜಂಗಮ ಅಭಿವೃದ್ಧಿ ಸಮಿತಿ ಅಧ್ಯಕ್ಷ ವಕೀಲ ಬಿ.ಡಿ.ಹಿರೇಮಠ ನುಗ್ಗಿ ಬೆದರಿಕೆ ಒಡ್ಡಿ, ಗಲಾಟೆ ಮಾಡಿದ ಪ್ರಸಂಗ ಶಾಸಕರ ಭವನದಲ್ಲಿ ನಡೆಯಿತು.

ಸಮಿತಿ ಅಧ್ಯಕ್ಷ ಎಂ.ಪಿ.ಕುಮಾರಸ್ವಾಮಿ ಅಧ್ಯಕ್ಷತೆಯಲ್ಲಿ ಬೇಡ ಜಂಗಮ ಹೆಸರಿನಲ್ಲಿ ಜಾತಿ ಪ್ರಮಾಣ ಪತ್ರ ಪಡೆದುಕೊಂಡವರ ವಿರುದ್ಧ ಕೈಗೊಂಡ ಕ್ರಮಗಳ ಕುರಿತು ಸಮಾಜ ಕಲ್ಯಾಣ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳಿಂದ ಮಾಹಿತಿ ಪಡೆಯುತ್ತಿದ್ದರು. ಆಗ ಏಕಾಏಕಿ ಸಭೆಗೆ ನುಗ್ಗಿದ ಹಿರೇಮಠ ಅವರು, ಏರಿದ ಧ್ವನಿಯಲ್ಲಿ ಸಭೆಯ ಅಜೆಂಡಾದಲ್ಲಿ ಬೇಡ ಜಂಗಮ ಸಮುದಾಯ ಪರಿಶಿಷ್ಟ ಜಾತಿ ಮತ್ತು ಪಂಗಡದ ಜಾತಿ ಪ್ರಮಾಣ ಪತ್ರ ಪಡೆಯುತ್ತಿರುವ ಕುರಿತು ಚರ್ಚಿಸುವ ಅಂಶ ಇದೆ. ಹೀಗಿರುವಾಗ ನಮ್ಮನ್ನು ಸಭೆಗೆ ಕರೆದು ಅಭಿಪ್ರಾಯ ಕೇಳದೇ ಇರುವುದು ಸರಿಯಲ್ಲ. ಈಗಾಗಲೇ ಅನೇಕ ನ್ಯಾಯಾಲಯಗಳು ಸಹ ಬೇಡ ಜಂಗಮ ಪರಿಶಿಷ್ಟ ಜಾತಿ ವ್ಯಾಪ್ತಿಗೆ ಬರುತ್ತದೆ ಎಂದಿವೆ. ಹೀಗಿರುವಾಗ ಸಮಿತಿ ಈ ಸಮುದಾಯಕ್ಕೆ ಅನ್ಯಾಯ ಮಾಡುತ್ತಿದೆ. ಬೇಡ ಜಂಗಮ ಸಮುದಾಯಕ್ಕೆ ಅನ್ಯಾಯವಾದರೆ ಶಾಸಕರನ್ನು ಸುಮ್ಮನೆ ಬಿಡುವುದಿಲ್ಲ. ವಿಧಾನಸೌಧಕ್ಕೆ ಬೆಂಕಿ ಹಚ್ಚುವುದಾಗಿ ಏರಿದ ಧ್ವನಿಯಲ್ಲಿ ಹೇಳತೊಡಗಿದರು.

ಇದಕ್ಕೆ ಸಭೆಯಲ್ಲಿ ಇದ್ದ ಅನೇಕ ಸದಸ್ಯರು ಅಸಮಾಧಾನ ವ್ಯಕ್ತಪಡಿಸಿ ಈ ರೀತಿ ಮಾತನಾಡುವುದು ಸರಿಯಲ್ಲ, ಅನ್ಯಾಯವಾಗಿದ್ದರೆ ಕೋರ್ಟ್‌ಗೆ ಹೋಗಿ ಎಂದು ಉತ್ತರಿಸಿದರು. ಇದಕ್ಕೆ ಸಮಾಧಾನಗೊಳ್ಳದ ಹಿರೇಮಠ, ಎಲ್ಲದಕ್ಕೂ ಕೋರ್ಟ್‌ಗೆ ಹೋಗಬೇಕೆಂದರೆ, ಕಾರ್ಯಾಂಗ, ಶಾಸಕಾಂಗ ಯಾಕೆ ಬೇಕು ಎಂದರು.

ಸಮಿತಿ ಅಧ್ಯಕ್ಷ ಎಂ.ಪಿ.ಕುಮಾರಸ್ವಾಮಿ ಅವರು ಸಭೆಗೆ ನಿಮ್ಮನ್ನು ಆಹ್ವಾನಿಸಿಲ್ಲ. ಸಮಿತಿ ಸರ್ಕಾರಕ್ಕೆ ಶಿಫಾರಸ್ಸು, ಸಲಹೆ ಮಾತ್ರ ನೀಡುತ್ತದೆ. ಈ ರೀತಿ ಸಭೆಗೆ ಬಂದು ಮಾತನಾಡುವುದು ಸರಿಯಲ್ಲ ಎಂದು ಉತ್ತರಿಸಿದರು.

ಈ ಮಧ್ಯೆ ಕೆಲವು ಸದಸ್ಯರು ಡಿಸಿಪಿ ಅವರನ್ನು ಕರೆಯಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಅಧಿಕಾರಿಗಳು ಸಹ ಹಿರೇಮಠ ಅವರನ್ನು ಸಭೆಯಿಂದ ಹೊರಗೆ ಕರೆದುಕೊಂಡು ಹೋದರು. ನಂತರ ಹಿರೇಮಠ ಸಭೆ ನಡೆಯುತ್ತಿದ್ದ ಸಮೀಪದಲ್ಲಿ ಒಬ್ಬರೆ ಕುಳಿತು ಧರಣಿ ನಡೆಸತೊಡಗಿದರು. ಸ್ವಲ್ಪ ಹೊತ್ತಿನಲ್ಲಿ ಸ್ಥಳಕ್ಕೆ ಆಗಮಿಸಿದ ಡಿಸಿಪಿ ಮಂಜುನಾಥ್ ಅವರು ಅಧಿಕಾರಿಗಳಿಂದ ಘಟನೆ ವಿವರ ಪಡೆದುಕೊಂಡು ಹಿರೇಮಠ ಅವರನ್ನು ತಮ್ಮ ವಶಕ್ಕೆ ಪಡೆದುಕೊಂಡು ನಂತರ ಬಿಡುಗಡೆ ಮಾಡಿದರು.

**ಹಕ್ಕುಚ್ಯುತಿಗೆ ನಿರ್ಧಾರ**: ಬಿ.ಡಿ.ಹಿರೇಮಠ ಅವರ ವರ್ತನೆ ವಿರುದ್ಧ ಕೆಲವು ಸದಸ್ಯರು ಪೊಲೀಸ್ ದೂರು ಸಲ್ಲಿಸುವಂತೆ ಸಲಹೆ ನೀಡಿದರು. ಆದರೆ ಪೊಲೀಸ್ ದೂರು ನೀಡಿದರೆ ಸಮಿತಿ ಅಧ್ಯಕ್ಷರು ಕೋರ್ಟ್‌ಗೆ ಅಲೆಯಬೇಕಾಗುತ್ತದೆ ಎಂಬ ಕಾರಣದಿಂದ ಹಿರೇಮಠ ಅವರ ವಿರುದ್ಧ ಹಕ್ಕುಚ್ಯುತಿ ಮಂಡಿಸಲು ನಿರ್ಧರಿಸಲಾಗಿದೆ ಎನ್ನಲಾಗಿದೆ.

ಆಧಾರ:ಕನ್ನಡ ಪ್ರಭ, ದಿನಾಂಕ:28.04.2022

## 10.ಆಧುನಿಕ ಕರ್ನಾಟಕ ಕನಸು ಕಂಡಿದ್ದ ರೆಡ್ಡಿ

ರಾಜ್ಯದ ಮೊದಲ ಮುಖ್ಯಮಂತ್ರಿ ಕೆ.ಸಿ.ರೆಡ್ಡಿ ಅವರು ಕರ್ನಾಟಕದ ಮೈಸೂರು ಪ್ರಜಾಪ್ರತಿನಿಧಿಯ ಸದಸ್ಯರಿಂದ ಮುಖ್ಯಮಂತ್ರಿಗಳಾಗುವವರೆಗೆ ಅಮೋಘವಾದ ಸಾರ್ವಜನಿಕ ಜೀವನ ನಡೆಸುವ ಮೂಲಕ ನಮ್ಮೆಲ್ಲರಿಗೆ ಮಾದರಿಯಾಗಿದ್ದರು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಣ್ಣಿಸಿದ್ದಾರೆ.

ಕೆ.ಸಿ.ರೆಡ್ಡಿ 120ನೇ ಜನ್ಮ ದಿನಚಾರಣೆ ಅಂಗವಾಗಿ ವಿಧಾನಸೌಧದಲ್ಲಿರುವ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು. ರೆಡ್ಡಿ ಅವರು ಆಧುನಿಕ ಕರ್ನಾಟಕ ಹಾಗೂ ಬೆಂಗಳೂರಿನ ಬೇರುಗಳಿಗೆ ನೀರು ಹಾಕಿ ಬೆಳೆಸಿದವರು. ಬೆಂಗಳೂರಿನಲ್ಲಿ ಬಿಎಚ್‌ಇಎಲ್, ಬಿಇಎಲ್, ಎಚ್‌ಎಂಟಿ ಮುಂತಾದ ಸಾರ್ವಜನಿಕ ಉದ್ದಿಮೆಗಳನ್ನು ಸ್ಥಾಪಿಸಲು ಕಾರಣಕರ್ತರಾಗಿ, ರಾಜ್ಯದ ಅಭಿವೃದ್ಧಿಗೆ ಭದ್ರ ಬುನಾದಿ ಹಾಕಿದ್ದಾರೆ ಎಂದು ಶ್ಲಾಘಿಸಿದರು.

**ಪುತ್ಥಳಿ ಅನಾವರಣ:** ಕೆ.ಸಿ.ರೆಡ್ಡಿ ಅವರ ಪುತ್ಥಳಿ ನಿರ್ಮಾಣ ಪೂರ್ಣಗೊಂಡಿದೆ. ಪುತ್ಥಳಿಗೆ ಇಂದೇ ಕಾರ್ಯಾದೇಶ ಹೊರಡಿಸಲಾಗುವುದು. ಕೆಲವೇ ದಿನಗಳಲ್ಲಿ ಸ್ಥಳಾಂತರ ಮಾಡಿ ಮತ್ತೆ ವಿಧಾನಸೌಧ ಆವರಣದಲ್ಲೇ ಅನಾವರಣ ಮಾಡಲಾಗುವುದು ಎಂದು ಬಸವರಾಜ ಬೊಮ್ಮಾಯಿ ಹೇಳಿದರು.

ಆಧಾರ:ವಿಜಯವಾಣಿ, ದಿನಾಂಕ:06.05.2022.

## 11. 19 ಲಕ್ಷ ಇವಿಎಂ ಯಂತ್ರಗಳು ನಾಪತ್ತೆ: ತನಿಖೆಗೆ ಒತ್ತಾಯ

ದೇಶದಲ್ಲಿ ಸುಮಾರು 19 ಲಕ್ಷ ಇವಿಎಂ ಯಂತ್ರಗಳು ಕಾಣೆಯಾಗಿದ್ದು, ಈ ಸಂಬಂಧ ಸುಪ್ರೀಂಕೋರ್ಟ್ ಮುಖ್ಯನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆ ನಡೆಯಬೇಕೆಂದು ಕಾಂಗ್ರೆಸ್ ಒತ್ತಾಯಿಸಿದೆ. ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿ ಅವರನ್ನು ಭೇಟಿ ಮಾಡಿದ ಮಾಜಿ ಸಚಿವ ಹೆಚ್.ಕೆ.ಪಾಟೀಲ್ ನೇತೃತ್ವದ ನಿಯೋಗ ಇವಿಎಂ ಯಂತ್ರಗಳ ಕಾಣೆಯ ಬಗ್ಗೆ ಸುಮಾರು 2,750 ಪುಟಗಳ ದಾಖಲೆ ಸಲ್ಲಿಸಿತು. ಈ ಸಂಬಂಧ ಕೇಂದ್ರ ಮತ್ತು ರಾಜ್ಯ ಚುನಾವಣಾ ಆಯೋಗಕ್ಕೆ ಸಮನ್ಸ್ ಜಾರಿ ಮಾಡುವಂತೆ ಮನವಿ ಮಾಡಿತು.

ಇವಿಎಂ ಯಂತ್ರಗಳ ಹ್ಯಾಕ್ ಮಾಡುವ ಪ್ರಕ್ರಿಯೆ ಕೂಡ ನಡೆದಿದೆ ಎಂಬ ಆರೋಪಗಳು ಕೇಳಿ ಬಂದಿದೆ. ವಿಶ್ವಾಸಾರ್ಹ ಚುನಾವಣೆ ನಡೆಸುವ ಸಂಬಂಧ ಸರ್ಕಾರ ಎಥಿಕಲ್ ಹ್ಯಾಕಥಾನ್ ಆಯೋಜನೆ ಮಾಡಬೇಕು. ಈ ಮೂಲಕ ತಾಂತ್ರಿಕ ಅನುಮಾನಗಳ ಬಗ್ಗೆ ಪರಿಹಾರ ನೀಡಬೇಕೆಂದು ಒತ್ತಾಯಿಸಿತು.

ಮನವಿ ಪತ್ರ ಸ್ವೀಕರಿಸಿ ಸ್ಪೀಕರ್, ಇದನ್ನು ಕೇಂದ್ರ ಚುನಾವಣೆ ಆಯೋಗಕ್ಕೆ ಕಳುಹಿಸಿ ಕೊಡುವ ಭರವಸೆ ನೀಡಿದರು.

ಬಳಿಕ ಕೆಪಿಸಿಸಿ ಕಛೇರಿಯಲ್ಲಿ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶಾಸಕ ಹೆಚ್.ಕೆ.ಪಾಟೀಲ, ಕೇಂದ್ರ ಚುನಾವಣಾ ಆಯೋಗ ಕೇವಲ ಇವಿಎಂ ನಿಯಮ ರೂಪಿಸುವುದರಲ್ಲೆ ಕಾಲ ಕಳೆಯುತ್ತಿದೆ. ಆದರೆ, ಇವಿಎಂ ಯಂತ್ರಗಳ ಕಾಣೆಯಾಗಿರುವ ಬಗ್ಗೆ ಯಾವುದೇ ರೀತಿಯ ಕ್ರಮ ಕೈಗೊಂಡಿಲ್ಲ ಎಂದು ದೂರಿದರು.

**2008–2009ರಲ್ಲಿ 7 ಲಕ್ಷ ಯಂತ್ರಗಳ ಕಾಣೆ**: 1998–09 ರಿಂದ 2016–17ರ ವರೆಗಿನ ಇವಿಎಂ ಯಂತ್ರಗಳ ವ್ಯತ್ಯಾಸದ ಬಗ್ಗೆ ಅಂಕಿ–ಅಂಶ ಸಮೇತ ಬೆಳಕು ಚೆಲ್ಲಿದ ಹೆಚ್.ಕೆ.ಪಾಟೀಲ್, 2000–01ರ ಚುನಾವಣೆ ವೇಳೆ 4,473 ಯಂತ್ರಗಳ ವ್ಯತ್ಯಾಸ ಆಗಿರುವುದು ಕಂಡು ಬಂದಿದೆ. ಇದಾದ ಬಳಿಕ 2000–09ರಲ್ಲಿ ಅಧಿಕ ಸಂಖ್ಯೆಯಲ್ಲಿ ಅಂದರೆ, 7,38,00 ಯಂತ್ರಗಳು ವ್ಯತ್ಯಾಸವಾಗಿದೆ ಎಂದು ಮಾಹಿತಿ ನೀಡಿದರು. ಪ್ರತಿ ಚುನಾವಣೆಯಲ್ಲಿ ಇವಿಎಂ ಯಂತ್ರಗಳು ಕಾಣೆ ಆಗುತ್ತಲೇ ಇದ್ದು ಈ ಬಗ್ಗೆ ಆಯೋಗ ತಲೆಕೆಡಿಸಿಕೊಳ್ಳದೆ ಸುಮ್ಮನೆ ಕುಳಿತಿದೆ ಎಂದರು.

**ಅಮೇರಿಕಾ, ಜರ್ಮನಿ, ಇಂಗ್ಲೆಂಡ್‌ನಲ್ಲಿ ಬ್ಯಾನ್**: ತಾಂತ್ರಿಕವಾಗಿ ಮುಂದುವರಿದಿರುವ ದೇಶಗಳು ಇವಿಎಂ ಯಂತ್ರಗಳಿಗೆ ನಿಷೇಧ ಹೇರಿವೆ. ಅಮೇರಿಕಾ, ಇಂಗ್ಲೆಂಡ್, ಜರ್ಮನಿ, ನೆದರ್‌ಲ್ಯಾಂಡ್ ಸೇರಿ ಇನ್ನೂ ಕೆಲವು ರಾಷ್ಟ್ರಗಳು ಚುನಾವಣೆಯಲ್ಲಿ ಇವಿಎಂ ಬಳಕೆ ಮಾಡುತ್ತಿಲ್ಲ. 2009ರಲ್ಲಿ ಇಟಲಿ ದೇಶ ಕೂಡ ಇವಿಎಂ ಯಂತ್ರ ಬಳಕೆ ಮಾಡದೆ ಚುನಾವಣೆ ನಡೆಸಿದೆ. ಈ ಬಗ್ಗೆ ಕೂಡ ಕೇಂದ್ರ ಸರ್ಕಾರ ಮತ್ತು ಚುನಾವಣಾ ಆಯೋಗ ಗಮನ ಹರಿಸಬೇಕಾಗಿದೆ ಎಂದರು.

ಕಾಂಗ್ರೆಸ್ ಮುಖ್ಯ ಸಚೇತಕ ಅಜಯ್‌ಸಿಂಗ್, ಮಾಜಿ ಸಂಸದ ಚಂದ್ರಪ್ಪ, ನಂಜಯ್ಯನಮಠ್, ವೇಣುಗೋಪಾಲ್, ರಾಮಚಂದ್ರಪ್ಪ ಸೇರಿ ಮತ್ತಿತರರು ಉಪಸ್ಥಿತರಿದ್ದರು.

ಆಧಾರ:ಉದಯವಾಣಿ, ದಿನಾಂಕ:09.05.2022

## 12.ಸಚಿವರ ಕಛೇರಿ ಮುಂದೆ ಮೇಲ್ಮನೆ ಸದಸ್ಯರ ಧರಣಿ

ಪದವಿ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ನಿಯೋಜನೆ ರದ್ದುಪಡಿಸಿ ಕಾಲೇಜು ಶಿಕ್ಷಣ ಇಲಾಖೆ ಹೊರಡಿಸಿರುವ ಆದೇಶ ಹಿಂಪಡೆಯುವಂತೆ ಒತ್ತಾಯಿಸಿ ವಿಧಾನಪರಿಷತ್ ಸದಸ್ಯರು ಉನ್ನತ ಶಿಕ್ಷಣ ಸಚಿವರ ಕಛೇರಿ, ವಿಕಾಸಸೌಧ ಇಲ್ಲಿ ಧರಣಿ ನಡೆಸಿದರು.

ಸಹಾಯಕ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರ ನಿಯೋಜನೆ ರದ್ದು ಆದೇಶ ಹಾಗೂ ಕಡ್ಡಾಯ ವರ್ಗಾವಣೆ ಆದೇಶ ಅವೈಜ್ಞಾನಿಕವಾಗಿದ್ದು, ಕೂಡಲೇ ವಾಪಸ್ ಪಡೆಯಬೇಕು ಎಂದು ಮೇಲ್ಮನೆ ಸದಸ್ಯ ಮರಿತಿಬ್ಬೇಗೌಡ ಧರಣಿ ಕುಳಿತರು. ಪರಿಷತ್ ಪ್ರತಿಪಕ್ಷ ನಾಯಕ ಹಾಗೂ ಕಾಂಗ್ರೆಸ್ ಸದಸ್ಯರಾದ ಪ್ರಕಾಶ್ ರಾಥೋಡ್, ಯು.ಬಿ.ವೆಂಕಟೇಶ್ ಕೆ.ಗೋವಿಂದರಾಜು ಹಾಗೂ ಮೋಹನ್ ಕೊಂಡಜ್ಜಿ ಅವರೂ ಧರಣಿ ಬೆಂಬಲಿಸಿ ಭಾಗಿಯಾಗಿದ್ದರು.

"ಪದವಿ ಪರೀಕ್ಷೆಗಳೂ ನಡೆಯುತ್ತಿದ್ದು ಮೌಲ್ಯಮಾಪನವೂ ಪ್ರಾರಂಭವಾಗಿದೆ. ಕಳೆದ ಏಳೆಂಟು ವರ್ಷಗಳಿಂದ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದ 1,500ಕ್ಕೂ ಅಧಿಕ ಪ್ರಾಧ್ಯಾಪಕರ ನಿಯೋಜನೆ ರದ್ದುಪಡಿಸಲಾಗಿದೆ. ನಿಯೋಜನೆ ಮೇಲಿದ್ದ ಪ್ರಾಧ್ಯಾಪಾಕರ ಸ್ಥಾನದಲ್ಲಿ ಕೆಲಸ ಮಾಡುತ್ತಿದ್ದ ಅತಿಥಿ ಉಪನ್ಯಾಸಕರು ಇದರಿಂದಾಗಿ ಕೆಲಸ ಕಳೆದುಕೊಳ್ಳುತ್ತಿದ್ದಾರೆ. ಏಕಾಏಕಿ ನಿಯೋಜನೆ ರದ್ದುಪಡಿಸಿರುವ ಆದೇಶದಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ" ಎಂದು ಮರಿತಿಬ್ಬೇಗೌಡ ದೂರಿದರು.

**ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ರದ್ದು:** ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಉಪನ್ಯಾಸಕರ ನಿಯೋಜನೆ ರದ್ದುಪಡಿಸಿ, ಅವರನ್ನೆಲ್ಲ ಮೂಲ ಕಾಲೇಜುಗಳಿಗೆ ಕಳುಹಿಸುವಂತೆ ಮರಿತಿಬ್ಬೇಗೌಡರೂ ಸೇರಿದಂತೆ ಎಲ್ಲ ಪಕ್ಷಗಳ ಶಾಸಕರು ಮತ್ತು ವಿಧಾನಪರಿಷತ್ ಸದಸ್ಯರು ವಿಧಾನಮಂಡಲ ಅಧಿವೇಶನದಲ್ಲಿ

ಆಗ್ರಹಿಸಿದ್ದರು. ಅವರ ಮನವಿಗೆ ಸ್ಪಂದಿಸಿ ಉನ್ನತ ಶಿಕ್ಷಣ ಇಲಾಖೆಯು ಬೋಧಕರ ನಿಯೋಜನೆಯನ್ನು ರದ್ದುಪಡಿಸಿದೆ ಎಂದು ಉನ್ನತ ಶಿಕ್ಷಣ ಸಚಿವರು ಸ್ಪಷ್ಟಪಡಿಸಿದ್ದಾರೆ.

"ಬೋಧಕರ ನಿಯೋಜನೆಯನ್ನು ಏಕಾಏಕಿ ಮಾಡಲಾಗಿದೆ ಎಂಬ ಪರಿಷತ್ ಸದಸ್ಯ ಮರಿತಿಬ್ಬೇಗೌಡರ ಆರೋಪ ಸತ್ಯಕ್ಕೆ ದೂರವಾದುದು. ಈ ಕುರಿತು ಹಲವು ಸುತ್ತಿನ ಮಾತುಕತೆಗಳು ನಡೆದಿವೆ" ಎಂದು ಸಚಿವರು ಪ್ರತಿಕ್ರಿಯಿಸಿದರು.

ಆಧಾರ:ವಿಜಯಕರ್ನಾಟಕ, ದಿನಾಂಕ:10.05.2022

## 13.ಶಾಸನ ಸಮಿತಿ ಅಧಿಕಾರ ಪಾರದರ್ಶಕತೆ ಮೊಟಕು

ವಿಧಾನ ಮಂಡಲದ ಸಮಿತಿಗಳಿಗೆ ಆಯಾ ಇಲಾಖೆಗಳು ಉತ್ತರಿಸುವ ಮುನ್ನ ಸಂಬಂಧಿಸಿದ ಸಚಿವರ ಅನುಮೋದನೆ ಪಡೆಯಬೇಕು ಎಂದು ಸರ್ಕಾರ ಸೂಚಿಸಿದೆ. ಈ ಕ್ರಮದಿಂದ ಶಾಸನ ಸಮಿತಿಗಳ ಮಹತ್ವ, ಅಧಿಕಾರದ ಜೊತೆಗೆ ಪಾರದರ್ಶಕತೆ ಮೊಟಕುಗೊಳ್ಳಲಿದೆ ಎಂಬ ಕಳವಳ ವ್ಯಕ್ತವಾಗಿದೆ ಕನಿಷ್ಠ ವೆಚ್ಚ, ಗರಿಷ್ಠ ಪಾರದರ್ಶಕತೆಗೆ ಹೆಚ್ಚಿನ ಒತ್ತು ನೀಡುತ್ತೇನೆ ಎಂದು ಹೇಳುವ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ದ್ವಂದ್ವ ನಿಲುವು ತಳೆದಿದೆ ಎಂಬ ಟೀಕೆಯೂ ಕೇಳಿಬರುತ್ತಿದೆ.

**ರಾಜ್ಯಪಾಲರ ಅಂಕಿತ:** 'ಕರ್ನಾಟಕ ಸರ್ಕಾರ (ಕಾರ್ಯಕಲಾಪಗಳು) (ತಿದ್ದುಪಡಿ) ನಿಯಮಗಳು, 2022' ಹಾಗೂ ರಾಜ್ಯ ಸರ್ಕಾರದ ಮಹತ್ವದ ನೀತಿಗಳಿಗೆ ಸಂಬಂಧಿಸಿದ 'ಕರ್ನಾಟಕ ಸರ್ಕಾರ (ಕಾರ್ಯಕಲಾಪಗಳು) ನಿಯಮಗಳು 1977ರಡಿ ನಿಯಮ 75, ಉಪನಿಯಮ(7)' ರಾಜ್ಯಪಾಲರ ಅಂಕಿತದೊಂದಿಗೆ ಅಧಿಸೂಚನೆ ಹೊರಡಿಸಲಾಗಿದೆ. ಕಾರ್ಯಕಲಾಪಗಳ ನಿಯಮಗಳಿಗೆ ತಿದ್ದುಪಡಿ ಅಧಿಕೃತ ಜಾರಿಗೆ ಬಂದ ಬೆನ್ನಲ್ಲೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಮಹತ್ವದ ಸುತ್ತೋಲೆ ಹೊರಡಿಸಿದೆ. ನೂತನ ತಿದ್ದುಪಡಿಯ ಹಿನ್ನೆಲೆಯಲ್ಲಿ ಇನ್ನು ಮುಂದೆ ಶಾಸನ ಸಮಿತಿಗಳಿಗೆ ಕಳುಹಿಸುವ ಎಲ್ಲ ಉತ್ತರಗಳಿಗೆ ಇಲಾಖೆ ಸಚಿವರ ಅನುಮೋದನೆ ಪಡೆಯಬೇಕು ಎಂದು ಎಲ್ಲ ಕಾರ್ಯದರ್ಶಿಗಳಿಗೆ ಸುತ್ತೋಲೆಯಲ್ಲಿ ಸೂಚಿಸಿದೆ. ವಿಧಾನಸೌಧದಲ್ಲಿ ನಡೆದ ಪಿಎಸಿ ಸಭೆಯಲ್ಲಿ ಸುತ್ತೋಲೆ ಬಗ್ಗೆ ವಿಸ್ತೃತ ಚರ್ಚೆಯಾಗಿದ್ದು, ಸ್ಪೀಕರ್ ಭೇಟಿ ಮಾಡಿ ಗಮನಕ್ಕೆ ತರುವ ಜವಾಬ್ದಾರಿಯನ್ನು ಸಮಿತಿ ಅಧ್ಯಕ್ಷ ಕೃಷ್ಣಬೈರೇಗೌಡರಿಗೆ ಸಭೆ ಒಪ್ಪಿಸಿತು ಎನ್ನಲಾಗಿದೆ.

ಸಂಬಂಧಿಸಿದ ಸಚಿವರು ಅನುಮೋದಿಸಿದ ಬಳಿಕ ಸಮಿತಿಗಳಿಗೆ ಇಲಾಖೆಗಳು ಉತ್ತರಗಳನ್ನು ಕಳುಹಿಸುವ ವ್ಯವಸ್ಥೆ ಲೋಕಸಭೆಯಲ್ಲಿದ್ದು, ಅದೇ ಮಾದರಿ ಅನುಸರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ವಿಧಾನಮಂಡಲದ 15 ಸಮಿತಿಗಳು ಸಾಂವಿಧಾನ ಸಂಸ್ಥೆಗಳು ಸಲ್ಲಿಸಿದ ವರದಿ, ಕೈಗೊಂಡ ಕ್ರಮಗಳು ಹಾಗೂ ಅನುಪಾಲನಾ ವರದಿಗಳನ್ನು ಚರ್ಚಿಸುತ್ತವೆ. ಕೆಲವು ಸಂದರ್ಭದಲ್ಲಿ ವಿಶೇಷ ಸದನ ಸಮಿತಿಗಳು ರಚನೆಯಾಗುತ್ತವೆ. ಸಾರ್ವಜನಿಕ ಲೆಕ್ಕಪತ್ರ ಸಮಿತಿ(ಪಿಎಸಿ)ಗೆ ಮಾತ್ರ ಪ್ರತಿಪಕ್ಷದ ಸದಸ್ಯರೊಬ್ಬರು ಅಧ್ಯಕ್ಷರಾದರೆ, ಉಳಿದ ಸಮಿತಿಗಳಿಗೆ ಆಡಳಿತ ಪಕ್ಷದ ಸದಸ್ಯರೇ ಅಧ್ಯಕ್ಷರಾಗಿರುತ್ತಾರೆ. ಪಿಎಸಿ ನಿಯಮಾವಳಿ ಪ್ರಕಾರ, ಇಲಾಖಾ ಮುಖ್ಯಸ್ಥರು ಉತ್ತರ ನೀಡಬೇಕೆಂದಿದೆ. ಸಚಿವರು ಇಲಾಖಾ ಮುಖ್ಯಸ್ಥರಾಗುವುದಿಲ್ಲ. ಸಚಿವರೇ ಸಮಿತಿ ಸಭೆಗಳಿಗೆ ಹಾಜರಾಗಿ ಉತ್ತರಿಸಲು ಬರುವುದಿಲ್ಲ. ತಿದ್ದುಪಡಿ ನಿಯಮ ಪ್ರಕಾರ, ಸಚಿವರ ಅನುಮೋದನೆ ಪಡೆಯಬೇಕು ಎಂದಿದೆ. ಇಲಾಖೆ ಸಿದ್ಧಪಡಿಸಿದ ಉತ್ತರಗಳಿಗೆ ಸಚಿವರು ಅನುಮೋದನೆ ನೀಡದಿದ್ದರೆ ಮುಂದೇನು? ಎಂಬ ಜಿಜ್ಞಾಸೆಯಿದೆ. ಸಮಿತಿ ಹಕ್ಕುಗಳ ಸಂರಕ್ಷಕರಾದ ವಿಧಾನ ಸಭಾಧ್ಯಕ್ಷ ಹಾಗೂ ವಿಧಾನ ಪರಿಷತ್ ಸಭಾಪತಿ ಮಧ್ಯ ಪ್ರವೇಶದಿಂದ ಮಾತ್ರ ಈ ಸಮಸ್ಯೆ ಬಗೆಹರಿಯಲಿದೆ ಎಂದು ಹೇಳಲಾಗುತ್ತಿದೆ.

ಆಧಾರ:ವಿಜಯವಾಣಿ, ದಿನಾಂಕ:11.05.2022.

## 14. BJP inches closer to majority in Council with polls coming up

Having come close to getting a simple majority in the Karnataka Legislative Council in the elections held to 25 seats from the local authorities in last year, the BJP

has more chances in the coming weeks to secure majority for the first time in the Upper House.

While elections to seven seats to be elected from the Legislative Assembly was declared by the Election Commission as the members are retiring upon completing their term, elections to four more seats where members are set to retire are round the corner. Election will also be announced shortly for one vacant seat.

Elections to four graduates and teachers constituencies are scheduled to be announced by the Election Commission shortly as the members are retiring on July 4. Of the eight members elected from the Assembly, seven members are completing their term on June 14 and the term of one seat that has fallen vacant due to the resignation of C.M.Ibrahim will be till June 17, 2024. Among those who are retiring on July 4 is Legislative Council Chairman Basavaraj Horatti, who has been elected on JD(s) ticket but will be contesting from BJP this time.

Currently with 37 members, the BJP is one short of a simple majority in the 75 member Upper House. Of the 11 retiring members, four each are from BJP and JD(S) and three are from Congress and the ruling BJP has to ensure victory in five of the 12 seats to wrest control in the Upper House.

"As per the election formula to be applied for electing members from the Legislative Assembly, the BJP with 121 members (including the Speaker) is sure of winning four seats as 29 votes required to win a seat. The BJP will also win the seat that has fallen vacant due to resignation when a separate election notification is done," a Secretariat source said.

A senior BJP MLC said "Of the four graduates and teachers constituencies going to polls, the BJP has an edge in three which will give us a comfortable majority. We might end up with 41 seats in the Council."

**Intense lobbying**: Meanwhile, lobbying has begun in parties ahead of the polls for eight seats from the Assembly. While Congress sources said that at least eight party leaders, including some sitting members are lobbying for the party nomination, decision to nominate will be taken after the election schedule is announced. The Congress with 69 members in the Assembly can win two seats where as it is holding three seats currently, and it had also held the vacated seat in the Council.

In BJP, the senior leader said that though nearly a dozen leaders are vying for nominations, it could be surprise selection by the high command. The JD(S) which has two seats currently, can win one seat and party sources said that two leaders are trying for nominations.

Courtesy:The Hindu, Dated: 12.05.2022

## 15. ಸಭಾಪತಿ ಸ್ಥಾನಕ್ಕೆ ಹೊರಟ್ಟಿ ರಾಜೀನಾಮೆ

ನಿರೀಕ್ಷೆಯಂತೆ ಬಸವರಾಜ್ ಹೊರಟ್ಟಿಯವರು ವಿಧಾನಪರಿಷತ್ ಸಭಾಪತಿ ಸ್ಥಾನಕ್ಕೆ ಹಾಗೂ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ಬಿಜೆಪಿ ಸೇರ್ಪಡೆಯಾಗಲಿದ್ದಾರೆ.

ಅಧಿಕೃತವಾಗಿ ತಮ್ಮ ರಾಜೀನಾಮೆಯನ್ನು ಉಪಸಭಾಪತಿಗೆ ರವಾನಿಸಿದ್ದಾರೆ. ಬಳಿಕ ಸುದ್ದಿಗೋಷ್ಠಿ ನಡೆಸಿ, ಬಿಜೆಪಿ ಸೇರುವುದಾಗಿ ಅಧಿಕೃತವಾಗಿ ಹೇಳಿದ್ದಾರೆ. ಈಗಾಗಲೇ ಘೋಷಣೆಯಾಗಿರುವ ಪಶ್ಚಿಮ ಶಿಕ್ಷಕರ ಕ್ಷೇತ್ರದಿಂದ ಬಿಜೆಪಿ ಪರವಾಗಿ ಸ್ಪರ್ಧಿಸುವುದು ನಿಶ್ಚಿತವಾಗಿದೆ.

**ಇಂದು ಬಿಜೆಪಿಗೆ**:ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಹೊರಟ್ಟಿ ಅವರು ಬೆಂಗಳೂರಿನಲ್ಲಿಯೇ ಬಿಜೆಪಿ ಸೇರ್ಪಡೆಯಾಗಲಿದ್ದು, ಪರಿಷತ್‌ಗೆ 8ನೇ ಬಾರಿಗೆ ಸ್ಪರ್ಧಿಸಿ ಗೆಲ್ಲುವ ಭರವಸೆಯಿದೆ. ಪಕ್ಷೇತರವಾಗಿ ಸ್ಪರ್ಧಿಸಿದರೂ ಗೆಲ್ಲುವ ವಿಶ್ವಾಸ ನನಗಿತ್ತು. ಕ್ಷೇತ್ರದ ಶಿಕ್ಷಕರ ಮತದಾರರ ಆಸೆಯಂತೆ ಬಿಜೆಪಿ ಸೇರುವ ನಿರ್ಧಾರ ಕೈಗೊಂಡಿದ್ದೇನೆ ಎಂದರು.

**ಅವರು ಹೇಳಿದ್ದಿಷ್ಟು**: ಸತತ ಏಳು ಅವಧಿಗೆ ಮೇಲ್ಮನೆ ಸದಸ್ಯನಾಗಿ ಆಯ್ಕೆಯಾಗುತ್ತ ಬಂದಿದ್ದೇನೆ. ಎರಡು ತಲೆಮಾರಿನ ಜನ ನನಗೆ ಮತ ಹಾಕಿದ್ದಾರೆ. ಶಿಕ್ಷಕರು ನನ್ನನ್ನು ಈ ಹಂತಕ್ಕೆ ತಂದಿದ್ದಾರೆ. 1983ರಲ್ಲಿ ಪಕ್ಷೇತರನಾಗಿ ಸದಸ್ಯನಾಗಿದ್ದೆ, 1986 ರಲ್ಲಿ ಜನತಾದಳದಿಂದ ಆರಿಸಿ ಬಂದೆ. ಲೋಕಶಕ್ತಿ, ಜೆಡಿಎಸ್‌ನಿಂದ ಆರಿಸಿ ಬಂದೆ. ದೇವೇಗೌಡರು ಮಾರ್ಗದರ್ಶನ ಮಾಡಿದರು. ಕುಮಾರಸ್ವಾಮಿ ಬೆಂಬಲ ಮರೆಯಲಾಗಲ್ಲ ಎಂದು ಹೇಳಿದರು.

**ಜೆಡಿಎಸ್ ಎಲ್ಲವನ್ನೂ ನೀಡಿದೆ**: ಕೆಲವೊಮ್ಮೆ ಆಕಸ್ಮಿಕ ಸನ್ನಿವೇಶಗಳು ಎದುರಾಗುತ್ತವೆ. ಆ ಕಾರಣದಿಂದ ಜೆಡಿಎಸ್ ತೊರೆದಿದ್ದೇನೆ. ಈಗಲೂ ಜೆಡಿಎಸ್ ಬಗ್ಗೆ ನನಗೆ ಅಭಿಮಾನ ಇದೆ. ಪಕ್ಷ, ದೇವೇಗೌಡರು ಹಾಗೂ ಕುಮಾರಸ್ವಾಮಿ ನನಗೆ ಎಲ್ಲವನ್ನೂ ನೀಡಿದ್ದಾರೆ. ದೇವೇಗೌಡರನ್ನು ನೇರವಾಗಿ ಭೇಟಿ ಮಾಡುವ ಧೈರ್ಯ ಸಾಲಲಿಲ್ಲ. 12 ಪುಟಗಳ ಪತ್ರ ಬರೆದು ಅವರಿಗೆ ಕಳುಹಿಸಿದ್ದೇನೆ. ಕುಮಾರಸ್ವಾಮಿ ಭೇಟಿ ಸಂದರ್ಭದಲ್ಲಿ ಒಳ್ಳೆಯದಾಗಲಿ ಎಂದು ಹಾರೈಸಿದ್ದಾರೆ ಎಂದರು.

ಭವಿಷ್ಯದ ಬಗ್ಗೆ ಯಾವುದೇ ಚಿಂತೆಯಿಲ್ಲ. ಸಚಿವ ಸ್ಥಾನ ಸಿಗಲಿಲ್ಲ ಎನ್ನುವ ಕಾರಣಕ್ಕೆ ಪಕ್ಷ ಬಿಡುತ್ತಿಲ್ಲ. ಒಂದು ದಿನವೂ ಈ ಬಗ್ಗೆ ಅಸಮಾಧಾನ ಹೊರಹಾಕಲಿಲ್ಲ. ಜೆಡಿಎಸ್‌ಗೆ ಸಾಕಷ್ಟು ಮಂದಿ ಬಂದು ಹೋದರು. ನಾನು 2000 ದಿಂದಲೂ ಅದೇ ಪಕ್ಷದಲ್ಲಿದ್ದೆ. ಕುಟುಂಬದಲ್ಲಿ ನನ್ನನ್ನು ಬಿಟ್ಟರೆ ಬೇರೆಯವರಿಗೆ ರಾಜಕೀಯ ಇಷ್ಟವಿಲ್ಲ. ಇವತ್ತಿನವರೆಗೆ ಯಾರೂ ರಾಜಕೀಯದ ಕಡೆ ತಲೆ ಹಾಕಿಲ್ಲ ಎಂದು ಹೇಳಿದರು.

**ಅಧಿವೇಶನ ಉತ್ತಮ ರೀತಿಯಲ್ಲಿ ನಡೆಸಿದ್ದೇನೆ**: 1 ವರ್ಷ 3 ತಿಂಗಳಿನಿಂದ ಸಭಾಪತಿಯಾಗಿ ಉತ್ತಮ ಕಾರ್ಯನಿರ್ವಹಿಸಿದ್ದೇನೆ. ಬೇರೆ ಬೇರೆ ಇಲಾಖೆಗಳ 30 ಸಭೆಗಳನ್ನು ನಡೆಸಿದ್ದೇನೆ. ಹೊಸ ಶಾಸಕರಿಗೆ ತರಬೇತಿ ಕೊಟ್ಟಿದ್ದೇನೆ. ಸದನವನ್ನು ಅಜೆಂಡಾದಂತೆ ಮಾಡಿದ್ದೇವೆ. ಧರಣಿಗಳ ನಡುವೆಯೂ ಶೇ.90ರಷ್ಟು ಸದನವನ್ನು ಯಶಸ್ವಿಯಾಗಿ ನಡೆಸಿದ್ದೇವೆ. ಬೆಳಗಾವಿ ಅಧಿವೇಶನವೂ ಯಶಸ್ವಿಯಾಗಿದೆ. ಸಿಬ್ಬಂದಿಗೆ ಯೂನಿಫಾರ್ಮ್ ಕಡ್ಡಾಯ ಮಾಡಿದ್ದೇವೆ. ಪರಿಷತ್ ಸಚಿವಾಲಯ ಬಯೋಮೆಟ್ರಿಕ್ ಹಾಜರಾತಿ ಕಡ್ಡಾಯ ಮಾಡಲಾಗಿದೆ. ಸದಸ್ಯನಾಗಿ ಕೆಲಸದ ಬಗ್ಗೆ ಪುಸ್ತಕ ಮಾಡಿದ್ದೇನೆ. ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸಿದ್ದೇನೆ ಎಂದು ಹೊರಟ್ಟಿ ಹೇಳಿದರು.

ಆಧಾರ:ವಿಶ್ವವಾಣಿ, ದಿನಾಂಕ:17.05.2022

## 16. ಮಲಕಾಪೂರೆ ಹಂಗಾಮಿ ಸಭಾಪತಿ

ಪರಿಷತ್ತಿನ ಹಂಗಾಮಿ ಸಭಾಪತಿಯಾಗಿ ಬಿಜೆಪಿ ಹಿರಿಯ ಸದಸ್ಯ ರಘುನಾಥ್‌ರಾವ್ ಮಲಕಾಪೂರೆ ಅಧಿಕಾರ ವಹಿಸಿಕೊಂಡಿದ್ದಾರೆ. ಪರಿಷತ್ತಿಗೆ ಸಭಾಪತಿ ಆಯ್ಕೆಯಾಗುವವರೆಗೆ ಸಭಾಪತಿ ಹುದ್ದೆಯ ಕಾರ್ಯಾಭಾರಗಳನ್ನು ನಿಭಾಯಿಸುವಂತೆ ರಾಜ್ಯಪಾಲರು ಆದೇಶ ಹೊರಡಿಸಿದ ಹಿನ್ನೆಲೆಯಲ್ಲಿ ಮಲಕಾಪೂರೆ ಅವರು ಅಧಿಕಾರ ವಹಿಸಿಕೊಂಡರು.

ಅದರ ಬೆನ್ನಲ್ಲೇ ಹೊರಟ್ಟಿಯವರು ಪರಿಷತ್ ಸದಸ್ಯ ಸ್ಥಾನಕ್ಕೆ ನೀಡಿದ ರಾಜೀನಾಮೆಯನ್ನು ಹಂಗಾಮಿ ಸಭಾಪತಿ ಅಂಗೀಕರಿಸಿದರು. ಆದರೆ ಸದಸ್ಯ ಸ್ಥಾನಕ್ಕೆ ಸಭಾಪತಿ ಅಥವಾ ಉಪಸಭಾಪತಿಯವರಿಗೆ ರಾಜೀನಾಮೆ ಪತ್ರ ಸಲ್ಲಿಸಬೇಕಾಗಿದ್ದ ಕಾರಣ, ರಾಜೀನಾಮೆ

ಅಂಗೀಕಾರವಾಗಿರಲಿಲ್ಲ. ಹಾಗಾಗಿ, ಹಂಗಾಮಿ ಸಭಾಪತಿ ಅಧಿಕಾರ ವಹಿಸಿಕೊಂಡ ಮರುಕ್ಷಣ ಹೊರಟ್ಟಿಯವರ ರಾಜೀನಾಮೆ ಅಂಗೀಕರಿಸಲಾಗಿದೆ.

ಆಧಾರ:ಉದಯವಾಣಿ, ದಿನಾಂಕ:18.05.2022

**ದಿನಾಂಕ 17.05.2022 ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯಾಗಿ ಶ್ರೀ ರಘುನಾಥ್‌ರಾವ ಮಲಕಾಪೂರೆ ರವರು ಅಧಿಕಾರ ಸ್ವೀಕರಿಸಿದರು ಈ ಸಂದರ್ಭ.**



## 17.ಜೆಡಿಎಸ್ ತೊರೆದು ಬಿಜೆಪಿ ಸೇರ್ಪಡೆಯಾದ ಹೊರಟ್ಟಿ

ಪರಿಷತ್ ಸಭಾಪತಿ ಸ್ಥಾನ ಮತ್ತು ಸದಸ್ಯತ್ವಕ್ಕೆ ರಾಜೀನಾಮೆ ನೀಡಿರುವ ಹೊರಟ್ಟಿ ಅವರು ಜೆಡಿಎಸ್ ತೊರೆದು ಬಿಜೆಪಿಗೆ ಸೇರ್ಪಡೆಯಾದರು.

ಸಿ.ಎಂ. ಬಸವರಾಜ ಬೊಮ್ಮಾಯಿ ನಿವಾಸದಲ್ಲಿ ನಡೆದ ಸರಳ ಸಮಾರಂಭದಲ್ಲಿ ಹೊರಟ್ಟಿ ಅವರಿಗೆ ಬಿಜೆಪಿ ಬಾವುಟ ನೀಡಿ ಬರ ಮಾಡಿಕೊಳ್ಳಲಾಯಿತು. ಹೊರಟ್ಟಿ ವಿಧಾನಪರಿಷತ್ತಿನ ಪಶ್ಚಿಮ ಶಿಕ್ಷಕರ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಳಿಯಲಿದ್ದಾರೆ.

ಬಸವರಾಜ ಬೊಮ್ಮಾಯಿ ಅವರು ಮಾತನಾಡಿ, ಅಪಾರ ಅನುಭವ ಹೊಂದಿರುವ ಹಿರಿಯ ನಾಯಕರಾದ ಹೊರಟ್ಟಿ ಅವರು ತಮ್ಮದೇ ಆದ ಶಕ್ತಿ ಹೊಂದಿದ್ದಾರೆ. ಅವರು ನಮ್ಮ ಪಕ್ಷ ಸೇರ್ಪಡೆಗಾಗಿ ಅಮಿತ್ ಶಾ ಅವರನ್ನು ಭೇಟಿ ಮಾಡಿ ಚರ್ಚಿಸಿದ್ದರು. ರಾಜೀನಾಮೆ ಪ್ರಕ್ರಿಯೆ ಎಲ್ಲಾ ಮುಗಿಸಿ ಜೆಡಿಎಸ್ ತೊರೆದು ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ. ಹುಬ್ಬಳ್ಳಿಯಲ್ಲಿ ದೊಡ್ಡ ಸಮಾರಂಭ ಆಯೋಜಿಸಿ ಅವರನ್ನು ಪಕ್ಷಕ್ಕೆ ಸ್ವಾಗತ ಮಾಡಿಕೊಳ್ಳುತ್ತೇವೆ ಎಂದು ತಿಳಿಸಿದರು.

ಹೊರಟ್ಟಿ ಸೇರ್ಪಡೆಯಿಂದ ಆನೆಬಲ ಬಂದಂತಾಗಿದೆ. ಸುಧೀರ್ಘ ಕಾಲ ಪರಿಷತ್ ಸದಸ್ಯರಾಗಿ ದಾಖಲೆ ನಿರ್ಮಿಸಿದ್ದಾರೆ. ಶಿಕ್ಷಕರ ಕಲ್ಯಾಣಕ್ಕಾಗಿ ಹೋರಾಟ ಮಾಡಿದ್ದಾರೆ. ಅಂಥ ಒಬ್ಬ ನಾಯಕನನ್ನು ಪಕ್ಷಕ್ಕೆ ಬರ ಮಾಡಿಕೊಳ್ಳಲು ಖುಷಿಯಾಗುತ್ತದೆ. ಅವರ ಅನುಭವವನ್ನು ನಾವು ಬಳಸಿಕೊಳ್ಳುತ್ತೇವೆ. ಗೌರವ, ಅನುಭವಕ್ಕೆ ತಕ್ಕಂತೆ ಎಲ್ಲ ಅವಕಾಶ ನೀಡಲು ಪಕ್ಷದ ಹಿರಿಯ ನಾಯಕರು ಒಪ್ಪಿದ್ದಾರೆ. ಬಿಜೆಪಿ ಬೆಳವಣಿಗೆಗೆ ಇದು ಚರಿತ್ರಾರ್ಹ ದಿನ ಎಂದರು.

ಆಧಾರ:ಕನ್ನಡ ಪ್ರಭ, ದಿನಾಂಕ 19.05.2022

## 18. ರಾಜ್ಯಸಭಾ ಚುನಾವಣೆಗೆ ಅಧಿಸೂಚನೆ ಪ್ರಕಟ

ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ನಡೆಯುವ ದ್ವೈವಾರ್ಷಿಕ ಚುನಾವಣೆಗೆ ಅಧಿಸೂಚನೆ ಪ್ರಕಟವಾಗಿದೆ. ನಾಮಪತ್ರ ಸಲ್ಲಿಸಲು ಮೇ 31 ಕೊನೆಯ ದಿನವಾಗಿದೆ. ಜೂನ್ 1ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ಜೂನ್ 3 ನಾಮಪತ್ರಗಳನ್ನು ಹಿಂದಕ್ಕೆ ಪಡೆಯಲು ಕೊನೆಯ ದಿನವಾಗಿದೆ. ಜೂನ್ 10ರಂದು ಚುನಾವಣೆ ನಡೆಯಲಿದೆ. ಅಂದೇ ಸಂಜೆ 5 ಗಂಟೆಯ ನಂತರ ಮತ ಎಣಿಕೆ ನಡೆಯುವುದು. ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್, ಕಾಂಗ್ರೆಸ್‌ನ ಆಸ್ಕರ್ ಫರ್ನಾಂಡಿಸ್, ಜೈರಾಂ ರಮೇಶ್ ಹಾಗೂ ಬಿಜೆಪಿಯ ಕೆ.ಸಿ.ರಾಮಮೂರ್ತಿ ಅವರುಗಳಿಂದ ತೆರವಾದ ಸ್ಥಾನಗಳಿಗೆ ಚುನಾವಣೆ ನಡೆಯುತ್ತಿದ್ದು, ಆಸ್ಕರ್ ಫರ್ನಾಂಡಿಸ್ ಕೆಲ ದಿನಗಳ ಹಿಂದೆ ನಿಧನರಾಗಿದ್ದಾರೆ. ವಿಧಾನಸಭೆಯ ಸಂಖ್ಯಾಬಲದ ಆಧಾರದಲ್ಲಿ ಬಿಜೆಪಿ ಎರಡು ಹಾಗೂ ಕಾಂಗ್ರೆಸ್‌ನ ಒಂದು ಸ್ಥಾನ ಸುಲಭವಾಗಿ ಗೆಲ್ಲಲಿವೆ. ನಾಲ್ಕನೇ ಸ್ಥಾನಕ್ಕೆ ಯಾವ ಪಕ್ಷಗಳ ನಡುವೆ ಮೈತ್ರಿಯಾಗಲಿದೆ ಎಂಬುದು ಕುತೂಹಲ ಮೂಡಿಸಿದೆ.

ಆಧಾರ:ವಿಜಯವಾಣಿ, ದಿನಾಂಕ:25.05.2022

## 19. ಸ್ಪೀಕರ್ ಕಾಗೇರಿ ಪೀಠಾಸೀನಾಧಿಕಾರಿಗಳ ಸಮಿತಿ ಅಧ್ಯಕ್ಷ

ಅತ್ಯುತ್ತಮ ವಿಧಾನ ಪರಿಷತ್ತು ವಿಧಾನಸಭೆ ಪ್ರಶಸ್ತಿಗೆ ಮಾನದಂಡಗಳನ್ನು ಸೂಚಿಸುವ ಪೀಠಾಸೀನಾಧಿಕಾರಿಗಳ ಸಮಿತಿಯ ಅಧ್ಯಕ್ಷರನ್ನಾಗಿ ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷರಾದ ವಿಶ್ವೇಶ್ವರ ಹೆಗಡೆ, ಕಾಗೇರಿಯವರನ್ನು ನೇಮಕ ಮಾಡಲಾಗಿದೆ.

ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರು ಈ ಸಮಿತಿ ರಚಿಸಿ ವಿಶ್ವೇಶ್ವರ ಹೆಗಡೆ, ಕಾಗೇರಿಯುವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದಾರೆ. ದೆಹಲಿ ವಿಧಾನ ಸಭೆಯ ಸಭಾಧ್ಯಕ್ಷ ರಾಮ್ ನಿವಾಸ್ ಗೋಯಲ್, ಮಹಾರಾಷ್ಟ್ರ ವಿಧಾನ ಪರಿಷತ್ತಿನ ಸಭಾಪತಿ ರಾಮರಾಜೆ ಪ್ರಥಾಪ್‌ಸಿಂಗ್ ನಾಯಕ್ ನಿಂಬಾಳ್ಕರ್, ಬಿಹಾರ ವಿಧಾನ ಸಭೆಯ ಸಭಾಧ್ಯಕ್ಷ ವಿಜಯ ಕುಮಾರ್ ಸಿನ್ಹ ಅಸ್ಸಾಂ ವಿಧಾನಸಭೆಯ ಸಭಾಧ್ಯಕ್ಷ ಬಿಶ್ವಜಿತ್ ಡೈಮರಿ, ಗುಜರಾತ್ ವಿಧಾನಸಭೆಯ ಸಭಾಧ್ಯಕ್ಷೆ ಡಾ: ನಿಮಾಬೆನ್ ಆಚಾರ್ಯ, ತಮಿಳುನಾಡು ವಿಧಾನಸಭೆಯ ಸಭಾಧ್ಯಕ್ಷ ಎಂ. ಅಪ್ಪಾವು ಸಮಿತಿ ಸದಸ್ಯರಾಗಿದ್ದಾರೆ. ಹಿಮಾಚಲ ಪ್ರದೇಶದ ಶಿಮ್ಲಾದಲ್ಲಿ 2021ರ ನವೆಬರ್ 17 ಮತ್ತು 18 ರಂದು ನಡೆದ 82ನೇ ಅಖಿಲ ಭಾರತ ಪೀಠಾಸೀನಾಧಿಕಾರಿಗಳ ಸಮ್ಮೇಳನದಲ್ಲಿ ತೆಗೆದುಕೊಂಡ ನಿರ್ಣಯದಂತೆ ಅತ್ಯುತ್ತಮ ವಿಧಾನ ಪರಿಷತ್ತು / ವಿಧಾನ ಸಭೆ ಪ್ರಶಸ್ತಿಗೆ ಮಾನದಂಡಗಳನ್ನು ಸೂಚಿಸಲು ಲೋಕಸಭೆಯ ಸಭಾಧ್ಯಕ್ಷ ಓಂ ಬಿರ್ಲಾ ಅವರು ಈ ಸಮಿತಿ ರಚಿಸಿ, ಕರ್ನಾಟಕದ ವಿಶ್ವೇಶ್ವರ ಹೆಗಡೆ, ಕಾಗೇರಿಯವರನ್ನು ಅಧ್ಯಕ್ಷರನ್ನಾಗಿ ನೇಮಿಸಿದ್ದಾರೆ ಎಂದು ವಿಧಾನಸಭೆಯ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ತಿಳಿಸಿದ್ದಾರೆ.

ಆಧಾರ:ಉದಯವಾಣಿ, ದಿನಾಂಕ: 28.05.2022.

## 20. ರಾಜಭವನದಲ್ಲಿ ಅಂಬೇಡ್ಕರ್ ಪ್ರತಿಮೆ ಅನಾವರಣ

ರಾಜಧಾನಿಯ ರಾಜಭವನದ ಅಂಗಳದಲ್ಲಿ ಡಾ:ಬಿ.ಆರ್.ಅಂಬೇಡ್ಕರ್ ಪ್ರತಿಮೆ ಅನಾವರಣಗೊಂಡಿತು. ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅಂಬೇಡ್ಕರ್ ಪುತ್ಥಳಿ ಅನಾವರಣಗೊಳಿಸಿ, ಪುಷ್ಪನಮನ ಸಲ್ಲಿಸಿದರು. ಇದಕ್ಕೆ ಮುಖ್ಯಮಂತ್ರಿಯವರು, ವಿಧಾನಸಭೆ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ವಿಧಾನ ಪರಿಷತ್ ಸಭಾಪತಿ ರಘುನಾಥ್‌ರಾವ್ ಮಲ್ಕಾಪುರೆ, ಸಚಿವ ಅರಗ ಜ್ಞಾನೇಂದ್ರ, ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಸಾಕ್ಷಿಯಾದರು.

ಪ್ರಸ್ತುತ ಅಂಬೇಡ್ಕರ್ 125ನೇ ಜಯಂತಿ ವರ್ಷಾ ಆಚರಣೆ ಸಂದರ್ಭದಲ್ಲಿ ದೇಶದ ಎಲ್ಲೆಡೆ ಅವರ ಬದುಕು–ಸಾಧನೆ ಸ್ಮರಣೆಯ ಕಾರ್ಯಕ್ರಮಗಳು ವಿಭಿನ್ನವಾಗಿ ನಡೆಯುತ್ತಲೇ ಇವೆ.

ಅದರ ಮುಂದುವರಿದ ಭಾಗವಾಗಿ ರಾಜಧಾನಿ ಬೆಂಗಳೂರಿನ ರಾಜಭವನ ಅಂಗಳದಲ್ಲಿ ಅಂಬೇಡ್ಕರ್ ಪುತ್ಥಳಿ ಅನಾವರಣಗೊಳಿಸುವ ಮೂಲಕ ರಾಜಭವನವು ನಾಡಿಗೆ ಸಾಮಾಜಿಕ ನ್ಯಾಯದ ಸಂದೇಶ ಸಾರಿದೆ.

ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್, ಸಾಮಾಜ ಕಲ್ಯಾಣ ಇಲಾಖೆ ಕಾರ್ಯದರ್ಶಿ ಬಿ.ಎಚ್. ಅನಿಲ್ ಕುಮಾರ್ ಇತರರಿದ್ದರು.

ಆಧಾರ:ಉದಯವಾಣಿ, ದಿನಾಂಕ:31.05.2022.

**ರಾಜಭವನದಲ್ಲಿ ನಡೆದ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ರವರ ನೂತನ ಪುತ್ಥಳಿ ಅನಾವರಣ ಕಾರ್ಯಕ್ರಮದಲ್ಲಿ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್‌ಚಂದ್ ಗೆಹ್ಲೋಟ್‌ರವರು, ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷರಾದ ವಿಶ್ವೇಶ್ವರಹೆಗಡೆ ಕಾಗೇರಿ ರವರು, ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯಾಗಿ ಶ್ರೀ ರಘುನಾಥ್‌ರಾವ ಮಲಕಾಪೂರೆ ಯವರು ಮತ್ತು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ್ ಬೊಮ್ಮಾಯಿಯವರು, ಮಾನ್ಯ ಗೃಹ ಸಚಿವರಾದ ಶ್ರೀ ಅರಗ ಜ್ಞಾನೇಂದ್ರ ರವರು ಹಾಗೂ ಸರ್ಕಾರದ ಮುಖ್ಯಕಾರ್ಯದರ್ಶಿಯವರಾದ ಶ್ರೀಮತಿ ವಂದಿತ ಶರ್ಮ ರವರು ಹಾಗೂ ಇತರರು ಭಾಗವಹಿಸಿದ್ದರು.**





## 21. ವಿಧಾನ ಮಂಡಲ ಸಮಿತಿ ಸಭೆಗೆ ಗೈರಾಗಲು ಪ್ರಿಯಾಂಕ್ ತೀರ್ಮಾನ

ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ವಿವಿಧ ನಿಗಮಗಳಲ್ಲಿ ಗಂಗಾ ಕಲ್ಯಾಣ ಯೋಜನೆ ಅನುಷ್ಠಾನದಲ್ಲಿ ನಡೆದಿರುವ ಭ್ರಷ್ಟಾಚಾರದ ಕುರಿತು ಚರ್ಚೆ ನಡೆಸಲು ಆಸಕ್ತಿ ತೋರದೇ ಇರುವುದನ್ನು ಪ್ರತಿಭಟಿಸಿ ವಿಧಾನ ಮಂಡಲದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಮಿತಿ ಸಭೆಗಳಿಗೆ ಗೈರಾಗಲು ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ನಿರ್ಧರಿಸಿದ್ದಾರೆ.

ಈ ಕುರಿತು ಸಮಿತಿಯ ಅಧ್ಯಕ್ಷ ಎಂ.ಪಿ. ಕುಮಾರಸ್ವಾಮಿ ಅವರಿಗೆ ಪತ್ರ ಬರೆದಿರುವ ಪ್ರಿಯಾಂಕ್ ಸುಳ್ಳು ಜಾತೀ ಪ್ರಾಮಾಣಪತ್ರಗಳು ಸೇರಿದಂತೆ ಅನೇಕ ವಿಚಾರಗಳ ಕುರಿತು ಸಮಿತಿಯ ಸಭೆಗಳಲ್ಲಿ ಚರ್ಚೆ ನಡೆಯುತ್ತಿದೆ. ಸಮಿತಿಯ ಅಧ್ಯಕ್ಷರಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಅಭಿವೃದ್ಧಿಯ ವಿಚಾರದಲ್ಲಿ ನ್ಯಾಯ ದೊರಕಿಸುತ್ತೀರಿ ಎಂಬ ನಂಬಿಕೆ ನಮ್ಮದು. ಗಂಗಾ ಕಲ್ಯಾಣ ಯೋಜನೆಯಲ್ಲಿನ ಭ್ರಷ್ಠಾಚಾರದ ಕುರಿತು ಚರ್ಚೆ ನಡೆಸುವಂತೆ ಅನೇಕ ಬಾರಿ ನಾನು ನಿಮ್ಮನ್ನು ಕೋರಿದ್ದರೂ ಚರ್ಚೆ ಆರಂಭಿಸಿಲ್ಲ ಎಂದು ಅಸಮಾಧನ ವ್ಯಕ್ತಪಡಿಸಿದ್ದಾರೆ.

ಗಂಗಾ ಕಲ್ಯಾಣ ಯೋಜನೆ ಅನುಷ್ಠಾನದಲ್ಲಿ ರೂ.431 ಕೋಟಿಯಷ್ಟು ಅಕ್ರಮ ನಡೆದಿರುವುದು ತನಿಖಾ ಸಮಿತಿಯ ಮಧ್ಯಂತರ ವರದಿಯಲ್ಲಿ ಉಲ್ಲೇಖವಾಗಿದೆ ಎಂಬ ಮಾಹಿತಿ ಇದೆ. ಇಂತಹ ಗಂಭೀರ ವಿಷಯದ ಕುರಿತು ಚರ್ಚಿಸಿ, ನಿರ್ಣಯ ಕೈಗೊಳ್ಳಲಾಗದ ಸಮಿತಿಯ ಸಭೆಗೆ ಹಾಜರಾಗುವುದು ಆತ್ಮವಂಚನೆ ಮಾಡಿಕೊಂಡಂತಾಗುತ್ತದೆ. ಆದ್ದರಿಂದ ಇನ್ನು ಮುಂದೆ ಸಮಿತಿಯ ಸಭೆಗೆ ಹಾಜರಾಗಬಾರದೆಂದು ತೀರ್ಮಾನಿಸಿದ್ದೇನೆ, ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಆಧಾರ:ಪ್ರಜಾವಾಣಿ, ದಿನಾಂಕ:02.06.2022.

## 22. ಇಂದು ಕೆಂಪೇಗೌಡ ಲೇಔಟ್‌ಗೆ ವಿಧಾನಸಭೆ ಅಹವಾಲು ಸಮಿತಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನಿರ್ಮಿಸುತ್ತಿರುವ ನಾಡಪ್ರಭು ಕೆಂಪೇಗೌಡ ಬಡಾವಣೆಯ ಮೂಲ ಸೌಕರ್ಯ ಕಾಮಗಾರಿಗಳ ಪ್ರಗತಿ ಪರಿಶೀಲನೆಗೆ ವಿಧಾನಸಭೆ ಉಪ ಸಭಾಪತಿ ವಿಶ್ವನಾಥ್ ಚಂದ್ರಶೇಖರ್ ಮಾಮನಿ ಅಧ್ಯಕ್ಷತೆಯ ಸರ್ಕಾರದ ಅಹವಾಲು ಸಮಿತಿ ತೆರಳಲಿದೆ.

ಕೆಂಪೇಗೌಡ ಬಡಾವಣೆಗೆ ಬೆಳಿಗ್ಗೆ 11.30ಕ್ಕೆ ತೆರಳಲಿರುವ ಸಮಿತಿಯು ಮಧ್ಯಾಹ್ನ 2 ಗಂಟೆವರೆಗೆ ರಸ್ತೆ, ಸಿವಿಲ್ ಕಾಮಗಾರಿ, ಯುಜಿಡಿ, ನೀರು ಸರಬರಾಜು ಮತ್ತು ವಿದ್ಯುದ್ದೀಕರಣ ಸಂಬಂಧಿತ ಕಾಮಗಾರಿಗಳ ಕುರಿತು ಪರಿಶೀಲನೆ ನಡೆಸಲಿದೆ. ಈ ಬಡಾವಣೆಯಲ್ಲಿ ಮೂಲಸೌಕರ್ಯ ಒದಗಿಸುವ ಕಾಮಗಾರಿ ಶೇ.56ರಷ್ಟು ಪೂರ್ಣಗೊಂಡಿದ್ದು, ಇನ್ನು ಶೇ.44ರಷ್ಟು ಬಾಕಿ ಇದೆ. ಈಗಾಗಲೇ ವಿವಿಧ ಕಾಮಗಾರಿಗಳ ವೇರಿಯೇಶನ್ ಕ್ವಾಂಟಿಟಿ ಅನುಮೋದನೆ ನೀಡಲಾಗಿದ್ದು, ಗುತ್ತಿಗೆದಾರರಿಗೆ ಕೊಡಬೇಕಾದ ಬಾಕಿ ಹಣದ ಬಗ್ಗೆಯೂ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಬಿಡಿಎ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಕೆಂಪೇಗೌಡ ಬಡಾವಣೆಗೆ ಡಿಸೆಂಬರ್ ಅಂತ್ಯದೊಳಗೆ ಮೂಲ ಸೌಕರ್ಯ ಒದಗಿಸಲು ಬಿಡಿಎ ಬದ್ಧವಾಗಿದೆ. ಗುತ್ತಿಗೆದಾರರಿಗೆ ಬಾಕಿ ಹಣ ಪಾವತಿಸುವ ಸಂಬಂಧ ಕಾಮಗಾರಿ ಪ್ರಗತಿ ಪರಿಶೀಲನೆಗೆ ಥರ್ಡ್‌ಪಾರ್ಟಿ ಕಮಿಟಿ ನೇಮಕ ಮಾಡಿದೆ. ಶೀಘ್ರದಲ್ಲಿಯೇ ಆ ಸಮಿತಿ ವರದಿ ಸಲ್ಲಿಸಲಿದೆ. ನಂತರ ಮುಂದಿನ ಕ್ರಮ ಕೈಗೊಳ್ಳುತ್ತೇವೆ. ಉದ್ದೇಶಪೂರ್ವಕವಾಗಿ ಕಾಮಗಾರಿ ವಿಳಂಬ ಮಾಡಿಲ್ಲ. ಸದ್ಯ ಬಿಡಿಎ ಬಳಿ ಕಾಮಗಾರಿಗೆ ದುಡ್ಡಿನ ಕೊರತೆ ಇಲ್ಲ ಎಂದು ಬಿಡಿಎ ಹಿರಿಯ ಅಧಿಕಾರಿಗಳು ಮಾಹಿತಿ ನೀಡಿದರು.

ಬಡಾವಣೆಯಲ್ಲಿ ಸಿವಿಲ್ ಕಾಮಗಾರಿ, ಯುಜಿಡಿ, ನೀರು ಸರಬರಾಜು, ರಸ್ತೆ ಮತ್ತು ವಿದ್ಯುದ್ದೀಕರಣ ಸಂಬಂಧಿತ ಕಾಮಗಾರಿಗಳು ವೇರಿಯೇಶನ್ ಕ್ವಾಂಟಿಟಿ ಅನುಮೋದನೆ ಬಾಕಿ ಇದೆ. 5 ಕಿ.ಮೀ. ರಾಜಕಾಲುವೆ, 36 ಸೇತುವೆಗಳ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿಲ್ಲ. ವಿದ್ಯುತ್ ಉಪಕೇಂದ್ರ, ತಾತ್ಕಾಲಿಕ ವಿದ್ಯುತ್ ಸರಬರಾಜು ಕಾಮಗಾರಿಗೆ ಅನುಮೋದನೆ ಸಿಕ್ಕಿದೆ. ಆದರೆ, ಸರ್ಕಾರದಿಂದ ಅನುಮೋದನೆ ಪಟ್ಟಿಗಳು ಬಾಕಿ ಇದ್ದು ಕಾಮಗಾರಿ ಪ್ರಾರಂಭವಾಗಿಲ್ಲ. ಹೀಗೆ ಹಲವು ಕಾಮಗಾರಿಗಳು, ಅನುಮೋದನೆಗಳು ಬಾಕಿ ಇದೆ. ಹಾಗಾಗಿ ಕಳೆದ ಆರು ವರ್ಷಗಳಿಂದ ನಿವೇಶನಗಳ

ಮಾಲೀಕರು ಮನೆ ಕಟ್ಟಲು ಸಾಧ್ಯವಾಗಿಲ್ಲ ಎಂದು ನಾಡಪ್ರಭು ಕೆಂಪೇಗೌಡ ಬಡಾವಣೆ ಮುಕ್ತ ವೇದಿಕೆ ಈ ಹಿಂದೆ ಸರ್ಕಾರದ ಅಹವಾಲುಗಳ ಸಮಿತಿಗೆ ದೂರು ನೀಡಿತ್ತು.

ಆಧಾರ:ಕನ್ನಡಪ್ರಭ, ದಿನಾಂಕ: 02.06.2022.

## 23. ನನ್ನ ಜೀವನ ತೆರೆದ ಪುಸ್ತಕ

ನನ್ನ ರಾಜಕೀಯ ಜೀವನ, ಶಿಕ್ಷಕರಿಗಾಗಿ ಮಾಡಿರುವ ಹೋರಾಟ ತೆರೆದ ಪುಸ್ತಕ, ಹೀಗೆ ಹೇಳುವ ಮೂಲಕ ವಿಧಾನ ಪರಿಷತ್ತ್ ಪಶ್ಚಿಮ ಶಿಕ್ಷಕ ಮತಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಸವರಾಜ ಹೊರಟ್ಟಿ ತಮ್ಮ 42 ವರ್ಷದ ಸಾಧನೆ ಕೇಳುವ ವಿರೋಧಿಗಳಿಗೆ ಟಾಂಗ್ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಪರಿಷತ್ ಸದಸ್ಯನಾದ ಮೊದಲ ಅವಧಿಯಿಂದ ಇಲ್ಲಿಯವರೆಗೆ ನಾನು ಏನು ಮಾಡಿದ್ದೇನೆ ಎನ್ನುವುದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದೇನೆ. ಆ ಪುಸ್ತಕದಲ್ಲಿ ಏನಾದರೂ ತಪ್ಪು ಮಾಹಿತಿ ಇದ್ದರೆ ಕೋರ್ಟ್ ಕೇಸ್ ಹಾಕಲು ಸಹ ಹೇಳಿದ್ದೇನೆ ಎಂದು ಹೇಳಿದರು.

ಶಿಕ್ಷಣ ಸಚಿವನಾಗಿದ್ದಾಗ ಪ್ರತಿ ಜಿಲ್ಲೆಯಿಂದ ಮಾಹಿತಿ ಪಡೆದು 48,300 ಶಿಕ್ಷಕರ ನೇಮಕ, ನೂತನ ಪ್ರೌಢಶಾಲೆ/ಕಾಲೇಜುಗಳ ಸ್ಥಾಪನೆ ಉಪನ್ಯಾಸಕರ ನೇಮಕ, ಶಾಲಾ ಮಕ್ಕಳಿಗೆ ಬಿಸಿಯೂಟ, ಶಿಕ್ಷಕರ ವರ್ಗಾವಣೆ ಕಾಯಿದೆ ಪ್ರಸ್ತಾವನೆಯನ್ನು ನಾನೇ ಸಲ್ಲಿಸಿದ್ದೆ. ನಂತರ ಸಂಪುಟದಲ್ಲಿ ಒಪ್ಪಿಗೆ ಪಡೆದು ಆ ಕೆಲಸ ಮಾಡಲಾಗಿದೆ ಎಂದರು.

ಯಾವುದೇ ಸರ್ಕಾರ ಇರಲಿ ಅದಕ್ಕೆ ಮುಖ್ಯಮಂತ್ರಿಯೇ ಮುಖ್ಯಸ್ಥರಾಗಿರುತ್ತಾರೆ. ಆದ್ದರಿಂದ ಕುಮಾರಸ್ವಾಮಿ ಆ ಎಲ್ಲ ಕೆಲಸಗಳನ್ನು ತಾವು ಮಾಡಿದ್ದು ಎಂದು ಹೇಳಿಕೊಂಡಿದ್ದಾರೆ. ಅದರಲ್ಲಿ ತಪ್ಪೇನಿಲ್ಲ. ಮುಖ್ಯಮಂತ್ರಿಗೆ ಎಲ್ಲ ಇಲಾಖೆಗಳ ಕೆಲಸ ಮಾಡಲು ಸಾಧ್ಯವಿದೆಯೇ ಎಂದು ಪ್ರಶ್ನಿಸಿದರು. ಇನ್ನು ನೂತನ ಪಿಂಚಣಿ ಬದಲು ಹಳೇ ಪಿಂಚಣಿ ಜಾರಿಗೆ ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದೇನೆ. ಆದರೆ, ಸಭಾಪತಿ ಇದ್ದಾಗ ಏಕೆ ಮಾಡಲಿಲ್ಲ ಎಂದು ಎಚ್‌ಡಿಕೆ ಪ್ರಶ್ನಿಸಿದ್ದಾರೆ ಈ ವೇಳೆ ಹಳೆ ಪಿಂಚಣಿ ಮರು ಜಾರಿಗೆ ಸಲಹೆ ನೀಡಿದ್ದೇನೆ. ಸಭಾಪತಿ ಹುದ್ದೆಯಲ್ಲಿದ್ದು ಒತ್ತಾಯಿಸಲು ಬರುವುದಿಲ್ಲ ಎಂದರು.

ಆಧಾರ:ವಿಜಯ ಕರ್ನಾಟಕ, ದಿನಾಂಕ: 06.06.2022

## 24. ಕಾಗೇರಿ ನೇತೃತ್ವದಲ್ಲಿ ಪೀಠಾಸೀನಾಧಿಕಾರಿಗಳ ಸಭೆ

ವಿಧಾನಸಭೆ ಮತ್ತು ವಿಧಾನ ಪರಿಷತ್ ಪ್ರಶಸ್ತಿಗೆ ಮಾನದಂಡಗಳನ್ನು ನಿರ್ಧರಿಸಲು ರಚನೆಯಾದ ಪೀಠಾಸೀನಾಧಿಕಾರಿಗಳ ಮೊದಲ ಸಭೆ ದೆಹಲಿಯಲ್ಲಿ ನಡೆಯಿತು. ಸಮಿತಿ ಅಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ಸೇರಿದಂತೆ ವಿವಿಧ ರಾಜ್ಯಗಳ ಪೀಠಾಸೀನಾಧಿಕಾರಿಗಳು, ಲೋಕಸಭೆ ಅಧಿಕಾರಿಗಳು ಇದ್ದರು.

ಅತ್ಯುತ್ತಮ ವಿಧಾನಸಭೆ ಮತ್ತು ವಿಧಾನ ಪರಿಷತ್ ಪ್ರಶಸ್ತಿಗೆ ಮಾನದಂಡಗಳನ್ನು ನಿರ್ಧರಿಸಲು ರಾಜ್ಯ ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ಅಧ್ಯಕ್ಷತೆಯಲ್ಲಿ ರಚಿಸಲಾದ ಪೀಠಾಸೀನಾಧಿಕಾರಿಗಳ ಮೊದಲ ಸಭೆ ದೆಹಲಿಯ ಸಂಸತ್ ಭವನದಲ್ಲಿ ನಡೆಯಿತು.

ಸಭೆಯಲ್ಲಿ ಸಮಿತಿ ಸದಸ್ಯರಾದ ದೆಹಲಿ, ಗುಜರಾತ್, ಅಸ್ಸಾಂ, ಬಿಹಾರ ಮತ್ತು ತಮಿಳುನಾಡು ವಿಧಾನಸಭಾ ಅಧ್ಯಕ್ಷರು ಹಾಗೂ ಲೋಕಸಭೆಯ ಅಧಿಕಾರಿಗಳು ಪಾಲ್ಗೊಂಡಿದ್ದರು.

ಸಮಿತಿಯ ಅಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ಪ್ರಶಸ್ತಿ ಮಾನದಂಡಗಳನ್ನು ನಿಗದಿಪಡಿಸುವ ಸಂಬಂಧ ಸೂಕ್ತ ಪ್ರಶ್ನಾವಳಿಗಳನ್ನು ತಯಾರಿಸಲು ಲೋಕಸಭೆಯ ಅಧಿಕಾರಿಗಳಿಗೆ ಸೂಚಿಸಿದರು. ಅಲ್ಲದೆ, ಮುಂದಿನ ಸಮಿತಿಯ ಸಭೆಯನ್ನು ಬೆಂಗಳೂರಿನಲ್ಲಿ ನಡೆಸಲು ತೀರ್ಮಾನಿಸಿದರು.

ಆಧಾರ:ವಿಶ್ವವಾಣಿ, ದಿನಾಂಕ: 14.06.2022.

**ದಿನಾಂಕ: 13/06/2022 ರಂದು ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರ ಅಧ್ಯಕ್ಷತೆಯಲ್ಲಿ ರಚಿಸಲಾದ ಅತ್ಯುತಮ ವಿಧಾನಪರಿಷತ್ತು ವಿಧಾನಸಭೆ ಪ್ರಶಸ್ತಿಗೆ ಮಾನದಂಡಗಳನ್ನು ಸೂಚಿಸಲು ರಚಿಸಲಾದ ಪೀಠಾಸೀನಾಧಿಕಾರಿಗಳ ಸಮಿತಿಯ ಸಭೆಯು ನವದೆಹಲಿಯ ಸಂಸತ್ ಭವನದಲ್ಲಿ ನಡೆಯಿತು. ಸದರಿ ಸಭೆಯಲ್ಲಿ ಸಮಿತಿ ಸದಸ್ಯರುಗಳಾದ ನವದೆಹಲಿ, ಗುಜರಾತ್, ಅಸ್ಸಾಂ, ಬಿಹಾರ್ ಮತ್ತು ತಮಿಳುನಾಡು ವಿಧಾನಸಭಾ ಅಧ್ಯಕ್ಷರುಗಳು ಪಾಲ್ಗೊಂಡಿದ್ದ ಸಂದರ್ಭ.**







# 25. ಪರಿಷತ್ ನೂತನ ಸದಸ್ಯರಿಂದ ಪ್ರಮಾಣ ವಚನ

ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದ ಏಳು ನೂತನ ಸದಸ್ಯರು ಪ್ರಮಾಣ ವಚನ ಸ್ವೀಕರಿಸಿದರು. ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ಸರಳ ಸಮಾರಂಭದಲ್ಲಿ ವಿಧಾನ ಪರಿಷತ್ ಹಂಗಾಮಿ ಸಭಾಪತಿ ರಘುನಾಥ್‌ರಾವ್ ಮಲ್ಕಾಪುರೆ ಸಮ್ಮುಖ, ಕಾಂಗ್ರೆಸ್‌ನ ಅಬ್ದುಲ್ ಜಬ್ಬಾರ್ ಅಲ್ಲಾಹ್ ಹೆಸರಿನಲ್ಲಿ, ಲಕ್ಷ್ಮಣ್ ಸವದಿ, ಕೇಶವ್ ಪ್ರಸಾದ್, ಎಂ. ನಾಗರಾಜ್ ಭಗವಂತನ ಹೆಸರಿನಲ್ಲಿ, ಛಲವಾದಿ ನಾರಾಯಣಸ್ವಾಮಿ ಸಂವಿಧಾನ ಶಿಲ್ಪಿ ಅಂಬೇಡ್ಕರ್ ಹೆಸರಿನಲ್ಲಿ, ಟಿ.ಎ. ಶರವಣ ಸಾಯಿಬಾಬ ಮತ್ತು ತಿರುಪತಿ ವೆಂಕಟೇಶ್ವರ ಹೆಸರಿನಲ್ಲಿ, ಹೇಮಲತಾ ವಾಲ್ಮೀಕಿ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದರು.

ಆಧಾರ:ವಿಜಯವಾಣಿ, ದಿನಾಂಕ: 17.06.2022.

**ದಿನಾಂಕ: 16–06–2022 ರಂದು ನೂತನವಾಗಿ ಆಯ್ಕೆಯಾದ ವಿಧಾನಪರಿಷತ್ ಸದಸ್ಯರುಗಳಾದ ಶ್ರೀ ಲಕ್ಷ್ಮಣ ಸವದಿ, ಶ್ರೀ ಎಂ ನಾಗರಾಜು, ಶ್ರೀ ಕೇಶವಪ್ರಸಾದ್, ಶ್ರೀ ಟಿ ನಾರಾಯಣಸ್ವಾಮಿ, ಶ್ರೀ ಕೆ. ಅಬ್ದುಲ್ ಜಬ್ಬಾರ್, ಶ್ರೀ ಶರವಣ ಟಿ ಎ, ಮತ್ತು ಶ್ರೀಮತಿ ಹೇಮಲತಾ ನಾಯಕ್‌ರವರು ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯಾದ ಶ್ರೀ ರಘುನಾಥ್‌ರಾವ ಮಲಕಾಪೂರೆ ಯವರು, ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿರವರು, ಮಾನ್ಯ ಕಂದಾಯ ಸಚಿವರಾದ ಶ್ರೀ ಆರ್.ಅಶೋಕ್‌ರವರು, ಮಾನ್ಯ ಸರ್ಕಾರಿ ಮುಖ್ಯ ಸಚೇತಕರಾದ ಶ್ರೀ ಡಾ.ವೈ.ಎ ನಾರಾಯಣಸ್ವಾಮಿ ಹಾಗೂ ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಶ್ರೀ ಪ್ರಕಾಶ್ ಕೆ.ರಾಥೋಡ್ ರವರುಗಳು ಭಾಗವಹಿಸಿದರು.**





# 26. ವಿಧಾನಸಭೆಗೆ 70ರ ಸಂಭ್ರಮ

ವಿಧಾನಸಭೆಯ ಮೊದಲ ಅಧಿವೇಶನಕ್ಕೆ ಜೂನ್–18ಕ್ಕೆ ಎಪ್ಪತ್ತು ವಸಂತಗಳು ತುಂಬಿದ ಸಂಭ್ರಮ. ಅಮೃತ ಮಹೋತ್ಸವಕ್ಕೆ ಹತ್ತಿರದಲ್ಲಿರುವ ಕರ್ನಾಟಕ ವಿಧಾನಸಭೆ ಈಗಾಗಲೇ ಬೆಳ್ಳಿ ಹಬ್ಬ ಮತ್ತು ಸುವರ್ಣ ಮಹೋತ್ಸವವನ್ನು ಆಚರಿಸಿಕೊಂಡಿದೆ. ಈಗ ವಿದಾನಸಭೆ ನಡೆಯುವುದಕ್ಕೆ ಕೆಂಗಲ್ ಹನುಮಂತಯ್ಯ ಕಟ್ಟಿಸಿದ ಕಲ್ಲಿನ ವಿಧಾನಸೌಧವಿದೆ. ಆದರೆ, ಅಂದೂ ಅಧಿವೇಶನ ನಡೆಸುವುದಕ್ಕೆ ಸೂಕ್ತವಾದ ಸ್ಥಳ ಇರಲಿಲ್ಲ. ಮಹಾರಾಜರ ಕಾಲದಲ್ಲಿದ್ದ ಪ್ರಜಾಪ್ರತಿನಿಧಿಗಳ ಸಭೆಗಳು ಮೈಸೂರಿನಲ್ಲಿ ನೆಡೆಯುತ್ತಿದ್ದವು. ಸ್ವಾತಂತ್ರ್ಯ ಬಂದ ಮೇಲೆ ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಗೆ ಬಂತು. ನಾಡಿನ ಮೊದಲ ಮುಖ್ಯಮಂತ್ರಿಯಾದ ಹೆಗ್ಗಳಿಕೆ ಕೆ.ಸಿ. ರೆಡ್ಡಿ ಅವರದ್ದು. 1949ರ ಡಿಸೆಂಬರ್ 16 ರಂದು ಮೈಸೂರು ಮಹಾರಾಜರು ಪ್ರತಿನಿಧಿ ಮತ್ತು ಶಾಸಕಾಂಗ ಸಭೆಯನ್ನು ವಿಸರ್ಜಿಸಿದರು. 1947ರಲ್ಲಿ ರಚಿತವಾದ ಸಂವಿಧಾನ ರಚನಾ ಸಭೆಯು 1952ರಲ್ಲಿ ಚುನಾವಣೆ ನಡೆಯುವವರೆಗೆ ಮೈಸೂರಿನ ಹಂಗಾಮಿ ಅಸೆಂಬ್ಲಿಯಾಗಿ ಮಾರ್ಪಾಟಾಗಿತ್ತು.

**ಅಧಿವೇಶನ ನಡೆದಿದ್ದೆಲ್ಲಿ**: 1952ರ ಜೂನ್–18 ರಂದು ಬುಧವಾರ ಬೆಳಿಗ್ಗೆ 11 ಗಂಟೆಗೆ ಬೆಂಗಳೂರಿನ ಹಳೆಯ ಸಾರ್ವಜನಿಕ ಕಛೇರಿ ಕಟ್ಟಡದ ಸಮ್ಮೇಳನ ಸಭಾಂಗಣದಲ್ಲಿ (ಆಗಿನ ಅಠಾರ ಕಚೇರಿಯೇ ಈಗಿನ ಹೈಕೋರ್ಟ್ ಕಟ್ಟಡ) ಶಾಸಕಾಂಗ ಸಭೆಯ ಮೊದಲ ಅಧಿವೇಶನ ನಡೆಯಿತು. ಸಂವಿಧಾನದಡಿ ರೂಪುಗೊಂಡ ಮೊದಲ ವಿಧಾನಸಭೆಯಲ್ಲಿ 99 ಚುನಾಯಿತ ಮತ್ತು ಒಬ್ಬ ನಾಮ ನಿರ್ದೇಶಿತ ಸದಸ್ಯರಿದ್ದರು. ರಾಜ್ಯ ವಿಧಾನಸಭೆಯ ಮೊದಲ ಅಧಿವೇಶನಕ್ಕೆ ಹಂಗಾಮಿ ಸ್ಪೀಕರ್ ಆಗಿ ವಿ. ವೆಂಕಟಪ್ಪ ನೇಮಕಗೊಂಡಿದ್ದರು. ಅಂದಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಸೇರಿ ನೂತನ ಸದಸ್ಯರಿಗೆ ಪ್ರಮಾಣವಚನ ಬೋಧಿಸಿದ ಗೌರವ ಕೂಡ ಮೊದಲ ಸ್ಪೀಕರ್ ಆಗಿದ್ದ ವೆಂಕಟಪ್ಪ ಅವರಿಗೆ ಸಲ್ಲುತ್ತದೆ.

**ಸ್ಪೀಕರ್ ಸ್ಥಾನಕ್ಕೂ ಸ್ಪರ್ಧೆ**: ವಿಧಾನ ಸಭೆ ಸಮಾವೇಶಗೊಂಡ ಬಳಿಕ ಸ್ಪೀಕರ್ ಸ್ಥಾನಕ್ಕೆ ಸ್ಪರ್ಧೆ ಏರ್ಪಟ್ಟಿತ್ತು. ಸಮಾಜವಾದಿ ಮುಖಂಡ ಶಾಂತವೇರಿ ಗೋಪಾಲಗೌಡ ಮತ್ತು ಎಚ್. ಸಿದ್ದಯ್ಯ ನಡುವೆ ನಡೆದ ಸ್ಪರ್ಧೆಯಲ್ಲಿ, ಎಚ್. ಸಿದ್ದಯ್ಯ 74 ಮತ ಪಡೆದು ಜಯಶಾಲಿಯಾದರು. ಆಗ ಅವರನ್ನು ಅಭಿನಂದಿಸಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಭಾಷಣ ಮಾಡಿದ್ದು ವಿಶೇಷ.

**ಮೊದಲ ಮಹಿಳಾ ಸ್ಪೀಕರ್**: 24 ಮಾರ್ಚ್ 1972 ರಿಂದ 3 ಮಾರ್ಚ್ 1978ರವರೆಗೆ ಕರ್ನಾಟಕ ವಿಧಾನ ಸಭೆಯ ಏಕೈಕ ಮಹಿಳಾ ಸ್ಪೀಕರ್ ಕೆ. ಎಸ್. ನಾಗರತ್ನಮ್ಮ

**ರಾಜ್ಯದ ಸಂರಚನೆ**: ಮೊದಲು 99 ಸದಸ್ಯರಿಗೆ ಸೀಮಿತವಾಗಿದ್ದ ಸದಸ್ಯರ ಸಂಖ್ಯಾಬಲ ಕ್ರಮೇಣ 224ಕ್ಕೆ ಹಿಗ್ಗಿತ್ತು. 1953ರಲ್ಲಿ ಆಂಧ್ರ ರಾಜ್ಯ ರಚನೆಯೊಂದಿಗೆ, ಬಳ್ಳಾರಿ ಜಿಲ್ಲೆಯ ಭಾಗಗಳನ್ನು ಮದ್ರಾಸ್ ರಾಜ್ಯದಿಂದ ಮೈಸೂರು ರಾಜ್ಯಕ್ಕೆ ಸೇರಿಸಿದ್ದರಿಂದ ವಿಧಾನಸಭೆಯ ಬಲ ಹೆಚ್ಚಾಯಿತು. ಮೈಸೂರು ರಾಜ್ಯದ ಮರು–ಸಂಘಟನೆಯ ನಂತರ 1956ರ ನವೆಂಬರ್ 1 ರಂದು ಹಿಂದಿನ ಬಾಂಬೆ ರಾಜ್ಯದಿಂದ ನಾಲ್ಕು ಜಿಲ್ಲೆಗಳು, ಹೈದರಾಬಾದ್ ರಾಜ್ಯದ ಮೂರು ಜಿಲ್ಲೆಗಳು ಹಳೆಯ ಮದ್ರಾಸ್ ರಾಜ್ಯದ ಕೂರ್ಗ್‌ನ ಒಂದು ಜಿಲ್ಲೆ ಮತ್ತು ತಾಲ್ಲೂಕು ಮತ್ತು ರಾಜಪ್ರಭುತ್ವದ ರಾಜ್ಯದೊಂದಿಗೆ ಮೈಸೂರು ವಿಧಾನ ಸಭೆ ಸದಸ್ಯರ ಸಂಖ್ಯೆಯೂ ಹೆಚ್ಚಿತು. 1957ರಲ್ಲಿ 208ರಷ್ಟಿದ್ದ ವಿಧಾನಸಭೆಯ ಬಲವು 1967ರಲ್ಲಿ 216ಕ್ಕೆ ಮತ್ತು 1978ರಲ್ಲಿ 224ಕ್ಕೆ ಏರಿತು. 1973ರಲ್ಲಿ ಮೈಸೂರು ರಾಜ್ಯವನ್ನು ಕರ್ನಾಟಕ ಎಂದು ಮರುನಾಮಕರಣ ಮಾಡಲಾಯಿತು.

**ಮೊದಲ ಅಧಿವೇಶನ:** ಹೊಸದಾಗಿ ವಿಧಾನಸೌಧವನ್ನು ನಿರ್ಮಾಣ ಮಾಡಿದ ಬಳಿಕ ವಿಧಾನಸಭೆಯ ಮೊದಲ ಅಧಿವೇಶನವು 1956ನೇ ಡಿಸೆಂಬರ್ 19ರಂದು ನಡೆಯಿತು.

**ಜಂಟಿ ಅಧಿವೇಶನಗಳು**: ಮೈಸೂರಿನ ಜಗನ್ಮೋಹನ ಪ್ಯಾಲೇಸ್, ಬೆಂಗಳೂರಿನ ಟೌನ್ ಹಾಲ್ ಮತ್ತು ಸಾರ್ವಜನಿಕ ಕಚೇರಿಗಳ ಕಟ್ಟಡ ಸಂಕೀರ್ಣ ಸಭಾಂಗಣದಲ್ಲಿ ವಿಧಾನಸಭೆಯ ಜಂಟಿ ಅಧಿವೇಶನ ನಡೆಸಿರುವುದು ವಿಶೇಷ.

| | |
|---|---|
| ಮೊದಲ ಸ್ಪೀಕರ್ | ವಿ. ವೆಂಕಟಪ್ಪ |
| ಮೊದಲ ಚುನಾಯಿತ ಸಿಎಂ | ಕೆಂಗಲ್ ಹನುಮಂತಯ್ಯ |
| ಮೊದಲ ಮಹಿಳಾ ಸ್ಪೀಕರ್ | ಕೆ.ಎಸ್. ನಾಗರತ್ನಮ್ಮ |
| ಮೊದಲ ವಿಧಾನ ಸಭೆ ಶಾಸಕರ ಸಂಖ್ಯಾಬಲ | 99 |
| ಮೊದಲ ಅಧಿವೇಶನ ನಡೆದಿದ್ದು | ಅಠಾರ ಕಚೇರಿ ಸಭಾಂಗಣ (ಈಗಿನ ಹೈಕೋರ್ಟ್) |
| ವಿಧಾನಸೌಧ ನಿರ್ಮಾಣ ಬಳಿಕ ಮೊದಲ ಅಧಿವೇಶನ ನಡೆದಿದ್ದು | 09.12.1956 |
| ವಿಧಾನಸೌಧ ನಿರ್ಮಾಣಕ್ಕೆ ಆಗ ಖರ್ಚಾದದ್ದು | ರೂ.1.84 ಕೋಟಿ |

**ಸಂಭ್ರಮಾಚರಣೆಗೆ ಸಲಹೆ:** ಅರವತ್ತು ವರ್ಷ ತುಂಬಿದಾಗ ವಿಧಾನಸಭೆಯಲ್ಲಿ ಸಂಭ್ರಮಾಚರಣ ಮಾಡಲಾಗಿತ್ತು. 70ನೇ ವರ್ಷಕ್ಕೆ ವಿಧಾನಸಭೆ ನಡೆದು ಬಂದ ದಾರಿ ಬಗ್ಗೆ ಚಿಂತನ ಮಂಥನ ನಡೆಸುವ ನಿಟ್ಟಿನಲ್ಲಿ ಪ್ರಯತ್ನಗಳು ಚರ್ಚೆ ಹಂತದಲ್ಲಿವೆ. ಒಂದು ದಿನ ವಿಧಾನಸಭೆ ಅಧಿವೇಶನ ನಡೆಸಬೇಕು. ಈ ಬಗ್ಗೆ ವಿಚಾರಗೋಷ್ಠಿಗಳನ್ನು ನಡೆಸಬೇಕು ಎನ್ನುವ ಸಲಹೆಗಗಳು ಕೂಡ ಬಂದಿವೆ. ವಿಧಾನಸಭಾಧ್ಯಕ್ಷರು, ಸರ್ಕಾರದ ಜೊತೆಗೆ ಚರ್ಚೆ ಮಾಡಿ ಈ ನಿಟ್ಟಿನಲ್ಲಿ ಅಂತಿಮ ತೀರ್ಮಾನ ತೆಗೆದುಕೊಳ್ಳಲಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

ಆಧಾರ:ವಿಜಯವಾಣಿ, ದಿನಾಂಕ: 18.06.2022

## 27. 70 ವರ್ಷ ಪೂರೈಸಿದ ವಿಧಾನಸಭೆ

ರಾಜಧಾನಿ ಬೆಂಗಳೂರಿನ ಅಠಾರ ಕಚೇರಿ ಮೂಲಕ ಅಸ್ತಿತ್ವ ಪಡೆದುಕೊಂಡಿದ್ದ ರಾಜ್ಯ ವಿಧಾನಸಭೆ ಭರ್ತಿ ಎಪ್ಪತ್ತು ವರ್ಷ ಪೂರೈಸಿದೆ. ಆ ಅವಧಿಯಲ್ಲಿ ರಾಜ್ಯ ವಿಧಾನಸಭೆ ಸಾಗಿ ಬಂದ ದಾರಿಯೂ ಅಷ್ಟೇ ರೋಚಕವಾಗಿದೆ.

ದೇಶದಲ್ಲಿ ಮೊದಲ ಸಾರ್ವತ್ರಿಕ ಚುನಾವಣೆ ನಡೆದ ಬಳಿಕ 1952ರ ಜೂನ್ 18 ರಂದು ರಾಜ್ಯ ವಿಧಾನಸಭೆ ಪ್ರಥಮ ಬಾರಿಗೆ ಸಮಾವೇಶಗೊಂಡಿತು. ಅಂದು ವಿಧಾನಸಭೆಯ ಸದಸ್ಯರಾಗಿ ಆಯ್ಕೆಯಾಗಿ ಬಂದವರು 99 ಮಂದಿ. ಜೊತೆಗೊಬ್ಬರು ನಾಮಕರಣ ಕೋಟಾದ ಸದಸ್ಯರು. ಈ ಸದಸ್ಯರಿಗೆ ಪ್ರತಿಜ್ಞಾವಿಧಿ ಭೋಧಿಸಿದವರು ವಿ. ವೆಂಕಟಪ್ಪ. ಈಗಿನ ಹೈಕೋರ್ಟ್ ಕಟ್ಟಡದ ಸಭಾಂಗಣದಲ್ಲಿ ವಿಧಾನಸಭೆಯ ಮೊದಲ ಅಧಿವೇಶನ ನಡೆದಿತ್ತು. ಆಗ ಅದಕ್ಕೆ ಅಠಾರ ಕಚೇರಿಯೆಂದು ಕರೆಯಲಾಗುತ್ತಿತ್ತು.

1952ರ ಸಂದರ್ಭದಲ್ಲಿ ಇದ್ದದ್ದು ಮೈಸೂರು ರಾಜ್ಯ. ವಿಧಾನಸಭೆಗೂ ಮೈಸೂರು ವಿಧಾನಸಭೆಯೆಂದು ಕರೆಯಲಾಗುತ್ತಿತ್ತು. 1956ರಲ್ಲಿ ಏಕೀಕರಣವಾದರೂ ಕರ್ನಾಟಕ ರಾಜ್ಯ ಎಂಬ ನಾಮಕರಣವಾದದ್ದು 1973ರಲ್ಲಿ. ಅಂದಿನಿಂದ ಅಸೆಂಬ್ಲಿಯೂ ಕರ್ನಾಟಕ ವಿಧಾನಸಭೆಯಾಯಿತು. ಇಂಥ ಹಿನ್ನಲೆಯ ರಾಜ್ಯ ವಿಧಾನಸಭೆ ದೇಶಕ್ಕೆ ಮಾದರಿಯಾದ ಹತ್ತು ಹಲವು ಕಾನೂನು ರೂಪಿಸಿ ಛಾಪು ಮೂಡಿಸಿರುವುದು ವೈಶಿಷ್ಟ್ಯ.

**15 ವಿಧಾನಸಭೆಗಳು**: ರಾಜ್ಯದಲ್ಲಿ ಸದ್ಯಕ್ಕೆ ಅಸ್ತಿತ್ವದಲ್ಲಿರುವುದು ಹದಿನೈದನೇ ವಿಧಾನಸಭೆ. ಹದಿನೈದನೇ ವಿಧಾನಸಭೆ ಅನೇಕ ನಾಟಕೀಯ ಬೆಳವಣಿಗೆಗೆ ಸಾಕ್ಷಿಯಾಗಿರುವುದನ್ನು ರಾಜ್ಯದ ಜನತೆ ನೋಡಿದ್ದಾರೆ. ಇದರ ಮಧ್ಯಯೇ ಏಳು ದಶಕ ಪೂರೈಸಿರುವ ವಿಧಾನಸಭೆ ರಾಷ್ಟ್ರ ಕಟ್ಟುವ ಕಾರ್ಯದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದೆ ಎಂದು ನಿಸ್ಸಂಶವಾಗಿ ಹೇಳಬಹುದು.

ಆಧಾರ:ವಿಜಯ ಕರ್ನಾಟಕ, ದಿನಾಂಕ: 18.06.2022

## 28. ಶಾಸಕರ ವೇತನ ರೂ.2.5 ಲಕ್ಷಕ್ಕೆ ಹೆಚ್ಚಳ

ಕಳೆದ ವಿಧಾನಸಭೆ ಅಧಿವೇಶನದಲ್ಲಿ ಶಾಸಕರ ವೇತನ ಪರಿಷ್ಕರಣೆಗೊಂಡಿದ್ದು, ಇದೇ ಏಪ್ರಿಲ್ ನಿಂದ ಮಾಸಿಕ ವೇತನ ರೂ.2,05,000ಗೆ ಏರಿಕೆ ಆಗಿದೆ. ಅದರಲ್ಲಿ ದೂರವಾಣಿ ಭತ್ಯೆ ರೂ.20 ಸಾವಿರ ನೀಡುತ್ತಿರುವುದು ಅಚ್ಚರಿಗೆ ಕಾರಣವಾಗಿದೆ. ಅಂತೆಯೇ ಅಂಚೆ ವೆಚ್ಚ ತಿಂಗಳಿಗೆ ರೂ.5 ಸಾವಿರ

ನೀಡಲಾಗುತ್ತಿರುವುದೂ ಚರ್ಚೆಗೆ ಗ್ರಾಸವಾಗಿದೆ. ಶಾಸಕರಿಗೆ ಮೂಲ ವೇತನ ರೂ.40 ಸಾವಿರ, ಕ್ಷೇತ್ರ ಭತ್ಯೆಯಾಗಿ ರೂ.40 ಸಾವಿರ, ಚುನಾವಣಾ ಕ್ಷೇತ್ರದ ಪ್ರಯಾಣ ಭತ್ಯೆಯಾಗಿ ರೂ.60 ಸಾವಿರ, ಆಪ್ತ ಸಹಾಯಕ ಮತ್ತು ಕೊಠಡಿ ಸೇವಕನ ಭತ್ಯೆಯಾಗಿ ರೂ.20 ಸಾವಿರ, ಅಂಚೆ ವೆಚ್ಚ ರೂ. 5 ಸಾವಿರ, ದೂರವಾಣಿ ವೆಚ್ಚ ರೂ.20 ಸಾವಿರ ಇದೆ.

ಆಧಾರ:ವಿಜಯವಾಣಿ, ದಿನಾಂಕ: 18.06.2022

## 29. ವಿಧಾನಸಭೆಯ 70 ಸಂಭ್ರಮಕ್ಕೆ ವಿಕ ತೋರಣ

ಪ್ರಜಾತಂತ್ರದ ಗಟ್ಟಿ ಬೇರುಗಳ ತಳಹದಿಯ ಕರ್ನಾಟಕ ವಿಧನಸಭೆಯು 70 ಸಾರ್ಥಕ ವರ್ಷಗಳನ್ನು ಪೂರೈಸಿದ ಹಿನ್ನಲೆಯಲ್ಲಿ ವಿಜಯ ಕರ್ನಾಟಕ ಆಯೋಜಿಸುತ್ತಿರುವ ಕರ್ನಾಟಕ ವಿಧಾನಸಭೆಗೆ 70ರ ಸಂಭ್ರಮ. ವಿಕ ಸದನ ಶೂರರು ವಿಶಿಷ್ಠ ಕಾರ್ಯಕ್ರಮದ ಲಾಂಚನವನ್ನು ವಿಧನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ, ಕಾಗೇರಿ ಅವರು ಅನಾವರಣಗೊಳಿಸಿದರು.

ಬೆಂಗಳೂರಿನ ವಿಕ ಕಚೇರಿಯಲ್ಲಿ ಕಾಗೇರಿ ಅವರು ಲೋಗೋ ಬಿಡುಗಡೆ ಮಾಡುವ ಸಂದರ್ಭ, ವಿಧಾನ ಪರಿಷತ್ ಸದಸ್ಯರಾದ ಸಲೀಂ ಅಹಮದ್ ಟಿ.ಎ. ಶರವಣ ಜೊತೆಗಿದ್ದು ಶುಭ ಹಾರೈಸಿದರು. ಪತ್ರಿಕೆ ಸಂಪಾದಕ ಸುದರ್ಶನ ಚನ್ನಂಗಿಹಳ್ಳಿ ಪಾಲ್ಗೊಂಡಿದ್ದರು.

ಈ ವೇಳೆ ಮಾತನಾಡಿದ ಸ್ಪೀಕರ್ ವಿಶ್ವೇಶ್ವರ ಹೆಗಡೆ, ಕಾಗೇರಿ ಜಗತ್ತಿಗೆ ಪ್ರಜಾಪ್ರಭುತ್ವದ ಕಲ್ಪನೆ ಕೊಟ್ಟಿದ್ದೇ ಕರ್ನಾಟಕ. ಆಧುನಿಕ ಪ್ರಜಾಪ್ರಭುತ್ವದ ಕಲ್ಪನೆ ಮೊಳಕೆಯೊಡೆಯುವ ಮೊದಲೆ 12ನೇ ಶತಮಾನದಲ್ಲೇ ಸಮಾನತೆಯ ಹರಿಕಾರ ಬಸವಣ್ಣನವರ ಅನುಭವ ಮಂಟಪದಲ್ಲಿ ಅದರ ಬೇರುಗಳನ್ನು ಕಾಣಬಹುದು. ರಾಜಪ್ರಭುತ್ವವಿದ್ದರೂ ಮೈಸೂರಿನ ಮಹಾರಾಜರು 18ನೇ ಶತಮಾನದಲ್ಲಿಯೇ ಪ್ರಜಾಪ್ರತಿನಿಧಿ ಸಭೆ ನಡೆಸುವ ಮೂಲಕ ಪ್ರಜಾಪ್ರಭುತ್ವದ ಪರಿಕಲ್ಪನೆಗೆ ಅಡಿಪಾಯ ಹಾಕಿಕೊಟ್ಟಿದ್ದರು. ಪ್ರಜಾಪ್ರಭುತ್ವವೇ ಶ್ರೇಷ್ಠವಾದುದು. ಅದರ ಮೂಲಕ ಸ್ಥಾಪಿತವಾದ ಶಾಸನಸಭೆ ಪ್ರಜಾತಂತ್ರದ ದೇಗುಲವೆಂದು ಕರೆಸಿಕೊಂಡಿದೆ. ನಮ್ಮ ವಿಧಾನಸಭೆ 70 ವರ್ಷಗಳ ತನ್ನ ಹಾದಿಯಲ್ಲಿ ಹಲವು ಐತಿಹಾಸಿಕ ಜನಪರ ಕಾನೂನು ಕಾಯಿದೆಗಳಿಗೆ ಸಾಕ್ಷಿಭೂತವಾಗಿದೆ. ಈ ಸಾರ್ಥಕ ಹಾದಿಯ ಸಾಧನೆಗಳನ್ನು ಮೆಲುಕು ಹಾಕುತ್ತಾ ಹೊಸ ತಲೆಮಾರಿಗೆ ವಿಧಾನಮಂಡಲದ ಮಹತ್ವ ತಿಳಿಸುವ ಪತ್ರಿಕೆಯ ಪ್ರಯತ್ನ ಶ್ಲಾಘನೀಯ ಎಂದು ಹೇಳಿದರು.

ಹೊಸ ಹೊಸ ಚಟುವಟಿಕೆಗಳ ಮೂಲಕ ನಾಡಿನ ಮನೆ, ಮನಗಳಲ್ಲಿ ವಿಜಯ ಕರ್ನಾಟಕ ವಿಧಾನಸಭೆ ರಚನೆಯಾಗಿ 70 ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ಸಾಧನೆಗಳನ್ನು ನೆನಪಿಸುತ್ತ ಹೊಸ ಸವಾಲುಗಳ ಸ್ವೀಕಾರದ ದಿಶೆಯಲ್ಲಿ ಮಹತ್ವದ ಹೊಣೆಗಾರಿಕೆಯಿಂದ ಈ ಕಾರ್ಯಕ್ರಮ ಕೈಗೆತ್ತಿಕೊಂಡಿದೆ. ಪತ್ರಿಕೆಯಲ್ಲಿ ವರದಿ ಪ್ರಕಟವಾದ ನಂತರ ವಿಧಾನಸಭೆ ಸಚಿವಾಲಯವೂ ಈ 70 ವರ್ಷಗಳ ಸಾರ್ಥಕತೆ ಸ್ಮರಿಸುವ ಅರ್ಥಪೂರ್ಣ ಅವಲೋಕನದ ಚಿಂತನೆ ನಡೆಸಿದೆ ಎಂದು ಹೇಳಿದರು.

**ಶ್ರೇಷ್ಠತೆಯ ತಳಹದಿ:** ಕರ್ನಾಟಕ ವಿಧಾನಸಭೆಗೆ ಅನೇಕ ಹಿರಿಯರು ಶ್ರೇಷ್ಠತೆಯ ತಳಹದಿ ಹಾಕಿದ್ದು ವ್ಯವಸ್ಥೆ ಬಗ್ಗೆ ಅಭಿಮಾನ ಮೂಡುತ್ತದೆ. ಬಸವಣ್ಣ ಮೈಸೂರು ರಾಜಸಂಸ್ಥಾನ ಕಾಲದಿಂದಲೂ ಪೋಷಣೆಗೊಂಡು ಬೆಳವಣಿಗೆ ಕಂಡ ಪ್ರಜಾಸತ್ತಾತ್ಮಕ ವ್ಯವಸ್ಥೆ ಎಂಬುದು ನಮ್ಮ ಹೆಮ್ಮೆ ದೇವರಾಜ ಅರಸು ಅವರ ಭೂ ಸುಧಾರಣೆ ಕಾಯಿದೆ ಸೇರಿದಂತೆ ಹಲವು ಕ್ರಾಂತಿಕಾರಕ ಹಾಗೂ ಚಾರಿತ್ರಿಕ ಕಾಯಿದೆ, ಕಾನೂನುಗಳು ರೂಪುಗಲೊಳ್ಳಲು ಸಾಕ್ಷಿಯಾದ ಕರ್ನಾಟಕ ವಿಧಾನಸಭೆಯು ಜನ ಸಾಮಾನ್ಯರು ವಿಶ್ವಾಸದ ಹೆಜ್ಜೆ ಇಡಡುವಂತಹ ಹಲವು ಸಾರ್ಥಕ ಸಾಧನೆಗಳಿಗೆ ಕಾರಣೀಭೂತವಾಗಿದೆ. ಈ ಎಲ್ಲದರ ಪತ್ರಿಕೆಯೊಂದು ಈ ಕಾರ್ಯಕ್ರಮ ನಡೆಸುತ್ತಿರುವುದರಿಂದ ನಾಡಿನ ಲಕ್ಷಾಂತರ ಜನರನ್ನು ತಲುಪುತ್ತದೆ ಎಂಬುದು ವಿಶೇಷವಾಗಿದೆ. ಪ್ರಜಾತಂತ್ರದ ಆಶಯ ಗಟ್ಟಿಗೊಳಿಸುವ ಪತ್ರಿಕೆಯ ಈ ಪಯತ್ನದ ಜೊತೆಗೆ ಸದಾ ನಾವಿದ್ದೇವೆ ಎಂಬು ಭರವಸೆ ನೀಡಿದರು.

ಜನ ಸಮುದಾಯ ಕಾಳಜಿಯ ಹತ್ತು ಹಲವು ಕಾರ್ಯಕ್ರಮಗಳ ಮೂಲಕ ವಿಕ ನಾಡಿನಲ್ಲಿ ಮನೆ ಮಾತಾಗಿದೆ. ವಿಧಾನಸಭೆ 70 ಸದನ ಶೂರರು ಅರ್ಥಪೂರ್ಣ ಕಾಯ್ಕ್ರಮ ಪ್ರಜಾತಂತ್ರ ವ್ಯವಸ್ಥೆಯ ಹಿರಿಮೆ ಬಗ್ಗೆ ಮಾರ್ಗದರ್ಶನ ಮಾಡುವ ಯುವ ರಾಜಕಾರಣಿಗಳಿಗೆ ಸಂದೇಶ ನೀಡಲಿರುವ

ಕಾರ್ಯಕ್ರಮ ಇದಾಗಲಿದೆ. 70 ವರ್ಷಗಳ ಅವಧಿಯಲ್ಲಿ ತತ್ವ ಸಿದ್ಧಾಂತಗಳಿಗೆ ಬದ್ಧರಾಗಿ ನ್ಯಾಯ ನಿಷ್ಠೆಯಿಂದ ಜವಾಬ್ದಾರಿ ನಿಭಾಯಿಸಿದ ಹಲವು ನಾಯಕರು ವಾಗ್ಮಿಗಳು ಸಂಸದೀಯ ಪುಟಗಳನ್ನು ಸ್ಮರಣೆ ಮಾಡಲು ಈ ಕಾರ್ಯಕ್ರಮ ಸಹಕಾರಿಯಾಗಲಿದೆ.

**ಸಲೀಂ ಅಹಮದ್, ವಿಧಾನ ಪರಿಷತ್ ಸದಸ್ಯ.**

ವಿಕ ಸೂಪರ್ ಸ್ಟಾರ್ ರೈತ, ವಿಕ ಚಿತ್ರಕಲೋತ್ಸವ, ವಿಕ ಹೈನುಹೊನ್ನು ಸೇರಿದಂತೆ ಅನೇಕ ರಚನಾತ್ಮಕ ಅಭಿಮಾನಗಳ ಮೂಲಕವು ಓದುಗರನ್ನು ತಲುಪುತ್ತಿರುವ ವಿಜಯ ಕರ್ನಾಟಕ ಪತ್ರಿಕೆಯು ನಮ್ಮ ಶಾಸನಸಭೆ ಹಾಗೂ ಅಲ್ಲಿನ ಸದಸ್ಯರ ಜನಪರ ಕಾಳಜಿಯ ಚಟುವಟಿಕೆಯನ್ನು ವಿಸ್ತರಿತ ರೂಪದಲ್ಲಿ ಜನತೆಯ ಮುಂದಿಡಲಿದೆ.

**ಸುದರ್ಶನ ಚನ್ನಂಗಿಹಳ್ಳಿ, ಸಂಪಾದಕ, ವಿಜಯ ಕರ್ನಾಟಕ.**

ಗ್ರಾಮೀಣ ಜನಜೀವಣ ಸುಧಾರಣೆ ಒಳಗೊಂಡು ಹಲವು ಕ್ಷೇತ್ರಗಳಲ್ಲಿ ಪರಿವರ್ತನೆಗೆ ಮುನ್ನುಡಿ ಬರೆದ ಮೇಧಾವಿ ನಾಯಕರು ವಿಧಾನಸಭೆಯಲ್ಲಿದ್ದರು. ದೇವರಾಜ ಅರಸು, ಹೆಚ್. ಡಿ. ದೇವೇಗೌಡ, ಬಿ.ಎಸ್. ಯಡಿಯೂರಪ್ಪ ಅವರಂತಹ ಹಲವು ನಾಯಕರು ಪ್ರಜಾತಂತ್ರದ ದೇಗುಲದಂತಿರುವ ವಿಧಾನಸಭೆಯ ಘನತೆ ಹೆಚ್ಚಿಸಿದ್ದಾರೆ. ಈ ನಯಕರ ಆದರ್ಶದ ನಡವಳಿಕೆ ಅರಿತು ಮುಂದೆ ಹೇಗೆ ನಡೆಯಬೇಕು ಎಂಬ ಕುರಿತು ಯುವ ಶಾಸಕರಿಗೆ ತಿಳುವಳಿಕೆ ಮೂಡಿಸಲು ಈ ಕಾರ್ಯಕ್ರಮ ಸಹಕಾರಿಯಾಗಲಿದೆ.

**ಟಿ.ಎ. ಶರವಣ, ವಿಧಾನ ಪರಿಷತ್ ಸದಸ್ಯ.**

**ಏನಿದು ಕಾರ್ಯಕ್ರಮ:** ಕರ್ನಾಟಕ ವಿಧಾನಸಭೆಗೆ 2022ರ ಜೂನ್ 18ಕ್ಕೆ ಭರ್ತಿ 70 ವರ್ಷ ಪೂರೈಸಿದೆ. ಒಂದೊಂದು ಮಹತ್ವದ ಮೈಲುಗಲ್ಲು ಈ ಹಿನ್ನೆಲೆಯಲ್ಲಿ ವಿಜಯ ಕರ್ನಾಟಕದಿಂದ ಅರ್ಥಪೂರ್ಣ ಕಾರ್ಯಕ್ರಮ ಆಯೋಜಿಸಲು ರೂಪುರೇಷೆ ಸಿದ್ಧಪಡಿಸಲಾಗಿದೆ. ರಾಜ್ಯದ ಎಲ್ಲ ಶಾಸಕರು, ಹಿರಿಯ ಮುತ್ಸದ್ದಿಗಳು ಮಾಜಿ ಸಚಿವರು ಮಾಜಿ ಶಾಸಕರನ್ನು ಒಳಗೊಂಡು ಈ ಸಂಭ್ರಮಕ್ಕೆ ತೋರಣ ಕಟ್ಟಬೇಕು ಎನ್ನುವುದು ಪತ್ರಿಕೆಯ ಆಶಯ.

ಈ ಹಿನ್ನೆಲೆಯಲ್ಲಿ ಜೂನ್ 3ರ ಸಂಚಿಕೆಯಲ್ಲಿ ವಿಧಾನಸಭೆಗೆ 70 ವಸಂತ ಶೀರ್ಷಿಕೆಯಡಿ ವಿಶೇಷ ವರದಿಯನ್ನು ಪ್ರಕಟಿಸಲಾಗಿತ್ತು.

ವಿಧಾನ ಮಂಡಲವೆಂದರೆ ಅದೊಂದು ಸಭಾಗೃಹವಲ್ಲ, ಅದು ಈ ರಾಜ್ಯದ ಚಾಲನಾ ಶಕ್ತಿ ರಾಜ್ಯ ಬಜೆಟ್ ಮಂಡನೆಯಾಗುವುದು ಇದೇ ವಿಧಾನಸಭೆಯಲ್ಲಿ ಜನಪರವಾದ ಕಾಯಿದೆ ರಚನೆಯಾಗುವುದು ಕೂಡ ವಿಧಾನಮಂಡಲದಲ್ಲಿ ರಾಜ್ಯದ ಜನತೆಯ ಪರವಾಗಿ ಧ್ವನಿ ಎತ್ತಲು ವಿಧಾನಮಂಡಲ ವೇದಿಕೆ. ಇಲ್ಲಿ ಸರ್ಕಾರಕ್ಕೆ ಕೊಡುವ ಭರವಸೆಗೆ ವಾಗ್ದಾನದ ಸ್ವರೂಪವಿರುತ್ತದೆ. ವಿಧಾನಸಭೆಯಲ್ಲಿ ಕೊಟ್ಟ ಮಾತನ್ನು ತಪ್ಪುವಂತಿಲ್ಲ. ಸದನದ ಹೊರಗೆ ರಾಜಕಾರಣಿಗಳು ಏನೇನೋ ಟೀಕೆ–ಟಪ್ಪಣಿ ಮಾಡಬಹುದು. ಆದರೆ, ಸದನದ ಒಳಗೆ ಹಾಗಲ್ಲ. ಅತ್ಯಂತ ಜವಾಬ್ದಾರಿಯಿಂದ ಮಾತನಾಡಬೇಕಾಗುತ್ತದೆ. ವಿಧಾನಮಂಡಲದಲ್ಲಿ ಆಡಿದ ಮಾತು ಶಾಶ್ವತ ದಾಖಲೆಯಾಗಿ ಉಳಿಯುತ್ತದೆ. ಮುಂದಿನ ತಲೆಮಾರು ಅದನ್ನು ನೋಡಿ ಅನುಸರಿಸಲು ಅವಕಾಶವಿರುತ್ತದೆ. ಈ ಸಭೆಗೊಂದು ವಿಶೇಷವಾದ ಘನತೆ, ಗೌರವವಿದೆ. ಇಂತಹ ನಮ್ಮ ಹೆಮ್ಮೆಯ ಸದನ ನಡೆದು ಬಂದ ದಾರಿಯನ್ನು ಮತ್ತು ಅದರ ಹೆಚ್ಚುಗಾರಿಕೆಯನ್ನು ತಿಳಿಸಲು ಇದು ಸಕಾಲ.

ಈ ದೃಷ್ಟಿಯಿಂದ ವಿಜಯ ಕರ್ನಾಟಕ ಪತ್ರಿಕೆ ಈ ಸಂಬಂಧದಲ್ಲಿ ವಿಶೇಷ ಕಾರ್ಯಕ್ರಮ ಆಯೋಜಿಸಲು ತಯಾರಿ ನಡೆಸಿದೆ. ಇದರ ಭಾಗವಾಗಿ ರಾಜ್ಯ ವಿಧಾನಮಂಡಲದಲ್ಲಿ ರಚನೆಯಾದ ಐತಿಹಾಸಿಕ ಕಾಯಿದೆಗಳನ್ನು ನೆನಪಿಸುವ ಮತ್ತು ಅವುಗಳ ಮಹತ್ವ ತಿಳಿಸುವ ಕೆಲಸವಾಗಲಿದೆ. ಶಾಸಕರಲ್ಲಿ ಅತ್ಯಂತ ಸಕ್ರಿಯವಾಗಿ ತೊಡಗಿಸಿಕೊಳ್ಳುವ ಕ್ರಿಯಾಶೀಲರಿದ್ದಾರೆ. ವಿಧಾನಸಭೆಯ ಹೆಗ್ಗಳಿಕೆಗೆ ಕಿರೀಟ ತೊಡಿಸುವಂತಹ ಅನುಭವಿ ಸದಸ್ಯರಿದ್ದಾರೆ. ಇಂತಹ ಎಲ್ಲರ ಕೊಡುಗೆಯನ್ನು ಮೆಲುಕು ಹಾಕುವ ಕಾರ್ಯವು ಆಗಲಿದೆ. ಈ ಉದ್ದೇಶಕ್ಕೆ ಸದನ ಶೂರರು ಎಂಬ ಸಂಚಿಕೆಯನ್ನು ತರಲಾಗುತ್ತಿದೆ.

ಆಧಾರ:ವಿಜಯ ಕರ್ನಾಟಕ, ದಿನಾಂಕ: 18.06.2022

**ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿರವರು ದಿನಾಂಕ: 14/04/2022ರಂದು ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ: ಬಿ.ಆರ್.ಅಂಬೇಡ್ಕರ್ ಅವರ 131ನೇ ಜನ್ಮದಿನದ ಪ್ರಯುಕ್ತ ಬೆಂಗಳೂರಿನ ವಿಧಾನಸೌಧದ ಮುಂಬಾಗದಲ್ಲಿರುವ ಡಾ: ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ವಂದನೆ ಸಲ್ಲಿಸಿದರು;**



**ದಿನಾಂಕ: 21/04/2022 ರಂದು ಸ್ವಾತಂತ್ರ್ಯದ ಅಮೃತ ಮಹೋತ್ಸವ ನಿಮಿತ್ತ ದೇಶದ ಸ್ವಾತಂತ್ರ್ಯಕ್ಕಾಗಿ ತ್ಯಾಗ ಬಲಿದಾನ ಮಾಡಿದ ಎಲ್ಲಾ ಸ್ವಾತಂತ್ರ್ಯ ಹೋರಾಟಗಾರರ ಗೌರವಾರ್ಥ ಬೀದರ್ ಜಿಲ್ಲೆಯ ಔರಾದದಿಂದ ಚಾಮರಾಜನಗರ ಜಿಲ್ಲೆಯ ಮಲೆಮಹದೇಶ್ವರ ಬೆಟ್ಟದವರೆಗೆ ಸೈಕಲ್ ಯಾತ್ರೆ ಕೈಗೊಂಡಿರುವ 9ನೇ ತರಗತಿಯ ಇಬ್ಬರು ವಿದ್ಯಾರ್ಥಿಗಳಾದ ಕುಮಾರ್ ಅರುಣ್ ಮತ್ತು ಕುಮಾರ್ ಕರುಣ್ ಅವಳಿ ಸಹೋದರರು ಬೆಂಗಳೂರಿನ ವಿಧಾನಸೌಧದ ಸಭಾಧ್ಯಕ್ಷರ ಕಛೇರಿಗೆ ಆಗಮಿಸಿದ ಸಂದರ್ಭದಲ್ಲಿ ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿಯವರು ಅವರನ್ನು ಅಭಿನಂದಿಸಿ, ಶುಭ ಹಾರೈಸಿದರು;**



ದಿನಾಂಕ: 09/05/2022 ಜಾರ್ಕಂಡ್ ವಿಧಾನ ಸಭೆಯ "ಶೂನ್ಯ ವೇಳೆ ಸಮಿತಿ"ಯ ಅಧ್ಯಕ್ಷರು ಹಾಗೂ ಸದಸ್ಯರುಗಳು ಕರ್ನಾಟಕ ವಿಧಾನ ಪರಿಷತ್ತಿನ ಸನ್ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ ಹೊರಟ್ಟಿರವರು ಹಾಗೂ ವಿಧಾನ ಸಭೆಯ ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿರವರನ್ನು ಭೇಟಿ ಮಾಡಿದ ಸಂದರ್ಭ;



ದಿನಾಂಕ 17/05/2022ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯಾಗಿ ಶ್ರೀ ರಘುನಾಥ್‌ರಾವ ಮಲಕಾಪೂರೆ ಯವರಉ ಅಧಿಕಾರ ಸ್ವೀಕರಿಸಿದರು ಈ ಸಂದರ್ಭದಲ್ಲಿ ವಿಧಾನ ಪರಿಷತ್ ಕಾರ್ಯದರ್ಶಿಯಾದ ಶ್ರೀಮತಿ ಕೆ.ಆರ್ ಮಹಾಲಕ್ಷ್ಮೀ ಮತ್ತು ಅಪರ ಕಾರ್ಯದರ್ಶಿಯಾದ ಶ್ರೀಮತಿ ನಿರ್ಮಲ ಎಸ್. ರವರು ಉಪಸ್ಥಿತರಿದ್ದರು.



**ದಿನಾಂಕ 17/05/2022ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯಾಗಿ ಶ್ರೀ ರಘುನಾಥ್‌ರಾವ ಮಲಕಾಪೂರೆ ಯವರು ಅಧಿಕಾರ ಸ್ವೀಕರಿಸಿದ ನಂತರ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್‌ಚಂದ ಗೆಹ್ಲೋಟ್ ರವರನ್ನು ಭೇಟಿ ಮಾಡಿ ಗೌರವಿಸಿದ ಸಂದರ್ಭ.**





ದಿನಾಂಕ 17/05/2022ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯಾಗಿ ಶ್ರೀ ರಘುನಾಥರಾವ ಮಲಕಾಪೂರೆ ಯವರು ಅಧಿಕಾರ ಸ್ವೀಕರಿಸಿದ ನಂತರ ಗೌರವಾನ್ವಿತ  ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ್ ಬೊಮ್ಮಾಯಿ ರವರನ್ನು ಭೇಟಿ ಮಾಡಿ ಗೌರವಿಸಿದ ಸಂದರ್ಭ.



ದಿನಾಂಕ 17/05/2022ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯಾದ ಶ್ರೀ ರಘುನಾಥ್‌ರಾವ ಮಲಕಾಪೂರೆ ಯವರಿಗೆ ಶ್ರೀ ಬಸವರಾಜ ಹೊರಟ್ಟಿಯವರು ಶುಭಾಶಯ ಕೋರಿದ ಸಂದರ್ಭ.



ದಿನಾಂಕ 17/05/2022ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯಾದ ಶ್ರೀ ರಘುನಾಥ್‌ರಾವ ಮಲಕಾಪೂರೆ ಯವರಿಗೆ ಶ್ರೀ ಬಸವರಾಜ ಹೊರಟ್ಟಿಯವರು ಸಭಾಪತಿ ಸ್ಥಾನಕ್ಕೆ ರಾಜೀನಾಮೆ ನೀಡಿದ  ಸಂದರ್ಭ.



ದಿನಾಂಕ 17/05/2022ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯಾದ ಶ್ರೀ ರಘುನಾಥ್‌ರಾವ್ ಮಲಕಾಪೂರೆ ಯವರಿಗೆ ಶ್ರೀ ಬಸವರಾಜ್ ಹೊರಟ್ಟಿಯವರು ಸಭಾಪತಿ ಸ್ಥಾನಕ್ಕೆ ರಾಜೀನಾಮೆ ನೀಡಿದ ಪತ್ರವನ್ನು ಪರಿಶೀಲಿಸುತ್ತಿರುವುದು.



ದಿನಾಂಕ 17/05/2022ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯಾದ ಶ್ರೀ ರಘುನಾಥ್‌ರಾವ ಮಲಕಾಪೂರೆ ಯವರಿಗೆ ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾದ ಶ್ರೀ ಶಿವಾನಂದ ತಗಡೂರು ರವರು ಶುಭಾಶಯ ಕೋರಿದ ಸಂದರ್ಭ.



**ದಿನಾಂಕ 17/05/2022ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯಾದ ಶ್ರೀ ರಘುನಾಥ್‌ರಾವ ಮಲಕಾಪೂರೆ ಯವರಿಗೆ ಸಭಾಪತಿ ಕಛೇರಿಯ ಸಿಬ್ಬಂದಿಗಳು ಶುಭಾಶಯ ಕೋರಿದ ಸಂದರ್ಭ.**



**ದಿನಾಂಕ 17/05/2022ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯಾಗಿ ಶ್ರೀ ರಘುನಾಥ್‌ರಾವ ಮಲಕಾಪೂರೆ ಯವರು ಅಧಿಕಾರ ಸ್ವೀಕರಿಸಿದ ನಂತರ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಾಂತರಾಮ ಬುಡ್ನ ಸಿದ್ದಿರವರು ಭೇಟಿ ಮಾಡಿ ಶುಭಾಶಯ ಕೋರಿದ ಸಂದರ್ಭ.**



ದಿನಾಂಕ 17/05/2022ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯಾಗಿ ಶ್ರೀ ರಘುನಾಥ್‌ರಾವ ಮಲಕಾಪೂರೆ ಯವರು ಅಧಿಕಾರ ಸ್ವೀಕರಿಸಿದ ನಂತರ ಡಾ|| ಶೈಲೇಂದ್ರ ಬೆಲ್ದಾಳೆ ಸಿದ್ದಿರವರು ಭೇಟಿ ಮಾಡಿ ಶುಭಾಶಯ ಕೋರಿದ ಸಂದರ್ಭ.



ದಿನಾಂಕ 18/05/2022ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯಾಗಿ ಶ್ರೀ ರಘುನಾಥ್‌ರಾವ ಮಲಕಾಪೂರೆ ಯವರು ಅಧಿಕಾರ ಸ್ವೀಕರಿಸಿದ ನಂತರ ಗೌರವಾನ್ವಿತ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಜಗದೀಶ್ ಶೆಟ್ಟರವರನ್ನು ಭೇಟಿ ಮಾಡಿದ ಸಂದರ್ಭ.





ದಿನಾಂಕ 18/05/2022ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯಾಗಿ ಶ್ರೀ ರಘುನಾಥ್‌ರಾವ ಮಲಕಾಪೂರೆ ಯವರು ಅಧಿಕಾರ ಸ್ವೀಕರಿಸಿದ ನಂತರ ಬಸವ ಕಲ್ಯಾಣ ಶಾಸಕರಾದ ಶ್ರೀ ಶರಣು ಸಲಗಾರ್ ಹಾಗೂ ಇತರ ಜಿಲ್ಲಾ ಮತ್ತು ತಾಲ್ಲೂಕು ಮುಖಂಡರುಗಳು ಶುಭ ಕೋರಿದರು.



ದಿನಾಂಕ 18/05/2022ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯಾಗಿ ಶ್ರೀ ರಘುನಾಥ್‌ರಾವ ಮಲಕಾಪೂರೆ ಯವರು ಅಧಿಕಾರ ಸ್ವೀಕರಿಸಿದ ನಂತರ ಮಾಜಿ ಮಹಾ ಪೌರರಾದ ಶ್ರೀ ವೆಂಕಟೇಶ್ ಮೂರ್ತಿ ಹಾಗೂ ಇತರರು ಶುಭ ಕೋರಿದರು.



**ದಿನಾಂಕ: 23/05/2022 ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯಾಗಿ ಶ್ರೀ ರಘುನಾಥರಾವ ಮಲಕಾಪೂರೆಯವರು ಅಧಿಕಾರ ಸ್ವೀಕರಿಸಿದ ನಂತರ ನಾಡದೇವತೆಯಾದ ಮೈಸೂರಿನ ಶ್ರೀ ಕ್ಷೇತ್ರ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಕುಟುಂಬ ಸಮೇತರಾಗಿ ಭೇಟಿ ನೀಡಿ ಆಶೀರ್ವಾದ ಪಡೆದ ಸಂದರ್ಭ.**






ಸನ್ಮಾನ್ಯ ಸಭಾಧ್ಯಕ್ಷರು ದಿನಾಂಕ: 23/05/2022ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ವೀರ ಭೂಮಿ ವಿಧುರಾಶ್ವತ್ಥದಲ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಶ್ರಯದಲ್ಲಿ, ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ನಡೆದ "ಅಮೃತ ಭಾರತಿಗೆ ಕನ್ನಡದಾರತಿ" ಕಾರ್ಯಕ್ರಮದಲ್ಲಿ ಭಾಗವಹಿಸಿ, ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ, ಪ್ರಾಣಾರ್ಪಣೆ ಮಾಡಿದ ಅನೇಕ ಅನಾಮಧೇಯ ವೀರರ ಸ್ಮರಣಾರ್ಥ "ಸ್ಮರಣ ಫಲಕ"ವನ್ನು ಪ್ರತಿಷ್ಠಾಪಿಸಿ, ಭಾರತ ಮಾತೆಗೆ ಪುಷ್ಪ ನಮನವನ್ನು ಸಲ್ಲಿಸಿ, ಶುಭ ಕೋರಿದರು. ಈ ಸಂದರ್ಭದಲ್ಲಿ ಸಚಿವರಾದ ಶ್ರೀ ಎನ್. ನಾಗರಾಜು(ಎಂ.ಟಿ.ಬಿ) ಹಾಗೂ ಇತರೆ ಗಣ್ಯರು ಉಪಸ್ಥಿತರಿದ್ದರು;







ದಿನಾಂಕ 23/05/2022ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯಾಗಿ ಶ್ರೀ ರಘುನಾಥ್‌ರಾವ ಮಲಕಾಪೂರೆ ಯವರು ಅಧಿಕಾರ ಸ್ವೀಕರಿಸಿದ ನಂತರ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರತಾಪಸಿಂಹ ನಾಯಕ್ ಭೇಟಿ ಮಾಡಿ ಶುಭಾಶಯ ಕೋರಿದ ಸಂದರ್ಭ.



**ದಿನಾಂಕ 23/05/2022ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯಾಗಿ ಶ್ರೀ ರಘುನಾಥ್‌ರಾವ ಮಲಕಾಪೂರೆ ಯವರು ಅಧಿಕಾರ ಸ್ವೀಕರಿಸಿದ ನಂತರ ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ ಭೀಮರಾವ್ ಬಿ ಪಾಟೀಲ್ ಮತ್ತು ಶ್ರೀ ಅರವಿಂದ ಕುಮಾರ್ ಅರಳಿ ರವರು ಶುಭಾಶಯ ಕೋರಿದ ಸಂದರ್ಭ.**



**ದಿನಾಂಕ 23/05/2022ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯಾಗಿ ಶ್ರೀ ರಘುನಾಥ್‌ರಾವ ಮಲಕಾಪೂರೆರವರು ಅಧಿಕಾರ ಸ್ವೀಕರಿಸಿದ ನಂತರ ಬೀದರ್ ನೌಕರ ಸಂಘದವರು ಶುಭಾಶಯ ಕೋರಿದ ಸಂದರ್ಭ.**



ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯಾಗಿ ಶ್ರೀ ರಘುನಾಥ್‌ರಾವ ಮಲಕಾಪೂರೆ ಯವರು ಅಧಿಕಾರ ಸ್ವೀಕರಿಸಿದ ನಂತರ ಭಾಜಪದ ರಾಷ್ಟ್ರೀಯ ಹಿಂದುಳಿದ ವರ್ಗಗಳ ಮೋರ್ಚದ ಎಕ್ಸಿಕ್ಯೂಟಿವ್ ಕಮಿಟಿ ಸದಸ್ಯರಾದ ಶ್ರೀ ಲಕ್ಷ್ಮಣ ತಪಸಿ ರವರು ಭೇಟಿ ಮಾಡಿ ಗೌರವಿಸಿದ ಸಂದರ್ಭ.




ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯಾಗಿ ಶ್ರೀ ರಘುನಾಥ್‌ರಾವ್ ಮಲಕಾಪೂರೆ ರವರು ಅಧಿಕಾರ ಸ್ವೀಕರಿಸಿದ ನಂತರ ಮಾಜಿ ಉಪಸಭಾಪತಿಯಾದ ಶ್ರೀ ಎಂ. ಕೆ ಪ್ರಾಣೇಶ್ ರವರು ಹಾಗೂ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಅಧ್ಯಕ್ಷರಾದ ಶ್ರೀ ರಾಜಕುಮಾರ್ ಪಾಟೀಲ್ ತೆಲಕೂರು ರವರು ಭೇಟಿ ಮಾಡಿ ಗೌರವಿಸಿದರು.





**ದಿನಾಂಕ: 31/05/2022 ರಂದು ವಿಧಾನಸೌಧದ ಬ್ಯಾಂಕ್ವೇಟ್ ಹಾಲ್‌ನಲ್ಲಿ ನಡೆದ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಕೇಂದ್ರ ಸರ್ಕಾರ ಪುರಸ್ಕೃತ ಯೋಜನೆಗಳ ಫಲಾನುಭವಿಗಳೊಂದಿಗೆ ಸಂವಾದ 2022ರ ಕಾರ್ಯಕ್ರಮದಲ್ಲಿ ಮಾನ್ಯ ಸಭಾಪತಿಯಾದ ಶ್ರೀ ರಘುನಾಥ್‌ರಾವ ಮಲಕಾಪೂರೆರವರು, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ್ ಬೊಮ್ಮಾಯಿಯವರು, ಮಾನ್ಯ ಗೃಹ ಸಚಿವರಾದ ಶ್ರೀ ಅರಗ ಜ್ಞಾನೇಂದ್ರರವರು ಹಾಗೂ ಮಾನ್ಯ ಸಚಿವರುಗಳು ಭಾಗವಹಿಸಿದ್ದರು.**





**ದಿನಾಂಕ: 09/06/2022 ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯಾಗಿ ಶ್ರೀ ರಘುನಾಥ್‌ರಾವ ಮಲಕಾಪೂರೆ ಯವರು ಅಧಿಕಾರ ಸ್ವೀಕರಿಸಿದ ನಂತರ ಕಾಗಿನೆಲೆ ಕನಕಗುರು ಪೀಠದ ಜಗದ್ಗುರುಗಳಾದ ಶ್ರೀ ಶ್ರೀ ಶ್ರೀ ನಿರಂಜನಾನಂದಪುರಿ ಮಹಾಸ್ವಾಮಿಗಳ ಆರ್ಶೀರ್ವಾದ ಪಡೆದ ಶುಭಸಂದರ್ಭ.**





ಫ್ರಾನ್ಸ್‌ನಲ್ಲಿ ನಡೆದ ವಿಶ್ವ ಮಕ್ಕಳ ಕ್ರೀಡಾಕೂಟದಲ್ಲಿ ಭಾಗವಹಿಸಿ, ಬ್ಯಾಡ್ಮಿಂಟನ್ ವಿಭಾಗದಲ್ಲಿ ಬಂಗಾರದ ಪದಕ ಗೆದ್ದ ಶಿರಸಿಯ ಕುಮಾರಿ ಪ್ರೇರಣಾ ನಂದಕುಮಾರ್ ಶೇಟ್‌ರವರಿಗೆ ದಿನಾಂಕ: 10/06/2022ರಂದು ವಿಧಾನಸೌಧದ ಸನ್ಮಾನ್ಯ ಸಭಾಧ್ಯಕ್ಷರ ಕಛೇರಿಯಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಸನ್ಮಾನಿಸಿ, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ 2 ಲಕ್ಷ ರೂಪಾಯಿಗಳ ಪ್ರೋತ್ಸಾಹ ಧನವನ್ನು ನೀಡಿ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀ ಸುನೀಲ್ ಕುಮಾರ್, ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ, ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿ, ಮುಖ್ಯಮಂತ್ರಿಗಳ ಸಂಸದೀಯ ಕಾರ್ಯದರ್ಶಿ ಶ್ರೀ ಜೀವರಾಜ್, ಕ್ರೀಡಾ ಇಲಾಖೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು;






**ದಿನಾಂಕ: 13/06/2022ರಂದು ಸನ್ಮಾನ್ಯ ಸಭಾಧ್ಯಕ್ಷರು ಅತ್ಯುತ್ತಮ ವಿಧಾನ ಪರಿಷತ್ತು/ವಿಧಾನಸಭೆ ಪ್ರಶಸ್ತಿಗೆ ಮಾನದಂಡವನ್ನು ಸೂಚಿಸಲು ರಚಿಸಲಾದ ಪೀಠಾಸೀನಾಧಿಕಾರಿಗಳ ಸಮಿತಿಯ ಅಧ್ಯಕ್ಷರಾಗಿ ಪ್ರಥಮ ಸಭೆಯಲ್ಲಿ ಭಾಗವಹಿಸಲು ನವದೆಹಲಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಲೋಕಸಭೆಯ ಮಹಾ ಕಾರ್ಯದರ್ಶಿಯವರಾದ ಶ್ರೀ ಉತ್ಪಲ್ ಕುಮಾರ್ ಸಿಂಗ್ ಅವರೊಂದಿಗೆ;**





**ದಿನಾಂಕ: 14/06/2022 ರಂದು ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು ನವದೆಹಲಿಯಲ್ಲಿ ಕೇಂದ್ರದ ವಾಣಿಜ್ಯೋದ್ಯಮ, ಕೌಶಲ್ಯಾಭಿವೃದ್ಧಿ, ಎಲೆಕ್ಟ್ರಾನಿಕ್ ಮತ್ತು ಮಾಹಿತಿ ತಂತ್ರಜ್ಞಾನ ಖಾತೆಯ ರಾಜ್ಯ ಸಚಿವರಾದ ಶ್ರೀ ರಾಜೀವ್ ಚಂದ್ರಶೇಖರ್‌ರವರನ್ನು ಭೇಟಿ ಮಾಡಿ ಚರ್ಚಿಸುತ್ತಿರುವ ಸಂದರ್ಭ;**





**ದಿನಾಂಕ: 14/06/2022 ರಂದು ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು ನವದೆಹಲಿಯಲ್ಲಿ ಸನ್ಮಾನ್ಯ ಲೋಕಸಭಾ ಅಧ್ಯಕ್ಷರಾದ ಶ್ರೀ ಓಂ ಬಿರ್ಲಾ ರವರನ್ನು ಸೌಹಾರ್ದಯುತವಾಗಿ ಬೇಟಿ ಮಾಡಿದ ಸಂದರ್ಭ;**



**ದಿನಾಂಕ: 15/06/2022ರಂದು ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಾದ ಶ್ರೀ ರಘುನಾಥ್‌ರಾವ ಮಲಕಾಪೂರೆರವರು ಸದಸ್ಯರಾದ ಶ್ರೀ ಅಲ್ಲಂವೀರಭದ್ರಪ್ಪ ಮತ್ತು ಶ್ರೀಮತಿ ವೀಣಾ ಅಚ್ಚಯ್ಯರವರು ನಿವೃತ್ತರಾದ ಸಂದರ್ಭದಲ್ಲಿ ಸ್ಮರಣಿಕೆಯನ್ನು ನೀಡಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಮಾನ್ಯ ಸರ್ಕಾರಿ ಮುಖ್ಯ ಸಚೇತಕರಾದ ಶ್ರೀ ಡಾ. ವೈ.ಎ.ನಾರಾಯಣಸ್ವಾಮಿರವರು ಹಾಗೂ ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಶ್ರೀ ಪ್ರಕಾಶ್ ಕೆ.ರಾಥೋಡ್ ರವರು ಮತ್ತು ವಿಧಾನ ಪರಿಷತ್ ಕಾರ್ಯದರ್ಶಿಯಾದ ಶ್ರೀಮತಿ ಕೆ.ಆರ್ ಮಹಾಲಕ್ಷ್ಮೀ ಮತ್ತು ಅಪರ ಕಾರ್ಯದರ್ಶಿಯಾದ ಶ್ರೀಮತಿ ನಿರ್ಮಲ ಎಸ್. ರವರು ಉಪಸ್ಥಿತರಿದ್ದರು.**



**ದಿನಾಂಕ: 28/06/2022ರಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯಾಗಿ ಶ್ರೀ ರಘುನಾಥರಾವ ಮಲಕಾಪೂರೆರವರು ವಿಧಾನಪರಿಷತ್‌ಗೆ ಮರು ಆಯ್ಕೆಯಾದ ಶ್ರೀ ಬಸವರಾಜ್ ಹೊರಟ್ಟಿಯವರನ್ನು ಅಭಿನಂದಿಸಿದ ಸಂದರ್ಭ.**





# ಭಾಗ – 2

# ಸಂಸತ್ ಸುದ್ದಿಗಳು

## 1. ರಾಜ್ಯಸಭೆ 72 ಸದಸ್ಯರು ನಿವೃತ್ತಿ

ರಾಜ್ಯ ಸಭೆಯಿಂದ ಎ.ಕೆ.ಆ್ಯಂಟನಿ, ಅಂಬಿಕಾ ಸೋನಿ, ಪಿ.ಚಿದಂಬರಂ, ಆನಂದ ಶರ್ಮಾ, ಜೈರಾಮ್ ರಮೇಶ್, ಸುರೇಶ್ ಪ್ರಭು, ಪ್ರಫುಲ್ಲ ಪಟೇಲ್, ಸುಬ್ರಮಣಿಯನ್ ಸ್ವಾಮಿ, ಸಂಜಯ್ ರಾವತ್, ಮರಿಕೋಂ, ಸ್ವಪನ್ ದಾಸ್ ಗುಪ್ತಾ ಸೇರಿ 72 ಸದಸ್ಯರು ನಿವೃತ್ತರಾಗಿದ್ದು, ಅವರಿಗೆ ವಿದಾಯ ಕೂಟ ಏರ್ಪಡಿಸಲಾಗಿತ್ತು. ಮುಂದಿನ ತಲೆಮಾರಿಗೆ ಪ್ರೇರಣದಾಯಿಗಳಾಗುವಂತೆ ಅವರಲ್ಲಿ ಪ್ರಧಾನಮಂತ್ರಿ ಮನವಿ ಮಾಡಿದರು.

ಆಧಾರ:ವಿಜಯವಾಣಿ, ದಿನಾಂಕ:02.04.2022

## 2. Criminal identification bill in LS today

A bill that significantly expands the scope of a 102 year-old law to allow police to take physical and biological samples of a convict or an arrested person will come up for passage in the Lok Sabha. Three senior Opposition MPs are set to two dozen amendments to tone down the controversial provisions.

The Criminal Procedure (Identification) Bill, 2022, which was introduced has been listed for discussion and passage in the Lower House. As the Lok Sabha is likely to pass the bill without sending it to a standing committee, Opposition Leaders in the Rajya Sabha told they would try to push it to a select committee for further scrutiny.

The bill has attracted wide spread criticism as it widens the scope of police in collecting measurements from convicts and arrested persons. While only fingerprints, footprint impressions and photographs were allowed earlier, the bill allows police to take palm-print impressions, iris and retina scan, physical, biological samples and their analysis and behavioural attributes including signatures and handwriting. It also allows police to collect such data from a wider category of people.

Three Opposition MPs, TMC's Saugata Roy, BJD's Bhartruhari Mahtab and RSP's NK Premachandran have submitted 24 amendments to the bill. Premachandran has submitted 14 while Roy and Mahtab have given five each. One of the objections is to the collection of biological samples of convicts and non-convicts. Without a privacy law in place and lack of clarity on how such data is secured. Premachandran and Roy want the provisions to be deleted.

The MPs also oppose a provision that allows a head constable or a head warder to collect measurements. Roy wants an officer not below the rank of a deputy superintendent of police or jail superintendent or deputy SP to do this job while Premachandran says it should be an inspector or a jail superintendent.

The bill allows law enforcement agencies to collect measurements of a convict or an accused. Premachandran wants this to be restricted to heinous offences.

**OLD VS NEW**

- 102-year-old law allows taking finger print, foot print impressions of a limited category of convicted persons.

- Bill seeks to expand the scope and ambit of the "measurements" that can be taken under the law as it will help in unique identification of a person involved in crime and help investigating agencies in solving criminal cases.
- The bill defines "measurements" to include finger impressions palm print and foot-print impressions, photographs iris, retina scan, physical, biological samples and their analysis.

Courtesy: Deccan Herald, Dated: 04.04.2022

## 3. Release MPLAD funds for 2023-24 in advance: Parl panel

With Covid-19 pandemic leading to suspension of release of funds under MPLADS and impacting projects, the Parliamentary Committee on Estimates has asked the government to release Rs.5 crores meant for 2023-24 in this fiscal itself so as to complete unfinished projects.

The panel headed by Girish Bhalchandra Bapat said in its report tabled in Parliament that MPs have not been able to recommend any new project under MPLADS in 2020-21 and 2021-22 as the scheme was suspended owing to Covid-19.

Though the Member of Parliament Local Area Development (MPLAD) scheme was suspended for two years (2020-21 and 2021-22) it was restored for the remaining part of 2021-22 with the release of Rs.2 crores for each MP in one instalment.

"The Committee strongly desire that as the Covid-19 situation eased, for the present MPs the MPLADS fund for 5$^{th}$ year (of the government 2022-24) may be released during the 4$^{th}$ year, in advance, in order to enable the MPs to recommend/sanction," the report said.

Recommending the release of pending instalments of MPLADS funds for 2019-20, the panel said the suspension of the scheme was only for two fiscals but it found out that instalments for 2019-20 were also not released for most of the MPs.

The committee said there were certain sanctioned projects which have been completed or are at the stage of completion but due to non-release of previous instalments projects are "unfortunately" being "abandoned mid-way".

"To overcome this the Committee now calls upon the government to make appropriate arrangements to release pending instalments of previous years in order to clear the committed liabilities under MPLADS scheme and to help people derive benefits from erstwhile dead/abandoned projects under MPLADS" it said.

According to the report 102, instalments to be released of MPs of the 17$^{th}$ Lok Sabha in 2019-20 are pending. This includes four Karnataka MPs-GS. Basavaraj, Tejasvi Surya, Ramesh Jigajinagi and Umesh Jadhav- whose second instalment under MPLADS were pending. For the 16$^{th}$ Lok Sabha according to the report 470 instalments covering Rs.1,175 crore are pending.

Courtesy:-Deccan Herald, Dated: 05.04.2022

## 4. ಅಲ್ಪಸಂಖ್ಯಾತರ ವಿರುದ್ಧ ದ್ವೇಷ ಭಾಷಣ ರಾಜ್ಯಸಭೆಯಲ್ಲಿ ಕಾಂಗ್ರೆಸ್ ಪ್ರಸ್ತಾಪ

ದೇಶದಲ್ಲಿ ಅಲ್ಪಸಂಖ್ಯಾತರ ವಿರುದ್ಧ ದ್ವೇಷಪೂರಿತ ಭಾಷಣಗಳನ್ನು ಮಾಡುವುದು ಹೆಚ್ಚುತ್ತಿದೆ ಎಂದು ರಾಜ್ಯಸಭೆಯಲ್ಲಿ ಕಾಂಗ್ರೆಸ್ ಸದಸ್ಯರು ಹೇಳಿದರು.

ಶಸ್ತ್ರಾಸ್ತ್ರಗಳನ್ನು ಕೈಗೆತ್ತಿಕೊಳ್ಳುವಂತೆ ವಿವಾದಾತ್ಮಕ ಸಂತ ಯತಿ ನರಸಿಂಗಾನಂದ ಅವರು ಹಿಂದೂಗಳಿಗೆ ಕರೆ ನೀಡುತ್ತಿರುವುದು ಕಳವಳಕಾರಿ ಎಂದು ಕಾಂಗ್ರೆಸ್ ಸದಸ್ಯರು ಹೇಳಿದರು.

ಆದರೆ, ನಿಯಮ 267ರಡಿ ಈ ವಿಷಯವನ್ನು ಪ್ರಸ್ತಾಪಿಸಲು ಸಭಾಪತಿ ಅವರು ವಿರೋಧ ಪಕ್ಷಗಳ ಸದಸ್ಯರಿಗೆ ಅವಕಾಶ ನಿರಾಕರಿಸಿದರು. ನಿರ್ದಿಷ್ಟ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರ ಹತ್ಯೆಗೆ ಯತಿ ನರಸಿಂಗಾನಂದ ಕರೆ ನೀಡಿದ್ದಾರೆ ಎನ್ನಲಾದ ಭಾಷಣದ ಬಗ್ಗೆ ವಿರೋಧ ಪಕ್ಷಗಳು ಪ್ರಸ್ತಾಪಿಸಿದ್ದು, ಆ ಅಂಶಗಳನ್ನು ಕಡತದಿಂದ ತೆಗೆದು ಹಾಕುವಂತೆಯೂ ಅವರು ಆದೇಶಿಸಿದರು.

ನಿಗದಿತ ಕಲಾಪದ ಬದಲಾಗಿ, ನಿಯಮ 267ರಡಿ ಈ ವಿಷಯ ಕುರಿತು ಪ್ರಸ್ತಾಪಿಸಲು ಅವಕಾಶ ನೀಡಬೇಕು ಎಂದು ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಅಲ್ಪಸಂಖ್ಯಾತರ ವಿರುದ್ಧದ ದ್ವೇಷ ಭಾಷಣ, ಕೆಲ ಆನ್‌ಲೈನ್ ಮಾಧ್ಯಮಗಳು ಪತ್ರಕರ್ತರಿಗೆ ಕಿರುಕುಳ ನೀಡಲಾಗುತ್ತಿದೆ ಎಂಬ ಆರೋಪಗಳ ಬಗ್ಗೆ ಸದನದಲ್ಲಿ ಪ್ರಸ್ತಾಪಿಸಲು ಅವಕಾಶ ನೀಡುವಂತೆಯೂ ಅವರು ನೋಟೀಸ್ ನೀಡಿದ್ದರು.

ಈ ಮನವಿಯನ್ನು ತಿರಸ್ಕರಿಸಿದ ಸಭಾಪತಿ ಅವರು 'ಯಾವುದೇ ಸಮುದಾಯದ ಹೆಸರು ಸಹ ಕಡತಕ್ಕೆ ಹೋಗುವುದಿಲ್ಲ. ವ್ಯಕ್ತಿಯೊಬ್ಬ ಅರ್ಥಹೀನ ಪದ ಬಳಸಿ ಮಾತನಾಡಿದ್ದರೆ, ಅದನ್ನು ಇಲ್ಲಿ ಹೇಳಬಾರದು. ಅದನ್ನೇ ಸದನದಲ್ಲಿ ಮತ್ತೆ ಪ್ರಸ್ತಾಪಿಸಿ ಚರ್ಚಿಸುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಹೀಗಾಗಿ ಇದಕ್ಕೆ ಅವಕಾಶ ನೀಡಿಲ್ಲ' ಎಂದರು.

ಖರ್ಗೆ ಅವರಲ್ಲದೇ, ಟಿಎಂಸಿಯ ಸುಷ್ಮಿತಾ ದೇವ್, ಲಿಜಿನ್ಹೊ ಫೆಲಿರೊ ಹಾಗೂ ಮೊಹ್ಮದ್ ನದಿಮುಲ್ ಹಕ್ ಅವರು ಸಹ ಈ ಕುರಿತು ಮಾತನಾಡಲು ಅವಕಾಶ ಕೋರಿ ನೋಟಿಸ್ ನೀಡಿದ್ದರು.

ಆಧಾರ:ಪ್ರಜಾವಾಣಿ, ದಿನಾಂಕ:07.04.2022

## 5. Budget session ends on productive note

The Budget session of Parliament concluded on a day ahead of schedule with both the Lok Sabha and the Rajya Sabha registering impressive productivity numbers and fewer disruptions.

The Rajya Sabha proceedings had to be adjourned sine die without the customary valedictory remarks by Chairman M.Venkaiah Naidu as Opposition members, led by the Shiv Sena, topped into the well of the House.

This was the second last session for Mr.Naidu to chair the proceedings of the House before his term ends in August.

Post sine die adjournment, Lok Sabha Speaker Om Birla organised a customary tea meet for the floor leaders. It was attended by Prime Minister, Defence Minister, Senior Opposition Leaders Mulayam Singh (Samajwadi Party), Farooq Abdullah (National Conference) and T.R.Baalu (DMK) and others. Though Congress president. Sonia Gandhi called on Mr.Birla while the Prime Minister was there, she did not stay back for the meet.

In one of the most productive sessions, the Lok Sabha passed 13 Bills, including the Finance Bill, Criminal Procedure (Identification) Bill, Delhi Municipal Corporation (Amendment) Bill and the Weapons of Mass Destruction and their Delivery Systems (Prohibition of Unlawful Activities) Amendment Bill. The Rajya Sabha passed 11 Bills, including six Appropriation Bills and Finance Bills that were returned.

"The total productivity of the eighth session of the 17th Lok Sabha was 129%", Mr. Birla said. He noted that the House had 27 sittings.

The Rajya Sabha too recorded impressive functioning, clocking 99.08% productivity, just 10 more minutes short of the allotted time to make up for 100%. Though the House had lost nearly nine-and-a-half hours due to disruptions, it made up for the lost time by sitting extra hours.

On the last day of the Budget session, the Rajya Sabha proceedings were disrupted after the Shiv Sena and other Opposition parties created a ruckus over price rise and the alleged misappropriation of funds collected to save INS Vikrant.

Soon after the laying of official papers, Sena MPs, including Sanjay Raut and Priyanka Chaturvedi, were up on their feet, trying to raise the issue of an FIR registered against the BJP's Krit Somaiya of allegedly siphoning donations collected for saving INS Vikrant, the now decommissioned aircraft carrier.

They continued with their demands even when the Chair, Mr.Naidu called on MPs to raise Zero Hour mentions. Mr.Naidu said the behaviour was against "the democratic spirit norms dignity and decorum of the House".

Courtesy:The Hindu, Dated: 08.04.2022

## 6. ಫಲಪ್ರದ ಅಧಿವೇಶನ ಅವಧಿಪೂರ್ವ ಅಂತ್ಯ

ಪ್ರಸಕ್ತ ಸಾಲಿನ ಸಂಸತ್ತಿನ ಬಜೆಟ್ ಅಧಿವೇಶನವು ನಿಗದಿತ ಸಮಯಕ್ಕಿಂತ ಒಂದು ದಿನ ಮೊದಲು ಮುಕ್ತಾಯವಾಗಿದೆ. ರಾಜ್ಯಸಭೆಯು ಶೇ.99.80 ರಷ್ಟು ಮತ್ತು ಲೋಕಸಭೆಯು ಶೇ.129 ರಷ್ಟು ಫಲಪ್ರದವಾಗಿದೆ ಎಂದು ಸಂಸದೀಯ ಖಾತೆ ಸಚಿವರಾದ ಪ್ರಹ್ಲಾದ್ ಜೋಷಿ ತಿಳಿಸಿದ್ದಾರೆ. ತೈಲ ದರ ಏರಿಕೆ, ವಿಪಕ್ಷ ನಾಯಕರ ಮೇಲೆ ಕೇಂದ್ರೀಯ ತನಿಖಾ ಸಂಸ್ಥೆಗಳ ದಾಳಿ ವಿರುದ್ಧ ವಿರೋಧ ಪಕ್ಷಗಳು ವಾಗ್ದಾಳಿ ಆರಂಭಿಸಿದ ಹಿನ್ನೆಲೆಯಲ್ಲಿ ಒಂದು ದಿನ ಮೊದಲೇ ಅಧಿವೇಶನವನ್ನು ಮೊಟಕುಗೊಳಿಸಲಾಯಿತು.

ರಾಜ್ಯಸಭೆಯು ಶೇ.99.8ರಷ್ಟು ಉತ್ಪಾದಕತೆ ಸಾಧಿಸುವ ಮೂಲಕ 2017ರ ಮಾನ್ಸೂನ್ ಅಧಿವೇಶನದಿಂದ ನಡೆದ ಕಳೆದ 14 ಅಧಿವೇಶನಗಳಲ್ಲಿ ಅತಿ ಹೆಚ್ಚು ಉತ್ಪಾದಕತೆಯನ್ನು ಸಾಧಿಸಿದ ಮೂರನೇ ಅತ್ಯುತ್ತಮ ಅಧಿವೇಶನ ಎಂಬ ಕೀರ್ತಿಗೆ ಪಾತ್ರವಾಗಿದೆ. 2019 ಮತ್ತು 2020ರ ಮಾನ್ಸೂನ್ ಅಧಿವೇಶನದಲ್ಲಿ ಶೇ.100ರಷ್ಟು ಉತ್ಪಾದಕತೆ ದಾಖಲಾಗಿತ್ತು ಎಂದು ತಿಳಿಸಿದ್ದಾರೆ. ಇದೇ ವೇಳೆ, ಪ್ರಸಕ್ತ ಸಾಲಿನ ಅಧಿವೇಶನದಲ್ಲಿ ನಿಗದಿಯಾಗಿದ್ದ 29 ಕಲಾಪಗಳ ಪೈಕಿ 27 ಕಲಾಪಗಳು ನಡೆದಿವೆ. ಈ ಪೈಕಿ ಮೊದಲ ಭಾಗದಲ್ಲಿ 10, ಎರಡನೇ ಭಾಗದಲ್ಲಿ 17 ಕಲಾಪಗಳು ನಡೆದು ಅಧಿವೇಶನ ಅಂತ್ಯಗೊಂಡಿದೆ. ಹೋಳಿ ಮತ್ತು ರಾಮನವಮಿ ಹಿನ್ನೆಲೆಯಲ್ಲಿ ಎರಡು ಕಲಾಪಗಳನ್ನು ಕೈಬಿಡಲಾಗಿತ್ತು. ಇನ್ನು ನಿಗದಿಯಾಗಿದ್ದ 127 ಗಂಟೆ 54 ನಿಮಿಷದ ಪೈಕಿ 127 ಗಂಟೆ 44 ನಿಮಿಷಗಳ ಕಾಲ ರಾಜ್ಯಸಭೆ

ಅಧಿವೇಶನ ನಡೆದಿದೆ. ಅಧಿವೇಶನದಲ್ಲಿ ರಾಜ್ಯಸಭೆಯು 11 ಮಸೂದೆಗಳನ್ನು ಅಂಗೀಕರಿಸಿದೆ ಎಂದು ಹೇಳಿದ್ದಾರೆ.

ಇನ್ನು ಲೋಕಸಭೆಯು ಶೇ.129 ರಷ್ಟು ಫಲಪ್ರದವಾಗಿದ್ದು, ಹಣಕಾಸು ಮಸೂದೆ, ದೆಹಲಿ ಮುನ್ಸಿಪಲ್ ಕಾರ್ಪೋರೇಷನ್ ತಿದ್ದುಪಡಿ ಮಸೂದೆ ಸೇರಿ ಒಟ್ಟು 12 ಮಸೂದೆಗಳನ್ನು ಅಂಗೀಕರಿಸಲಾಗಿದೆ.

ಆಧಾರ:ಕನ್ನಡ ಪ್ರಭ, ದಿನಾಂಕ:08.04.2022

## 7. ಸಂಸತ್ತಿನಲ್ಲಿ 13 ಮಸೂದೆ ಅಸ್ತು

ಸಂಸತ್ತಿನ ಬಜೆಟ್ ಅಧಿವೇಶನ ಅನಿರ್ದಿಷ್ಟಾವಧಿಗೆ ಮುಂದಕ್ಕೆ ಹೋಗಿದೆ. ಪ್ರತಿಪಕ್ಷಗಳ ಮನವಿ ಮೇರೆಗೆ ಲೋಕಸಭೆ ಮತ್ತು ರಾಜ್ಯ ಸಭೆಯ ಕಲಾಪ ಮುಂದೂಡಲಾಗಿದೆ ಎಂದು ಕೇಂದ್ರ ಸರ್ಕಾರ ಸ್ಪಷ್ಟ ಪಡಿಸಿದೆ.

ಜನವರಿ 31 ರಂದು ಆರಂಭಗೊಂಡ ಮುಂಗಡಪತ್ರದ ಅಧಿವೇಶನ ಫಲಪ್ರದವಾಗಿದ್ದು. ಲೋಕಸಭೆಯಲ್ಲಿ ಶೇ.129 ರಷ್ಟು ಮತ್ತು ರಾಜ್ಯ ಸಭೆಯಲ್ಲಿ ಶೇ.98 ರಷ್ಟು ಕಲಾಪ ಯಶಸ್ವಿಯಾಗಿದೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ ಜೋಷಿ ಕಲಾಪ ಮುಂದೂಡಿಕೆ ನಂತರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಉಭಯ ಸದನಗಳು ಅಧಿವೇಶನದ ವೇಳೆ ತಲಾ 27 ಬಾರಿ ಸಮಾವೇಶಗೊಂಡಿದ್ದವು. ಫೆಬ್ರವರಿ 01 ರಂದು ಕೇಂದ್ರ ಮುಂಗಡಪತ್ರ ಮಂಡನೆಯಾಗಿತ್ತು ಎಂದು ಸಚಿವರು ವಿವರಿಸಿದರು.

**ಮೋದಿ ಸರ್ಕಾರದ ವಿರುದ್ಧ ಕಾಂಗ್ರೆಸ್ ಟೀಕೆ:** ಸಂಸತ್ತಿನ ಬಜೆಟ್ ಅಧಿವೇಶನ ಫಲಪ್ರದ ಎಂದು ಸರ್ಕಾರ ಹೇಳಿಕೊಂಡಿದ್ದರೂ ಹಣದುಬ್ಬರ ಮತ್ತು ನಿರುದ್ಯೋಗ ಸಮಸ್ಯೆಯಂತಹ ನೈಜ ವಿಷಯಗಳ ಬಗ್ಗೆ ಚರ್ಚೆಯಿಂದ ಮೋದಿ ಆಡಳಿತ ದೂರ ಹೋಯಿತು ಎಂದು ಪ್ರತಿಪಕ್ಷ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ಜೈರಾಂ ರಮೇಶ ಮತ್ತು ಅಧಿರ್ ರಂಜನ್ ಚೌಧರಿ ಆರೋಪಿಸಿದ್ದಾರೆ. ಕಲಾಪ ಅನಿರ್ದಿಷ್ಟಾವಧಿಗೆ ಮುಂದಕ್ಕೆ ಹೋದ ನಂತರ ಸುದ್ದಿಗೋಷ್ಠಿ ನಡೆಸಿದ ಕಾಂಗ್ರೆಸ್ ನಾಯಕರು, ದೇಶ ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳ ಬಗ್ಗೆ ಕೇಂದ್ರಕ್ಕೆ ಕಾಳಜಿ ಇಲ್ಲದ ಪರಿಣಾಮ ಜನರಿಗೆ ನಿರಾಸೆಯುಂಟಾಗಿದೆ ಎಂದು ಖರ್ಗೆ ತರಾಟೆಗೆ ತೆಗದುಕೊಂಡರು.

**ಬಜೆಟ್ ಕಲಾಪದ ವಿವರ:**

- ಜನವರಿ 31 ರಿಂದ ಏಪ್ರೀಲ್ 8 ರವರೆಗೆ ಕಲಾಪ
- ಲೋಕಸಭೆಯಲ್ಲಿ ಶೇ.129, ರಾಜ್ಯ ಸಭೆಯಲ್ಲಿ ಶೇ.98 ರಷ್ಟು ಕಲಾಪ ಫಲಪ್ರದ
- ಲೋಕಸಭೆಯಲ್ಲಿ 15 ಗಂಟೆ 35 ನಿಮಿಷಗಳ ಕಲಾಪ
- ರಾಜ್ಯ ಸಭೆಯಲ್ಲಿ 11 ಗಂಟೆಗಳ ಕಲಾಪ ಸಂಪನ್ನ
- ಉಭಯ ಸದನಗಳಲ್ಲಿ ನಿಗದಿತ ಸಮಯಕ್ಕಿಂತಲೂ ಹೆಚ್ಚಿನ ಅವಧಿ ಕಲಾಪ

ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ:08.04.2022.

## 8. ಒಂದು ದಿನ ಮುನ್ನವೇ ಬಜೆಟ್ ಅಧಿವೇಶನ ಮುಕ್ತಾಯ

ರಾಜ್ಯಸಭೆ ಮತ್ತು ಲೋಕಸಭೆ ಎರಡರಲ್ಲೂ ಸದಸ್ಯರ ಉತ್ಸಾಹಭರಿತ ಚರ್ಚೆಗಳಿಗೆ ಸಾಕ್ಷಿಯಾಗಿದ್ದ ಎರಡನೇ ಹಂತದ ಬಜೆಟ್ ಅಧಿವೇಶನ ಮುಕ್ತಾಯಗೊಂಡಿದೆ. ನಿಗದಿತಗಿಂತ ಒಂದು ದಿನಕ್ಕೆ ಮುಂಚಿತವಾಗಿ ಅಧಿವೇಶನ ಕೊನೆಗೊಂಡಿದೆ.

ಜನವರಿ 31ರಂದು ರಾಷ್ಟ್ರಪತಿ ರಾಮನಾಥ ಕೋವಿಂದ ಅವರು ಉಭಯ ಸದನಗಳನ್ನು ಉದ್ದೇಶಿಸಿ ಭಾಷಣ ಮಾಡುವುದರೊಂದಿಗೆ ಮೊದಲ ಹಂತದ ಬಜೆಟ್ ಅಧಿವೇಶನ ಆರಂಭಗೊಂಡಿತ್ತು. ಫೆಬ್ರವರಿ 1 ರಂದು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಕೇಂದ್ರ ಬಜೆಟ್ ಮಂಡಿಸಿದ್ದರು. ಮೊದಲ ಹಂತ ಫೆಬ್ರವರಿ 11 ರಂದು ಮುಕ್ತಾಯಗೊಂಡು, ಎರಡನೇ ಹಂತ ಮಾರ್ಚ್ 14 ರಂದು ಆರಂಭಗೊಂಡಿತ್ತು. ಲೋಕಸಭೆಯಲ್ಲಿ ಹಣಕಾಸು ಬಜೆಟ್ ವಿಧೇಯಕ, ದೆಹಲಿ ಮುನ್ಸಿಪಲ್ ಕಾರ್ಪೋರೇಷನ್ (ತಿದ್ದುಪಡಿ) ಮಸೂದೆ ಮತ್ತು ಅಪರಾಧ ಪ್ರಕ್ರಿಯೆ (ಗುರುತಿಸುವಿಕೆ) ಮಸೂದೆ, ಸಾಮೂಹಿಕ ವಿನಾಶಕಾರಿ ಶಸ್ತ್ರಾಸ್ತ್ರಗಳು ಮತ್ತು ಅವುಗಳು ವಿತರಣಾ ವ್ಯವಸ್ಥೆಗಳ (ಕಾನೂನು ಬಾಹಿರ ಚಟುವಟಿಕೆಗಳ ನಿಷೇಧ) ತಿದ್ದುಪಡಿ ವಿಧೇಯಕ ಸೇರಿ 12 ಪ್ರಮುಖ ವಿಧೇಯಕಗಳಿಗೆ ಲೋಕಸಭೆ ಅನುಮೋದನೆ ನೀಡಿದೆ. ರಾಜ್ಯಸಭೆ ಒಟ್ಟು 11 ವಿವಿಧ ವಿಧೇಯಕಗಳಿಗೆ ತನ್ನ ಸಮ್ಮತಿ ನೀಡಿದೆ.

**ಕಾಂಗ್ರೆಸ್ ಆಕ್ಷೇಪ:** ಅಧಿವೇಶನವನ್ನು ನಿಗದಿತ ಅವಧಿಗೆ ಮುನ್ನವೇ ಮುಕ್ತಾಯಗೊಳಿಸಿರುವುದರ ಬಗ್ಗೆ ಅಸಮಾಧಾನ ಹೊರಹಾಕಿರುವ ಕಾಂಗ್ರೆಸ್, ಹಣದುಬ್ಬರದಂತಹ ಜ್ವಲಂತ ವಿಷಯಗಳ ಚರ್ಚೆಯಿಂದ ಕೇಂದ್ರ ಸರ್ಕಾರ ಓಡಿಹೋಗುತ್ತಿದೆ ಎಂದು ಆರೋಪಿಸಿದೆ. ಲೋಕಸಭೆಯ ವ್ಯವಹಾರ ಸಲಹಾ ಸಮಿತಿ (ಬಿಎಸಿ) ಸಭೆಯಲ್ಲಿ ಬೆಲೆ ಏರಿಕೆ ಕುರಿತ ಚರ್ಚೆಗೆ ಮತ್ತು ರಾಜ್ಯಸಭೆಯ ಬಿಎಸಿ ಸಭೆಯಲ್ಲಿ ಪ್ರಮುಖ ವಿಧೇಯಕಗಳ ಚರ್ಚೆಗೆ ಸರ್ಕಾರ ಸಮಯ ನಿಗದಿಪಡಿಸಿತ್ತು. ಆದರೆ, ಅದಕ್ಕೆ ಅವಕಾಶ ನೀಡದೆ ಸರ್ಕಾರ ವಿಶ್ವಾಸಘಾತಕ ಕೃತ್ಯ ಎಸಗಿದೆ ಎಂದು ಲೋಕಸಭೆ ವಿಪಕ್ಷ ನಾಯಕ ಅಧಿರ್ ರಂಜನ್ ಚೌಧುರಿ ಆಕ್ರೋಶ ಹೊರಹಾಕಿದ್ದಾರೆ. ರಾಜ್ಯ ಸಭೆಯಲ್ಲಿ ಸರ್ಕಾರದ ಸಭಾ ನಾಯಕ ನಾಪತ್ತೆಯಾಗಿದ್ದಾರೆ ಎಂದು ಕಿಡಿಕಾರಿದ ಕಾಂಗ್ರೆಸ್ ಮುಖ್ಯ ಸಚೇತಕ ಜೈರಾಮ ರಮೇಶ್, ಹಿಂದೆ ಅರುಣ್ ಜೇಟ್ಲಿ ಮತ್ತು ಥಾವರ್ ಚಂದ್ ಗೆಹ್ಲೋಟ್ ಸದಾ ಹಾಜರಿರುತ್ತಿದ್ದರು ಮತ್ತು ಸಭಾನಾಯಕನ ಜವಾಬ್ದಾರಿ ಕೂಡ ಹೌದು. ಆದರೆ ಗೋಯಲ್ ಅವರು ಇದನ್ನು ಮರೆತಂತಿದೆ ಎಂದು ಟೀಕಿಸಿದ್ದಾರೆ.

**ಉತ್ಪಾದಕತೆ ಹೆಚ್ಚಳ:** 17ನೇ ಲೋಕಸಭೆಯ ಎಂಟನೇ ಅಧಿವೇಶನದ ಒಟ್ಟು ಉತ್ಪಾದಕತೆ ಶೇಕಡ 129. ಒಟ್ಟು 27 ಕಲಾಪಗಳಿಗೆ ಅಧಿವೇಶನ ಸಾಕ್ಷಿಯಾಯಿತು ಎಂದು ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಹೇಳಿದ್ದಾರೆ. ವಿಪಕ್ಷಗಳ ಗದ್ದಲ, ಅಡೆತಡೆಗಳಿಂದಾಗಿ ರಾಜ್ಯಸಭೆಯ 9.30 ನಿಮಿಷ ವ್ಯರ್ಥವಾಗಿತ್ತು. ಆದರೆ ಹೆಚ್ಚುವರಿಯಾಗಿ 9 ಗಂಟೆ 16 ನಿಮಿಷ ಕಲಾಪ ನಡೆಸಿದವು. ಸದನ ಇನ್ನೂ 10 ನಿಮಿಷ ಹೆಚ್ಚು ನಡೆದಿದ್ದರೆ ಉತ್ಪಾದಕತೆ ಶೇ.100 ಆಗುತ್ತಿತ್ತು ಎಂದು ರಾಜ್ಯ ಸಭೆ ಸಭಾಪತಿ ಎಂ.ವೆಂಕಯ್ಯ ನಾಯ್ಡು ಮಾಹಿತಿ ಹಂಚಿಕೊಂಡಿದ್ದಾರೆ. ಕಳೆದ ವರ್ಷದ ಬಜೆಟ್ ಅಧಿವೇಶನದ 94 ಪ್ರತಿಶತಕ್ಕೆ ಹೋಲಿಸಿದರೆ ಈ ಬಾರಿ ರಾಜ್ಯ ಸಭೆಯ ಕೆಲ ಸದಸ್ಯರು ಸದನದ ಬಾವಿಯತ್ತ ತೆರಳಿ ಘೋಷಣೆ ಕೂಗುತ್ತಿದ್ದುದರಿಂದ ಸಭಾಪತಿ ವೆಂಕಯ್ಯ ನಾಯ್ಡು ಅವರು ಸಮಾರೋಪ ಭಾಷಣ ಮಾಡಲಿಲ್ಲ. ಈ ಬಾರಿ ಲೋಕಸಭೆಯಲ್ಲಿ ಹವಾಮಾನ ಬದಲಾವಣೆ, ಯುದ್ಧಪೀಡಿತ ಉಕ್ರೇನ್ ಪರಿಸ್ಥಿತಿ ಮತ್ತು ಭಾರತದಲ್ಲಿ ಕ್ರೀಡೆಗಳನ್ನು ಉತ್ತೇಜಿಸುವ ಅಗತ್ಯತೆಯ ಕುರಿತಂತೆ ಅಲ್ಪಾವಧಿಯ ಚರ್ಚೆಗಳೂ ಗಮನಸೆಳೆದವು.

ಆಧಾರ:ವಿಜಯವಾಣಿ, ದಿನಾಂಕ:08.04.2022.

## 9. Enact laws only after through debate and discussion: Birla

The primary responsibility of the legislature if to fulfil the aspirations of the people, and lawmakers should ensure that laws are enacted only after through debate and discussion, Lok Sabha Speaker Om Birla said.

Mr.Birla made these remarks while inaugurating the 8th India region conference of the Commonwealth Parliamentary Association (CPA) at Assam Legislative Assembly.

Assam Chief Minister Himanta Biswa Sarma, Deputy Chairperson of the Rajya Sabha Harivansh, acting Chairperson of the CPA Ian Liddell-Grainger and Speakers

of various Legislative Assemblies attended the event. "Laws should be made after through debate and discussions incorporating the needs of the aspiration sections of society", Mr.Birla Said.

He said India was an effective, accountable and a living example of a functioning democracy and the world looked towards the largest democracy to set an example and provide direction.

Recalling the contribution of B.R.Ambedkar and Mahatma Jyotirao Phule the Lok Sabha Speaker said the country's policies and programmes should be in the direction of achieving the goals set by the founding fathers of the Constitution.

Calling for active participation of the youth and women in democratic processes, Mr. Birla said that democratic institutions from Panchayat to Parliament, should keep the youth and women at the centre of policy making. This would ensure ideas and visions of the youth are used to make administration transparent and accountable.

The Lok Sabha Speaker noted that the vision of Prime Minister on education, health, infrastructure and other areas were steps in that direction. Echoing similar sentiments, Assam Chief Minister said democracy and democratic values were "integral parts of the Indian way of life".

Courtesy: The Hindu, Dated: 12.04.2022

## 10.ಹೊಸ ಪಾರ್ಲಿಮೆಂಟಲ್ಲಿ ಅಕ್ಕ ವರ್ಣಚಿತ್ರ

ಸೆಂಟ್ರಲ್ ವಿಸ್ತಾ ಯೋಜನೆಯಡಿ ದೆಹಲಿಯಲ್ಲಿ ತಲೆಎತ್ತಲಿರುವ ದೇಶದ ನೂತನ ಸಂಸತ್ ಭವನದ ಗೋಡೆಯನ್ನು ಕನ್ನಡದ ಮೊದಲ ಕವಯಿತ್ರಿ, ಶಿವಶರಣೆ ಅಕ್ಕ ಮಹಾದೇವಿಯ ವರ್ಣಚಿತ್ರವು ಅಲಂಕರಿಸಲಿದೆ.

ಅಕ್ಕಮಹಾದೇವಿಯವರು ಮಾತ್ರವಲ್ಲದೇ ಭಾರತದ ಇತಿಹಾಸ ಹಾಗೂ ಪುರಾಣಗಳಲ್ಲಿ ಸ್ಥಾನ ಪಡೆದಿರುವಂಥ ದ್ರೌಪದಿ, ಸೀತೆ, ರಜಿಯಾ ಸುಲ್ತಾನ, ಅಹಲ್ಯಾ ಹೋಳ್ಕರ್ ಮತ್ತು ಇತರೆ ಮಹಿಳಾ ಮಣಿಗಳ ವರ್ಣಚಿತ್ರಗಳನ್ನು ಸಂಸತ್ತ ಭವನದ ಗೋಡೆಗಳಲ್ಲಿ ಅಳವಡಿಸಲು ಸರ್ಕಾರ ಚಿಂತನೆ ನಡೆಸಿದೆ.

**75 ಮಹಿಳೆಯರಿಗೆ ಗೌರವ:** ದೇಶವು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಆಚರಿಸುತ್ತಿರುವ ಹಿನ್ನೆಲೆಯಲ್ಲಿ ವೇದಕಾಲದಿಂದ 1947 ರವರೆಗಿನ 75 ಮಹಿಳೆಯರ ಚಿತ್ರಗಳನ್ನು ಸಂಸತ್ ಭವನದಲ್ಲಿ ಅಳವಡಿಸಲು ಸರ್ಕಾರ ಚಿಂತನೆ ನಡೆಸಿದೆ. ಅವರ ವರ್ಣಚಿತ್ರಗಳು ಮಾತ್ರವಲ್ಲದೇ, ಅವರ ಕುರಿತದ ಮಾಹಿತಿ, ದೇಶದ ಇತಿಹಾಸದಲ್ಲಿ ಅವರ ಪಾತ್ರದ ಕುರಿತ ಸಂಕ್ಷಿಪ್ತ ವಿವರಣೆಯೂ ಇಲ್ಲಿರಲಿದೆ ಎಂದು ಹೆಸರು ಹೇಳಲು ಇಚ್ಛಿಸದ ಅಧಿಕಾರಿಗಳು ತಿಳಿಸಿದ್ದಾರೆ.

ಅಕ್ಟೋಬರ್ ವೇಳೆಗೆ ಸಂಸತ್ ಭವನದ ಕಟ್ಟಡ ನಿರ್ಮಾಣ ಪೂರ್ಣಗೊಳ್ಳಲಿದ್ದು ಸೆಂಟ್ರಲ್ ಅವೆನ್ಯೂ ನವೀಕರಣ ಕಾರ್ಯ ಜೂನ್ ಅಂತ್ಯದಲ್ಲಿ ಮುಗಿಯಲಿದೆ. ಸೆಂಟ್ರಲ್ ವಿಸ್ತಾ ಯೋಜನೆಯ ಭಾಗವಾಗಿ, ಸರ್ಕಾರವು ಹೊಸ ಸಂಸತ್ ಭವನ, ಉಪರಾಷ್ಟ್ರಪತಿ ಮತ್ತು ಪ್ರಧಾನಮಂತ್ರಿಗಳಿಗಾಗಿ ಹೊಸ ನಿವಾಸ, 51 ಸಚಿವಾಲಯಗಳುಳ್ಳ ಸೆಂಟ್ರಲ್ ಸೆಕ್ರೆಟರಿಯೇಟ್ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ.

**ಯಾರ್‍ಯಾರ ಚಿತ್ರಗಳು ರಾರಾಜಿಸಲಿವೆ:** 12ನೇ ಶತಮಾನದ ಕನ್ನಡ ಕವಯಿತ್ರಿ ಅಕ್ಕಮಹಾದೇವಿ, 18ನೇ ಶತಮಾನದ ಮರಾಠರ ರಾಣಿ ಅಹಲ್ಯಾ ಹೋಳ್ಕರ್, ಮಹಾಭಾರತದ ಪಂಚಪಾಂಡವರ ಪತ್ನಿಯಾದ ದ್ರೌಪದಿ, ಶ್ರೀರಾಮನ ಮಡದಿ ಸೀತೆ, ವೇದಕಾಲದ ಇತರೆ ಕವಯತ್ರಿಗಳಾದ ಅದಿತಿ, ಅಪ್ಪಳ ಮತ್ತು ಗಾರ್ಗಿ, ಕಾಶ್ಮೀರದ ಮಧ್ಯಕಾಲೀನ ಶೈವ ಕವಯಿತ್ರಿ ಲಲ್ಲೇಶ್ವರಿ, 16ನೇ ಶತಮಾನದ ಹಿಂದಿ ಕವಯಿತ್ರಿ ಹಾಗೂ ಕೃಷ್ಣನ ಭಕ್ತೆ ಮೀರಾ ಬಾಯಿ, 13ನೇ ಶತಮಾನದಲ್ಲಿ ದೆಹಲಿಯನ್ನು ಆಳಿದ ರಜಿಯಾ ಸುಲ್ತಾನಾ ಅವರ ವರ್ಣಚಿತ್ರಗಳು ಸಂಸತ್ ಭವನದ ಗೋಡೆಗಳಲ್ಲಿ ರಾರಾಜಿಸುವ ಸಾಧ್ಯತೆಯಿದೆ ಎಂದು ಮೂಲಗಳು ಹೇಳಿವೆ. ಇದೇ ವೇಳೆ, ಮುಸ್ಲಿಮರ ಬುರ್ಖಾ ಪದ್ಧತಿಯ ವಿರುದ್ಧ ಹೋರಾಡಿದ್ದ ಮೊದಲ ಮಹಿಳೆ ಎಂಬ ಖ್ಯಾತಿಗೆ ಪಾತ್ರವಾಗಿರುವ ಸುಗ್ರಾ ಮಿರ್ಜಾ ಅವರ ಚಿತ್ರವನ್ನೂ ಅಳವಡಿಸುವ ಬಗ್ಗೆ ಚಿಂತನೆ ನಡೆಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆಧಾರ:ಉದಯವಾಣಿ, ದಿನಾಂಕ:30.05.2022.

## 11. LS Speaker urged to act on ‘intimidation’ of Karti

Lok Sabha member Karti P. Chidamabaram and his family are being selectively targeted in the name of investigation, Congress leader in the Lok Sabha Adhir Ranjan Chowdhury said in a letter to Lok Sabha Speaker Om Birla and urged Mr. Birla to protect the parliamentary privileges of Opposition members.

The Congress leader also charged the Central Bureau of Investigation (CBI) with taking away sensitive and confidential Parliamentary papers from Mr. Karti and accused the government of trying to stifle the voice of the Opposition.

“A Member of Parliament is constitutional conferred with certain Parliamentary privileges so that he can discharge his Parliamentary duties without any fear or favour from the government. However, during the present regime, the opposition members are being targeted and intimidated and their parliamentary privileges are being breached.

In this regard, I may like to cite the case of Shri. Karti P.Chidambaram (M.P). He and his family are being selectively targeted in the name of ‘so called’ raid and investigation,” Mr. Chowdhury wrote in his letter.

“The CBI is intimidating him and worse, they have seized confidential and sensitive parliamentary papers. This is nothing but intimidation and an attempt by the government to stifle the voice of the opposition in Parliament,” he added.

Stating that “targeted intimidation” of an MP amounts to breach of privilege, Mr. Chowdhury further wrote, “Sir, you are the custodian and guardian of the dignity of the House and also the rights and privileges of the members of the Lok Sabha. I appeal to you that as the guardian of the Lower House, you may Kindly intervene and protect the rights and privileges of the opposition members so that they can discharge their parliamentary duties fearlessly and effectively”.

Courtesy: The Hindu, Dated:30.05.2022.

## 12. ಲೋಕಸಭೆ ಡಿಜಿಟಲೀಕರಣ, ರೂ.668 ಕೋಟಿ ಉಳಿಕೆ

ಡಿಜಿಟಲ್ ತಂತ್ರಜ್ಞಾನದ ಅಳವಡಿಕೆಯಿಂದ ಲೋಕಸಭಾ ಕಾರ್ಯಲಯವು ತೆರಿಗೆದಾರರ ರೂ.688 ಕೋಟಿಯಷ್ಟು ಹಣ ಉಳಿತಾಯ ಮಾಡಿದೆ ಎಂದು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ತಿಳಿಸಿದ್ದಾರೆ.

ಲೋಕಸಭಾ ಸ್ಪೀಕರ್ ಆಗಿ 3 ವರ್ಷಗಳ ಅವಧಿ ಪೂರೈಸಿದ ಹಿನ್ನೆಲೆಯಲ್ಲಿ ಪ್ರಾದೇಶಿಕ ಭಾಷೆಗಳ ಮಾಧ್ಯಮಗಳ ಜೊತೆ ಅಭಿಪ್ರಾಯ ಹಂಚಿಕೊಂಡ ಅವರು, ಕಳೆದ 3 ವರ್ಷಗಳಲ್ಲಿ ಲೋಕಸಭಾ ಚಟುವಟಿಕೆಗಳಿಗಾಗಿ ಕೇಂದ್ರ ಸರ್ಕಾರ ರೂ.2475 ಕೋಟಿ ಅನುದಾನ ಒದಗಿಸಿದೆ. ಇದರಲ್ಲಿ ಲೋಕಸಭಾ ಕಾರ್ಯಾಲಯ ರೂ.668 ಕೋಟಿಯಷ್ಟು ಮೊತ್ತವನ್ನು ಉಳಿತಾಯ ಮಾಡಿದೆ. ಅಂದರೆ ಶೇ.27ರಷ್ಟು ಹಣವನ್ನು ಉಳಿತಾಯ ಮಾಡಿದ್ದೇವೆ. ಇದಕ್ಕೆ ಕಾರಣ ಡಿಜಿಟಲೀಕರಣಕ್ಕೆ ಒತ್ತು ನೀಡಿದ್ದು ಎಂದರು.

ಡಿಜಿಟಲೀಕರಣದ ಪ್ರಮುಖ ಅಂಶ ಎಂದರೆ ಸಂಸತ್ ಗ್ರಂಥಾಲಯವನ್ನು ಎಲ್ಲರಿಗೂ ಆನ್‌ಲೈನ್ ವ್ಯವಸ್ಥೆ ಒದಗಿಸುತ್ತಿರುವುದು ಇದೇ ಮೊದಲ ಬಾರಿಯಾಗಿದ್ದು, ಆನ್‌ಲೈನ್ ಮೂಲಕ ಗ್ರಂಥಾಲಯ ಭೇಟಿಗೆ ಕಾಯ್ದಿರಿಸಬಹುದಾಗಿದೆ. ಇದಲ್ಲದೆ ಸಂಸತ್ ಗ್ರಂಥಾಲಯದ ಜೊತೆ ರಾಜ್ಯಗಳ 12 ಶಾಸನ ಸಭೆ ಗ್ರಂಥಾಲಯದ ಜೊತೆ ರಾಜ್ಯಗಳ 12 ಶಾಸನಸಭೆ ಗ್ರಂಥಾಲಯಗಳನ್ನು ಸಂಯೋಜಿಸುವ ಕಾರ್ಯ ಪ್ರಗತಿಯಲ್ಲಿದೆ ಎಂದರು.

**ದಾಖಲೆಯ 995 ಗಂಟೆ ಸಭೆ:** ಇದೇ ವೇಳೆ ಲೋಕಸಭಾ ಚಟುವಟಿಕೆಗಳ ಕುರಿತಾಗಿಯೂ ಮಾಹಿತಿ ಹಂಚಿಕೊಂಡ ಸ್ಪೀಕರ್, ಈ 17ನೇ ಲೋಕಸಭೆಯ 8 ಅಧಿವೇಶನಗಳಲ್ಲಿ ಶೇ.106 ಉತ್ಪಾದಕತೆ (ಪ್ರೋಡಕ್ಟೀವ್ ಆಫ್ ಹೌಸ್) ಆಗಿದೆ. 16ನೇ ಲೋಕಸಭೆಯ 8 ಅಧಿವೇಶನಗಳಲ್ಲಿ ಶೇ.95 ರಷ್ಟು ಉತ್ಪಾದಕತೆ ಆಗಿತ್ತು ಎಂದರು. ಅದಲ್ಲದೇ ಕಳೆದ 3 ಅಧಿವೇಶನಗಳಿಗೆ ಹೋಲಿಸಿದರೆ 17ನೇ ಲೋಕಸಭೆ 995 ಗಂಟೆಗಳ ಕಾಲ ಅಧಿವೇಶನ ನಡೆಸಿ ದಾಖಲೆ ಸೃಷ್ಟಿಸಿದೆ. ಕಳೆದ 8 ಅಧಿವೇಶನಗಳಲ್ಲಿ 139 ಮಸೂದೆಗಳನ್ನು ಆಡಳಿತ ಪಕ್ಷ ಮಂಡಿಸಿದೆ. ಬಾಕಿ ಇದ್ದ 10 ಮಸೂದೆ ಪಾಸು ಆಗಿವೆ ಎಂದು ಹೇಳಿದರು.

**ಹೊಸ ಸಂಸತ್ತಿನಲ್ಲಿ ಚಳಿಗಾಲ ಅಧಿವೇಶನ:** ಅಕ್ಟೋಬರ್ ತಿಂಗಳಿನಲ್ಲಿ ಹೊಸ ಸಂಸತ್ ಭವನ ನಮಗೆ ಹಸ್ತಾಂತರವಾಗಲಿದ್ದು, ಮುಂದಿನ ಚಳಿಗಾಲದ ಅಧಿವೇಶನ ಹೊಸ ಸಂಸತ್ ಭವನದಲ್ಲಿ ನಡೆಯಲಿದೆ. ಇದೊಂದು ಹಸಿರು ಕಟ್ಟಡವಾಗಿದ್ದು, ಎಲ್ಲಾ ಸೌಲಭ್ಯಗಳು ಪರಿಸರ ಸ್ನೇಹಿಯಾಗಿರುತ್ತವೆ' ಎಂದು ಲೋಕಸಭೆ ಸಭಾಪತಿಯಾಗಿ 3 ವರ್ಷ ಪೂರೈಸಿದ ಓಂ ಬಿರ್ಲಾ ಅವರು ಸುದ್ದಿಗಾರರಿಗೆ ತಿಳಿಸಿದರು.

ಆಧಾರ: ಕನ್ನಡ ಪ್ರಭ, ದಿನಾಂಕ:19.06.2022.

## 13. No resolutions against other countries in Parliament

Parliamentary proceedings in a country shouldn't be used to make allegations and counter allegations against the Parliament of another country, Lok Sabha Speaker Om Birla has said.

Mr. Birla made these remarks in the context of a lawmaker in the Maldives trying to move a resolution against India in the Maldivian Parliament over the controversy surrounding a BJP functionary's statement on Prophet Muhammed.

"This issue doesn't strictly concern the functioning of Parliament. Rather, it's about relations between nations. Everyone has the right to speak about issues in their

own country. But it is our expection that the parliamentary proceedings of any country should not get reduced to making allegations and counter-allegations about another country. You can surely discuss events, but Parliament should not be used to pass resolutions concerning another country," Mr. Birla said.

In an interview with The Hindu on the occasion of his completing three years in office, the Lok Sabha Speaker shared his views on the Parliament functioning under COVID Protocol.

"During the pandemic, the duration of stittings was reduced, but if you look at the figures, Lok Sabha clocked 167% productivity and this is a record high," Mr Birla noted.

Lok Sabha Speaker Om Birla, who has completed three years in office, speaks on the new normal of functioning of Parliament in the shadow of a pandemic, Parliamentary scrutiny and the recent controversy over the remarks against Prophet Muhammed by a now-sacked BJP spokesperson. Edited excerpts.

➢ We are trying to emerge from two years of the pandemic, through which Parliament functioned. How was Parliament affected by the pandemic?

During the pandemic, the duration of sittings was reduced but if you look at the figures, the Lok Sabha clocked 167% productivity, this is a record high.

Our allotted time during the tuncated session was between 4 p.m. and 9 p.m. and members made full use of the time . If you look at attendance of members also, it was higher than in non-pandemic periods; around 337 MPs on an average were present in Parliament. So, the working of Parliament was not affected much. In terms of what issues members raised, more speakers raised Zero Hour mentions and we started, in this $17^{th}$ Lok Sabha, the Practice of trying to get a response to matters mentioned then. In the demands for grants debate, four hours were allotted but the House debated it for 15 hours. In terms of democratic dialogue, it has been a rich experience.

➢ There are frequent complaints by Opposition that not enough Bills are being sent to Parliamentary committees. Also, that Ministries circulate Bills just before the debate is taken up on them, not giving enough time to prepare.

Government, in the eighth session of the $17^{th}$ Lok Sabha, sent nearly 60% of the Bills to the Standing Commitees. Governments bring Bills for the welfare of citizens and (with regard to) some Bills, government may feel that to delay may lead to a loss to the people. So they may want to debate in the House, maybe more than the allotted time but not be so much in favour of sending the Bill to the Standing Committee or not, and takes the mandate of the House.

As for Circulation of Bills minutes before being debated, I have raised the issue with the Parliamentary Affairs Ministry, and said that Bills should be circulated will in advance of debate, so that members have an adequate time period to prepare for debate.

- You have been proactive in encouraging those who have never spoken in the House to speak.

My aim is that the largest number of new and women members speak in the House. There was for example a first-time woman member, who, because she didn't know either English or Hindi, only her local language, felt inhibited in raising issues in the House. I called the translator for her language and helped her formulate a speech, now she often speaks in the House.

In fact, that is why I ask that the House run beyond its time, late into the night. In the first session that I chaired as Speaker, a record-breaking 1,066 members raised Zero Hour mentions, and we also have, for the 17th Lok Sabha, the all-time record of 182 people raising issues during Zero Hour.

- Facebook wistle-blower Sophie Zhang has been saying repeatedly that she wants to depose before the Standing Committee on Information Technology, but that you are not allowing that to happen.

As Speaker of the Lok Sabha, in case a particular Parliamentary committee wants to summon witnesses to depose before them, and if these people are employed with State governments or under their jurisidictions, then the Speaker can, at the request of the committee, ask that they present themselves. There is no rule, no procedure for asking people outside the boundaries of this country to be summoned at the will of the Speaker.

I am being tagged every day on Twitter for this, but I must clarify that as Speaker there are no rules under which I can summon people from abroad. Country representatives of various companies have represented them before the committee.

- Certain remarks about Prophet Muhammed triggered quite a controversy internationallly. A member of the Parliament of the Maldives had moved a resolution against India, but it was eventually defeated. Several other West Asian countries condemned those remarks, while a report in the U.S.questioned religious freedom in India. As the custodian of the people's House of the world's largest democracy, how do you view these developments?

This issue doesn't strictly concern the functioning of Parliament.Rather, it's about relations between nations. Everyone has the right to speak about issues in their own country.

But it is our expectation that the Parliamentary proceedings of any country should not get reduced to making allegations and counter-allegations about another country.

You can surely discuss events, but Parliament should not be used pass resolutions concerning another country. Say when we discussed the Ukraine war, we restricted ourselves to the impact on India.

Similarly, when we pass a Bill here (Lok Sabha) , another parliament shouldn't be commenting on it until it directly impacts them.

- A delegation of the Congress met you to complain about the Delhi police misbehaving with their MPs during a protest against the Enforcements Directorate. LokSabha member S.Jothimani also written to you about breach of her privilege. Would you act on their complaint?

Yes, delegation had met and apprised me of the developments that took place in the past few days. There are well-defined rule to deal with, and dispose of, such issue. This complaint too woud be examined within those rules and action will be taken.

- You had said that the winter session of this year will be held in the new Parliament building. So, are we on track?

The way construction work is progressing, right now we are six days behind scheldule. But the pace for construction is quite good and we hope to hold the winter session in the new building

Courtesy: The Hindu, Dated:19.06.2022.

# ಭಾಗ – 3

# ಕೇಂದ್ರ ಸುದ್ದಿಗಳು

## 1. India, Russia talk payment options

The Modi government rolled out the red carpet for Russian Foreign Minister Sergey Lavrov, who said his country would expand the use of national currencies for continuing trade with India to circumvent the sanctions imposed by the West.

The Russian foreign minister's comments come after an official in the US government warned India of "consequences" if it went ahead and worked out a mechanism for paying in rupee and rouble to continue its trade with Russia.

Lavrov not only met with External Affairs Minister S Jaishankar, but also called on Prime Minister Narendra Modi.

"I would recall that many years ago we started moving in our relations with India, China (and) many other countries from using dollar and euros to use of more national currencies. Under the current circumstances, I believe this trend will be intensified, which is natural and obvious," Lavrov told journalists after his meeting with Jaishankar.

Western nations imposed sanctions on Russia following the invasion of Ukraine, with the US and the European Union excluding seven Russian banks from SWIFT financial messaging system. "We don't want to depend on a system which would be closed any time and we don't want to depend on a system whose masters can steal your money overnight," said Lavrov.

India is now exploring a rupee-rouble payment system to continue its trade with Russia, which has offered to use its SPFS financial messaging system to help India pay for imports.

A Russian government delegation is arriving in New Delhi next week to discuss to work out an alternative payment mechanism. Lavrov also said his country is "ready to supply to India any goods which it wants to buy".

Courtesy: Deccan Herlad, Dated:20.04.2022

## 2. ಪಕ್ಷಾಂತರ ನಿಷೇಧ ಕಾಯ್ದೆಗೆ ತಿದ್ದುಪಡಿ ಅಗತ್ಯ

ಚುನಾಯಿತ ಪ್ರತಿನಿಧಿಗಳ ಪಕ್ಷಾಂತರ ದೊಡ್ಡ ಪಿಡುಗಾಗಿ ದೇಶವನ್ನು ಬಾಧಿಸುತ್ತಿದೆ. ಈ ಸಮಸ್ಯೆ ಪರಿಹಾರಕ್ಕೆ ಪಕ್ಷಾಂತರ ನಿಷೇಧ ಕಾಯ್ದೆಯ ತಿದ್ದುಪಡಿ ಅಗತ್ಯ ಎಂದು ಉಪ ರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ಪ್ರತಿಪಾದಿಸಿದರು.

ಬೆಂಗಳೂರು ಪ್ರೆಸ್ ಕ್ಲಬ್‌ನಲ್ಲಿ ನಡೆದ ಸಮಾರಂಭದಲ್ಲಿ 'ನವ ಭಾರತದಲ್ಲಿ ಮಾಧ್ಯಮಗಳ ಪಾತ್ರ' ಕುರಿತು ಮಾತನಾಡಿದ ಅವರು, 'ಪಕ್ಷಾಂತರಿಗಳಿಗೆ ಕಡಿವಾಣ ಹಾಕಲೇಬೇಕಾದ ಪರಿಸ್ಥಿತಿ

ನಿರ್ಮಾಣವಾಗಿದೆ. ಪಕ್ಷಾಂತರ ನಿಷೇಧ ಕಾಯ್ದೆಯಲ್ಲಿರುವ ಲೋಪಗಳನ್ನು ಗುರುತಿಸಿ, ಸೂಕ್ತ ತಿದ್ದು ಪಡಿಗಳನ್ನು ತರಬೇಕು' ಎಂದರು.

ಪಕ್ಷಾಂತರದಿಂದಾಗಿ ದೇಶದ ರಾಜಕಾರಣದಲ್ಲಿ ಮೌಲ್ಯಗಳ ಕುಸಿತವಾಗುತ್ತಿದೆ. ಅದು ಕ್ರಮೇಣ ಎಲ್ಲ ಕ್ಷೇತ್ರಗಳನ್ನೂ ವ್ಯಾಪಿಸುತ್ತಿದೆ. ರಾಜಕಾರಣದಲ್ಲಿ ಮೌಲ್ಯ ಕುಸಿತ ತಡೆಯುವ ಮೂಲಕ ಪ್ರಜಾಪ್ರ ಭುತ್ವವನ್ನು ಕಾಪಾಡಬೇಕಿದೆ ಎಂದು ಹೇಳಿದರು.

ಪಕ್ಷಾಂತರ ಮಾಡುವವರು ಹುದ್ದೆಗೆ ರಾಜೀನಾಮೆ ನೀಡುವುದನ್ನು ಕಡ್ಡಾಯಗೊಳಿಸಬೇಕು. ಮನರಾಯ್ಕೆ ಆಗುವವರೆಗೆ ಯಾವುದೇ ಹುದ್ದೆ ನೀಡಬಾರದು. ಪಕ್ಷಾಂತರ ನಿಷೇಧ ಕಾಯ್ದೆ ವ್ಯಾಪ್ತಿಯ ಪ್ರಕರಣಗಳ ಇತ್ಯರ್ಥಕ್ಕೆ ಸಭಾಧ್ಯಕ್ಷರು, ಸಭಾಪತಿ ಮತ್ತು ನ್ಯಾಯಾಲಯಗಳಿಗೆ ಅಧಿಕಾರವಿದೆ. ಆದರೆ, ಸದಸ್ಯರ ಅಧಿಕಾರದ ಅವಧಿ ಮುಗಿದರೂ ತೀರ್ಪು ಬರುವುದಿಲ್ಲ. ಮೂರು ತಿಂಗಳೊಳಗೆ ಈ ಪ್ರಕರಣಗಳನ್ನು ವಿಲೇವಾರಿ ಮಾಡುವುದನ್ನು ಕಡ್ಡಾಯಗೊಳಿಸಬೇಕು ಎಂದು ಉಪ ರಾಷ್ಟ್ರಪತಿ ಹೇಳಿದರು.

ಶಾಸನಸಭೆಗಳ ಒಳಗಿನ ಮತ್ತು ಹೊರಗಿನ ನಡವಳಿಕೆಗಳ ವಿಚಾರದಲ್ಲಿ ರಾಜಕೀಯ ಪಕ್ಷಗಳು ಸ್ವಯಂ ನೀತಿಸಂಹಿತೆ ಅಳವಡಿಸಿಕೊಳ್ಳಬೇಕು. ರಚನಾತ್ಮಕ ಚಟುವಟಿಕೆಗಳನ್ನು ಬೆಂಬಲಿಸುವ ಬದ್ಧತೆಯನ್ನು ಎಲ್ಲ ರಾಜಕೀಯ ಪಕ್ಷಗಳೂ ತೋರಬೇಕು ಎಂದು ಸಲಹೆ ನೀಡಿದರು.

ಸಾಂವಿಧಾನಿಕ ಸಂಸ್ಥೆಗಳು, ಸಾಂವಿಧಾನಿಕ ಹುದ್ದೆಗಳ ಮೇಲಿನ ದಾಳಿ ಹಾಗೂ ಅವುಗಳನ್ನು ದುರ್ಬಲಗೊಳಿಸುವ ಪ್ರಯತ್ನ ನಿಲ್ಲಬೇಕು. ರಾಜಕೀಯದಲ್ಲಿರುವ ವ್ಯಕ್ತಿಗಳ ಕುಟುಂಬವನ್ನು ಗುರಿಯಾಗಿಸಿ ಟೀಕಾಪ್ರಹಾರ ನಡೆಸುವುದೂ ಕೊನೆಯಾಗಬೇಕು. ಎಲ್ಲ ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿನ ಭರವಸೆಗಳನ್ನು ಈಡೇರಿಸುವುದಕ್ಕೆ ಬದ್ಧತೆ ತೋರಿಸಬೇಕು ಎಂದು ಹೇಳಿದರು.

**ಸ್ಥಳೀಯ ಸಂಸ್ಥೆಗಳು ಬಲಗೊಳ್ಳಲಿ:** ಪಂಚಾಯತ್ ರಾಜ್ ದಿನ ಎಂಬುದನ್ನು ನೆನಪಿಸಿದ ವೆಂಕಯ್ಯ ನಾಯ್ಡು, 'ಮೂರು ಹಂತದ ಆಡಳಿತ ವಿಕೇಂದ್ರೀಕರಣ ವ್ಯವಸ್ಥೆಯಿಂದ ಭಾರತದ ಪ್ರಜಾಪ್ರಭುತ್ವ ಹೆಚ್ಚು ಸದೃಢವಾಗಿದೆ. ಈ ಸಂದರ್ಭದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಅಧಿಕಾರ, ಅನುದಾನ ಚುನಾಯಿತ ಆಡಳಿತ ಮತ್ತು ವ್ಯವಸ್ಥೆ ನೀಡುವ ಮೂಲಕ ಅವುಗಳನ್ನು ಬಲಪಡಿಸಬೇಕು' ಎಂದರು.

ಸಂಸದ ಪಿ.ಸಿ. ಮೋಹನ್ ಉಪಸ್ಥಿತರಿದ್ದರು.

**ಸುದ್ದಿಯಲ್ಲಿ ಅಭಿಪ್ರಾಯ ಹೇರಬೇಡಿ:-**

ಮಾಧ್ಯಮಗಳಲ್ಲಿ ಪ್ರಕಟವಾಗುವ ಸುದ್ದಿಗಳಲ್ಲಿ ಪತ್ರಕರ್ತರ ವೈಯಕ್ತಿಕ ಅಭಿಪ್ರಾಯ ಹೇರಲು ಅವಕಾಶ ಇರಬಾರದು. ಆಗ ಮಾತ್ರ ನಿಷ್ಪಕ್ಷಪಾತ ಸುದ್ದಿ ಪ್ರಕಟಿಸಲು ಸಾಧ್ಯ ಎಂದು ಉಪ ರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ಹೇಳಿದರು.

ಸುದ್ದಿ ಸಂಪೂರ್ಣವಾಗಿ ವೈಯಕ್ತಿಕ ಅಭಿಪ್ರಾಯಗಳಿಂದ ಮುಕ್ತವಾಗಿ ಇರಬೇಕು. ಸುದ್ದಿಯಲ್ಲಿ ಪತ್ರಕರ್ತರ ಅಭಿಪ್ರಾಯ ಹೇರುವುದು ಜನರನ್ನು ಗೊಂದಲಕ್ಕೆ ತಳ್ಳಲು ಕಾರಣವಾಗುತ್ತದೆ ಎಂದರು.

'ಸಾಮಾಜಿಕ ಮಾಧ್ಯಮಗಳು ದೇಶದಲ್ಲಿ ದ್ವೇಷ ಬಿತ್ತಿ, ಜನರ ನಡುವೆ ಒಡಕು ಮೂಡಿಸುತ್ತಿವೆ. ಅವುಗಳ ಮೇಲೆ ನಿಯಂತ್ರಣ ಇಲ್ಲ. ನಿಗಾ ಇಡುವ ವ್ಯವಸ್ಥೆಯೂ ಸರಿಯಾಗಿಲ್ಲ. ಸಾಮಾಜಿಕ ಮಾಧ್ಯಮಗಳನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳುವುದು ಅಗತ್ಯ' ಎಂದರು.

ಆಧಾರ: ಪ್ರಜಾವಾಣಿ, ದಿನಾಂಕ:25.04.2022

## 3. ಕಾಶ್ಮೀರಕ್ಕೆ ಭರ್ಜರಿ ಪ್ಯಾಕೇಜ್

ಜಮ್ಮು–ಕಾಶ್ಮೀರ ರಾಜ್ಯವನ್ನು ಕೇಂದ್ರಾಡಳಿತ ಪ್ರದೇಶವೆಂದು 2019ರಲ್ಲಿ ಘೋಷಿಸಿದ ಬಳಿಕ ಇದೇ ಮೊದಲ ಬಾರಿ ಪ್ರಧಾನಿ ನರೇಂದ್ರ ಮೋದಿ ಅಲ್ಲಿಗೆ ತೆರಳಿದ್ದು, ಔಪಚಾರಿಕವಾಗಿ ಸಾರ್ವಜನಿಕ ಸಮಾರಂಭದಲ್ಲಿ ಭಾಗಿಯಾದರು. ಈ ಸಂದರ್ಭದಲ್ಲಿ ಅವರು ಬನಿಹಾಲ್ –ಖಾಝಿಗುಂಡ್ ಸುರಂಗ ಮತ್ತು ಎರಡು ಜಲವಿದ್ಯುತ್ ಯೋಜನೆಗಳು, ಸೇರಿ 20,000 ಕೋಟಿ ರೂಪಾಯಿ ಯೋಜನೆಗಳಿಗೆ ಚಾಲನೆ ನೀಡಿದರು.

ಜಮ್ಮುವಿನ ಪಲ್ಲಿ ಗ್ರಾಮದಲ್ಲಿ ಆಯೋಜಿಸಲಾಗಿದ್ದ ರಾಷ್ಟ್ರೀಯ ಪಂಚಾಯತ್ ರಾಜ್ ಕಾರ್ಯಕ್ರಮದಲ್ಲಿ ಅವರು ಭಾಗವಹಿಸಿದ್ದರು. 'ಈ ಪ್ರದೇಶ ನನಗೆ ಹೊಸದಲ್ಲ. ಅದೇ ರೀತಿ ನಿಮಗೆ ನಾನು ಹೊಸಬನೂ ಅಲ್ಲ. ಕಳೆದ ಎರಡು ಅಥವಾ ಮೂರು ವರ್ಷಗಳ ಅವಧಿಯಲ್ಲಿ ಜಮ್ಮು– ಕಾಶ್ಮೀರ ಅನೇಕ ಮೈಲಿಗಲ್ಲುಗಳನ್ನು ಸ್ಥಾಪಿಸಿದೆ. ಇದಕ್ಕೂ ಹಿಂದಿನ ಸರ್ಕಾರಗಳು ಕೇಂದ್ರ ಸರ್ಕಾರದ ಯೋಜನೆಗಳನ್ನು ಇಲ್ಲಿ ಜಾರಿಗೊಳಿಸುತ್ತಿರಲಿಲ್ಲ. ನಾವು ಅದನ್ನು ಸಾಧಿಸಿದ್ದೇವೆ. ಕಳೆದ ಆರು ದಶಕದಲ್ಲಿ ಈ ಪ್ರದೇಶದಲ್ಲಿ ಕೇವಲ 17,000 ಕೋಟಿ ರೂಪಾಯಿ ಖರ್ಚು ಮಾಡಲಾಗಿದೆ. ಕಳೆದ ಎರಡು ವರ್ಷಗಳಲ್ಲಿ 38,000 ಕೋಟಿ ರೂಪಾಯಿಯನ್ನು ಮೂಲಸೌಕರ್ಯ ಒದಗಿಸಲು ಹೂಡಿಕೆ ಮಾಡಲಾಗಿದೆ' ಎಂದರು.

**ಮಹತ್ವ ಯಾಕೆ:–** ಜಮ್ಮು – ಕಾಶ್ಮೀರದಲ್ಲಿ ಕ್ಷೇತ್ರ ಮರುವಿಂಗಡನೆ ಕಾರ್ಯ ಪ್ರಗತಿಯಲ್ಲಿದೆ. ಅದು ಮುಗಿಯುತ್ತಿದ್ದಂತೆ ಎರಡು ಹೊಸ ಕೇಂದ್ರಾಡಳಿತ ಪ್ರದೇಶಗಳಲ್ಲಿ ಚೊಚ್ಚಲ ಚುನಾವಣೆಗಳು ನಡೆಯಲಿವೆ. ಪ್ರಧಾನಿ ಮೋದಿ ಅವರ ಮೊದಲ ಭೇಟಿ ಕೂಡ ಚುನಾವಣೆಯ ಸುಳಿವನ್ನು ನೀಡಿದೆ ಎಂದು ರಾಜಕೀಯ ಪರಿಣಿತರು ಹೇಳಿದ್ದಾರೆ.

**ಸುರಂಗದ ವಿಶೇಷ:** ಬನಿಹಾಲ್–ಖಾಜಿಗುಂಡ್ ಸುರಂಗವನ್ನು 3,100 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ. ಇದು 8.45 ಕಿ.ಮೀ. ಉದ್ದವಿದೆ. ಇದು ಎರಡು ಪ್ರದೇಶಗಳ ಅಂತರವನ್ನು 16 ಕಿ.ಮೀ. ತಗ್ಗಿಸುತ್ತದೆ ಮತ್ತು ಪ್ರಯಾಣದ ಅವಧಿಯನ್ನು ಒಂದೂವರೆ ಗಂಟೆ ಕಡಿಮೆ ಮಾಡುತ್ತದೆ.

**ಭಾಷಣ ಪ್ರಮುಖಾಂಶ**

ಭಾರತದ ಅಭಿವೃದ್ಧಿಯು 'ವೋಕಲ್ ಫಾರ್ ಲೋಕಲ್' ಮಂತ್ರದಲ್ಲಿ ಅಡಗಿದೆ. ಭಾರತದ ಪ್ರಜಾಪ್ರಭುತ್ವವನ್ನು ಮುನ್ನಡೆಸುವಲ್ಲಿ ಲೋಕಲ್ ಗವರ್ನೆನ್ಸ್ ಕೂಡ ಒಂದು ಚಾಲನಾ ಶಕ್ತಿ. ಮುಂದಿನ 25 ವರ್ಷಗಳ ಅವಧಿಯಲ್ಲಿ ಹೊಸ ಜಮ್ಮು-ಕಾಶ್ಮೀರ ನಿರ್ಮಾಣವಾಗಲಿದ್ದು, ಹೊಸ ಅಭಿವೃದ್ಧಿಯ ಇತಿಹಾಸವನ್ನು ಬರೆಯಲಿದೆ. ನಿಮ್ಮ ಕೆಲಸವು ಸ್ಥಳೀಯವಾಗಿ ಇರಬಹುದು. ಆದರೆ, ಅದರ ಒಟ್ಟು ಪರಿಣಾಮ ಜಾಗತಿಕವಾಗಿ ಇರಲಿದೆ.

ಕೇವಲ ಎರಡು–ಮೂರು ವರ್ಷದ ಅವಧಿಯಲ್ಲಿ ಈ ರಾಜ್ಯದಲ್ಲಿ ಅಭಿವೃದ್ಧಿಗೆ ಹೊಸ ಆಯಾಮ ಸಿಕ್ಕಿದೆ. ಅದಕ್ಕೂ ಇಲ್ಲಿ ಕೇಂದ್ರ ಸರ್ಕಾರದ 250 ಕಾನೂನುಗಳು ಅನ್ವಯವಾಗುತ್ತಿರಲಿಲ್ಲ. ಈಗ ಎಲ್ಲವೂ ಅನ್ವಯವಾಗುತ್ತಿದ್ದು, ಪ್ರತಿಯೊಬ್ಬ ಪ್ರಜೆಯನ್ನು ಸಬಲಗೊಳಿಸುವ ಕೆಲಸ ಆಗುತ್ತಿದೆ.

ಭಾಷೆ ಅಥವಾ ಮೂಲಸೌಕರ್ಯ ಅಥವಾ ಸೌಲಭ್ಯಗಳ ಮೂಲಕ ಸಂಪರ್ಕವನ್ನು ಸಾಧಿಸುವುದರ ಕಡೆಗೆ ನಮ್ಮ ಗಮನ, ಕನ್ಯಾಕುಮಾರಿ ದೇವಿಯು ವೈಷ್ಣೋದೇವಿಯನ್ನು ಒಂದೇ ರಸ್ತೆಯಲ್ಲಿ ಸಂಧಿಸುವ ದಿನ ಬಹಳ ದೂರವಿಲ್ಲ.

**ಕಾರ್ಬನ್ ನ್ಯೂಟ್ರಲ್ ಪಂಚಾಯಿತಿ**

ಜಮ್ಮು– ಕಾಶ್ಮೀರದ ಗಡಿ ಭಾಗದ ಜಿಲ್ಲೆ ಸಾಂಬಾದಲ್ಲಿರುವ ಪಲ್ಲಿ ಗ್ರಾಮವು ದೇಶದ ಮೊದಲ ಕಾರ್ಬನ್ ನ್ಯೂಟ್ರಲ್ ಪಂಚಾಯಿತಿ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಘೋಷಿಸಿದ್ದಾರೆ. ಇದು ದೇಶಕ್ಕೆ ಕಾರ್ಬನ್ ನ್ಯೂಟ್ರಲ್ ಆಗುವುದಕ್ಕೆ ದಾರಿ ತೋರಿದೆ ಎಂದು ಅವರು ಇದೇ ವೇಳೆ ಹೇಳಿದರು. ಇಲ್ಲಿ ದಾಖಲೆಯ ಕೇವಲ ಮೂರೇ ವಾರದ ಅವಧಿಯಲ್ಲಿ ಸ್ಥಾಪಿಸಲಾದ 500 ಕೆವಿ ಸೌರ ವಿದ್ಯುತ್ ಘಟಕವನ್ನು ಪ್ರಧಾನಿ ಮೋದಿ ಲೋಕಾರ್ಪಣೆ ಮಾಡಿದರು. 1,500 ಸೌರ ಫಲಕಗಳನ್ನು 6,408 ಚದರ ಮೀಟರ್‌ನಲ್ಲಿ ಅಳವಡಿಸಲಾಗಿದೆ. ಇಲ್ಲಿಂದ ಉತ್ಪಾದನೆಯಾಗುವ ವಿದ್ಯುತ್ ಅನ್ನು ಮಾದರಿ ಗ್ರಾಮ ಪಂಚಾಯಿತಿಯ 340 ಮನೆಗಳಿಗೆ ಬಳಸಲಾಗುತ್ತದೆ. ಇದಕ್ಕೆ 2.75 ಕೋಟಿ ರೂಪಾಯಿ ವೆಚ್ಚ ಮಾಡಲಾಗಿದೆ ಎಂದು ಪಂಚಾಯಿತಿ ಅಧಿಕಾರಿಗಳು ತಿಳಿಸಿದ್ದಾರೆ.

ಆಧಾರ: ವಿಜಯವಾಣಿ, ದಿನಾಂಕ: 25.04.2022

## 4. ರಕ್ಷಣಾ ವೆಚ್ಚ : ವಿಶ್ವದಲ್ಲೇ ಭಾರತ ನಂ.3

2021ರಲ್ಲಿ ಭಾರತ ರೂ.5.75 ಲಕ್ಷ ಕೋಟಿಗಳನ್ನು ರಕ್ಷಣಾ ವಲಯಕ್ಕೆ ವೆಚ್ಚ ಮಾಡಿದ್ದು, ಈ ಮೂಲಕ ವಿಶ್ವದಲ್ಲೇ ಅತಿ ಹೆಚ್ಚು ರಕ್ಷಣಾ ಬಜೆಟ್ ಹೊಂದಿದ 3ನೇ ದೊಡ್ಡ ದೇಶವಾಗಿ ಹೊರಹೊಮ್ಮಿದೆ ಎಂದು ಸ್ವಾಕ್ ಹೋಮ್ ಇಂಟರ್ ನ್ಯಾಷನಲ್ ಪೀಸ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಎಂಬ ಚಿಂತಕರ ಚಾವಡಿ ತನ್ನ ವರದಿಯಲ್ಲಿ ತಿಳಿಸಿದೆ. ಇದೇ ವೇಳೆ ಅಮೆರಿಕ, ಚೀನಾ ಭಾರತ, ಬ್ರಿಟನ್ ಮತ್ತು ರಷ್ಯಾ ದೇಶಗಳು ಅತಿ ಹೆಚ್ಚು ರಕ್ಷಣಾ ಬಜೆಟ್ ಹೊಂದಿರುವ ಟಾಪ್ 5 ದೇಶಗಳಾಗಿವೆ ಎಂದು ವರದಿ ಹೇಳಿದೆ.

ವರದಿ ಅನ್ವಯ 2020ಕ್ಕೆ ಹೋಲಿಸಿದರೆ 2021ರಲ್ಲಿ ಭಾರತದ ರಕ್ಷಣಾ ವೆಚ್ಚ ಶೇ.0.9ರಷ್ಟು ಏರಿಕೆ ಕಂಡು ರೂ.5.75 ಲಕ್ಷ ಕೋಟಿ ತಲುಪಿದೆ. ಇನ್ನು 2012ಕ್ಕೆ ಹೋಲಿಸಿದರೆ ಭಾರತದ ರಕ್ಷಣಾ ಬಜೆಟ್ ಗಾತ್ರ ಶೇ.33 ರಷ್ಟು ಹೆಚ್ಚಳವಾಗಿದೆ. ಗಡಿಯಲ್ಲಿ ಚೀನಾ ಮತ್ತು ಪಾಕಿಸ್ತಾನದೊಂದಿಗೆ ಬಿಕ್ಕಟ್ಟಿನ ಹಿನ್ನಲೆಯಲ್ಲಿ ಭಾರತ ತನ್ನ ಸೇನೆಯನ್ನು ಆಧುನೀಕರಣಗೊಳಿಸುತ್ತಿದೆ ಮತ್ತು ರಕ್ಷಣಾ ಉಪಕರಣಗಳ ಉತ್ಪಾದನೆಯಲ್ಲಿ ಸ್ವಾವಲಂಬನೆಗೆ ಒತ್ತು ನೀಡಿದೆ. 2021ರಲ್ಲಿ ಒಟ್ಟು ಬಜೆಟ್‌ನಲ್ಲಿ ಶೇ.64 ರಷ್ಟನ್ನು ಸ್ವದೇಶಿ ಖರೀದಿಗೆ, ವಿನಿಯೋಗಿಸಿದೆ ಎಂದು ವರದಿ ಹೇಳಿದೆ.

**ಟಾಪ್ 5** : ಇನ್ನು ಅಮೇರಿಕ, ಚೀನಾ, ಭಾರತ, ಬ್ರಿಟನ್ ಮತ್ತು ರಷ್ಯಾ ದೇಶಗಳು ಅತಿ ಹೆಚ್ಚು ರಕ್ಷಣಾ ಬಜೆಟ್ ಹೊಂದಿರುವ ಟಾಪ್ 5 ದೇಶಗಳಾಗಿವೆ. ಈಗ 5 ದೇಶಗಳು ವಿಶ್ವದ ಒಟ್ಟು ರಕ್ಷಣಾ ಬಜೆಟ್‌ನಲ್ಲಿ ಶೇ.62 ರಷ್ಟು ಪಾಲು ಹೊಂದಿವೆ, ಈ ಪೈಕಿ ಅಮೆರಿಕ ಮತ್ತು ಚೀನಾ ಪಾಲೇ ಶೇ.52 ರಷ್ಟಿದೆ ಎಂದು ವರದಿ ಹೇಳಿದೆ. ಜಾಗತಿಕ ರಕ್ಷಣಾ ಬಜೆಟ್ ರೂ. 158 ಲಕ್ಷ ಕೋಟಿ ತಲುಪಿದೆ ಎಂದು ವರದಿ ಹೇಳಿದೆ.

| **ರಕ್ಷಣಾ ವೆಚ್ಚ ಎಷ್ಟೆಷ್ಟು** | | |
|---|---|---|
| 1 | ಅಮೆರಿಕ | ರೂ.60 ಲಕ್ಷ ಕೋಟಿ |
| 2 | ಚೀನಾ | ರೂ.22 ಲಕ್ಷ ಕೋಟಿ |
| 3 | ಭಾರತ | ರೂ.5.75 ಲಕ್ಷ ಕೋಟಿ |
| 4 | ಬ್ರಿಟನ್ | ರೂ.5.13 ಲಕ್ಷ ಕೋಟಿ |
| 5 | ರಷ್ಯಾ | ರೂ.4.94 ಲಕ್ಷ ಕೋಟಿ |

ಆಧಾರ:ವಿಶ್ವವಾಣಿ, ದಿನಾಂಕ:26.04.2022

## 5. ನಾಲ್ಕನೇ ಅಲೆ ತಡೆತಂತ್ರ

ದೇಶದಲ್ಲಿ ಕರೋನಾದ ಸಂಭಾವ್ಯ ನಾಲ್ಕನೇ ಅಲೆಗೆ ತಡೆಹಾಕುವ ನಿಟ್ಟಿನಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ ನಡೆಸಲಿರುವ ವಿಡಿಯೋ ಸಂವಾದ ಮಹತ್ವ ಪಡೆದುಕೊಂಡಿದೆ.

ಥೈಲ್ಯಾಂಡ್, ಜಪಾನ್, ಹಾಂಕಾಂಗ್ ಸೇರಿ ಹಲವು ದೇಶಗಳಲ್ಲಿ ನಾಲ್ಕನೇ ಅಲೆ ಕಾಲಿಟ್ಟಿದೆ. ಇತ್ತ, ದೆಹಲಿ, ಹರಿಯಾಣ, ಮಹಾರಾಷ್ಟ್ರ, ತಮಿಳುನಾಡು ರಾಜ್ಯಗಳಲ್ಲಿ ಸೋಂಕು ಪ್ರಕರಣಗಳು ಏರುಗತಿಯಲ್ಲಿವೆ.

ಹಿಂದಿನ ಮೂರು ಅಲೆಗಳ ಅನುಭವದ ಪ್ರಕಾರ ಮುಂದಿನ ಮೂರಾಲ್ಕು ವಾರಗಳಲ್ಲಿ ರಾಜ್ಯದಲ್ಲೂ ಸೋಂಕು ಪ್ರಕರಣಗಳ ಏರಿಕೆ ಅಂದಾಜಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸಭೆ ಕುತೂಹಲಕ್ಕೆಡೆ ಮಾಡಿಕೊಟ್ಟಿದೆ. 4ನೇ ಅಲೆ ಪ್ರವೇಶದ ಕುರಿತು ತಜ್ಞರು ಎಚ್ಚರಿಕೆ ನೀಡಿದ್ದಾರೆ. ಹೊಸ ಪ್ರಭೇದಗಳಿಂದ ಉಂಟಾಗುವ ಸೋಂಕಿನ ಪರಿಣಾಮ, ತೀವ್ರತೆ ಬಗ್ಗೆ ನಿಖರವಾದ ಮಾಹಿತಿ ಲಭ್ಯವಾಗಿಲ್ಲ. ಆದರೆ ಕೇಂದ್ರ ಸರ್ಕಾರದ

ಸೂಚನೆಯಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ರಾಜ್ಯ ಸರ್ಕಾರ ಕೈಗೊಂಡು, ಮಾಸ್ಕ್ ಕಡ್ಡಾಯ ಸೇರಿ ಹಲವು ನಿಯಮಗಳನ್ನು ಪಾಲಿಸಲು ಸಾರ್ವಜನಿಕರಿಗೆ ವಿನಂತಿಸಿದೆ.

**ಬಿಗಿ ಕ್ರಮಗಳ ಭವಿಷ್ಯ:** ಮಾಸ್ಕ್ ಕಡ್ಡಾಯ ಉಲ್ಲಂಘಿಸಿದರೆ ದಂಡ, ಸೋಂಕು ಬಾಧಿತ ನೆರೆಯ ರಾಜ್ಯಗಳಿಂದ ಬರುವ ಜನರ ಮೇಲೆ ನಿಗಾ, ಗಡಿಗಳಲ್ಲಿ ತಪಾಸಣೆ ಇನ್ನಿತರ ಬಿಗಿ ಕ್ರಮಗಳ ಭವಿಷ್ಯವೂ ನಿರ್ಧಾರವಾಗಲಿದೆ. ಮೋದಿಯವರು ವಿಡಿಯೋ ಸಂವಾದದಲ್ಲಿ ನೀಡಲಿರುವ ಸಲಹೆ–ಸೂಚನೆಗಳ ಆಧಾರದಲ್ಲಿ ಮತ್ತೊಂದು ಸಭೆ ನಡೆಸಿ, ಇನ್ನಷ್ಟು ಕ್ರಮಗಳ ಬಗ್ಗೆ ತೀರ್ಮಾನವಾಗಲಿದೆ ಎಂದು ಸಭೆ ಬಳಿಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ.ಕೆ.ಸುಧಾಕರ್ ಹೇಳಿದ್ದರು.

**ಎಳೆಯರಿಗೂ ಲಸಿಕೆ**

ಶಾಲಾ ಮಕ್ಕಳಲ್ಲಿ ಕರೋನಾ ಸೋಂಕಿನ ಪ್ರಕರಣಗಳ ಏರಿಕೆಯಾಗುತ್ತಿರುವುದರ ನಡುವೆ, 12 ವರ್ಷದವರೆಗಿನ ಎಳೆಯರಿಗೆ ಲಸಿಕೆ ನೀಡಲು ಭಾರತ ಔಷಧ ಮಹಾ ನಿಯಂತ್ರಣ ಸಂಸ್ಥೆ (ಡಿಸಿಜಿಐ) ಅನುಮೋದನೆ ನೀಡಿದೆ. ಇದು ಒಟ್ಟಾರೆಯಾಗಿ ದೇಶದ ಲಸಿಕೆ ಅಭಿಯಾನವನ್ನು ಇನ್ನಷ್ಟು ಬಲಿಷ್ಠಪಡಿಸಲಿದೆ.

ಭಾರತ್ ಬಯೋಟೆಕ್ ಕೊವ್ಯಾಕ್ಸಿನ್ ಲಸಿಕೆಯನ್ನು 6 ರಿಂದ 12 ವಯೋಮಿತಿಯ ಮಕ್ಕಳಿಗೆ ಹಾಗೂ 5 ರಿಂದ 12 ವಯೋಗುಂಪಿನ ಮಕ್ಕಳಿಗೆ ಕೊರ್ಬೆವ್ಯಾಕ್ಸ್ ಲಸಿಕೆಯ ತುರ್ತು ವ್ಯಾಕ್ಸಿನ್‌ಗೆ ಡಿಸಿಜಿಐ ಅಸ್ತು ಬಳಕೆಗೆ ಡಿಸಿಜಿಐ ಅನುಮೋದನೆ ಕೊಟ್ಟಿದೆ. ಕೇಂದ್ರೀಯ ಔಷಧ ಮಾನವ ನಿಯಂತ್ರಣ ಸಂಸ್ಥೆಯ (ಸಿಡಿಎಸ್ ಸಿಒ) ವಿಷಯ ತಜ್ಞರ ಸಮಿತಿ ಮಾಡಿರುವ ಶಿಫಾರಸ್ಸಿನ ಮೇರೆಗೆ ಡಿಸಿಜಿಐ ಈ ಕ್ರಮ ಕೈಗೊಂಡಿದೆ. ಝೈಡುಸ್ ಕ್ಯಾಡಿಲಾದ ಝೈಕೋವ್–ಡಿ ಲಸಿಕೆಯನ್ನು 12 ವರ್ಷಕ್ಕೆ ಮೇಲ್ಪಟ್ಟ ಮಕ್ಕಳಿಗೆ ನೀಡಲೂ ಅನುಮತಿಸಲಾಗಿದೆ. ಮೊದಲ 2 ತಿಂಗಳು ಪ್ರತಿ 15 ದಿನಕ್ಕೊಮ್ಮೆ ಹಾಗೂ ನಂತರ 5 ತಿಂಗಳವರೆಗೆ ತಿಂಗಳಿಗೊಮ್ಮೆ ಅಡ್ಡ–ಪರಿಣಾಮ ಸಹಿತ ಲಸಿಕೆಯ ಸುರಕ್ಷತಾ ಡೇಟಾ ಸಲ್ಲಿಸುವಂತೆ ವ್ಯಾಕ್ಸಿನ್ ತಯಾರಕರಿಗೆ ಡಿಸಿಜಿಐ ನಿರ್ದೇಶಿಸಿತ್ತು.

**187 ಕೋಟಿ ಬೂಸ್ಟರ್ ಡೋಸ್**

ಆರೋಗ್ಯ ಮತ್ತು ಮುಂಚೂಣಿ ಕಾರ್ಯಕರ್ತರಿಗೆ ಹಾಗೂ ಅನ್ಯವ್ಯಾಧಿಗಳುಳ್ಳ 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಲಸಿಕೆಯ ಮುನ್ನೆಚ್ಚರಿಕೆ (ಬೂಸ್ಟರ್) ಡೋಸ್ ನೀಡುವ ಕಾರ್ಯಕ್ರಮವನ್ನು ಸರ್ಕಾರ ಜನವರಿಯಲ್ಲಿ ಆರಂಭಿಸಿತ್ತು. ಇದುವರೆಗೆ ದೇಶದಾದ್ಯಂತ 187 ಕೋಟಿಗೂ ಅಧಿಕ ಡೋಸ್ ಲಸಿಕೆ ಹಾಕಲಾಗಿದೆ.

**ಮುಖ್ಯಮಂತ್ರಿಗಳಿಂದ ಸಿದ್ಧತೆ**

ಸಂಭಾವ್ಯ 4ನೇ ಅಲೆ ಹಾಗೂ ಸೋಂಕು ಪ್ರಕರಣಗಳ ನಿಯಂತ್ರಣ ಕಾರ್ಯತಂತ್ರವನ್ನು ಮೋದಿಗೆ ವಿವರಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಿದ್ಧತೆ ಮಾಡಿಕೊಂಡಿದ್ದಾರೆ. ಹಿರಿಯ ಸಚಿವರು, ಕರೋನಾ ಕಾರ್ಯಪಡೆ ಅಧ್ಯಕ್ಷ, ತಜ್ಞರು, ಉನ್ನತಾಧಿಕಾರಿಗಳ ಸಭೆ ನಡೆಸಿ ಮಾಹಿತಿ ಪಡೆದುಕೊಂಡಿದ್ದು, ಸೋಂಕಿನ ಸ್ಥಿತಿಗತಿ, ಆಸ್ಪತ್ರೆಗಳ ವ್ಯವಸ್ಥೆ ಪರಾಮರ್ಶಿಸಿದ್ದಾರೆ. ಅಲ್ಲದೆ, ಸಾರ್ವಜನಿಕ ಸ್ಥಳಗಳು, ಪ್ರಯಾಣ, ಕೆಲಸದ ಸ್ಥಳಗಳಲ್ಲಿ ಮಾಸ್ಕ್ ಧರಿಸುವುದು ಕಡ್ಡಾಯ, ಎರಡು ಅಡಿ ದೈಹಿಕ ಅಂತರ ಪಾಲನೆ ನಿಯಮ ಜಾರಿಗೊಳಿಸಿದ್ದು, ಈ ವಿಷಯವನ್ನು ಮೋದಿಗೆ ವಿವರಿಸಲಿದ್ದಾರೆ.

ಮುಖ್ಯಮಂತ್ರಿ ಬೊಮ್ಮಾಯಿ ದಕ್ಷಿಣಕನ್ನಡ ಜಿಲ್ಲಾ ಪ್ರವಾಸದಲ್ಲಿದ್ದು, ಮೋದಿ ವಿಡಿಯೋ ಸಂವಾದದಲ್ಲಿ ಮಂಗಳೂರಿನಿಂದಲೇ ಭಾಗಿಯಾಗಲಿದ್ದಾರೆ. ಮಂಗಳೂರು ಜಿ.ಪಂ. ಕಚೇರಿಯಲ್ಲಿ ವರ್ಚುವಲ್ ವೇದಿಕೆ ಸಜ್ಜುಗೊಳಿಸಲಾಗಿದೆ.

ಆಧಾರ: ವಿಜಯವಾಣಿ, ದಿನಾಂಕ: 27.04.2022

## 6. ರಸಗೊಬ್ಬರಕ್ಕೆ 60,939 ಕೋಟಿ ಸಬ್ಸಿಡಿ

ದೇಶದ ಹಲವು ಕಡೆ ರಸಗೊಬ್ಬರಗಳಿಗೆ ಕೊರತೆ ಉಂಟಾಗಿರುವ ಸುದ್ದಿಗಳ ಮಧ್ಯೆ ಕೇಂದ್ರ ಸರಕಾರ ರೈತರಿಗೆ ಸಿಹಿ ಸುದ್ದಿ ನೀಡಿದೆ. 2022–23ನೇ ಆರ್ಥಿಕ ವರ್ಷದ ಮೊದಲ ಆರು ತಿಂಗಳ ಅವಧಿಗೆ ಡಿಎಪಿ ಸೇರಿ ಪಿ ಆ್ಯಂಡ್ ಕೆ ರಸಗೊಬ್ಬರಗಳ ಮೇಲೆ ರೂ.60,939 ಕೋಟಿ ಸಬ್ಸಿಡಿ ಒದಗಿಸುವ ಪ್ರಸ್ತಾವಕ್ಕೆ ಪ್ರಧಾನಿ ನೇತೃತ್ವದಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಕೇಂದ್ರದ ಈ ನಿರ್ಧಾರದಿಂದ ಮುಂಗಾರು ಅವಧಿಯಲ್ಲಿ ಡಿಎಪಿ ಸೇರಿದಂತೆ ಪಾಸ್ಫರಸ್ ಹಾಗೂ ಪೊಟ್ಯಾಶಿಯಂ ಅಂಶವಿರುವ ರಸಗೊಬ್ಬರಗಳು ಸಬ್ಸಿಡಿ ದರದಲ್ಲಿ ರೈತರಿಗೆ ದೊರೆಯಲಿವೆ. ಇತ್ತೀಚೆಗೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಡಿಎಪಿ ಹಾಗೂ ಅದರ ಕಚ್ಚಾ ವಸ್ತುಗಳಾದ ಫಾಸ್ಫರಸ್, ಪೊಟ್ಯಾಶಿಯಂ ದರಗಳ ಏರಿಕೆಯಾಗಿದೆ. ಸಾಗಣೆ ವೆಚ್ಚ, ಉತ್ಪಾದನಾ ವೆಚ್ಚಗಳ ಏರಿಕೆಯನ್ನು ಗಮನದಲ್ಲಿಟ್ಟುಕೊಂಡು ಏಪ್ರಿಲ್‌ನಿಂದ ಸೆಪ್ಟೆಂಬರ್ ಅವಧಿಗೆ ರಸಗೊಬ್ಬರಗಳ ಮೇಲೆ ರೂ.60,939 ಕೋಟಿ ರೂ. ಸಬ್ಸಿಡಿ ಮೊತ್ತವನ್ನು 6 ತಿಂಗಳ ಅವಧಿಗೆ ಮೀಸಲಿರಿಸಲು ಒಪ್ಪಿಗೆ ಸೂಚಿಸಲಾಗಿದೆ ಎಂದು ಸಭೆ ಬಳಿಕ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅನುರಾಗ್ ಠಾಕೂರ್ ಮಾಧ್ಯಮಗಳಿಗೆ ವಿವರ ನೀಡಿದರು.

ಡಿಎಪಿ ರಸಗೊಬ್ಬರದ ಒಂದು ಚೀಲದ ಒಟ್ಟು ಬೆಲೆ ರೂ.3,851 ಆಗಿದೆ. ಸರಕಾರ ಪ್ರತಿ ಚೀಲಕ್ಕೆ ಸಬ್ಸಿಡಿ ಮೊತ್ತವನ್ನು ರೂ.2,501 ಗೆ ಹೆಚ್ಚಳ ಮಾಡಿರುವುದರಿಂದ ರೈತರಿಗೆ ಹಾಲಿ ರೂ.1,350 ದರದಲ್ಲಿಯೇ ದೊರೆಯಲಿದೆ. ಡಿಎಪಿ ಮೇಲೆ ಪ್ರತಿ ಚೀಲಕ್ಕೆ 2020–21 ನೇ ಸಾಲಿಗೆ ರೂ.512 ಸಬ್ಸಿಡಿ

ಇದ್ದರೆ, ಇದುವರೆಗೂ ಅದು ಐದು ಪಟ್ಟು ಏರಿಕೆ ಕಂಡು, ರೂ.2,501 ಹೆಚ್ಚಳವಾಗಿದೆ ಎಂದು ಸಚಿವರು ಮಾಹಿತಿ ನೀಡಿದರು. ಸಬ್ಸಿಡಿ ದರದಲ್ಲಿ ರೈತರಿಗೆ ರಸಗೊಬ್ಬರ ದೊರೆಯಲಿರುವುದರಿಂದ ಮುಂದಿನ ಮಾಸಾಂತ್ಯಕ್ಕೆ ಮುಂಗಾರು ಚಟುವಟಿಕೆಗಳು ಚುರುಕುಗೊಳ್ಳುವ ನಿರೀಕ್ಷೆ ಇದೆ.

**820 ಕೋಟಿ ರೂ. ಹೆಚ್ಚಿನ ನೆರವು:** ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್‌ಗೆ (ಐಪಿಪಿಬಿ) ಹೆಚ್ಚಿನ ಹಣಕಾಸಿನ ನೆರವು ಒದಗಿಸುವ ಉದ್ದೇಶದೊಂದಿಗೆ 820 ಕೋಟಿ ರೂ. ಹೆಚ್ಚುವರಿ ಅನುದಾನ ನೀಡುವ ಪ್ರಸ್ತಾವಕ್ಕೂ ಸಂಪುಟ ಅಸ್ತು ಎಂದಿದೆ. ಸದ್ಯ ದೇಶದ 1.56 ಲಕ್ಷ ಅಂಚೆ ಕಚೇರಿಗಳ ಪೈಕಿ 1.3 ಲಕ್ಷ ಅಂಚೆ ಕಚೇರಿಗಳಲ್ಲಿ ಮಾತ್ರ ಪೇಮೆಂಟ್ಸ್ ಬ್ಯಾಂಕ್ ಸೇವೆ ಲಭ್ಯ ಇದೆ. ಅದನ್ನು ಉಳಿದ ಅಂಚೆ ಕಚೇರಿಗಳಿಗೂ ವಿಸ್ತರಿಸಿ, ಗ್ರಾಹಕರಿಗೆ ಉತ್ತಮ ಗುಣಮಟ್ಟದ ಸೇವೆ ಒದಗಿಸಲುಹೆಚ್ಚುವರಿ ಅನುದಾನ ಬಳಕೆಯಾಗಲಿದೆ ಎಂದು ಸರಕಾರ ತಿಳಿಸಿದೆ.

**ಕ್ಯಾಬಿನೆಟ್ನ ಇತರ ನಿರ್ಣಯಗಳು**

- 10 ರಾಜ್ಯಗಳ ನಕ್ಸಲ್ ಪೀಡಿತ ಪ್ರದೇಶಗಳಲ್ಲಿ 2ಜಿ ಮೊಬೈಲ್ ನೆಟ್ ವರ್ಕ್ ಗಳನ್ನು 4ಜಿಗೆ ವಿಸ್ತರಿಸುವ ಯೋಜನೆಗೆ ರೂ.2,426 ಕೋಟಿ ಅನುದಾನ ಒದಗಿಸಲು ಸಂಪುಟ ಒಪ್ಪಿಗೆ. ಬಿಎಸ್ಎನ್ಎಲ್ ಗೆ ಯೋಜನೆ ಹೊಣೆ.
- ವಿಜ್ಞಾನ ಮತ್ತು ಕೈಗಾರಿಕಾ ಸಂಶೋಧನಾ ಇಲಾಖೆಯ ಪ್ರತ್ಯೇಕ ಸ್ವಾಯತ್ತ ವಿಭಾಗಗಳಾಗಿರುವ ಕನ್ಸಲ್ಟೆನ್ಸಿ ಡೆವಲಪ್ಮೆಂಟ್ ಸೆಂಟರ್ (ಸಿಡಿಸಿ) ಅನ್ನು ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್ (ಸಿಎಸ್ಐಆರ್) ಜನೆ ವಿಲೀನಗೊಳಿಸವ ಪ್ರಸ್ತಾವಕ್ಕೆ ಅನುಮೋದನೆ.
- ಬೀದಿ ಬದಿ ವ್ಯಾಪಾರಿಗಳಿಗೆ ಸಾಲ ಸೌಕರ್ಯ ನೀಡುವ ಪಿಎಂ ಸ್ವನಿಧಿ ಯೋಜನೆಯನ್ನು 2024 ರವರೆಗೂ ವಿಸ್ತರಿಸಲು ಸಂಪುಟ ಸಮ್ಮತಿ. 1.2 ಕೋಟಿ ಜನರಿಗೆ ನೆರವು ಸಿಗುವ ನಿರೀಕ್ಷೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ: 28.04.2022

## 7. ಸಮಾನ ನಾಗರಿಕ ಸಂಹಿತೆ ಜಾರಿಗೆ ಕೇಂದ್ರ ಸರ್ಕಾರ ಒಲವು

ದೇಶಾದ್ಯಂತ 2024ರ ಲೋಕಸಭಾ ಚುನಾವಣೆಗೂ ಮುನ್ನ ಸಮಾನ ನಾಗರಿಕ ಸಂಹಿತೆ ಜಾರಿಗೆ ಪ್ರಧಾನಿ ನರೇಂದ್ರ ಮೋದಿ ಒಲವು ಹೊಂದಿದ್ದಾರೆ. ಉತ್ತರಾಖಂಡದಲ್ಲಿ ಸಮಾನ ನಾಗರಿಕ ಸಂಹಿತೆ ಜಾರಿ ಮಾಡುವುದಾಗಿ ಚುನಾವಣಾ ಪೂರ್ವದಲ್ಲೇ ಬಿಜೆಪಿ ಘೋಷಿಸಿತ್ತು. ಪುಷ್ಕರ್ ಸಿಂಗ್ ಧಾಮಿ ಮುಖ್ಯಮಂತ್ರಿಯಾಗಿ ಮರುಆಯ್ಕೆಯಾದ ನಂತರ ಈ ಕುರಿತು ಸಮಿತಿ ರಚನೆ ಮಾಡಿದ್ದಾರೆ. ಕೆಲ ದಿನಗಳ ಹಿಂದೆ ಉತ್ತರ ಪ್ರದೇಶ ಸರ್ಕಾರ ಕೂಡ ಸಮಾನ ನಾಗರಿಕ ಸಂಹಿತೆ ಜಾರಿಯ ಸುಳಿವು ನೀಡಿದೆ.

ಎರಡು ದಿನದ ಹಿಂದೆ ಹಿಮಾಚಲ ಪ್ರದೇಶ ಸರ್ಕಾರ ಕೂಡ ಇಂಥದ್ದೇ ಮಾತನ್ನು ಆಡಿದೆ. ಈ ವರ್ಷದ ಅಂತ್ಯಕ್ಕೆ ಹಿಮಾಚಲ ಪ್ರದೇಶದಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದೆ.

ಉತ್ತರಾಖಂಡದಲ್ಲಿ ಸಮಾನ ನಾಗರಿಕ ಸಂಹಿತೆ ಜಾರಿಯ ಪರಿಣಾಮವನ್ನು ನೋಡಿಕೊಂಡು ಈಶಾನ್ಯ ರಾಜ್ಯಗಳು ತದನಂತರ ರಾಷ್ಟ್ರವ್ಯಾಪಿ ವಿಸ್ತರಣೆ ಮಾಡುವ ಇರಾದೆಯನ್ನು ಬಿಜೆಪಿ ಇರಿಸಿಕೊಂಡಿದೆ. ಉತ್ತರಾಖಂಡದಲ್ಲಿ ಕರಡು ಮಸೂದೆ ಸಿದ್ಧವಾದ ಬಳಿಕ ರಾಷ್ಟ್ರಮಟ್ಟದಲ್ಲಿ ಸಮಾನ ನಾಗರಿಕ ಸಂಹಿತೆ ಮಸೂದೆಯನ್ನು ಸಿದ್ಧಪಡಿಸಲು ಬಿಜೆಪಿ ಬಯಸಿದೆ. ಈ ರೀತಿಯ ಆಶಯವು ಮಧ್ಯಪ್ರದೇಶದ ಭೋಪಾಲ್‌ನಲ್ಲಿ ಇತ್ತೀಚೆಗೆ ನಡೆದ ಪಕ್ಷದ ಸಭೆಯಲ್ಲಿ ವ್ಯಕ್ತವಾಗಿದೆ. ಈ ಸಭೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಷಾ ಕೂಡ ಭಾಗಿಯಾಗಿದ್ದರು.

**ನಾಲ್ಕು ದಶಕದ ಆಶ್ವಾಸನೆ:** ಬಿಜೆಪಿ ನಾಲ್ಕು ದಶಕಗಳಿಂದ ತನ್ನ ಪ್ರಣಾಳಿಕೆಯಲ್ಲಿ ಜಮ್ಮು-ಕಾಶ್ಮೀರದ ವಿಶೇಷ ಸ್ಥಾನಮಾನ ರದ್ದು, ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ ಮತ್ತು ಸಮಾನ ನಾಗರಿಕ ಸಂಹಿತೆ ಜಾರಿಯನ್ನು ಹೇಳಿಕೊಂಡು ಬಂದಿತ್ತು. ಈ ಪೈಕಿ ಜಮ್ಮು-ಕಾಶ್ಮೀರದಲ್ಲಿ 370ನೇ ವಿಧಿ ರದ್ದತಿಯನ್ನು ನರೇಂದ್ರ ಮೋದಿ ನೇತೃತ್ವದ ಸರ್ಕಾರ ಎರಡನೇ ಅವಧಿಗೆ ಆಯ್ಕೆಯಾದ ಕೆಲ ತಿಂಗಳಲ್ಲೇ ನೆರವೇರಿಸಿತ್ತು. ಸುಪ್ರೀಂಕೋರ್ಟ್ ತೀರ್ಪು ರಾಮಮಂದಿರ ಪರವಾಗಿ ಹೊರ ಬಿದ್ದ ನಂತರ ಅಯೋಧ್ಯೆಯಲ್ಲಿ ಭವ್ಯ ಮಂದಿರ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಇದು 2024ರ ಚುನಾವಣೆಗೂ ಮೊದಲು ಲೋಕಾರ್ಪಣೆ ಆಗುವ ನಿರೀಕ್ಷೆ ಇದೆ. ಹೀಗಾಗಿ ಬಿಜೆಪಿ ತನ್ನ ಪ್ರಧಾನ ಮೂರು ಆಶ್ವಾಸನೆಯಲ್ಲಿ ಕೊನೆಯದ್ದನ್ನು 2024ರ ಲೋಕಸಭಾ ಚುನಾವಣೆಗೂ ಪೂರ್ವದಲ್ಲಿ ಈಡೇರಿಸಲು ಬಯಸಿದೆ. ಈ ಮೂಲಕ ನರೇಂದ್ರ ಮೋದಿ ಸರ್ಕಾರ ಹ್ಯಾಟ್ರಿಕ್ ಆಯ್ಕೆಯ ನಿರೀಕ್ಷೆಯನ್ನು ಖಾತ್ರಿಗೊಳಿಸಿಕೊಳ್ಳಲು ಬಯಸಿದೆ. ಬಿಜೆಪಿಯ ಸೈದ್ಧಾಂತಿಕ ಮಾತೃ ಸಂಸ್ಥೆಯಾದ ರಾಷ್ಟ್ರೀಯ ಸ್ವಯಂ ಸೇವಕ ಸಂಘ, ವಿಶ್ವ ಹಿಂದು ಪರಿಷತ್‌ಗಳು ಅಯೋಧ್ಯೆ ಹೋರಾಟದ ನಂತರ ಮಥುರಾದ ಶ್ರೀಕೃಷ್ಣ ಜನ್ಮಸ್ಥಾನ ಚಳವಳಿಯನ್ನು ಕೈಗೆತ್ತಿಕೊಂಡಿದೆ. ಈ ಕುರಿತ ಕಾನೂನು ಹೋರಾಟ ಈಗಾಗಲೇ ಆರಂಭವಾಗಿದೆ. ಮುಂದಿನ ವರ್ಷಗಳಲ್ಲಿ ಕಾಶಿಯ ಜ್ಞಾನವ್ಯಾಪಿ ಮಸೀದಿ ಮತ್ತು ವಿಶ್ವನಾಥ ದೇವಾಲಯದ ವಿವಾದವನ್ನು ಕೈಗೆತ್ತಿಕೊಳ್ಳುವ ನಿರೀಕ್ಷೆ ಇದೆ. 2019ರ ಚುನಾವಣೆಯಲ್ಲಿ ಬಿಜೆಪಿಗೆ ಬಲಿಷ್ಠ ಬೆಂಬಲ ದೊರಕಿದ ನಂತರ ಪಕ್ಷ ತನ್ನ ಹಿಂದು ರಾಷ್ಟ್ರವಾದದ ಕಾರ್ಯತಂತ್ರವನ್ನು ಪ್ರಬಲವಾಗಿ ಪ್ರತಿಪಾದಿಸುತ್ತಿದೆ. ಜೊತೆಗೆ ಅಲ್ಪಸಂಖ್ಯಾತರನ್ನು ಗುರಿಯಾಗಿಟ್ಟುಕೊಂಡಿದೆ ಎಂದು ಕೆಲವು ಟೀಕಾಕಾರರು ಟಿಪ್ಪಣಿ ಮಾಡಿದ್ದಾರೆ. ಆದರೆ, ಇದನ್ನು ಸಾರಾಸಗಟಾಗಿ ತಳ್ಳಿಹಾಕಿರುವ ಉತ್ತರಾಖಂಡದ ಸಚಿವ ಧನ್ ಸಿಂಗ್ ರಾವತ್, ಸಮಾನ ನಾಗರಿಕ ಸಂಹಿತೆ ಜಾರಿಯು ಯಾವುದೇ ಒಂದು ಸಮುದಾಯವನ್ನು

ಗಮನದಲ್ಲಿ ಇಟ್ಟುಕೊಂಡಿದ್ದಲ್ಲ. ಇದರ ಜಾರಿ ಕುರಿತ ನಿಯಮದ ಚೌಕಟ್ಟನ್ನು ಜಸ್ಟೀಸ್ ನೇತೃತ್ವದ ಸಮಿತಿ ರೂಪಿಸಲಿದೆ ಎಂದಿದ್ದಾರೆ.

**ವಿವಾಹ–ಉತ್ತರದಾಯಿತ್ವದಲ್ಲಿ ಏಕರೂಪ ಕಾನೂನು:** ವಿವಾಹ, ವಿಚ್ಛೇದನ, ದತ್ತು ಸ್ವೀಕಾರ ಮತ್ತು ಉತ್ತರದಾಯಿತ್ವದಲ್ಲಿ ಧರ್ಮದ ಆಧಾರದಲ್ಲಿ ಕಾನೂನುಗಳು ಇವೆ. ಇದು ಸಮಾನತೆಯ ಆಶಯಕ್ಕೆ ವಿರುದ್ಧವಾದ ಕಾರಣ ಸಂವಿಧಾನ ನಿರ್ಮಾತೃಗಳು ಸಮಾನ ನಾಗರಿಕ ಸಂಹಿತೆ ಅಗತ್ಯವನ್ನು ಅದರ ಪೀಠಿಕೆ ಭಾಗದಲ್ಲಿ ಒತ್ತಿ ಹೇಳಿದ್ದಾರೆ. ಆದರೆ, ಏಳುವರೆ ದಶಕದಿಂದ ಯಾವ ಸರ್ಕಾರವೂ ಇದನ್ನು ಜಾರಿ ಮಾಡುವ ಧೈರ್ಯ ತೋರಿಲ್ಲ. ಇದರ ಜಾರಿಯಿಂದ ಅಲ್ಪಸಂಖ್ಯಾತ ವರ್ಗಗಳು ಬೆಂಬಲ ಕಳೆದುಕೊಳ್ಳುವ ಆತಂಕ ಪಕ್ಷಗಳಿಗೆ ಇತ್ತು.

ಆಧಾರ: ವಿಜಯವಾಣಿ, ದಿನಾಂಕ: 29.04.2022

## 8. ಜಿಎಸ್‌ಟಿ ರೂ. 1.68 ಲಕ್ಷ ಕೋಟಿ

ಸರಕು ಮತ್ತು ಸೇವಾ ತೆರಿಗೆ (ಜಿ.ಎಸ್.ಜಿ) ಇದೇ ಮೊದಲ ಬಾರಿಗೆ ರೂ.1.50 ಲಕ್ಷ ಕೋಟಿ ರೂಪಾಯಿ ದಾಟಿದ್ದು, ಏಪ್ರಿಲ್ ತಿಂಗಳಲ್ಲಿ ರೂ.1,67,540 ಕೋಟಿ ಸಂಗ್ರಹವಾಗಿದೆ. ಜಿ.ಎಸ್.ಟಿ ಜಾರಿಯಾದಾಗಿನಿಂದ (2017ರ ಜುಲೈ) ಈವರೆಗೆ ಸಂಗ್ರಹವಾದ ಅತ್ಯಧಿಕ ತೆರಿಗೆ ಇದಾಗಿದೆ. 2021–22ನೇ ಸಾಲಿನ ಕೊನೆಯ ತಿಂಗಳಲ್ಲಿ (ಮಾರ್ಚ್) ರೂ.1,42,095 ಕೋಟಿ ಸಂಗ್ರಹವಾಗಿತ್ತು. ಈ ಏಪ್ರಿಲ್‌ನಲ್ಲಿ ಇನ್ನೂ 25 ಸಾವಿರ ಕೋಟಿ ಹೆಚ್ಚು ಸಂಗ್ರಹ ಆಗಿದೆ.

2021ರ ಏಪ್ರಿಲ್‌ಗೆ ಹೋಲಿಸಿದರೆ ಈ ಸಾರಿ ಶೇ.20 ರಷ್ಟು ಅಧಿಕ ತೆರಿಗೆ ಸಂಗ್ರಹವಾಗಿದೆ. ಕಳೆದ ವರ್ಷದ ಏಪ್ರಿಲ್‌ಗೆ ಹೋಲಿಸಿದರೆ ಆಮದು ಸರಕಿನ ಮೇಲಿನ ಕರದಲ್ಲಿ ಶೇ.30 ರಷ್ಟು ಹೆಚ್ಚಳವು ಆಗಿದೆ. ದೇಶಿಯ ಸಾಗಣೆಯಲ್ಲಿ ಶೇ.17ರಷ್ಟು ಏರಿಕೆ ಕಂಡಿದೆ. ಇ–ವೇ ಬಿಲ್‌ನಲ್ಲಿ ಶೇ.13 ರಷ್ಟು ಏರಿಕೆ ಆಗಿದೆ. ಕಳೆದ ಫೆಬ್ರವರಿಯಲ್ಲಿ ಇದು ರೂ.6.80 ಕೋಟಿ ಇದ್ದರೆ, ಮಾರ್ಚ್‌ನಲ್ಲಿ 7.70 ಕೋಟಿಗೆ ಹೆಚ್ಚಳ ಕಂಡಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ.

ಕೇಂದ್ರೀಯ ಜಿಎಸ್‌ಟಿ ಬಾಬ್ತಿನಲ್ಲಿ ರೂ.33,159 ಕೋಟಿ ರಾಜ್ಯ ಜಿಎಸ್‌ಟಿಯಲ್ಲಿ ರೂ.41,793 ಕೋಟಿ ರೂಪಾಯಿ. ಏಕೀಕೃತ ಜಿಎಸ್‌ಟಿಯಲ್ಲಿ ಆಮದು ಸುಂಕ ರೂ.36.705 ಕೋಟಿ ಸೇರಿ ರೂ.81.939 ಕೋಟಿ ರೂಪಾಯಿ ಕರ ಆಕರ ಆಗಿದೆ. ಹೆಚ್ಚುವರಿ ತೆರಿಗೆಯಡಿ ಆಮದು ಸರಕಿನ ಮೇಲಿನ ಸೆಸ್ ರೂ.857 ಕೋಟಿ ಸೇರಿ ರೂ.10.649 ಕೋಟಿ ರೂಪಾಯಿ ತೆರಿಗೆ ಶೇಖರ ಆಗಿದೆ ಎಂದು ಹಣಕಾಸು ಸಚಿವಾಲಯ ಹೇಳಿದೆ.

**ಏಕದಿನ ತೆರಿಗೆಯಲ್ಲಿ ಅತ್ಯಧಿಕ ಸಂಗ್ರಹ**: ಏಪ್ರಿಲ್ 20 ರಂದು ಸಂಜೆ 4 ರಿಂದ 5ರವರೆಗೆ 88 ಸಾವಿರ ವರ್ಗಾವಣೆ ಮೂಲಕ 8 ಸಾವಿರ ಕೋಟಿ ತೆರಿಗೆ ಸಂಗ್ರಹ ಆಗಿದೆ. ಇಡೀ ದಿನದ ತೆರಿಗೆ ಸಂಗ್ರಹವು ರೂ.57.847 ಕೋಟಿ ಆಗಿದ್ದು, ರೂ.9.58 ಲಕ್ಷ ವಹಿವಾಟಿನ ಮೂಲಕ ಈ ಪಾವತಿ ನಡೆದಿರುವುದು ಏಕದಿನದ ಅತ್ಯಧಿಕ ತೆರಿಗೆ ಆಕರವೂ ಆಗಿದೆ. ಈ ಹಿಂದಿನ ಏಕದಿನದ ದಾಖಲೆ ಕೂಡ 2021ರ ಏಪ್ರಿಲ್ 20ದಂದೇ ದಾಖಲಾಗಿತ್ತು. ಅದು ರೂ.48 ಸಾವಿರ ಕೋಟಿ ಇದ್ದು, ರೂ.7.22 ಲಕ್ಷ ವರ್ಗಾವಣೆ ಮೂಲಕ ನಡೆದಿತ್ತು. ಒಂದು ತಾಸಿನ ಅತ್ಯಧಿಕ ತೆರಿಗೆ ಸಂಗ್ರಹವು 65 ಸಾವಿರ ವಹಿವಾಟಿನ ಮೂಲಕ ರೂ.6.400 ಕೋಟಿ ಆಗಿತ್ತು.

**ಕರ್ನಾಟಕದಲ್ಲಿ ಶೇ.19 ಏರಿಕೆ**: ಕರ್ನಾಟಕದಲ್ಲಿ ರೂ.11,820 ಕೋಟಿ ತೆರಿಗೆ ಸಂಗ್ರಹ ಆಗಿದ್ದು, ಹಿಂದಿನ ವರ್ಷ ಏಪ್ರಿಲ್‌ನಲ್ಲಿ ಇದು ರೂ.9,955 ಕೋಟಿ ಇತ್ತು. ಶೇ.19 ರಷ್ಟು ಹೆಚ್ಚು ತೆರಿಗೆ ಸಂಗ್ರಹ ಈ ಸಾರಿ ಆಗಿದೆ.

**ಫಾರ್ಮಾ ರಫ್ತಿನಲ್ಲಿ ಏರಿಕೆ**: ಔಷಧಗಳ ನಿರ್ಯಾತದಲ್ಲಿ ಕಳೆದ ಒಂಬತ್ತು ವರ್ಷದಲ್ಲಿ ಭಾರತ ಶೇ.103 ರಷ್ಟು ಏರಿಕೆ ಕಂಡಿದೆ. ಭಾರತೀಯ ಔಷಧ ಕಂಪನಿಗಳು ಶೇ. 55ರಷ್ಟು ಮಾರುಕಟ್ಟೆಯನ್ನು ವ್ಯಾಪಿಸಿಕೊಂಡಿವೆ. 2013–14ರಲ್ಲಿ ರೂ.90.415 ಕೋಟಿ ಇದ್ದ ಫಾರ್ಮಾ ಸರಕಿನ ರಫ್ತು 2021–22ರಲ್ಲಿ ರೂ.1,83,422 ಕೋಟಿಗೆ ಏರಿಕೆ ಕಂಡಿದೆ. ಕಳೆದ ಆರ್ಥಿಕ ಸಾಲಿನ ಔಷಧ ರಫ್ತು ಪ್ರಮಾಣ ದೇಶದ ಸಾರ್ವಕಾಲಿಕ ದಾಖಲೆಯೂ ಆಗಿದೆ. ನರೇಂದ್ರ ಮೋದಿ ಪ್ರಧಾನಿಯಾದ ನಂತರ ಭಾರತವು ವಿಶ್ವದ ಔಷಧ ತಯಾರಿಕಾ ಹಬ್ ಆಗಿದೆ ಎಂದು ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಹೇಳಿದ್ದಾರೆ.

ತೆರಿಗೆ ಸಂಗ್ರಹದಲ್ಲಿನ ಹೆಚ್ಚಳವು ದೇಶದಲ್ಲಿ ವ್ಯಾಪಾರ–ವಾಣಿಜ್ಯೋದ್ಯಮಗಳು ವೇಗವಾಗಿ ನಡೆಯುತ್ತಿರುವುದರ ಸಂಕೇತವಾಗಿದೆ. ತೆರಿಗೆ ಪದ್ಧತಿಯಲ್ಲಿನ ಪರಿಣಾಮಕಾರಿ ಸುಧಾರಣೆ,

ಕೇಂದ್ರ ಹಣಕಾಸು ಸಚಿವಾಲಯ

**ಜಿಎಸ್‌ಟಿಆರ್–3ಬಿಯಲ್ಲಿ ಏರಿಕೆ:** ಏಪ್ರಿಲ್‌ನಲ್ಲಿ ರೂ.1.06 ಕೋಟಿ (ಶೇ.84.7) ಜಿಎಸ್‌ಟಿಆರ್–3 ಬಿ ಸಲ್ಲಿಕೆ ಆಗಿದ್ದು, ಇದರಲ್ಲಿ 97 ಲಕ್ಷ ರಿಟರ್ನ್ಸ್ ಮಾರ್ಚ್ ತಿಂಗಳಿಗೆ ಸಂಬಂಧಿಸಿದ್ದಾಗಿದೆ. 2021ರ ಏಪ್ರಿಲ್‌ನಲ್ಲಿ 92 ಲಕ್ಷ (ಶೇ.78.3) ಜಿಎಸ್‌ಟಿಆರ್–3ಬಿ ಸಲ್ಲಿಕೆ ಆಗಿತ್ತು. ಜಿಎಸ್‌ಟಿಆರ್–1 ಅಡಿಯುಲ್ಲಿ 1.05 ಕೋಟಿ (ಶೇ.83.11) ಇನ್‌ವಾಯ್ಸ್‌ಗಳ ಮಾಹಿತಿ ಈ ಏಪ್ರಿಲ್‌ನಲ್ಲಿ ಸಲ್ಲಿಕೆ ಆಗಿದೆ. ಹಿಂದಿನ ವರ್ಷ ಶೇ.73.9 ಜಿಎಸ್‌ಟಿಆರ್–1 ಸಲ್ಲಿಕೆ ಆಗಿತ್ತು.

| **ಪ್ರಮುಖ ರಾಜ್ಯಗಳ ತೆರಿಗೆ ಸಂಗ್ರಹ** | | | |
|---|---|---|---|
| **ರಾಜ್ಯ** | **2022 ಏಪ್ರಿಲ್** | **2021 ಏಪ್ರಿಲ್** | **ಪ್ರಗತಿ** |
| ಮಹಾರಾಷ್ಟ್ರ | 22013 | 27495 | 25% |
| ಗುಜರಾತ್ | 9632 | 11264 | 17% |
| ಕರ್ನಾಟಕ | 9955 | 11820 | 19% |
| ಹರಿಯಾಣ | 6658 | 8197 | 23% |
| ದೆಹಲಿ | 5055 | 5871 | 16% |

ಆಧಾರ:ವಿಜಯವಾಣಿ, ದಿನಾಂಕ:02.05.2022

## 9. ರಾಷ್ಟ್ರಪತಿ ಚುನಾವಣೆ, ಪ್ರತಿಪಕ್ಷಗಳ ಬವಣೆ

ಜುಲೈನಲ್ಲಿ ನಡೆಯಲಿರುವ ರಾಷ್ಟ್ರಪತಿ ಚುನಾವಣೆಗೆ ಈಗಿನಿಂದಲೇ ಭರದ ಸಿದ್ಧತೆ ಶುರುವಾಗಿದೆ. ಗೆಲ್ಲಲೇಬೇಕೆಂದು ಪಣತೊಟ್ಟಿರುವ ಪ್ರತಿಪಕ್ಷಗಳು ಒಗ್ಗಟ್ಟಿನ ಮಂತ್ರ ಪಠಿಸಲಾರಂಭಿಸಿವೆ. ಈ ನಡುವೆಯೇ ಜಗನ್‌ಮೋಹನ್ ರೆಡ್ಡಿ ನೇತೃತ್ವದ ವೈಎಸ್‌ಆರ್ ಕಾಂಗ್ರೆಸ್ ಪಕ್ಷ ಮತ್ತು ನವೀನ್ ಪಟ್ನಾಯಕ್ ಅವರ ಬಿಜೆಡಿ ಭಿನ್ನರಾಗ ಆರಂಭಿಸಿವೆ.

ರಾಷ್ಟ್ರಪತಿ ಹುದ್ದೆ ಪ್ರತಿಷ್ಠೆಯ ಸಂಕೇತ. ಯಾವುದೇ ಬೆಲೆ ತೆತ್ತಾದರೂ ಆ ಹುದ್ದೆ ದಕ್ಕಿಸಿಕೊಳ್ಳಬೇಕೆಂದು ಎಲ್ಲಾ ಪಕ್ಷಗಳು ಕಸರತ್ತು ನಡೆಸುತ್ತವೆ. ಆದರೆ ಈಗಿರುವ ಸನ್ನಿವೇಶದಲ್ಲಿ ಆಡಳಿತಾರೂಢ ಬಿಜೆಪಿ ಪ್ರಾಬಲ್ಯವೇ ಮೇಲುಗೈ ಸಾಧಿಸಲಿದೆ. ಆದರೆ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಯನ್ನು ಸೋಲಿಸುವುದು ಅಸಾಧ್ಯ ಎಂಬಂಥಹ ಸ್ಥಿತಿಯೂ ಇಲ್ಲ. ಎನ್‌ಡಿಎ ಯೇತರ ಪಕ್ಷಗಳೆಲ್ಲವೂ ಒಗ್ಗೂಡಿದರೆ, ಎನ್‌ಡಿಎ ಯಿಂದ ಗೆಲವು ಕಸಿದುಕೊಳ್ಳಬಹುದು. ಹೀಗಾಗಿ ಕಾಂಗ್ರೆಸ್ ಸೇರಿದಂತೆ ಬಿಜೆಪಿ ವಿರೋಧಿ ಪಕ್ಷಗಳು ಸಮಾನ ಮನಸ್ಕ ಪಕ್ಷಗಳನ್ನು ಒಂದುಗೂಡಿಸುವ ಪ್ರಯತ್ನ ಆರಂಭಿಸಿವೆ.

ಆದರೆ, ಚುನಾವಣೆಗೆ ಎರಡು ತಿಂಗಳು ಇರುವಾಗಲೇ ಬಿಜೆಡಿ ಮತ್ತು ವೈಎಸ್‌ಆರ್ ಕಾಂಗ್ರೆಸ್ ತಮ್ಮ ನಿಲುವನ್ನು ಸ್ಪಷ್ಟಪಡಿಸಿವೆ. "ಯಾವುದೇ ಮೈತ್ರಿಕೂಟದ ಸಹವಾಸ ತಮಗೆ ಬೇಡ" ಎಂದು ಎರಡೂ ಪಕ್ಷಗಳು ಹೇಳಿವೆ. "ರಾಷ್ಟ್ರಪತಿ ಆಯ್ಕೆ ವಿಷಯದಲ್ಲಿ ನಾವು ಯಾರ ಪರವೂ ವಹಿಸುವುದಿಲ್ಲ. ಬಿಜೆಪಿಯೂ ಬೇಡ, ಕಾಂಗ್ರೆಸೂ ಬೇಡ. ಇಬ್ಬರಿಂದಲೂ ನಮ್ಮದು ಸಮಾನ ಅಂತರ," ಎಂದು ಹೇಳಿವೆ. ಇದರಿಂದ ಪರೋಕ್ಷವಾಗಿ ಬಿಜೆಪಿಗೆ ಬೆಂಬಲ ನೀಡಿದಂತಾಗಿದೆ. ಈ ಎರಡರಲ್ಲಿ ಒಂದು ಪಕ್ಷ ತಮ್ಮ ಪರ ನಿಂತರೂ ರಾಷ್ಟ್ರಪತಿ ಚುನಾವಣೆ ಗೆದ್ದಂತೆಯೇ ಎನ್ನುವುದು ಬಿಜೆಪಿಗೆ ಗೊತ್ತಿದೆ. ಆದ್ದರಿಂದ ಬಿಜೆಪಿ ಈಗಲೂ ತಣ್ಣಗಿದೆ. ಪ್ರತಿಪಕ್ಷಗಳು ಮಾತ್ರ ಒಗ್ಗೂಡಿಕೆಯ ಕಸರತ್ತು ನಡೆಸಿವೆ. ಕೆಲವು ಪ್ರಮುಖ ಪ್ರತಿಪಕ್ಷ ಮುಖಂಡರು ಪರಸ್ಪರ ಭೇಟಿಯಾಗಿ, ಮೊದಲ ಸುತ್ತಿನ ಮಾತುಕತೆ ಮುಗಿಸಿದ್ದಾರೆ. ಅದರಿಂದ ಯಾವುದೇ ನಿರೀಕ್ಷಿತ ಪ್ರಗತಿ ಸಾಧ್ಯವಾಗಿಲ್ಲ.

**ಸಂಘರ್ಷದ ಗೊಡವೆ ಬೇಡ**: ಲೋಕಸಭೆಯಲ್ಲಿ ಎನ್‌ಡಿಎ ಪ್ರಾಬಲ್ಯ ಎಲ್ಲರಿಗೂ ಗೊತ್ತಿದೆ. ರಾಜ್ಯಸಭೆಯಲ್ಲೂ ಸಮಬಲ ಸಾಧನೆ ಮಾಡಿದೆ. ಹೀಗಿರುವಾಗ ಎದುರಾಳಿಗಳು ಗೆಲ್ಲುವುದು ಸಾಧ್ಯ. ಎಲ್ಲಾ ರಾಜ್ಯಗಳ ವಿಧಾನಸಭೆ ಸದಸ್ಯರ ಮತವೂ ಇದರಲ್ಲಿ ಗಣನೆಗೆ ಬರುತ್ತವೆ. ಆದರೆ ಬಹುಪಾಲು ರಾಜ್ಯಗಳಲ್ಲಿ ಎನ್‌ಡಿಎ ಪ್ರಾಬಲ್ಯ ಹೊಂದಿದೆ. ಇದರಿಂದಾಗಿ ಪ್ರತಿಪಕ್ಷಗಳ ಗೆಲುವು ಕಬ್ಬಿಣದ ಕಡಲೆಯೇ ಸರಿ. ಈ ಕಟು ವಾಸ್ತವದ ಅರಿವು ಹೊಂದಿರುವ ಆಂಧ್ರದ ಜಗನ್ ಮೋಹನ್ ರೆಡ್ಡಿ ಮತ್ತು ಒಡಿಶಾದ ನವೀನ್ ಪಟ್ನಾಯಕ್, ಈಗಲೇ ಜಾಣ ನಿಲುವು ತಳೆದು ಕೇಂದ್ರದ ಜೊತೆ ಉತ್ತಮ ಸಂಬಂಧ ಉಳಿಸಿಕೊಳ್ಳುವುದು ಸೂಕ್ತ ಎಂದು ತೀರ್ಮಾನಿಸಿದ್ದಾರೆ.

**ಕಾಂಗ್ರೆಸ್ ದೌರ್ಬಲ್ಯ**: ಪ್ರತಿಪಕ್ಷಗಳು ಒಂದು ಕಡೆ ಸೇರುವ ಆಕರ್ಷಣೆ ಸದ್ಯಕ್ಕೆ ಯಾವುದೂ ಇಲ್ಲವಾಗಿದೆ. ಇತ್ತೀಚೆಗೆ ನಡೆದ ವಿಧಾನಸಭೆ ಚುನಾವಣೆಗಳಲ್ಲಿ ಧೂಳಿಪಟವಾಗಿರುವ ಕಾಂಗ್ರೆಸ್‌ಗೆ ನಾಯಕನ ಸ್ಥಾನ ತುಂಬುವ ಛಾತಿಯೂ ಇಲ್ಲ. ಪ್ರತಿಪಕ್ಷಗಳ ಬಣದಲ್ಲಿ ಈಗ ಪ್ರಾದೇಶಿಕ ಪಕ್ಷಗಳ ಪ್ರಾಬಲ್ಯವೇ ಹೆಚ್ಚಿದೆ. ಸ್ಥಳೀಯ ಮಟ್ಟದಲ್ಲಿ ಕಾಂಗ್ರೆಸ್ ವಿರುದ್ಧ ಸೆಣಸಾಡಿಯೇ ಮೇಲೆ ಬಂದಿರುವ ಪ್ರಾದೇಶಿಕ ಪಕ್ಷಗಳು, ಕಾಂಗ್ರೆಸ್ ಅನ್ನು ನಾಯಕನನ್ನಾಗಿ ಒಪ್ಪಿಕೊಳ್ಳುವುದಿಲ್ಲ. ಈ ದ್ವಂದ್ವದಿಂದಾಗಿಯೇ ಬಿಜೆಡಿ ಮತ್ತು ವೈಎಸ್‌ಆರ್ ಕಾಂಗ್ರೆಸ್ ದೂರ ಸರಿದಿವೆ. ಒಂದು ವೇಳೆ, ಅಭ್ಯರ್ಥಿಯ ನಿರ್ಧಾರ ಮನ್ನಿಸಿ ಹತ್ತಿರ ಹೋದರೂ ಈ ಪಕ್ಷಗಳು ಕಾಂಗ್ರೆಸ್ ಅನ್ನು ದೂರ ಇಡುವುದು ಖಾತ್ರಿಯಾಗಿದೆ. ಒಂದನ್ನು ಹೊಂದಿಸಿದರೆ ಇನ್ನೊಂದು ಸಿಡಿದು ಹೋಗುವ ಸಂಘರ್ಷದ ಸ್ಥಿತಿ ಪ್ರತಿಪಕ್ಷಗಳಲ್ಲಿ ಇದೆ.

**ಬುಡಕಟ್ಟು ಮಹಿಳೆಗೆ ಪಟ್ಟ**: ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರ ಅಧಿಕಾರಾವಧಿ ಜುಲೈಗೆ ಕೊನೆಗೊಳ್ಳಲಿದೆ. ಆ ಬಳಿಕವೂ ದಲಿತ ಮುಖಂಡರೊಬ್ಬರಿಗೆ ಪಟ್ಟಕಟ್ಟುವುದು ಸೂಕ್ತ ಎನ್ನುವ ಚಿಂತನೆ ಬಿಜೆಪಿ ಒಳಗಡೆ ನಡೆದಿದೆ. ಕೋವಿಂದ್ ಅವರನ್ನು ಎರಡನೇ ಅವಧಿಗೆ ಮುಂದುವರಿಸಬಹುದೇ ಎನ್ನುವ ಪ್ರಸ್ತಾಪವೂ ಇದೆ. ಈಗ ಉಪ ರಾಷ್ಟ್ರಪತಿಯಾಗಿರುವ ವೆಂಕಯ್ಯನಾಯ್ಡು ಅವರಿಗೆ ಪದೋನ್ನತಿ ಪರಿಗಣಿಸುವ ಸಾಧ್ಯತೆ ತೀರಾ ಕ್ಷೀಣ ಎಂದು ಹೇಳಲಾಗುತ್ತಿದೆ. ಸದ್ಯಕ್ಕೆ ಬುಡಕಟ್ಟು ಸಮುದಾಯದ ಇಬ್ಬರು ನಾಯಕಿಯರ ಪ್ರಸ್ತಾಪ ಜೋರಾಗಿದೆ. ಅನುಸೂಯ ಉಯಿಕೆ (ಛತ್ತೀಸ್‌ಗಡ ರಾಜ್ಯಪಾಲೆ) ಮತ್ತು ದ್ರೌಪದಿ ಮುರ್ಮು (ಜಾರ್ಖಂಡ್ ಮಾಜಿ ರಾಜ್ಯಪಾಲೆ) ಅವರು ಹೆಸರುಗಳು ಚರ್ಚೆಯಲ್ಲಿವೆ.

**ಬಿಜೆಪಿಗೆ 9 ಸಾವಿರ ಮತಗಳ ಕೊರತೆ**: ಇತ್ತೀಚೆಗೆ ನಡೆದ ಪಂಚರಾಜ್ಯಗಳ ಚುನಾವಣೆಯಲ್ಲಿ ಭರ್ಜರಿ ಪ್ರದರ್ಶನ ನೀಡಿದ ಬಿಜೆಪಿ, ಮುಂದೆ ಎದುರಾಗುವ ರಾಷ್ಟ್ರಪತಿ ಚುನಾವಣೆಯ ಕಠಿಣ ಸವಾಲನ್ನು ಸುಲಭಗೊಳಿಸಿಕೊಂಡಿದೆ. ಸದ್ಯ 17 ರಾಜ್ಯ ಮತ್ತು ಒಂದು ಕೇಂದ್ರಾಡಳಿತ ಪ್ರದೇಶದಲ್ಲಿ ಬಿಜೆಪಿ ಮೈತ್ರಿಕೂಟ ಅಧಿಕಾರದಲ್ಲಿದೆ. ಬಹುತೇಕ ಅರ್ಧದಷ್ಟು ಜನಸಂಖ್ಯೆ ಹೊಂದಿದ ರಾಜ್ಯಗಳಲ್ಲಿ ಎನ್‌ಡಿಎ ನಿರ್ಣಾಯಕ ಸ್ಥಾನದಲ್ಲಿದೆ. ಲೋಕಸಭೆ, ರಾಜ್ಯಸಭೆ ಹಾಗೂ ರಾಜ್ಯ ವಿಧಾನಸಭೆಗಳು, ಕೇಂದ್ರಾಡಳಿತ ಪ್ರದೇಶಗಳಾದ ದಿಲ್ಲಿ, ಪುದುಚೇರಿ, ಜಮ್ಮು-ಕಾಶ್ಮೀರ ವಿಧಾನಸಭೆಗಳ ಸದಸ್ಯರು ರಾಷ್ಟ್ರಪತಿ ಚುನಾವಣೆಯಲ್ಲಿ ಮತ ಚಲಾಯಿಸಬಹುದು. ಆಯಾ ರಾಜ್ಯದ ಜನಸಂಖ್ಯೆ ಆಧರಿಸಿ ಆ ರಾಜ್ಯದ ಜನಪ್ರತಿನಿಧಿಯ ಮತ ಮೌಲ್ಯ ನಿರ್ಧರಿಸಲಾಗುತ್ತದೆ. ರಾಷ್ಟ್ರಪತಿ ಚುನಾವಣೆ ಎಲೆಕ್ಟೋರಲ್ ಕಾಲೇಜ್ ಒಟ್ಟು 1,098,903 ಮತಗಳನ್ನು ಹೊಂದಿದೆ. ಈ ಪೈಕಿ 6,264 ಮತಗಳ ಮೌಲ್ಯ ಹೊಂದಿರುವ ಜಮ್ಮು-ಕಾಶ್ಮೀರ ಅಮಾನತ್ತಿಲ್ಲಿದೆ. ಆದ್ದರಿಂದ ಗೆಲುವಿಗೆ ಬೇಕಾದ ಬಹುಮತ ಸಂಖ್ಯೆ 5,46,320ಕ್ಕೆ ಇಳಿದಿದೆ. ಬಿಜೆಪಿ ಬಳಿ ಈಗ 4,65,797 ಮತಗಳ ಬಲ ಇದೆ. ಅದರ ಮಿತ್ರ ಪಕ್ಷಗಳು 71,329 ಮತಗಳನ್ನು ಹೊಂದಿದೆ. ಎರಡೂ ಸೇರಿ 5,37,126 ಮತಗಳನ್ನು ಹೊಂದಿವೆ. ಆದರೆ ಬಹುಮತಕ್ಕೆ 9,194 ಮತಗಳ ಕೊರತೆ ಬಿಜೆಪಿಗೆ ಎದುರಾಗುತ್ತದೆ. ಬಿಜೆಡಿ, ವೈಎಸ್‌ಆರ್ ಕಾಂಗ್ರೆಸ್‌ಗಳು ದೂರ ಸರಿದರೆ ಈ ಕೊರತೆಯನ್ನು ಬಿಜೆಪಿ ಸುಲಭವಾಗಿ ದಾಟಲಿದೆ.

| ಮತ ಪ್ರಮಾಣ | | | |
|---|---|---|---|
| **ಸದನ** | **ಎನ್‌ಡಿಎ** | **ಯುಪಿಎ** | **ತಟಸ್ಥ** |
| ಲೋಕಸಭೆ | 334/540 (62%) | 110/540 (20%) | 96/840 (18%) |
| ರಾಜ್ಯಸಭೆ | 108/224 (48%) | 50/224 (22%) | 66/224 (29%) |
| ವಿಧಾನಸಭೆ | 1,716/4,013 (43%) | 1,040/4,013 (26%) | 1,257/4,013 (31%) |

ಆಧಾರ:ವಿಜಯಕರ್ನಾಟಕ, ದಿನಾಂಕ:03.05.2022

## 10.ಪೌರತ್ವ ತ್ಯಜಿಸಿದ 7,50,000 ಭಾರತೀಯರು

2016 ಬಳಿಕ 7.50 ಲಕ್ಷ ಭಾರತೀಯರು ವೈಯಕ್ತಿಕ ಕಾರಣ ನೀಡಿ ಪೌರತ್ವ ತ್ಯಜಿಸಿ 106 ಅನ್ಯ ದೇಶಗಳಿಗೆ ತೆರಳಿದ್ದಾರೆ. ಇದೇ ಅವಧಿಯಲ್ಲಿ 6,000 ವಿದೇಶಿಯರು ಭಾರತದ ಪೌರತ್ವ ಸ್ವೀಕರಿಸಿದ್ದಾರೆ ಅನ್ನುವ ಮಹತ್ವದ ವಿಚಾರವನ್ನು ಕೇಂದ್ರ ಸರ್ಕಾರ ತಿಳಿಸಿದೆ. ಹೆಚ್ಚಿನವರು ವಿದೇಶದಲ್ಲಿ ಉದ್ಯೋಗ ಮಾಡುತ್ತಿರುವವರಾಗಿದ್ದು, ಇದೇ ಕಾರಣದಿಂದ ಭಾರತದ ಪೌರತ್ವ ತ್ಯಜಿಸಿದ್ದಾರೆ ಎಂದು ಹೇಳಲಾಗಿದೆ.

**ಪೌರತ್ವ ತ್ಯಜಿಸಿದ ಸಂಖ್ಯೆ ಹೆಚ್ಚಳ**: 2016-2021ರ ನಡುವೆ 7,49,765 ಭಾರತೀಯರು ಪೌರತ್ವ ತ್ಯಜಿಸಿದ್ದಾರೆ. ಇದರಲ್ಲಿ 2019ರಲ್ಲಿ ಗರಿಷ್ಠ 1.44 ಲಕ್ಷ, 2016ರಲ್ಲಿ ಎರಡನೇ ಗರಿಷ್ಠ 1.41 ಲಕ್ಷ ಭಾರತೀಯವು ಪೌರತ್ವ ತ್ಯಜಿಸಿದ್ದರು. 2020ರಲ್ಲಿ ಈ ಸಂಖ್ಯೆಯಲ್ಲಿ ಗಣನೀಯ ಕುಸಿತ ಉಂಟಾಗಿತ್ತು. ಈಗ ಅದರ ಪ್ರಮಾಣ ಮತ್ತಷ್ಟು ಹೆಚ್ಚಾಗಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ಜನ ವಿದೇಶಿ ಪೌರತ್ವ ಪಡೆದುಕೊಳ್ಳುವ ಸಾಧ್ಯತೆ ಇದೆ ಎಂದು ಅಂದಾಜಿಸಲಾಗಿದೆ.

**ಯಾವ ರಾಷ್ಟ್ರಕ್ಕೆ ಎಷ್ಟು ಜನ**: ಭಾರತದಿಂದ 2017 ರಿಂದ ಈಚೆಗೆ ಪೌರತ್ವ ತ್ಯಜಿಸಿ ಹೋದವರಲ್ಲಿ ಬಹುಪಾಲು ತೆರಳಿದ್ದು ಅಮೆರಿಕಾ, ಕೆನಡಾ, ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್‌ಗೆ ಇವರ ಪಾಲು ಶೇ.82, ಚೀನಾ, ಲಂಕಾಗೂ ತೆರಳಿದ್ದಾರೆ. ಭಾರತದಿಂದ 2017 ಮತ್ತು 2021ರ ನಡುವೆ ಭಾರತದ ಪೌರತ್ವ ತ್ಯಜಿಸಿ 2,174 ಭಾರತೀಯರು ಚೀನಾಕ್ಕೆ ತೆರಳಿದ್ದಾರೆ. ಇದೇ ಅವಧಿಯಲ್ಲಿ ಶ್ರೀಲಂಕಾಕ್ಕೆ 94 ಭಾರತೀಯರು

ಹೋಗಿದ್ದಾರೆ. ಪಾಕ್ ಪೌರತ್ವ ಪಡೆದ ಭಾರತೀಯರು 2020ರಲ್ಲಿ 7 ಮತ್ತು 2021ರಲ್ಲಿ 24 ಭಾರತೀಯರು ಪಾಕಿಸ್ತಾನದ ಪೌರತ್ವ ಪಡೆಯಲು ಭಾರತದ ಪೌರತ್ವ ತ್ಯಜಿಸಿದ್ದಾರೆ.

**ಭಾರತದ ಪೌರತ್ವ ತ್ಯಜಿಸಿ ದೇಶವಾರು ನೆಲೆಸಿದವರ ಸಂಖ್ಯೆ**

| ವರ್ಷ | ಆಸ್ಟ್ರೇಲಿಯಾ | ಇಂಗ್ಲೆಂಡ್ | ಕೆನಡಾ | ಅಮೆರಿಕ |
|---|---|---|---|---|
| 2017 | 20,699 | 19,335 | 17,372 | 50,803 |
| 2018 | 16,990 | 16,761 | 19,714 | 57,603 |
| 2019 | 21,340 | 14,309 | 25,381 | 61,663 |
| 2020 | 13,518 | 6,489 | 17,093 | 30,828 |
| 2021 | 14,416 | 9,299 | 11,869 | 55,559 |
| **ಒಟ್ಟು** | **89,933** | **66,193** | **91,429** | **2,56,476** |

**ವರ್ಷ ಪೌರತ್ವ ತ್ಯಜಿಸಿದವರ ಸಂಖ್ಯೆ**

| | | |
|---|---|---|
| 2016 | –– | 1,41,603 |
| 2017 | –– | 1,33,049 |
| 2018 | –– | 1,34,561 |
| 2019 | –– | 1,44,017 |
| 2020 | –– | 85,248 |
| 2021 | –– | 1,11,287 |

**ಭಾರತದ ಪೌರತ್ವ ಪಡೆದ ವಿದೇಶಿಯರು**

| ವರ್ಷ | | ವಿದೇಶಿಯರು |
|---|---|---|
| 2016 | – | 1,106 |
| 2017 | – | 817 |
| 2018 | – | 628 |
| 2019 | – | 928 |
| 2020 | – | 639 |
| 2021 | – | 1,773 |

ಆಧಾರ:ವಿಶ್ವವಾಣಿ, ದಿನಾಂಕ:08.05.2022

## 11. ರಾಜೀವ್ ಕುಮಾರ್ ಮುಖ್ಯ ಚುನಾವಣಾ ಆಯುಕ್ತ

ಕೇಂದ್ರ ಚುನಾವಣಾ ಆಯೋಗದ ಆಯುಕ್ತ ರಾಜೀವ್ ಕುಮಾರ್ ಅವರನ್ನು ಮುಖ್ಯ ಆಯುಕ್ತರನ್ನಾಗಿ ನೇಮಕ ಮಾಡಿದ್ದು, ಇದೇ 15ರಂದು ಅವರು ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಹಾಲಿ ಮುಖ್ಯ ಆಯುಕ್ತರಾಗಿರುವ ಸುಶೀಲ್ ಚಂದ್ರ ಅವರು ಮೇ 14ರಂದು ನಿವೃತ್ತಿಯಾಗಿಲಿದ್ದಾರೆ ಎಂದು ಕಾನೂನು ಸಚಿವಾಲಯ ತಿಳಿಸಿದೆ. ಈ ಕುರಿತ ಅಧಿಸೂಚನೆಯನ್ನು ಟ್ವಿಟರ್ ಖಾತೆಯಲ್ಲಿ ಹಂಚಿಕೊಂಡಿರುವ ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ರಾಜೀವ್‌ಗೆ ಶುಭ ಕೋರಿದ್ದಾರೆ.

ರಾಜೀವ್ ಕುಮಾರ್ ನೇತೃತ್ವದಲ್ಲಿ ರಾಷ್ಟ್ರಪತಿ, ಉಪರಾಷ್ಟ್ರಪತಿ ಚುನಾವಣೆ ಮತ್ತು 2024ರ ಲೋಕಸಭೆ ಹಾಗೂ ವಿವಿಧ ರಾಜ್ಯಗಳ ವಿಧಾನಸಭಾ ಚುನಾವಣೆಗಳು ನಡೆಯಲಿವೆ. ರಾಜೀವ್ ಕುಮಾರ್ ಅವಧಿಯು 2025ರ ಫೆಬ್ರವರಿ ಮಧ್ಯ ಭಾಗದಲ್ಲಿ ಅಂತ್ಯಗೊಳ್ಳಲಿದೆ.

ಆಧಾರ:ಪ್ರಜಾವಾಣಿ, ದಿನಾಂಕ:13.05.2022

## 12. ಮತದಾರರ ಪಟ್ಟಿಗೆ ಆಧಾರ್ ಜೋಡಣೆ, ಶೀಘ್ರವೇ ನಿಯಮ

ಮತದಾರರ ಗುರುತಿನ ಚೀಟಿಗೆ ಆಧಾರ್ ಸಂಖ್ಯೆ ಜೋಡಣೆಯ ಕುರಿತ ನಿಯಮವನ್ನು ಕೇಂದ್ರ ಸರ್ಕಾರ ಶೀಘ್ರ ಪ್ರಕಟಿಸಲಿದೆ ಎಂದು ಮುಖ್ಯ ಚುನಾವಣಾ ಆಯುಕ್ತ ಸುಶೀಲ್ ಚಂದ್ರ ಹೇಳಿದ್ದಾರೆ. ವೋಟರ್ ಐಡಿಗೆ ಆಧಾರ್ ಕಾರ್ಡ್ ಲಿಂಕ್ ಮಾಡುವುದು ಮತದಾರರಿಗೆ ಐಚ್ಛಿಕ. ಆದರೆ, ಯಾರು ಜೋಡಣೆ ಮಾಡಲು ಬಯಸುವುದಿಲ್ಲವೋ ಅಂತಹವರು ಅದಕ್ಕೆ ಪ್ರಬಲ ಕಾರಣ ನೀಡಬೇಕಾಗುತ್ತದೆ ಎಂದು ಸ್ಪಷ್ಟಪಡಿಸಿದ್ದಾರೆ. ಆಧಾರ್ ಕಾರ್ಡ್ ಇನ್ನು ದೊರಕದೆ ಇರುವುದು ಅಥವಾ ಆಧಾರ್‌ಗೆ ಅರ್ಜಿ ಸಲ್ಲಿಸಿಲ್ಲದಿರುವುದೂ ಕಾರಣ ಆಗಬಹುದು ಎಂದಿದ್ದಾರೆ.

ಮುಖ್ಯ ಚುನಾವಣಾ ಆಯುಕ್ತ (ಸಿವಿಸಿ) ಹುದ್ದೆಯಿಂದ ನಿರ್ಗಮಿಸಿರುವ ಮುನ್ನ ಸುದ್ದಿಸಂಸ್ಥೆಗೆ ಸಂದರ್ಶನ ನೀಡಿರುವ ಅವರು, ಆಧಾರ್ ಸಂಖ್ಯೆ ಜೋಡಣೆಗೆ ಸಂಬಂಧಿಸಿದ ಕರಡು ನಿಯಮಾವಳಿಯನ್ನು ನಾವು ಸರ್ಕಾರಕ್ಕೆ ಸಲ್ಲಿಸಿದ್ದೇವೆ. ಕಾನೂನು ಸಚಿವಾಲಯ ಇದನ್ನು ಪರಿಶೀಲಿಸಿ ಶೀಘ್ರದಲ್ಲೇ ಪ್ರಕಟಿಸಲಿದೆ ಎಂದಿದ್ದಾರೆ. ಚುನಾವಣಾ ಯಾದಿಗೆ ಮತದಾರರ ಆಧಾರ್ ಸಂಖ್ಯೆ ಜೋಡಣೆ ತಮ್ಮ ಅವಧಿಯಲ್ಲಿಯಾದ ಮಹತ್ತರ ಸುಧಾರಣೆ. ಈ ಪ್ರಕ್ರಿಯೆಯಿಂದ ಚುನಾವಣಾ ಪಟ್ಟಿಯು ನಕಲಿ ಮತದಾರರು, ಎರಡು ಕಡೆ ಹೆಸರಿರುವುದರಿಂದ ಮುಕ್ತವಾಗಿ ಪರಿಶುದ್ಧವಾಗಲಿದೆ ಮತ್ತು ಹೆಚ್ಚು ದೃಢವಾಗಲಿದೆ ಎಂದು ಹೇಳಿದ್ದಾರೆ. ಚುನಾವಣಾ ಪಟ್ಟಿಗೆ ಹೆಸರು ಸೇರಿಸಲು ಈ ಮೊದಲು ವರ್ಷಕ್ಕೆ ಒಂದು ಸಾರಿ (ಕಟ್ ಆಫ್ ಡೇಟ್ ಜನವರಿ 1) ಅವಕಾಶ ಇತ್ತು. ಇದನ್ನು ವರ್ಷಕ್ಕೆ ನಾಲ್ಕು ಸಾರಿ ಮಾಡಲಾಯಿತು. ಈ ಸುಧಾರಣೆ ಕಳೆದ 20 ವರ್ಷದಿಂದ ಬಾಕಿ ಉಳಿದಿತ್ತು. 18 ವರ್ಷ ತುಂಬಿದವರು ಆಧಾರ್ ಸಂಖ್ಯೆ ಮೂಲಕ ಚುನಾವಣಾ ಯಾದಿಗೆ ಸೇರ್ಪಡೆ ಆಗಬಹುದು ಎಂದು ಚಂದ್ರ ತಿಳಿಸಿದ್ದಾರೆ.

**ಏನಿದು ನಿಯಮ**: ಮತದಾರರ ಪಟ್ಟಿಗೆ ಆಧಾರ್ ಕಾರ್ಡ್ ಜೋಡಣೆ ಮಾಡುವ ಮಸೂದೆಯು ಕಳೆದ ವರ್ಷ ಚಳಿಗಾಲದ ಅಧಿವೇಶನದಲ್ಲಿ ಮಂಡನೆಯಾಯಿತು. ಇದರಿಂದ ಪ್ರಮುಖವಾಗಿ ನಾಲ್ಕು ಸುಧಾರಣೆಯನ್ನು ತರುವ ಆಶಯವನ್ನು ಸರ್ಕಾರ ವ್ಯಕ್ತಪಡಿಸಿತು. ಆಧಾರ್ ಸಂಖ್ಯೆ ಜೋಡಿಸುವುದು ಕಡ್ಡಾಯವಲ್ಲ. ಐಚ್ಛಿಕ, ಆದರೆ ಹೊಸದಾಗಿ ಮತದಾರರ ಪಟ್ಟಿ ಸೇರುವ 18 ವರ್ಷದವರು ಆಧಾರ್ ಸಂಖ್ಯೆ ನೀಡಿಯೇ ನೋಂದಣಿ ಮಾಡಿಕೊಳ್ಳಬೇಕು. ವರ್ಷದಲ್ಲಿ ಒಮ್ಮೆ ಮಾತ್ರ ಇದ್ದ ಈ ನೋಂದಣಿಯನ್ನು ನಾಲ್ಕು ಬಾರಿಗೆ ಹೆಚ್ಚಿಸಲಾಯಿತು. (ಜನವರಿ 1, ಏಪ್ರಿಲ್ 1, ಜುಲೈ 1 ಮತ್ತು ಅಕ್ಟೋಬರ್ 1ಕ್ಕೆ ಕಟ್ ಆಫ್ ಡೇಟ್). ಇದಕ್ಕೆ ಅಗತ್ಯವಾದ ತಿದ್ದುಪಡಿಯನ್ನು ಪ್ರಜಾಪ್ರತಿನಿಧಿ ಕಾಯ್ದೆಗೆ ತರುವುದಾಗಿ ಹೇಳಿತು. ಸೇನೆಯಲ್ಲಿ ಸೇವೆ ಸಲ್ಲಿಸುತ್ತಿರುವ ಪತ್ನಿಯ ಪರವಾಗಿ ಪತಿಯು ಮತದಾರರ ಪಟ್ಟಿಯಲ್ಲಿ ನೋಂದಣಿ ಮಾಡಲು ಅವಕಾಶ ಕಲ್ಪಿಸಿತು. ಯಾವುದೇ ಕಟ್ಟಡವನ್ನು ಮತಗಟ್ಟೆಯನ್ನಾಗಿ ಆಯ್ಕೆ ಮಾಡುವ ಅಧಿಕಾರವನ್ನು ಚುನಾವಣಾ ಆಯೋಗಕ್ಕೆ ನೀಡುವ ಅಂಶ ಈ ಮಸೂದೆಯಲ್ಲಿದೆ. ಸಾಮಾನ್ಯವಾಗಿ ಆಯೋಗ ಶಾಲಾ–ಕಾಲೇಜುಗಳಲ್ಲಿ ಮತಗಟ್ಟೆಯನ್ನು ತೆರೆಯುತ್ತಿದೆ.

ಆಧಾರ: ವಿಜಯವಾಣಿ, ದಿನಾಂಕ:15.05.2022

## 13. Kovind becomes first Indian president to visit Jamaica

President Ram Nath Kovind has arrived in Jamaica for a state visit, the first by any Indian President to the Caribean country, during which he will hold talks with his counterpart Governor-General Patrick Allen and Prime Minister Andrew Holness on the entire gamut of the multifaceted relationship between the two countries.

The President, accompanied by his wife Savita Kovind, arrived here on the first leg of his two-nation tour that will also take him to St.Vincent and Grenadines.

"The Presidential visit is happening in the $60^{th}$ anniversary year of the establishment of diplomatic relations between the two countries. The President was accorded a guard of honour on his arrival," the President's office said.

Mr. Kovind will address a joint sitting of the two Houses of the Jamaican Parliament, according to the Ministry of External Affairs. The President will be in Jamaica till May 18.

Courtesy: The Hindu, Dated:17.05.2022.

## 14. ಆಧಾರ್ : ನಿಲುವು ಬದಲು

ಆಧಾರ್ ಕಾರ್ಡ್‌ನ ಪ್ರತಿಯನ್ನು ಯಾವುದೇ ಸಂಸ್ಥೆಯೊಂದಿಗೆ ಹಂಚಿಕೊಳ್ಳಬೇಡಿ ಎಂದು ನೀಡಿದ್ದ ಎಚ್ಚರಿಕೆಯನ್ನು ಕೇಂದ್ರ ಸರ್ಕಾರವು ಹಿಂದಕ್ಕೆ ಪಡೆದಿದೆ. ಹೀಗೆ ಹಂಚಿಕೊಂಡರೆ ಆ ಸಂಸ್ಥೆಯು ಆಧಾರ್ ಅನ್ನು ದುರುಪಯೋಗ ಮಾಡಿಕೊಳ್ಳಬಹುದು ಎಂದು ಕೇಂದ್ರ ಸರ್ಕಾರವು ಈ ಹಿಂದೆ ನೀಡಿದ್ದ ಸೂಚನೆಯಲ್ಲಿ ಹೇಳಿತ್ತು.

ಬಳಕೆದಾರರ ಗುರುತು ಮತ್ತು ಖಾಸಗಿತನವನ್ನು ರಕ್ಷಿಸಿಕೊಳ್ಳಲು ಅಗತ್ಯವಾದ ಎಲ್ಲ ಪರಿಕರಗಳು, ಆಧಾರ್ ವ್ಯವಸ್ಥೆಯಲ್ಲಿ ಇವೆ. ಆಧಾರ್ ಬಳಕೆ ಮತ್ತು ಹಂಚಿಕೆಯ ಸಂದರ್ಭದಲ್ಲಿ 'ಸಾಮಾನ್ಯ ವಿವೇಕ' ಬಳಸಿ ಎಂದಷ್ಟೇ ಹೇಳಲಾಗಿದೆ ಎಂದು ಸರ್ಕಾರದ ಹೊಸ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಆಧಾರ್ ಪ್ರತಿಯನ್ನು ಹಂಚಿಕೊಳ್ಳಬೇಡಿ ಎಂದು ಸರ್ಕಾರ ನೀಡಿದ್ದ ಸೂಚನೆಯು ಜನರಲ್ಲಿ ಗೊಂದಲ ಮತ್ತು ದಿಗಿಲು ಮೂಡಲು ಕಾರಣವಾಗಿತ್ತು. ಹಾಗಾಗಿ ಹೊಸ ಹೇಳಿಕೆಯ ಮೂಲಕ ಭಾರತದ ವಿಶಿಷ್ಟ ಗುರುತು ಚೀಟಿ ಪ್ರಾಧಿಕಾರವು (ಯುಐಡಿಎಐ) ಈ ಸ್ಪಷ್ಟೀಕರಣ ನೀಡಿದೆ.

ಆಧಾರ್ ಸಂಖ್ಯೆಯ ಕೊನೆಯ ನಾಲ್ಕು ಅಂಕಗಳು ಮಾತ್ರ ಕಾಣುವಂತಹ ಆಧಾರ್ ಕಾರ್ಡ್‌ನ ಪ್ರತಿಯನ್ನು ಹಂಚಿಕೊಳ್ಳಿ, ಅಲ್ಲಿ ಅಂಕೆಗಳೂ ಕಾಣುವ ಆಧಾರ್ ಕಾರ್ಡ್‌ನ ಪ್ರತಿಯನ್ನು ಎಲ್ಲ ಸಂಸ್ಥೆಗಳ ಜೊತೆಗೆ ಹಂಚಿಕೊಳ್ಳಬೇಡಿ ಎಂದು ಯುಐಡಿಎಐ ಹೊರಡಿಸಿದ್ದ ಹೇಳಿಕೆಯಲ್ಲಿ ತಿಳಿಸಿತ್ತು. ಹೋಟೆಲ್ ಅಥವಾ ಸಿನಿಮಾ ಮಂದಿರದಂತಹ ಖಾಸಗಿ ಸಂಸ್ಥೆಗಳಿಗೆ ಆಧಾರ್‌ನ ಪ್ರತಿ ಪಡೆದುಕೊಳ್ಳಲು ಪರವಾನಗಿ ಇಲ್ಲ. ಹಾಗಾಗಿ ಇಂತಹ ಸಂಸ್ಥೆಗಳಿಗೆ ಆಧಾರ್ ಪ್ರತಿ ನೀಡಬಾರದು ಎಂದೂ ಹೇಳಿಕೆಯಲ್ಲಿ ತಿಳಿಸಲಾಗಿತ್ತು.

ಆಧಾರ್ ಕಾರ್ಡ್‌ನ ಪ್ರತಿಯನ್ನು ಹಂಚಿಕೊಳ್ಳುವುದು ದುರ್ಬಳಕೆಗೆ ಕಾರಣವಾಗಬಹುದು ಎಂಬ ಹೇಳಿಕೆಯು ತಪ್ಪು ಗ್ರಹಿಕೆಗೆ ಅವಕಾಶ ಮಾಡಿಕೊಡಬಹುದು ಎಂಬ ಕಾರಣಕ್ಕೆ ಆ ಸೂಚನೆಯನ್ನು ಹಿಂದಕ್ಕೆ ಪಡೆಯಲಾಗಿದೆ ಎಂದು ಯುಐಡಿಎಐ ಹೇಳಿದೆ.

ಯುಐಡಿಎಐನ ಸೂಚನೆಯು ಸಾಮಾಜಿಕ ಜಾಲತಾಣಗಳಲ್ಲಿ ಸಂಚಲನ ಮೂಡಿಸಿತ್ತು. ಮಾಧ್ಯಮ ಹೇಳಿಕೆಯ ಪ್ರತಿ ವರದಿಯ ಫೋಟೊಗಳು ವೈರಲ್ ಆಗಿದ್ದವು. ಟ್ವಿಟರ್‌ನಲ್ಲಿ ಇದು ಭಾರತದಲ್ಲಿ ಸಂಚಲನ ಮೂಡಿಸಿದ ಮೊದಲ ಹತ್ತು ವಿಚಾರಗಳಲ್ಲಿ ಒಂದಾಗಿತ್ತು.

**ಹೋರಟಗಾರರಿಂದ ಆಕ್ಷೇಪ**: ಯುಐಡಿಎಐ ನೀಡಿದ ಹೇಳಿಕೆ ಬಗ್ಗೆ ತೀವ್ರ ಟೀಕೆ ವ್ಯಕ್ತವಾಗಿದೆ. ಬಳಕೆದಾರರ ಖಾಸಗಿತನ ರಕ್ಷಣೆಯ ಬಗ್ಗೆ ಯುಐಡಿಎಐ ಬಹಳ ಹಿಂದೆಯೇ ಕ್ರಮಗಳನ್ನು ಕೈಗೊಳ್ಳಬೇಕಿತ್ತು ಮತ್ತು ಬಳಕೆದಾರರಿಗೆ ಈ ಬಗ್ಗೆ ಮಾಹಿತಿಯನ್ನು ನೀಡಬೇಕಿತ್ತು ಎಂದು ಖಾಸಗಿತನದ ಹಕ್ಕುಗಳ ಪರ ಹೋರಾಟಗಾರರು ಹೇಳಿದ್ದಾರೆ.

'ನಾನು ಸುಮಾರು ನೂರು ಹೋಟೆಲ್‌ಗಳಲ್ಲಿ ವಾಸ್ತವ್ಯ ಹೂಡಿದ್ದೇನೆ ಮತ್ತು ಎಲ್ಲರೂ ನನ್ನ ಆಧಾರ್‌ನ ಪ್ರತಿಯನ್ನು ಇರಿಸಿಕೊಂಡಿದ್ದಾರೆ. ಈಗ ಇದೇನು' ಎಂದು ವ್ಯಕ್ತಿಯೊಬ್ಬರು ಟ್ವೀಟ್ ಮಾಡಿದ್ದಾರೆ.

'ಗುರುತು ದೃಡೀಕರಣಕ್ಕೆ ನೀವು ಆಧಾರ್ ಅನ್ನು ಬಳಸಿದ್ದರೆ, ಅದನ್ನು ಬೇರೊಬ್ಬರು ದುರ್ಬಳಕೆ ಮಾಡಿಕೊಳ್ಳಲು ಸಾಧ್ಯವೇ ಇಲ್ಲ' ಎಂದು ಯುಐಡಿಎಐ ವೆಬ್‌ಸೈಟ್‌ನಲ್ಲಿ ಇದೆ.

ಖಾಸಗಿತನದ ಹಕ್ಕಿನ ವಿಚಾರವು 2018ರಲ್ಲಿ ಸುಪ್ರೀಂಕೋರ್ಟ್ ಮೆಟ್ಟಿಲು ಏರಿತ್ತು. ಆಧಾರ್‌ನ ಸಿಂಧುತ್ವವನ್ನು ಕೋರ್ಟ್ ಎತ್ತಿ ಹಿಡಿದಿತ್ತು. ಆದರೆ, ಖಾಸಗಿ ತನದ ರಕ್ಷಣೆಯ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದಿತ್ತು. ಎಲ್ಲ ಸೇವೆಗಳಿಗೂ ಆಧಾರ್ ಕಡ್ಡಾಯ ಮಾಡಬಾರದು ಎಂದಿತ್ತು. ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಳ್ಳಲು ಆಧಾರ್ ಕಡ್ಡಾಯಗೊಳಿಸಲು ಅವಕಾಶ ಕೊಟ್ಟಿತ್ತು.

ಆಧಾರ:ಪ್ರಜಾವಾಣಿ, ದಿನಾಂಕ:30.05.2022

## 15. ಒಂದೇ ಪೋರ್ಟಲ್‌ನಲ್ಲಿ ಸರ್ಕಾರಿ ಸಾಲ ಯೋಜನೆ ಮಾಹಿತಿ

ಸಾಲಕ್ಕೆ ಜೋಡಿಸಲಾದ (ಕ್ರೆಡಿಟ್ ಲಿಂಕ್) 12 ಸರ್ಕಾರಿ ಯೋಜನೆಗಳನ್ನು ಒಂದೇ ವೇದಿಕೆಯಡಿ ತರುವ ಜನಸಮರ್ಥ ಪೋರ್ಟಲ್‌ಗೆ ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಿದರು. ದೇಶೀಯ ಬ್ಯಾಂಕ್‌ಗಳು ಮತ್ತು ಕರೆನ್ಸಿಯನ್ನು ಅಂತರರಾಷ್ಟ್ರೀಯ ಸರಬರಾಜು ಸರಪಣಿ ಮತ್ತು ವಾಣಿಜ್ಯದ ಪ್ರಮುಖ ಭಾಗವಾಗಿ ಮಾಡಲು ಗಮನ ಹರಿಸುವುದು ಅಗತ್ಯ ಎಂದು ಅವರು ಹೇಳಿದರು. 'ಆಜಾದಿ ಕಾ ಅಮೃತ ಮಹೋತ್ಸವ್' (ಎಕೆಎಎಂ) ಭಾಗವಾಗಿ ಹಣಕಾಸು ಮತ್ತು ಕಾರ್ಪೊರೇಟ್ ಸಚಿವಾಲಯ ವಿಜ್ಞಾನ ಭವನದಲ್ಲಿ ಜೂನ್ 6 ರಿಂದ 11ರ ವರೆಗೆ ವ್ಯವಸ್ಥೆಗೊಳಿಸಿರುವ ಕಾರ್ಯಕ್ರಮವನ್ನು ಉದ್ಘಾಟಿಸಿದ ಮೋದಿ, ನಾಣ್ಯಗಳ ಹೊಸ ಸರಣಿಯನ್ನು ಬಿಡುಗಡೆ ಮಾಡಿದರು.

ಹಣಕಾಸು ಒಳಗೊಳಿಸುವಿಕೆ ಕುರಿತು ಭಾರತ ಅನೇಕ ವೇದಿಕೆಗಳನ್ನು ಅಭಿವೃದ್ಧಿಪಡಿಸಿದೆ. ಅವುಗಳ ಗರಿಷ್ಠ ಬಳಕೆಗಾಗಿ ಜನರಲ್ಲಿ ಜಾಗೃತಿ ಮೂಡಿಸುವುದು ಅಗತ್ಯ. ಈ ಹಣಕಾಸು ಒಳಗೊಳ್ಳುವಿಕೆ ಪರಿಹಾರಗಳನ್ನು ಜಾಗತಿಕವಾಗಿ ವಿಸ್ತರಿಸುವ ಪ್ರಯತ್ನ ಮಾಡಬೇಕಿದೆ ಎಂದರು.

**12 ಯೋಜನೆಗಳು**: ಜನಸಮರ್ಥ ಪೋರ್ಟಲ್‌ನಲ್ಲಿ 12 ಸರ್ಕಾರಿ ಯೋಜನೆಗಳು ಪ್ರದರ್ಶಿತವಾಗುತ್ತವೆ. ಸರ್ಕಾರಿ ಕಾರ್ಯಕ್ರಮದ ಪ್ರಯೋಜನ ಪಡೆಯಲು ಜನರು ಪದೆ ಪದೇ ಒಂದೇ ಪ್ರಶ್ನೆಯನ್ನು ಕೇಳುವ ಅಗತ್ಯವನ್ನು ಇದು ನಿವಾರಿಸುತ್ತದೆ ಎಂದು ಕೇಂದ್ರ ವಿತ್ತ ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರು ಕಾರ್ಯಕ್ರಮದಲ್ಲಿ ಹೇಳಿದರು.

**ಏನಿದು ಪೋಟಲ್**: ಜನಸಮರ್ಥ ಪೋರ್ಟಲ್ ಎಂಡ್ ಟು ಎಂಡ್ ಡೆಲಿವರಿ ವೇದಿಕೆಯಾಗಿದೆ. ಪ್ರಕ್ರಿಯೆ ಸುಗಮವಾಗುವುದರಿಂದ ಹೆಚ್ಚು ಜನರು ಸಾಲ ಪಡೆಯಲು ಮುಂದೆ ಬರಲಿದ್ದಾರೆ. ಈ ಪೋರ್ಟಲ್ ಜನರು ಕಛೇರಿಗಳಿಗೆ ಅಲೆಯುವ ಸಮಯವನ್ನು ಕಡಿಮೆ ಮಾಡುತ್ತದೆ ಹಾಗೂ ಫಲಾನುಭವಿಗಳಿಗೆ ಸುಗಮವಾಗಿ ಸಾಲ ಮಂಜೂರು ಮಾಡಲು ನೆರವಾಗುತ್ತದೆ ಎಂದು ಬ್ಯಾಂಕ್ ಆಫ್ ಇಂಡಿಯಾದ ಆಡಳಿತ ನಿರ್ದೇಶಕ ಎ.ಕೆ.ದಾಸ್ ಹೇಳಿದ್ದಾರೆ. ಮುಂದಿನ ದಿನಗಳಲ್ಲಿ ಹೆಚ್ಚೆಚ್ಚು ಯೋಜನೆಗಳನ್ನು ಈ ಪೋರ್ಟಲ್ ವ್ಯಾಪ್ತಿಗೆ ತರಬಹುದಾಗಿದೆ ಎಂದರು.

**ಜನರ ಬಳಿಗೆ ಆಡಳಿತ**: ಈ ಹಿಂದೆ ಯೋಜನೆಗಳ ಲಾಭ ಪಡೆಯಲು ಜನರು ಸರ್ಕಾರದ ಬಳಿ ಹೋಗಬೇಕಿತ್ತು. ಆದರೆ ಈಗ ಜನರು ಸಚಿವಾಲಯಗಳ ಕಂಬ ಸುತ್ತುವುದನ್ನು ಹಾಗೂ ವೆಬ್‌ಸೈಟ್‌ಗಳಿಗೆ ಭೇಟಿ ಕೊಡುವುದನ್ನು ನಿವಾರಿಸಲು ಒತ್ತು ನೀಡಲಾಗುತ್ತಿದೆ. ಜನಸಮರ್ಥ ಪೋರ್ಟಲ್ ವಿದ್ಯಾರ್ಥಿಗಳು,

ರೈತರು, ವರ್ತಕರು ಮತ್ತು ಎಂಎಸ್‌ಎಂಇ ಉದ್ಯಮಿಗಳ ಜೀವನವನ್ನು ಸುಧಾರಿಸಲಿದೆ ಹಾಗೂ ಅವರ ಕನಸನ್ನು ನನಸು ಮಾಡಲು ನೆರವಾಗಲಿದೆ ಎಂದು ಪ್ರಧಾನಿ ಹೇಳಿದರು.

**ಹೊಸ ನಾಣ್ಯ ಚಲಾವಣೆಗೆ**: ಒಂದು, ಎರಡು, ಐದು, ಹತ್ತು ಮತ್ತು ಇಪ್ಪತ್ತು ರೂ. ಮುಖಬೆಲೆಯ ನಾಣ್ಯಗಳ ವಿಶೇಷ ಸರಣಿಯನ್ನು ಸಮಾರಂಭದಲ್ಲಿ ಮೋದಿ ಬಿಡುಗಡೆ ಮಾಡಿದರು. ಈ ನಾಣ್ಯಗಳಲ್ಲಿ 'ಆಜಾದಿ ಕಾ ಅಮೃತ್ ಮಹೋತ್ಸವ್' ವಿನ್ಯಾಸವಿರುತ್ತದೆ. ಇವು ಸ್ಮಾರಕ ನಾಣ್ಯಗಳಾಗಿ ಮಾತ್ರವೇ ಉಳಿಯುವುದಿಲ್ಲ. ಸಾರ್ವಜನಿಕ ಚಲಾವಣೆಗೂ ಬರಲಿದೆ. ಈ ನಾಣ್ಯಗಳು 'ಅಮೃತ ಕಾಲ'ದ ಗುರಿಯನ್ನು ನೆನಪಿಸಲಿದ್ದು ದೇಶದ ಅಭಿವೃದ್ಧಿಗಾಗಿ ಜನರನ್ನು ಪ್ರೇರೇಪಿಸಲು ನೆರವಾಗಲಿದೆ ಎಂದು ಮೋದಿ ಅಭಿಪ್ರಾಯಪಟ್ಟಿದ್ದಾರೆ.

ಆಧಾರ:ವಿಜಯವಾಣಿ, ದಿನಾಂಕ:07.06.2022

## 16. ಜುಲೈ 18ರಂದು ರಾಷ್ಟ್ರಪತಿ ಚುನಾವಣೆ

ರಾಷ್ಟ್ರಪತಿ ಚುನಾವಣೆಗೆ ಚುನಾವಣಾ ಆಯೋಗವು ವೇಳಾಪಟ್ಟಿ ಪ್ರಕಟಿಸಿದ್ದು, ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರ ಉತ್ತರಾಧಿಕಾರಿ ಆಯ್ಕೆಗೆ ವೇದಿಕೆ ಸಿದ್ಧವಾಗಿದೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯ ಚುನಾವಣಾಧಿಕಾರಿ ರಾಜೀವ್ ಕುಮಾರ್ 'ಜುಲೈ 18ರಂದು ಮತದಾನ ನಡೆಯಲಿದೆ. ಲೋಕಸಭೆ ಹಾಗೂ ರಾಜ್ಯಸಭೆಯ ಸದಸ್ಯರು, ದೆಹಲಿ, ಪುದುಚೇರಿ ಕೇಂದ್ರಾಡಳಿತ ಪ್ರದೇಶಗಳು ಮತ್ತು ಎಲ್ಲ ರಾಜ್ಯಗಳ ವಿಧಾನಸಭೆಯ ಸದಸ್ಯರು ಸೇರಿ 4,809 ಚುನಾಯಿತ ಸದಸ್ಯರು ಮತ ಚಲಾಯಿಸಲಿದ್ದಾರೆ. ಮುಕ್ತ ಹಾಗೂ ನ್ಯಾಯಸಮ್ಮತವಾಗಿ ಚುನಾವಣೆ ನಡೆಸಲಾಗುವುದು' ಎಂದರು.

2017ರಲ್ಲಿ ನಡೆದ ರಾಷ್ಟ್ರಪತಿ ಚುನಾವಣೆಯಲ್ಲಿ ರಾಮನಾಥ ಕೋವಿಂದ್ (7,02,044 ಮತಗಳು) ವಿರೋಧ ಪಕ್ಷಗಳ ಅಭ್ಯರ್ಥಿಯಾಗಿದ್ದ ಲೋಕಸಭೆಯ ಮಾಜಿ ಸಭಾಧ್ಯಕ್ಷೆ ಮೀರಾ ಕುಮಾರ್ (3,67,314 ಮತಗಳು) ಅವರನ್ನು 3,34,730 ಮತಗಳ ಅಂತರದಿಂದ ಸೋಲಿಸಿದ್ದರು.

ಈ ಸಲದ ಚುನಾವಣೆಯಲ್ಲಿ ಸಂಸದರ ಮತ ಮೌಲ್ಯ 700, ಆದರೆ ಶಾಸಕರ ಮತ ಮೌಲ್ಯ ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿರುತ್ತದೆ. ಉದಾಹರಣೆಗೆ ಕರ್ನಾಟಕದ ಶಾಸಕರು 131 ಮತ ಮೌಲ್ಯ ಹೊಂದಿದ್ದರೆ, ಉತ್ತರ ಪ್ರದೇಶದ ಶಾಸಕರ ಮತ ಮೌಲ್ಯ 208 ಆಗಿರಲಿದೆ. ಸಿಕ್ಕಿಂನ ಶಾಸಕರ ಮತ ಮೌಲ್ಯ 7 ಆಗಿರಲಿದೆ. ಕೋವಿಡ್ ಮಾರ್ಗಸೂಚಿಗಳ ಅನ್ವಯವೇ ಚುನಾವಣಾ ಪ್ರಕ್ರಿಯೆ ನಡೆಸಲಾಗುವುದು ಎಂದು ರಾಜೀವ್ ಕುಮಾರ್ ತಿಳಿಸಿದರು. ಸಾಮಾನ್ಯವಾಗಿ ಸಂಸದರು ಪಾರ್ಲಿಮೆಂಟ್‌ನಲ್ಲಿ ಹಾಗೂ ಶಾಸಕರು ವಿಧಾನಸಭೆಗಳಲ್ಲಿ ಮತ ಚಲಾಯಿಸಲಿದ್ದಾರೆ.

ಆಧಾರ:ಪ್ರಜಾವಾಣಿ, ದಿನಾಂಕ:10.06.2022

## 17. ರಾಷ್ಟ್ರಪತಿ ಗದ್ದುಗೆ ಯಾರಿಗೆ

ದೇಶದ ಅತ್ಯುನ್ನತ ಸಾಂವಿಧಾನಿಕ ಹುದ್ದೆಯಾದ ರಾಷ್ಟ್ರಪತಿ ಸ್ಥಾನಕ್ಕೆ ಜುಲೈ 18ಕ್ಕೆ ಚುನಾವಣೆ ನಡೆಯಲಿದೆ. ಫಲಿತಾಂಶ 21ಕ್ಕೆ ಪ್ರಕಟವಾಗಲಿದೆ. ದೇಶದ 15ನೇ ರಾಷ್ಟ್ರಪತಿ ಜುಲೈ 25ಕ್ಕೆ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಎಂದು ಚುನಾವಣಾ ಆಯೋಗ ತಿಳಿಸಿದೆ. ನಾಮಪತ್ರ ಸಲ್ಲಿಕೆ ಜೂನ್ 15ರಂದು ಆರಂಭವಾಗಲಿದ್ದು, 29ಕ್ಕೆ ಕಡೆಯ ದಿನ. ಪರಿಶೀಲನೆ 30ರಂದು ನಡೆಯಲಿದ್ದು ಹಿಂಪಡೆಯಲು ಜುಲೈ 2ಕ್ಕೆ ಕೊನೆಯ ದಿನ. ರಾಜ್ಯಸಭೆಯ ಮಹಾಪ್ರಧಾನ ಕಾರ್ಯದರ್ಶಿ ಚುನಾವಣಾಧಿಕಾರಿಯಾಗಿರುತ್ತಾರೆ ಎಂದು ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಹಾಲಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರ ಐದು ವರ್ಷದ ಅವಧಿ ಜುಲೈ 24ಕ್ಕೆ ಕೊನೆಗೊಳ್ಳುವ ಹಿನ್ನೆಲೆಯಲ್ಲಿ ಚುನಾವಣೆ ಘೋಷಿಸಲಾಗಿದೆ.

**2017 ಚುನಾವಣೆ**: ಬಿಹಾರದ ರಾಜ್ಯಪಾಲರಾಗಿದ್ದ ರಾಮನಾಥ ಕೋವಿಂದರನ್ನು 2017ರಲ್ಲಿ ರಾಷ್ಟ್ರಪತಿ ಚುನಾವಣಾ ಅಭ್ಯರ್ಥಿಯನ್ನಾಗಿ ಬಿಜೆಪಿ ಆಯ್ಕೆ ಮಾಡಿತ್ತು. ಕಾಂಗ್ರೆಸ್ ಇನ್ನಿತರ ವಿರೋಧ ಪಕ್ಷಗಳು ಮಾಜಿ ಸ್ಪೀಕರ್ ಮೀರಾಕುಮಾರ್ ಅವರನ್ನು ಕಣಕ್ಕೆ ಇಳಿಸಿದ್ದರು. ಜುಲೈ 17ರಂದು ನಡೆದ ಚುನಾವಣೆಯಲ್ಲಿ 65.65ರಷ್ಟು ಮತದಾನ ಆಗಿತ್ತು. 7,02,044 ಎಲೆಕ್ಟೊರಲ್ ಕಾಲೇಜ್ ಮತ ಮೌಲ್ಯ ಇತ್ತು. ಜುಲೈ 20ಕ್ಕೆ ಫಲಿತಾಂಶ ಪ್ರಕಟವಾಗಿ ಕೋವಿಂದ್ ಅವರು 3.34 ಲಕ್ಷಕ್ಕೂ ಹೆಚ್ಚು ಮತಗಳ ಅಂತರದಿಂದ ಜಯಶಾಲಿಗಳಾದರು. 2012ರಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಅಭ್ಯರ್ಥಿ ಪ್ರಣಬ್ ಮುಖರ್ಜಿ ಜಯಗಳಿಸಿದ್ದರು. ಎನ್‌ಡಿಎ ಬೆಂಬಲಿತ ಅಭ್ಯರ್ಥಿ ಪಿ.ಎ.ಸಂಗ್ಮಾ ಎದುರಾಳಿಯಾಗಿದ್ದರು.

**ಮತ ಮೌಲ್ಯ ಹೇಗೆ**: 4,033 ಶಾಸಕರು ಮತ್ತು 776 (ಲೋಕಸಭೆ 543, ರಾಜ್ಯಸಭೆ 233) ಸಂಸದರನ್ನು ಎಲೆಕ್ಟೊರಲ್ ಕಾಲೇಜ್ ಎಂದು ಗುರುತಿಸಲಾಗುತ್ತದೆ. ಆದರೆ, ನಾಮನಿರ್ದೇಶಿತ ಸಂಸದರು ಅಥವಾ ಶಾಸಕರಿಗೆ ಮತದಾನದ ಹಕ್ಕಿಲ್ಲ. ಪ್ರತಿ ಸಂಸದರ ಮತಮೌಲ್ಯ 700ಕ್ಕು ತುಸು ಹೆಚ್ಚಾಗಿದ್ದು, ಒಟ್ಟು ಮತ ಮೌಲ್ಯ 5,43,231. ಆದರೆ, ಪ್ರತಿ ಶಾಸಕರ ಮತವನ್ನು ಆಯಾ ರಾಜ್ಯಗಳ ಜನಸಂಖ್ಯೆಗೆ ಅನುಗುಣವಾಗಿ ವಿಂಗಡಿಸಿ ಮೌಲ್ಯ ಮಾಡಲಾಗುತ್ತದೆ. ಹೀಗಾಗಿ ರಾಜ್ಯದಿಂದ ರಾಜ್ಯಕ್ಕೆ ಇದು ಭಿನ್ನವಾಗಿರುತ್ತದೆ. ಒಟ್ಟಾರೆ ಮತಮೌಲ್ಯ 10,86,431 ಆಗಿರಲಿದೆ. ಉದಾಹರಣೆಗೆ ಉತ್ತರ ಪ್ರದೇಶದಲ್ಲಿ ಅತಿ ಹೆಚ್ಚು ಶಾಸಕರಿದ್ದು, ಅಲ್ಲಿ ಪ್ರತಿ ಮತದಾರರ ಮೌಲ್ಯ 208. ಇಡೀ ದೇಶದಲ್ಲಿ ಅಧಿಕ ಮರುಮೌಲ್ಯ ಹೊಂದಿರುವ ಎಲೆಕ್ಟೊರಲ್ ಕಾಲೇಜ್ ಉತ್ತರ ಪ್ರದೇಶದ್ದಾಗಿದೆ. ಕರ್ನಾಟಕದ ಶಾಸಕರ ಮತಮೌಲ್ಯ 131 ಆಗಿದೆ.

**ರಾಷ್ಟ್ರಪತಿ ಚುನಾವಣೆ ಹೇಗೆ:** ಭಾರತದಲ್ಲಿ ರಾಷ್ಟ್ರಪತಿ ಚುನಾವಣೆ ಪರೋಕ್ಷ ಪದ್ಧತಿಯದ್ದಾಗಿದೆ. ಅಂದರೆ ಸಂಸತ್‌ನಲ್ಲಿ ಉಭಯ ಸದನ ಮತ್ತು ರಾಜ್ಯಗಳ ವಿಧಾನಸಭೆಗಳ ಸದಸ್ಯರು ರಾಷ್ಟ್ರಪತಿ ಚುನಾವಣೆಗೆ ಮತದಾರರಾಗಿರುತ್ತಾರೆ. ವಿಧಾನಸಭೆಯನ್ನು ಹೊಂದಿರುವ ದೆಹಲಿ ಮತ್ತು ಪುದುಚೇರಿಗಳ ಶಾಸಕರಿಗೂ ಮತದಾನದ ಹಕ್ಕಿದೆ. ಜಮ್ಮು–ಕಾಶ್ಮೀರದಲ್ಲಿ ರಾಷ್ಟ್ರಪತಿ ಆಡಳಿತ ಇರುವ ಕಾರಣ ಈ ಸಾರಿ ಸಂಸದರ ಮತಮೌಲ್ಯವು 708 ರಿಂದ 700ಕ್ಕೆ ಇಳಿಕೆ ಆಗಿದೆ. ಸಾಮಾನ್ಯ ಚುನಾವಣೆಯಂತೆ ಅತಿ ಹೆಚ್ಚು ಮತಪಡೆದವರು ಜಯಶಾಲಿ ಎಂಬ ನಿಯಮ ರಾಷ್ಟ್ರಪತಿ ಚುನಾವಣೆಗೆ ಅನ್ವಯ ಆಗುವುದಿಲ್ಲ. ಚಲಾವಣೆಯಾದ ಒಟ್ಟು ಮತಗಳಲ್ಲಿ ಶೇ.50ಕ್ಕಿಂತ ಹೆಚ್ಚು ಮತವನ್ನು ಗಳಿಸಿದ ಅಭ್ಯರ್ಥಿ ವಿಜಯಿ ಆಗುತ್ತಾರೆ. ಮತದಾರರು ಕೂಡ ಪ್ರಾಶಸ್ತ್ಯದ ಮತದಂತೆ ಮತ ಪತ್ರದ ಮೂಲಕ ಮತದಾನ ಮಾಡುತ್ತಾರೆ.

**ಚುನಾವಣೆಗೆ ಸ್ಪರ್ಧಿಸಲು ಅರ್ಹತೆ ಏನು**: ರಾಷ್ಟ್ರಪತಿ ಚುನಾವಣೆಯಲ್ಲಿ ಸ್ಪರ್ಧಿಸಲು ಕನಿಷ್ಠ 35 ವರ್ಷ ವಯಸ್ಸಾಗಿರಬೇಕು. ಲಾಭದಾಯಕ ಸರ್ಕಾರಿ ಹುದ್ದೆಯಲ್ಲಿ ಇರಬಾರದು. ಎಲೆಕ್ಟೊರಲ್ ಕಾಲೇಜಿನ ಕನಿಷ್ಠ 50 ಮಂದಿ ಸೂಚಕರು, 50 ಅನುಮೋದಿತರ ಬೆಂಬಲ ಇರಬೇಕು. 15 ಸಾವಿರ ಠೇವಣಿ ಇರಿಸಬೇಕು. ಸಂಸತ್ ಭವನ ಮತ್ತು ರಾಜ್ಯಗಳ ವಿಧಾನಸಭೆಗಳು ಮತ ಕೇಂದ್ರಗಳಾಗಿರುತ್ತವೆ. ಸಂಸದರು ಸಂಸತ್ ಭವನ ಅಥವಾ ತಾವು ಪ್ರತಿನಿಧಿಸುವ ರಾಜ್ಯದ ವಿಧಾನಸಭೆಯಲ್ಲಿ ಮತದಾನ ಮಾಡಬಹುದು. ಆದರೆ, ಎಲ್ಲಿ ಮತದಾನ ಮಾಡಲು ಬಯಸುತ್ತಾರೆ ಎಂಬುದನ್ನು ಚುನಾವಣಾ ದಿನಾಂಕಕ್ಕೆ 10 ದಿನ ಮೊದಲು ಚುನಾವಣಾ ಆಯೋಗಕ್ಕೆ ತಿಳಿಸಬೇಕು.

**ರಾಜಕೀಯ ಲೆಕ್ಕಾಚಾರ**: ರಾಜಸ್ಥಾನ, ಛತ್ತೀಸ್‌ಗಡ ಮತ್ತು ತಮಿಳುನಾಡು ರಾಜ್ಯಗಳು ಈ ಸಾರಿ ಚುನಾವಣೆಯಲ್ಲಿ ಮಹತ್ವದ ಪಾತ್ರ ವಹಿಸಲಿವೆ. 2017ರಲ್ಲಿ ರಾಜಸ್ಥಾನ ಮತ್ತು ಛತ್ತೀಸ್‌ಗಡದಲ್ಲಿ ಬಿಜೆಪಿ ಸರ್ಕಾರ ಇತ್ತು. ತಮಿಳುನಾಡಿನಲ್ಲಿ ಎನ್‌ಡಿಎ ಮಿತ್ರಪಕ್ಷವಾದ ಎಐಎಡಿಎಂಕೆ ಸರ್ಕಾರ ಇತ್ತು. ಆದರೆ, ಈ ಸಾರಿ ಮೊದಲೆರಡು ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದ್ದರೆ, ತಮಿಳುನಾಡಿನಲ್ಲಿ ಡಿಎಂಕೆ ಸರ್ಕಾರ ಇದೆ. ಒಡಿಶಾ, ಪಶ್ಚಿಮ ಬಂಗಾಳ, ಕೇರಳದಲ್ಲಿ ಬದಲಾವಣೆ ಆಗಿಲ್ಲ. ಪಂಜಾಬ್‌ನಲ್ಲಿ ಕಾಂಗ್ರೆಸ್ ಬದಲು ಆಮ್‌ಆದ್ಮಿ ಪಕ್ಷ ಅಧಿಕಾರದಲ್ಲಿ ಇದೆ. ಕರ್ನಾಟಕದಲ್ಲಿ ಕಾಂಗ್ರೆಸ್ ಬದಲು ಬಿಜೆಪಿ ಸರ್ಕಾರ ಇದೆ.

| ರಾಜ್ಯ | ಶಾಸಕರ ಸಂಖ್ಯೆ | ಪ್ರತಿ ಶಾಸಕರ ಮತಮೌಲ್ಯ | ಒಟ್ಟು ಶಾಸಕರ ಮತಮೌಲ್ಯ |
|---|---|---|---|
| ಆಂಧ್ರ ಪ್ರದೇಶ | 175 | 159 | 27,825 |
| ಅರುಣಾಚಲ ಪ್ರದೇಶ | 60 | 08 | 480 |
| ಅಸ್ಸಾಂ | 126 | 116 | 14,616 |
| ಬಿಹಾರ | 243 | 173 | 42,039 |
| ಛತ್ತೀಸ್‌ಗಢ | 90 | 129 | 11,610 |
| ಗೋವಾ | 40 | 20 | 800 |
| ಗುಜರಾತ್ | 182 | 147 | 26,754 |
| ಹರಿಯಾಣ | 90 | 112 | 10,080 |
| ಹಿಮಾಚಲ ಪ್ರದೇಶ | 68 | 51 | 3,468 |
| ಜಾರ್ಖಂಡ್ | 81 | 176 | 14,256 |
| ಕರ್ನಾಟಕ | 224 | 131 | 29,344 |
| ಕೇರಳ | 140 | 152 | 21,280 |
| ಮಧ್ಯಪ್ರದೇಶ | 230 | 131 | 30,120 |
| ಮಹಾರಾಷ್ಟ್ರ | 288 | 175 | 50,400 |
| ಮಣಿಪುರ | 60 | 18 | 1,080 |
| ಮೇಘಾಲಯ | 60 | 17 | 1,020 |
| ಮಿಜೋರಾಂ | 40 | 08 | 320 |
| ನಾಗಲ್ಯಾಂಡ್ | 60 | 09 | 540 |
| ಒಡಿಶಾ | 147 | 149 | 21,903 |
| ಪಂಜಾಬ್ | 117 | 116 | 13,572 |
| ರಾಜಾಸ್ಥಾನ | 200 | 129 | 25,800 |
| ಸಿಕ್ಕಿಂ | 32 | 07 | 224 |
| ತಮಿಳುನಾಡು | 234 | 176 | 41,184 |
| ತೆಲಂಗಾಣ | 119 | 132 | 15,708 |
| ತ್ರಿಪುರಾ | 60 | 26 | 1,560 |
| ಉತ್ತರಾಖಂಡ | 70 | 64 | 4,480 |
| ಉತ್ತರ ಪ್ರದೇಶ | 403 | 208 | 83,824 |
| ಪಶ್ಚಿಮ ಬಂಗಾಳ | 294 | 151 | 44,398 |
| ದೆಹಲಿ | 70 | 58 | 4,060 |
| ಪುದುಚೇರಿ | 30 | 16 | 480 |

ಆಧಾರ:ವಿಜಯವಾಣಿ, ದಿನಾಂಕ:10.06.2022

## 18. Presidential polls: special cell set up

With the nomination process for the presidential election set to begin on the Rajya Sabha Secretariat has set up a special cell for the poll.

Rajya Sabha Secretary General P.C. Mody has been appointed Returning Officer for the July 18 presidential election. He well also head this cell.

The cell, which has been set up following the instructions of the Election Commission, compromises almost all officials from the Rajya Sabha Secretariat's table office.

Officer on Special Duty Mukul Pande and Joint Secretary in the Rajya Sabha Secretariat Surendra Kumar Tripathi – both assistant returning officers for the election – are also part of this cell.

Since nomination papers would only be available at Parliament House, the cell will ensure hassle-free process for those asking for the forms, and filing their nominations. The election will be held across the country, but counting will take place in Parliament.

Courtesy:-The Hindu, Dated: 15.06.2022

## 20. ಭೂಸೇನೆ ಅಧಿಸೂಚನೆ

ರಕ್ಷಣಾ ಪಡೆಗಳಲ್ಲಿ ಅಲ್ಪಾವಧಿ ಕರ್ತವ್ಯದ ನೇಮಕಾತಿ ಯೋಜನೆ ಅಗ್ನಿಪಥ ಅಡಿಯಲ್ಲಿ ನೇಮಕಕ್ಕಾಗಿ ಭೂಸೇನೆಯು ಅಧಿಸೂಚನೆ ಹೊರಡಿಸಿದೆ. ಅಭ್ಯರ್ಥಿಗಳ ಆನ್‌ಲೈನ್ ನೋಂದಣಿಯು ಜುಲೈಯಲ್ಲಿ ಆರಂಭವಾಗಲಿದೆ. ಆನ್‌ಲೈನ್ ನೋಂದಣೆಯನ್ನು ಕಡ್ಡಾಯ ಮಾಡಲಾಗಿದೆ.

ಅಗ್ನಿಪಥ ಯೋಜನೆ ಅಡಿಯಲ್ಲಿ ನೇಮಕಗೊಳ್ಳುವ ಅಗ್ನಿವೀರರಿಗೂ ಭೂ ಸೇನೆಯಲ್ಲಿ ಭಿನ್ನವಾದ ಶ್ರೇಣಿ ನೀಡಲಾಗುವುದು. ಈಗ ಇರುವ ಯಾವುದೇ ಶ್ರೇಣಿ ಅವರಿಗೆ ಅನ್ವಯ ಆಗುವುದಿಲ್ಲ.

ಅಭ್ಯರ್ಥಿಗಳು ಸಾಮಾನ್ಯ ಪ್ರವೇಶ ಪರೀಕ್ಷೆ ಬರೆಯಬೇಕಾಗುತ್ತದೆ. ಸೇನೆಯಲ್ಲಿ ಇರುವವರ ಮಕ್ಕಳು, ಮಾಜಿ ಸೈನಿಕರ ಮಕ್ಕಳು ಯುದ್ಧದಲ್ಲಿ ಗಂಡನನ್ನು ಕಳೆದುಕೊಂಡ ವಿಧವೆಯರ ಮಕ್ಕಳು, ಮಾಜಿ ಸೈನಿಕರ ವಿಧವೆಯರ ಮಕ್ಕಳಿಗೆ ಈ ಪರೀಕ್ಷೆಯಲ್ಲಿ 20 ಕೃಪಾಂಕ ನೀಡಲಾಗುವುದು. ಎನ್‌ಸಿಸಿಯ **ಎ ಮತ್ತು ಬಿ** ಪ್ರಮಾಣಪತ್ರ ಹೊಂದಿರುವವರಿಗೂ ಕೃಪಾಂಕ ದೊರೆಯಲಿದೆ.

ಅತ್ಯಂತ ಅಸಾಧಾರಣ ಪ್ರಕರಣಗಳಲ್ಲಿ ಮಾತ್ರ ಸಂಬಂಧಪಟ್ಟ ಪ್ರಾಧಿಕಾರದ ಅನುಮತಿಯೊಂದಿಗೆ ಸೇನೆಯನ್ನು ಅಗ್ನಿವೀರರು ಬಿಟ್ಟು ಹೋಗಲು ಅವಕಾಶ ಇದೆ.

ನಾಲ್ಕು ವರ್ಷಗಳ ಅವಧಿ ಪೂರ್ಣಗೊಂಡ ಬಳಿಕ ತಮ್ಮನ್ನು ಸೇನೆಗೆ ಸೇರಿಸಿಕೊಳ್ಳಲೇಬೇಕು ಎಂಬ ಬೇಡಿಕೆ ಮುಂದಿರಿಸುವ ಹಕ್ಕು ಅಗ್ನಿವೀರರಿಗೆ ಇಲ್ಲ. 18 ವರ್ಷದೊಳಗಿನ ಅಭ್ಯರ್ಥಿಗಳ ಅರ್ಜಿಗೆ ಹೆತ್ತವರು ಅಥವಾ ಪೋಷಕರ ಸಹಿ ಕಡ್ಡಾಯೆಂದು ಅಧಿಸೂಚನೆಯಲ್ಲಿ ಹೇಳಲಾಗಿದೆ.

**ಕಿಸಾನ್ ಮೋರ್ಚಾ ಪ್ರತಿಭಟನೆ 24 ರಂದು**: ಕೇಂದ್ರದ ಕೃಷಿ ಕಾಯ್ದೆಗಳ ವಿರುದ್ಧ ಭಾರಿ ಪ್ರತಿಭಟನೆ ಸಂಘಟಿಸಿದ್ದ ಸಂಯುಕ್ತ ಕಿಸಾನ್ ಮೋರ್ಚಾವು (ಎಸ್‌ಕೆಎಂ) ಆಗ್ನಿಪಥ ಯೋಜನೆಯ ವಿರುದ್ಧ ಇದೇ 24 ರಂದು ಪ್ರತಿಭಟನೆ ನಡೆಸಲಿದೆ. ಪ್ರತಿಭಟನೆಯಲ್ಲಿ ಯುವಜನರು, ರಾಜಕೀಯ ಪಕ್ಷಗಳ ಮುಖಂಡರು ಮತ್ತು ಕಾರ್ಯಕರ್ತರು ದೊಡ್ಡ ಸಂಖ್ಯೆಯಲ್ಲಿ ಭಾಗಿಯಾಗಬೇಕು ಎಂದು ಕೋರಲಾಗಿದೆ. ಪ್ರತಿಭಟನೆಯು ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ನಡೆಯಲಿದೆ. ಅಗ್ನಿಪಥ ಯೋಜನೆಯ ವಿರುದ್ಧ ಇದೇ 30 ರಂದು

ಪ್ರತಿಭಟನೆ ನಡೆಸಲು ಭಾರತೀಯ ಕಿಸಾನ್ ಯೂನಿಯನ್ ನಿರ್ಧರಿಸಿತ್ತು. ಆ ಪ್ರತಿಭಟನೆ ಕೂಡ 24 ರಂದೇ ನಡೆಯಲಿದೆ.

**600ಕ್ಕೂ ಹೆಚ್ಚು ರೈಲು ರದ್ದು**: **'ಅಗ್ನಿಪಥ'** ವಿರುದ್ಧದ ಪ್ರತಿಭಟನೆ ಕಾರಣದಿಂದ 612 ರೈಲುಗಳ ಸಂಚಾರವನ್ನು ರೈಲ್ವೆ ಇಲಾಖೆಯು ರದ್ದುಪಡಿಸಿದೆ. ಅದರಲ್ಲಿ 223 ಎಕ್ಸ್‌ಪ್ರೆಸ್ ರೈಲುಗಳು ಮತ್ತು 379 ಪ್ಯಾಸೆಂಜರ್ ರೈಲುಗಳು ಸೇರಿವೆ. ನಾಲ್ಕು ಎಕ್ಸ್‌ಪ್ರೆಸ್ ರೈಲುಗಳನ್ನು ಭಾಗಶ: ರದ್ದುಪಡಿಸಲಾಗಿದೆ. ಬಿಹಾರ, ಜಾರ್ಖಂಡ್, ಉತ್ತರ ಪ್ರದೇಶ ಮತ್ತು ಹರಿಯಾಣದಲ್ಲಿ ಪ್ರತಿಭಟನೆ ಆರಂಭಗೊಂಡ ಬಳಿಕ ಅಂದರೆ, ಇದೇ 15 ರಿಂದಲೇ ರೈಲು ಸಂಚಾರ ವ್ಯತ್ಯಯವಾಗಿದೆ. ಕಳೆದ ನಾಲ್ಕು ದಿನಗಳಿಗೆ ಹೋಲಿಸಿದರೆ ಪ್ರತಿಭಟನೆಯ ಬಿರುಸು ಅಲ್ಪ ಕಡಿಮೆಯಾಗಿತ್ತು. ಆದರೆ, ಮುನ್ನೆಚ್ಚರಿಕೆ ಕ್ರಮವಾಗಿ ರೈಲುಗಳ ಸಂಚಾರ ರದ್ದುಪಡಿಸಲಾಗಿತ್ತು.

ಆಧಾರ:ಪ್ರಜಾವಾಣಿ, ದಿನಾಂಕ:21.06.2022

## 20. ರೂ.20 ಸಾವಿರ ಕೋಟಿ ಯೋಜನೆಗೆ ಚಾಲನೆ

ಜಮ್ಮು-ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ರದ್ದುಪಡಿಸಿದ ನಂತರ ಇದೇ ಮೊದಲ ಬಾರಿಗೆ ಕಣಿವೆ ರಾಜ್ಯಕ್ಕೆ ಭೇಟಿ ನೀಡಿದ ಪ್ರಧಾನಿ ನರೇಂದ್ರ ಮೋದಿ ಅವರು ರೂ.20,000 ಕೋಟಿ ಮೊತ್ತದ ವಿವಿಧ ಯೋಜನೆಗಳಿಗೆ ಚಾಲನೆ ನೀಡಿದರು.

ಈ ಬಳಿಕ ಜಮ್ಮುವಿನ ಪಲ್ಲಿಯಲ್ಲಿ ನಡೆದ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು ಜಮ್ಮು ಕಾಶ್ಮೀರದಲ್ಲೀಗ ತಳಹಂತದಲ್ಲಿಯೇ ಪ್ರಜಾಪ್ರಭುತ್ವವು ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದರು.

**ಕಷ್ಟಗಳನ್ನು ಅನುಭವಿಸಬೇಕಿಲ್ಲ:** ನಾನು ಕಾಶ್ಮೀರ ಯುವಕರಿಗೆ ಹೇಳಲು ಬಯಸುತ್ತೇನೆ. ನಿಮ್ಮ ಪೋಷಕರು ಹಾಗೂ ಅಜ್ಜಅಜ್ಜಿಯಂದಿರು ಅನುಭವಿಸಿದ ಕಷ್ಟಗಳನ್ನು ನೀವು ಅನುಭವಿಸಬೇಕಿಲ್ಲ. ನಾವು ಇದನ್ನು ನಿಮಗೆ ಖಚಿತಪಡಿಸುತ್ತೇವೆ ಎಂದು ಪ್ರಧಾನಿ ಭರವಸೆ ನೀಡಿದರು. ಈ ಬಾರಿ ಪಂಚಾಯತ್ ರಾಜ್ ದಿನವನ್ನು ಜಮ್ಮು ಮತ್ತು ಕಾಶ್ಮೀರದಲ್ಲಿ ಆಚರಿಸಲಾಗುತ್ತಿದೆ. ಇದು ದೊಡ್ಡ ಬದಲಾವಣೆಯನ್ನು ಸೂಚಿಸುತ್ತದೆ. ಇಲ್ಲಿ ಪ್ರಜಾಪ್ರಭುತ್ವ ತಳಹಂತದಲ್ಲಿಯೇ ಕಾರ್ಯನಿರ್ವಹಿಸುತ್ತಿದೆ ಇದು ಹೆಮ್ಮೆಯ ವಿಷಯ ಎಂದು ತಿಳಿಸಿದರು.

ಮೋದಿ ಭೇಟಿ ಹಿನ್ನೆಲೆಯಲ್ಲಿ ಜಮ್ಮು-ಕಾಶ್ಮೀರದಾದ್ಯಂತ ಭಾರಿ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿದೆ. ಉಗ್ರರು ದಾಳಿ ನಡೆಸುವ ಸಾಧ್ಯತೆ ಇರುವ ಮಾಹಿತಿಯ ಹಿನ್ನೆಲಯಲ್ಲಿ ಭದ್ರತಾ ಪಡೆಗಳು ಹೈ ಅಲರ್ಟ್ ಆಗಿ ಕೆಲಸ ನಿರ್ವಹಿಸುತ್ತಿವೆ.

**ಹೂಡಿಕೆ ಕೋಟಿಗೆ ತಲುಪಿದೆ:** ಕೇಂದ್ರಾಡಳಿತ ಪ್ರದೇಶವು ಅಭಿವೃದ್ಧಿಯ ಹೊಸ ಚರಿತ್ರೆ ಬರೆಯಲು ಸಜ್ಜಾಗಿದೆ. ಸ್ವಾತಂತ್ರ್ಯದ ನಂತರದ ಏಳು ದಶಕಗಳ ಅವಧಿಯಲ್ಲಿ ಜಮ್ಮು ಕಾಶ್ಮೀರಕ್ಕೆ ಕೇವಲ ರೂ.17,000 ಕೋಟಿಗಳ ಖಾಸಗಿ ಹೂಡಿಕೆ ಹರಿದುಬಂದಿತ್ತು. ಈಗ ಇಲ್ಲಿನ ಹೂಡಿಕೆ ಮೊತ್ತವು ರೂ.38,000 ಕೋಟಿಗೆ ತಲುಪಿದೆ ಎಂದು ಮೋದಿ ಮಾಹಿತಿ ನೀಡಿದರು.

ಆಧಾರ:ವಿಶ್ವವಾಣಿ, ದಿನಾಂಕ:25.06.2022

## 21. ವಿನಾಯ್ತಿಗೆ ಎಳ್ಳುನೀರು

ಈಗಾಗಲೇ ಬೆಲೆಯೇರಿಕೆಯಿಂದ ತತ್ತರಿಸಿರುವ ಜನಸಾಮಾನ್ಯನಿಗೆ ಜಿಎಸ್‌ಟಿ ಮಂಡಳಿ ಸಭೆಯು ಮತ್ತಷ್ಟು ಬರೆ ಹಾಕಿದೆ. ಕೆಲವೊಂದು ಉತ್ಪನ್ನಗಳು ಹಾಗೂ ಸೇವೆಗಳಿಗೆ ನೀಡಲಾಗಿದ್ದ ತೆರಿಗೆ ವಿನಾಯ್ತಿಯನ್ನು ರದ್ದು ಮಾಡಲು ಜಿಎಸ್‌ಟಿ ಮಂಡಳಿ ಒಪ್ಪಿಗೆ ಸೂಚಿಸಿದೆ. ಇದರಿಂದಾಗಿ, ಹೋಟೆಲ್ ವಾಸ್ತವ್ಯ, ಆಸ್ಪತ್ರೆಗಳ ರೂಂ ಬಾಡಿಗೆ, ಅಂಚೆ ಕಚೇರಿ ಸೇವೆಗಳು ಇನ್ನಷ್ಟು ದುಬಾರಿಯಾಗಲಿವೆ. ಇದಲ್ಲದೇ,

ಚಿನ್ನ ಹಾಗೂ ಅಮೂಲ್ಯ ಹರಳುಗಳನ್ನು ರಾಜ್ಯದೊಳಗೇ ಸಾಗಣೆ ಮಾಡಲು ಇ–ವೇ ಬಿಲ್ ಜಿಎಸ್‌ಟಿ ವಿತರಣೆಯ ಅವಕಾಶವನ್ನು ರಾಜ್ಯಗಳಿಗೆ ನೀಡಲಾಗಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ನೇತೃತ್ವದಲ್ಲಿ ಎರಡು ದಿನಗಳ 47ನೇ ಜಿಎಸ್‌ಟಿ ಮಂಡಳಿ ಸಭೆ ಆರಂಭವಾಗಿದ್ದು, ಸಚಿವರ ಸಮಿತಿಗಳು ಮಾಡಿರುವ ಮಧ್ಯಂತರ ಶಿಫಾರಸ್ಸುಗಳನ್ನು ಮೊದಲ ದಿನವೇ ಅಂಗೀಕರಿಸಲಾಗಿದೆ.

ದರ ಪರಿಷ್ಕರಣೆ, ಜಿಎಸ್‌ಟಿ ವ್ಯವಸ್ಥೆ ಸುಧಾರಣೆ ಮತ್ತು ಚಿನ್ನ ಹಾಗೂ ಅಮೂಲ್ಯ ಹರಳುಗಳ ಸಾಗಣೆಗೆ ಸಂಬಂಧಿಸಿ ಪರಿಶೀಲಿಸಲು ಮೂರು ಸಚಿವರ ಸಮಿತಿಗಳನ್ನು ರಚಿಸಲಾಗಿತ್ತು. ಈ ಪೈಕಿ ದರ ಪರಿಷ್ಕರಣೆಗೆ ಸಂಬಂಧಿಸಿ ಶಿಫಾರಸ್ಸು ಮಾಡುವ ಸಮಿತಿಗೆ ಕರ್ನಾಟಕದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವ ವಹಿಸಿದ್ದಾರೆ.

**ಶಿಫಾರಸ್ಸುಗಳಿಗೆ ಸಮ್ಮತಿ:** ಹೋಟೆಲ್ ವಾಸ್ತವ್ಯ, ಆಸ್ಪತ್ರೆ ರೂಂ ಬಾಡಿಗೆಗೆ ಇದ್ದ ತೆರಿಗೆ ವಿನಾಯ್ತಿಯನ್ನು ತೆಗೆದುಹಾಕಿ, ಈ ಸೇವೆಗಳಿಗೂ ಜಿಎಸ್‌ಟಿ ವಿಧಿಸಬೇಕು ಎಂದು ಸಚಿವರ ಸಮಿತಿ ಶಿಫಾರಸ್ಸು ಮಾಡಿತ್ತು. ಅದಕ್ಕೆ ಮಂಡಳಿ ಒಪ್ಪಿಗೆ ಸೂಚಿಸಿದೆ. ಜೊತೆಗೆ, 10 ಗ್ರಾಂಗಿಂತ ಕಡಿಮೆ ತೂಕವಿರುವ ಪೋಸ್ಟ್‌ಕಾರ್ಡ್, ಇನ್‌ಲ್ಯಾಂಡ್ ಲೆಟರ್‌ಗಳು, ಬುಕ್ ಪೋಸ್ಟ್ ಮತ್ತು ಎನ್ವಲಪ್ ಗಳನ್ನು ಹೊರತುಪಡಿಸಿ ಉಳಿದ ಎಲ್ಲ ಅಂಚೆ ಕಚೇರಿ ಸೇವೆಗಳೂ ಈಗ ಶೇ.18ರ ಜಿಎಸ್‌ಟಿ ವ್ಯಾಪ್ತಿಗೆ ಬಂದಿದೆ.

**ಇ–ವೇ ಬಿಲ್‌ಗೆ ಅನುಮತಿ:** ಚಿನ್ನ ಆಭರಣ ಮತ್ತು ಅಮೂಲ್ಯ ಹರಳುಗಳ ಕಳ್ಳಸಾಗಣೆ ತಪ್ಪಿಸುವ ನಿಟ್ಟಿನಲ್ಲಿ ಇ–ವೇ ಬಿಲ್ ವಿತರಿಸಲು ರಾಜ್ಯಗಳಿಗೆ ಜಿಎಸ್‌ಟಿ ಮಂಡಳಿ ಅನುಮತಿ ನೀಡಿದೆ. ಅದರಂತೆ, ರಾಜ್ಯದೊಳಗೇ ಇವುಗಳ ಸಾಗಣೆ ಮಾಡುವುದಿದ್ದರೆ ಎಲೆಕ್ಟ್ರಾನಿಕ್ ಬಿಲ್ ಕಡ್ಡಾಯವಾಗಲಿದೆ. ಆದರೆ, ಎಷ್ಟು ಮೊತ್ತದ ಸರಕುಗಳಿಗೆ ಈ ಬಿಲ್ ಕಡ್ಡಾಯ ಎಂಬುವುದನ್ನು ನಿರ್ಧರಿಸುವ ಅಧಿಕಾರವನ್ನು ರಾಜ್ಯಗಳಿಗೆ ನೀಡಲಾಗಿದೆ. ರೂ.2 ಲಕ್ಷ ಮತ್ತು ಅದಕ್ಕಿಂತ ಹೆಚ್ಚಿನ ಮೌಲ್ಯದ ಸರಕುಗಳಿಗೆ ಇ–ವೇ ಬಿಲ್ ಕಡ್ಡಾಯ ಹೊಲಿಸಬಹುದು ಎಂದು ಸಚಿವರ ಸಮಿತಿ ಹೇಳಿದೆ.

**ರಾಜ್ಯಗಳಿಗೆ ಪರಿಹಾರ; ಇಂದು ನಿರ್ಧಾರ**

ರಾಜ್ಯಗಳಿಗೆ ನೀಡಲಾಗುವ ಜಿಎಸ್‌ಟಿ ಪರಿಹಾರ ಮೊತ್ತದ ಅವಧಿ ವಿಸ್ತರಣೆ ಮಾಡಬೇಕು ಎಂಬ ಪ್ರಮುಖ ಕೋರಿಕೆಗೆ ಸಂಬಂಧಿಸಿದ ಚರ್ಚೆ ನಡೆಯಲಿದೆ. ಒಂದೋ ಆದಾಯ ಹಂಚಿಕೆಯ ವಿಧಾನವನ್ನು ಬದಲಿಸಬೇಕು ಅಥವಾ ರಾಜ್ಯಗಳಿಗೆ ಇನ್ನೂ 5 ವರ್ಷ ಕಾಲ ಜಿಎಸ್‌ಟಿ ಪರಿಹಾರ ಒದಗಿಸಬೇಕು ಎಂದು ಪ್ರತಿಪಕ್ಷಗಳು ಆಡಳಿತದಲ್ಲಿರುವ ರಾಜ್ಯಗಳು ಆಗ್ರಹಿಸಿವೆ. ಇದೇ ವೇಳೆ, ಕ್ಯಾಸಿನೋ, ಆನ್‌ಲೈನ್ ಗೇಮ್

ಮತ್ತು ಕುದುರೆ ರೇಸ್ ಮೇಲೆ ಶೇ.28ರಷ್ಟು ಜಿಎಸ್‌ಟಿ ವಿಧಿಸುವ ಕುರಿತ ನಿರ್ಧಾರವೂ ಹೊರಬೀಳಲಿದೆ. ಸಭೆ ಬಳಿಕ ಸಚಿವೆ ನಿರ್ಮಲಾ ಸುದ್ದಿಗೋಷ್ಠಿ ನಡೆಸಿ ಎಲ್ಲ ವಿವರಗಳನ್ನು ನೀಡಲಿದ್ದಾರೆ ಎನ್ನಲಾಗಿದೆ.

**ಯಾವುದಕ್ಕೆಲ್ಲ ವಿನಾಯ್ತಿಯಿಲ್ಲ?**

- ದಿನಕ್ಕೆ 1,000 ರೂ.ಗಳಿಗಿಂತ ಕಡಿಮೆ ಬಾಡಿಗೆಯಿರುವ ಹೋಟೆಲ್ ರೂಂಗಳಿಗೆ ಇನ್ನು ತೆರಿಗೆ ವಿನಾಯ್ತಿ ಇರುವುದಿಲ್ಲ. ಈ ಕೊಠಡಿಗಳಿಗೆ ಶೇ.12ರಷ್ಟು ತೆರಿಗೆ ಪಾವತಿಸಬೇಕು.
- ಆಸ್ಪತ್ರೆ ಕೊಠಡಿಯ (ಐಸಿಯು ಹೊರತುಪಡಿಸಿ) ಬಾಡಿಗೆ ದಿನಕ್ಕೆ ರೂ.5 ಸಾವಿರಗಿಂತ ಹೆಚ್ಚಿದ್ದರೆ ಆ ಬಾಡಿಗೆಯ ಮೇಲೆ ಶೇ.5ರಷ್ಟು ಜಿಎಸ್‌ಟಿ ಪಾವತಿಸಬೇಕು.
- ಅಂಚೆ ಕಚೇರಿಯ ಎಲ್ಲ ಸೇವೆಗಳಿಗೂ ಶೇ.18ರಷ್ಟು ಜಿಎಸ್‌ಟಿ ಪಾವತಿಸಬೇಕು.
- ಚೆಕ್‌ಗಳಿಗೆ (ಲೂಸ್ ಅಥವಾ ಬುಕ್ ಮಾದರಿಯಲ್ಲಿರುವಂಥದ್ದು) ಶೇ.18 ಜಿಎಸ್‌ಟಿ.
- ವಸತಿ ಬಳಕೆಗಾಗಿ ಉದ್ದಿಮೆಗಳು ತಮ್ಮ ವಸತಿ ಕಟ್ಟಡಗಳನ್ನು ಬಾಡಿಗೆ ನೀಡಿದ್ದರೆ, ಅದಕ್ಕೆ ಇದ್ದ ವಿನಾಯ್ತಿ ರದ್ದು.
- ಬ್ಲಡ್ ಬ್ಯಾಂಕ್‌ಗಳಿಗೆ ನೀಡಲಾಗಿದ್ದ ತೆರಿಗೆ ವಿನಾಯ್ತಿ ವಾಪಸ್.
- ದಿನಕ್ಕೆ ರೂ.5 ಸಾವಿರಗಿಂತ ಹೆಚ್ಚು ಬಾಡಿಗೆಯುಳ್ಳ ಸಾರ್ವಜನಿಕ ಧಾರ್ಮಿಕ ಕೇಂದ್ರಗಳು, ಮಾಸಿಕ ರೂ.2,500 ಕ್ಕಿಂತ ಹೆಚ್ಚು ಬಾಡಿಗೆಯಿರುವ ಮಳಿಗೆಗಳಿಗಿದ್ದ ವಿನಾಯ್ತಿಯೂ ರದ್ದು.

**ತೆರಿಗೆ ಬದಲಾವಣೆ**

- ಮುದ್ರಣ, ಬರಹ/ಚಿತ್ರಕಲೆಯ ಶಾಯಿ ಮೇಲಿನ ತೆರಿಗೆ ಶೇ.12ರಿಂದ ಶೇ.18ಕ್ಕೇರಿಕೆ.
- ಸೋಲಾರ್ ವಾಟರ್ ಹೀಟರ್ ಮೇಲಿನ ತೆರಿಗೆ ಶೇ.5ರಿಂದ 12ಕ್ಕೇರಿಕೆ.
- ಎಲ್‌ಇಡಿ ದೀಪಗಳು, ಎಲ್‌ಇಡಿ ಲ್ಯಾಂಪ್‌ಗಳ ಮೇಲಿನ ತೆರಿಗೆ ಶೇ.12ರಿಂದ ಶೇ.18ಕ್ಕೇರಿಕೆ.
- ಚರ್ಮದ ಸಿದ್ಧ ಉತ್ಪನ್ನಗಳ ಮೇಲಿನ ತೆರಿಗೆ ಶೇ.5ರಿಂದ ಶೇ.12ಕ್ಕೆ.
- ಸರ್ಕಾರಕ್ಕೆ ಒದಗಿಸಲಾದ ಗುತ್ತಿಗೆ ಕೆಲಸದ ಮೇಲಿನ ತೆರಿಗೆ ಶೇ.5ರಿಂದ 12ಕ್ಕೇರಿಕೆ.
- ಟೈಲರಿಂಗ್ ಅಥವಾ ಜವಳಿಗೆ ಸಂಬಂಧಿಸಿದ ಇತರೆ ಕೆಲಸಗಳ ಮೇಲಿನ ತೆರಿಗೆ ಶೇ.5ರಿಂದ ಶೇ.12ಕ್ಕೇರಿಕೆ.

ಆಧಾರ: ಉದಯವಾಣಿ, ದಿನಾಂಕ: 29.06.2022

# ಭಾಗ – 4

# ರಾಜ್ಯ ಸರ್ಕಾರದ ಸುದ್ದಿಗಳು

## 1. ರಾತ್ರೋರಾತ್ರಿ 10,000 ಕೋಟಿ ಬಜೆಟ್ ಮಂಡನೆ

ಬಿಬಿಎಂಪಿಯು ಆರ್ಥಿಕ ವರ್ಷದ ಅಂತ್ಯಕ್ಕೆ ಕೆಲವೇ ತಾಸುಗಳ ಮೊದಲು 2022–2023ನೇ ಸಾಲಿನ ಆಯವ್ಯಯವನ್ನು ತರಾತುರಿಯಲ್ಲಿ ಮಂಡಿಸಿ, ಆಡಳಿತಾಧಿಕಾರಿಗಳ ಅನುಮೋದನೆ ಪಡೆಯಲಾಗಿದೆ. ರೂ. 10,484.28 ಕೋಟಿ ಆದಾಯ ನಿರೀಕ್ಷಿಸಿ, ರೂ.10,480.93 ಕೋಟಿ ಗಾತ್ರದ ಬಜೆಟ್ ಮಂಡನೆ ಮಾಡಲಾಗಿದೆ.

ಪಾಲಿಕೆಯ ಇತಿಹಾಸದಲ್ಲಿ ಬಜೆಟ್ ಪ್ರತಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿ ಮಂಡಿಸಿರುವುದು ಇದೇ ಮೊದಲು. ಹಣಕಾಸು ವಿಭಾಗದ ವಿಶೇಷ ಆಯುಕ್ತರಾದ ತುಳಸಿ ಮದ್ದಿನೇನಿ ಆಯವ್ಯಯ ಮಂಡಿಸಿದ್ದು, ರಾಜ್ಯ ಮತ್ತು ಕೇಂದ್ರ ಸರಕಾರದ ಅನುದಾನದಲ್ಲಿ ಕೈಗೆತ್ತಿಕೊಳ್ಳುವ ಹೊಸ ಕಾಮಗಾರಿಗಳನ್ನು ಹೊರತುಪಡಿಸಿ, ಪಾಲಿಕೆ ಅನುದಾನದಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ನಿರೀಕ್ಷಿತ ಅನುದಾನ ಕಾಯ್ದಿರಿಸಿಲ್ಲ. ಆದರೆ, ನಿರ್ವಹಣೆಗಷ್ಟೇ ಹೆಚ್ಚಿನ ಒತ್ತು ನೀಡಿ, ಅನುದಾನ ಹಂಚಿಕೆ ಮಾಡಲಾಗಿದೆ.

ಬಿಬಿಎಂಪಿ ಅಧಿಕಾರಿಗಳು ಬಜೆಟ್‌ಗೆ ಅಂತಿಮ ರೂಪ ನೀಡಿ, ಮಾ. 30ರಂದೇ ಮಂಡಿಸಲು ತಯಾರಿ ಮಾಡಿಕೊಂಡಿದ್ದರು. ಪಾಲಿಕೆ ಅಧಿಕಾರಿಗಳು ರೂ.4544.33 ಕೋಟಿ ಕಂದಾಯ ಸ್ವೀಕೃತಿಯನ್ನು ಅಂದಾಜಿಸಿ, ರೂ. 9500 ಕೋಟಿ ಮೊತ್ತಕ್ಕೆ ಬಜೆಟ್ ಗಾತ್ರವನ್ನು ಅಂತಿಮಗೊಳಿಸಲು ನಿರ್ಧರಿಸಿದ್ದರು. ಆದರೆ, ನಗರದ ಕೆಲ ಸಚಿವರು, ಶಾಸಕರು ತಮ್ಮ ಕ್ಷೇತ್ರದ ವಾರ್ಡ್‌ಗಳಿಗೆ ಹೆಚ್ಚಿನ ಅನುದಾನ ಮೀಸಲಿಡುವಂತೆ ಒತ್ತಡ ಹೇರಿದ್ದರು. ಹೀಗಾಗಿ, ಬಜೆಟ್ ವಿಚಾರವು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅಂಗಳ ತಲುಪಿತ್ತು.

ಆಡಳಿತಾಧಿಕಾರಿ ರಾಕೇಶ್ ಸಿಂಗ್ ಮತ್ತು ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿ, ಆಯವ್ಯಯ ಕುರಿತು ಚರ್ಚಿಸಿದ್ದರು. ಈ ವೇಳೆಗೆ ಸಿಎಂ, ಕೆಲವೊಂದು ಕಾರ್ಯಕ್ರಮಗಳ ಸೇರ್ಪಡೆಗೆ ಸೂಚಿಸಿದ್ದರು. ಅದರಂತೆ ಅಧಿಕಾರಿಗಳು ಆಯವ್ಯಯ ಸಿದ್ಧಪಡಿಸಿ, ತರಾತುರಿಯಲ್ಲಿ ಆಡಳಿತಾಧಿಕಾರಿಯ ಅನುಮೋದನೆ ಪಡೆದು ರಾತ್ರಿ 10.45ರ ಸುಮಾರಿಗೆ ಖರ್ಚು–ವೆಚ್ಚದ ವಿವರವನ್ನೊಳಗೊಂಡ ಬಜೆಟ್ ಪ್ರತಿಯನ್ನು ಅಪ್‌ಲೋಡ್ ಮಾಡಿದ್ದಾರೆ.

ಪಾಲಿಕೆಯಲ್ಲಿ 2020ರ ಸೆ.10 ರಿಂದ ಅಧಿಕಾರಿಗಳದ್ದೇ ದರ್ಬಾರ್ ಆಗಿದೆ. ಬಿಬಿಎಂಪಿ ಕಾಯಿದೆ–2020ರ ಅನ್ವಯ ಆರ್ಥಿಕ ವರ್ಷ ಅಂತ್ಯಗೊಳ್ಳುವುದಕ್ಕೆ ಮೂರು ವಾರ ಮುಂಚಿತವಾಗಿ ಪಾಲಿಕೆ

ಬಜೆಟ್‌ಗೆ ಅಂಗೀಕಾರ ಪಡೆಯಬೇಕು. ಮಾ. 31ರೊಳಗೆ ಬಜೆಟ್ ಅಥವಾ ಲೇಖಾನುದಾನ ಪ್ರಸ್ತಾವಗಳಿಗೆ ಸರಕಾರದ ಅನುಮೋದನೆ ಪಡೆಯಬೇಕು. ಇದಕ್ಕೆ ಅನುಮೋದನೆ ಪಡೆಯದೆ ಏ. 1ರಿಂದ ಯಾವುದೇ ವೆಚ್ಚ ಮಾಡುವಂತಿಲ್ಲ. ಹೀಗಾಗಿಯೇ, ಆತುರಾತುರವಾಗಿ ಆಯವ್ಯಯಕ್ಕೆ ಅನುಮೋದನೆ ಪಡೆದುಕೊಳ್ಳಲಾಗಿದೆ. 2021–22ನೇ ಸಾಲಿನಲ್ಲಿ ರೂ. 9,286.80 ಕೋಟಿ ಗಾತ್ರದ ಬಜೆಟ್ ಅನ್ನು ಅಂಗೀಕರಿಸಿ ನಗರಾಭಿವೃದ್ಧಿ ಇಲಾಖೆಗೆ ಅನುಮೋದನೆಗಾಗಿ ಕಳುಹಿಸಿತ್ತು. ಸಾಮಾನ್ಯವಾಗಿ ಬಜೆಟ್ ಗಾತ್ರಕ್ಕೆ ಕತ್ತರಿ ಹಾಕಿ ಅನುಮೋದನೆ ನೀಡುತ್ತಿದ್ದ ಇಲಾಖೆಯು, ಬಜೆಟ್ ಗಾತ್ರವನ್ನು ರೂ. 9,951.80 ಕೋಟಿಗೆ ಹೆಚ್ಚಿಸಿ ಅನುಮೋದನೆ ನೀಡಿತ್ತು.

**ಪಾಲನೆಯಾಗದ ವಿತ್ತೀಯ ಹೊಣೆಗಾರಿಕೆ ಕಾಯಿದೆ**

ಬಿಬಿಎಂಪಿಯಲ್ಲಿ ಆರ್ಥಿಕ ಶಿಸ್ತು ತರಲು ಕಂದಾಯ ಸ್ವೀಕೃತಿಯ ವಾಸ್ತವಾಂಶಗಳನ್ನು ಆಧರಿಸಿಯೇ ಬಜೆಟ್ ರೂಪಿಸಬೇಕೆಂಬ ಉದ್ದೇಶದಿಂದ ಪಾಲಿಕೆಗೂ ವಿತ್ತೀಯ ಹೊಣೆಗಾರಿಕೆ ಕಾಯಿದೆಯನ್ನು ರಾಜ್ಯ ಸರಕಾರ ಮಾ. 10ರಿಂದ ಜಾರಿಗೊಳಿಸಿತು. ಆದರೆ, ಪಾಲಿಕೆಯ 2022–23ನೇ ಸಾಲಿನ ಬಜೆಟ್ ಇದಕ್ಕೆ ಬದ್ಧವಾಗಿ ರೂಪುಗೊಂಡಿಲ್ಲ. ಬಜೆಟ್ ಗಾತ್ರವು 10,480 ಕೋಟಿ ದಾಟಿದ್ದು, ವಾಸ್ತವಕ್ಕೆ ದೂರವಾಗಿದೆ. ಇದರಿಂದ ವಿತ್ತೀಯ ಹೊಣೆಗಾರಿಕೆ ನಿಯಮದ ಆಶಯಗಳು ಈಡೇರದಂತಾಗಿದೆ. ಪಾಲಿಕೆಯು 3680.15 ಕೋಟಿ ತೆರಿಗೆ ಮತ್ತು ಕರ ಹಾಗೂ ತೆರಿಗೆಯೇತರ ಆದಾಯದಿಂದ ರೂ.2302.23 ಕೋಟಿ ನಿರೀಕ್ಷಿಸಿದೆ. ಪ್ರತಿ ವರ್ಷದಂತೆ ಈ ಸಲವೂ ಕೇಂದ್ರ ಮತ್ತು ರಾಜ್ಯ ಸರಕಾರದ ಅನುದಾನವನ್ನೇ ನೆಚ್ಚಿಕೊಂಡಿದೆ.

**ಬಜೆಟ್ ಪ್ರಮುಖಾಂಶಗಳು**

- ಸಾರ್ವಜನಿಕ ಬಹು ಉಪಯೋಗಿ ಕಟ್ಟಡ–ನೇತಾಜಿ ಸುಭಾಷ್ ಚಂದ್ರ ಬೋಸ್ ಕಟ್ಟಡದ ನಿರ್ವಹಣೆಗೆ ರೂ. 1.11 ಕೋಟಿ.
- ಪುಟ್ಟಣ್ಣಚೆಟ್ಟಿ ಪುರಭವನದ ಸಭಾಂಗಣ ನಿರ್ವಹಣೆಗೆ ರೂ. 50 ಲಕ್ಷ.
- ಜಯನಗರದ ಬಿಬಿಎಂಪಿ ಕಟ್ಟಡಗಳ ನಿರ್ವಹಣೆಗೆ ರೂ. 1.99 ಕೋಟಿ.
- ಹಾಲಿ ಇರುವ ಸಮುದಾಯ ಭವನಗಳ ನಿರ್ವಹಣೆಗೆ ರೂ. 1.50 ಕೋಟಿ.
- ಪಾಲಿಕೆ ಮಾರುಕಟ್ಟೆಗಳ ನಿರ್ವಹಣೆ ಮತ್ತು ದುರಸ್ತಿಗೆ ರೂ. 8.93 ಕೋಟಿ.
- ಪಾಲಿಕೆ ಶಾಲಾ, ಕಾಲೇಜು ಕಟ್ಟಡಗಳ ನಿರ್ವಹಣೆ ಮತ್ತು ದುರಸ್ತಿಗೆ ರೂ. 10.59 ಕೋಟಿ.
- ಪ್ರಾಥಮಿಕ ಆರೋಗ್ಯ ಕೇಂದ್ರಗಳ ನಿರ್ವಹಣೆ ಮತ್ತು ದುರಸ್ತಿಗೆ ರೂ. 3.50 ಕೋಟಿ.
- ಕಸಾಯಿಖಾನೆ ನಿರ್ವಹಣೆ ಮತ್ತು ದುರಸ್ತಿಗೆ ರೂ. 1.83 ಕೋಟಿ.

- ಕಲ್ಲಪಲ್ಲಿ ಸ್ಮಶಾನದಲ್ಲಿರುವ ಮಾಜಿ ರಾಷ್ಟ್ರಪತಿ ನೀಲಂ ಸಂಜೀವರೆಡ್ಡಿ ಸಮಾಧಿಯ ಸುಧಾರಣೆ ಮತ್ತು ನಿರ್ವಹಣೆಗೆ ರೂ. 91 ಲಕ್ಷ.
- ರುದ್ರಭೂಮಿ, ಸ್ಮಶಾನ ಮತ್ತು ವಿದ್ಯುತ್ ಚಿತಾಗಾರಗಳ ದುರಸ್ತಿ ಮತ್ತು ನಿರ್ವಹಣೆಗೆ ರೂ.4.04 ಕೋಟಿ.
- ಪಾಲಿಕೆಯ ಎಲ್ಲಾ ವಲಯಗಳಲ್ಲಿ ಮೂಲಭೂತ ಸೌಕರ್ಯ ವಿಭಾಗದಿಂದ ಆರ್ಟೀರಿಯಲ್ ಸಬ್ ಅರ್ಟೀರಿಯಲ್ ರಸ್ತೆಗಳ ನಿರ್ವಹಣೆಗೆ ರೂ. 86.83 ಕೋಟಿ.
- ರಸ್ತೆ, ಪಾದಚಾರಿ ಮಾರ್ಗ, ಮೇಲ್ಸೈ ಚರಂಡಿಗಳು, ಮೇಲು ಸೇತುವೆ ಹಾಗೂ ಸುರಂಗ ಮಾರ್ಗಗಳ ದುರಸ್ತಿ ಮತ್ತು ನಿರ್ವಹಣೆಗೆ ರೂ. 35.26 ಕೋಟಿ.
- ವಲಯ ಕಾಮಗಾರಿಗಳು – ಕ್ರಿಯಾ ಯೋಜನೆ ಕಾಮಗಾರಿಗಳು ಶೇ. 60ರಷ್ಟು ವಾರ್ಷಿಕ ನಿರ್ವಹಣೆ ಮತ್ತು ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆಗಳ ದುರಸ್ತಿಗೆ ರೂ. 967.47 ಕೋಟಿ.
- ರಸ್ತೆ ಗುಂಡಿಗಳನ್ನು ಮುಚ್ಚಲು ರೂ. 61.36 ಲಕ್ಷ.
- ವಲಯ ಕಾಮಗಾರಿಗಳು – ಕ್ರಿಯಾ ಯೋಜನೆ ಕಾಮಗಾರಿಗಳು ಶೇ.40ರಷ್ಟು ಇತರೆ ನಿರ್ವಹಣೆಗೆ ರೂ. 173.30 ಕೋಟಿ.
- ಬೃಹತ್ ಮಳೆ ನೀರು ಕಾಲುವೆಗಳ ಹೂಳೆತ್ತಲು ರೂ. 50 ಲಕ್ಷ.
- ಬೃಹತ್ ಮಳೆ ನೀರು ಕಾಲುವೆಗಳ ತುರ್ತು ಮೀಸಲು ಕಾಮಗಾರಿ ರೂ. 10.86 ಕೋಟಿ.
- ಬೃಹತ್ ಮಳೆ ನೀರು ಕಾಲುವೆಗಳ ವಾರ್ಷಿಕ ನಿರ್ವಹಣಾ ವೆಚ್ಚ ರೂ. 40 ಕೋಟಿ.
- ನೀರು ಸರಬರಾಜು ವಾರ್ಷಿಕ ನಿರ್ವಹಣೆ ಮತ್ತು ದುರಸ್ತಿಗೆ ರೂ. 57.04 ಕೋಟಿ.
- ಸುಟ್ಟುಹೋದ ಬೀದಿ ದೀಪಗಳನ್ನು ಬದಲಾಯಿಸುವುದು ಹಾಗೂ ಇತರೆ ವೆಚ್ಚ ರೂ. 82.11 ಕೋಟಿ.
- ಪಾಲಿಕೆಯ ಶಾಲೆ, ಹೆರಿಗೆ ಆಸ್ಪತ್ರೆ, ಕಟ್ಟಡ, ಸಮುದಾಯ ಭವನ ಮತ್ತು ಮಾರುಕಟ್ಟೆಗಳಲ್ಲಿ ವಿದ್ಯುತ್ ಸ್ಥಾಪನೆಗೆ ರೂ. 6.74 ಕೋಟಿ.
- ಉದ್ಯಾನವನ, ಆಟದ ಮೈದಾನ, ಸ್ಮಶಾನಗಳಲ್ಲಿರುವ ವಿದ್ಯುತ್ ಸ್ಥಾಪನೆ ನಿರ್ವಹಣೆ ಮತ್ತು ದುರಸ್ತಿಗೆ ರೂ. 5.55 ಕೋಟಿ.
- ಮಂಡೂರು ಮತ್ತು ಮಾವಳ್ಳಿಪುರ ಘನತ್ಯಾಜ್ಯ ವಿಲೇವಾರಿ ಘಟಕದ ಸುತ್ತಮುತ್ತಲಿನ ಹಳ್ಳಿಗಳ ಅಭಿವೃದ್ಧಿಗೆ ರೂ. 14.88 ಕೋಟಿ.

- ಕಣ್ಣೂರಿನ ಭೂ ಭರ್ತಿ ಘಟಕ ಸ್ಥಾಪನೆ ಮತ್ತು ಸುತ್ತ ಮುತ್ತಲಿನ ಹಳ್ಳಿಗಳ ಅಭಿವೃದ್ಧಿಗೆ ರೂ.50 ಕೋಟಿ.
- ಒಳಚರಂಡಿ ನೀರು ಸಂಸ್ಕರಣಾ ಘಟಕಗಳು ಹಾಗೂ ಕೆರೆಗಳ ನಿರ್ವಹಣೆಗೆ ರೂ.28.18 ಕೋಟಿ.
- ಪಾಲಿಕೆ ಕಟ್ಟಡಗಳಲ್ಲಿ ಮಳೆ ನೀರು ಕೊಯ್ಲು ಪದ್ಧತಿಗೆ ರೂ. 1 ಕೋಟಿ.
- ಹೊಸ ವಲಯಗಳಲ್ಲಿ ಹೊಸ ಉದ್ಯಾನಗಳ ನಿರ್ಮಾಣಕ್ಕೆ ರೂ. 7.28 ಕೋಟಿ.
- ಘನತ್ಯಾಜ್ಯ ನಿರ್ವಹಣೆಗೆ ರೂ. 93.16 ಕೋಟಿ.
- ಸಾರ್ವಜನಿಕ ಕಾಮಗಾರಿಗಳಿಗೆ ರೂ. 6322 ಕೋಟಿ.
- 110 ಹಳ್ಳಿಗರ ರಸ್ತೆ ಅಭಿವೃದ್ಧಿಗೆ ರೂ. 201.50 ಕೋಟಿ.
- ಸಿಎಂ ನಗರೋತ್ಥಾನ ಯೋಜನೆಯಡಿ ಕೆರೆಗಳ ಅಭಿವೃದ್ಧಿಗೆ ರೂ. 91.89 ಕೋಟಿ.
- ಎಸ್ಸಿ, ಎಸ್ಟಿ ಒಂಟಿ ಮನೆಗೆ ರೂ. 82.42 ಕೋಟಿ.
- ಸ್ವಯಂ ಉದ್ಯೋಗಕ್ಕಾಗಿ ಸಹಾಯಧನ ರೂ. 10 ಕೋಟಿ.
- ವಿಶೇಷಚೇತನ ವ್ಯಕ್ತಿಗಳಿಗೆ ತ್ರಿಚಕ್ರ ವಾಹನಗಳ ವಿತರಣೆ ರೂ. 7 ಕೋಟಿ.
- ವಿಶೇಷಚೇತನರಿಗೆ ಆರ್ಥಿಕ ನೆರವು ರೂ. 1.25 ಕೋಟಿ.
- ಹಿಂದುಳಿದ, ಅಲ್ಪಸಂಖ್ಯಾತ, ಆರ್ಥಿಕವಾಗಿ ಹಿಂದುಳಿದವರಿಗೆ ಒಂಟಿ ಮನೆ ನಿರ್ಮಾಣಕ್ಕೆ ರೂ. 26.14 ಕೋಟಿ.
- ಪೌರ ಕಾರ್ಮಿಕರ ವೈಯಕ್ತಿಕ ಮನೆ ನಿರ್ಮಾಣಕ್ಕೆ ರೂ. 28.95 ಕೋಟಿ.
- ಪೌರ ಕಾರ್ಮಿಕರ ಮಧ್ಯಾಹ್ನದ ಬಿಸಿಯೂಟಕ್ಕೆ ರೂ. 20 ಕೋಟಿ.
- ಪ್ರಮುಖ ಜಂಕ್ಷನ್ ಗಳು, ಬುಲೇವರ್ಡ್ಗಳ ಅಭಿವೃದ್ಧಿಗೆ ರೂ. 21.16 ಕೋಟಿ.
- ವೃಷಭಾವತಿ ವ್ಯಾಲಿ ಪುನರ್ ನವೀಕರಣಕ್ಕೆ ರೂ. 15.53 ಕೋಟಿ.
- ಸಿಎಂ ನಗರೋತ್ಥಾನ ಯೋಜನೆಯಡಿ ರಾಜಕಾಲುವೆಗಳ ಅಭಿವೃದ್ಧಿಗೆ ರೂ. 605.77 ಕೋಟಿ.
- ಆಯ್ದ ರಸ್ತೆಗಳ ವೈಟ್ ಟಾಪಿಂಗ್‌ಗೆ ರೂ. 24.13 ಕೋಟಿ.

| ವೆಚ್ಚಗಳ ವರ್ಗೀಕರಣ | ಮೊತ್ತ (ಕೋಟಿಗಳಲ್ಲಿ) | ಶೇಕಡ |
|---|---|---|
| ಸಿಬ್ಬಂದಿ ವೆಚ್ಚಗಳು | 1234.72 | 12 |
| ಆಡಳಿತ ವೆಚ್ಚಗಳು | 313.51 | 03 |
| ಬ್ಯಾಂಕ್ ಸಾಲ ಮತ್ತು ಬಡ್ಡಿ ಪಾವತಿ | 122.00 | 1 |
| ಕಾರ್ಯಕ್ರಮಗಳ ವೆಚ್ಚಗಳು | 456.84 | 4 |
| ಕಾರ್ಯಾಚರಣೆ ಮತ್ತು ನಿರ್ವಹಣೆ ವೆಚ್ಚಗಳು | 3148.12 | 30 |
| ಸಾರ್ವಜನಿಕ ಅಭಿವೃದ್ಧಿ ಕಾಮಗಾರಿಗಳು | 4838.26 | 46 |
| ಠೇವಣಿ ಮತ್ತು ಕರಗಳ ಮರುಪಾವತಿ | 367.48 | 4 |
| **ಒಟ್ಟು** | **10.480.93** | **100** |
| **2022ನೇ ಸಾಲಿನ ಆದಾಯದ ಮೂಲಗಳು** | | |
| **ಆದಾಯದ ಮೂಲಗಳು** | **ಮೊತ್ತ** | **ಶೇಕಡ** |
| ತೆರಿಗೆ ಮತ್ತು ಕರಗಳ ಆದಾಯ | 3680.15 | 35 |
| ತೆರಿಗೆಯೇತರ ಆದಾಯ | 2302.23 | 22 |
| ಕೇಂದ್ರ ಸರಕಾರದ ಅನುದಾನ | 436.01 | 04 |
| ರಾಜ್ಯ ಸರಕಾರದ ಅನುದಾನ | 3576.59 | 34 |
| ಅಸಾಧಾರಣ ಆದಾಯ | 489.30 | 5 |
| **ಒಟ್ಟು** | **10484.28** | **100** |

ಆಧಾರ: ವಿಜಯಕರ್ನಾಟಕ, ದಿನಾಂಕ: 01.04.2022

## 2. ಮೇಕೆದಾಟು : ಕೇಂದ್ರಕ್ಕೆ ಮನವರಿಕೆ ಯತ್ನ

ರಾಜಕೀಯ ಕಾರಣಗಳಿಂದ ಮಹತ್ವ ಪಡೆದಿರುವ ಕಾವೇರಿ ನದಿಗೆ ನಿರ್ಮಿಸಲು ಉದ್ದೇಶಿಸಿರುವ ಮೇಕೆದಾಟು ಯೋಜನೆಗೆ ಶೀಘ್ರ ಅನುಮತಿ ನೀಡುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕೇಂದ್ರ ಸರಕಾರಕ್ಕೆ ಮನವರಿಕೆ ಮಾಡುವ ಪ್ರಯತ್ನ ಮಾಡಿದ್ದಾರೆ.

ದೆಹಲಿಯಲ್ಲಿ ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರನ್ನು ನಿಯೋಗದ ಮೂಲಕ ಭೇಟಿ ಮಾಡಿದ ಅವರು, ಮೇಕೆದಾಟು ಜೊತೆಗೆ ಮಹದಾಯಿ ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆ ಕುರಿತೂ ಸುದೀರ್ಘ ಸಮಾಲೋಚನೆ ನಡೆಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಿಎಂ, ಮೇಕೆದಾಟು, ಮಹದಾಯಿ ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಕೇಂದ್ರ ಜಲಶಕ್ತಿ ಸಚಿವರೊಂದಿಗೆ ಮಾತನಾಡಿದ್ದು, ಶೀಘ್ರ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರೆ. ಅಂತರರಾಜ್ಯ ನೀರಾವರಿ ವಿವಾದಗಳನ್ನು ಬಗೆಹರಿಸಲು ಸಹಕಾರ ನೀಡುವುದಾಗಿ ಹೇಳಿದ್ದಾರೆ ಎಂದರು.

**ಮೇಕೆದಾಟು ಯೋಜನೆ ಅಗತ್ಯ ಏಕೆ?:** ಮೇಕೆದಾಟು ಕುಡಿಯುವ ನೀರು ಮತ್ತು ವಿದ್ಯುತ್ ಉತ್ಪಾದನೆಗೆ ಸಂಬಂಧಿಸಿದ ಯೋಜನೆಯಾಗಿದ್ದು, ಇದರಿಂದ ತಮಿಳುನಾಡಿಗೆ ಯಾವುದೇ ಸಮಸ್ಯೆ ಇಲ್ಲ. ಮೇಲಾಗಿ ಇದು ರಾಜಕೀಯ ಕಾರಣಕ್ಕೂ ಅಗತ್ಯದ ಯೋಜನೆಯಾಗಿದೆ. ಮೇಕೆದಾಟು ಯೋಜನೆಗೆ ಕೇಂದ್ರ ಸರಕಾರ ಸಹಕಾರ ನೀಡದಿದ್ದಲ್ಲಿ ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಬೆಂಗಳೂರು ಸೇರಿದಂತೆ ಹಳೇ ಮೈಸೂರು ಭಾಗದಲ್ಲಿ ಪಕ್ಷಕ್ಕೆ ಹಿನ್ನಡೆಯಾಗುತ್ತದೆ. ಒಂದೊಮ್ಮೆ ಮೇಕೆದಾಟು ಯೋಜನೆಗೆ ಕೇಂದ್ರ ಸಮ್ಮತಿಸಿದರೆ ರಾಜ್ಯದ ಜನರಿಗೆ ಕೇಂದ್ರ ಮತ್ತು ರಾಜ್ಯ ಸರಕಾರಗಳ ಬಗ್ಗೆ ಸದಾಭಿಪ್ರಾಯ ಮೂಡುತ್ತದೆ. ಮುಂದಿನ ದಿನಗಳಲ್ಲಿ ಇತರ ಯೋಜನೆಗಳಿಗೂ ಅನುಮತಿ ಸಿಗುತ್ತದೆ ಎಂಬ ಭರವಸೆ ಸಿಗುತ್ತದೆ. ಆದ್ದರಿಂದ ಮೇಕೆದಾಟು ಯೋಜನೆಗೆ ಶೀಘ್ರ ಅನುಮತಿ ನೀಡಬೇಕು ಎಂದು ಮುಖ್ಯ ಮಂತ್ರಿ ಹಾಗೂ ಅವರೊಂದಿಗಿದ್ದ ಸಚಿವರು ಕೇಂದ್ರ ಜಲಶಕ್ತಿ ಸಚಿವರ ಮುಂದೆ ವಾದ ಮಂಡಿಸಿದ್ದಾರೆ ಎಂದು ತಿಳಿದುಬಂದಿದೆ.

ಈ ಮಧ್ಯೆ ಮಹದಾಯಿ ಯೋಜನೆಗೆ ಗೋವಾ ಅನಗತ್ಯವಾಗಿ ಅಡ್ಡಗಾಲು ಹಾಕುತ್ತಿರುವ ಬಗ್ಗೆಯೂ ಪ್ರಸ್ತಾಪಿಸಲಾಗಿದ್ದು, ನ್ಯಾಯಾಧಿಕರಣದಲ್ಲಿ ರಾಜ್ಯಕ್ಕೆ ಲಭ್ಯವಾಗಿರುವ ನೀರಿನ ಬಳಕೆಗೆ ಅಗತ್ಯ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಅನುಮತಿ ನೀಡಬೇಕು. ಅದೇ ರೀತಿ ಕೃಷ್ಣಾ ನ್ಯಾಯಾಧೀಕರಣದ ಅಂತಿಮ ಆದೇಶದ ಕುರಿತು ಶೀಘ್ರ ಅಧಿಸೂಚನೆ ಪ್ರಕಟಿಸಿ ರಾಜ್ಯದ ಪಾಲಿನ ಯೋಜನೆಗಳಿಗೆ ಚಾಲನೆ ನೀಡಲು ಅವಕಾಶ ಕಲ್ಪಿಸಬೇಕು ಎಂದು ಜಲಶಕ್ತಿ ಸಚಿವರಿಗೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸಲಾಗಿದೆ.

ಸಭೆಯಲ್ಲಿ ಕೇಂದ್ರ ಸಚಿವರಾದ ಪ್ರಲ್ಹಾದ್ ಜೋಶಿ, ಭಗವಂತ ಖೂಬಾ, ಸಚಿವರಾದ ಗೋವಿಂದ ಕಾರಜೋಳ, ವಿ.ಸುನೀಲ್ ಕುಮಾರ್, ಮುರುಗೇಶ್ ನಿರಾಣಿ, ಸಂಸದರಾದ ಪ್ರತಾಪ ಸಿಂಹ, ಶಿವಕುಮಾರ್ ಉದಾಸಿ, ಜಲಸಂಪನ್ಮೂಲ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್, ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ ಮಂಜುನಾಥ ಪ್ರಸಾದ್ ಮತ್ತಿತರರು ಇದ್ದರು.

ಆಧಾರ: ವಿಶ್ವವಾಣಿ, ದಿನಾಂಕ: 06.04.2022

## 3. ದೆಹಲಿಯಲ್ಲಿ ನಿರ್ಮಲಾ – ಸಿಎಂ ಭೇಟಿ

ದೆಹಲಿ ಪ್ರವಾಸದ ಎರಡನೇ ದಿನ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿಯಾಗಿ ರಾಜ್ಯದ ಅಭಿವೃದ್ಧಿ ಯೋಜನೆಗಳಿಗೆ ಆರ್ಥಿಕ ನೆರವು ನೀಡುವ ಕುರಿತು ಸಮಾಲೋಚನೆ ನಡೆಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಿಸಲು ಕೇಂದ್ರ ಸರಕಾರ ಈಗಾಗಲೇ ತೀರ್ಮಾನಿಸಿದೆ. ಆದರೆ, ಘೋಷಣೆ ಹೊರಡಿಸಬೇಕಾದರೆ ಆರ್ಥಿಕ ಇಲಾಖೆಯ ಅನುಮೋದನೆಯಾಗಬೇಕು. ಈ ವಿಚಾರವನ್ನು ಹಣಕಾಸು ಸಚಿವರ ಗಮನಕ್ಕೆ ತರಲಾಗಿದೆ. ರಾಷ್ಟ್ರೀಯ ಯೋಜನೆ ಘೋಷಣೆ ಕುರಿತ ಸಿದ್ಧತೆ ಅಂತಿಮ ಹಂತದಲ್ಲಿದೆ ಎಂದು ಹೇಳಿದರು.

ಅದೇ ರೀತಿ ಇಂಧನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹಸಿರು ಕಾರಿಡಾರ್‌ನಲ್ಲಿ ಮೂರು ಯೋಜನೆಗಳನ್ನು ಸೇರ್ಪಡೆ ಮಾಡಬೇಕಾಗಿದ್ದು, ಈ ವಿಷಯವೂ ಕೇಂದ್ರ ಹಣಕಾಸು ಸಚಿವಾಲಯದ ಅನುಮೋದನೆ ಬರಲಿದೆ ಎಂಬುದನ್ನು ನಿರ್ಮಲಾ ಸೀತಾರಾಮನ್ ಅವರ ಗಮನಕ್ಕೆ ತರಲಾಗಿದೆ. ಆದಷ್ಟು ಬೇಗ ಇವುಗಳಿಗೆ ಅನುಮೋದನೆ ನೀಡುವ ಬಗ್ಗೆ ಸಕಾರಾತ್ಮಕವಾಗಿ ಸ್ಪಂದಿಸುವುದಾಗಿ ಸಚಿವರು ಭಸವರೆ ನೀಡಿದ್ದಾರೆ ಎಂದರು.

**ರಾಯಚೂರಿನಲ್ಲಿ ಸಿರಿಧಾನ್ಯ ಬೆಳೆಗಾರರ ಸಭೆ:** ಜಿಎಸ್‌ಟಿ ಮಂಡಳಿ ಸಭೆಯ ಬಗ್ಗೆಯೂ ಕೇಂದ್ರ ಸಚಿವರೊಂದಿಗೆ ಚರ್ಚಿಸಲಾಗಿದೆ. ಸದ್ಯದಲ್ಲೇ ರಾಜ್ಯಕ್ಕೆ ಭೇಟಿ ನೀಡುವುದಾಗಿ ಅವರು ತಿಳಿದ್ದಾರೆ. ಕೇಂದ್ರ ಸರಕಾರದ ಯೋಜನೆಗಳಿಗೆ ಬ್ಯಾಂಕ್‌ಗಳ ಮುಖಾಂತರ ಆಗಬೇಕಿರುವ ಕೆಲಸಗಳ ಬಗ್ಗೆ ವಿಶೇಷ ಸಭೆ ಕರೆಯುವುದಾಗಿ ಹೇಳಿದ್ದಾರೆ ಎಂದರು.

2023ನ್ನು ಅಂತಾರಾಷ್ಟ್ರೀಯ ಸಿರಿಧಾನ್ಯ ವರ್ಷ ಎಂದು ಘೋಷಿಸಲಾಗಿದೆ. ಇದಕ್ಕೆ ಕರ್ನಾಟಕವೇ ಮೂಲವಾಗಿದ್ದು, ವಿಶ್ವಸಂಸ್ಥೆ ಈ ಘೋಷಣೆ ಮಾಡುವಲ್ಲಿ ನಿರ್ಮಲಾ ಸೀತಾರಾಮನ್ ಅವರ ಪಾತ್ರವೂ

ಇದೆ. ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಸಿರಿಧಾನ್ಯ ಬೆಳೆಗಾರರ ಸಭೆ ಕರೆಯಲು ತಿರ್ಮಾನಿಸಿದ್ದು, ಇದನ್ನು ರಾಯಚೂರಿನಲ್ಲಿ ಆಯೋಜಿಸಲು ನಿರ್ಧರಿಸಲಾಯಿತು ಎಂದರು.

ಭೇಟಿ ವೇಳೆ ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ, ಇಂಧನ ಸಚಿವ ವಿ.ಸುನೀಲ್ ಕುಮಾರ್, ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ ಮಂಜುನಾಥ ಇದ್ದರು.

ಆಧಾರ:ವಿಶ್ವವಾಣಿ, ದಿನಾಂಕ: 07.04.2022

## 4. ಮಹಿಳಾ ಸ್ವಸಹಾಯ ಸಂಘಗಳಿಗಾಗಿ ಆ್ಯಂಕರ್ ಬ್ಯಾಂಕ್: ಮುಖ್ಯಮಂತ್ರಿ

ರಾಜ್ಯದಲ್ಲಿ ಮಹಿಳಾ ಸ್ವಸಹಾಯ ಸಂಘಗಳ ಸದಸ್ಯರಿಗೆ ಒಂದು ತಿಂಗಳಲ್ಲಿ ಅಗತ್ಯ ಆರ್ಥಿಕ ಅನುಕೂಲ ಸುಗಮವಾಗಿ ಸಿಗುವಂತೆ 'ಆ್ಯಂಕರ್ ಬ್ಯಾಂಕ್' ಆರಂಭಿಸಲಾಗುವುದು. ಈ ಮೂಲಕ ರಾಜ್ಯದಲ್ಲಿ ದುಡಿಮೆಯ ಕ್ರಾಂತಿ ಸಾಧ್ಯವಾಗುವಂತೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ರಾಷ್ಟ್ರೀಯ ಗ್ರಾಮೀಣ ಮತ್ತು ನಗರ ಜೀವನೋಪಾಯ ಅಭಿಯಾನದಡಿ ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಆಯೋಜಿಸಿರುವ 10 ದಿನಗಳ 'ರಾಷ್ಟ್ರೀಯ ಸಂಜೀವಿನಿ ಸರಸ್ ಮೇಳ' ಉದ್ಘಾಟಿಸಿ ಮಾತನಾಡಿ, ಮಹಿಳೆಯರ ಸ್ವಸಹಾಯ ಸಂಘಗಳಿಗೆ ಬಲ ತುಂಬಲು ಬಜೆಟ್‌ನಲ್ಲಿ ರೂ. 500 ಕೋಟಿ ಒದಗಿಸಲಾಗಿದೆ. ಈ ಮೂಲಕ 4 ಲಕ್ಷ ಮಹಿಳೆಯರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡಲಾಗುವುದು. ಈ ವರ್ಷ ಮಹಿಳಾ ಕಾರ್ಯಕ್ರಮಗಳಿಗೆ ರೂ. 47 ಸಾವಿರ ಕೋಟಿ ಮತ್ತು ಮಕ್ಕಳಿಗೆ ಸಂಬಂಧಿಸಿದ ನಾನಾ ಯೋಜನೆಗಳಿಗೆ ರೂ. 43 ಸಾವಿರ ಕೋಟಿ ಬಜೆಟ್ ನಲ್ಲಿ ಪ್ರಕಟಿಸಲಾಗಿದೆ. ಇವೆಲ್ಲವುಗಳ ಅನುಷ್ಠಾನಕ್ಕೆ ವಾರದಲ್ಲಿ ಸೂಕ್ತ ಆದೇಶಗಳನ್ನು ಹೊರಡಿಸಲಾಗುವುದು ಎಂದು ತಿಳಿಸಿದರು.

ಕೌಶಲ್ಯಾಭಿವೃದ್ಧಿ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಮಾತನಾಡಿ, 'ಮಹಿಳಾ ಸ್ವಸಹಾಯ ಸಂಘಗಳ ಸಬಲೀಕರಣಕ್ಕೆ ಕಾರ್ಪೊರೇಟ್ ಸಂಸ್ಥೆಗಳು, ನವೋದ್ಯಮಗಳು, ಎನ್.ಜಿ.ಒ.ಗಳ ನೆರವು ತೆಗೆದುಕೊಳ್ಳಲಾಗುತ್ತಿದೆ. ಜೊತೆಗೆ ಈ ಸಂಘಗಳ ಉತ್ಪನ್ನಗಳ ಬ್ರ್ಯಾಂಡಿಂಗ್, ಪ್ಯಾಕಿಂಗ್ ಮತ್ತು ಮಾರುಕಟ್ಟೆ ವಿಸ್ತರಣೆಗೆ ಒತ್ತು ಕೊಡಲಾಗುತ್ತಿದೆ. ಕೇಂದ್ರ ಸರಕಾರವು ಡಿಜಿಟಲೀಕರಣಕ್ಕೆ ಆದ್ಯತೆ ಕೊಟ್ಟಿದ್ದು, ಸುಗಮ ವಹಿವಾಟಿಗೆ ಆ್ಯಪ್ ಒದಗಿಸಿದೆ. ಸ್ವಸಹಾಯ ಸಂಘಗಳು ಇದರ ಲಾಭ ಪಡೆದುಕೊಳ್ಳಬೇಕು' ಎಂದರು.

2022 ಅನ್ನು 'ಜೀವನೋಪಾಯ ವರ್ಷ' ವೆಂದು ಘೋಷಿಸಲಾಗಿದ್ದು, ಈ ಕಾರ್ಯಕ್ರಮಗಳಿಗೆ ರೂ. 1,500 ಕೋಟಿ ಒದಗಿಸಲಾಗುತ್ತಿದೆ. ಇದರಿಂದ ಸ್ವಸಹಾಯ ಸಂಘಗಳಲ್ಲಿ ಸಕ್ರಿಯರಾಗಿರುವ 30 ಲಕ್ಷ ಮಹಿಳೆಯರಿಗೆ ಆರ್ಥಿಕ ಚೈತನ್ಯ ಸಿಗಲಿದೆ ಎಂದು ಹೇಳಿದರು. ಸಚಿವರಾದ ಎಂ.ಟಿ.ಬಿ.ನಾಗರಾಜ್, ಶಂಕರಗೌಡ ಪಾಟೀಲ ಮುನೇನಕೊಪ್ಪ, ಶಾಸಕರಾದ ಉದಯ್ ಗರುಡಾಚಾರ್, ರವಿ ಸುಬ್ರಹ್ಮಣ್ಯ, ವಿಧಾನ

ಪರಿಷತ್ ಸದಸ್ಯ ಅ. ದೇವೇಗೌಡ, ಜೀವನೋಪಾಯ ಅಭಿಯಾನದ ನಿರ್ದೇಶಕಿ ಮಂಜುಶ್ರೀ, ಅಭಿವೃದ್ಧಿ ಆಯುಕ್ತ ವಂದಿತಾ ಶರ್ಮಾ, ಇಲಾಖೆ ಪ್ರಧಾನ ಕಾರ್ಯದರ್ಶಿ ಯೋಜನಾಧಿಕಾರಿ ಸುಮತಿ, ನಟಿಯರಾದ ಲಕ್ಷ್ಮಿ ಗೋಪಾಲಸ್ವಾಮಿ ಮತ್ತು ಸೋನು ಗೌಡ ಉಪಸ್ಥಿತರಿದ್ದರು.

ಆಧಾರ:ವಿಶ್ವವಾಣಿ, ದಿನಾಂಕ: 09.04.2022

## 5. ಒಂದು ರಾಷ್ಟ್ರ ಒಂದು ಚುನಾವಣೆ ಪದ್ಧತಿ ಅತ್ಯಗತ್ಯ ಎಂದ ಜೋಶಿ

ಪ್ರಜಾಪ್ರಭುತ್ವ ವ್ಯವಸ್ಥೆಯ ಬಗ್ಗೆ ವಿಶ್ವಾಸ ಮೂಡಿಸಲು 'ಒಂದು ರಾಷ್ಟ್ರ ಒಂದು ಚುನಾವಣೆ ಪದ್ಧತಿ' ಅಗತ್ಯ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅಭಿಪ್ರಾಯಪಟ್ಟರು.

ಭಾರತೀಯ ವಿಕಾಸ ಕೇಂದ್ರ ಮತ್ತು ಶೇಷಾದ್ರಿಪುರಂ ಕಾನೂನು ಮಹಾವಿದ್ಯಾಲಯದ ಸಹಯೋಗದಲ್ಲಿ 'ಒಂದು ರಾಷ್ಟ್ರ ಒಂದು ಚುನಾವಣೆ' ಕೃತಿಯನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದರು.

"ದೇಶದ ನಾನಾ ರಾಜ್ಯಗಳ ಚುನಾವಣೆಗಳು ಒಂದಾದ ಬಳಿಕ ಒಂದರಂತೆ ಬರುತ್ತಿವೆ. ಈ ರೀತಿ ಸಾಲು ಸಾಲು ಚುನಾವಣೆಗಳಲ್ಲಿಯೇ ತೊಡಗುವ ಜನಪ್ರತಿನಿಧಿಗಳು ಅಭಿವೃದ್ಧಿ ಕಡೆ ಗಮನಹರಿಸಲಾಗುವುದಿಲ್ಲ, ಚುನಾವಣೆ ಕಾರಣ ಕೊಟ್ಟು ಹಲವಾರು ಜನಪ್ರತಿನಿಧಿಗಳು ಅಧಿವೇಶನದಿಂದಲೂ ದೂರ ಉಳಿಯುತ್ತಿರುವುದೇ ಇದಕ್ಕೆ ಉತ್ತಮ ನಿದರ್ಶನ," ಎಂದರು.

"ಭಾರತ ಅತೀ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಈಗ ನಮ್ಮ ಪ್ರಜಾಪ್ರಭುತ್ವ ಪಕ್ವಗೊಂಡಿದೆ. 1999 ಮತ್ತು 2004ರಲ್ಲಿ ಸಂಸತ್ ಮತ್ತು ವಿಧಾನಸಭೆ ಚುನಾವಣೆಗಳು ಒಟ್ಟಿಗೆ ನಡೆದಿವೆ. ಜನರು 10 ಚುನಾವಣೆ ಒಟ್ಟಿಗೆ ನಡೆಸಿದರೂ ವಿವೇಚನೆಯಿಂದ ಮತ ಚಲಾಯಿಸುತ್ತಾರೆ. ಈ ಹಿಂದೆ ಕಾಂಗ್ರೆಸ್ ಅವಧಿಯಲ್ಲಿ ಎಷ್ಟೋ ಬಾರಿ ಅವಧಿ ಪೂರ್ವದಲ್ಲಿಯೇ ಚುನಾವಣೆಯಾಗಿದೆ. ಬಿಜೆಪಿ ಅವಧಿಯಲ್ಲಿ ಈ ಸಂಖ್ಯೆ ತೀರಾ ಕಡಿಮೆ ಇದೆ," ಎಂದರು.

"ಮೋದಿ ಜಾರಿಗೆ ತರುವ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮೊದಲೇ ವಿರೋಧಿಸುವವರು ನಮ್ಮಲ್ಲಿದ್ದಾರೆ. ಇದಕ್ಕೆ 'ಒಂದು ರಾಷ್ಟ್ರ–ಒಂದು ಚುನಾವಣೆ'ಯೂ ಒಂದಾಗಿದೆ," ಎಂದು ಬೇಸರ ವ್ಯಕ್ತಪಡಿಸಿದರು.

ಪತ್ರಕರ್ತ ಹರಿಪ್ರಕಾಶ್ ಕೋಣೆಮನೆ, ನೃಪತುಂಗ ವಿವಿ ಕುಲಪತಿ ಪ್ರೊ. ಶ್ರೀನಿವಾಸ್ ಎಸ್. ಬಳ್ಳಿ, ಶೇಷಾದ್ರಿಪುರ ಕಾನೂನು ಮಹಾವಿದ್ಯಾಲಯದ ಪ್ರಾಂಶುಪಾಲೆ ಡಾ. ಪ್ರಣೀತಾ, ಭಾರತೀಯ ವಿಕಾಸ ಕೇಂದ್ರ ಪ್ರಧಾನ ಸಂಚಾಲಕ ವೆಂಕಟೇಶ್, ರಾಜ್ಯ ಸಂಚಾಲಕರಾದ ನಾರಾಯಣಸ್ವಾಮಿ ಕೆ.ಎನ್., ವೆಂಕಟೇಶ ಗೌಡ, ಶ್ರೀಧರ್ ಮತ್ತಿತರರು ಉಪಸ್ಥಿತರಿದ್ದರು.

ಆಧಾರ: ವಿಜಯ ಕರ್ನಾಟಕ, ದಿನಾಂಕ: 10.04.2022

## 6. ನಮ್ಮಲ್ಲೇ ತಯಾರಾದ ಉತ್ಪನ್ನ ಬಳಸಿ

ಸ್ವದೇಶಿ ಮಹತ್ವವನ್ನು ಗಮನದಲ್ಲಿಟ್ಟುಕೊಂಡು ಅಳವಡಿಸಿಕೊಂಡರೆ ಸದೃಢ ರಾಷ್ಟ್ರ ನಿರ್ಮಾಣ ಸಾಧ್ಯ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಕರೆ ನೀಡಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಸ್ವದೇಶಿ ಜಾಗರಣ ಮಂಚ್ ಜಯನಗರದ ಚಂದ್ರಗುಪ್ತ ಮೌರ್ಯ ಆಟದ ಮೈದಾನದಲ್ಲಿ ಏರ್ಪಡಿಸಿದ್ದ ಸ್ವದೇಶಿ ಮೇಳದ ಸಮಾರೋಪದಲ್ಲಿ ಮಾತನಾಡಿದರು.

'ಸ್ವದೇಶಿ ಅಳವಡಿಸಿಕೊಳ್ಳಿ, ವಿದೇಶಿಯರನ್ನು ಓಡಿಸಿ' ಎಂದು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಮಹಾತ್ಮ ಗಾಂಧಿ ಘೋಷಿಸಿದ್ದರು. ವಿದೇಶದಲ್ಲಿ ತಯಾರಾಗುವ ಉತ್ಪನ್ನಗಳ ಬಳಕೆಯನ್ನು ಅದಷ್ಟು ಕಡಿಮೆ ಮಾಡಿ ದೇಶದ ಕೈಗಾರಿಕೆಗಳಲ್ಲಿ ತಯಾರಾದ ಉತ್ಪನ್ನಗಳನ್ನು ಹೆಚ್ಚು ಬಳಸುವ ಮೂಲಕ ದೇಶದ ಆರ್ಥಿಕತೆಯನ್ನು ಸದೃಢಗೊಳಿಸಿ ಎಂಬುದು ಇದರರ್ಥ. ಸ್ವದೇಶಿ ಉತ್ಪನ್ನಗಳ ಮಹತ್ವದ ಬಗ್ಗೆ ನಿಧಾನಗತಿಯಲ್ಲಿ ಜನರಿಗೆ ಅರಿವು ಮೂಡುತ್ತಿದೆ. ಹೆಚ್ಚು ದೇಶೀಯ ಉತ್ಪನ್ನ ಬಳಸಿದರೆ ಭಾರತವನ್ನು ಸ್ವಾವಲಂಬಿಯನ್ನಾಗಿ ಮಾಡಬಹುದು ಎಂದರು.

ದೇಶದ ಸ್ವಾವಲಂಬನೆ ದೇಶೀಯತೆ ಅಧರಿಸಿದೆ. ಆ ಮೂಲಕ ಹೆಚ್ಚು ಅಭಿವೃದ್ಧಿ ಹೊಂದಲಿದೆ. ಹೀಗಾಗಿ, ಸ್ವದೇಶಿ ಉತ್ಪನ್ನಗಳಿಗೆ ಆದ್ಯತೆ ನೀಡಿ ದೇಶದ ಆರ್ಥಿಕ ವೃದ್ಧಿಗೆ ಕೈಜೋಡಿಸಬೇಕು ಎಂದರು.

ಸ್ವದೇಶಿ ಮಹತ್ವದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಹಿರಿಯ ಚಿಂತಕ ದತ್ತೋಪಂತ್ ತೇಂಗಡಿ ಸ್ವದೇಶಿ ಜಾಗರಣ ಮಂಚ್ ಸ್ಥಾಪಿಸಿದರು. ಇಂದು 15ಕ್ಕೂ ಹೆಚ್ಚು ಸಂಸ್ಥೆಗಳೊಂದಿಗೆ ಅಖಿಲ ಭಾರತ ಒಕ್ಕೂಟವಾಗಿ ಬೆಳೆದಿದೆ ಎಂದು ವಿವರಿಸಿದರು.

ಸಚಿವ ಎಂ.ಟಿ.ಬಿ. ನಾಗರಾಜ್, ಸಂಸದ ತೇಜಸ್ವಿ ಸೂರ್ಯ, ಸ್ವದೇಶಿ ಜಾಗರಣ ಮಂಚ್‌ನ ರಾಷ್ಟ್ರೀಯ ಸಂಘಟಕ ಕಾಶ್ಮೀರಿ ಲಾಲ್‌ಜಿ, ಸಂಯೋಜಕ ಪ್ರಕಾಶ್ ಬೆಳವಾಡಿ ಇತರರಿದ್ದರು.

ಆಧಾರ: ವಿಜಯವಾಣಿ, ದಿನಾಂಕ: 12.04.2022

## 7. ಕಳಸಾ ಬಂಡೂರಿ ಶೀಘ್ರ ಆರಂಭ

ಧಾರವಾಡ, ಗದಗ, ಬಾಗಲಕೋಟೆ, ಬೆಳಗಾವಿ ಜಿಲ್ಲೆಯ ಜನತೆಯ ಕುಡಿಯುವ ನೀರಿನ ಸಮಸ್ಯೆ ಪರಿಹರಿಸುವ ಕಳಸಾ ಬಂಡೂರಿ ಯೋಜನೆ ಕಾಮಗಾರಿಯನ್ನು ಶೀಘ್ರದಲ್ಲಿ ಪ್ರಾರಂಭಿಸಲಾಗುವದೆಂದು ಗದಗ ಜಿಲ್ಲೆಯ ಬಿಜೆಪಿ ಕಾರ್ಯಕರ್ತರು ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟಿಸಿದರು. ಕಳಸಾ–ಬಂಡೂರಿ ಯೋಜನೆಯ ಪ್ರಾರಂಭಕ್ಕೆ ಇರುವ ಅಡ್ಡಿ–ಆತಂಕಗಳನ್ನು ನಿವಾರಿಸಲು ಈಗಾಗಲೇ ಕೇಂದ್ರ ಸರಕಾರದೊಂದಿಗೆ ಚರ್ಚಿಸಲಾಗಿದೆ. ಯೋಜನೆಯ

ಅನುಷ್ಠಾನದಿಂದ ಆಗುವ ಮುಳುಗಡೆ ಪ್ರದೇಶವನ್ನು ಕಡಿಮೆ ಮಾಡಲು ಪ್ರಯತ್ನಿಸಲಾಗುತ್ತಿದೆಯೆಂದು ಹೇಳಿದರು. ಈ ಯೋಜನೆಯ ಕಾಮಗಾರಿಯನ್ನು ಶೀಘ್ರದಲ್ಲಿಯೇ ಪ್ರಾರಂಭಿಸಲಾಗುವದು. ಕಾಮಗಾರಿ ನಿಗದಿತ ಅವಧಿಯಲ್ಲಿ ಮುಕ್ತಾಯವಾಗುವಂತೆ, ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುವದು ಎಂದು ವಿಶ್ವಾಸ ವ್ಯಕ್ತಪಡಿಸಿದರು.

**ಭಾವೈಕ್ಯತಾ ದಿನ**

ಕೋಮು ಸೌಹಾರ್ದತೆಗೆ ಹೊಸ ಭಾಷ್ಯ ಬರೆದಿರುವ ತೋಂಟದಾರ್ಯ ಮಠದ ಹಿಂದಿನ ಪೀಠಾಧಿಪತಿ ಲಿಂ.ಡಾ. ತೋಂಟದ ಸಿದ್ದಲಿಂಗ ಮಹಾಸ್ವಾಮಿಗಳ ಜನ್ಮದಿನವನ್ನು ಭಾವೈಕ್ಯತಾ ದಿನವನ್ನಾಗಿ ಆಚರಿಸಲು ನಿರ್ಧರಿಸಲಾಗಿದೆಯೆಂದು ಮುಖ್ಯಮಂತ್ರಿಗಳು ಪ್ರಕಟಿಸಿದರು. ಜಾತ್ರಾ ಮಹೋತ್ಸವದಂಗವಾಗಿ ತೋಂಟದಾರ್ಯ ಮಠದಲ್ಲಿ ನಿರ್ಮಿಸಿದ ಐಕ್ಯ ಮಂಟಪವನ್ನು ಉದ್ಘಾಟಿಸಿ ಮಾತನಾಡಿದರು.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ: 16.04.2022

## 8. ಹುದ್ದೆ ಬಿಟ್ಟಿಳಿದ ಈಶ್ವರಪ್ಪ

ಸಂತೋಷ್ ಆತ್ಮಹತ್ಯೆ ಪ್ರಕರಣದಲ್ಲಿ ಕೆ.ಎಸ್. ಈಶ್ವರಪ್ಪ ಹೆಸರು ಕೇಳಿಬಂದ ಹಿನ್ನೆಲೆಯಲ್ಲಿ, ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.

ಪ್ರಹಸನದ ನಡುವೆ ಈಶ್ವರಪ್ಪ ಅವರು ರಾತ್ರಿ 8.20ರ ಸುಮಾರಿಗೆ ಗ್ರಾಮೀಣಾಭಿವೃದ್ಧಿ ಸಚಿವ ಸ್ಥಾನಕ್ಕೆ ತಮ್ಮ ರಾಜೀನಾಮೆ ಪತ್ರವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ನೀಡಿದ್ದಾರೆ. ಬೆಳಗ್ಗೆ ನಾನಾ ಕಾರ್ಯಕ್ರಮದಲ್ಲಿ ಭಾಗವಹಿಸಿ, ಕಾರ್ಯಕರ್ತರೊಂದಿಗೆ ಚರ್ಚಿಸಿ ಬಳಿಕ ಅಭಿಮಾನಿಗಳ ದಂಡಿನೊಂದಿಗೆ ಬೆಂಗಳೂರಿನತ್ತ ಹೊರಟ ಈಶ್ವರಪ್ಪ, ರೇಸ್ ಕೋರ್ಸ್ ರಸ್ತೆಯಲ್ಲಿರುವ ಮುಖ್ಯಮಂತ್ರಿ ಅಧಿಕೃತ ನಿವಾಸಕ್ಕೆ ತೆರಳಿ ತಮ್ಮ ರಾಜೀನಾಮೆ ಪತ್ರವನ್ನು ನೀಡಿದ್ದಾರೆ.

ಮುಖ್ಯಮಂತ್ರಿಗಳ ನಿವಾಸಕ್ಕೆ ಈಶ್ವರಪ್ಪ ಆಗಮಿಸುವುದಕ್ಕೆ ಮೊದಲೇ, ಸಾವಿರಾರು ಅಭಿಮಾನಿಗಳು ಹಾಗೂ ಕಾರ್ಯಕರ್ತರು ಜಮಾಯಿಸಿದ್ದರು. ಈ ವೇಳೆ ಯಾವುದೇ ಕಾರಣಕ್ಕೂ ಈಶ್ವರಪ್ಪ ಅವರು ರಾಜೀನಾಮೆ ನೀಡಬಾರದು. ಒಂದು ವೇಳೆ ಅವರು ನೀಡಿದರೂ, ಮುಖ್ಯಮಂತ್ರಿಗಳು ಅದನ್ನು ಸ್ವೀಕರಿಸಬಾರದು ಎಂದು ಅಭಿಮಾನಿಗಳು ಘೋಷಣೆ ಕೂಗಿದರು.

ಗೃಹ ಸಚಿವ ಆರಗ ಜ್ಞಾನೇಂದ್ರ, ಮುರುಗೇಶ್ ನಿರಾಣಿ, ಮುನಿರತ್ನ, ರಮೇಶ್ ಜಾರಕಿಹೊಳಿ ಸೇರಿ ಹಲವು ನಾಯಕರು ಉಪಸ್ಥಿತರಿದ್ದರು. ರಾಜೀನಾಮೆ ಪಡೆದ ಬಳಿಕ ಸಿಎಂ ಬೊಮ್ಮಾಯಿ ಅವರು ಈಶ್ವರಪ್ಪ ಜೊತೆ ಚರ್ಚಿಸಿದ್ದಾರೆ. ಈ ವೇಳೆ ಅವರಿಗೆ ಸಾಂತ್ವಾನ ಹೇಳಿರುವ ಮುಖ್ಯಮಂತ್ರಿಗಳು, "ನಿಮ್ಮೊಂದಿಗೆ

ಪಕ್ಷವಿದೆ. ಯಾವುದೇ ಕಾರಣಕ್ಕೂ ನೀವು ಧೈರ್ಯಗೆಡಬೇಡಿ" ಎಂದು ವಿಶ್ವಾಸ ತುಂಬಿದರು ಎಂದು ಮೂಲಗಳು ತಿಳಿಸಿವೆ.

ಆಧಾರ:ವಿಶ್ವವಾಣಿ, ದಿನಾಂಕ: 16.04.2022

## 9. ಸಂಚಾರಿ ಪಶು ಚಿಕಿತ್ಸಾಲಯ ಯೋಜನೆಗೆ ಚಾಲನೆ

ಜಾನುವಾರುಗಳಿಗೆ ಮನೆ ಬಾಗಿಲಿಗೆ ಹೋಗಿ ಆರೋಗ್ಯ ಸೇವೆ ನೀಡುವ ಉದ್ದೇಶದಿಂದ ದೇಶದಲ್ಲೇ ಮೊಟ್ಟ ಮೊದಲ ಬಾರಿ ರಾಜ್ಯದಲ್ಲಿ ಸಂಚಾರಿ ಪಶು ಚಿಕಿತ್ಸಾಲಯ (ಆಂಬ್ಯುಲೆನ್ಸ್) ಆರಂಭಿಸಲಾಗಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಕೇಂದ್ರ ಪಶು ಸಂಗೋಪನಾ ಸಚಿವ ಪುರುಷೋತ್ತಮ್ ರೂಪಾಲ್ ಚಾಲನೆ ನೀಡಿದರು.

ರಾಜ್ಯದಲ್ಲಿ ಒಟ್ಟು 275 ಸಂಚಾರಿ ಪಶು ಚಿಕಿತ್ಸಾಲಯಗಳನ್ನು ಆರಂಭಿಸಲು ನಿರ್ಧರಿಸಲಾಗಿದ್ದು, ಈ ಪೈಕಿ ಮೊದಲ ಹಂತದಲ್ಲಿ 70 ಸಂಚಾರಿ ಚಿಕಿತ್ಸಾಲಯಗಳನ್ನು ವಿಧಾನ ಸೌಧದ ಮುಂಭಾಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಲೋಕಾರ್ಪಣೆ ಮಾಡಲಾಗಿದೆ. ಇದೇ ವೇಳೆ ಪಶು ಸಂಗೋಪನಾ ಇಲಾಖೆಯ ಸಾಧನೆ ಕುರಿತ ಕಿರುಚಿತ್ರ ಪ್ರದರ್ಶನ ಮತ್ತು ಫಲಾನುಭವಿಗಳಿಗೆ ನಾನಾ ಸೌಲಭ್ಯಗಳ ವಿತರಣೆ ಕಾರ್ಯಕ್ರಮವೂ ನಡೆಯಿತು.

ನಂತರ ಮಾತನಾಡಿದ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ, ಗೋಮಾತೆಯ ಆರೋಗ್ಯ ರಕ್ಷಣೆ ನಮ್ಮ ಆದ್ಯತೆಯಾಗಿದೆ. ಗೋ ಸಂಪತ್ತಿನ ರಕ್ಷಣೆಗಾಗಿ 100 ಗೋಶಾಲೆಗಳ ಪ್ರಾರಂಭ, ಗೋ ಉತ್ಪನ್ನಗಳ ಮಾರಾಟಕ್ಕಾಗಿ ಗೋ ಮಾತಾ ಸಹಕಾರ ಸಂಘ ಸ್ಥಾಪಿಸಲಾಗುವುದು. ಅವುಗಳಿಗೆ ಔಷಧ ವ್ಯವಸ್ಥೆ, 400 ಪಶುವೈದ್ಯರ ನೇಮಕಾತಿ, ಡಿಪ್ಲೋಮಾ ಮಾಡಿದ ವಿದ್ಯಾರ್ಥಿಗಳಿಗಾಗಿ 250 ಹುದ್ದೆ ಭರ್ತಿಗೊಳಿಸಿ ಗೋ ಸೇವೆ, ಪಶುಸೇವೆಗೆ ಅವಕಾಶ ಕಲ್ಪಿಸಲಾಗುತ್ತದೆ. ರೋಗಗ್ರಸ್ಥ ದನಕರುಗಳ ಚಿಕಿತ್ಸೆಗೆ ಅನುಕೂಲವಾಗುವಂತಹ ಸಂಚಾರಿ ಪಶು ಚಿಕಿತ್ಸಾಲಯಗಳನ್ನು ಪ್ರಾರಂಭಿಸಲಾಗಿದ್ದು, ದನಕರುಗಳಿಗೆ ಮನೆಬಾಗಿಲಿಗೆ ತೆರಳಿ ಚಿಕಿತ್ಸೆ ಕೊಡಿಸುವಂತಹ ಮಾನವೀಯ ಕಾರ್ಯಕ್ರಮವನ್ನು ರಾಜ್ಯದಲ್ಲಿ ಆರಂಭಿಸಲಾಗಿದೆ ಎಂದು ಹೇಳಿದರು.

ನಮ್ಮ ಸರ್ಕಾರ ಗೋಹತ್ಯೆ ನಿಷೇಧ ಕಾನೂನು ಜಾರಿಗೆ ತಂದಾಗ, ವಯಸ್ಸಾದ ಗೋವುಗಳ ಸಾಕಾಣಿಕೆಯಿಂದ ರೈತರಿಗೆ ಹೊರೆಯಾಗುತ್ತದೆ ಎನ್ನುತ್ತಿದ್ದರು. ಆದರೆ, ರೈತ ಗೋವುಗಳನ್ನು ಹೊರೆ ಎಂದು ತಿಳಿದೇ ಇಲ್ಲ. ಗೋ ಸಂಪತ್ತು ಉಳಿಸಿ ಕೊಂಡರೆ ಆಹಾರ, ಆದಾಯ, ಪೌಷ್ಟಿಕತೆ ಸಿಗುತ್ತದೆ. ಇಂತಹ ಗೋವುಗಳು ವಯಸ್ಸಾದ ನಂತರ ವಧೆ ಮಾಡುವ ಕೃತ್ಯಕ್ಕೆ ಕೆಲವರು ಪ್ರೋತ್ಸಾಹ ನೀಡುತ್ತಾರೆ ನಮ್ಮ ದೇಶದ ಸಂಸ್ಕೃತಿ, ಜೀವ ಉಳಿಸುವುದೇ ಹೊರತು ವಧೆ ಮಾಡುವುದಲ್ಲ ಎಂದರು. ಗೋವುಗಳ ವಿವಿಧ ತಳಿಗಳ ಅಭಿವೃದ್ಧಿ, ಹಾಲು ಮೆಗಾ ಡೈರಿ ಸ್ಥಾಪನೆಗೆ ಒತ್ತು ನೀಡಲಾಗಿದೆ. ರಾಜ್ಯದಲ್ಲಿ ಸೆಕೆಂಡರಿ ಕೃಷಿ ನಿರ್ದೇಶನಾಲಯ ಮಾಡಿ ಕೃಷಿ ಉತ್ಪನ್ನಗಳಿಗೆ ಮೌಲ್ಯವರ್ಧನೆ, ಮಾರುಕಟ್ಟೆ ಕಲ್ಪಿಸುವ ಉದ್ದೇಶದಿಂದ ಸ್ಥಾಪಿಸಲಾಗಿದೆ. ರೈತರ, ಶ್ರಮಿಕರ ಸ್ವಾವಲಂಬನೆ ಹಾಗೂ ಸ್ವಾಭಿಮಾನದ ಬದುಕು ಕಟ್ಟಿಕೊಡಲು ಸರ್ಕಾರ ಬದ್ಧವಾಗಿದೆ. ಕೃಷಿ, ತೋಟಗಾರಿಕೆ, ರೇಷ್ಮೆ, ಸಹಕಾರ, ಪಶುಸಂಗೋಪನೆ ಇಲಾಖೆಗಳನ್ನು ಸಂಯೋಜನೆಗೊಳಿಸುವ ಮೂಲಕ ಮಹಾತ್ಮಾ ಗಾಂಧಿಯವರ ಗ್ರಾಮಾಭಿವೃದ್ಧಿಯ ಕನಸನ್ನು ಸಾಕಾರಗೊಳಿಸಲಾಗುವುದು ಎಂದು ತಿಳಿಸಿದರು.

ಸಚಿವರಾದ ಪ್ರಭು ಚವ್ಹಾಣ್, ಆರ್.ಅಶೋಕ, ವಿ.ಸೋಮಣ್ಣ, ಎಸ್.ಟಿ ಸೋಮಶೇಖರ್, ಸಂಸದ ಪಿ.ಸಿ.ಮೋಹನ್, ಇಲಾಖಾ ಕಾರ್ಯದರ್ಶಿ ಸಲ್ಮಾ ಪಾಹಿಂ ಮತ್ತಿತರರು ಇದ್ದರು.

ಆಧಾರ:ವಿಶ್ವವಾಣಿ, ದಿನಾಂಕ:08.05.2022

.

# 10.ಬೊಕ್ಕಸಕ್ಕೆ ಭರ್ಜರಿ ವರಮಾನ

ಪ್ರಸ್ತುತ ಆರ್ಥಿಕ ವರ್ಷದ ಮೊದಲ ತಿಂಗಳಿನಲ್ಲಿಯೇ ರಾಜ್ಯ ಸರ್ಕಾರದ ತೆರಿಗೆ ಮೂಲಗಳಿಂದ ನಿರೀಕ್ಷೆಗೂ ಮೀರಿ ಆದಾಯ ಸಂಗ್ರಹವಾಗಿದ್ದು, ಬರೋಬ್ಬರಿ ರೂ.11,525 ಕೋಟಿ ಬೊಕ್ಕಸಕ್ಕೆ ಹರಿದು ಬಂದಿದೆ. ಇದರಿಂದ ಕೊರೋನೋತ್ತರದಲ್ಲಿ ಜನಜೀವನ ಸಹಜ ಸ್ಥಿತಿಗೆ ಮರಳಲಿದೆ, ಆರ್ಥಿಕ ಚಟುವಟಿಕೆ ಚುರುಕುಗೊಂಡಿದೆ ಎಂಬುದು ಸಾಬೀತಾಗಿದೆ.

ತೆರಿಗೆಯ ನಾಲ್ಕು ಪ್ರಮುಖ ಮೂಲಗಳಿಂದ ಆದಾಯ ಸಂಗ್ರಹ ಆಶಾದಾಯಕವಾಗಿದ್ದು, ಇದೇ ರೀತಿ ಪ್ರತಿ ತಿಂಗಳು ತೆರಿಗೆ ಸಂಗ್ರಹವಾದರೆ ವಾರ್ಷಿಕ ಗುರಿಯನ್ನು ಸುಲಭವಾಗಿ ತಲುಪಬಹುದು. ಜೊತೆಗೆ ರೂ.9,000 ಕೋಟಿ ಹೆಚ್ಚುವರಿ ಆದಾಯ ಸಂಗ್ರಹವಾಗುವ ಅಂದಾಜಿದೆ. ಬಜೆಟ್ ಕಾರ್ಯಕ್ರಮಗಳ ತ್ವರಿತ ಅನುಷ್ಠಾನಕ್ಕೆ ಸರ್ಕಾರ ಒತ್ತು ನೀಡಿದ್ದು, ತೆರಿಗೆ ಆದಾಯವೂ ಏರುಮುಖವಾಗಿದ್ದರೆ ಅಭಿವೃದ್ಧಿ ಕೆಲಸಗಳು ಶೀಘ್ರವಾಗಿ ಕಾರ್ಯಗತವಾಗುವ ನಿರೀಕ್ಷೆ ಮೂಡಿದೆ.

ಒಟ್ಟಾರೆ ನಾಲ್ಕು ತೆರಿಗೆ ಮೂಲಗಳಿಂದ ವಾರ್ಷಿಕ ರೂ.1.29 ಲಕ್ಷ ಕೋಟಿ ಸಂಗ್ರಹ ಗುರಿ ಇದೆ. ಈ ಗುರಿ ತಲುಪಲು ಮಾಸಿಕ ಸರಾಸರಿ ರೂ.10,751 ಕೋಟಿ ಸಂಗ್ರಹವಾಗಬೇಕು. ಮೊದಲ ತಿಂಗಳಲ್ಲೇ ಸರಾಸರಿ ಗುರಿ ಮೀರಿ ರೂ. 11,525 ಕೋಟಿ ಸಂಗ್ರಹವಾಗಿರುವುದು ಆಶಾದಾಯಕವೆನಿಸಿದೆ.

ಮುಖ್ಯವಾಗಿ ಪೆಟ್ರೋಲ್, ಡೀಸೆಲ್ ದರ ಏರಿಕೆಯಿಂದ ಸರ್ಕಾರಕ್ಕೆ ಹೆಚ್ಚುವರಿ ಆದಾಯ ಸಂಗ್ರಹವಾಗಿದೆ. ಏಪ್ರಿಲ್ 1 ಹಾಗೂ ಏಪ್ರಿಲ್ 30ರ ತೈಲ ಬೆಲೆ ಗಮನಿಸಿದರೆ ಪೆಟ್ರೋಲ್ ದರದಲ್ಲಿ ರೂ.4 ಹಾಗೂ ಡೀಸೆಲ್ ದರದಲ್ಲಿ 3 ರೂ. ಹೆಚ್ಚಳವಾಗಿದೆ. ಪೆಟ್ರೋಲ್ ಮೇಲೆ ಶೇ.25.94 ಹಾಗೂ ಡೀಸೆಲ್ ಮೇಲೆ ಶೇ.14.34 ರಷ್ಟು ಮಾರಾಟ ತೆರಿಗೆಯನ್ನು ರಾಜ್ಯ ಸರ್ಕಾರ ವಿಧಿಸುತ್ತಿದೆ. ಹಾಗಾಗಿ ತೈಲ ದರ ಹೆಚ್ಚಾದಂತೆ ಮಾರಾಟ ತೆರಿಗೆ ಆದಾಯವೂ ವೃದ್ಧಿಸುತ್ತದೆ. ಮಾರ್ಚ್‌ನಲ್ಲಿ ಮಾರಾಟ ತೆರಿಗೆಯಿಂದ ರೂ.1,414 ಕೋಟಿ ಸಂಗ್ರಹವಾಗಿದ್ದರೆ ಏಪ್ರಿಲ್‌ನಲ್ಲಿ ರೂ.1,602 ಕೋಟಿ ಆದಾಯ ಬಂದಿದೆ. ತೈಲ ಬೆಲೆ ಏರಿಕೆಯಿಂದ ಸುಮಾರು ರೂ.200 ಕೋಟಿ ಹೆಚ್ಚುವರಿ ಆದಾಯ ಸಂಗ್ರಹವಾದಂತಾಗಿದೆ. ಜೊತೆಗೆ ವೃತ್ತಿ ತೆರಿಗೆಯಿಂದ ಹೆಚ್ಚುವರಿ ರೂ.60 ಕೋಟಿ ಬಂದಿದೆ.

**ಹೆಚ್ಚುವರಿ ಬಿಯರ್ ಬಿಕರಿ**: ವಾಣಿಜ್ಯ ತೆರಿಗೆ ನಂತರ ಪ್ರಮುಖ, ನಿಶ್ಚಿತ ಆದಾಯ ಮೂಲವೆನಿಸಿದ ಅಬಕಾರಿ ಸುಂಕದಿಂದ ಕಳೆದ ತಿಂಗಳು ರೂ.2,300 ಕೋಟಿ ಸಂಗ್ರಹವಾಗಿದೆ. ಸಾಮಾನ್ಯವಾಗಿ ಇಎಂಎಲ್ ಮದ್ಯ ಮಾರಾಟವೇ ಹೆಚ್ಚಾಗಿರುತ್ತದೆ. ಆದರೆ ಏಪ್ರಿಲ್‌ನಲ್ಲಿ ಸರಾಸರಿ ಬಿಯರ್ ಮಾರಾಟಕ್ಕಿಂತ 10 ಲಕ್ಷ ಬಾಕ್ಸ್‌ನಷ್ಟು ಹೆಚ್ಚವರಿ ಬಿಯರ್ ಮಾರಾಟವಾಗಿದ್ದು, ಹಿಂದಿನ ವರ್ಷದ ಏಪ್ರಿಲ್ ಆದಾಯಕ್ಕಿಂತ ಈ ಬಾರಿ ರೂ.100 ಕೋಟಿ ಹೆಚ್ಚು ಸಂಗ್ರಹವಾಗಿದೆ.

ಆನ್ ಲೈನ್‌ನಲ್ಲಿ ಮದ್ಯ ಖರೀದಿ ಬೇಡಿಕೆ ಸಲ್ಲಿಕೆ(ಇಂಡೆಂಟ್)ವ್ಯವಸ್ಥೆ ಜಾರಿಯೂ ಆದಾಯ ವೃದ್ಧಿಗೆ ಸಹಕಾರಿಯಾಗಿದೆ ಎಂಬ ಮಾತುಗಳಿವೆ.

**ಸಾರಿಗೆಯಿಂದಲೂ ಬಂಪರ್:** ಕೇಂದ್ರ ಹಾಗೂ ರಾಜ್ಯ ಸರ್ಕಾರದ ಬಜೆಟ್ ಆಧರಿಸಿ ವಾಹನಗಳ ಬೆಲೆ ಪರಿಷ್ಕರಣೆಯಾದರೆ ಸಾಮಾನ್ಯವಾಗಿ ಏಪ್ರಿಲ್ 1 ರಿಂದ ಜಾರಿಯಾಗಲಿದೆ. ಹಾಗಾಗಿ ಆರ್ಥಿಕ ವರ್ಷದ ಮೊದಲ ತಿಂಗಳಲ್ಲಿ ಹೊಸ ವಾಹನ ಖರೀದಿ ಕಡಿಮೆ ಇರುತ್ತದೆ ಎಂಬ ಭಾವನೆ ಇದೆ. ಆದರೆ ಕಳೆದ ಏಪ್ರಿಲ್‌ನಲ್ಲಿ ಸಾರಿಗೆ ತೆರಿಗೆ ಶುಲ್ಕದಿಂದ ರೂ.671 ಕೋಟಿ ಸಂಗ್ರಹವಾಗಿರುವುದು ಅಚ್ಚರಿ ಮೂಡಿಸಿದೆ. ಏಪ್ರಿಲ್‌ನಲ್ಲಿ ಹೊಸ ವಾಹನ ನೋಂದಣಿ ಪ್ರಮಾಣ ಕಡಿಮೆಯಿರುತ್ತದೆ. ಹಾಗಿದ್ದರೂ ನಿರೀಕ್ಷಿಸಲಾಗಿದ್ದ ರೂ.667 ಕೋಟಿ ಮೀರಿ ರೂ.671 ಕೋಟಿ ಸಂಗ್ರಹವಾಗಿದೆ. 2021–22ನೇ ಸಾಲಿನ ಏಪ್ರಿಲ್‌ನಲ್ಲಿ ಕೋವಿಡ್, ಲಾಕ್‌ಡೌನ್ ಕಾರಣಕ್ಕೆ ಕೇವಲ ರೂ.43ಕೋಟಿ ಸಂಗ್ರಹವಾಗಿತ್ತು. ಮೊದಲ ತಿಂಗಳಲ್ಲೇ ಉತ್ತಮ ಆದಾಯ ಸಂಗ್ರಹವಾಗಿದ್ದು. ವಾರ್ಷಿಕ ಗುರಿ ತಲುಪುವ ವಿಶ್ವಾಸ ಹೆಚ್ಚಿಸಿದೆ ಎಂದು ಸಾರಿಗೆ ಇಲಾಖೆ ಮೂಲಗಳು ತಿಳಿಸಿವೆ.

**ತೆರಿಗೆ ಸಂಗ್ರಹ (ಕೋಟಿ ರೂ. ಗಳಲ್ಲಿ):**

| ಮೂಲ | ವಾರ್ಷಿಕ ಗುರಿ | ಏಪ್ರಿಲ್ ಸಂಗ್ರಹ |
|---|---|---|
| ➢ ವಾಣಿಜ್ಯ ತೆರಿಗೆ | 77,010 | 7,384 |
| ➢ ಅಬಕಾರಿ | 29,000 | 2,300 |
| ➢ ಮುದ್ರಾಂಕ–ನೋಂದಣಿ | 15,000 | 1,170 |
| ➢ ಸಾರಿಗೆ | 8,007 | 671 |
| ➢ ಒಟ್ಟು | **1,29,017** | **11,525** |

**ವಾಣಿಜ್ಯ ತೆರಿಗೆ ಮೂಲ**

| | |
|---|---|
| ರಾಜ್ಯ ಜಿಎಸ್‌ಟಿ | ರೂ.3,520.37 ಕೋಟಿ |
| ಐಜಿಎಸ್‌ಟಿ | ರೂ.2,099.79 ಕೋಟಿ |
| ಮಾರಾಟ ತೆರಿಗೆ | ರೂ.1,602.64 ಕೋಟಿ |
| ವೃತ್ತಿ ತೆರಿಗೆ | ರೂ.161.18 ಕೋಟಿ |

ಆಧಾರ:ವಿಜಯಕರ್ನಾಟಕ,ದಿನಾಂಕ:08.05.2022.

## 11. ಕಾರ್ಯಶೈಲಿ ಬದಲಿಸಿಕೊಳ್ಳಿ

ಸ್ವಚ್ಛ, ಸರಳ ಮತ್ತು ದಕ್ಷ ಆಡಳಿತದ ಭಾವನೆ ಜನಸಾಮಾನ್ಯರಲ್ಲಿ ಮೂಡುವಂತೆ ಕಾರ್ಯಶೈಲಿಯಲ್ಲಿ ಬದಲಾವಣೆ ಮಾಡಿಕೊಂಡು ನವಕರ್ನಾಟಕ ನಿರ್ಮಾಣ ಕಲ್ಪನೆ ಸಾಕಾರಕ್ಕೆ ತಂಡವಾಗಿ ಕೆಲಸ ಮಾಡುವಂತೆ ಜಿಲ್ಲಾಧಿಕಾರಿಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಿವಿಮಾತು ಹೇಳಿದ್ದಾರೆ.

“ಜಿಲ್ಲೆಗಳಲ್ಲಿ ಡಿ.ಸಿಗಳೇ ಆಡಳಿತ ವ್ಯವಸ್ಥೆಯ ಮುಖ್ಯಸ್ಥರು. ನೀವು ಕ್ರಿಯಾಶೀಲರಾದರೆ ಇಡೀ ಜಿಲ್ಲಾಡಳಿತ ಚುರುಕಾಗುತ್ತದೆ. ಔಪಚಾರಿಕ ಕೆಲಸ, ಕಚೇರಿ ಸಮಯಕ್ಕೆ ಸೀಮಿತವಾದರೆ ಉಪಯೋಗವಿಲ್ಲ. ಕಾನೂನು ಇರುವುದೇ ಜನರಿಗೆ ಅನುಕೂಲ ಮಾಡಿಕೊಡಲು ಎಂಬುದನ್ನು ಮರೆಯಬೇಡಿ. ಕಷ್ಟದಲ್ಲಿರುವ ಜನರಿಗೆ ರಕ್ಷಣೆ ನೀಡುವ ಜನಪರ ಕೆಲಸಗಳ ಬದ್ಧತೆ ಇರಲಿ. ಪಾರದರ್ಶಕ ಮತ್ತು ಉತ್ತರದಾಯಿತ್ವ ಆಡಳಿತಕ್ಕೆ ಒತ್ತು ನೀಡಿ,” ಎಂದು ಸಿಎಂ ಮಾರ್ಗದರ್ಶನ ಮಾಡಿದ್ದಾರೆ.

ವಿಧಾನಸೌಧದಲ್ಲಿ ನಾನಾ ಇಲಾಖಾ ಮುಖ್ಯಸ್ಥರು, ಪ್ರಾದೇಶಿಕ ಆಯುಕ್ತರು ಹಾಗೂ ಎಲ್ಲ ಜಿಲ್ಲಾಧಿಕಾರಿಗಳೊಂದಿಗೆ ಸಿಎಂ ಸಭೆ ನಡೆಸಿದರು. ಬಜೆಟ್ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಕಾರ್ಯಾದೇಶ ಹೊರಡಿಸುವ ಸಂಬಂಧ ಇಲಾಖಾವಾರು ಸಭೆಗಳನ್ನು ಮುಗಿಸಿರುವ ಸಿಎಂ, ಸರ್ಕಾರದ ಯೋಜನೆಗಳನ್ನು ಜಾರಿಗೊಳಿಸುವಲ್ಲಿ ನಿರ್ಣಾಯಕ ಪಾತ್ರವಹಿಸುವ ಜಿಲ್ಲಾಡಳಿತಗಳನ್ನು ಕ್ರಿಯಾಶೀಲಗೊಳಿಸುವ ಉದ್ದೇಶದಿಂದ ಡಿ.ಸಿ ಗಳೊಂದಿಗೆ ಸುಧೀರ್ಘ ಸಭೆ ನಡೆಸಿದರು.

“ಅಧಿಕಾರದಲ್ಲಿ ಸರ್ಕಾರದ ಕೊನೆಯ ವರ್ಷ ಇದಾಗಿದ್ದು, ಮುಂದುವರಿದ ಯೋಜನೆಗಳು ಹಾಗೂ ಬಜೆಟ್ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದನ್ನು ಗಂಭೀರವಾಗಿ

ಪರಿಗಣಿಸಬೇಕು. ರಾಜ್ಯದ ನಾನಾ ಭಾಗಗಳಿಂದ ಸಿಎಂ ಕಛೇರಿಗೆ ಸಾವಿರಾರು ಅರ್ಜಿಗಳು ಬರುತ್ತಿದ್ದು, ಜಿಲ್ಲಾಡಳಿತಗಳು ಸ್ಪಂದನಶೀಲವಾಗಿದ್ದರೆ ಸಾರ್ವಜನಿಕರು ತಮ್ಮ ಸಮಸ್ಯೆಗಳ ಪರಿಹಾರಕ್ಕೆ ನನ್ನ ಕಚೇರಿಗೆ ಮನವಿ ಸಲ್ಲಿಸುವ ಸನ್ನಿವೇಶ ಸೃಷ್ಟಿಯಾಗುತ್ತಿರಲಿಲ್ಲ. ಇನ್ನು ಮುಂದೆ ಡಿ.ಸಿ ಕಚೇರಿಯಲ್ಲೇ ಸರ್ವಾಜನಿಕ ಅಹವಾಲು ಸ್ವೀಕರಿಸಿ, ಪರಿಹಾರ ಖಾತರಿಪಡಿಸಲು ಘಟಕವೊಂದನ್ನು ರಚಿಸಬೇಕು," ಎಂದು ಮುಖ್ಯಮಂತ್ರಿಗಳು ನಿರ್ದೇಶನ ನೀಡಿದರು.

ಸಚಿವರಾದ ಗೋವಿಂದ ಕಾರಜೋಳ, ಆರ್.ಅಶೋಕ್, ಸಿ.ಸಿ. ಪಾಟೀಲ್, ಕೆ.ಸಿ.ನಾರಾಯಣಗೌಡ, ಕೆ.ಗೋಪಾಲಯ್ಯ, ಬಿ.ಸಿ.ನಾಗೇಶ, ಬಿ.ಸಿ.ಪಾಟೀಲ್, ವಿ.ಸುನೀಲ್ ಕುಮಾರ, ಪ್ರಭು ಚವ್ಹಾಣ್, ಉಮೇಶ್ ಕತ್ತಿ, ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

**ಮುಖ್ಯಮಂತ್ರಿ ಸೂಚನೆ:**

- ಜಿಲ್ಲಾಧಿಕಾರಿಗಳ ಕಚೇರಿಯಲ್ಲಿಯೇ ಸಾರ್ವಜನಿಕ ಅಹವಾಲು ಸ್ವೀಕರಿಸಿ ಪರಿಹರಿಸಲು ಸೆಲ್ ರಚಿಸಬೇಕು.
- ವಾರಕ್ಕೊಮ್ಮೆ ತಾಲೂಕು ಕಚೇರಿಗಳಿಗೆ ಭೇಟಿ ನೀಡಿ ಪರಿಶೀಲಿಸಬೇಕು.
- ಪರಿಹಾರ ವಿತರಣೆಯಲ್ಲಿನ ಅಕ್ರಮಗಳನ್ನು ತಡೆಯಬೇಕು. ಭ್ರಷ್ಟಚಾರ ಮತ್ತು ವಿಳಂಬ ಧೋರಣೆಯನ್ನು ಸಹಿಸಲು ಸಾಧ್ಯವಿಲ್ಲ.
- ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆಗೆ ಕಾರ್ಯಕ್ರಮದಲ್ಲಿ ದೀನದಲಿತರು, ಬಡವರಿಗೆ, ರೈತರಿಗೆ ಯೋಜನೆಗಳನ್ನು ತಲುಪಿಸುವ ಕಾರ್ಯಕ್ಕೆ ಒತ್ತು ಕೊಡಬೇಕು.
- ಅರ್ಜಿ ಕೊಟ್ಟರೆ ಕೆಲಸವಾಗಲ್ಲ ಎಂಬ ಅಭಿಪ್ರಾಯ ದೂರಮಾಡಿ. ಬಡವರ ಕಾರ್ಯಕ್ರಮಗಳ ಅನುಷ್ಠಾನ, ದೌರ್ಜನ್ಯ ಪ್ರಕರಣಗಳ ತಡೆಗೆ ಒತ್ತು ನೀಡಿ. ಮನೆ ಬಾಗಿಲಿಗೆ ದಾಖಲೆಗಳನ್ನು ತಲುಪಿಸುವ ಕಾರ್ಯದಲ್ಲಿ ರಾಜಿ ಬೇಡ.

ಆಧಾರ:ವಿಜಯಕರ್ನಾಟಕ, ದಿನಾಂಕ:09.05.2022.

## 12.ಟೆಂಡರ್ ಪರಿಶೀಲನೆ ಸಮಿತಿ: ನ್ಯಾ. ರತ್ನಕಲಾ ನೇತೃತ್ವ

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕೈಗೊಳ್ಳುವ ರೂ.50 ಕೋಟಿಗಿಂತ ಹೆಚ್ಚು ಮೊತ್ತದ ಕಾಮಗಾರಿಗಳು ಹಾಗೂ ಖರೀದಿಗೆ ಸಂಬಂಧಿಸಿದ ಟೆಂಡರ್ ದಾಖಲೆಗಳು ಹಾಗೂ ಅಂದಾಜು ಪಟ್ಟಿಗಳನ್ನು ಟೆಂಡರ್ ಪೂರ್ವದಲ್ಲೇ ಪರೀಶೀಲಿಸುವುದಕ್ಕಾಗಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ರತ್ನಕಲಾ ನೇತೃತ್ವದಲ್ಲಿ ತ್ರಿಸದಸ್ಯ ಸಮಿತಿ ನೇಮಿಸಲಾಗಿದೆ.

ಜಲ ಸಂಪನ್ಮೂಲ ಇಲಾಖೆಯ ನಿವೃತ್ತ ಕಾರ್ಯದರ್ಶಿ ಬಿ.ಜಿ.ಗುರುಪಾದಸ್ವಾಮಿ (ಎಂಜಿನಿಯರಿಂಗ್ ತಜ್ಞ) ಹಾಗೂ ರಾಜ್ಯ ಲೆಕ್ಕ ಪತ್ರ ಇಲಾಖೆಯ ನಿವೃತ್ತ ನಿರ್ದೇಶಕ ಕೆ.ನಂದಕುಮಾರ್ (ಹಣಕಾಸು ತಜ್ಞ) ಅವರನ್ನು ಸಮಿತಿಯ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ. ಲೋಕೋಪಯೋಗಿ ಇಲಾಖೆಯ ಅಡಿಯಲ್ಲಿ ಈ ಸಮಿತಿಯು ಕಾರ್ಯನಿರ್ವಹಿಸಲಿದೆ ಎಂದು ಹಣಕಾಸು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಐ.ಎಸ್.ಎನ್.ಪ್ರಸಾದ್ ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.

ರೂ.50 ಕೋಟಿ ಮತ್ತು ಅದಕ್ಕಿಂತ ಹೆಚ್ಚಿನ ವೆಚ್ಚದ ಎಲ್ಲ ನಿರ್ಮಾಣ ಕಾಮಗಾರಿಗಳು ಹಾಗೂ ಸಾರ್ವಜನಿಕ ಸಂಗ್ರಹಣೆಯ ಟೆಂಡರ್ ಪ್ರಕ್ರಿಯೆಗಳು ಈ ಸಮಿತಿಯ ವ್ಯಾಪ್ತಿಗೆ ಬರಲಿವೆ. ಸರ್ಕಾರದ ವಿವಿಧ ಇಲಾಖೆಗಳಲ್ಲಿ ಟೆಂಡರ್ ಹಂತದಲ್ಲೇ ಅಕ್ರಮಗಳು ನಡೆಯುತ್ತಿವೆ ಎಂಬ ಆರೋಪ ಕೇಳಿ ಬಂದಿತ್ತು. ಈ ಕಾರಣದಿಂದ ಟೆಂಡರ್ ಪರಿಶೀಲನೆಗೆ ಹೈಕೋರ್ಟ್ ನಿವೃತ್ತ ನ್ಯಾಯ ಮೂರ್ತಿ ನೇತೃತ್ವದ

ಸಮಿತಿ ರಚಿಸಲು 2021ರ ಡಿಸೆಂಬರ್ 12 ರಂದು ಸಂಪುಟ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿತ್ತು. ಅದರ ಅನುಸಾರ ಸಮಿತಿ ರಚಿಸಲಾಗಿದೆ.

ಸಮಿತಿಯ ಅಧ್ಯಕ್ಷರಿಗೆ ಮಾಸಿಕ ರೂ.2ಲಕ್ಷ ಮತ್ತು ಸದಸ್ಯರಿಗೆ ಮಾಸಿಕ ತಲಾ ರೂ.1ಲಕ್ಷ ಗೌರವ ಧನ ನಿಗದಿಗಪಡಿಸಲಾಗಿದೆ. ಸಭೆ ಹಾಗೂ ಪ್ರವಾಸ ಭತ್ಯೆಗಳನ್ನೂ ಒದಗಿಸಲಾಗತ್ತದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಆಧಾರ: ಪ್ರಜಾವಾಣಿ, ದಿನಾಂಕ:09.05.2022

## 13.ಸೌಂಡ್‌ಗೆ ಬ್ರೇಕ್

ಆಜಾನ್ ಬಳಕೆ ವಿಚಾರದಲ್ಲಿ ಸುಪ್ರಿಂ ಕೋರ್ಟ್ ಆದೇಶ ಪಾಲಿಸುವ ನಿಟ್ಟಿನಲ್ಲಿ ಹಿಂದೂ ಸಂಘಟನೆಗಳು ರಾಜ್ಯ ಸರ್ಕಾರದ ವಿರುದ್ಧ ಒತ್ತಡ ಹೇರುತ್ತಿರುವಂತೆಯೇ ಲೌಡ್‌ಸ್ಪೀಕರ್ ಬಳಕೆಗೆ ನಿಯಮ ತರಲು ಮುಂದಾಗಿದೆ. ರಾಜ್ಯದ ಕೆಲವು ಭಾಗಗಳಲ್ಲಿ ಹನುಮಾನ್ ಚಾಲೀಸ, ಭಜನೆ, ಸುಪ್ರಭಾತ ಮೊಳಗಿಸಿದ ಪ್ರಕರಣ ವರದಿಯಾಗುತ್ತಿದ್ದಂತೆಯೇ, ಸಿಎಂ ಬಸವರಾಜ ಬೊಮ್ಮಾಯಿ ಬೆಂಗಳೂರಿನಲ್ಲಿ ಹಿರಿಯ ಅಧಿಕಾರಿಗಳ ಜೊತೆಗೆ ಸಭೆ ನಡೆಸಿದ್ದು, ಧ್ವನಿವರ್ಧಕ ಬಳಕೆಗೆ ಅನುಮತಿ ಪಡೆಯಲು ನಿರ್ದೇಶಿಸಿದ್ದಾರೆ.

ಸಾರ್ವಜನಿಕವಾಗಿ ಧ್ವನಿವರ್ಧಕ ಬಳಕೆ ಮಾಡುವವರು, ಅರ್ಜಿ ಹಾಕಿ ಅನುಮತಿ ಪಡೆಯಬೇಕು. ಅದಕ್ಕೆ 15 ದಿನಗಳಿಂದ ಒಂದು ತಿಂಗಳವರೆಗೆ ಅವಕಾಶ ನೀಡಲಾಗುತ್ತದೆ. ಈಗಾಗಲೇ ಕಾನೂನು ಬಾಹಿರವಾಗಿ ದ್ವನಿವರ್ಧಕ ಅಳವಡಿಸಿಕೊಂಡವರು ಕೂಡಲೇ ಅವುಗಳನ್ನು ತೆಗೆಯಬೇಕು ಎಂದು ತೀರ್ಮಾನಿಸಲಾಗಿದೆ.

ಸಿಎಂ ಬಸವರಾಜ ಬೊಮ್ಮಾಯಿ, ಗೃಹ ಕಚೇರಿ ಕೃಷ್ಣಾದಲ್ಲಿ ತುರ್ತು ಸಭೆ ನಡೆಸಿ ಆಜಾನ್– ಭಜನೆ ಸಂಘರ್ಷದ ಬಗ್ಗೆ ಸಭೆ ನಡೆಸಿದರು. ಈ ವೇಳೆ ಸಭೆಯಲ್ಲಿ ಸಿಎಂ ಧ್ವನಿವರ್ಧಕ ಬಳಕೆಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ಆದೇಶಗಳನ್ನು ಪಾಲಿಸಬೇಕು ಅಗತ್ಯ ಮಾರ್ಗಸೂಚಿ ಹೊರಡಿಸಬೇಕು ಎಂದು ಸೂಚನೆ ನೀಡಿದ್ದಾರೆ.

**ಸೌಹಾರ್ದಯುತ ಅನುಷ್ಠಾನ:** ಸಭೆಯ ಕುರಿತು ನೆಲಮಂಗಲದಲ್ಲಿ ಮಾತನಾಡಿದ ಸಿಎಂ, ಸಾರ್ವಜನಿಕ ಸ್ಥಳಗಳಲ್ಲಿ ಧ್ವನಿವರ್ಧಕ ಬಳಕೆಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ಆದೇಶ ಹೊರಡಿಸಿದೆ. ಅದಕ್ಕೆ ಸಂಬಂಧಿಸಿದಂತೆ 2002ರಲ್ಲಿ ಕರ್ನಾಟಕದ ಅಂದಿನ ಸರ್ಕಾರ ಒಂದು ಆದೇಶ ಹೊರಡಿಸಿತ್ತು. ಅದನ್ನು ಸೌಹಾರ್ದಯುತವಾಗಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಧ್ವನಿವರ್ಧಕ ವಿಚಾರದಲ್ಲಿ ಸುಪ್ರೀಂಕೋರ್ಟ್ ಆದೇಶವಿದೆ. ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಶಿಫಾರಸ್ಸಿನನ್ವಯ ಕೇಂದ್ರ ಸರ್ಕಾರ ಆಜ್ಞೆ ಮಾಡಿದೆ.

**ಆದೇಶದ ಪರಿಪಾಲನೆಗೆ ಸೂಚನೆ:** ಆದೇಶದ ಅನುಷ್ಠಾನಕ್ಕಾಗಿ ಡಿವೈಎಸ್‌ಪಿ ದರ್ಜೆಯ ಅಧಿಕಾರಿಗಳಿರಬೇಕು. ಆದೇಶದ ಈ ಎಲ್ಲ ಅಂಶಗಳ ಪರಿಪಾಲನೆಗೆ ಸೂಚನೆ ನೀಡಲಾಗಿದೆ. ಈ ಆದೇಶದ ಅನುಷ್ಠಾನಕ್ಕೆ ಸೂಕ್ತ ಮಾರ್ಗಸೂಚಿಯನ್ನು ನೀಡಲಾಗುವುದು ಎಂದರು. ಧ್ವನಿವರ್ಧಕ ವಿಚಾರದಲ್ಲಿ ಯಾರೂ ಕೂಡ ಕಾನೂನನ್ನು ಕೈಗೆ ತೆಗೆದುಕೊಳ್ಳಬಾರದು. ಆದೇಶವನ್ನು ಎಲ್ಲರೂ ಪರಿಪಾಲನೆ ಮಾಡಬೇಕು. ಆಗ ಎಲ್ಲದಕ್ಕೂ ಪರಿಹಾರ ದೊರೆಯುತ್ತದೆ. ಉತ್ತರಪ್ರದೇಶ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಇದೇ ರೀತಿಯ ಪಾಲನೆ ಆಗುತ್ತಿದೆ ಎಂದು ತಿಳಿಸಿದರು.

**ಸುಪ್ರೀಂ ಕೋರ್ಟ್ ಆದೇಶ:** ಯಾವ ಸಮಯದಲ್ಲಿ ಎಷ್ಟು ಡೆಸಿಬಲ್ ಧ್ವನಿ ಬಳಸಬೇಕು ಎಂಬ ಬಗ್ಗೆ ಸುಪ್ರೀಂಕೋರ್ಟ್ ಆದೇಶ ಪಾಲಿಸಲು ತೀರ್ಮಾನಿಸಲಾಗಿದೆ. ಬೆಳಗ್ಗೆ 6ರಿಂದ ರಾತ್ರಿ 10 ಗಂಟೆಯವರೆಗೆ ಒಂದು ನಿರ್ದಿಷ್ಟ ಮಾನದಂಡದ ಡೆಸಿಬಲ್‌ನಲ್ಲಿ ಧ್ವನಿವರ್ಧಕ ಬಳಸುವ ನಿಟ್ಟಿನಲ್ಲಿ ಸ್ಪಷ್ಟವಾದ ಮಾರ್ಗಸೂಚಿ ಹೊರಡಿಸಲು ಸರ್ಕಾರ ತೀರ್ಮಾನಿಸಿದೆ.

**ಎಲ್ಲರಿಗೂ ಅನ್ವಯ:** ಈ ಮಾರ್ಗಸೂಚಿ ಕೇವಲ ಹಿಂದೂ ಅಥವ ಮುಸ್ಲಿಂ ಧಾರ್ಮಿಕ ಕೇಂದ್ರಗಳಲ್ಲಿನ ಧ್ವನಿವರ್ಧಕಗಳಿಗೆ ಮಾತ್ರ ಅನ್ವಯವಾಗುವುದಿಲ್ಲ. ಎಲ್ಲ ಬಗೆಯ ಸಾರ್ವಜನಿಕ ಕಾರ್ಯಕ್ರಮಗಳಿಗೂ ಇದು ಅನ್ವಯಿಸಲಿದೆ. ಧ್ವನಿವರ್ಧಕ ಮಿತಿ ಪ್ರಮಾಣದಲ್ಲೇ ಬಳಸಬೇಕು. ಈ ಸಂಬಂಧ ಮಾರ್ಗಸೂಚಿ ಹೊರಡಿಸುವ ಸಾಧ್ಯತೆ ಇದೆ.

**ಎಲ್ಲೆಲ್ಲಿ ಏನಾಯಿತು:**

- ಚಿಕ್ಕಮಗಳೂರು: ನಗರದಲ್ಲಿ ಬೆಳಗ್ಗೆ 5.15ಕ್ಕೆ ಆಜಾನ್ ವೇಳೆ ಹಿಂದೂಗಳ ದೇವಸ್ಥಾನದಲ್ಲಿ ಸುಪ್ರಭಾತ ಮೊಳಗಿದೆ
- ಮೈಸೂರು: ಪ್ರಮೋದ್ ಮುತಾಲಿಕ್ ನೇತೃತ್ವದಲ್ಲಿ ಹನುಮಾನ್ ಚಾಲೀಸ್ ಪಠಣ.
- ಮಂಗಳೂರು: ನಗರ ವ್ಯಾಪ್ತಿಯ ಒಂದೆಡೆ ಕೊರಗಜ್ಜನ ಕುರಿತಾದ ಭಕ್ತಿಗೀತೆಗಳನ್ನು ಕೇಳಿಸಲಾಗಿದೆ.
- ಬೆಳಗಾವಿ: ಆರ್‌ಟಿಒ ವೃತ್ತ ಬಳಿಯ ಶ್ರೀ ಪಂಚವಟಿ ಸೋನ್ಯಾ ಮಾರುತಿ ದೇವಸ್ಥಾನದಲ್ಲಿ ಹನುಮಾನ್ ಚಾಲೀಸ ಪಠಣ.

ಆಧಾರ: ಉದಯವಾಣಿ, ದಿನಾಂಕ:10.05.2022

## 14. State issues guidelines on loudspeakers

Amid the ongoing controversy over using Loudspeakers for calling azaan in mosques, the state Government has asked all those wishing to use loudspeakers to obtain permisssion within 15 days. Loudspeakers without permission from designated authorities would be removed.

A circular issued also cited the decibel levels for residential, commercial, and industiral areas as per the Noise Pollution(Regulation and Control) Rules, 2000, notified under the Environment ( Protection) Act, 1986.

The circular by the Department of Forest, Ecology and Environment came after Chief Secretary P. Ravikumar sent a note to the department following a meeting with Chief Minister Basavaraj Bommai.

"The Chief Minister has directed that the rules and the Karnataka Government order of August 13, 2002, shall be strictly implemeted henceforth. All users of loudspeakers or public address systems should obtain written permission from the designated authority within 15 days," a note from the Chief Secretary said.

Further, the note said, "Those who do not obtain permission should voluntarily remove the loudspeakers or they should be removed by the deisignated authority."

Committees will be formed at different levels to decide the application for loudspeaker or public address systems. The committee in all Police Commissionerate areas will comprise the Assistant Commissioner of Police, Jurisdictional Executive Engineer of the city Corporation and representative from the pollution control board.

In all other areas, the committee will comprise the Deputy Superintendent of Police. Jurisdictional Tahsildar, and a member from the pollution control board.

The Chief Secretary pointed out to the SC orders of July 18, 2005, and October 28, 2005, that directed all the designated authorities to implement the Noise pollution (Regulation and Control) Rules, 2000. The Rule3 (1) of the Noise pollution (Regulation and control) Rules, 2000, has laid down the ambient air quality standard in respect of noise, the note said, adding that the rules also define that the "daytime" shall mean 6 a.m to 10p.m. According to Rule 5(1), loudspeaker or public address system shall not be used except after obtaining permission from the designated authority.

| **Area/Zone** | **Limits in dB(A) Leq** | |
|---|---|---|
| | **Day time** | **Night time** |
| Industrial area | 75 | 70 |
| Commercial area | 65 | 55 |
| Residential area | 55 | 45 |
| Silent Zone | 50 | 40 |

Courtesy: The Hindu, Dated:11.05.2022.

## 15. ಅಟಲ್ ಪರಿವರ್ತನಾ ಅಭಿಯಾನ

ಒಂದು ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ರಾಜ್ಯದ 287 ನಗರಗಳನ್ನು 'ಅಟಲ್ ನಗರ ಪರಿವರ್ತನಾ ಅಭಿಯಾನ'ದ ವ್ಯಾಪ್ತಿಗೆ ತರುವ ಪ್ರಸ್ತಾವಕ್ಕೆ ಸಂಪುಟ ಅನುಮೋದನೆ ನೀಡಿದೆ. ಈ ನಗರಗಳಲ್ಲಿ ಐದು ವರ್ಷಗಳ ಅವಧಿಯಲ್ಲಿ ಕುಡಿಯುವ ನೀರು ಪೂರೈಕೆಗೆ ಮತ್ತು ಒಳಚರಂಡಿ ನಿರ್ಮಾಣಕ್ಕೆ ರೂ.9.237 ಕೋಟಿ ವೆಚ್ಚ ಮಾಡಲಾಗುತ್ತದೆ.

ಸಂಪುಟ ಸಭೆಯ ಬಳಿಕ ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿದ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ, 'ನಗರಸಭೆಗಳನ್ನು ಹೊರತುಪಡಿಸಿ ಒಂದು ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ಎಲ್ಲ ನಗರ ಸ್ಥಳೀಯ ಸಂಸ್ಥೆಗಳೂ ಯೋಜನೆ ವ್ಯಾಪ್ತಿಗೆ ಬರುತ್ತವೆ. ಕೇಂದ್ರ, ರಾಜ್ಯ ಸರ್ಕಾರ ಹಾಗೂ ಸ್ಥಳೀಯ ಸಂಸ್ಥೆಗಳ ಪಾಲುದಾರಿಕೆಯಲ್ಲಿ ಯೋಜನೆ ಅನುಷ್ಠಾನಗೊಳ್ಳಲಿದೆ. ಕೇಂದ್ರ ಸರ್ಕಾರ ರೂ.4,615 ಕೋಟಿ, ರಾಜ್ಯ ಸರ್ಕಾರ ರೂ.3,692 ಕೋಟಿ ಮತ್ತು ನಗರ ಸ್ಥಳೀಯ ಸಂಸ್ಥೆಗಳು ರೂ.923 ಕೋಟಿ ಭರಿಸಲಿವೆ' ಎಂದರು.

**ಸ್ವಚ್ಛ ಭಾರತ:** ಸಣ್ಣ ನಗರಸಭೆಗಳು, ಪಟ್ಟಣ ಪಂಚಾಯಿತಿಗಳು ಮತ್ತು ಪುರಸಭೆಗಳಲ್ಲೂ ಸ್ವಚ್ಛ ಭಾರತ ಯೋಜನೆ ಅನುಷ್ಠಾನಗೊಳಿಸುವ ಪ್ರಸ್ತಾವಕ್ಕೆ ಒಪ್ಪಿಗೆ ನೀಡಲಾಗಿದೆ. ಒಟ್ಟು ರೂ.3,966 ಕೋಟಿ ವೆಚ್ಚವಾಗಲಿದೆ. ರಾಜ್ಯವು ರೂ.1,292 ಕೋಟಿ ಭರಿಸಲಿದೆ ಎಂದು ತಿಳಿಸಿದರು.

ಬಜೆಟ್‌ನಲ್ಲಿ ಘೋಷಿಸಿದಂತೆ ಸಣ್ಣ ರೈತರಿಗೆ 5 ಎಕರೆಗಳವರೆಗೆ ಪ್ರತಿ ಎಕರೆಗೆ ರೂ.250 ರಷ್ಟು ಡೀಸೆಲ್ ಸಹಾಯಧನ ನೀಡುವ ಯೋಜನೆ ಅನುಷ್ಠಾನಕ್ಕೂ ಒಪ್ಪಿಗೆ ನೀಡಲಾಗಿದೆ. 69.81 ಲಕ್ಷ ರೈತರು ಈ ಯೋಜನೆಯ ಲಾಭ ಪಡೆಯಲಿದ್ದಾರೆ ಎಂದರು.

**ನಿಯಮ ಸಡಿಲಿಕೆ:** ದೌರ್ಜನ್ಯಕ್ಕೊಳಗಾಗಿ ಮೃತರಾಗುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕುಟುಂಬಗಳ ಸದಸ್ಯರಿಗೆ ಅನುಕಂಪದ ಆಧಾರದಲ್ಲಿ ಸರ್ಕಾರಿ ನೌಕರಿ ನೀಡುವುದಕ್ಕೆ ಸಂಬಂಧಿಸಿದ ನಿಯಮಗಳಿಗೆ ತಿದ್ದುಪಡಿ ತರಲು ನಿರ್ಧರಿಸಲಾಗಿದೆ. ಅರ್ಜಿ ಸಲ್ಲಿಕೆ ಅವಧಿಯನ್ನು ಎರಡು ವರ್ಷಗಳವರೆಗೆ ವಿಸ್ತರಿಸುವ, ಮಗ, ಮಗಳು ಅಥವಾ ಪತ್ನಿಗೂ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸುವ ತಿದ್ದುಪಡಿಗೆ ಒಪ್ಪಿಗೆ ಸೂಚಿಸಲಾಗಿದೆ ಎಂದು ತಿಳಿಸಿದರು.

ಸಾರಿಗೆ ಇಲಾಖೆಯಲ್ಲಿ ಮೋಟಾರು ವಾಹನ ಇನ್ಸ್‌ಪೆಕ್ಟರ್‌ಗಳ ಹುದ್ದೆಗಳಲ್ಲಿ ಶೇಕಡ 5 ರಷ್ಟನ್ನು ಮುಂಬಡ್ತಿಯ ಮೂಲಕ ಭರ್ತಿ ಮಾಡಲು ಅವಕಾಶ ಕಲ್ಪಿಸಿ ಕರ್ನಾಟಕ ಮೋಟಾರು ವಾಹನಗಳ ಕಾಯ್ದೆಗೆ ತಿದ್ದುಪಡಿ ತರುವ ಪ್ರಸ್ತಾವಕ್ಕೂ ಸಂಪುಟ ಅಂಗೀಕಾರ ನೀಡಿದೆ ಎಂದರು.

**ಉಗ್ರಾಣ ನಿಗಮಕ್ಕೆ ನೆರವು:** ರಾಜ್ಯ ಉಗ್ರಾಣ ನಿಗಮವು ರೂ.862 ಕೋಟಿ ವೆಚ್ಚದಲ್ಲಿ ಕೈಗೊಂಡಿದ್ದ ಕಟ್ಟಡ ನಿರ್ಮಾಣ ಕಾಮಗಾರಿಗಳಲ್ಲಿನ ತೊಡಕು ನಿವಾರಣೆಗೆ ತೀರ್ಮಾನ ಕೈಗೊಳ್ಳಲಾಗಿದೆ. ನಿಗಮದ ಸಾಲಗಳಿಗೆ ನೀಡಿದ್ದ ಖಾತರಿಯನ್ನು ಭರಿಸುವುದು ಹಾಗೂ ಗುತ್ತಿಗೆದಾರರಿಗೆ ರೂ.126 ಕೋಟಿ ಪಾವತಿಗೆ ಒಪ್ಪಿಗೆ ಸೂಚಿಸಲಾಗಿದೆ ಎಂದು ಹೇಳಿದರು.

**ಪ್ರಮುಖ ತೀರ್ಮಾನಗಳು:**

- ಔರಾದ್ ತಾಲ್ಲೂಕಿನ ಬಬಲೂರಿನಲ್ಲಿ ರೂ.89.94 ಕೋಟಿ ವೆಚ್ಚದಲ್ಲಿ ಕೇಂದ್ರೀಯ ಪೆಟ್ರೋಲಿಯಂ ಎಂಜಿನಿಯರಿಂಗ್ ತಂತ್ರಜ್ಞಾನ ಸಂಸ್ಥೆ ಸ್ಥಾಪನೆ.
- ಹೀಮೋಫೀಲಿಯಾ ರೋಗಿಗಳಿಗೆ ಉಚಿತವಾಗಿ ವಿತರಿಸಲು ರೂ.29 ಕೋಟಿ ವೆಚ್ಚದಲ್ಲಿ ಔಷಧಿ ಖರೀದಿ.
- ಸಿಕಲ್ ಸೆಲ್ ಅನಿಮೀಯ ರೋಗಿಗಳಿಗೆ ವಿತರಿಸಲು ರೂ.15 ಕೋಟಿ ವೆಚ್ಚದಲ್ಲಿ ಔಷಧ ಖರೀದಿ.
- ಶಿಗ್ಗಾಂವಿಯಲ್ಲಿ ಕೆಎಸ್‌ಆರ್‌ಟಿಸಿ ವತಿಯಿಂದ ರೂ.28 ಕೋಟಿ ವೆಚ್ಚದಲ್ಲಿ ಚಾಲನಾ ತರಬೇತಿ ಕೇಂದ್ರ ಸ್ಥಾಪನೆ.
- ನಾರಾಯಣಪುರ ಬಲದಂಡೆ ವ್ಯಾಪ್ತಿಯಲ್ಲಿ ದೇವದುರ್ಗ ತಾಲ್ಲೂಕಿನ 33 ಕೆರೆಗಳಿಗೆ ನೀರು ತುಂಬುವ ರೂ.330 ಕೋಟಿ ವೆಚ್ಚದ ಕಾಮಗಾರಿ ಅಂದಾಜು ಪಟ್ಟಿಗೆ ಒಪ್ಪಿಗೆ.
- ರಾಜೀವ್ ಗಾಂಧಿ ವಸತಿ ನಿಗಮದಿಂದ ಮೈಸೂರು ಜಿಲ್ಲೆಯ ಸಾತನಹಳ್ಳಿ, ಸಾದನಹಳ್ಳಿ ಮತ್ತು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆಯಲ್ಲಿ ರು.49.23 ಕೋಟಿ ವೆಚ್ಚದಲ್ಲಿ 724 ಮನೆಗಳ ನಿರ್ಮಾಣಕ್ಕೆ ಒಪ್ಪಿಗೆ.
- ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಅಲ್ಲಿನ ಗೋನಾಳ್ ಗ್ರಾಮದಲ್ಲಿ 50:50ರ ಪಾಲುದಾರಿಕೆಯಲ್ಲಿ 101.98 ಎಕರೆ ವಿಸ್ತೀರ್ಣದಲ್ಲಿ ಬಡಾವಣೆ ನಿರ್ಮಾಣ.
- ಅನುಭವ ಮಂಟಪ ಕಾಮಗಾರಿಯ ಅಂದಾಜು ವೆಚ್ಚವನ್ನು ರೂ.612 ಕೋಟಿ ಹೆಚ್ಚಿಸುವ ಪ್ರಸ್ತಾವಕ್ಕೆ ಅನುಮೋದನೆ.
- ಬೆಂಗಳೂರಿನ ಬಸವನಗುಡಿಯ ಕಾರಂಜಿ ಆಂಜನೇಯ ಸ್ವಾಮಿ ದೇವಾಲಯಕ್ಕೆ ಸೇರಿದ ಜಾಗದಲ್ಲಿ ನಿರ್ಮಿಸುತ್ತಿರುವ ಕಲ್ಯಾಣ ಮಂಟಪ ಕಾಮಗಾರಿಯನ್ನು ಶೃಂಗೇರಿ ಶಾರದಾ ಪೀಠದ ಸಹಭಾಗಿತ್ವದಲ್ಲಿ ಪೂರ್ಣಗೊಳಿಸಲು ಒಪ್ಪಿಗೆ.
- ಮೈಸೂರಿನ ಕೆ.ಆರ್.ಎಸ್ ರಸ್ತೆಯ ಆಂಜನೇಯ ಸ್ವಾಮಿ ದೇವಸ್ಥಾನವನ್ನು ಉತ್ತಾರಾದಿ ಮಠಕ್ಕೆ ದೀರ್ಘಾವಧಿಗೆ ಗುತ್ತಿಗೆಗೆ ನೀಡುವುದು.

ಆಧಾರ: ಪ್ರಜಾವಾಣಿ, ದಿನಾಂಕ:13.05.2022.

## 16. ದೇಶದ ಪ್ರಥಮ ಸೌಲಭ್ಯಕ್ಕೆ ಚಾಲನೆ

ರಾಜ್ಯ ಸರ್ಕಾರದ ಸಾಮಾಜಿಕ ಭದ್ರತೆ ಯೋಜನೆಯಡಿ ದೂರವಾಣಿ ಮೂಲಕವೇ ಕೋರಿಕೆ ಸ್ವೀಕರಿಸಿ, 72 ಗಂಟೆಗಳಲ್ಲಿ ಪಿಂಚಣಿ ಮಂಜೂರು ಪತ್ರವನ್ನು ಫಲಾನುಭವಿಗಳ ಮನೆ ಬಾಗಿಲಿಗೆ ತಲುಪಿಸುವ ವಿಶೇಷ ಯೋಜನೆಯೊಂದನ್ನು ರಾಜ್ಯ ಸರ್ಕಾರ ಜಾರಿಗೆ ತಂದಿದೆ.

ಅರ್ಹ ಫಲಾನುಭವಿಗಳು ಟೋಲ್ ಫ್ರೀ ಸಂಖ್ಯೆಗೆ ಕರೆ ಮಾಡಿ ಕೋರಿಕೆ ಸಲ್ಲಿಸಿ, ಸಂಬಂಧಿಸಿದ ದಾಖಲೆಗಳನ್ನು ಕಳುಹಿಸಿಕೊಟ್ಟರೆ 72 ಗಂಟೆಗಳಲ್ಲಿ ಪಿಂಚಣಿ ಮಂಜೂರು ಪತ್ರ ಮನೆಗೆ ತಲುಪುತ್ತದೆ. ನವೋದಯ ಮೊಬೈಲ್ ಆ್ಯಪ್ ಆಧರಿಸಿ ವಿನೂತನ ಕಾಗದ ರಹಿತ ಇಂಥ ಸೌಲಭ್ಯ ಕಲ್ಪಿಸಿರುವುದು ದೇಶದಲ್ಲೇ ಮೊದಲು ವಿಧಾನಸೌಧದಲ್ಲಿ ಯೋಜನೆಗೆ ಚಾಲನೆ ನೀಡಿದ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ, ಆಡಳಿತ ಎಂದರೆ ಜನರ ಸಮಸ್ಯೆಗಳನ್ನು ಅರಿತು ಹೃದಯದಿಂದ ಪರಿಹಾರ ಕಲ್ಪಿಸುವುದು. ಈ ಚಿಂತನೆಯಿಂದ ಅರ್ಹ ಫಲಾನುಭವಿಗಳಿಗೆ ಸುಲಭವಾದಲ್ಲಿ, ಅವರ ಮನೆ ಬಾಗಿಲಿಗೆ ಸೇವೆ ಒದಗಿಸಲಾಗುತ್ತಿದೆ. ಕಂದಾಯ ದಾಖಲೆ ಹಾಗೂ ಸಾಮಾಜಿಕ ಭದ್ರತಾ ಯೋಜನೆಗಳಡಿಯ ಪಿಂಚಣಿಗಳಿಗಾಗಿ ಅಲೆಯುವುದನ್ನು ತಪ್ಪಿಸಲು 'ಹಲೋ ಕಂದಾಯ ಸಚಿವರೇ" ಕಾರ್ಯಕ್ರಮ ಅನುಷ್ಠನಗೊಳಿಸಿಲಾಗಿದೆ ಎಂದರು.

ಕಂದಾಯ ಸಚಿವ ಆರ್.ಅಶೋಕ್ ಮಾತನಾಡಿ, ಮಾಸಾಶನ, ಪಿಂಚಣಿಗಾಗಿ ಅನಗತ್ಯ ಅಲೆದಾಟದ ದೂರುಗಳು ಹೆಚ್ಚಾಗಿದ್ದ ಹಿನ್ನೆಲೆಯಲ್ಲಿ, ಸಮಸ್ಯೆ ಪರಿಹಾರ ಕಲ್ಪಿಸಲು ಈ ಸಹಾಯವಾಣಿ ಆರಂಭಿಸಲಾಗಿದೆ ಸಾಮಾಜಿಕ ಭದ್ರತಾ ಯೋಜನೆಗಳಿಗಾಗಿ ಸರ್ಕಾರ ಪ್ರತಿ ವರ್ಷ ಸುಮಾರು 72 ಲಕ್ಷಮಂದಿಗೆ ರೂ.10 ಸಾವಿರ ಕೋಟಿ ಖರ್ಚು ಮಾಡುತ್ತಿದೆ. ಪರಿಶೀಲನೆಯ ಸಂದರ್ಭ 4 ಲಕ್ಷ ಬೋಗಸ್ ಪಿಂಚಣಿ ಪ್ರಮಾಣ ಪತ್ರ ಇದ್ದಿದ್ದು ಪತ್ತೆಯಾಗಿದ್ದು, ಅವನ್ನು ರದ್ದುಗೊಳಿಸಲಾಗಿದೆ. ಹೀಗಾಗಿ ಪಿಂಚಣಿಗೆ ಆಧಾರ ಕಡ್ಡಾಯಗೊಳಿಸಲಾಗಿದೆ. ದಾಖಲೆಗಳು ನಮ್ಮ ಬಳಿಯೇ ಇರುವುದರಿಂದ ಅಕ್ರಮ ಇನ್ನು ಸಾಧ್ಯವಿಲ್ಲ. ಮುಂದಿನ ತಿಂಗಳಿನಿಂದಲೇ ಪಿಂಚಣಿ ಸಿಗಲಿದ್ದು, ಫಲಾನುಭವಿಗಳ ಖಾತೆಗೆ ನೇರವಾಗಿ ಹಣ ತಲುಪಲಿದೆ, ಈ ಹಣವನ್ನು ಸತತ 9 ತಿಂಗಳು ಡ್ರಾ ಮಾಡದಿದ್ದರೆ ಹಣ ಜಪ್ತಿ ಆಗಲಿದೆ ಎಂದು ಹೇಳಿದರು.

ಆಧಾರ: ವಿಶ್ವವಾಣಿ, ದಿನಾಂಕ:14.05.2022.

## 17. ಬಲವಂತದ ಮತಾಂತರ: ಸುಗ್ರಿವಾಜ್ಞೆಗೆ ಅಂಕಿತ

ಪ್ರತಿ ಪಕ್ಷಗಳು ಮತ್ತು ಹಿಂದೂಯೇತರ ಧಾರ್ಮಿಕ ಮುಖಂಡರ ವಿರೋಧದ ಮಧ್ಯೆಯೇ ಬಲವಂತದ ಮತಾಂತರ ನಿಷೇಧಿಸುವ ಕುರಿತು ಹೊರಡಿಸಿದ್ದ ಸುಗ್ರೀವಾಜ್ಞೆಗೆ ಇದೀಗ ಅಂಕಿತ ಬಿದ್ದಿದ್ದು, ಮತ್ತೊಂದು ವಿವಾದಕ್ಕೆ ಕಾರಣವಾಗಿದೆ.

ಯಾವುದೇ ಕಾರಣಕ್ಕೂ ಮತಾಂತರ ನಿಷೇಧ ಕಾಯಿದೆ ಜಾರಿಗೊಳಿಸಲು ಅವಕಾಶ ನೀಡುವುದಿಲ್ಲ ಎಂದು ಪ್ರತಿಪಕ್ಷಗಳಾದ ಕಾಂಗ್ರೆಸ್, ಜೆಡಿಎಸ್ ಹೇಳಿವೆ. ಮತ್ತೊಂದೆಡೆ ಕ್ರಿಶ್ಚಿಯನ್ ಮತ್ತು ಮುಸ್ಲಿಂ ಧರ್ಮಗುರುಗಳೂ ಈ ಕಾಯಿದೆ ಜಾರಿಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಸರ್ಕಾರ ಸುಗ್ರೀವಾಜ್ಞೆ ಮೂಲಕ ಕಾಯಿದೆ ಜಾರಿಗೊಳಿಸಿದರೆ ಕಾನೂನು ಹೋರಾಟಕ್ಕಿಳಿಯುವುದಾಗಿ ಎಚ್ಚರಿಸಿದ್ದಾರೆ. ಈ ಮಧ್ಯೆ ಹಿಂದೂಪರ ಸಂಘಟನೆಗಳು ಸುಗ್ರೀವಾಜ್ಞೆಯನ್ನು ಸ್ವಾಗತಿಸಿವೆ.

ಸುಗ್ರೀವಾಜ್ಞೆ ಪ್ರಕಾರ ಮತಾಂತರಗೊಳ್ಳಲು ಮತ್ತು ಮತಾಂತರಗೊಳಿಸಲು ಕೆಲವು ನಿಯಮಗಳನ್ನು ರೂಪಿಸಿದ್ದು, ಈ ಪ್ರಕ್ರಿಯೆಗಳು ಸರ್ಕಾರ ಅಧಿಕಾರಿಗಳ ಕಣ್ಗಾವಲಿನಲ್ಲೇ ನಡೆಯಬೇಕಾಗುತ್ತದೆ. ಒಂದೊಮ್ಮೆ ಈ ನಿಯಮ ಉಲ್ಲಂಘಿಸಿ ಮತಾಂತರ ಮಾಡಿದರೆ ಅದನ್ನು ಜಾಮೀನು ರಹಿತ ಅಪರಾಧ ಎಂದು ಪರಿಗಣಿಸಲಾಗುತ್ತದೆ. ಜೊತೆಗೆ ಮತಾಂತರದ ಉದ್ದೇಶದಿಂದ ಆಗುವ ಮದುವೆ ಅಸಿಂಧುಗೊಳಿಸಲಾಗುತ್ತದೆ.

ಇದಲ್ಲದೆ, ಮತಾಂತರಕ್ಕೆ ಮೊದಲು ಅನುಭವಿಸುತ್ತಿದ್ದ ಸ್ಥಾನಮಾನ ಅಥವಾ ಸರ್ಕಾರದಿಂದ ಪಡೆಯುತ್ತಿದ್ದ ಹಣಕಾಸಿನ ಪ್ರಯೋಜನ ಸ್ವೀಕರಿಸುವ ಹಕ್ಕಿಗಾಗಿ ಮತಾಂತರಗೊಂಡ ವ್ಯಕ್ತಿಯನ್ನು ಮರುವರ್ಗೀಕರಣ ಮಾಡತಕ್ಕದ್ದು ಎಂದು ಹೇಳಲಾಗಿದೆ. ಅಂದರೆ, ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದರವರು ಮತಾಂತರಗೊಂಡರೆ ಅವರಿಗೆ ಸರ್ಕಾರದಿಂದ ಸಿಗುತ್ತಿದ್ದ ಮೀಸಲು ಮತ್ತು ಸೌಲಭ್ಯಗಳು ರದ್ದುಗೊಳ್ಳುತ್ತವೆ. ನಗದು ಅಥವಾ ಉಡುಗೊರೆ, ಪ್ರತಿಫಲ, ಸುಲಭ ಹಣ ಮತ್ತು ಭೌತಿಕ ಪ್ರಯೋಜನ ನೀಡಿ. ಧಾರ್ಮಿಕ ಸಂಸ್ಥೆ ನಡೆಸುವ ಶಾಲಾ–ಕಾಲೇಜುಗಳಲ್ಲಿ ಉದ್ಯೋಗ, ಉಚಿತ ಶಿಕ್ಷಣ ನೀಡಿ, ಮದುವೆ ವಾಗ್ದಾನ ಮಾಡಿ, ಉತ್ತಮ ಜೀವನ ಶೈಲಿ ಕಲ್ಪಿಸಿ. ಒಂದು ಧರ್ಮದ ಧಾರ್ಮಿಕಾಚರಣೆ ಬಗ್ಗೆ ಧಕ್ಕೆಯಾಗುವ ರೀತಿ ಬಿಂಬಿಸಿ ಅಥವಾ ಇನ್ನೊಂದು ಧರ್ಮ ವೈಭವೀಕರಿಸಿ ಮತಾಂತರ ಮಾಡುವಂತಿಲ್ಲ.

ಒತ್ತಾಯ ಅಂದರೆ, ಶಾರೀರಿಕ ಹಾನಿ ಉಂಟು ಮಾಡಿ, ಬೆದರಿಕೆ ಒಡ್ಡಿ, ಮಾನಸಿಕ ಅಥವಾ ದೈಹಿಕ ಬಲ ಪ್ರಯೋಗದಿಂದ ಇಚ್ಛೆಗೆ ವಿರುದ್ಧ ಮತಾಂತರಕ್ಕೆ ಅವಕಾಶವಿಲ್ಲ. ಮತಾಂತರಗೊಂಡ ಅಥವಾ ಮಾತಂತರಗೊಳ್ಳುವಂತೆ ಕೋರುವ ವ್ಯಕ್ತಿಯ ಮೇಲೆ ಒತ್ತಾಯ ಹೇರುವುದು, ಮಾನಸಿಕ ಹಾನಿ ಅಥವಾ ಬೆದರಿಕೆ ಹಾಕುವಂತಿಲ್ಲ. ವಂಚನೆ ಎಂದರೆ ಸುಳ್ಳು ಹೆಸರು, ಅಡ್ಡ ಹೆಸರು, ಧಾರ್ಮಿಕ ಸಂಕೇತ ಇತರ ವಿಧಾನಗಳಿಂದ ಪರಕಾಯ ಪ್ರವೇಶ ಮಾಡಿದಂತೆ ವರ್ತಿಸಿ ಮತಾಂತರಕ್ಕೆ ಪ್ರೇರೇಪಿಸುವಂತಿಲ್ಲ. ಎರಡು ಮತ್ತು ಅದಕ್ಕಿಂತ ಹೆಚ್ಚಿನವರು ಏಕಕಾಲದಲ್ಲಿ ಮತಾಂತರಗೊಳ್ಳುವಂತಿಲ್ಲ. 18 ವರ್ಷದೊಳಗಿನವರನ್ನು ಮತಾಂತರ ಮಾಡುವಂತಿಲ್ಲ ಎಂದು ಸುಗ್ರೀವಾಜ್ಞೆಯಲ್ಲಿ ಹೇಳಲಾಗಿದೆ.

**ಬಲವಂತದ ಮತಾಂತರ ಮಾಡಿದರೆ ಏನು ಶಿಕ್ಷೆ:**

- ಬಲವಂತದ ಸಾಮಾನ್ಯ ಮತಾಂತರ ಪ್ರಕರಣದಲ್ಲಿ ಆರೋಪಿಗಳಿಗೆ 3 ರಿಂದ 5 ವರ್ಷ ಜೈಲು ಶಿಕ್ಷೆ ಮತ್ತು ರೂ.25 ಸಾವಿರ ದಂಡ.
- ಅಪ್ರಾಪ್ತ ಅಥವಾ ಅಸ್ವಸ್ಥರು, ಮಹಿಳೆ ಅಥವಾ ಪರಿಶಿಷ್ಟ ಜಾತಿ ಮತ್ತು ಪಂಗಡದವರನ್ನು ಬಲವಂತದ ಮತಾಂತರ ಮಾಡಿದರೆ 3 ರಿಂದ 10 ವರ್ಷ ಜೈಲು ಶಿಕ್ಷೆ ಮತ್ತು ರೂ.40 ಸಾವಿರ ದಂಡ.
- ಸಾಮೂಹಿಕ ಮತಾಂತರ ಮಾಡಿದರೆ 3 ರಿಂದ 10 ವರ್ಷ ಜೈಲು ಶಿಕ್ಷೆ , ರೂ.1 ಲಕ್ಷ ದಂಡ.
- ಒಂದಕ್ಕಿಂತ ಹೆಚ್ಚು ಬಾರಿ ಬಲವಂತದ ಮತಾಂತರಕ್ಕೆ ಯತ್ನಿಸಿದರೆ 5 ವರ್ಷ ಜೈಲು ಶಿಕ್ಷೆ, ರೂ.2 ಲಕ್ಷ ದಂಡ.
- ಬಲವಂತದ ಮತಾಂತರಕ್ಕೆ ಬಲಿಯಾದವರಿಗೆ ಮತಾಂತರ ಮಾಡಿದವರು ರೂ.5 ಲಕ್ಷ ಪರಿಹಾರ ನೀಡಬೇಕು.
- ಮತಾಂತರಗೊಳ್ಳಲು ಯತ್ನಿಸಿದವರು ಮತ್ತು ಮತಾಂತರಗೊಳ್ಳಲು ಯತ್ನಿಸಿದವರು ಮತ್ತು ಮತಾಂತರ ಮಾಡಲು ಯತ್ನಿಸಿದವರು ನಿಯಮ ಉಲ್ಲಂಘಿಸಿದರೆ 1 ರಿಂದ 3 ವರ್ಷದವರೆಗೆ ಜೈಲು ಶಿಕ್ಷೆ ಮತ್ತು ರೂ.25 ಸಾವಿರ ದಂಡ ಪಾವತಿಸಬೇಕು.

ಆಧಾರ: ವಿಶ್ವವಾಣಿ, ದಿನಾಂಕ:18.05.2022.

## 18. ರಾಜಕಾಲುವೆ ಅಭಿವೃದ್ಧಿಗೆ 1600 ಕೋಟಿ ಅನುದಾನ

ಬೆಂಗಳೂರಿನ ಬೃಹತ್ ಮಳೆ ನೀರು ಕಾಲುವೆ ರೂ.1600 ಕೋಟಿಗಳ ವೆಚ್ಚದಲ್ಲಿ ಆಧುನಿಕ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಬೆಂಗಳೂರಿನ ವಿವಿಧೆಡೆ ಮಳೆಯಿಂದ ಹಾನಿಗೊಳಗಾದ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಿದ ನಂತರ ಗೃಹ ಕಾವೇರಿಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿ, ಕಳೆದ ಬಾರಿ

ಮಳೆಯಾದಾಗ ಎಲ್ಲಾ ಶಾಸಕರು ಹಾಗೂ ವಿರೋಧ ಪಕ್ಷದ ನಾಯಕರೊಂದಿಗೆ ಸಭೆ ನಡೆಸಿ ಹಲವು ತೀರ್ಮಾನ ಮಾಡಿದ್ದೆವು. ಈ ಪೈಕಿ ಮಳೆ ನೀರು ಕಾಲುವೆಗಳನ್ನು ಅಭಿವೃದ್ಧಿ ಮಾಡುವುದು ಎಂದು ತೀರ್ಮಾನಿಸಲಾಗಿತ್ತು. ಇದಕ್ಕೆ ಡಿಪಿಆರ್ ಸಿದ್ಧವಾಗಿ ಬಜೆಟ್‌ನಲ್ಲಿ ಈಗಾಗಲೇ ಅನುಮೋದನೆ ನೀಡಲಾಗಿದೆ. ಕೆಲವೇ ದಿನಗಳಲ್ಲಿ ಡಿಪಿಆರ್ ಪೂರ್ಣಗೊಂಡ ಕೂಡಲೇ ಅನುಮೋದನೆ ನೀಡಿ ಕೆಲಸ ಪ್ರಾರಂಭಿಸಲಾಗವುದು ಎಂದರು.

ರೂ.400 ಕೋಟಿಗಿಂತ ಹೆಚ್ಚು ವೆಚ್ಚದಲ್ಲಿ ಅಡಚಣೆಗಳಿರುವಲ್ಲಿ, ಹೂಳು ತುಂಬಿರುವಲ್ಲಿ, ಹಳೆ ಚರಂಡಿಗಳ ಕಟ್ಟಡಗಳನ್ನು ಕಟ್ಟಲು ಅನುಮತಿ ನೀಡಲಾಗಿದೆ. ತುರ್ತಾಗಿ ಹೂಳೆತ್ತುವ ಕೆಲಸ ಆಗಬೇಕಿದೆ. ಮುಖ್ಯ ಚರಂಡಿಯ ಹೂಳೆತ್ತುವ ಕಾರ್ಯವನ್ನು ಸಮಗ್ರವಾಗಿ ಮಾಡಬೇಕು. ಎಚ್‌ಬಿಆರ್ ಬಡಾವಣೆಯ ಚರಂಡಿಯ ಸುಮರು 2.50ಕಿಮಿ ಹೂಳೆತ್ತಲು ಸೂಚಿಸಲಾಗಿದೆ. ಚರಂಡಿ ಪಕ್ಕದ ವಾರ್ಡ್‌ಗಳಲ್ಲಿ ದ್ವಿತೀಯ ಮತ್ತು ತೃತೀಯ ಚರಂಡಿಗಳನ್ನೂ ಕೂಡ ಹೂಳೆತ್ತಲೂ ಆದೇಶ ನೀಡಲಾಗಿದೆ. ಮುಖ್ಯ ಚರಂಡಿಗೆ ಸರ್ಕಾರ ಅನುದಾನ ಒದಗಿಸುತ್ತದೆ. ದ್ವಿತೀಯ ಮತ್ತು ತೃತೀಯ ಚರಂಡಿಗಳನ್ನು ಬಿಬಿಎಂಪಿ ಅನುದಾನದಲ್ಲಿ ಸ್ವಚ್ಛತೆಗೆ ಸೂಚಿಸಲಾಗಿದೆ ಎಂದರು.

ಅತ್ಯಂತ ಕಡಿಮೆ ಅವಧಿಯಲ್ಲಿ ದೊಡ್ಡ ಪ್ರಮಾಣದ ಮಳೆ ಬಿದ್ದಿದೆ. ಕಳೆದ 40–50 ವರ್ಷಗಳಲ್ಲಿ ನಗರದಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಮಳೆ ಬಿದ್ದಿದೆ. ಮೇ ತಿಂಗಳಲ್ಲಿ 15 ದಿನಗಳಲ್ಲಿ ಆಗುವಷ್ಟು ಮಳೆ 4–5 ಗಂಟೆಗಳಲ್ಲಿ ಆಗಿದೆ. ಎಲ್ಲಾ ತಗ್ಗು ಪ್ರದೇಶಗಳಲ್ಲಿ ಸಹಜವಾಗಿ ಮಳೆ ನೀರು ನುಗ್ಗಿದೆ. ಬೆಂಗಳೂರಿನಲ್ಲಿ ಮಳೆ ಬಿದ್ದಾಗ ಪ್ರವಾಹವು ಕಳೆದ ಮೂರು ನಾಲ್ಕು ದಶಕಗಳಿಂದ ಆಗುತ್ತಿದೆ. ಇದಕ್ಕೆ ಒಂದೆಡೆ ಹಲವಾರು ಪರಿಹಾರಗಳಾಗುತ್ತಿದ್ದರೂ, ಮತ್ತೊಂದೆಡೆ ನಗರ ಬೆಳೆಯುತ್ತಿದೆ. ಪರಿಹಾರಗಳೂ ಸಮಗ್ರವಾಗಿ ಪ್ರವಾಹದ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಾಗಿಲ್ಲ ಎಂದರು. ಮುಖ್ಯಮಂತ್ರಿ ಬೊಮ್ಮಾಯಿ ಅವರು, ಮಹಾಲಕ್ಷ್ಮೀ ಲೇ ಔಟ್ ವಿಧಾನಸಭೆ ಕ್ಷೇತ್ರದ ಜೆ.ಸಿ ನಗರ ವಾರ್ಡ್, ಲಗ್ಗೆರೆ, ನಂತರ ನಾಗವಾರ ಮೆಟ್ರೋ ಸ್ಟೇಷನ್, ಎಚ್‌ಬಿಆರ್ 5ನೇ ಬ್ಲಾಕ್ ಹಾಗೂ ಹೆಬ್ಬಾಳ ಎಸ್‌ಟಿಪಿ ಘಟಕಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಆಧಾರ: ವಿಶ್ವವಾಣಿ, ದಿನಾಂಕ:20.05.2022.

## 19. ಮಳೆಗೆ 9 ಬಲಿ, 635 ಹೆಕ್ಟೇರ್ ಬೆಳೆ ಹಾನಿ

ರಾಜ್ಯದಲ್ಲಿ ಮುಂಗಾರು ಪೂರ್ವ ಮಳೆಯಿಂದ 204 ಹೆಕ್ಟೇರ್ ಕೃಷಿ ಬೆಳೆ, 431 ಹೆಕ್ಟೇರ್ ತೋಟಗಾರಿಕಾ ಬೆಳೆ ನಾಶವಾಗಿದ್ದು, 23 ಮನೆ ಸಂಪೂರ್ಣ ಹಾನಿಯಾಗಿವೆ. 9 ಮಂದಿ ಮೃತ ಪಟ್ಟಿದ್ದಾರೆ ಎಂದು ಕಂದಾಯ ಸಚಿವ ಆರ್.ಅಶೋಕ್ ಹೇಳಿದರು.

ರಾಜ್ಯದಲ್ಲಿ ರೆಡ್ ಅಲರ್ಟ್ ಇರುವ ಜಿಲ್ಲೆಗಳಾದ ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉಡುಪಿ, ಕೊಡಗು, ಶಿವಮೊಗ್ಗ, ದಾವಣಗೆರೆ ಜಿಲ್ಲಾಧಿಕಾರಿಗಳೊಂದಿಗೆ ವಿಕಾಸಸೌಧದಲ್ಲಿ ವಿಡಿಯೋ ಸಭೆ ನಡೆಸಿ ಅವರು ಮಾತನಾಡಿದರು.

"ಮಳೆಗಾಲ ಎದುರಿಸಲು ಸರ್ಕಾರ ಸಮರೋಪಾದಿಯಲ್ಲಿ ಸಿದ್ಧತೆ ಮಾಡಿಕೊಂಡಿದೆ. ಈಗಾಗಲೇ ಎಲ್ಲ ಜಿಲ್ಲಾ ಉಸ್ತುವಾರಿ ಸಚಿವರಿಗೆ ಪತ್ರ ಬರೆದು ಪರಿಶೀಲನಾ ಸಭೆ ನಡೆಸುವಂತೆ ಕೋರಲಾಗಿದೆ. ಇನ್ನೂ ಮೂರ್‍ನಾಲ್ಕು ತಿಂಗಳಲ್ಲಿ ಕಾರ್ಯಾಚರಣೆ, ಸ್ಪಂದನೆ ಕಾರ್ಯ ವೇಗವಾಗಿ ನಡೆಯಲಿದೆ. ಪ್ರಾಣಹಾನಿಯಾಗದಂತೆ ತಡೆಯುವುದು ಮೊದಲ ಆದ್ಯತೆ ಆಗಬೇಕು ಎಂದು ಅಧಿಕಾರಿಗಳಿಗೆ ಸೂಚಿಸಲಾಗಿದೆ," ಎಂದು ಹೇಳಿದರು.

"ಪ್ರತಿ ಜಿಲ್ಲೆಯಲ್ಲೂ ಎಲ್ಲ ರೀತಿಯ ಸಲಕರಣೆಗಳೊಂದಿಗೆ ಒಂದು ವಾಹನವನ್ನು ಸದಾ ಸನ್ನದ್ಧ ಸ್ಥಿತಿಯಲ್ಲಿರಬೇಕು. ಇದರಿಂದ ಮಳೆ ಗಾಳಿಗೆ ಬಿದ್ದ ಮರಗಳ ತೆರವು, ನೆರೆ ಉಂಟಾದರೆ ಕಾರ್ಯಚರಣೆಗೆ ಅನುಕೂಲವಾಗಲಿದೆ ಎಂದು ಸೂಚನೆ ನೀಡಲಾಗಿದೆ," ಎಂದು ತಿಳಿಸಿದರು.

**4 ಎನ್‌ಡಿಆರ್‌ಎಫ್ ತಂಡ**: "ಮುಂಗಾರು ಆಗಮನಕ್ಕೆ ಒಂದು ವಾರ ಮೊದಲೇ ರಾಜ್ಯಕ್ಕೆ ಎನ್‌ಡಿಆರ್‌ಎಫ್‌ನ 4 ತಂಡಗಳು ರಾಜ್ಯಕ್ಕೆ ಎಂಬುದು ಕಾರ್ಯಾಚರಣೆ ಸನ್ನದ್ಧವಾಗಲಿವೆ. ಬೆಂಗಳೂರಿನಲ್ಲಿ ಪರಿಸ್ಥಿತಿ ನಿರ್ವಹಣೆಗೆ ಒಂದು ತಂಡ ಸೇವೆ ಸದಾ ಸಿದ್ಧವಿರಲಿದೆ. ಹೀಗೆ ಇಲಾಖೆಯು ಎಲ್ಲ ರೀತಿಯ ಮುನ್ನೆಚ್ಚರಿಕೆ ಕ್ರಮ ಕೈಗೊಂಡಿದೆ. ಎಸ್ಡಿಆರ್‌ಎಫ್ ತಂಡಗಳೂ ಎಲ್ಲ ರೀತಿಯ ಪರಿಸ್ಥಿತಿ ಎದುರಿಸಲು ಸಿದ್ಧವಾಗಿವೆ,' ಎಂದು ಹೇಳಿದರು.

"ಅಗತ್ಯವಿರುವ ಎಲ್ಲ ಸಾಮಗ್ರಿಗಳನ್ನು ಕೂಡಲೇ ಖರೀದಿಸಿಟ್ಟು ಕೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ಬೆಳೆ ಹಾನಿಗೆ ಶೀಘ್ರವಾಗಿ ಪರಿಹಾರ ವಿತರಣೆಗೆ ಕ್ರಮ ವಹಿಸಲು ಸೂಚಿಸಲಾಗಿದೆ," ಎಂದು ವಿವರಿಸಿದರು.

**ಎನ್‌ಡಿಆರ್‌ಎಫ್ ನಿಯೋಜನೆ:**

- **ದಕ್ಷಿಣ ಕನ್ನಡ:** ಉಡುಪಿ, ಉತ್ತರ ಕನ್ನಡ, ಸುತ್ತಮುತ್ತಲಿನ ಪ್ರದೇಶ
- **ಕೊಡಗು:** ಮೈಸೂರು, ಹಾಸನ, ಚಿಕ್ಕಮಗಳೂರು
- **ಬೆಳಗಾವಿ:** ಬಾಗಲಕೋಟೆ, ವಿಜಯಪುರ, ಸುತ್ತಮುತ್ತಲಿನ ಪ್ರದೇಶ
- **ರಾಯಚೂರು:** ಯಾದಗಿರಿ, ಬಳ್ಳಾರಿ, ಕಲಬುರಗಿ, ಸುತ್ತಮುತ್ತಲಿನ ಪ್ರದೇಶ
- **ಬೆಂಗಳೂರು:** ಒಂದು ತಂಡ

**ಡಿಸಿಗಳಿಗೆ ಖಡಕ್ ಸೂಚನೆ:**

- ಎಲ್ಲೇ ಭೂಕುಸಿತ ಉಂಟಾದರೂ, ನೆರೆ ಕಾಣಿಸಿಕೊಂಡರೂ ಡಿಸಿಗಳು ಖುದ್ದಾಗಿ ಭೇಟಿ ನೀಡಿ ತ್ವರಿತವಾಗಿ ಪರಿಹಾರ ನೀಡಬೇಕು
- ಮಳೆಹಾನಿ, ಪ್ರಾಣಹಾನಿ ಸಂಭವಿಸಿದ 48 ಗಂಟೆಗಳಲ್ಲಿ ಪರಿಹಾರ ವಿತರಿಸಬೇಕು
- ನಿಯಂತ್ರಣ ಕೊಠಡಿಗಳು ಸದಾಕಾಲ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸಬೇಕು
- ಕಾಳಜಿ ಕೇಂದ್ರದಲ್ಲಿ ಇಲಾಖೆ ಸೂಚಿಸಿದ ಪ್ರಕಾರವೇ ಊಟೋಪಚಾರ ವ್ಯವಸ್ಥೆ ಮಾಡಬೇಕು
- ತಕ್ಷಣದಿಂದಲೇ ಎಲ್ಲ ರೀತಿಯ ರೂಪುರೇಷೆ ಸಿದ್ಧಪಡಿಸಬೇಕು
- ಭೂಕುಸಿತ ಸಂಭಾವ್ಯ ಸ್ಥಳಗಳಲ್ಲಿ ಡಿಸಿಗಳೇ ಜನರ ಮನವೊಲಿಸಿ ಸ್ಥಳಾಂತರ ಮಾಡಿಸಬೇಕು.

ಆಧಾರ: ವಿಜಯ ಕರ್ನಾಟಕ, ದಿನಾಂಕ:20.05.2022.

## 20. ಕೆನಡಾ ಸಂಸತ್ತಿನಲ್ಲಿ ಕನ್ನಡದ ಕಂಪು ಹರಡಿದ ಚಂದ್ರ ಆರ್ಯ

ಕರ್ನಾಟಕದಲ್ಲೇ ಕನ್ನಡ ಬಳಸಲು ಹಿಂದೇಟು ಹಾಕುವವರದೆಷ್ಟೋ ಮಂದಿ ಇದ್ದಾರೆ. ಕನ್ನಡದಲ್ಲಿ ಮಾತನಾಡಿದರೆ ಅದೆಲ್ಲ ನಮ್ಮ ಗೌವರಕ್ಕೆ ಚ್ಯುತಿ ಬರುವುದೋ ಎಂದು ಕನ್ನಡ ಗೊತ್ತಿದ್ದರೂ ಇಂಗ್ಲಿಷ್‌ನಲ್ಲೇ ಮಾತನಾಡುತ್ತಾರೆ. ಆದರೆ, ದೂರದ ಕೆನಡಾ ದೇಶದ ಸಂಸತ್ತಿನಲ್ಲಿ ಕನ್ನಡದ ಕಹಳೆ ಮೊಳಗಿದೆ.

ಹೌದು, ಕೆನಡಾ ಸಂಸತ್ ಸದಸ್ಯರಾಗಿರುವ ಕರ್ನಾಟಕ ಮೂಲದ ಚಂದ್ರ ಆರ್ಯ ಸಂಸತ್ತಿನಲ್ಲಿ ಕನ್ನಡದಲ್ಲಿ ಮಾತನಾಡುವ ಮೂಲಕ ವಿದೇಶದ ಸಂಸತ್‌ಗಳಲ್ಲಿ ಕನ್ನಡದಲ್ಲಿ ಮಾತನಾಡಿದ ಮೊಟ್ಟ ಮೊದಲ ವ್ಯಕ್ತಿ ಎನಿಸಿಕೊಂಡಿದ್ದಾರೆ. ಆ ಮೂಲಕ ಕನ್ನಡವನ್ನು ಕರ್ನಾಟಕದಲ್ಲೇ ಕಡೆಗಣಿಸುವವರಿಗೆ ಕನ್ನಡದ ಮಹತ್ವವನ್ನು ಹೇಳಿಕೊಂಡಿದ್ದಾರೆ.

ಮಾನ್ಯ ಸಭಾಪತಿ ಎಂದು ಕನ್ನಡದಲ್ಲಿ ಮಾತು ಆರಂಭಿಸಿದ ಚಂದ್ರ ಆರ್ಯ ಅವರು ಕನ್ನಡದಲ್ಲೇ ಮಾತು ಮುಗಿಸಿ ಧನ್ಯವಾದಗಳು ಎಂದು ಹೇಳುತ್ತಿದ್ದಂತೆ ಸಂಸತ್ತಿನ ಸದಸ್ಯರು ಕರತಾಡದೊಂದಿಗೆ ಎದ್ದು ನಿಂತು ಚಂದ್ರ ಆರ್ಯ ಅವರನ್ನು ಅಭಿನಂದಿಸಿದರು.

ಚಂದ್ರ ಆರ್ಯ ಅವರು ಮೂಲತ: ತುಮಕೂರು ಜಿಲ್ಲೆ ಶಿರಾ ತಾಲ್ಲೂಕಿನ ದ್ವಾರಾಳು ಗ್ರಾಮದವರು. 1963ರ ಆಗಸ್ಟ್ 19 ರಂದು ಜನಿಸಿದ ಅವರು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪದವಿ ಪೂರೈಸಿ ಕೆನಡಾಕ್ಕೆ ತೆರಳಿದ್ದರು. 2019ರಲ್ಲಿ ಕೆನಡಾ ದೇಶದಲ್ಲಿ ಸಂಸತ್ ಸದಸ್ಯರಾಗಿ ಆಯ್ಕೆಯಾಗಿದ್ದರು. ಪ್ರಸ್ತುತ ಸಂಸತ್ತಿನ ಅಂತಾರಾಷ್ಟ್ರೀಯ ವ್ಯಾಪಾರದ ಸ್ಥಾಯಿ ಸಮಿತಿ ಸದಸ್ಯರಾಗಿದ್ದಾರೆ.

ಕೆನಡಾ ಸಂಸತ್ತಿನಲ್ಲಿ ಕನ್ನಡ ಭಾಷೆಯಲ್ಲಿ ಮಾತನಾಡಿದ ಚಂದ್ರ ಆರ್ಯ ಅವರು ಆ ಕುರಿತ ವಿಡಿಯೋವನ್ನು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ. ಕೆನಡಾದ ಸಂಸತ್ತಿನಲ್ಲಿ ನಾನು ನನ್ನ ಮಾತೃಭಾಷೆ (ಮೊದಲ ಭಾಷೆ) ಕನ್ನಡದಲ್ಲಿ ಮಾತನಾಡಿದ್ದೇನೆ. ಈ ಸುಂದರ ಭಾಷೆ ಸುದೀರ್ಘ ಇತಿಹಾಸ ಹೊಂದಿದೆ. ಸುಮಾರು 50 ಮಿಲಿಯನ್ ಜನರು ಮಾತನಾಡುತ್ತಾರೆ. ಭಾರತದ ಹೊರಗಿನ ಜಗತ್ತಿನ ಯಾವುದೇ ಸಂಸತ್ತಿನಲ್ಲಿ ಕನ್ನಡ ಮಾತನಾಡುತ್ತಿರುವುದು ಇದೇ ಮೊದಲು ಎಂದು ಹೇಳಿದ್ದಾರೆ. ಈ ಟ್ವೀಟ್ ಈಗ ವೈರಲ್ ಆಗಿದ್ದು, ಸಾಕಷ್ಟು ಮಂದಿ ಅದನ್ನು ತಮ್ಮ ವಾಲ್‌ಗಳಲ್ಲಿ ಹಂಚಿಕೊಂಡು ಚಂದ್ರ ಆರ್ಯ ಅವರನ್ನು ಅಭಿನಂದಿಸುತ್ತಿದ್ದಾರೆ. ಚಂದ್ರ ಆರ್ಯ ಅವರ ಕನ್ನಡ ಪ್ರೇಮವನ್ನು ಕೊಂಡಾಡುತ್ತಿದ್ದಾರೆ.

**ಕೆನಡಾ ಸಂಸತ್ತಿನಲ್ಲಿ ಚಂದ್ರ ಆರ್ಯ ಅವರ ಮಾತು:**

**ಮಾನ್ಯ ಸಭಾಪತಿ,** ಕೆನಡಾ ದೇಶದ ಸಂಸತ್ತಿನಲ್ಲಿ ನನ್ನ ಮಾತೃ ಭಾಷೆ ಕನ್ನಡದಲ್ಲಿ ಮಾತನಾಡಲು ಅವಕಾಶ ಸಿಕ್ಕಿರುವುದಕ್ಕೆ ನನಗೆ ಸಂತೋಷವಾಗುತ್ತಿದೆ. ಭಾರತ ದೇಶದ, ಕರ್ನಾಟಕ ರಾಜ್ಯದ ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ದ್ವಾರಾಳು ಗ್ರಾಮದ ವ್ಯಕ್ತಿಯೊಬ್ಬ ಕೆನಡಾದಲ್ಲಿ ಸಂಸತ್ ಸದಸ್ಯನಾಗಿ ಆಯ್ಕೆಯಾಗಿ ಮತ್ತು ಕನ್ನಡದಲ್ಲಿ ಮಾತನಾಡುವುದು ಸುಮಾರು ಐದು ಕೋಟಿ ಕನ್ನಡಿಗರಿಗೆ ಹೆಮ್ಮೆಯ ಕ್ಷಣವಾಗಿದೆ. ಕೆನಡಾ ದೇಶದ ಕನ್ನಡಿಗರು 2018ನೇ ಇಸವಿಯಲ್ಲಿ ಕೆನಡಾದ ಈ ಸಂಸತ್ತಿನಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸಿದರು. ರಾಷ್ಟ್ರಕವಿ ಕುವೆಂಪು ಬರೆದಿರುವ ಮತ್ತು ನಟಸಾರ್ವಭೌಮ ಡಾ:ರಾಜ್‌ಕುಮಾರ್ ಹಾಡಿರುವ ಭಾವಗೀತೆಯ ಕೆಲವು ಪದಗಳೊಂದಿಗೆ ನನ್ನ ಹೇಳಿಕೆಯನ್ನು ಮುಗಿಸುತ್ತಿದ್ದೇನೆ. ಎಲ್ಲಾದರೂ ಇರು, ಎಂತಾದರೂ ಇರು, ಎಂದೆಂದಿಗೂ ನೀ ಕನ್ನಡವಾಗಿರು– ಧನ್ಯವಾದಗಳು ಸಭಾಪತಿ.

ಆಧಾರ:ವಿಶ್ವವಾಣಿ, ದಿನಾಂಕ:21.05.2022.

## 21. ರೂ.28,000 ಕೋಟಿ ಯೋಜನೆಗೆ ಒಪ್ಪಿಗೆ

**ಕೆಲ ಬದಲಾವಣೆಯೊಂದಿಗೆ ಅನುಮೋದನೆ:** ಪರಿಷತ್ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿಯವರು ಸಭೆಯಲ್ಲಿ ಕ್ರಿಯಾ ಯೋಜನೆ ಹಾಗೂ ಅನುದಾನ ಬಳಕೆ ವಿಚಾರವಾಗಿ ವಿಸ್ತೃತವಾಗಿ ಚರ್ಚಿಸಲಾಗಿದೆ. ಕಳೆದ ವರ್ಷ ಇಲಾಖಾವಾರು ಎಸ್.ಸಿಪಿ–ಟಿಎಸ್‌ಪಿ ಅನುದಾನ ಬಳಕೆ ಪ್ರಮಾಣನ್ನು ಪರಿಶೀಲಿಸಲಾಗಿದೆ. ಕೆಲ ಯೋಜನೆಗಳಲ್ಲಷ್ಟೇ ಬದಲಾವಣೆ ಮಾಡಿ ಉಳಿದ ಕಾರ್ಯಕ್ರಮಗಳಿಗೆ ಅನುಮೋದನೆ ನೀಡಲಾಗಿದೆ ಎಂದರು.

ಎಸ್‌ಸಿಪಿ – ಟಿಎಸ್‌ಪಿ ಯೋಜನೆಯಡಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ನಾನಾ ಕಾರ್ಯಕ್ರಮಗಳಿಗೆ ಪ್ರಸಕ್ತ ಸಾಲಿನಲ್ಲಿ ರೂ.28,000 ಕೋಟಿ ಅನುದಾನ ಬಳಕೆ ಸಂಬಂಧ ಕ್ರಿಯಾ ಯೋಜನೆಗೆ ರಾಜ್ಯ ಅಭಿವೃದ್ಧಿ ಪರಿಷತ್ ಸಭೆ ಅನುಮೋದನೆ ನೀಡಿತು.

ವಿಧಾನಸೌಧದಲ್ಲಿ ನಡೆದ ಪರಿಷತ್ ಸಭೆಯಲ್ಲಿ ಪಾಲ್ಗೊಂಡಿದ್ದ ಮುಖ್ಯಮಂತ್ರಿಯವರ ಮಹತ್ವಾಕಾಂಕ್ಷಿ ಯೋಜನೆಗಳು ಆಗಸ್ಟ್ 15ರೊಳಗೆ ಅನುಷ್ಠಾನಕ್ಕೆ ಗಡುವು ನೀಡಿದರು.

ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ನಿಗಮ ಮಂಡಳಿಗಳ ಬ್ಯಾಂಕ್ ಖಾತೆಯಲ್ಲಿರುವ ರೂ.1,600 ಕೋಟಿಗಳನ್ನು ಮುಂದಿನ ಮೂರು ತಿಂಗಳಲ್ಲಿ (ಗಂಗಾ ಕಲ್ಯಾಣ ಯೋಜನೆ ಹೊರತುಪಡಿಸಿ) ಎಸ್‌ಸಿಪಿ – ಟಿಎಸ್‌ಪಿ ಯೋಜನೆಗಳಿಗೆ ವಿನಿಯೋಗಿಸಿದ್ದರೆ ಈ ಸಾಲಿನ ಕಾರ್ಯಕ್ರಮಗಳಿಗೆ ಮರುಹಂಚಲಾಗುವುದು. ಶಾಸನಬದ್ಧವಾಗಿ ಪರಿಶಿಷ್ಟರಿಗೆ ನಿಗದಿಯಾಗಿರುವ ಅನುದಾನವನ್ನು ನಿಗದಿತ ಅಭಿವೃದ್ಧಿಗಷ್ಟೇ ವೆಚ್ಚ ಮಾಡಬೇಕು ಎಂದು ತಾಕೀತು ಮಾಡಿದ್ದಾರೆ.

ಯೋಜನೆಗಳು ಅನುಷ್ಠಾನವಾಗದಿರುವುದಕ್ಕೆ ಯಾವುದೇ ಸಬೂಬು, ಕಾರಣಗಳನ್ನು ಒಪ್ಪಲಾಗದು. ಸಭೆಯಲ್ಲಿ ಕೈಗೊಳ್ಳಲಾಗಿರುವ ನಿರ್ಣಯಗಳಿಗೆ ಆದೇಶ ಹೊರಡಿಸುವುದು ಹಾಗೂ ಆಗಸ್ಟ್–15ರೊಳಗೆ ಎಲ್ಲಾ ವೈಯಕ್ತಿಕ ಯೋಜನೆಗಳಿಗೆ ಚಾಲನೆ ನೀಡಬೇಕು ಎಂದು ಮುಖ್ಯಮಂತ್ರಿಯವರು ಸೂಚನೆ ನೀಡಿದ್ದಾರೆ.

ಸಚಿವರಾದ ಜೆ.ಸಿ. ಮಾಧುಸ್ವಾಮಿ, ಗೋವಿಂದ ಕಾರಜೋಳ, ಕೋಟ ಶ್ರೀನಿವಾಸ ಪೂಜಾರಿ ಬಿ. ಶ್ರೀರಾಮುಲು, ಶಾಸಕರಾದ ಎನ್. ಮಹೇಶ್ ದುರ್ಯೋಧನ ಐಹೊಳೆ, ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಇತರರರಿದ್ದರು.

**ಗಂಗಾ ಕಲ್ಯಾಣಕ್ಕೆ ರೂ.9000 ಕೋಟಿ:** ಸಹಕಾರ ಇಲಾಖೆಯಲ್ಲಿ ಪರಿಶಿಷ್ಟರ ಸದಸ್ಯತ್ವಕ್ಕೆ ಉತ್ತೇಜಿಸಲು ರೂ.203 ಕೋಟಿ ಒದಗಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಪಿಂಚಣಿಗೆ ರೂ.848 ಕೋಟಿ ಮೊತ್ತ ಹೆಚ್ಚುವರಿ ನೀಡಲಾಗಿದೆ. ಕೌಶಲ್ಯಾಭಿವೃದ್ಧಿಗೆ ರೂ.180 ಕೋಟಿ ಒದಗಿಸಲಾಗಿದೆ. ಗಂಗಾಕಲ್ಯಾಣ ಯೋಜನೆಗೆ ಒಟ್ಟು ರೂ.9000 ಕೋಟಿ ಒದಗಿಸಲಾಗಿದೆ ಎಂದು ವಿವರಿಸಿದರು.

**ಉಚಿತ ಬಸ್ ಪಾಸ್:** ಪರಿಶಿಷ್ಟ ವಿದ್ಯಾರ್ಥಿಗಳಿಗೆ ಉಚಿತವಾಗಿ ಬಸ್‌ಪಾಸ್ ನೀಡಲು ತೀರ್ಮಾನಿಸಲಾಗಿದೆ. ಡಾ:ಅಂಬೇಡ್ಕರ್ ಅವರು ಕರ್ನಾಟಕದಲ್ಲಿ ಪ್ರವಾಸ ಮಾಡಿದ್ದ ಸ್ಥಳಗಳ ಅಭಿವೃದ್ಧಿಗೆ ಒಟ್ಟು ರೂ.20 ಕೋಟಿ ಮೀಸಲಿಡಲಾಗಿದೆ ಎಂದರು.

**ವಾರದಲ್ಲಿ ಅನುದಾನ ಹೆಚ್ಚಳ:** ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಅನುದಾನ ನೀಡುವ ಜೊತೆಗೆ ನಿಗಮ, ಮಂಡಳಿಗಳಿಗೂ ಅನುದಾನ ಒದಗಿಸಲಾಗಿದೆ. ನಿಗಮ ಮಂಡಳಿಗಳಿಗೆ ಹೆಚ್ಚಿನ ಅನುದಾನ ನೀಡಬೇಕೆಂಬ ಬೇಡಿಕೆಯಿದ್ದು, ವಾರದಲ್ಲಿ ಹೆಚ್ಚಿಸಬೇಕೆಂಬುದು ಎಲ್ಲರ ಅಭಿಪ್ರಾಯವಿದೆ. ಒಂದು ವಾರದಲ್ಲಿ ಅನುದಾನ ಹೆಚ್ಚಳಕ್ಕೆ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ಮಲೆನಾಡು ಅಭಿವೃದ್ಧಿ ಮಂಡಳಿ, ಬಯಲುಸೀಮೆ ಅಭಿವೃದ್ಧಿ ಮಂಡಳಿ ಮತ್ತು ಕರಾವಳಿ ಅಭಿವೃದ್ಧಿ ಮಂಡಳಿಯ ಶಾಸಕರಿಗೆ ಒಂದು ಕೋಟಿ ರೂಪಾಯಿ ನೀಡಲಾಗುವುದು. ಇದೀಗ ಅನುದಾನ ಒದಗಿಸಿ ಕ್ರಿಯಾ ಯೋಜನೆ ರೂಪಿಸಲು ಅನುಮತಿ ನೀಡಲಾಗಿದೆ ಎಂದು ಹೇಳಿದರು.

**ತನಿಖೆ ಮಾಡುತ್ತೇವೆ**: ಗಂಗಾ ಕಲ್ಯಾಣದಲ್ಲಿನ ಭ್ರಷ್ಟಾಚಾರದ ಆರೋಪಕ್ಕೆ ಪ್ರತಿಕ್ರಿಯಿಸಿ ಈ ಬಗ್ಗೆ ತನಿಖೆ ನಡೆಸಲಾಗುವುದು. ಯಾರ ಕಾಲದಲ್ಲಿ ಎಷ್ಟು ಭ್ರಷ್ಟಾಚಾರವಾಗಿದೆ ಎಂಬುದರ ಕುರಿತು ತನಿಖೆ ನಡೆಸಲಾಗುವುದು ಎಂದು ತಿಳಿಸಿದರು.

**ಮುಖ್ಯಮಂತ್ರಿಯವರ ಪ್ರಮುಖ ಸೂಚನೆ:**

- ಎಸ್‌ಸಿಪಿ – ಟಿಎಸ್‌ಪಿ ಯೋಜನೆಯಡಿ ವೈಯಕ್ತಿಕ ಸೌಲಭ್ಯಕ್ಕೆ ಆದ್ಯತೆ ನೀಡಬೇಕು.
- ಉನ್ನತ ಶಿಕ್ಷಣ ಇಲಾಖೆಯಡಿ ಫೆಲೋಶಿಪ್ /ಲ್ಯಾಪ್‌ಟಾಪ್ ವಿತರಣೆ
- ಎಸ್‌ಸಿಪಿ – ಟಿಎಸ್‌ಪಿ ಯೋಜನೆಗಳಡಿ ಅನುದಾನವನ್ನು ಅರ್ಹ ಫಲಾನುಭವಿಗಳಿಗೆ ಮುಟ್ಟಿಸಬೇಕು.
- ಸಮಾಜ ಕಲ್ಯಾಣ ಇಲಾಖೆಯು ಎಸ್‌ಸಿಪಿ – ಟಿಎಸ್‌ಪಿ ಯೋಜನೆಯಡಿ ವೈಯಕ್ತಿಕ ಸೌಲಭ್ಯದ ಬಗ್ಗೆ ಮೇಲ್ವಿಚಾರಣೆ ನಡೆಸಬೇಕು.

ಆಧಾರ:ವಿಜಯ ಕರ್ನಾಟಕ, ದಿನಾಂಕ:21.05.2022.

## 22. ಹಣದುಬ್ಬರ ಏನು ಪರಿಹಾರ

ಇಡೀ ದೇಶವನ್ನು ಕಾಡುತ್ತಿರುವ ಹಣದುಬ್ಬರ ರಾಜ್ಯಕ್ಕೆ ತುಸು ಹೆಚ್ಚೇ ಆಘಾತ ನೀಡಿದೆ. ದಕ್ಷಿಣ ಭಾರತದ ರಾಜ್ಯಗಳ ಪೈಕಿ ಕರ್ನಾಟಕ ಹಣದುಬ್ಬರದಲ್ಲಿ ಮೂರನೇ ಸ್ಥಾನದಲ್ಲಿರುವುದರಿಂದ ಚುನಾವಣೆ ಎದುರಾಗಲಿರುವ ಈ ವರ್ಷದಲ್ಲಿ ಅದನ್ನು ತಗ್ಗಿಸಿ ಜನರ ವಿಶ್ವಾಸಗಳಿಸುವ ದೊಡ್ಡ ಸವಾಲು ಸರ್ಕಾರಕ್ಕೆ ಎದುರಾಗಿದೆ.

ಕೇಂದ್ರದ ಅಂಕಿಅಂಶಗಳ ಪ್ರಕಾರ ಗ್ರಾಮೀಣ ಹಣದುಬ್ಬರ ಶೇ.5.96, ನಗರ ಹಣದುಬ್ಬರ ಶೇ.6.72 ಇದೆ. ಹಿಂದೆ ಯಾವಾಗಲೂ ಇಷ್ಟೊಂದು ಪ್ರಮಾಣದಲ್ಲಿ ಹಣದುಬ್ಬರ ಹೆಚ್ಚಳವಾಗಿರಲಿಲ್ಲ. ಹಣದುಬ್ಬರ ಶೇ.3 ಮೀರಬಾರದೆಂಬುದು ಅರ್ಥಶಾಸ್ತ್ರಜ್ಞರ ಅನಿಸಿಕೆ. ಅನುಭೋಗಿಗಳ ಬೆಲೆ ಸೂಚ್ಯಂಕದ ಮೇಲೆ ಹಣದುಬ್ಬರ ಅಳೆಯಲಾಗುತ್ತದೆ. ಹಣದುಬ್ಬರ ತಗ್ಗಿಸಲು ರಾಜ್ಯ ಸರ್ಕಾರ ಕೇಂದ್ರದ ಮೇಲೆ ಅವಲಂಬಿತವಾಗದೆ ತನ್ನದೇ ಆದ ಕ್ರಮಕೈಗೊಳ್ಳಬೇಕಿದೆ.

ರಾಜ್ಯದಲ್ಲಿ ಈ ವರ್ಷ ಬಿಬಿಎಂಪಿ, ಜಿಲ್ಲಾ ಮತ್ತು ತಾಲೂಕು ಪಂಚಾಯಿತಿ ಹಾಗೂ ಮುಂದಿನ ವರ್ಷ ವಿಧಾನ ಸಭಾ ಚುನಾವಣೆ ಎದುರಾಗುವುದರಿಂದ ಹಣದುಬ್ಬರ ನಿಯಂತ್ರಿಸದಿದ್ದಲ್ಲಿ ಕಷ್ಟದ ಪರಿಸ್ಥಿತಿ ಎದುರಿಸಬೇಕಾದ ಆತಂಕವೂ ಇದೆ. ಕರೋನಾ ಸಂಕಷ್ಟದಿಂದ ಹೊರಬರುತ್ತಿರುವ ಸಂದರ್ಭದಲ್ಲಿಯೇ ಬೆಲೆ ಹೆಚ್ಚಳವಾಗಿರುವುದರಿಂದ ಜನ ಸಾಮಾನ್ಯರು ದುಡಿಯುವ ವರ್ಗದ ಜನ ಸಂಕಷ್ಟಕ್ಕೆ ಒಳಗಾಗಿದ್ದರು. ಅಂತರಾಷ್ಟ್ರೀಯ ಮಟ್ಟದಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಹೆಚ್ಚಳ ಪ್ರಮುಖ ಕಾರಣವಾಗಿದ್ದರೂ ರಾಜ್ಯ  ಸರ್ಕಾರ ಇತಿಮಿತಿಯಲ್ಲಿ ಕೆಲ ಕ್ರಮ ಕೈಗೊಳ್ಳುವ ಮೂಲಕ ಜನರ ನೆರವಿಗೆ ಬರಬಹುದು.

**ಅಲ್ಪಾವಧಿ, ಧೀರ್ಘಾವಧಿ ಕ್ರಮ :** ಸಗಟು ಮಾರಾಟ ಸೂಚ್ಯಂಕ ಹೆಚ್ಚಳವಾಗಿರುವುದು ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಹಣದುಬ್ಬರಕ್ಕೆ ಕಾರಣವಾಗಿದೆ. ಆದ್ದರಿಂದ ಸರ್ಕಾರ ಪಿಡಿಎಸ್‌ನಲ್ಲಿ ಅಗತ್ಯ ವಸ್ತುಗಳನ್ನು ಸರಬರಾಜು ಮಾಡುವ ಮೂಲಕ ಬೆಲೆ ನಿಯಂತ್ರಣ ಮಾಡಬೇಕಾಗಿದೆ. ಅದಕ್ಕಾಗಿ ವಸ್ತುಗಳನ್ನು ಆಮದು ಮಾಡಿಕೊಳ್ಳಬೇಕು. ಇದು ಅಲ್ಪಾವಧಿ ಕ್ರಮವಾಗುತ್ತದೆ. ದೀರ್ಘಾವಧಿ ಕ್ರಮಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ರಾಜ್ಯದ ತೆರಿಗೆಯನ್ನು ಕಡಿಮೆ ಮಾಡುವುದು; ರಾಜ್ಯದಿಂದ ಅಗತ್ಯ ವಸ್ತುಗಳ ರಫ್ತು ತಡೆಯುವುದು ಸೇರಿವೆ.

**ಇಂಧನ ಮೇಲೆ ರಾಜ್ಯದ ತೆರಿಗೆ:**

- ಪೆಟ್ರೋಲ್ ಮೇಲೆ ಶೇ. 24.90
- ಡೀಸೆಲ್ ಮೇಲೆ ಶೇ.14.34

**ಹಣದುಬ್ಬರ ಈಗ ಎಷ್ಟಿದೆ:**

- ಆಹಾರ ಧಾನ್ಯ, ಪಾನೀಯ ಶೇ.45
- ವಸತಿ, ಇಂಧನ ಶೇ.24

**ರಾಜ್ಯದಲ್ಲಿನ ಸಹಾಯಧನ:**

- ರೂ.2021–22ರಲ್ಲಿ 25483.38 ಕೋಟಿ
- ರೂ.2022–23 ರಲ್ಲಿ 26113.81 ಕೋಟಿ

**ದಕ್ಷಿಣ ರಾಜ್ಯಗಳಲ್ಲಿ ಎಷ್ಟಿದೆ:**

| ರಾಜ್ಯ | ಗ್ರಾಮೀಣ | ನಗರ |
|---|---|---|
| ಆಂಧ್ರಪ್ರದೇಶ | ಶೇ.7.47 | ಶೇ.7.22 |
| ಕರ್ನಾಟಕ | ಶೇ.5.96 | ಶೇ.6.72 |
| ಕೇರಳ | ಶೇ.4.82 | ಶೇ.5.61 |
| ತಮಿಳುನಾಡು | ಶೇ.5.64 | ಶೇ.5.17 |
| ತೆಲಂಗಾಣ | ಶೇ.10.26 | ಶೇ.7.92 |
| ಅಖಿಲ ಭಾರತ | ಶೇ.8.38 | ಶೇ.7.09 |

**ತಜ್ಞರ ಸಲಹೆಗಳೇನು:**

- ಅಗತ್ಯ ವಸ್ತುಗಳು ಅಕ್ರಮ ದಾಸ್ತಾನು ಆಗದಂತೆ ಎಚ್ಚರವಹಿಸಬೇಕು.
- ಕೃತಕ ಬೆಲೆ ಏರಿಕೆ ಆಗದಂತೆ ಕ್ರಮಕೈಗೊಳ್ಳಬೇಕು.
- ವಿದ್ಯುತ್ ದರ ಹೆಚ್ಚಳ ಆದೇಶ ವಾಪಸ್ ಪಡೆಯಬೇಕು.
- ಶಾಲಾ ಶುಲ್ಕ ಹೆಚ್ಚಳವಾಗದಂತೆ ಎಚ್ಚರವಹಿಸಬೇಕು.
- ಸರ್ಕಾರಿ ಆಸ್ಪತ್ರೆಗಳ ವ್ಯವಸ್ಥೆ ಬಲಪಡಿಸಬೇಕು.
- ಮನೆ ಬಾಡಿಗೆ ನಿಯಂತ್ರಣ ಕಾನೂನು ಮರು ಜಾರಿಯಾಗಬೇಕು.
- ಅಗತ್ಯ ವಸ್ತುಗಳೆಲ್ಲವೂ ಪಡಿತರ ವ್ಯವಸ್ಥೆಯಲ್ಲಿ ವಿತರಣೆಯಾಗಬೇಕು.
- ಉದ್ಯೋಗದ ಅವಕಾಶಗಳನ್ನು ಹೆಚ್ಚು ಮಾಡಬೇಕು.
- ಸಬ್ಸಿಡಿಗಳನ್ನು ಹೆಚ್ಚು ನೀಡಬೇಕು.
- ಸಾಮಾಜಿಕ ಭದ್ರತೆಯನ್ನು ಜಾಸ್ತಿ ಮಾಡಬೇಕು.
- ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ತೆರಿಗೆ ಕಡಿತಕ್ಕೆ ಕೇಂದ್ರದ ಮೇಲೆ ಒತ್ತಡ ಹಾಕಬೇಕು.
- ಕೇಂದ್ರದಿಂದ ಹೆಚ್ಚಿನ ಅನುದಾನಗಳನ್ನು ಪಡೆಯಲು ಕ್ರಮೈಗೊಳ್ಳಬೇಕು.
- ಕೇಂದ್ರ ಕೆಲವು ಸೆಸ್‌ಗಳನ್ನು ಕಡಿಮೆ ಮಾಡಬೇಕು.
- ಖಾದ್ಯ ತೈಲ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗಬೇಕು
- ಕೃಷಿ ಉತ್ಪನನ್ನಗಳ ಆಮದು ತಗ್ಗಿಸಿ ಸ್ಥಳೀಯ ಉತ್ಪಾದನೆಗೆ ಆದ್ಯತೆ ನೀಡಬೇಕು.
- ನಗದು ಮೀಸಲು ಅನುಪಾತ ಹೆಚ್ಚಳ ಮಾಡಬೇಕು.

ಆಧಾರ: ವಿಜಯವಾಣಿ, ದಿನಾಂಕ:23.05.2022.

## 23. ಸಿಟಿಗಳಿಗೂ ವಿಮಾನ ಭಾಗ್ಯ

ರಾಜಧಾನಿ ಬೆಂಗಳೂರು ಹೊರತಾಗಿ ದ್ವಿತೀಯ, ತೃತೀಯ ಸ್ತರದ ನಗರಗಳಿಗೂ ವಿಮಾನಯಾನ ಸೇವೆ ಕಲ್ಪಿಸಿ ಉದ್ಯಮಶೀಲತೆ ವಿಸ್ತರಿಸುತ್ತಿರುವ ಬಗ್ಗೆ ವಿಶ್ವ ಆರ್ಥಿಕ ಶೃಂಗಸಭೆಯಲ್ಲಿ ಸಿಎಂ ಬಸವರಾಜ್

ಬೊಮ್ಮಾಯಿ ಮನವರಿಕೆ ಮಾಡಿಕೊಟ್ಟಿದ್ದಾರೆ. ಈ ಮೂಲಕ ಜಾಗತಿಕ ಉದ್ಯಮಿಗಳಿಗೆ ಕರ್ನಾಟಕದಲ್ಲಿ ಹೂಡಿಕೆ ಮಾಡುವಂತೆ ಮುಕ್ತ ಆಹ್ವಾನ ನೀಡಿದರು.

ಸ್ವಿಡ್ಜರ್ಲೆಂಡ್‌ನ ದಾವೋಸ್‌ನಲ್ಲಿ ನಡೆದ ಶೃಂಗಸಭೆಯ ಕೊನೆಯ ದಿನ, ವಾಣಿಜ್ಯ ವೇದಿಕೆಯನ್ನು ಕರ್ನಾಟಕದಲ್ಲಿನ ಹೂಡಿಕೆ ಅವಕಾಶ ಹಾಗೂ ಅದಕ್ಕೆ ಪೂರಕವಾಗಿರುವ ವಾತಾವರಣದ ಬಗ್ಗೆ ಜಾಗತಿಕ ಮಟ್ಟದ ಹೂಡಿಕೆದಾರರಿಗೆ ವಿವರಿಸಲು ಸಿಎಂ ಬೊಮ್ಮಾಯಿ ಬಳಸಿಕೊಂಡರು.

ರಾಜ್ಯದಲ್ಲಿನ ತಂತ್ರಜ್ಞಾನ ಬಳಕೆ ಮಟ್ಟ, ಕುಶಲ ಮಾನವ ಸಂಪನ್ಮೂಲ, ಪ್ರತಿಷ್ಠಿತ ಕಂಪನಿಗಳ ಜೊತೆಗೆ ಜಾಗತಿಕ ಮಟ್ಟದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಕ್ಷೇತ್ರದಲ್ಲಿನ ಮುಂಚೂಣಿ ಕಂಪನಿಗಳು ಬೆಂಗಳೂರಿನಲ್ಲಿ ಕೇಂದ್ರೀಕೃತವಾಗಿರುವ ಬಗ್ಗೆಯೂ ಗಮನ ಸೆಳೆದ ಬೊಮ್ಮಾಯಿ, ಸಾಗಣೆ–ಸಂಪರ್ಕ ವಲಯಕ್ಕೆ ನೀಡಿರುವ ಆದ್ಯತೆ ಬಗ್ಗೆಯು ಮಾಹಿತಿ ಹಂಚಿಕೊಂಡರು. ಜಗತ್ತಿನಲ್ಲೇ ಅತಿವೇಗವಾಗಿ ಬೆಳೆಯುತ್ತಿರುವ ಬೆಂಗಳೂರಿನ ಮೇಲೆ ಒತ್ತಡ ತಗ್ಗಿಸಲು ಸಲುವಾಗಿ 2 ಮತ್ತು 3ನೇ ಸ್ತರದ ನಗರಗಳಲ್ಲೂ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಒತ್ತು ನೀಡಲಾಗುತ್ತಿದೆ ಎಂದರು.

ಇದೇ ವರ್ಷ ನಾಲ್ಕು ಹೊಸ ಏರ್‌ಪೋರ್ಟ್‌ಗಳು ನಿರ್ಮಾಣವಾಗಲಿವೆ ಎಂದು ಹೇಳುವ ಮೂಲಕ ಕರ್ನಾಟಕದ ಹೆಚ್ಚು ಹೆಚ್ಚು ನಗರಗಳಿಗೆ ವಿಮಾನಯಾನ ಸಂಪರ್ಕ ಕಲ್ಪಿಸುತ್ತಿರುವ ಬಗ್ಗೆ ಗಮನ ಸೆಳೆದರು.

ಕರ್ನಾಟಕದ ಅಭಿವೃದ್ಧಿಯ ಯಶೋಗಾಥೆ ಅನ್ಯ ರಾಜ್ಯಗಳಿಗಿಂತ ಭಿನ್ನಾವಾಗಿದೆ. ವ್ಯಾಪಾರ, ವ್ಯವಹಾರ, ಹೂಡಿಕೆಗೆ ಸುರಕ್ಷಿತವಾದ ಪ್ರಶಸ್ತ ತಾಣವೆನಿಸಿದೆ. ಭಾರತದಲ್ಲಿರುವ ವಿದೇಶಿ ಸಂಸ್ಥೆಗಳ ಅರ್ಧದಷ್ಟು ಕರ್ನಾಟಕದಲ್ಲೇ ಇವೆ ಎನ್ನುವ ಮೂಲಕ ಹೂಡಿಕೆಗೆ ಕರ್ನಾಟಕವೇ ಮೊದಲ ಆಯ್ಕೆಯಾಗಿರಲಿ ಎಂಬ ಮುಕ್ತ ಆಹ್ವಾನ ನೀಡಿದರು.

**ಎಲ್ಲೆಲ್ಲಿ ಬೇಡಿಕೆ:**

- ದಾವಣಗೆರೆಯಲ್ಲಿ ವಿಮಾನ ನಿಲ್ದಾಣದ ಬೇಡಿಕೆಗೆ ಸ್ಪಂದಿಸಿ ಈ ಬಾರಿ ಬಜೆಟ್‌ನಲ್ಲಿ ಘೋಷಣೆ.
- ಉತ್ತರ ಕನ್ನಡದ ಅಂಕೋಲಾ ಬಳಿ ನೌಕಾನೆಲೆಯಿಂದ ವಿಮಾನ ನಿಲ್ದಾಣ ನಿರ್ಮಿಸಲಿದ್ದು, ಅದನ್ನು ನಾಗರಿಕ ಬಳಕೆಗೂ ನೀಡಲಾಗುತ್ತದೆ.
- ಕೊಪ್ಪಳಕ್ಕೆ 2017 ರಲ್ಲಿಯೇ ವಿಮಾಣ ನಿಲ್ದಾಣ ಮಂಜೂರಾಗಿದ್ದರೂ ಈಗ ಭೂಸ್ವಾಧೀನ ಪ್ರಕ್ರಿಯೆ ಶುರು.
- ಶಿವಮೊಗ್ಗದಲ್ಲಿ ಕಾಮಗಾರಿ ಪ್ರಗತಿಯಲ್ಲಿದ್ದು ಮುಂದಿನ ವರ್ಷ ಕಾರ್ಯಾರಂಭ ನಿರೀಕ್ಷೆ.
- ರಾಯಚೂರಿನಲ್ಲಿ ರೂ.182 ಕೋಟಿ ಮಂಜೂರಾಗಿದ್ದರೂ, ಇನ್ನೂ ಟೆಂಡರ್ ಕರೆಯುವ ಹಂತದಲ್ಲಿದೆ.
- ಬಳ್ಳಾರಿ ಜಿಲ್ಲೆಯಲ್ಲಿ ವಿಮಾನ ನಿಲ್ದಾಣ ನಿರ್ಮಾಣ ಹಂತದಲ್ಲಿದೆ. ಸದ್ಯ ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳಿಗೆ ಖಾಸಗಿ ಜಿಂದಾಲ್ ನಿಲ್ದಾಣವೇ ಆಸರೆ.
- ಬೆಳಗಾವಿ ಜಿಲ್ಲೆಯ ಚನ್ನಮ್ಮನ ಕಿತ್ತೂರು ಬಳಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಬೇಡಿಕೆ ಇದ್ದು, ಹುಬ್ಬಳ್ಳಿ, ಬೆಳಗಾವಿ ಜಿಲ್ಲೆಗಳಿಗೆ ಅನುಕೂಲವಾಗಲಿದೆ.
- ಚಿಕ್ಕಮಗಳೂರಿನ ಗೌಡನ ಹಳ್ಳಿಯಲ್ಲಿ ಏರ್‌ಸ್ಟ್ರಿಪ್, ನಗರದಲ್ಲಿ ಹೆಲಿಪೋರ್ಟ್ ನಿರ್ಮಾಣದ ಘೋಷಣೆ.

**ಎಫ್‌ಡಿಐ ಹರಿವಿನಲ್ಲಿ ಪ್ರಥಮ ಸ್ಥಾನ:** ಕಳೆದ ಒಂದು ವರ್ಷದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ ಹರಿವಿನಲ್ಲಿ ಕರ್ನಾಟಕ ಪ್ರಥಮ ಸ್ಥಾನದಲ್ಲಿದ್ದು, ದೇಶಾದ್ಯಂತ ಎಫ್‌ಡಿಐ ಹರಿವಿನ ಪ್ರಮಾಣದಲ್ಲಿ ಶೇ.42

ರಷ್ಟು ಪಾಲನ್ನು ಕರ್ನಾಟಕವೇ ಪಡೆದಿದೆ. ಹಾಗೆಯೇ ನವೀಕರಿಸಬಹುದಾದ ಇಂಧನ ಮೂಲದ ಉತ್ಪಾದನೆಯಲ್ಲಿ ಕರ್ನಾಟಕದ ಪಾಲು ಶೇ.63ರಷ್ಟಿದೆ. ರಾಜ್ಯದಲ್ಲಿ ಹೂಡಿಕೆ ಮಾಡಿರುವ ಯಾವ ಕಂಪನಿಯೂ ಬಂಡವಾಳ ಹಿಂತೆಗಿದಿಲ್ಲ, ಅನ್ಯ ರಾಜ್ಯಗಳತ್ತ ಮುಖ ಮಾಡಿಲ್ಲ ಎನ್ನುವ ಮೂಲಕ ರಾಜ್ಯ ಹೂಡಿಕೆ ಸ್ನೇಹಿ ಎಂಬುದನ್ನು ಸಿಎಂ ಮನವರಿಕೆ ಮಾಡಿಕೊಟ್ಟರು.

**ಹೂಡಿಕೆ ಸೆಳೆಯಲು ಯಶಸ್ವಿ:**

- ವಿಶ್ವ ಆರ್ಥಿಕ ಶೃಂಗಸಭೆಯಲ್ಲಿ 2 ಪ್ರತಿಷ್ಠಿತ ಕಂಪನಿಗಳ ಜೊತೆ ರೂ.52,000 ಕೋಟಿ ಹೂಡಿಕೆ ಸಂಬಂಧ ಸರ್ಕಾರ ಒಡಂಬಡಿಕೆ.
- ಲುಲು ಗ್ರೂಪ್ ಇಂಟರ್ ನ್ಯಾಷನಲ್, ರೆನ್ಯೂ ಪವರ್ ಪ್ರೈವೆಟ್ ಲಿಮಿಟೆಡ್ ಹೂಡಿಕೆಗೆ ಒಪ್ಪಂದ ಮಾಡಿಕೊಂಡಿವೆ.
- ಸೀಮೆನ್ಸ್, ದಸ್ಸಾಲ್ಸ್ ಸಿಸ್ಟಮ್, ನೆಸ್ಲೆ ಸಂಸ್ಥೆ, ಆಕ್ಸಿಸ್ ಬ್ಯಾಂಕ್, ನೋಕಿಯಾ ಸೇರಿ ಇತರ ಕಂಪನಿಗಳಿಂದಲೂ ಹೂಡಿಕೆಗೆ ಆಸಕ್ತಿ.
- ನವೆಂಬರನಲ್ಲಿ ಬೆಂಗಳೂರಿನಲ್ಲಿ ನಡೆಯಲಿರುವ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಫಲ ನೀಡುವ ಸಾಧ್ಯತೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:26.05.2022.

## 24. ದಾವೋಸ್‌ನಿಂದ ರಾಜ್ಯದೆಡೆಗೆ ಹರಿಯಲಿದೆ ರೂ.52 ಸಾವಿರ ಕೋಟಿ ಬಂಡವಾಳ ಹೂಡಿಕೆ

ಸ್ವಿಟ್ಜರ್‌ಲೆಂಡ್‌ನ ದಾವೋಸ್‌ನಲ್ಲಿ ನಡೆದ ವಿಶ್ವ ಆರ್ಥಿಕ ಶೃಂಗದಲ್ಲಿ ರಾಜ್ಯದೆಡೆಗೆ ಬೃಹತ್ ಮೊತ್ತದ ಹೂಡಿಕೆ ಎರಡು ಪ್ರಮುಖ ಕಂಪನಿಗಳ ಜೊತೆಗೆ ರೂ.52 ಸಾವಿರ ಕೋಟಿ, ಮೊತ್ತದ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ.

ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ನೇತೃತ್ವದಲ್ಲಿ ಸಚಿವರು ಮತ್ತು ಅಧಿಕಾರಗಳನ್ನೊಳಗೊಂಡ ನಿಯೋಗ ಹಲವು ಉದ್ಯಮಿಗಳ ಜೊತೆ ಹೂಡಿಕೆ ಕುರಿತಂತೆ ಸಮಾಲೋಚನೆ ನಡೆಸಿದೆ. ಮುಂದಿನ ನವೆಂಬರ್‌ನಲ್ಲಿ ಬೆಂಗಳೂರಿನಲ್ಲಿ ನಡೆಯಲಿರುವ ಜಾಗತಿಕ ಹೂಡಿಕೆದಾರರ ಸಮಾವೇಶ ಮತ್ತು ಟೆಕ್ ಸಮ್ಮಿಟ್‌ನಲ್ಲಿ ಪಾಲ್ಗೊಳ್ಳಲು ಅನೇಕ ಕಂಪನಿಗಳು ಆಸಕ್ತಿ ತೋರಿವೆ.

ಈ ಕುರಿತು ಪ್ರತಿಕ್ರಿಯಿಸಿರುವ ಸಿಎಂ ಬೊಮ್ಮಾಯಿಯವರು, ದಾವೋಸ್ ಶೃಂಗ ಸಭೆ ಫಲಪ್ರದವಾಗಿದ್ದು, ಕರ್ನಾಟಕ ಬಂಡವಾಳ ಹೂಡಿಕೆ ಆಕರ್ಷಿಸುವಲ್ಲಿ ಯಶಸ್ವಿಯಾಗಿದೆ. ಇದು ದೊಡ್ಡ ದೊಡ್ಡ ಕಂಪನಿಗಳು ರಾಜ್ಯದ ಮೇಲೆ ಇಟ್ಟಿರುವ ನಂಬಿಕೆ ಮತ್ತು ವಿಶ್ವಾಸಕ್ಕೆ ಸಾಕ್ಷಿ. ಇತ್ತೀಚಿನ ದಿನಗಳಲ್ಲಿ ರಾಜ್ಯಕ್ಕೆ ಹರಿದು ಬರುತ್ತಿರುವ ಬಹುದೊಡ್ಡ ಮೊತ್ತದ ಬಂಡವಾಳ ಇದಾಗಿದೆ. ಮುಂಬರುವ ದಿನಗಳಲ್ಲಿ ಸಾವಿರಾರು ನೇರ ಮತ್ತು ಪರೋಕ್ಷ ಉದ್ಯೋಗಿಗಳು ಸೃಷ್ಟಿಯಾಗಲಿವೆ ಎಂದರು.

ಕೈಗಾರಿಕ ಸಚಿವ ಮುರುಗೇಶ ನಿರಾಣಿ, ಐಟಿ, ಬಿಟಿ, ಉನ್ನತ ಶಿಕ್ಷಣ ಮತ್ತು ಕೌಸಲ್ಯಾಭಿವೃದ್ಧಿ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ, ಕೈಗಾರಿಕಾ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಡಾ.ಇ.ವಿ.ರಮಣ ರೆಡ್ಡಿ, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎನ್.ಮಂಜುನಾಥ್ ಪ್ರಸಾದ್, ಕೈಗಾರಿಕಾ ಇಲಾಖೆ ಆಯುಕ್ತರಾದ ಗುಂಜನ್ ಕೃಷ್ಣ ಮತ್ತಿತ್ತರ ಹಿರಿಯ ಅಧಿಕಾರಿಗಳು ಮುಖ್ಯಮಂತ್ರಿಗಳ ನೇತೃತ್ವದ ನಿಯೋಗದಲ್ಲಿದ್ದರು.

**ಹೂಡಿಕೆಗೆ ಮುಂದಾದ ಕಂಪನಿಗಳು**: ಮೆ. ಲುಲು ಗ್ರೂಪ್ ಇಂಟರ್ನ್ಯಾಷನಲ್ ರಾಜ್ಯದಲ್ಲಿ 4 ಶಾಪಿಂಗ್ ಮಾಲ್ ಮತ್ತು ಹೈಪರ್ ಮಾರ್ಕೆಟ್ ಹಾಗೂ ರಫ್ತು ಆಧಾರಿತ ಆಹಾರ ಮಳಿಗೆಗಳನ್ನು ಸ್ಥಾಪಿಸಲು ರೂ.2 ಸಾವಿರ ಕೋಟಿ ಹೂಡಿಕೆ ಒಪ್ಪಂದಕ್ಕೆ ಸಹಿ ಮಾಡಿದೆ. ಈ ಮೂಲಕ 10 ಸಾವಿರಕ್ಕೂ ಹೆಚ್ಚು ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆ ಇದೆ. ರೆನ್ಯೂ ಪವರ್ ಪ್ರೈ.ಲಿ. ಮುಂದಿನ 7 ವರ್ಷಗಳಲ್ಲಿ ನವೀಕರಿಸಬಹುದಾದ

ಇಂಧನ, ಬ್ಯಾಟರಿ ಸ್ಟೋರೇಜ್, ಗ್ರೀನ್ ಹೈಡ್ರೋಜನ್ ಘಟಕಗಳನ್ನು 2 ಹಂತಗಳಲ್ಲಿ ಸ್ಥಾಪಿಸಲು ಉದ್ದೇಶಿಸಿದ್ದು, ರೂ.50 ಸಾವಿರ ಕೋಟಿ ಮೊತ್ತದ ಒಪ್ಪಂದಕ್ಕೆ ಸಹಿ ಹಾಕಿದೆ. ಸುಮಾರು 30 ಸಾವಿರ ಉದ್ಯೋಗ ಸೃಷ್ಟಿಯ ನಿರೀಕ್ಷೆ ಇದೆ. ಮೊದಲ ಹಂತದಲ್ಲಿ ಈಗಾಗಲೇ ಜಾರಿಯಲ್ಲಿರುವ ಯೋಜನೆಗಳಿಗೆ ರೂ.11,900 ಕೋಟಿ ಬಂಡವಾಳ ಹೂಡಿ, ಮುಂದಿನ 2 ವರ್ಷಗಳಲ್ಲಿ ಯೋಜನೆಗಳು ಕಾರ್ಯಾರಂಭ ಮಾಡಲಾಗುತ್ತದೆ.

ರಾಜ್ಯದಲ್ಲಿ ವಿದ್ಯುತ್ ವಾಹನಗಳು ಮತ್ತು ಕೇಂದ್ರ ಉತ್ಪಾದನಾ ತಾಂತ್ರಿಕ ಸಂಸ್ಥೆಯ ಸಹಯೋಗದಲ್ಲಿ ಆಧುನಿಕ ಉತ್ಪಾದನೆ ಕ್ಷೇತ್ರ, ವಿದ್ಯಾರ್ಥಿಗಳಿಗೆ ಕೈಗಾರಿಕೆ 4.0, ಡಿಜಿಟಲ್ ತಂತ್ರಜ್ಞಾನದ ಬಗ್ಗೆ ತರಬೇತಿ, ರಾಜ್ಯದ ಸ್ಮಾರ್ಟ್ ಸಿಟಿ ಯೋಜನೆಗಳಲ್ಲಿ ಹೂಡಿಕೆ ಮಾಡಲು ದಸ್ಸಾಲ್ಸ್ ಸಿಸ್ಟಮ್ಸ್ ಉತ್ಸುಕತೆ ತೋರಿದೆ. ನಂಜನಗೂಡಿನಲ್ಲಿ ನೆಸ್ಲೆ ಇನ್ಸೆಂಟ್ ಕಾಫಿ ಕಾರ್ಖಾನೆಯ ನವೀಕರಣ ಹಾಗೂ ವಿಸ್ತರಣಾ ಕಾರ್ಯಕ್ಕೆ ನೆಸ್ಲೆ ಸಂಸ್ಥೆ ಮುಂದಾಗಿದೆ. ಭಾರ್ತಿ ಎಂಟರ್ ಪ್ರೈಸಸ್‌ನ ಅಧ್ಯಕ್ಷ ಹಾಗೂ ಸಿಇಒ ಸುನಿಲ್ ಭಾರ್ತಿ ಮಿತ್ತಲ್ ಅವರು ರಾಜ್ಯದಲ್ಲಿ ಇನ್ನೊಂದು ಮೆಗಾ ಡಾಟಾ ಸೆಂಟರ್ ಸ್ಥಾಪಿಸುವ ಇಂಗಿತ ವ್ಯಕ್ತಪಡಿಸಿದ್ದಾರೆ.

ಇಂಗ್ಕಾ ಗ್ರೂಪ್ (ಐಕಿಯ) ಸಿಇಒ ಜೆಸ್ಪರ್ ಬ್ರಾಡಿನ್ ಅವರು ರಾಜ್ಯದಲ್ಲಿ ಐಕಿಯ ಸ್ಟೋರ್ ತೆರೆಯುತ್ತಿರುವ ಹಿನ್ನೆಲೆಯಲ್ಲಿ ನಾನಾ ವಿಷಯಗಳ ಕುರಿತು ಚರ್ಚಿಸಿ, ಜೂನ್‌ನಲ್ಲಿ ನಾಗಸಂದ್ರದಲ್ಲಿ ಐಕಿಯ ಸ್ಟೋರ್ ತೆರೆಯಲಿದೆ ಎಂದು ಹೇಳಿದ್ದಾರೆ.

**ಮಾತುಕತೆ ಆಗಿರುವ ಕಂಪನಿಗಳು:** ಬೆಂಗಳೂರಿನಲ್ಲಿ 2 ಯೋಜನೆಗಳನ್ನು ಸೀಮೆನ್ಸ್ ಸಂಸ್ಥೆ ಕೈಗೆತ್ತಿಕೊಳ್ಳಲಿದೆ. ಆಧುನಿಕ ವೈದ್ಯಕೀಯ ಉಪಕರಣಗಳ ಉತ್ಪಾದನೆಗೆ ಸಂಬಂಧಿಸಿದಂತೆ ವಿಶೇಷ ಪ್ರೋತ್ಸಾಹಕಗಳನ್ನು ಕರ್ನಾಟಕ ಸರ್ಕಾರ ಒದಗಿಸುವ ಭರವಸೆ ನೀಡಿದೆ. ಬಿಯಾಂಡ್ ಬೆಂಗಳೂರು ಯೋಜನೆಯಡಿ ತುಮಕೂರು, ಹುಬ್ಬಳ್ಳಿ–ಧಾರವಾಡ ಮತ್ತು ಮೈಸೂರು ನಗರಗಳಲ್ಲಿಯೂ ಹೂಡಿಕೆ ಮಾಡುವ ಕುರಿತು ರಾಜ್ಯ ಸರ್ಕಾರ ಮತ್ತು ಸೀಮನ್ಸ್ ಸಂಸ್ಥೆ ಮಾತುಕತೆ ನಡೆಸಿತು.

ಆಧಾರ: ವಿಶ್ವವಾಣಿ, ದಿನಾಂಕ:26.05.2022.

## 25. ರಾಜ್ಯ ಸರ್ಕಾರಕ್ಕೆ ಮಹಿಳಾ ಮುಖ್ಯ ಕಾರ್ಯದರ್ಶಿ

ರಾಜ್ಯ ಸರ್ಕಾರದ ನೂತನ ಮುಖ್ಯ ಕಾರ್ಯದರ್ಶಿ ಆಗಿ ಹಿರಿಯ ಐಎಎಸ್ ಅಧಿಕಾರಿ ವಂದಿತಾ ಶರ್ಮ ಅವರನ್ನು ನೇಮಕ ಮಾಡಲಾಗಿದೆ. ಹಾಲಿ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಅವರ ಸೇವಾವಧಿ ಈ ತಿಂಗಳು ಕೊನೆಯಾಗಲಿದೆ. ಮುಖ್ಯ ಕಾರ್ಯದರ್ಶಿ ಹುದ್ದೆಗೆ ಹಲವು ಅಧಿಕಾರಿಗಳ ಹೆಸರು ಕೇಳಿ ಬಂದಿತ್ತು. ಸರ್ಕಾರ ಅಂತಿಮವಾಗಿ 1986ನೇ ಬ್ಯಾಚ್ ಕರ್ನಾಟಕ ಕೇಡರ್ ಅಧಿಕಾರಿ ವಂದಿತ ಶರ್ಮ ಅವರನ್ನು ನೇಮಕ ಮಾಡಿದೆ. ಸದ್ಯ ಅರ್ಥಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಆಗಿರುವ ಐಎಸ್ಎನ್ ಪ್ರಸಾದ್ ಅವರ ಪತಿ ವಂದಿತಾ ಶರ್ಮ. ನವೆಂಬರ್ 2023ಕ್ಕೆ ನಿವೃತ್ತಿ ಆಗುವರು.

ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ:28.05.2022.

## 26. ಸರ್ಕಾರಿ ಹುದ್ದೆಗೆ ಡಿಪ್ಲೊಮಾ ಪರಿಗಣಿಸಲು ಆದೇಶ

ಡಿಪ್ಲೊಮಾ ಪಿಯುಸಿಗೆ ತತ್ಸಮಾನವೋ ಅಲ್ಲವೋ ಎಂಬ ಗೊಂದಲಕ್ಕೆ ಸರ್ಕಾರವೇ ತೆರೆ ಎಳೆದಿದೆ. 3 ವರ್ಷದ ಡಿಪ್ಲೊಮಾ ಐಟಿಐ ಹಾಗೂ ವೃತ್ತಿ ಶಿಕ್ಷಣ ಕೋರ್ಸ್‌ಗಳ (ಜೆಓಸಿ) ವಿದ್ಯಾರ್ಹತೆಯನ್ನು ಪಿಯುಸಿಗೆ ತತ್ಸಮಾನ ಎಂದು ಪರಿಗಣಿಸಲು ರಾಜ್ಯ ಸರ್ಕಾರ ಆದೇಶಿಸಿದೆ.

ಡಿಪ್ಲೊಮಾ, ಜೆಓಸಿ, ಐಟಿಐ ವಿದ್ಯಾರ್ಹತೆಯನ್ನು ಪಿಯುಸಿಗೆ ತತ್ಸಮಾನವೆಂದು ಪರಿಗಣಿಸಿ, ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆಗಳಿಗೆ ಆಯ್ಕೆಯಾಗಿರುವ ಅಭ್ಯರ್ಥಿಗಳನ್ನು ನೇಮಿಸಿಕೊಳ್ಳಲು ಒಳಾಡಳಿತ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಿಗೆ ಲಿಖಿತ ಸೂಚನೆ ನೀಡಿದ್ದಾರೆ. ಎಲ್ಲಾ ಸರ್ಕಾರಿ ಹುದ್ದೆಗಳ ಆಯ್ಕೆಗೂ ಇದೇ ಮಾನದಂಡ ಅನ್ವಯಿಸುತ್ತದೆ.

ತಾಂತ್ರಿಕ ಶಿಕ್ಷಣ ಇಲಾಖೆಯ ಮೂರು ವರ್ಷಗಳ ಡಿಪ್ಲೊಮಾ ಪಿಯುಸಿ ತತ್ಸಮಾನವಾಗಿರುತ್ತದೆ. 3 ವರ್ಷಗಳ ಡಿಪ್ಲೊಮ್ಮಾ, ಜೆಓಸಿಯನ್ನು 2018, 2019 2020ರ ಅಭ್ಯರ್ಥಿಗಳಿಗೆ ಹಾಗೂ 2015ಕ್ಕಿಂತ ಹಿಂದಿನಿಂದಲೂ ಪೂರ್ವಾನ್ವಯವಾಗುವಂತೆ ಪಿಯುಸಿ ತತ್ಸಮಾನತೆಯನ್ನು ಸರ್ಕಾರದ ಆದೇಶಗಳನ್ವಯ ನೀಡಬಹುದಾಗಿದೆ. ಐಟಿಐ ಅಭ್ಯರ್ಥಿಗಳು 2020–21ರಲ್ಲಿ ಪಿಯುಸಿ ಅಥವಾ ಎನ್‌ಐಒಎಸ್ (ಒಂದು ಭಾಷಾ ಕೋರ್ಸ್) ನಡೆಸುವ ಪರೀಕ್ಷೆಯಲ್ಲಿ ಉತ್ತೀರ್ಣರಾದಲ್ಲಿ ಪಿಯುಸಿಗೆ ತತ್ಸಮಾನವೆಂದು ಪರಿಗಣಿಸಬಹುದಾಗಿದೆ.

2015ಕ್ಕಿಂತ ಮುಂಚೆ ಡಿಪ್ಲೊಮಾ ಪಡೆದ ಅಭ್ಯರ್ಥಿಗಳಿಗೆ ಕೆಪಿಎಸ್‌ಸಿ ವತಿಯಿಂದ ನಡೆಯುವ ಇಲಾಖೆ ಪರೀಕ್ಷೆಗಳಲ್ಲಿ ಕಡ್ಡಾಯವಾಗಿ ಕನ್ನಡ ಭಾಷೆಯಲ್ಲಿ ತೇರ್ಗಡೆ ಹೊಂದಬೇಕು ಎಂದು ಸೂಚಿಸಿರುವುದರಿಂದ ತಾಂತ್ರಿಕ ಶಿಕ್ಷಣ ಇಲಾಖೆಯಿಂದ ಪಡೆದ 3 ವರ್ಷಗಳ ಡಿಪ್ಲೊಮಾ ಅಭ್ಯರ್ಥಿಗಳನ್ನು 2015ಕ್ಕಿಂತ ಹಿಂದಿನಿಂದಲೇ ಪೂರ್ವಾನ್ವಯವಾಗುವಂತೆ ಪಿಯುಸಿಗೆ ತತ್ಸಮಾನ ಎಂದು ಪರಿಗಣಿಸಬಹುದಾಗಿದೆ ಎಂದು ಒಳಾಡಳಿತ ಇಲಾಖೆ ಸ್ಪಷ್ಟಪಡಿಸಿದೆ.

**ಕಾನ್‌ಸ್ಟೇಬಲ್ ಹುದ್ದೆಗೆ ಪಿಯುಸಿ ನಿಗದಿ:** ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆಗಳಿಗೆ ಪಿಯುಸಿ ಮತ್ತು ತತ್ಸಮಾನ ವಿದ್ಯಾರ್ಹತೆಯನ್ನು ನಿಗದಿಪಡಿಸಲಾಗಿದೆ. ಈಗಾಗಲೇ ನೇಮಕಾತಿ ಹೊಂದಿ ಆದೇಶ ಪತ್ರದ ನಿರೀಕ್ಷೆಯಲ್ಲಿರುವ ಅಭ್ಯರ್ಥಿಗಳಿಗೆ ಜೆಓಸಿ ಪಿಯುಸಿಗೆ ತತ್ಸಮಾನವೆಂದು ಪರಿಗಣಿಸಲು ಆದೇಶಿಸಿದೆ.

ಆಧಾರ:ವಿಜಯವಾಣಿ, ದಿನಾಂಕ:30.05.2022.

## 27. ಪಾಲಿಕೆ ಕಾಯ್ದೆಯ ಮೀಸಲು ದೋಷ ನಿವಾರಣೆಗೆ ಸಚಿವ ಸಂಪುಟ ನಿರ್ಧಾರ

ಬಿಬಿಎಂಪಿ ಚುನಾವಣೆಯಲ್ಲಿ ಒಟ್ಟಾರೆ ಮೀಸಲಾತಿ ಪ್ರಮಾಣವು ಶೇ.33ರಷ್ಟು ಮೀರಬಾರದು ಎಂದು ಪಾಲಿಕೆ ಕಾಯ್ದೆಯಲ್ಲಿ ತಪ್ಪಾಗಿ ಸೇರ್ಪಡೆಯಾಗಿರುವುದನ್ನು ಬದಲಿಸಿ ಮೀಸಲಾತಿ ಪ್ರಮಾಣ ಶೇ.50 ರಷ್ಟು ಮೀರಬಾರದು ಎಂದು ಸೇರ್ಪಡೆ ಮಾಡಲು ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಸರ್ಕಾರದ ಮೂಲಗಳು ಹೇಳುವ ಪ್ರಕಾರ ಕಾಯ್ದೆಯಲ್ಲಿದ್ದ ಈ ತಪ್ಪು ಅಂಶ ಹಾಗೇ ಇದ್ದಿದ್ದರೆ ಮುಂಬರುವ ಬಿಬಿಎಂಪಿ ಚುನಾವಣೆಯಲ್ಲಿ ಇತರೆ ಹಿಂದುಳಿದ ವರ್ಗದವರಿಗೆ (ಒಬಿಸಿ) ಹೆಚ್ಚಿನ ಮೀಸಲಾತಿ ನೀಡಲು ಸಾಧ್ಯವಾಗುತ್ತಿರಲಿಲ್ಲ. ಒಟ್ಟಾರೆ ಮೀಸಲಾತಿ ಪ್ರಮಾಣ ಶೇ.50 ರಷ್ಟು ಮೀರಬಾರದು ಎಂದು ಸುಪ್ರಿಂಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಈ ಹಿಂದೆಯೇ ಬಿಬಿಎಂಪಿ ಕಾಯ್ದೆಯಲ್ಲಿ ಶೇ.50 ರಷ್ಟು ಮೀಸಲಾತಿ ನೀಡುವ ಅಂಶವನ್ನು ಸೇರಿಸಲಾಗಿತ್ತು. ಆಗ ಒಬಿಸಿಗೆ ಶೇ.27 ರಷ್ಟು ಮೀಸಲಾತಿಯನ್ನೂ ನೀಡಲಾಗಿತ್ತು. ಆದರೆ, 2020ರಲ್ಲಿ ಸರ್ಕಾರ ಕಾಯ್ದೆಗೆ ತಿದ್ದುಪಡಿ ತಂದಾಗ ತಪ್ಪಾಗಿ ಇದನ್ನು ಶೇ.33 ರಷ್ಟು ಮೀರಬಾರದೂ ಎಂದು ಸೇರಿಸಲಾಗಿತ್ತು. ಇದರಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಶೇ.23 ರಷ್ಟು ಮೀಸಲಾತಿ ನೀಡಿದ ಬಳಿಕ ಉಳಿಯುವ ಶೇ.10 ರಷ್ಟು ಮೀಸಲಾತಿ ಮಾತ್ರ ಒಬಿಸಿಗೆ ಸಿಗುತ್ತಿತ್ತು. ಈ ತಪ್ಪು ಸರ್ಕಾರದ ಗಮನಕ್ಕೆ ಬಂದ ಹಿನ್ನೆಲೆಯಲ್ಲಿ ಸರಿಪಡಿಸಲು ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ಪಡೆಯಲಾಗಿದೆ.

2020ರಲ್ಲಿ ಬಿಬಿಎಂಪಿ ಕಾಯ್ದೆಗೆ ತಿದ್ದುಪಡಿ ತರುವಾಗ ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆಯ ಕೆಲ ಅಂಶಗಳನ್ನು ಬಿಬಿಎಂಪಿ ತಿದ್ದುಪಡಿ ಕಾಯ್ದೆಗೆ ಸೇರಿಸುವಾಗ ಇಂತಹ ತಪ್ಪುಗಳಾಗಿರಬಹುದು ಎನ್ನಲಾಗುತ್ತಿದೆ. ಆದರೆ, ಇಷ್ಟು ದಿನ ಅಧಿಕಾರಿಗಳೂ ಇದನ್ನು ಗಮನಿಸಿಯೇ ಇರಲಿಲ್ಲ. ಬಿಬಿಎಂಪಿ ನೂತನ ಮುಖ್ಯ ಆಯುಕ್ತ ತುಷಾರ್ ಗಿರಿನಥ್ ಅವರು ಬಂದ ಬಳಿಕ ಈ ತಪ್ಪನ್ನು ಸರ್ಕಾರದ ಗಮನಕ್ಕೆ ತಂದಿದ್ದರು ಎನ್ನಲಾಗಿದೆ.

ಬಿಬಿಎಂಪಿ ಚುನಾವಣಾ ಪ್ರಕ್ರಿಯೆಯನ್ನು ಎಂಟು ವಾರದೊಳಗಾಗಿ ನಡೆಸುವಂತೆ ಆದೇಶಿಸಿರುವ ಸುಪ್ರಿಂಕೋರ್ಟ್ ವಾರ್ಡ್ ಪುನರ್ ವಿಂಗಡನೆ ಮತ್ತು ಮೀಸಲಾತಿಯನ್ನು ಕಾಲಮಿತಿಯೊಳಗೆ ನಿಗದಿಪಡಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದೆ. ಈ ಹಿನ್ನೆಲೆಯಲ್ಲಿ ಕಾಯ್ದೆಯಲ್ಲಿನ ತಪ್ಪು

ಸರಿಪಡಿಸಿರುವುದರಿಂದ ಸುಪ್ರಿಂಕೋರ್ಟ್ ಆದೇಶದಂತೆ ಒಬಿಸಿ ಮೀಸಲಾತಿ ಕಲ್ಪಿಸಲು ದಾರಿ ಸುಗಮವಾಗಲಿದೆ.

ಆಧಾರ:ಕನ್ನಡ ಪ್ರಭ, ದಿನಾಂಕ:31.05.2022.

## 28. ಸೇವೆಗೆ ಸೇರದಿದ್ದರೆ ಹೊಸ ಖಾಲಿ ಹುದ್ದೆ

ಪತ್ರಾಂಕಿತ ಎ ಮತ್ತು ಬಿ ದರ್ಜೆ ಪ್ರೊಬೇಷನರಿ ಹುದ್ದೆಗಳಿಗೆ ಆಯ್ಕೆಯಾಗಿ ನೇಮಕಾತಿ ಆದೇಶ ಪಡೆದ ಅಭ್ಯರ್ಥಿಗಳು ಸೇವೆಗೆ ಸೇರ್ಪಡೆಯಾಗದಿದ್ದರೆ ಆ ಹುದ್ದೆಗಳನ್ನು ಹೊಸದಾಗಿ ಖಾಲಿ ಉಳಿದ ಹುದ್ದೆ ಎಂದು ಪರಿಗಣಿಸುವ ಮಹತ್ವದ ನಿರ್ಧಾರವನ್ನು ರಾಜ್ಯ ಸಚಿವ ಸಂಪುಟ ಸಭೆ ಮಹತ್ವದ ನಿರ್ಣಯ ತೆಗೆದುಕೊಂಡಿದೆ.

ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಈ ಸಂಬಂಧ ಕರ್ನಾಟಕ ಗೆಜೆಟೆಡ್ ಪ್ರೊಬೇಷನರುಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕ) ತಿದ್ದುಪಡಿ ನಿಯಮಗಳು –2022 ಅನ್ನು ಅನುಮೋದಿಸಿತು.

ಗೆಜೆಟೆಡ್ ಪ್ರೊಬೇಷನರಿ ಪರೀಕ್ಷೆ ಪ್ರಕ್ರಿಯೆ ಮುಗಿದ ಬಳಿಕ ಎ ಮತ್ತು ಬಿ ದರ್ಜೆ ಹುದ್ದೆಗಳಿಗೆ ಆಯ್ಕೆಯಾದ ಕೆಲವು ಅಭ್ಯರ್ಥಿಗಳು ಕೆಲವೊಂದು ಕಾರಣಕ್ಕೆ ತಾವು ಆಯ್ಕೆಯಾದ ಹುದ್ದೆಗೆ ವರದಿ ಮಾಡಿಕೊಳ್ಳುವುದಿಲ್ಲ. ಅಂತಹ ಸಂದರ್ಭದಲ್ಲಿ ಅದೇ ನೇಮಕಾತಿಯಲ್ಲಿ ಬೇರೆ ಹುದ್ದೆಗೆ ಆಯ್ಕೆಯಾದ ಅಥವಾ ಆಯ್ಕೆ ಪಟ್ಟಿಯಲ್ಲಿ ಸ್ಥಾನ ಪಡೆಯದೆ ಇರುವ ಇತರೆ ಅಭ್ಯರ್ಥಿಗಳು ವರದಿ ಮಾಡಿಕೊಳ್ಳದೇ ಇರುವ ಅಭ್ಯರ್ಥಿಗಳ ಹುದ್ದೆಗೆ ತಮ್ಮನ್ನು ಪರಿಗಣಿಸಬೇಕು ಎಂದು ನ್ಯಾಯಾಲಯಕ್ಕೆ ಮೊರೆ ಹೋಗುತ್ತಿದ್ದಾರೆ. ವರದಿ ಮಾಡಿಕೊಂಡಿರದೇ ಇರುವ ರಿಕ್ತಸ್ಥಾನಗಳಿಗೆ ಅಂತಹವರನ್ನು ಪರಿಗಣಿಸಿದರೆ, ಇಡೀ ಆಯ್ಕೆಪಟ್ಟಿಯೇ ಬದಲಾಗುತ್ತದೆ. ಈ ಕಾರಣಕ್ಕೆ ನಿಯಮಗಳಲ್ಲಿ ತಿದ್ದುಪಡಿ ಪ್ರಸ್ತಾಪಕ್ಕೆ ಸಂಪುಟ ಒಪ್ಪಿಗೆ ನೀಡಿತು ಎಂದು ಉನ್ನತ ಮೂಲಗಳು ತಿಳಿಸಿವೆ.

ಈ ತಿದ್ದುಪಡಿಗೆ ಸಂಬಂಧಿಸಿದಂತೆ 15 ದಿನಗಳ ಕಾಲಮಿತಿ ನಿಗದಿಪಡಿಸಿ ಆಕ್ಷೇಪಣೆ ಆಹ್ವಾನಿಸಲು ನಿರ್ಧರಿಸಲಾಗಿದೆ. ಅಷ್ಟರೊಳಗೆ ಯಾವುದೇ ಆಕ್ಷೇಪಣೆ ಸಲಹೆಗಳು ಸ್ವೀಕೃತವಾಗದೇ ಇದ್ದರೆ ಮತ್ತೆ ಸಚಿವ ಸಂಪುಟದ ಅನುಮೋದನೆಗೆ ಮಂಡಿಸದೇ ಅಂತಿಮವಾಗೀ ಪ್ರಕಟಿಸಲು ಸಂಪುಟ ತೀರ್ಮಾನಿಸಿತು.

**ನದಿ ಜೋಡಣೆಗೆ ಆಕ್ಷೇಪ:** ಮೇಕೆದಾಟು ಕುಡಿಯುವ ನೀರಿನ ಯೋಜನೆಗೆ ಅನುಮೋದನೆ ನೀಡುವವರೆಗೆ ಹಾಗೂ ಕಣಿವೆ ರಾಜ್ಯಗಳ ನ್ಯಾಯಸಮ್ಮತ ಪಾಲು ನಿರ್ಧಾರವಾಗುವವರೆಗೆ ನದಿ ಜೋಡಣೆ ಯೋಜನೆಯ ಸಮಗ್ರ ಯೋಜನಾ ವರದಿ (ಡಿಪಿಆರ್) ಅನುಮೋದಿಸದಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಸಚಿವ ಸಂಪುಟ ಸಭೆ ಅನುಮೋದಿಸಿದೆ. ರಾಜ್ಯದ ಈ ಹಕ್ಕೊತ್ತಾಯ ಈಡೇರುವವರೆಗೆ ಗೋದಾವರಿ–ಕೃಷ್ಣ–ಪೆನ್ನಾರ್–ಕಾವೇರಿ–ವೈಗೈ–ಗುಂಡಾರ್ ನದಿಗಳ ಜೋಡಣೆ ಯೋಜನೆ ಡಿಪಿಆರ್‌ಗೆ ಅನುಮೋದನೆ ನೀಡಬಾರದು ಎಂದು ಕೇಂದ್ರ ಸರ್ಕಾರವನ್ನುನ ಆಗ್ರಹಿಸುವ ನಿರ್ಣಯವನ್ನು ವಿಧಾನಮಂಡಲ ಉಭಯ ಸದನಗಳಲ್ಲಿ ಅಧಿಕೃತ ನಿರ್ಣಯ ಕೈಗೊಳ್ಳಲಾಗಿತ್ತು.

**ಸಂಪುಟದ ಇನ್ನಿತರ ತೀರ್ಮಾನಗಳು:**

- ಗಂಗಾವತಿ ತಾಲ್ಲೂಕಿನ ಚಿಕ್ಕಮಾದಿನಾಳ್ ಮತ್ತು ಇತರೆ 11 ಗ್ರಾಮಗಳಿಗೆ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗೆ ಸಂಬಂಧಿಸಿದ ರೂ.18.85 ಕೋಟಿ ಮೊತ್ತದ ಪ್ರಸ್ತಾವನೆಗೆ ಆಡಳಿತಾತ್ಮಕ ಒಪ್ಪಿಗೆ.
- ಪುತ್ತೂರು ತಾಲ್ಲೂಕು ಬನ್ನೂರಿನ ಆನೆಮಜಲು ಬಳಿ ಒಟ್ಟು ರೂ.26.90 ಕೋಟಿ ವೆಚ್ಚದಲ್ಲಿ 2ನೇ ಹಂತದ ನ್ಯಾಯಾಲಯ ಸಂಕೀರ್ಣ ನಿರ್ಮಾಣ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ.

- ಪ್ರಸಕ್ತ ಸಾಲಿನಲ್ಲಿ ಶ್ರವಣದೋಷ ಮುಕ್ತ ಕರ್ನಾಟಕ ಯೋಜನೆ ಅನುಷ್ಠಾನಕ್ಕೆ ಸಂಪುಟ ಒಪ್ಪಿಗೆ ನೀಡಿದೆ. ಈ ಯೋಜನೆಯಡಿ ಶ್ರವಣದೋಷ ಫಲಾನುಭವಿಗಳಿಗೆ ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರಚಿಕಿತ್ಸಾ ಸೇವೆ ಹಾಗೂ ಶ್ರವಣಯಂತ್ರ ಸಾಧನಗಳನ್ನು ಒದಗಿಸಲಾಗುವುದು.

ಆಧಾರ:ವಿಜಯ ಕರ್ನಾಟಕ, ದಿನಾಂಕ:31.05.2022.

## 29. ಮುಖ್ಯಮಂತ್ರಿ ಮಧ್ಯಪ್ರವೇಶ

ಪಠ್ಯಪುಸ್ತಕ ಪರಿಷ್ಕರಣೆ ವಿವಾದ ತಾರಕಕ್ಕೇರಿದ್ದು ಇದನ್ನು ಬಗೆಹರಿಸುವ ಸಂಬಂಧ ಸ್ವತ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೇ ಮಧ್ಯಪ್ರವೇಶ ಮಾಡಿದ್ದಾರೆ. ಈ ಬಗ್ಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳಲಿದ್ದೇವೆ ಎಂದು ಅವರು ಹೇಳಿದ್ದಾರೆ.

ಮಣಿಪಾಲದಲ್ಲಿ ಮಾತನಾಡಿದ ಮುಖ್ಯಮಂತ್ರಿ ಬೊಮ್ಮಾಯಿ ಪಠ್ಯ ಪರಿಷ್ಕರಣೆ ವಿವಾದಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರಲ್ಲಿ ಸಮಗ್ರ ವರದಿ ಕೇಳಿದ್ದು ವರದಿ ಮಂಡಿಸಲಿದ್ದಾರೆ. ಈ ಸಂಬಂಧ ವಿವಿಧ ಮಠಾಧೀಶರು, ಬೇರೆಯವರು ಅಭಿಪ್ರಾಯ ವ್ಯಕ್ತಪಡಿಸಿ ಪತ್ರ ಬರೆದಿದ್ದಾರೆ. ಪರಿಷ್ಕರಣೆಯಲ್ಲಿ ಆತಂಕಪಡುವ ವಿಷಯ ಏನೂ ಇಲ್ಲ ಎಂಬ ವಾದವನ್ನು ಕೆಲವರು ಮುಂದಿಟ್ಟಿದ್ದಾರೆ. ಈ ಎಲ್ಲಾ ಅಂಶಗಳನ್ನು ಪರಿಶೀಲಿಸಿ, ಶಿಕ್ಷಣ ಸಚಿವರ ವರದಿಯನ್ನು ಆಧರಿಸಿ ವಾಸ್ತವಾಂಶ ಏನಿದೆ ಎಂಬುದನ್ನು ತಿಳಿದು ಸ್ಪಷ್ಟ ನಿರ್ಧಾರ ತೆಗೆದುಕೊಳ್ಳಲಿದ್ದೇವೆ ಯಾರ್‍ಯಾರು ತಮ್ಮ ಪಠ್ಯ ಪುಸ್ತಕಗಳನ್ನು ವಾಪಸ್ ಪಡೆಯಲು ಪತ್ರ ಬರೆದಿದ್ದಾರೋ ಅವರೊಂದಿಗೂ ಮಾತುಕತೆ ನಡೆಸಲಾಗುವುದು ಎಂದರು.

**ಪಠ್ಯಪುಸ್ತಕಗಳ ಭವಿಷ್ಯವೇನು:** ಪಠ್ಯ ಪುಸ್ತಕ ಪರಿಷ್ಕರಣೆ ಕುರಿತಂತೆ ಆಗಿರುವ ವಿವಾದಗಳ ಹಿನ್ನೆಲೆಯಲ್ಲಿ ಲೇಖಕರು ಸಾಹಿತಿಗಳು ತಮ್ಮ ಕಥೆ–ಕವಿತೆ ಪಠ್ಯದಲ್ಲಿ ಅಳವಡಿಕೆಗೆ ನೀಡಿದ್ದ ಅನುಮತಿ ವಾಪಸ್ ಪಡೆಯುತ್ತಿದ್ದಾರೆ. ಈಗಾಗಲೇ ಮುದ್ರಣ ಕಾರ್ಯ ಮುಗಿದು ಪಠ್ಯಪುಸ್ತಕಗಳ ಪೂರೈಕೆಗೆ ಸಿದ್ಧತೆ ನಡೆಸಲಾಗಿದ್ದು ಮುಂದೇನು ಎಂಬುದು ಡೋಲಾಯಮಾನದಂತಾಗಿದೆ.

ಈ ಶೈಕ್ಷಣಿಕ ವರ್ಷಕ್ಕೆ ಇದೇ ಪಠ್ಯಪುಸ್ತಕಗಳೆ ಬೋಧನೆಗೆ ನೀಡಲಾಗುವುದು ಅದರಲ್ಲಿ ಪತ್ರ ಬರೆದಿರುವ ಸಾಹಿತಿ–ಲೇಖಕರ ಕಥೆ–ಕವನ ಕೈ ಬಿಡಲಾಗುತ್ತಾ ಇದರ ತಾಕಿಕ ಅಂತ್ಯ ಏನು ಎಂಬ ಬಗ್ಗೆ ವಿದ್ಯಾರ್ಥಿಗಳು ಹಾಗೂ ಪೋಷಕರಲ್ಲಿ ಪ್ರಶ್ನೆಗಳು ಮೂಡಿವೆ.

ಪಠ್ಯ ವಾಪಸ್ ಪಡೆಯಲು ತೀರ್ಮಾನಿಸಿರುವ ಲೇಖಕರು, ಸಾಹಿತಿಗಳ ಪ್ರಕಾರ ಸಾಮಾನ್ಯವಾಗಿ ಪಠ್ಯಪುಸ್ತಕಕ್ಕೆ ಕವಿತೆ, ಕತೆ ಸೇರಿಸಿಕೊಳ್ಳುವಾಗ ನಾವು ಒಪ್ಪಿಗೆ ನೀಡಿರುತ್ತೇವೆ. ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ಇರುವವರೆಗೆ ಲೇಖಕರು ನೀಡಿರುವ ಒಪ್ಪಿಗೆ ಪತ್ರ ಇರುತ್ತದೆ. ಪರಿಷ್ಕರಣೆ ಮಾಡಬೇಕು ಎನ್ನುವುದಾದರೆ ಮತ್ತೆ ಒಪ್ಪಿಗೆಯನ್ನು ಪಡೆಯಲೇ ಬೇಕಾಗುತ್ತದೆ. ಹೊಸ ಪುಸ್ತಕಗಳಲ್ಲಿ ಪಠ್ಯ ಸೇರಿಸುವ ವೇಳೆ ಈ ಹಿಂದೆ ಇದ್ದ ಸಮಿತಿ ಕೂಡ ಲೇಖಕರ ಒಪ್ಪಿಗೆ ಪಡೆದಿರುತ್ತದೆ. ಅದು ಮುಂದುವರಿಯಬೇಕು ಎಂದಾದರೆ ಒಪ್ಪಿ ತೆಗೆದುಕೊಳ್ಳಬೇಕಾಗುತ್ತದೆ ಎಂದು ಹೇಳುತ್ತಾರೆ.

ಕುವೆಂಪು, ಬೇಂದ್ರೆ ಸೇರಿದಂತೆ ಇನ್ನಿತರ ಲೇಖಕರ ಲೇಖನಗಳನ್ನು ಈ ಹಿಂದೆ ಒಪ್ಪಿಗೆ ಪಡೆದಿರುವ ಹಿನ್ನೆಲೆಯಲ್ಲಿ ಅದು ಮುಂದುವರಿಯುತ್ತದೆ. ಆದರೆ ಲೇಖಕರು ಇನ್ನೂ ಜೀವಂತವಾಗಿದ್ದರೆ ಆ ಲೇಖಕರ ಒಪ್ಪಿಗೆ ಪಡೆಯಬೇಕು. ಏಕೆಂದರೆ ಹೊಸ ಪಠ್ಯದಲ್ಲಿ ಕೆಲವು ಪಠ್ಯಗಳನ್ನು ಕೈ ಬಿಟ್ಟು ಮತ್ತೊಂದೂ ಹೊಸ ಪಠ್ಯ ಸೇರ್ಪಡೆ ಮಾಡಲಾಗುತ್ತದೆ. ಆ ಹಿನ್ನೆಲೆಯಲ್ಲಿ ಒಪ್ಪಿಗೆ ಬೇಕಾಗುತ್ತದೆ. ಏಕೆಂದರೆ ಕೃತಿ ಸ್ವಾಮದ ಹಕ್ಕು ಲೇಖಕರ ಬಳಿಯಿರುತ್ತದೆ. ಒಂದು ವೇಳೆ ಲೇಖಕರ ಒಪ್ಪಿಗೆ ಇಲ್ಲದೆ ಹೋದರೆ ಸೇರಿಸಿಕೊಳ್ಳುವುದಕ್ಕೆ ಬರುವುದಿಲ್ಲ. ನನ್ನ ಒಪ್ಪಿಗೆ ಕೊಟ್ಟಿಲ್ಲ ಎಂದು ಹೇಳಿದರೆ ಸೇರಿಸಿಕೊಳ್ಳುವುದಕ್ಕೆ ಬರುವುದಿಲ್ಲ. ಸೇರಿಸಿಕೊಂಡಿದ್ದರೆ ನಮ್ಮ ಒಪ್ಪಿಗೆ ಪಡೆಯದೇ ಸೇರಿಸಿಕೊಂಡಿದ್ದಿರಿ ಎಂದು ಕೇಸ್ ಮಾಡಬಹುದು ಎಂದು ಅಭಿಪ್ರಾಯ ಪಡುತ್ತಾರೆ.

**ಶಿಕ್ಷಣ ಸಚಿವರ ನಿವಾಸಕ್ಕೆ ಮುತ್ತಿಗೆ ಯತ್ನ**: ಪಠ್ಯಪುಸ್ತಕದಲ್ಲಾಗಿರುವ ಪರಿಷ್ಕರಣೆಯನ್ನು ಖಂಡಿಸಿ ಎನ್.ಎಸ್.ಯು.ಐ ಕಾರ್ಯಕರ್ತರು ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ನಿವಾಸಕ್ಕೆ ಮುತ್ತಿಗೆ ಹಾಕಿ, ಪ್ರತಿಭಟನೆ ನಡೆಸಿದ್ದಾರೆ. 20–30 ವಂದಿ ಸಚಿವರಿಗೆ ಧಿಕ್ಕಾರ ಕೂಗುತ್ತಾ ನಿವಾಸಕ್ಕೆ ಮುತ್ತಿಗೆ ಹಾಕಲು ಪ್ರಯತ್ನಿಸಿದ್ದಾರೆ. ಮನೆಯಲ್ಲಿ ಇದ್ದವರು ಫೋನ್ ಮಾಡಿ ಮಾಹಿತಿ ನೀಡಿದ ಬಳಿಕ ಪೊಲೀಸರು ಸ್ಥಳಕ್ಕೆ ಧಾವಿಸಿ ಬಂದಿದ್ದಾರೆ ಮತ್ತು 10–15 ಮಂದಿ ಪ್ರತಿಭಟನಾಕರರನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಗ್ರಾಮೀಣ ಪೊಲೀಸ್ ಠಾಣೆಗೆ ಪ್ರತಿಭಟನಾಕರರನ್ನು ಕರೆದುಕೊಂಡು ಹೋದಾಗ ವಶಕ್ಕೆ ಪಡೆದಿದ್ದ ಪ್ರತಿಭಟನಾಕಾರರಲ್ಲಿ ಕೆಲವರು ಪೊಲೀಸರ ಕೈಯಿಂದ ತಪ್ಪಿಸಿಕೊಂಡು ಓಡಿ ಹೋಗಿದ್ದಾರೆ. ಇದೇ ಸಂದರ್ಭದಲ್ಲಿ ಅಲ್ಲಿಗೆ ಜಮಾಯಿಸಿದ ಬಿಜೆಪಿ ಬೆಂಬಲಿಗರು ಅವರನ್ನು ಹಿಡಿದು ಥಳಿಸಿದ್ದಾರೆ ಎಂದು ಅರೋಪಿಸಲಾಗಿದೆ.

**ಪ್ರತಿಭಟನೆಗೆ ಮೊದಲು ತಪ್ಪನ್ನು ಸರಿಪಡಿಸಿ:** ಒಂಭತ್ತನೇ ತರಗತಿಯ ಸಮಾಜ ವಿಜ್ಞಾನ ಪಠ್ಯಕ್ರಮದಲ್ಲಿ ಬಸವಣ್ಣನವರ ಕುರಿತು ಇರುವ ಕೆಲವು ಕುಚೋದ್ಯದ ಅಂಶಗಳನ್ನು ತಕ್ಷಣವೇ ಕೈಬಿಡಬೇಕು ಎಂದು ಬಸವಕಲ್ಯಾಣ ಅನುಭವ ಮಂಟಪದ ಅಧ್ಯಕ್ಷ ಡಾ: ಬಸವಲಿಂಗ ಪಟ್ಟದೇವರು ಆಗ್ರಹಿಸಿದ್ದಾರೆ. ಬಹುಸಂಖ್ಯಾತ ಲಿಂಗಾಯತರು ಮತ್ತು ಲಿಂಗಾಯತ ಮಠಾಧಿಪತಿಗಳು ಬೃಹತ್ ಪ್ರಮಾಣದ ಪ್ರತಿಭಟನೆ ನಡೆಸುವ ಮೊದಲು ಈ ತಪ್ಪು ಸರಿಪಡಿಸಬೇಕು. ಇಲ್ಲವಾದರೆ ರಾಜ್ಯಾದ್ಯಂತ ಹೋರಾಟ ಮಾಡುವುದು ಅನಿವಾರ್ಯವಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಬಹುತ್ವ ಭಾರತ ಒಳಗೊಂಡ ದೇಶಪ್ರೇಮ ಪಠ್ಯ ಅಳವಡಿಕೆಯಲ್ಲಿ ಇಲ್ಲ. ಒಂದೂ ಸಂಘಟನೆಯ ಸಿದ್ಧಾಂತವನ್ನು ತುರುಕುವುದಕ್ಕೆ ಹೋಗುತ್ತಿರುವುದು ಚರಿತ್ರೆಯನ್ನು ತಿರುಚಿದ ರೀತಿಯಲ್ಲಿ ಪಾಠ ಮಾಡಲು ಹೊರಟಿರುವುದು ಅಪಾಯಕಾರಿ. ನಾವೂ ಹೇಳುವ ಚರಿತ್ರೆ ಶ್ರೇಷ್ಠ ಎಂದು ಪ್ರತಿಪಾದಿಸುವುದು ಸರಿಯಲ್ಲ.

ಪ್ರೊ.ಎಸ್. ಜಿ. ಸಿದ್ಧರಾಮಯ್ಯ, ಸಾಹಿತಿ.

ಶಿಕ್ಷಣ ಸಚಿವರ ವರದಿ ಸಿಗಲಿದೆ. ವಿವಿಧ ಮಠಾಧೀಶರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿ ಪತ್ರ ಬರೆದಿದ್ದಾರೆ. ಪಠ್ಯ ಪರಿಷ್ಕರಣೆಯಲ್ಲಿ ಆತಂಕಪಡುವ ವಿಷಯ ಏನೂ ಇಲ್ಲ ಎಂಬ ವಾದವೂ ಇದೆ. ಯಾರ್‍ಯಾರೂ ತಮ್ಮ ಪಠ್ಯ, ಪದ್ಯ ವಾಪಸ್ಸು ಪಡೆಯಲು ಪತ್ರ ಬರೆದಿದ್ದಾರೋ ಎಲ್ಲರ ಜೊತೆ ಮಾತುಕತೆ ನಡೆಸಲಿದ್ದೇನೆ.

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

**ವಾಪಸ್ ಪಡೆದಿರುವ ಲೇಖಕರ ಪಠ್ಯ ಯಾವ್ಯಾವು:**

- ದೇವನೂರು ಮಹಾದೇವ – 10ನೇ ತರಗತಿಯಲ್ಲಿ ಅಳವಡಿಕೆ ಮಾಡಲಾಗಿರುವ ಕಥನ.
- ಪ್ರೊ.ಎಸ್. ಜಿ. ಸಿದ್ಧರಾಮಯ್ಯ – 9ನೇ ತರಗತಿಗೆ ದ್ವೀತಿಯ ಭಾಷಾ ಪಠ್ಯದಲ್ಲಿ ಅಳವಡಿಕೆ ಮಾಡಿರುವ ಮನೆಗೆಲಸದ ಹೆಣ್ಣು ಮಗಳು ಎಂಬ ಶೀರ್ಷಿಕೆಯ ಕವಿತೆ.
- ಸರಜೂ ಕಾಟ್ಕಾರ್ –9ನೇ ತರಗತಿಯ ಕನ್ನಡ ತೃತೀಯ ಭಾಷೆ ಪುಸ್ತಕದಲ್ಲಿ ಅಳವಡಿಸಿರುವ "ಶಬ್ದಗಳು" ಎಂಬ ಕವಿತೆ.
- ಮೂಡ್ನಾಕೂಡು ಚಿನ್ನಸ್ವಾಮಿ – 5ನೇ ತರಗತಿಗೆ ಪಠ್ಯವಾಗಿರುವ "ನನ್ನ ಕವಿತೆ" ಎಂಬ ಕವಿತೆ.
- ಚಂದ್ರಶೇಖರ ತಾಳ್ಯ – 6ನೇ ತರಗತಿಯ ದ್ವಿತೀಯ ಭಾಷಾ ಪಠ್ಯದಲ್ಲಿರುವ "ಒಂದು ಸೋಜಿಗದ ಪದ್ಯ "ಕವಿತೆ.
- ರೂಪಾ ಹಾಸನ – 9ನೇ ತರಗತಿಯ ತೃತೀಯ ಭಾಷಾ ಕನ್ನಡ ಪಠ್ಯಪುಸ್ತಕ "ನುಡಿ ಕನ್ನಡ" ಪಠ್ಯದಲ್ಲಿ ಅಳವಡಿಕೆಯಾಗಿದ್ದ "ಅಮ್ಮನಾಗುವುದೆಂದರೆ" ಕವಿತೆ.

- ಈರಣ್ಣ ಎಂ.ಕಂಬಳಿ – 10ನೇ ತರಗತಿಯ ತೃತೀಯ ಭಾಷೆ ಕನ್ನಡದಲ್ಲಿರುವ ಲಲಿತ ಪ್ರಬಂಧ "ಹೀಗೊಂದು ಟಾಪ್ ಪ್ರಯಾಣ."
- ಬೊಳುವಾರು ಮಹಮ್ಮದ್ ಕುಂಞ – 5ನೇ ತರಗತಿಯ ಅಳವಡಿಕೆ ಮಾಡಿರುವ ಸುಳ್ಳು ಹೇಳಬಾರದು ಕತೆ.
- ಪಾರ್ವತೀಶ ಬಿಳಿದಾಳೆ – 8ನೇ ತರಗತಿಯಲ್ಲಿ ಅಳವಡಿಸಿರುವ ಬಿಳಿದಾಳೆಯ ಆನೆಗಳು.

**ಪಠ್ಯ ಸಮಿತಿ ವಿಸರ್ಜನೆ:** ಶಾಲಾ ಶಿಕ್ಷಣದಲ್ಲಿ ಪಠ್ಯಕ್ರಮ ಮತ್ತು ಪಠ್ಯ ಪುಸ್ತಕಗಳನ್ನು ಕಾಲಕ್ಕೆ ತಕ್ಕಂತೆ ಪರಿಷ್ಕರಿಸಲಾಗುತ್ತದೆ. ರಾಜ್ಯದಲ್ಲಿ ಹಲವು ಬಾರಿ ಪಠ್ಯಪುಸ್ತಕಗಳನ್ನು ಪರಿಷ್ಕರಣೆ ಮಾಡಲಾಗಿದೆ. ಈ ಹಿಂದೆ ಜಾರಿಯಲ್ಲಿದ್ದ ಕೆಲವು ಪಠ್ಯ ಪುಸ್ತಕಗಳಲ್ಲಿ ಹಲವು ಆಕ್ಷೇಪಾರ್ಹ ಅಂಶಗಳು ಇದ್ದ ಕಾರಣ ಸಮಾಜ ವಿಜ್ಞಾನ ಹಾಗೂ ಕನ್ನಡ ಭಾಷಾ ವಿಷಯಗಳಿಗೆ ಸಂಬಂಧಿಸಿದಂತೆ ಪಠ್ಯ ಪುಸ್ತಕಗಳ ಅಲ್ಪ ಪರಿಷ್ಕರಣೆಯನ್ನು ಮಾಡಲಾಗಿದೆ. ಶ್ರೀ ಪಂಡಿತಾರಾರಾಧ್ಯ ಸ್ವಾಮೀಜಿ ಹಾಗೂ ನಾಡಿನ ಇತರೆ ಸ್ವಾಮೀಜಿಗಳು ಪ್ರಸ್ತುತ ಪಠ್ಯ ಪುಸ್ತಕದಲ್ಲಿರುವ ಬಸವಣ್ಣನವರ ವಿಷಯಾಂಶಕ್ಕೆ ಸಂಬಂಧಿಸಿದಂತೆ ಹಲವು ಆಕ್ಷೇಪಣೆಗಳನ್ನು ಮಾಡಿರುತ್ತಾರೆ.

ಬಸವಣ್ಣನವರ ಇದೇ ವಿಷಯಾಂಶಕ್ಕೆ ಸಂಬಂಧಿಸಿದಂತೆ ಈ ಹಿಂದೆ ಜಾರಿಯಲ್ಲಿದ್ದ ಪ್ರೊ.ಬರಗೂರು ರಾಮಚಂದ್ರಪ್ಪ ಸಮಿತಿಯಿಂದ ರಚಿತವಾದ ಪಠ್ಯಪುಸ್ತಕ ಹಾಗೂ ಪ್ರಸ್ತುತ ಪರಿಷ್ಕರಿಸಿರುವ ಪಠ್ಯ ಪುಸ್ತಕದಲ್ಲಿರುವ ಬಸವಣ್ಣನವರ ವಿಷಯಾಂಶವನ್ನು ಯಾರ ಭಾವನೆಗಳಿಗೂ ಧಕ್ಕೆ ಆಗದಂತೆ ಪರಿಷ್ಕರಿಸಲಾಗುವುದು ಎಂದು ಸರ್ಕಾರ ಹೇಳಿದೆ.

ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದ ಸ್ವಾಮೀಜಿ ಹಾಗೂ ಇತರರ ಆಶಯದಂತೆ ರಾಷ್ಟ್ರಕವಿ ಕುವೆಂಪು ರಚಿಸಿದ ನಾಡಗೀತೆಯನ್ನು ವಿಕೃತಗೊಳಿಸಿದ ವ್ಯಕ್ತಿಗಳ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲು ಬೆಂಗಳೂರಿನ ಸೈಬರ್ ಕ್ರೈಂ ಪೊಲೀಸರಿಗೆ ತನಿಖೆ ನಡೆಸಲು ಸೂಚಿಸಲಾಗಿದೆ. ಪ್ರಸ್ತುತ ಆಕ್ಷೇಪ ಮಾಡಿರುವಂತೆ ಮಹಾನ್ ವ್ಯಕ್ತಿಗಳ ಯಾವುದೇ ಪಾಠವನ್ನು ಕೈಬಿಡಲಾಗಿಲ್ಲ ಎಂದು ಸ್ಪಷ್ಟೀಕರಣ ನೀಡಿದೆ.

ಆಧಾರ:ವಿಜಯ ವಾಣಿ, ದಿನಾಂಕ:02.06.2022.

## 30. ಕಿಸಾನ್ ಸಮ್ಮಾನ್ : 47.83 ಲಕ್ಷ ರೈತರ ಖಾತೆಗಳಿಗೆ ರೂ.956.71 ಕೋಟಿ ಪಾವತಿ

ಮುಖ್ಯಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ರಾಜ್ಯದ 47.83 ಲಕ್ಷ ರೈತರ ಖಾತೆಗಳಿಗೆ ತಲಾ ರೂ.2,000 ನಂತೆ ರೂ.956.71 ಕೋಟಿ ವರ್ಗಾವಣೆ ಮಾಡಲಾಗಿದೆ.

ಗೃಹ ಕಚೇರಿ ಕೃಷ್ಣಾದಲ್ಲಿ ಮುಖ್ಯಮಂತ್ರಿಯವರು ಕಿಸಾನ್ ಸಮ್ಮಾನ್ ಯೋಜನೆಯಡಿ 2022–23ನೇ ಸಾಲಿನ ಮೊದಲ ಕಂತಿನ ರೂ.2,000 ಸಾವಿರ ಅನುದಾನವನ್ನು ನೇರ ನಗದು ವರ್ಗಾವಣೆ ಮೂಲಕ ರೈತರ ಖಾತೆಗಳಿಗೆ ಜಮೆ ಮಾಡಿದರು.

ಮುಖ್ಯಮಂತ್ರಿ ಕಿಸಾನ್ ಸಮ್ಮಾನ್ ನಿಧಿಯಡಿ 2018–19 ರಿಂದ 2021–22ರವರೆಗೆ ಕೇಂದ್ರ ಸರ್ಕಾರದಿಂದ ಅನುಮೋದನೆಗೆ ಒಳಗಾದ ರೈತ ಕುಟುಂಬಗಳಿಗೆ ರಾಜ್ಯ ಸರ್ಕಾರ ಒಟ್ಟು ರೂ.3,864.66 ಕೋಟಿ ಪಾವತಿಸಿದೆ. 2021–22ನೇ ಸಾಲಿನಲ್ಲಿ 50.35 ಲಕ್ಷ ರೈತರಿಗೆ ರೂ.1975.12 ಕೋಟಿ ಆರ್ಥಿಕ ನೆರವು ನೀಡಲಾಗಿದೆ.

**ರಾಜ್ಯಕ್ಕೆ ಮೊದಲ ಸ್ಥಾನ:** ಈ ಯೋಜನೆಯಡಿ ಎಲ್ಲಾ ಪಾವತಿಗಳನ್ನು ಸಾಧ್ಯವಾದಷ್ಟು ಆಧಾರ್ ಆಧಾರಿತ ನೇರ ನಗದು ವರ್ಗಾವಣೆ ಮೂಲಕ ಮಾಡಲಾಗಿದೆ. ದೇಶದ ಎಲ್ಲಾ ರಾಜ್ಯಗಳ ಪೈಕಿ ಕರ್ನಾಟಕವು ಅತಿಹೆಚ್ಚು ಅಂದರೆ ಶೇ.96ರಷ್ಟು ಆಧಾರ್ ಆಧಾರಿತ ಪಾವತಿಗಳನ್ನು ಅತ್ಯುತ್ತಮವಾಗಿ ನಿರ್ವಹಿಸಿದ ಹೆಗ್ಗಳಿಕೆಗೆ ಪಾತ್ರವಾಗಿದ್ದು, 2020–21ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯದ ಕೃಷಿ ಇಲಾಖೆಗೆ ಪ್ರಶಸ್ತಿ ಲಭಿಸಿತ್ತು.

ಈ ಸಂದರ್ಭದಲ್ಲಿ ಕೃಷಿ ಸಚಿವ ಬಿ.ಸಿ. ಪಾಟೀಲ್, ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ಕೃಷಿ ಇಲಾಖೆ ಪ್ರಧಾನ ಕಾರ್ಯದರ್ಶಿ ಶಿವಯೋಗಿ ಕಳಸದ, ಆಯುಕ್ತ ಶರತ್, ನಿರ್ದೇಶಕಿ ನಂದಿನಿಕುಮಾರಿ, ಜಲಾನಯನ ಇಲಾಖೆ ಆಯುಕ್ತ ಡಾ: ವೆಂಕಟೇಶ್, ನಿರ್ದೇಶಕ ಶ್ರೀನಿವಾಸ ಇದ್ದರು.

| ಜಿಲ್ಲಾವಾರು ಮಾಹಿತಿ | | |
|---|---|---|
| ಜಿಲ್ಲೆ | ರೈತರ ಸಂಖ್ಯೆ | ಹಣ ಜಮೆ (ಕೋಟಿ ರೂ.) |
| ಬಾಗಲಕೋಟೆ | 1,82,124 | 36.42 |
| ಬೆಂಗಳೂರು ನಗರ | 33,044 | 6.61 |
| ಬೆಂಗಳೂರು ಗ್ರಾಮಾಂತರ | 69,985 | 14.00 |
| ಬೆಳಗಾವಿ | 4,96,524 | 99.30 |
| ಬಳ್ಳಾರಿ | 70,642 | 14.13 |
| ಬೀದರ್ | 1,55,478 | 31.10 |
| ವಿಜಯಪುರ | 2,38,205 | 47.64 |
| ಚಾಮರಾಜನಗರ | 1,00,328 | 20.07 |
| ಚಿಕ್ಕಮಗಳೂರು | 1,06,005 | 21.20 |
| ಚಿತ್ರದುರ್ಗ | 1,62,155 | 32.43 |
| ದಕ್ಷಿಣ ಕನ್ನಡ | 1,31,906 | 26.38 |
| ದಾವಣಗೆರೆ | 1,38,455 | 27.69 |
| ಧಾರವಾಡ | 1,14,231 | 22.85 |
| ಗದಗ | 1,22,392 | 24.48 |
| ಕಲಬುರಗಿ | 2,25,060 | 45.01 |
| ಹಾಸನ | 2,37,105 | 47.32 |
| ಹಾವೇರಿ | 1,68,962 | 33.79 |
| ಕೊಡಗು | 42,911 | 8.58 |
| ಕೋಲಾರ | 69,358 | 13.87 |
| ಕೊಪ್ಪಳ | 1,40,155 | 28.03 |
| ಮಂಡ್ಯ | 2,34,681 | 46.94 |
| ಮೈಸೂರು | 2,09,366 | 41.87 |
| ರಾಯಚೂರು | 1,91,888 | 38.38 |
| ಶಿವಮೊಗ್ಗ | 1,37,468 | 27.49 |
| ತುಮಕೂರು | 2,65,841 | 53.17 |
| ಉಡುಪಿ | 1,30,218 | 26.04 |
| ಉತ್ತರ ಕನ್ನಡ | 1,44,838 | 28.97 |

| | | |
|---|---|---|
| ಚಿಕ್ಕಬಳ್ಳಾಪುರ | 1,02,359 | 20.47 |
| ರಾಮನಗರ | 99,401 | 19.88 |
| ಯಾದಗಿರಿ | 1,04,102 | 20.82 |
| ವಿಜಯನಗರ | 1,18,520 | 23.70 |
| **ಒಟ್ಟು** | **47,83,562** | **956.71** |

ಆಧಾರ:ವಿಶ್ವವಾಣಿ, ದಿನಾಂಕ:03.06.2022

## 31. ಪಠ್ಯ ಸಮಿತಿ ವಿಸರ್ಜನೆ ಅಂತೂ ವಿವಾದಕ್ಕೆ ಕೊನೆ

ರಾಜ್ಯದಲ್ಲಿ ಭುಗಿಲೆದ್ದಿದ್ದ ಪಠ್ಯ ಪರಿಷ್ಕರಣೆ ವಿವಾದಕ್ಕೆ ಸರ್ಕಾರ ತೆರೆ ಎಳೆದಿದೆ. ಆರೋಪದ ಕೇಂದ್ರ ಬಿಂದುವಾಗಿದ್ದ ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯ ಪಠ್ಯ ಪರಿಷ್ಕರಣಾ ಸಮಿತಿ ವಿಸರ್ಜನೆಯಾಗಿದೆ ಎಂದು ಸರ್ಕಾರ ಸ್ಪಷ್ಟಪಡಿಸಿದೆ. ಅಲ್ಲದೆ, ಪಠ್ಯ ಪುಸ್ತಕಗಳಲ್ಲಿ ಆಕ್ಷೇಪಾರ್ಹ ಅಂಶಗಳಿದ್ದಲ್ಲಿ ಮರು ಪರಿಷ್ಕರಣೆಗೆ ಸರ್ಕಾರ ಮುಕ್ತ ಮನಸ್ಸು ಹೊಂದಿರುವ ಜೊತೆಗೆ ಬಸವಣ್ಣನವರ ವಿಷಯಾಂಶವನ್ನು ಯಾರ ಭಾವನೆಗೂ ಧಕ್ಕೆಯಾಗದಂತೆ ಪರಿಷ್ಕರಿಸಲು ನಿರ್ಧರಿಸಿರುವುದಾಗಿ ಹೇಳಿದೆ. ಪಠ್ಯಪುಸ್ತಕ ಪರಿಷ್ಕರಣೆ ವಿವಾದ ಹಾಗೂ ರೋಹಿತ್ ಚಕ್ರತೀರ್ಥ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ವರದಿ ತಯಾರಿಸಿ ಮುಖ್ಯಮಂತ್ರಿಯವರಿಗೆ ಸಲ್ಲಿಸಿದರು. ವರದಿ ಪರಿಶೀಲನೆ ಬಳಿಕ ಕೈಗೊಂಡಿರುವ ಕ್ರಮಗಳ ಕುರಿತು ಮುಖ್ಯಮಂತ್ರಿಯವರು ಎರಡು ಪುಟಗಳ ಪತ್ರಿಕಾ ಪ್ರಕಟಣೆ ಬಿಡುಗಡೆ ಮಾಡಿದ್ದಾರೆ.

ಶಾಲಾ ಶಿಕ್ಷಣದಲ್ಲಿ ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳನ್ನು ಕಾಲಕ್ಕೆ ತಕ್ಕಂತೆ ಪರಿಷ್ಕರಿಸಲಾಗುತ್ತದೆ. ರಾಜ್ಯದಲ್ಲಿ ಹಲವು ಬಾರಿ ಪಠ್ಯಪುಸ್ತಕಗಳನ್ನು ಪರಿಷ್ಕರಣೆ ಮಾಡಲಾಗಿದೆ. ಈ ಹಿಂದೆ ಜಾರಿಯಲ್ಲಿದ್ದ ಕೆಲವು ಪಠ್ಯಪುಸ್ತಕಗಳಲ್ಲಿ ಹಲವು ಆಕ್ಷೇಪಾರ್ಹ ಅಂಶಗಳು ಇದ್ದ ಕಾರಣ ಸಮಾಜ ವಿಜ್ಞಾನ ಹಾಗೂ ಕನ್ನಡ ಭಾಷಾ ವಿಷಯಗಳಿಗೆ ಸಂಬಂಧಿಸಿದಂತೆ ಪಠ್ಯ ಪುಸ್ತಕಗಳ ಅಲ್ಪ ಪರಿಷ್ಕರಣೆಯನ್ನು ಮಾಡಲಾಗಿದೆ. ಶ್ರೀ ಪಂಡಿತಾರಾಧ್ಯ ಸ್ವಾಮೀಜಿ ಹಾಗೂ ನಾಡಿನ ಇತರೆ ಸ್ವಾಮೀಜಿಗಳು ಪ್ರಸ್ತುತ ಪಠ್ಯಪುಸ್ತಕದಲ್ಲಿರುವ ಬಸವಣ್ಣನವರ ವಿಷಯಾಂಶಕ್ಕೆ ಸಂಬಂಧಿಸಿದಂತೆ ಕೆಲವು ಆಕ್ಷೇಪಣೆಗಳನ್ನು ಮಾಡಿರುತ್ತಾರೆ.

ಬಸವಣ್ಣನವರ ಇದೇ ವಿಷಯಾಂಶಕ್ಕೆ ಸಂಬಂಧಿಸಿದಂತೆ ಈ ಹಿಂದೆ ಜಾರಿಯಲ್ಲಿದ್ದ ಪ್ರೊ.ಬರಗೂರು ರಾಮಚಂದ್ರಪ್ಪ ಸಮಿತಿಯಿಂದ ರಚಿತವಾದ ಪಠ್ಯಪುಸ್ತಕ ಹಾಗೂ ಪ್ರಸ್ತುತ ಪರಿಷ್ಕರಿಸಿರುವ ಪಠ್ಯಪುಸ್ತಕದಲ್ಲಿ ಸಾಮಾನ್ಯವಾದ ಅಂಶಗಳಿವೆ. ಪ್ರಸ್ತುತ ಪಠ್ಯ ಪುಸ್ತಕದಲ್ಲಿರುವ ಬಸವಣ್ಣನವರ ವಿಷಯಾಂಶವನ್ನು ಯಾರ ಭಾವನೆಗೂ ಧಕ್ಕೆ ಆಗದಂತೆ ಪರಿಷ್ಕರಿಸಲಾಗುವುದು ಎಂದು ಸರ್ಕಾರ ಹೇಳಿದೆ.

ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ಇತರರ ಆಶಯದಂತೆ ರಾಷ್ಟ್ರಕವಿ ಕುವೆಂಪು ರಚಿಸಿದ ನಾಡಗೀತೆಯನ್ನು ವಿಕೃತಗೊಳಿಸಿದ ವ್ಯಕ್ತಿಗಳ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲು ಬೆಂಗಳೂರಿನ ಸೈಬರ್ ಕ್ರೈಂ ಪೊಲೀಸರಿಗೆ ತನಿಖೆ ನಡೆಸಲು ಸೂಚಿಸಲಾಗಿದೆ. ಪ್ರಸ್ತುತ ಆಕ್ಷೇಪ ಮಾಡಿರುವಂತೆ ಮಹಾನ್ ವ್ಯಕ್ತಿಗಳ ಯಾವುದೇ ಪಾಠವನ್ನು ಕೈಬಿಡಲಾಗಿಲ್ಲ ಎಂದು ಸ್ಪಷ್ಟೀಕರಣ ನೀಡಿದೆ.

**ಶೇ. 76 ಪುಸ್ತಕ ಮುದ್ರಣ**: ಪಠ್ಯ ಪುಸ್ತಕ ಸರಬರಾಜು ಆಗಿಲ್ಲ ಎಂಬ ಆರೋಪ ಸಂಬಂಧಿಸಿದಂತೆ ವರದಿಯಲ್ಲಿ ವಿವರಣೆ ನೀಡಲಾಗಿದೆ. 2021 ರ ಡಿಸೆಂಬರ್ 22ರಂದು ಟೆಂಡರ್ ಕರೆಯಲಾಗಿತ್ತು. 2022ರ ಫೆಬ್ರವರಿ 18 ಮತ್ತು ಮಾರ್ಚ್ 5 ರಂದು ಕಾರ್ಯಾದೇಶ ನೀಡಲಾಗಿತ್ತು. ಪ್ರಸ್ತುತ ಶೇ.76.87ರಷ್ಟು ಮುದ್ರಣಗೊಂಡು ಶೇ.63.01 ರಷ್ಟು ಶಾಲೆಗಳಿಗೆ ಸರಬರಾಜು ಆಗಿದೆ. ಪಾಶ್ಚಾತ್ಯ ಇತಿಹಾಸಕಾರರ ಮಾಹಿತಿ ಕೈಬಿಟ್ಟು **'ಭಾರತ ನಮ್ಮ ಹೆಮ್ಮೆ'** ಪಾಠ ಸೇರಿಸಲಾಗಿದೆ. 10ನೇ ತರಗತಿ

ಸಮಾಜ ವಿಜ್ಞಾನ ವಿಷಯದಲ್ಲಿ ಟಿಪ್ಪು ಹೈದರಾಲಿಯನ್ನು ವೈಭವೀಕರಣ ಮಾಡಲಾಗಿದ್ದನ್ನು ಸರಿಪಡಿಸಲಾಗಿದೆ ಎಂದು ವರದಿಯಲ್ಲಿದೆ. ,

**ಸರ್ಕಾರದ ಕ್ರಮಗಳು:**

- ಪ್ರಸ್ತುತ ಪಠ್ಯ ಪುಸ್ತಕ ಪರಿಷ್ಕರಣಾ ಸಮಿತಿಯ ಕಾರ್ಯ ಮುಗಿದಿರುವುದರಿಂದ ಸದರಿ ಸಮಿತಿಯ ವಿಸರ್ಜನೆ.
- ಪ್ರಸ್ತುತ ಪರಿಷ್ಕರಿಸಿರುವ ಪಠ್ಯ ಪುಸ್ತಕದಲ್ಲಿ ಯಾವುದಾದರೂ ಆಕ್ಷೇಪಾರ್ಹ ವಿಷಯಗಳಿದ್ದಲ್ಲಿ ಅವುಗಳನ್ನು ಮತ್ತೊಮ್ಮೆ ಪರಿಷ್ಕರಿಸಲು ಮುಕ್ತ ಮನಸ್ಸನ್ನು ಸರ್ಕಾರವು ಹೊಂದಿದೆ. ಈ ಹಿನ್ನೆಲೆಯಲ್ಲಿ ಬಸವಣ್ಣನವರ ವಿಷಯಾಂಶಕ್ಕೆ ಸಂಬಂಧಿಸಿದಂತೆ ಸೂಕ್ತವಾಗಿ ಪರಿಷ್ಕರಿಸಲು ನಿರ್ಧಾರ ಮಾಡಲಾಗಿದೆ.
- ನಾಡಗೀತೆಯನ್ನು ಆಕ್ಷೇಪಾರ್ಹವಾಗಿ ವಿಕೃತಿಗೊಳಿಸಿದ ಅಂಶವು ಪಠ್ಯಪುಸ್ತಕಗಳಲ್ಲಿ ಉಲ್ಲೇಖಗೊಳ್ಳದಿದ್ದರೂ, ಇದನ್ನು ಬರೆದ ವ್ಯಕ್ತಿಗಳ ಬಗ್ಗೆ ಕಾನೂನಾತ್ಮಕ ತನಿಖೆಯ ಕ್ರಮವನ್ನು ಸರ್ಕಾರವು ತೆಗೆದುಕೊಂಡಿದೆ.
- ಪ್ರೊ:ಬರಗೂರ ರಾಮಚಂದ್ರಪ್ಪ ಅಧ್ಯಕ್ಷತೆ ಸಮಿತಿ ರಚಿಸಿದ ಕನ್ನಡ ಭಾಷಾ ಪಠ್ಯ ಪುಸ್ತಕಗಳು ರಾಷ್ಟ್ರಕವಿ ಕುವೆಂಪು ಕುರಿತಾದ 7 ಗದ್ಯ/ಪದ್ಯಗಳಿಗೆ ಸೀಮಿತವಾಗಿದ್ದವು. ಆದರೆ, ಪ್ರಸ್ತುತ ಪರಿಷ್ಕರಣಾ ಸಮಿತಿಯು ಈ ಗದ್ಯ ಮತ್ತು ಪದ್ಯಗಳನ್ನು 10ಕ್ಕೇರಿಸಿದೆ.
- ಪ್ರಸ್ತುತ ಪರಿಷ್ಕರಿಸಿರುವ ಪಠ್ಯಪುಸ್ತಕದಲ್ಲಿ ನಾಡಪ್ರಭು ಕೆಂಪೇಗೌಡರ ಕುರಿತಾದ ಪಾಠವನ್ನು ಹೊಸದಾಗಿ ಸೇರ್ಪಡೆ ಮಾಡಿದೆ.
- ಈ ಹಿಂದಿನ ಪಠ್ಯ ಪುಸ್ತಕಗಳಲ್ಲಿ ಪರಿಚಯಿಸಲಾಗಿದ್ದ ಇಸ್ಲಾಂ ಮತ್ತು ಕ್ರೈಸ್ತ ಧರ್ಮದ ಜೊತೆ ಹಿಂದೂ ಧರ್ಮದ ವಿಷಯವನ್ನು ಸೇರ್ಪಡೆ ಮಾಡಿ ಪರಿಚಯಿಸಲಾಗಿದೆ.

ಆಧಾರ:ಉದಯವಾಣಿ, ದಿನಾಂಕ:04.06.2022

## 32. 2 ವರ್ಷದಲ್ಲಿ ನರಗೋತ್ಥಾನ ಯೋಜನೆ ಮುಗಿಸಿ

ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ–4 ಯೋಜನೆಯಡಿ ನಗರ ಸ್ಥಳೀಯ ಸಂಸ್ಥೆಗಳ ಮೂಲ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಮೂರು ವರ್ಷಗಳ ಬದಲಾಗಿ ಎರಡು ವರ್ಷಗಳಲ್ಲೇ ಪೂರ್ಣಗೊಳಿಸುವಂತೆ ಮುಖ್ಯಮಂತ್ರಿಯವರು ಸೂಚಿಸಿದ್ದಾರೆ.

ನಗರಾಭಿವೃದ್ಧಿ ಮತ್ತು ಪೌರಾಡಳಿತ ಇಲಾಖೆಯ ಪ್ರಗತಿ ಪರಿಶೀಲನೆ ನಡೆಸಿ, ಅಮೃತ ನಗರೋತ್ಥಾನ ಯೋಜನೆಯಡಿ ರಾಜ್ಯದ 291 ನಗರ ಸ್ಥಳಿಯ ಸಂಸ್ಥೆಗಳ.2,993 ಕೋಟಿ ಕ್ರಿಯಾ ಯೋಜನೆಗಳನ್ನು ಅನುಮೋದಿಸಲಾಗಿದ್ದೂ, ಟೆಂಡರ್ ಪ್ರಕ್ರಿಯೆ ಪ್ರಾರಂಭವಾಗಿದೆ. ಇದು ಸೇರಿ ಒಟ್ಟು ರೂ.3,885 ಕೋಟಿ ಅಂದಾಜು ವೆಚ್ಚದ ಈ ಯೋಜನೆಯನ್ನು 2024ರಲ್ಲೇ ಪೂರ್ಣಗೊಳಿಸಬೇಕು ಎಂದರು.

ಕೇಂದ್ರ ಪುರಸ್ಕೃತ ಅಮೃತ್ 2.0 ಯೋಜನೆಯಡಿ ಐದು ವರ್ಷಗಳಲ್ಲಿ ರಾಜ್ಯದ ಪಾಲೂ ಸೇರಿದಂತೆ ಒಟ್ಟು ರೂ.9,260 ಕೋಟಿ ವೆಚ್ಚದಲ್ಲಿ 287 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ನೀರು ಮತ್ತು ಒಳಚರಂಡಿ ವ್ಯವಸ್ಥೆ ರೂಪಿಸಲಾಗುತ್ತಿದೆ. ಈ ಯೋಜನೆಯಡಿ ತಾಂತ್ರಿಕವಾಗಿ ಕಾರ್ಯಸಾಧ್ಯವಾಗಿರುವ ನಗರ ಸ್ಥಳೀಯ ಸಂಸ್ಥೆಗಳನ್ನು ಮೊದಲ ಹಂತದಲ್ಲಿ ಆಯ್ಕೆ ಮಾಡಿ ಕಾಮಗಾರಿ ಪ್ರಾರಂಭಿಸಬೇಕು ಎಂದು ಹೇಳಿದರು.

ನಗರ ಪ್ರದೇಶದ ಬಡಜನರಿಗೆ ಉತ್ತಮ ಸೌಲಭ್ಯ ಒದಗಿಸಲು ಸೂಚಿಸಿದ ಮುಖ್ಯಮಂತ್ರಿಗಳು ನಗರ ಪ್ರದೇಶದ ಸರಳ ನಿಯಮಗಳೊಂದಿಗೆ ವಸತಿ ಯೋಜನೆ ರೂಪಿಸಲು ಅಧಿಕಾರಿಗಳಿಗೆ ನಿರ್ದೇಶನ

ನೀಡಿದರು. ರಾಜ್ಯದ ಎಲ್ಲಾ ವಿಭಾಗಗಳಲ್ಲಿ ಎಲ್ಲಾ ಮೂಲ ಸೌಕರ್ಯ ಒಳಗೊಂಡ ಇಂಟಿಗ್ರೇಟೆಡ್ ಟೌನ್‌ಶಿಫ್‌ಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಿಸುವ ಯೋಜನೆ ಅನುಷ್ಠಾನಕ್ಕೆ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ. ಎಲ್ಲಾ ವಿಭಾಗಗಳಿಂದ ಸ್ವೀಕರಿಸಲಾದ ಪ್ರಸ್ತಾವನೆಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಈ ಯೋಜನೆಗೆ ಕೂಡಲೇ ಸಲಹೆಗಾರರನ್ನು ನೇಮಕ ಮಾಡಿಕೊಳ್ಳಬೇಕು. ಈ ಯೋಜನೆಗೆ ಸಂಬಂಧಪಟ್ಟ ಎಲ್ಲಾ ಇಲಾಖೆಗಳ ಅಭಿಪ್ರಾಯ ಪಡೆದು ಟೌನ್‌ಷಿಪ್‌ನ ರೂಪುರೇಷೆ ಸಿದ್ಧಪಡಿಸುವಂತೆ ಸಲಹೆ ಮಾಡಿದರು.

ಸಭೆಯಲ್ಲಿ ನಗರಾಭಿವೃದ್ಧಿ ಸಚಿವ ಬಿ.ಎ. ಬಸವರಾಜ (ಭೈರತಿ ಬಸವರಾಜ) ಪೌರಾಡಳಿತ ಸಚಿವ ಎಂ.ಟಿ.ಬಿ. ನಾಗರಾಜ, ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ಆರ್ಥಿಕ ಅಭಿವೃದ್ಧಿ ಆಯುಕ್ತ ಐ.ಎಸ್.ಎನ್. ಪ್ರಸಾದ್, ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್, ನಗರಾಭಿವೃದ್ಧಿ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್, ಕಾರ್ಯದರ್ಶಿ ಅಜಯ್ ನಾಗಭೂಷಣ್, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಆಯುಕ್ತ ಕೆ.ಪಿ. ಮೋಹನ್ ರಾಜ್ ಪೌರಾಡಳಿತ ಇಲಾಖೆ ನಿರ್ದೇಶಕಿ ಎಂ.ಎಸ್. ಅರ್ಚನಾ ಮತ್ತಿತರರಿದ್ದರು.

**ಅನುದಾನ ಎಷ್ಟು:** ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆಯಡಿ 117 ಪಟ್ಟಣ ಪಂಚಾಯಿತಿಗಳು ತಲಾ ರೂ. 5 ಕೋಟಿ, 124 ಪುರಸಭೆಗಳು ತಲಾ ರೂ.10 ಕೋಟಿ, 38 ನಗರ ಸಭೆಗಳು ತಲಾ ರೂ.30 ಕೋಟಿ, 23 ಜಿಲ್ಲಾ ಕೇಂದ್ರದ ನಗರಸಭೆಗಳು ಮತ್ತು 1ನೇ ದರ್ಜೆ ನಗರ ಸಭೆಗಳು ತಲಾ ರೂ.40 ಕೋಟಿ ಪಡೆಯಲಿವೆ. ಈ ಹಣದಲ್ಲಿ 2022–23 ರಿಂದ 2023–24ನೇ ಸಾಲಿನಲ್ಲಿ ಹಣಕಾಸು ವರ್ಷದವರೆಗೆ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಮತ್ತು ಕಟ್ಟಡ ನಿರ್ಮಾಣ ಹಾಗೂ ಇತರ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆ.

ಆಧಾರ:ವಿಶ್ವವಾಣಿ, ದಿನಾಂಕ:04.06.2022

## 33. ಹೊಸ ಪಠ್ಯ ಸಮಿತಿ ಇಲ್ಲ

ಪಠ್ಯಪುಸ್ತಕ ಪರಿಷ್ಕರಣೆಗಾಗಿ ಮತ್ತೆ ಹೊಸ ಸಮಿತಿ ರಚನೆ ಮಾಡುವುದಿಲ್ಲ ಎಂದು ಮುಖ್ಯಮಂತ್ರಿಯವರು ಸ್ಪಷ್ಟಪಡಿಸಿದ್ದಾರೆ. ಈಗಾಗಲೇ ಪಠ್ಯ ಪುಸ್ತಕ ಪರಿಷ್ಕರಣಾ ಸಮಿತಿ ಕಾರ್ಯ ಪೂರ್ಣಗೊಂಡಿರುವುದರಿಂದ ಸಮಿತಿಯನ್ನು ವಿಸರ್ಜಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಹಿರಿಯೂರು ತಾಲ್ಲೂಕಿನ ದೇವರಕೊಟ್ಟದಲ್ಲಿ ಮಾತನಾಡಿದ ಅವರು ಬಸವಣ್ಣನವರ ಕುರಿತ ಪಠ್ಯದಲ್ಲಿ ಒಂದು ಸಾಲು ಮಾತ್ರ ವ್ಯತ್ಯಾಸವಾಗಿದೆ. ಉಳಿದಂತೆ ಬರಗೂರು ರಾಮಚಂದ್ರಪ್ಪ ಸಮಿತಿ ರಚಿಸಿದ್ದ ಪಠ್ಯವೇ ಇದೆ. ಈ ವ್ಯತ್ಯಾಸ ಸರಿಪಡಿಸಲಾಗುವುದು ಎಂದರು.

**ನಿಜ ಪಠ್ಯ ಸೇರ್ಪಡೆ:** ನಮ್ಮದು ಬಸವ ಪಥದ ಸರ್ಕಾರ ಬಸವಣ್ಣನವರ ವಚನ ಸಾಹಿತ್ಯಲೋಕ ಉತ್ಕೃಷ್ಟವಾದದ್ದು. ನಾಡಿನ ಮಠಾಧೀಶರು, ಸ್ವಾಮೀಜಿಗಳ ಅಭಿಪ್ರಾಯ ಪಡೆದು ಬಸವಣ್ಣನವರ ನಿಜ ಇತಿಹಾಸವನ್ನು ಪಠ್ಯದಲ್ಲಿ ಸೇರಿಸಲಾಗುವುದು. 2015ರಲ್ಲಿ ಪ್ರೊ ಬರಗೂರು ರಾಮಚಂದ್ರಪ್ಪ ಪರಿಷ್ಕರಣಾ ಸಮಿತಿ ಹಾಗೂ ಈಗಿನ ಸಮಿತಿ ರಚಿಸಿರುವ ಬಸವಣ್ಣ ಪಠ್ಯದಲ್ಲಿ ಒಂದು ವಾಕ್ಯದ ವ್ಯತ್ಯಾಸವಿದೆ. ಸಾಣೇಹಳ್ಳಿ ಶ್ರೀಗಳು ಹೇಳಿದ ಲಿಂಗದೀಕ್ಷೆ ವಿಚಾರ ಎರಡು ಪಠ್ಯದಲ್ಲೂ ಸೇರಿಸಲಾಗಿದೆ ಎಂದು ಹೇಳಿದರು.

ಈ ಬಗ್ಗೆ ಸಾಣೇಹಳ್ಳಿಯ ಪಂಡಿತಾರಾಧ್ಯ ಶ್ರೀಗಳೊಂದಿಗೆ ಮಾತನಾಡಲಾಗುವುದು ಬಸವಣ್ಣ ಪಠ್ಯದಲ್ಲಿ ಸಮಗ್ರ ಬದಲಾವಣೆ ತರಲಾಗುವುದು. ಆರ್.ಎಸ್.ಎಸ್. ಸಂಸ್ಥಾಪಕ ಡಾ: ಕೇಶವ ಬಲಿರಾಮ್ ಹೆಡ್ಗೆವಾರ್ ಕುರಿತು ಪಠ್ಯದಲ್ಲಿ ವಿಷಯ ಇರುವುದರಲ್ಲಿ ಯಾವುದೇ ತಪ್ಪಿಲ್ಲ. ಮಕ್ಕಳ ಶೈಕ್ಷಣಿಕ ಚಟುವಟಿಕೆಗಳಿಗೆ ತೊಂದರೆ ಆಗದಂತೆ ಪರಿಷ್ಕೃತ ಪಠ್ಯದ ಸಂಪುಟ ವಿತರಿಸಲಾಗುವುದು. ಪಠ್ಯ ಪುಸ್ತಕದಲ್ಲಿ ಏನಾದರೂ ಸಮಸ್ಯಗಳು ಕಂಡರೆ ಅವುಗಳನ್ನು ಸರಿಪಡಿಸಲಾಗುತ್ತದೆ ಎಂದರು.

**ಆತುರದ ನಿರ್ಧಾರ ಕೈಗೊಂಡಿಲ್ಲ**: ಜೊತೆಗೆ ಪಠ್ಯಪುಸ್ತಕ ಪರಿಷ್ಕರಣೆ ಬಗ್ಗೆ ಯಾವುದೇ ಒತ್ತಡ ಆತುರದ ನಿರ್ಧಾರ ಕೈಗೊಂಡಿಲ್ಲ. ಸಮಿತಿಯ ಅವಧಿ ಮುಗಿದ ಕಾರಣ ವಿಸರ್ಜಿಸಲಾಗಿದೆಯೇ ಹೊರತು ರದ್ದುಗೊಳಿಸಿಲ್ಲ, ಹೊಸ ಸಮಿತಿ ರಚನೆಯ ಅವಶ್ಯಕತೆ ಇಲ್ಲ. ಪಠ್ಯ ಪುಸ್ತಕದಲ್ಲಿ ಕೆಲವು ಗೊಂದಲಗಳಾಗಿವೆ ಎಂದು ಹಲವು ಅಭಿಪ್ರಾಯ ಕೇಳಿ ಬಂದ ಹಿನ್ನಲೆಯಲ್ಲಿ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರನ್ನು ಕರೆಸಿ ಖುದ್ದು ಪುಸ್ತಕಗಳನ್ನು ಪರಿಶೀಲಿಸಿದ್ದೇನೆ. ತಪ್ಪು ಎನ್ನಿಸುವ ಅಂಶಗಳನ್ನು ಸರಿಪಡಿಸಲಾಗುವುದು. ಕೆಲವೊಂದು ವಿಚಾರದಲ್ಲಿ ವಿನಾಕಾರಣ ಆರೋಪ ಮಾಡಲಾಗಿದೆ. ಎಲ್ಲರ ಅಭಿಪ್ರಾಯ ಪಡೆದು ಮಕ್ಕಳಿಗೆ ಉತ್ತಮ ಪಠ್ಯ ಭಾಗವನ್ನು ನೀಡಲಾಗುವುದು ಎಂದರು.

ಆಧಾರ:ಉದಯವಾಣಿ, ದಿನಾಂಕ:05.06.2022.

## 34. ಕಾಪಸೆ, ಆಳ್ವಗೆ ಪುಸ್ತಕ ಪ್ರಾಧಿಕಾರ ಪ್ರಶಸ್ತಿ

ಕನ್ನಡ ಪುಸ್ತಕ ಪ್ರಾಧಿಕಾರವು 2021ನೇ ಸಾಲಿನ ವಿವಿಧ ವಾರ್ಷಿಕ ಪ್ರಶಸ್ತಿಗಳನ್ನು ಪ್ರಕಟಿಸಿದೆ. ರೂ.75 ಸಾವಿರ ನಗದು ಬಹುಮನ ಹೊಂದಿರುವ ಡಾ:ಎಂ.ಎಂ. ಕಲಬುರ್ಗಿ ಮಾನವಿಕ ಅಧ್ಯಯನ ಪ್ರಶಸ್ತಿಗೆ ಧಾರವಾಡದ ಸಾಹಿತಿ ಗುರುಲಿಂಗ ಕಾಪಸೆ ಆಯ್ಕೆಯಾಗಿದ್ದಾರೆ.

ಪ್ರಾಧಿಕಾರದ ಅಧ್ಯಕ್ಷ ಡಾ:ಎಂ.ಎನ್ ನಂದೀಶ್ ಹಂಚೆ ಅವರ ನೇತೃತ್ವದಲ್ಲಿ ಈ ಆಯ್ಕೆಗಳು ನಡೆದಿವೆ.

ಅತ್ಯುತ್ತಮ ಪ್ರಕಾಶನ ಪ್ರಶಸ್ತಿಗೆ ಬೆಂಗಳೂರಿನ ರಾಷ್ಟ್ರೋತ್ಥಾನ ಸಾಹಿತ್ಯ ಭಾಜನವಾಗಿದೆ. ಈ ಪ್ರಶಸ್ತಿಯು ರೂ. 1 ಲಕ್ಷ ನಗದು ಹಾಗೂ ಪ್ರಶಸ್ತಿ ಫಲಕ ಒಳಗೊಂಡಿದೆ. ಡಾ: ಜಿ.ಪಿ. ರಾಜರತ್ನಂ ಸಾಹಿತ್ಯ ಪರಿಚಾರಕ ಪ್ರಶಸ್ತಿಗೆ ಮೂಡುಬಿದಿರೆಯ ಡಾ:ಎಂ.ಮೋಹನ್ ಆಳ್ವ ಅವರನ್ನು ಆಯ್ಕೆ ಮಾಡಲಾಗಿದೆ.

ಡಾ: ಅನುಪಮಾ ನಿರಂಜನ ವೈದ್ಯಕೀಯ ಹಾಗೂ ವಿಜ್ಞಾನ ಸಾಹಿತ್ಯ ಪ್ರಶಸ್ತಿಗೆ, ಬೆಂಗಳೂರಿನ ಡಾ:ನಾ ಸೋಮೇಶ್ವರ ಅವರು ಭಾಜನರಾಗಿದ್ದಾರೆ. ಈ ಪ್ರಶಸ್ತಿಗಳು ಕ್ರಮವಾಗಿ ರೂ.50 ಸಾವಿರ ಹಾಗೂ ರೂ.25 ಸಾವಿರ ನಗದು, ಪ್ರಶಸ್ತಿ ಫಲಕ ಒಳಗೊಂಡಿವೆ.

2021ನೇ ಸಾಲಿನ ಕನ್ನಡ ಪುಸ್ತಕ ಸೊಗಸು ಹಾಗೂ ಮುದ್ರಣ ಸೊಗಸು ಬಹುಮಾನವನ್ನೂ ಪ್ರಕಟಿಸಲಾಗಿದೆ.

| **ಪುಸ್ತಕ ಸೊಗಸು ಹಾಗೂ ಮುದ್ರಣ ಸೊಗಸು ಬಹುಮಾನದ ವಿಜೇತರು** | | | | |
|---|---|---|---|---|
| **ಬಹುಮಾನ** | **ನಗದು ಮೊತ್ತ (ರೂ.ಗಳಲ್ಲಿ)** | **ಕೃತಿ** | **ಲೇಖಕರು** | **ಪ್ರಕಾಶನ ಸಂಸ್ಥೆ** |
| ಮೊದಲನೇ ಬಹುಮಾನ | 25 ಸಾವಿರ | ನಮ್ಮ ದೇಹದ ವಿಜ್ಞಾನ | ಡಾ:ಟಿ.ಆರ್. ಅನಂತರಾಮು<br>ಡಾ:ನಾ.ಸೋಮೇಶ್ವರ | ನವ ಕರ್ನಾಟಕ |
| ಎರಡನೇ ಬಹುಮಾನ | 20 ಸಾವಿರ | ಅಜ್ಜಿ ಮನೆ ಸವಿ | ಉದ್ಯಾವರ ವಿಜಯಲಕ್ಷ್ಮಿ ಶೆಣೈ | ವಿಶೇಷ ಪಬ್ಲಿಕೇಷನ್ |
| ಮೂರನೇ ಬಹುಮಾನ | 10 ಸಾವಿರ | ಮಹಾತ್ಮರ ಚರಿತಾಮೃತ | ಪ್ರಭು ಚನ್ನಬಸವ ಸ್ವಾಮೀಜಿ | ಗುರುಚನ್ನಬಸವೇಶ್ವರ ಗ್ರಂಥಮಾಲೆ |
| ಮಕ್ಕಳ ಪುಸ್ತಕ ಸೊಗಸು ಬಹುಮಾನ | 8 ಸಾವಿರ | ನೋಟ್‌ಬುಕ್–ಮಕ್ಕಳ ಕಥೆಗಳು | ಡಾ:ಕೆ. ಶಿವಲಿಂಗಪ್ಪ ಹಂದಿಹಾಳು | ಕವನ ಪ್ರಕಶಾನ |

| | | | | |
|---|---|---|---|---|
| ಮುಖಪುಟ ಚಿತ್ರ ವಿನ್ಯಾಸ ಬಹುಮಾನ | 10 ಸಾವಿರ | ಅಲ್ಪಸಂಖ್ಯಾತರು ಮತ್ತು ಜಾತಿ ವ್ಯವಸ್ಥೆ | ಡಾ: ಮುಜಾಫರ್ ಅಸ್ಸಾದಿ | ಜಿ. ಅರುಣ್ ಕುಮಾರ್ (ಬಹುಮಾನಿಕ ಕಲಾವಿದ) |
| ಮುಖಪುಟ ಚಿತ್ರಕಲಡಯ ಬಹುಮಾನ | 8 ಸಾವಿರ | ರೂಬಿಕ್ಸಸಕ್ಯೂಬ್ ಮತ್ತಿತರ ನಾಟಕಗಳು ಕ್ಲೀನ್ ಅ್ಯಂಡ್ ಕ್ಲಿಯರ್ ಪಾಯಖಾನೆ ಮತ್ತು ಆಯಾಮ | ಬೇಲೂರು ರಘುನಂದನ್ | ಮಂಜುನಾಥ ಬಿ.ಎಂ. (ಬಹುಮಾನಿತ ಕಲಾವಿದ) |
| ಪುಸ್ತಕ ಮುದ್ರಣ ಸೋಗಸು ಬಹುಮಾನ | 5 ಸಾವಿರ | ಸಿರಿಬೆಳಕು | ಶಿ.ರಾ. ಹೂಗಾರ | ಗದಗದ ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್ |

ಆಧಾರ:ಪ್ರಜಾವಾಣಿ, ದಿನಾಂಕ:05.06.2022

## 35. ಗಾಲಿ ಮೇಲೆ ಆಸ್ಪತ್ರೆ, ಪ್ರಯೋಗಾಲಯ

ಗಾಲಿಗಳ ಮೇಲೆ ಆಸ್ಪತ್ರೆ, ಸಂಚಾರಿ ಆರೋಗ್ಯ ಸೌಲಭ್ಯವನ್ನು ರಾಜ್ಯದ ಎಲ್ಲ ಜಿಲ್ಲೆಗಳಿಗೂ ವಿಸ್ತರಿಸುವ ಚಿಂತನೆಯಿದೆ ಎಂದು ಮುಖ್ಯಮಂತ್ರಿಯವರು ಹೇಳಿದರು. ವಿಧಾನಸೌಧ ಮಹಾಮಟ್ಟಿಲು ಬಳಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರೋಟರಿ ಹೈಗ್ರೌಂಡ್ಸ್ ಇನ್ಫೋಸಿಸ್ ಫೌಂಡೇಷನ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದೊಂದಿಗೆ ಸಿಎಸ್‌ಆರ್ ಯೋಜನೆಯಡಿ ಒದಗಿಸಿರುವ ನಾಲ್ಕು ಸಂಚಾರಿ ಕ್ಲಿನಿಕ್–ಗಾಲಿ ಮೇಲೆ ನಿರ್ಮಿಸಿದ ಪ್ರಯೋಗಾಲಯಗಳನ್ನು ಲೋಕಾರ್ಪಣೆ ಮಾಡಿ ಮಾತನಾಡಿದರು.

ಈ ಬಾರಿಯ ಆಯವ್ಯಯದಲ್ಲಿ ಗಾಲಿಗಳ ಮೇಲೆ ಆಸ್ಪತ್ರೆಗೆ ಅನುದಾನ ಮೀಸಲಿರಿಸಿದೆ. ಬಸ್‌ನಲ್ಲಿ ಪ್ರಯೋಗಾಲಯ ಹಾಗೂ ಆರೋಗ್ಯ ಸೇವಾ ಸೌಲಭ್ಯಗಳನ್ನು ಪ್ರಯೋಗಿಕವಾಗಿ ನಾಲ್ಕು ಜಿಲ್ಲೆಗಳಲ್ಲಿ ಅನುಷ್ಠಾನಕ್ಕೆ ತಂದಿದ್ದು, ಯಶಸ್ವಿಯಾದರೆ ಎಲ್ಲ ಜಿಲ್ಲೆಗಳಿಗೆ ವಿಸ್ತರಿಸುವ ಉದ್ದೇಶವಿದೆ ಎಂದರು.

ಗ್ರಾಮೀಣ ಪ್ರದೇಶಗಳಲ್ಲಿ ಸಂಚಾರಿ ಕ್ಲಿನಿಕ್ ಉಪಯೋಗವನ್ನು ಮನಗಂಡು ಮೈಸೂರು ಹುಬ್ಬಳ್ಳಿ–ಧಾರವಾಡ, ಮಂಗಳೂರು ಮಹಾನಗರ ಪಾಲಿಕೆಗಳಿಗೆ ಇವುಗಳನ್ನು ಆರೋಗ್ಯ ಇಲಾಖೆ ಹಸ್ತಾಂತರ ಮಾಡುತ್ತಿದೆ ಎಂದು ತಿಳಿಸಿದರು. ರಾಜ್ಯದಲ್ಲಿ ಶಿಕ್ಷಣ, ಆರೋಗ್ಯ ಮತ್ತು ಪರಿಸರ ಸಂರಕ್ಷಣೆಯಲ್ಲಿ ದೊಡ್ಡ ಪಾತ್ರವನ್ನು ಇನ್ಫೋಸಿಸ್ ಪ್ರತಿಷ್ಠಾನ ವಹಿಸಿದೆ. ಜಯದೇವ ಸಂಸ್ಥೆಯಲ್ಲಿ 500 ಹಾಸಿಗೆಗಳ ಸಾಮರ್ಥ್ಯವುಳ್ಳ ಆಸ್ಪತ್ರೆಯನ್ನು ಒದಗಿಸಿದ್ದಾರೆ. ಕಿದ್ವಾಯಿ ನಿಮ್ಹಾನ್ಸ್ ಸಂಸ್ಥೆಗಳಿಗೆ ಧರ್ಮ ಛತ್ರ ನಿರ್ಮಿಸಿ ರೋಗಿಗಳು ಹಾಗೂ ಅವರ ಸಂಬಂಧಿಕರಿಗೆ ಅನುಕೂಲ ಕಲ್ಪಿಸಿದ್ದಾರೆಂದು ಶ್ಲಾಘಿಸಿದರು.

**ಸಂಚಾರಿ ಕ್ಲಿನಕ್ ವಿಶೇಷತೆ:** ಕ್ಲಿನಿಕ್, ಟೆಲಿಮೆಡಿಸಿನ್, ಫಾರ್ಮಸಿ, ವ್ಯಾಕ್ಸಿನ್ ಇತರ ಔಷಧಿಗಳನ್ನು ಕೊಂಡೊಯ್ಯಲು ರೆಫ್ರಿಜರೇಟರ್, ತುರ್ತು ಚಿಕಿತ್ಸೆಗೆ ಆಮ್ಲಜನಕ ನೀಡಿ ಕನಿಷ್ಠ ಶಸ್ತ್ರ ಚಿಕಿತ್ಸಾ ವಿಧಾನಗಳನ್ನು ಅನುಸರಿಸಲು ಎರಡು ಪ್ರತ್ಯೇಕ ಹಾಸಿಗೆಯುಳ್ಳ ಕೋಣೆಗಳು, ಏಳು ಕೆವಿ ಜನರೇಟರ್ ಮತ್ತು ಯುಪಿಎಸ್. ಇನ್ಫೋಸಿಸ್ ಪ್ರತಿಷ್ಠಾನವು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ (ಸಿಎಸ್‌ಆರ್) ಯೋಜನೆಯಡಿ ನಾಲ್ಕು ಕೋಟಿ ರೂಪಾಯಿ ನೀಡಿದೆ. ನಾಲ್ಕು ಸಂಚಾರಿ ಕ್ಲಿನಿಕ್ – ಗಾಲಿಗಳ ಮೇಲೆ ಅತ್ಯಾಧುನಿಕ ಪ್ರಯೋಗಾಲಯಗಳ ನಿರ್ಮಾಣದ ವೆಚ್ಚ ಭರಿಸಲಾಗಿದೆ.

**ಏನೆಲ್ಲ ಸೌಲಭ್ಯ ಲಭ್ಯ:** ಕ್ಯಾನ್ಸರ್, ರಕ್ತದೊತ್ತಡ, ಮಧುಮೇಹ, ಕರೋನಾ, ಕ್ಷಯ, ಮಲೇರಿಯಾ, ಡೆಂಘೆ ಮತ್ತಿತರ ಸಾಂಕ್ರಾಮಿಕ ರೋಗಗಳ ಪತ್ತೆ ಹಿರಿಯರ ಆರೈಕೆ ಮತ್ತು ಉಪಶಮನ ಚಿಕಿತ್ಸೆ ಸೌಲಭ್ಯ

ಲಭ್ಯವಿದ್ದು, ಒಂದೇ ಸೂರಿನಡಿ ಹಲವು ವೈದ್ಯಕೀಯ ಪರಿಹಾರಗಳನ್ನು ಹಳ್ಳಿಗೆ ಮನೆ ಬಾಗಿಲಿಗೆ ತಲುಪಿಸಲಿದೆ.

ಆರೋಗ್ಯ ಸೇವೆಗಳು ತಲುಪದೆ ಇರುವವರಿಗೆ ಸಂಚಾರಿ ಕ್ಲಿನಿಕ್ಸ್‌ಗಳ ಸೇವೆಯನ್ನು ತಲುಪಿಸಲು ರೋಟರಿ ಮತ್ತು ಇನ್ಫೋಸಿಸ್ ಸಂಸ್ಥೆಗಳ ಕೈ ಜೋಡಿಸಿವೆ. ಎರಡು ಸಂಸ್ಥೆಗಳು ಒದಗಿಸಿದ ಆತ್ಯಾಧುನಿಕ ಸಂಚಾರಿ ಕ್ಲಿನಿಕ್‌ಗಳ ಸೌಲಭ್ಯವನ್ನು ಸರ್ಕಾರ ಸದ್ಬಳಕೆ ಮಾಡಿಕೊಳ್ಳಲಿದೆ ಎಂದು ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿಯವರು ತಿಳಿಸಿದರು.

**ಪುನೀತ್, ಸಂಚಾರಿ ವಿಜಯ್ ನೆನಪಲ್ಲಿ**: ಅತ್ಯಾಧುನಿಕ ಪರಿಕರ, ಸುಸಜ್ಜಿತ ಸೌಲಭ್ಯವುಳ್ಳ ನಾಲ್ಕು ಸಂಚಾರಿ ಚಿಕಿತ್ಸೆ – ಗಾಲಿ ಮೇಲೆ ನಿರ್ಮಿಸಿದ ಪ್ರಯೋಗಾಲಯಗಳು ಗ್ರಾಮೀಣ ಜನರ ಸೇವೆಗೆ ಸನ್ನದ್ಧವಾಗಿದೆ. ಅಕಾಲಿಕವಾಗಿ ಅಗಲಿದ ನಟರಾದ ಪುನೀತ್ ರಾಜ್‌ಕುಮಾರ್ ಹಾಗೂ ಸಂಚಾರಿ ವಿಜಯ್ ನೆನಪಲ್ಲಿ ರೋಟರಿ ಸಂಸ್ಥೆ ಅರ್ಪಿಸಿದೆ.

ಆಧಾರ:ವಿಶ್ವವಾಣಿ, ದಿನಾಂಕ:07.06.2022

## 36. ಪಿಯು ಪಠ್ಯ ಪರಿಷ್ಕರಣೆ ಇಲ್ಲ

ಶಾಲಾ ಪಠ್ಯಪುಸ್ತಕ ಪರಿಷ್ಕರಣೆ ವಿವಾದ ತೀವ್ರಗೊಳ್ಳುತ್ತಿದ್ದಂತೆ ಎಚ್ಚೆತ್ತುಕೊಂಡಿರುವ ರಾಜ್ಯ ಸರ್ಕಾರ ರೋಹಿತ್ ಚಕ್ರತೀರ್ಥ ನೇತೃತ್ವದ ಪಠ್ಯ ಪುಸ್ತಕ ಪರಿಷ್ಕರಣಾ ಸಮಿತಿಗೆ ಪಿಯು ತರಗತಿಯ ಪಠ್ಯವನ್ನು ಪರಿಷ್ಕರಿಸುವ ಹೊಣೆಯನ್ನು ನೀಡುವ ನಿರ್ಧಾರದಿಂದ ಹಿಂದಕ್ಕೆ ಸರಿದಿದೆ.

ಈ ಬಗ್ಗೆ ಸುದ್ದಿಗಾರರ ಜೊತೆ ಮಾತನಾಡಿದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್, ಪಿ.ಯು. ತರಗತಿಯ ಒಂದೇ ಒಂದು ಪಾಠ ಪರಿಷ್ಕರಿಸಬೇಕು ಎಂಬ ಮನವಿ ಬಂದಿತ್ತು. ಒಂದು ಪಠ್ಯಕ್ಕಾಗಿ ಸಮಿತಿ ರಚಿಸುವುದು ಬೇಡವೆಂದು ಈ ಸಮಿತಿಗೆ ವಹಿಸಿದ್ದೆವು. ಈಗ ಸಮಿತಿಯೆ ವಿಸರ್ಜನೆ ಆಗಿದೆ. ಪಿಯು. ಪಠ್ಯದಲ್ಲಿ ಸದ್ಯ ಯಾವ ಪರಿಷ್ಕರಣೆ ಇಲ್ಲ. ಈಗಿರುವ ಪಠ್ಯವೇ ಮುಂದುವರಿಯಲಿದೆ ಎಂದರು.

ದ್ವಿತೀಯ ಪಿಯುಸಿ ಇತಿಹಾಸ ವಿಷಯದ ಪಠ್ಯದಲ್ಲಿ ಅಧ್ಯಾಯ 4.2ರ 'ಹೊಸ ಧರ್ಮಗಳ ಉದಯ' ಪಠ್ಯ ಭಾಗವನ್ನು ಪರಿಷ್ಕರಿಸಲು ಸರ್ಕಾರ ಮುಂದಾಗಿತ್ತು. ಪಠ್ಯ ಪರಿಷ್ಕರಣೆಯ ಹೊಣೆಯನ್ನು ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿಗೆ ವಹಿಸಲಾಗಿತ್ತು. ಈ ಸಮಿತಿ ಪಠ್ಯವನ್ನು ಪರಿಷ್ಕರಿಸಿ ವರದಿಯನ್ನೂ ಸಿದ್ಧಪಡಿಸಿತ್ತು.

ಚಕ್ರತೀರ್ಥ ನೇತೃತ್ವದ ಸಮಿತಿ ಪರಿಷ್ಕರಿಸಿದ ಶಾಲಾ ಪಠ್ಯ ಪುಸ್ತಕಗಳ ಬಗ್ಗೆ ವಿವಿಧ ವಲಯಗಳಿಂದ ತೀವ್ರ ಆಕ್ಷೇಪ, ವಿರೋಧ ವ್ಯಕ್ತವಾಗುತ್ತಿದ್ದಂತೆ ಈ ಸಮಿತಿಯನ್ನು ವಿಸರ್ಜಿಸಿರುವುದಾಗಿ ಮುಖ್ಯಮಂತ್ರಿಯವರು ಪ್ರಕಟಿಸಿದ್ದರು. ಸಮಿತಿಯನ್ನು ವಿಸರ್ಜಿಸಿರುವುದರಿಂದ ಪಿಯುಸಿ ಪಠ್ಯಪುಸ್ತಕ ಪರಿಷ್ಕರಿಸಿದ ವರದಿ ಪಡೆಯುವುದಿಲ್ಲ ಎಂದು ಸಚಿವ ನಾಗೇಶ್ ಸ್ಪಷ್ಟಪಡಿಸಿದರು.

2021ರ ಫೆಬ್ರವರಿ 17 ರಂದು ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಟಿಪ್ಪಣಿ ಕಳುಹಿಸಿದ್ದ ಬಿ.ಸಿ. ನಾಗೇಶ್ ಅವರು ದ್ವಿತೀಯ ಪಿ.ಯು.ಸಿ ಪಠ್ಯ ಪುಸ್ತಕ ಪರಿಷ್ಕರಣೆ ಜವಾಬ್ದಾರಿಯನ್ನು ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿಗೆ ನೀಡುವಂತೆ ನಿರ್ದೇಶನ ನೀಡಿದ್ದರು. ಸಚಿವರ ನಿರ್ದೇಶನವನ್ನು ಪರಿಗಣಿಸುವಂತೆ ಪದವಿಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರಿಗೆ ಪ್ರಧಾನ ಕಾರ್ಯದರ್ಶಿ ಪತ್ರ ಬರೆದಿದ್ದರು.

ವೈದಿಕ ಧರ್ಮ, ಬ್ರಾಹ್ಮಣ ಸಮುದಾಯದ ಭಾವನೆಗಳಿಗೆ ಧಕ್ಕೆ ತರುವ ಅಂಶಗಳಿವೆ ಎಂಬ ಕಾರಣಕ್ಕೆ ದ್ವಿತೀಯ ಪಿಯುಸಿಯಲ್ಲಿ ಇತಿಹಾಸ ಪಠ್ಯದಲ್ಲಿ ಅಧ್ಯಾಯ 4.2ರ 'ಹೊಸ ಧರ್ಮಗಳ ಉದಯ' ಪಠ್ಯಕ್ಕೆ ಅಖಿಲ ಭಾರತ ಬ್ರಾಹ್ಮಣ ಸಮಾಜ ಆಕ್ಷೇಪ ವ್ಯಕ್ತಪಡಿಸಿತ್ತು. ಪಠ್ಯದಲ್ಲಿರುವ ಈ ಆಕ್ಷೇಪಾರ್ಹ

ಅಂಶಗಳನ್ನು ತೆಗೆದುಹಾಕುವುದಾಗಿ ನಿಕಟಪೂರ್ವ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಕೂಡ ಹೇಳಿದ್ದರು.

**ಜನಾಭಿಪ್ರಾಯ ಆಧರಿಸಿ ಮರು ಪರಿಷ್ಕರಣೆ**: ಸಾರ್ವಜನಿಕ ಅಭಿಪ್ರಾಯ ಆಧರಿಸಿ ಪರಿಷ್ಕೃತ ಪಠ್ಯವನ್ನು ಮರು ಪರಿಷ್ಕರಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಈ ಉದ್ದೇಶದಿಂದ ಈ ಹಿಂದಿನ ಎಲ್ಲ ಮೂರೂ ಸಮಿತಿಗಳು ಪರಿಷ್ಕರಿಸಿದ ಪಠ್ಯಗಳ ಕರಡನ್ನು ಎಲ್ಲರಿಗೂ ಲಭ್ಯವಾಗುವಂತೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಿದೆ.

ಮುಖ್ಯಮಂತ್ರಿಯವರನ್ನು ಭೇಟಿ ಮಾಡಿದ ಬಳಿಕ ಈ ವಿಷಯ ತಿಳಿಸಿದ ಬಿ.ಸಿ. ನಾಗೇಶ್ ಈ ಹಿಂದಿನ ಮೂರು ಸಮಿತಿಗಳು ಪರಿಷ್ಕರಿಸಿದ್ದ ಪಠ್ಯ ಪುಸ್ತಕಗಳನ್ನು ಶೀಘ್ರದಲ್ಲಿ ಜನರ ಮುಂದಿಡುತ್ತೇವೆ. ಯಾರು ಯಾವುದನ್ನು ಸೇರಿಸಿದರು, ಯಾವುದನ್ನು ಕೈಬಿಟ್ಟಿದ್ದರು ಎನ್ನುವುದನ್ನು ಅವರೇ ತೀರ್ಮಾನಿಸಲಿ, ತಪ್ಪುಗಳು ಅಥವಾ ಆಕ್ಷೇಪಗಳಿದ್ದರೆ ಅದನ್ನು ಕರ್ನಾಟಕ ಪಠ್ಯಪುಸ್ತಕ ಸೊಸೈಟಿಗೆ ಸಲ್ಲಿಸಲಾಗುವುದು ಎಂದರು.

ರೋಹಿತ್ ಚಕ್ರತೀರ್ಥ ಸಮಿತಿ ಪರಿಷ್ಕರಿಸಿದ ಪಠ್ಯಪುಸ್ತಕಗಳು ಆನ್‌ಲೈನ್‌ನಲ್ಲಿ ಈಗಾಗಲೇ ಲಭ್ಯವಿದೆ. ಉಳಿದ ಸಮಿತಿಗಳು (ಮುಡಂಬಡಿತ್ತಾಯ ಮತ್ತು ಬರಗೂರು ರಾಮಚಂದ್ರಪ್ಪ) ಪರಿಷ್ಕರಿಸಿದ ಪಠ್ಯ ಪುಸ್ತಕಗಳನ್ನು 10 ದಿನಗಳಲ್ಲಿ ಅಪ್‌ಲೋಡ್ ಮಾಡಲಾಗುತ್ತದೆ ಎಂದರು.

**ಕಾಂಗ್ರೆಸ್‌ನಿಂದ ನಾಳೆ ಧರಣಿ** : ಪಠ್ಯ ಪರಿಷ್ಕರಣೆ ನೆಪದಲ್ಲಿ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರ ಸಾಂಸ್ಕೃತಿಕ ಅತ್ಯಾಚಾರ ನಡೆಸುತ್ತಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಟೀಕಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಸರ್ಕಾರದ ಈ ನಡೆಯ ವಿರುದ್ಧ ಧ್ವನಿ ಎತ್ತಿರುವ ಮಠಾಧೀಶರು, ಸಾಹಿತಿಗಳು ಚಿಂತಕರು ಹಾಗೂ ವಿವಿಧ ಸಂಘಟನೆಗಳನ್ನು ಬೆಂಬಲಿಸಿ ವಿಧಾನಸೌಧ ಆವರಣದಲ್ಲಿರುವ ಗಾಂಧಿ ಪ್ರತಿಮೆಯ ಮುಂಭಾಗದಲ್ಲಿ ಪಕ್ಷದ ಶಾಸಕರು ಧರಣಿ ನಡೆಸಲಿದ್ದಾರೆ ಎಂದರು.

ಪಠ್ಯ ಪುಸ್ತಕದಲ್ಲಿ ಕುವೆಂಪು ಸೇರಿದಂತೆ ಅನೇಕ ಮಹನೀಯರ ವಿಚಾರಗಳನ್ನು ತಿರುಚಲಾಗಿದೆ. ರಾಜ್ಯದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ರಾಜಕೀಯ ನಾಯಕರನ್ನು ಹೊರತುಪಡಿಸಿ ಎಲ್ಲ ಮಠಗಳ ಪೀಠಾಧ್ಯಕ್ಷರು, ಸಾಹಿತಿಗಳು, ಸಂಘಟನೆಗಳು ಒಟ್ಟಾಗಿ ಪಠ್ಯ ಪರಿಷ್ಕರಣೆಯಲ್ಲಿ ಸರ್ಕಾರದ ಮನಸ್ಥಿತಿ ಹಾಗೂ ಧೋರಣೆಯನ್ನು ತೀವ್ರವಾಗಿ ಖಂಡಿಸುತ್ತಿದ್ದಾರೆ. ಪರಿಷ್ಕೃತ ಪಠ್ಯ ಪುಸ್ತಕಗಳನ್ನು ಕಸದ ಬುಟ್ಟಿಗೆ ಎಸೆಯಬೇಕು ಎಂದರು.

ಕಾಂಗ್ರೆಸ್ ರಾಜಕೀಯ ಮಾಡುತ್ತಿದೆ ಎಂಬ ಸಚಿವ ನಾಗೇಶ್ ಆರೋಪ ಕುರಿತಂತೆ ಬಸವಣ್ಣ, ಅಂಬೇಡ್ಕರ್, ಕುವೆಂಪು ವಿಚಾರಗಳು ರಾಜಕೀಯ ಮಾಡುವ ವಿಚಾರಗಳೆ ಸಿದ್ಧಗಂಗಾ ಶ್ರೀ ನಿರ್ಮಲಾನಂದ ಸ್ವಾಮೀಜಿ, ಮುರುಘಾ ಶರಣರು ರಾಜಕಾರಣಿಗಳೇ ಎಂದು ಪ್ರಶ್ನಿಸಿದರು.

ಬರಗೂರು ರಾಮಚಂದ್ರಪ್ಪ ಅವರ ಸಮಿತಿ ಅನೇಕ ವಿಚಾರಗಳನ್ನು ಕೈಬಿಟ್ಟಿತ್ತು ಎಂಬ ಬಿಜೆಪಿ ಆರೋಪದ ಬಗ್ಗೆ ಅವರು ಯಾವುದಾದರೂ ವಿಚಾರ ಕೈಬಿಟ್ಟಿದ್ದರೆ ಸೇರಿಸಲಿ. ಆದರೆ, ಕುವೆಂಪು ಸೇರಿದಂತೆ ಹಲವು ಮಹನೀಯರ ವಿಚಾರವನ್ನು ಕೈ ಬಿಟ್ಟು, ತಿರುಚಿ ಅವರಿಗೆ ಅಪಮಾನ ಮಾಡುತ್ತಿರುವುದೇಕೆ ಎಂದು ಪ್ರಶ್ನಿಸಿದರು.

**ಸಿದ್ಧಗಂಗಾ, ಆದಿಚುಂಚನಗಿರಿ ಸ್ವಾಮೀಜಿ ಮಾಹಿತಿಗೂ ಕತ್ತರಿ:** ರೋಹಿತ್ ಚಕ್ರತೀರ್ಥ ನೇತೃತ್ವದ ಪಠ್ಯ ಪುಸ್ತಕ ಪರಿಷ್ಕರಣಾ ಸಮಿತಿಯು 6ನೇ ತರಗತಿಯ ಸಮಾಜವಿಜ್ಞಾನ ಭಾಗ–2ರಲ್ಲಿದ್ದ ಸಿದ್ಧಗಂಗೆಯ ಶಿವಕುಮಾರ ಸ್ವಾಮೀಜಿ, ಆದಿಚುಂಜನಗಿರಿಯ ಬಾಲಗಂಗಾಧರನಾಥ ಸ್ವಾಮೀಜಿಯವರನ್ನು ಕುರಿತ ವಿವರಗಳನ್ನು ಮರು ಪರಿಷ್ಕರಣೆ ಮಾಡುವಾಗ ಒಂದೇ ವಾಕ್ಯಕ್ಕೆ ಸೀಮಿತಗೊಳಿಸಿದೆ.

ಬರಗೂರು ರಾಮಚಂದ್ರಪ್ಪ ನೇತೃತ್ವದ ಸಮಿತಿಯು ಪಠ್ಯಪುಸ್ತಕ ಪರಿಷ್ಕರಣೆ ಮಾಡಿದಾಗ ಸಿದ್ಧಗಂಗಾ ಮಠವು ಶ್ರೀ ಶಿವಕುಮಾರಸ್ವಾಮಿಗಳ ನೇತೃತ್ವದಲ್ಲಿ ಸಾವಿರಾರು ಬಡ ವಿದ್ಯಾರ್ಥಿಗಳಿಗೆ ಅಕ್ಷರ

ಮತ್ತು ಅನ್ನದಾಸೋಹದ ಕಾರ್ಯ ನಡೆಸುತ್ತಿದೆ. ರಾಮನಗರ ಜಿಲ್ಲೆಯಲ್ಲಿ ನೆಲೆಸಿದ್ದ ಶ್ರೀ ಬಾಲ ಗಂಗಾಧರನಾಥ ಸ್ವಾಮೀಜಿಯವರ ನೇತೃತ್ವದಲ್ಲಿ ಬೆಳೆದ ಆದಿ ಚುಂಚನಗಿರಿ ಮಠದ ಶೈಕ್ಷಣಿಕ ಸೇವೆಯು ಅಪೂರ್ವವಾಗಿದ್ದು, ಮೂಲ ಶಿಕ್ಷಣ, ವೃತ್ತಿ ಶಿಕ್ಷಣ ಕಾಲೇಜುಗಳನ್ನು ನಡೆಸುತ್ತಿದೆ. ಚಿತ್ರದುರ್ಗದ ಮುರುಘರಾಜೇಂದ್ರ ಮಠ ಮತ್ತು ಸಿರಿಗೆರೆ ತರಳಬಾಳು ಮಠಗಳ ಶೈಕ್ಷಣಿಕ ಸೇವೆಯೂ ಗಮನಾರ್ಹ ಎಂಬ ಭಾಗವನ್ನು ಅಳವಡಿಸಿತ್ತು.

ಆದರೆ, ಚಕ್ರತೀರ್ಥ ಸಮಿತಿಯು ಈ ಭಾಗಕ್ಕೆ ಕತ್ತರಿ ಪ್ರಯೋಗಿಸಿದೆ. ಸಿದ್ಧಗಂಗಾ ಮಠ ಹಾಗೂ ಆದಿ ಚುಂಚನಗಿರಿ ಮಠ, ಮುರುಘ ರಾಜೇಂದ್ರ ಮಠ ಹಾಗೂ ಸಿರಿಗೆರೆ ತರಳಬಾಳು ಮಠಗಳ ಶೈಕ್ಷಣಿಕ ಸೇವೆಯೂ ಗಮನಾರ್ಹ ಎಂಬ ಒಂದು ವಾಕ್ಯವನ್ನು ಮಾತ್ರ ಉಳಿಸಿಕೊಂಡಿದೆ. ಸಿದ್ಧಗಂಗಾ ಮಠ ಹಾಗೂ ಆದಿಚುಂಚನಗಿರಿ ಮಠಗಳ ಕುರಿತು ವಿವರಗಳನ್ನು ಪಾಠದಿಂದ ಕೈ ಬಿಡುವ ಮೂಲಕ ಸಮಿತಿಯು ಅನ್ಯಾಯ ಮಾಡಿದೆ ಎಂಬ ಅರೋಪ ಕೇಳಿಬಂದಿದೆ.

ಆಧಾರ:ಪ್ರಜಾವಾಣಿ, ದಿನಾಂಕ:08.06.2022

## 37. ಜಾಗತಿಕ ಭೂಪಟ : ಕರ್ನಾಟಕಕ್ಕೆ 5ನೇ ಸ್ಥಾನ

ವಿಶ್ವದ ಭೂಪಟದಲ್ಲಿ ಬೆಂಗಳೂರು ತನ್ನದೇ ಆದ ಸ್ಥಾನವನ್ನು ಪಡೆದಿದ್ದು, ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಐದನೇ ಸ್ಥಾನ ಪಡೆದಿದೆ. ನಿಜಕ್ಕೂ ಇದು ಹೆಮ್ಮೆಯ ವಿಷಯ ಎಂದು ರಾಷ್ಟ್ರಪತಿ ರಾಮನಾಥ ಕೋವಿಂದ್ ಹೇಳಿದರು.

ರಾಷ್ಟ್ರೀಯ ಮಿಲಿಟರಿ ಶಾಲೆಯ ಅಮೃತ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಕಲೆ, ಸಾಹಿತ್ಯ, ವಿಜ್ಞಾನ ಮತ್ತು ತಂತ್ರಜ್ಞಾನ ವಿಚಾರದಲ್ಲಿ ಕರ್ನಾಟಕ ರಾಜ್ಯ ಮುಂದಿದೆ. ಈ ನೆಲದ ಸಾಹಿತ್ಯ ಕಲೆ ಸಂಸ್ಕೃತಿ ಶಿಖರದ ತುದಿಯಲ್ಲಿದೆ. ಅಲ್ಲದೇ ಈ ಭಾಗ ಭಾರತೀಯ ಸೇನೆಗೆ ವಿಶೇಷ ಕೊಡುಗೆ ನೀಡಿದೆ. ಫೀಲ್ಡ್ ಮಾರ್ಷಲ್ ಕೆ. ಎಂ. ಕಾರಿಯಪ್ಪ ಅವರನ್ನು ದೇಶ ಯಾವಾಗಲೂ ಸ್ಮರಿಸುತ್ತದೆ ಎಂದರು.

ವಿದ್ಯಾರ್ಥಿಗಳು ಪಠ್ಯದ ಜೊತೆ ದೇಶದ ಸಂರಕ್ಷಣೆಯ ಬಗ್ಗೆಯೂ ಗಮನ ಹರಿಸಬೇಕಾದ ಅನಿವಾರ್ಯತೆ ಹಿಂದೆಂದಿಗಿಂತಲೂ ಇಂದು ಹೆಚ್ಚು ಅಗತ್ಯವೆನಿಸಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ತಮ್ಮ ಭವಿಷ್ಯವನ್ನು ಉಜ್ವಲಗೊಳಿಸಿಕೊಳ್ಳುವತ್ತ ಗಟ್ಟಿ ಹೆಜ್ಜೆ ಊರಬೇಕು ಎಂದು ಕಿವಿಮಾತು ಹೇಳಿದರು.

ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಮುಖ್ಯಮಂತ್ರಿಯವರು ಸೇರಿದಂತೆ ಅನೇಕ ಗಣ್ಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಆಧಾರ:ಪ್ರಜಾವಾಣಿ, ದಿನಾಂಕ:14.06.2022

## 38. ಲೋಕಾಯುಕ್ತಕ್ಕೆ ಹೊಸ ಸಾರಥಿ

ನ್ಯಾಯಮೂರ್ತಿ ವಿಶ್ವನಾಥ್ ಶೆಟ್ಟಿ ನಿವೃತ್ತಿ ನಂತರ ಕಳೆದ ನಾಲ್ಕುವರೆ ತಿಂಗಳಿನಿಂದ ಖಾಲಿ ಉಳಿದಿದ್ದ ಲೋಕಾಯುಕ್ತ ಹುದ್ದೆಗೆ ಕೊನೆಗೂ ಹೊಸ ಸಾರಥಿ ಬಂದಿದ್ದಾರೆ. ಉಪ ಲೋಕಾಯುಕ್ತರಾಗಿ ಕಾರ್ಯನಿರ್ವಹಿಸುತ್ತಿದ್ದ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಭೀಮನಗೌಡ ಸಂಗನಗೌಡ ಪಾಟೀಲ್ (ಬಿ.ಎಸ್. ಪಾಟೀಲ್) ಅವರನ್ನೇ ಲೋಕಾಯುಕ್ತರಾಗಿ ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿದೆ. ಬಿ.ಎಸ್. ಪಾಟೀಲ್ 9ನೇ ಲೋಕಾಯುಕ್ತರಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಭಷ್ಟಾ್ರ ಅಧಿಕಾರಿಗಳಿಗೆ ಸಿಂಹಸ್ವಪ್ನವಾಗಿ ಕಾಡಿ, ಘಟಾನುಘಟಿ ರಾಜಕಾರಣಿಗಳನ್ನೇ ಜೈಲಿಗೆ ಕಳುಹಿಸಿದ್ದ ಲೋಕಾಯುಕ್ತ, ಎಸಿಬಿ ಸ್ಥಾಪನೆಯಾದ ನಂತರ ಖದರ್ ಕಳೆದುಕೊಂಡಿದೆ. ಆದರೆ, ಹೊಸದಾಗಿ ಸಾರಥ್ಯ ವಹಿಸುತ್ತಿರುವ ನ್ಯಾ. ಬಿ.ಎಸ್ ಪಾಟೀಲ್ ಅವರು ವಿಜಯವಾಣಿ ಜೊತೆ ಮುಂದಿನ ಕಾರ್ಯಯೋಜನೆಗಳ ಬಗ್ಗೆ ಹಂಚಿಕೊಂಡಿದ್ದು. ಲೋಕಾಯುಕ್ತಕ್ಕೆ ಈಗಿರುವ ಕಾರ್ಯವ್ಯಾಪ್ತಿಯಲ್ಲೇ ಭ್ರಷ್ಟರನ್ನು ಮಟ್ಟಹಾಕಲು ಶ್ರಮಿಸುತ್ತೇನೆ ಎಂದು ಎಚ್ಚರಿಕೆ ನೀಡಿದ್ದಾರೆ.

**ಮೂಲತ:** ತಾಳಿಕೋಳೆ ತಾಲ್ಲೂಕಿನ ಪಡೇಕನೂರ ಗ್ರಾಮದವರಾದ ನ್ಯಾ ಬಿ.ಎಸ್. ಪಾಟೀಲ್, 1956 ಜೂನ್ 1 ರಂದು ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ಪಡೇಕನೂರನಲ್ಲಿಯೇ ಪೂರೈಸಿದ್ದಾರೆ. ಪ್ರೌಢ ಶಿಕ್ಷಣವನ್ನು ತಾಳಿಕೋಟೆ ಎಸ್ ಕೆ. ಕಾಲೇಜಿನಲ್ಲಿ ಮತ್ತು ಪದವಿ ಪೂರ್ವ ಶಿಕ್ಷಣವನ್ನು ವಿಜಯಪುರದಲ್ಲಿ ನಂತರ ಪದವಿ ಶಿಕ್ಷಣ ಧಾರವಾಡದ ಕೆಸಿಡಿ ಹಾಗೂ ಕರ್ನಾಟಕ ವಿವಿಯಿಂದ ಲಾ ಪದವಿಯನ್ನು ಚಿನ್ನದ ಪದಕದೊಂದಿಗೆ ತೇರ್ಗಡೆಯಾದವರು. 20 ವರ್ಷಗಳ ಕಾಲ ವಕೀಲರಾಗಿದ್ದ ಇವರು 13.5 ವರ್ಷ ನ್ಯಾಯಾಮೂರ್ತಿಯಾಗಿ ಸೇವೆ ಸಲ್ಲಿಸಿದ್ದಾರೆ. 2019 ನವೆಂಬರ್‌ನಿಂದ ಉಪ ಲೋಕಾಯುಕ್ತರಾಗಿದ್ದರು. ನಂತರ ಲೋಕಾಯುಕ್ತರಾಗಿ ಅಧಿಕಾರ ಸ್ವೀಕರಿಸಲಿದ್ದಾರೆ.

ಹಿಂದುಳಿದ ಜಿಲ್ಲೆಯಿಂದ ಬಂದ ನನಗೆ ಜನರ ಸಮಸ್ಯೆಗಳ ಬಗ್ಗೆ ಅರಿವಿದೆ. ಇರುವ ಉತ್ತರ ವ್ಯವಸ್ಥೆ ಬಲಪಡಿಸಿ ಕೆಟ್ಟ ವ್ಯವಸ್ಥೆ ಸರಿಪಡಿಸಿ ಜನರಿಗೆ ನ್ಯಾಯ ದೊರಕಿಸಿ ಕೊಡಬೇಕೆಂಬ ಉದ್ದೇಶ ನನ್ನದು. ಸರ್ಕಾರಿ ಸೌಲಭ್ಯಗಳು ತಲುಪಬೇಕು. ಭ್ರಷ್ಟಾಚಾರ ನಿಲ್ಲಬೇಕು. ಗ್ರಾಮೀಣ ಭಾಗ ಅಭಿವೃದ್ಧಿ ಹೊಂದಬೇಕೆಂಬ ಕನಸು ಕಟ್ಟಿಕೊಂಡು ನನಗಿರುವ ಕಾನೂನು ವ್ಯಾಪ್ತಿಯಲ್ಲಿಯೇ ಪ್ರಗತಿ ಶ್ರಮಿಸುತ್ತೇನೆ ಎಂದು ನ್ಯಾಯಮೂರ್ತಿ ಬಿ.ಎಸ್. ಪಾಟೀಲ್, ಲೋಕಾಯುಕ್ತ, ತಿಳಿಸಿದರು.

**ಲೋಕಯುಕ್ತರಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಮುಂದೇನು**: ಜನರ ಸಮಸ್ಯೆಗಳಿಗೆ ಸದಾ ಸ್ಪಂದಿಸಬೇಕು. ರಾಜ್ಯದ ಪ್ರತಿ ಜಿಲ್ಲೆಗೂ ಹೋಗುತ್ತೇನೆ. ಕೆಲವು ಪ್ರದೇಶಗಳಿಗೆ ಅಧಿಕಾರಿಗಳನ್ನು ಕಳುಹಿಸಿ ಜನರ ಸಂಕಷ್ಟಗಳ ಬಗ್ಗೆ ಅವರಿಂದ ಮಾಹಿತಿ ಕಲೆ ಹಾಕುತ್ತೇನೆ. ನನಗೆ ಸುಮೋಟೋ ಕೇಸ್ ದಾಖಲಿಸಿಕೊಳ್ಳುವ ಅಧಿಕಾರವು ಇದೆ. ಜನರ ಸಮಸ್ಯೆಗಳನ್ನು ಕೂಲಂಕಷವಾಗಿ ಆಲಿಸುತ್ತೇನೆ. ನಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಹಾಗೂ ಕರ್ತವ್ಯ ವ್ಯಾಪ್ತಿಯಲ್ಲಿ ಜನರ ಸಾಮಾನ್ಯರ ಸಮಸ್ಯೆಗಳನ್ನು ಬಗೆಹರಿಸಲು ಏನೆಲ್ಲ ಕ್ರಮ ಕೈಗೊಳ್ಳಲು ಸದ್ಯ ನಿರ್ಧರಿಸಿದ್ದೇನೆ. ಇದನ್ನು ಕೇವಲ ಮಾತಿನಲ್ಲಿ ಹೇಳಿದರೆ ಸಾಲದು ಮಾಡಿ ತೋರಿಸುತ್ತೇನೆ.

**ಎಸಿಬಿ ಸ್ಥಾಪನೆಯಾದ ಬಳಿಕ ಲೋಕಾಯುಕ್ತ ಅಧಿಕಾರ ಕಳೆದುಕೊಂಡಿದೆ ಎಂಬ ಮಾತಿದೆ:** ಲೋಕಾಯುಕ್ತಕ್ಕೆ ಈ ಹಿಂದೆ ಇದ್ದ ಅಧಿಕಾರ ಮರಳಿ ಬಂದರೆ ಸದ್ಯ ಎಸಿಬಿ ನಿರ್ವಹಿಸುತ್ತಿರುವ ಕೆಲಸವನ್ನು ಇನ್ನೂ ಪಾರದರ್ಶಕವಾಗಿ ಚಾಚೂ ತಪ್ಪದೆ ನಿರ್ವಹಿಸುತ್ತೇವೆ. ಸದ್ಯ ಈ ಪ್ರಕರಣ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿರುವ ಹಿನ್ನಲೆಯಲ್ಲಿ ಹೆಚ್ಚು ಮಾತನಾಡುವುದು ಸರಿಯಲ್ಲ.

**ಲೋಕಾಯುಕ್ತಕ್ಕೆ ಭ್ರಷ್ಟರ ವಿರುದ್ಧ ಕ್ರಮ ಕೈಗೊಳ್ಳಲು ಆಗುತ್ತಿಲ್ಲ**: ನಮಗೆ ಸದ್ಯ ಇರುವ ಕಾರ್ಯ ವ್ಯಾಪ್ತಿಯಲ್ಲಿ ಬೇಕಾದಷ್ಟು ಕೆಲಸ ಮಾಡಬಹುದು. ಜನರ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡುತ್ತೇನೆ ಈ ಹಿಂದೆ ಲೋಕಾಯುಕ್ತ ಸಂಸ್ಥೆ ಭ್ರಷ್ಟರ ವಿರುದ್ಧ ಸಮರ ಸಾರಿದ ಮಾದರಿಯಲ್ಲೇ ಕೆಲಸ ಮಾಡುತ್ತೇನೆ.

**ಬಹುತೇಕ ಇಲಾಖೆಗಳಲ್ಲಿ ಭ್ರಷ್ಟಾಚಾರ ಇದೆ, ಇದಕ್ಕೆ ಕಡಿವಾಣ ಹೇಗೆ**: ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳುತ್ತೇನೆ. ನಮ್ಮದು ಭ್ರಷ್ಟಾಚಾರ ಮುಕ್ತ ರಾಜ್ಯವಾಗಬೇಕು ಎಂಬುದು ನನ್ನ ಆಶಯವಾಗಿದೆ.

**ಲೋಕಾಯುಕ್ತ ಸಂಸ್ಥೆ ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಏನೆಲ್ಲ ಸಮಾಜಮುಖಿ ಕೆಲಸ ಮಾಡಿದೆ:** ರಸ್ತೆ ಸಮಸ್ಯೆ, ಕುಡಿಯುವ ನೀರು, ಮಾಲಿನ್ಯ ಸ್ವಚ್ಚತೆ ಸಮಸ್ಯೆಗಳು ಉತ್ತರ ಕರ್ನಾಟಕದ ಭಾಗದಲ್ಲಿ ಶೌಚಗೃಹದ ಸಮಸ್ಯೆಗಳ ಬಗ್ಗೆ ಈಗಾಗಲೇ ಪ್ರಕರಣ ದಾಖಲಿಸಿಕೊಂಡಿದ್ದೇವೆ. ಸಾಕಷ್ಟು ಸುಮೋಟೋ ಕೇಸ್‌ಗಳನ್ನು ದಾಖಲಿಸಿಕೊಂಡು ಸಾಮಾನ್ಯ ಜನರ ಸಂಕಷ್ಟಕ್ಕೆ ಸ್ಪಂದಿಸಿದ್ದೇವೆ.

**ಲೋಕಾಯುಕ್ತರಾಗಿ ಜನ ಸಾಮಾನ್ಯರಿಗೆ ನಿಮ್ಮ ಭರವಸೆ ಏನು:** ಕಳೆದ ಎರಡೂವರೆ ವರ್ಷಗಳಿಂದ ಉಪ–ಲೋಕಾಯುಕ್ತರಾಗಿ ಕಾರ್ಯನಿರ್ವಹಿಸಿ ಜನ ಸಾಮಾನ್ಯರ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡಿದ್ದೇನೆ. ಏನೆಲ್ಲ ಕೆಲಸ ಮಾಡಬಹುದು ಎಷ್ಟು ಫೈಲ್‌ಗಳು ವಿಚಾರಣೆಗೆ ಬಾಕಿ ಉಳಿದಿವೆ, ಜನರ ಸಮಸ್ಯೆಗಳನ್ನು ಹೇಗೆ ಪರಿಹರಿಸಬಹುದು ಎಂಬ ಕುರಿತು ಈಗಾಗಲೇ ಸಂಬಂಧಿಸಿದ ಅಧಿಕಾರಿಗಳ ಜೊತೆಗೆ ಚರ್ಚಿಸಿದ್ದೇನೆ. ಜನರ ಒಂದೊಂದೇ ಸಮಸ್ಯೆಗಳನ್ನು ಪರಿಹರಿಸಲು ಶ್ರಮಿಸುತ್ತೇನೆ. ಕಳೆದ

ನಾಲ್ಕುವರೆ ತಿಂಗಳುಗಳಿಂದ ಕೆಲ ಪ್ರಕರಣಗಳು ವಿಚಾರಣೆ ಬಾಕಿ ಉಳಿದಿದೆ. ಈ ಫೈಲ್‌ಗಳನ್ನು ಪರಿಶೀಲಿಸುತ್ತೇವೆ.

**ಹಿಂದಿನ ಲೋಕಾಯುಕ್ತರು:**

1. ನ್ಯಾ. ಎ.ಡಿ. ಕೌಶಲ್ ಮೊದಲ ಲೋಕಾಯುಕ್ತ (1986–91)
2. ನ್ಯಾ.ರಬೀಂದ್ರನಾಥ್ ಪ್ಯಾನೆ (1991–96)
3. ನ್ಯಾ.ಎಸ್. ಎ. ಹಕೀಂ (1996–2001)
4. ನ್ಯಾ.ಎನ್. ವೆಂಕಟಚಲಯ್ಯ (2001–2006)
5. ನ್ಯಾ. ಸಂತೋಷ್ ಹೆಗ್ಡೆ (2006–2011)
6. ನ್ಯಾ. ಶಿವರಾಜ್ ವಿ. ಪಾಟೀಲ್ (03.08.2011–20.09.2011)
7. ನ್ಯಾ.ಡಾ:ವೈ. ಭಾಸ್ಕರ್‌ರಾವ್ (2013–15)
8. ನ್ಯಾ. ಪಿ. ವಿಶ್ವನಾಥ್ ಶೆಟ್ಟಿ (2017–22)

ಆಧಾರ:ವಿಜಯವಾಣಿ, ದಿನಾಂಕ:15.06.2022

## 39. ಬಿ.ಎಸ್.ಪಾಟೀಲ್ ಪ್ರಮಾಣವಚನ

ಲೋಕಾಯುಕ್ತರಾಗಿ ನ್ಯಾಯಮೂರ್ತಿ ಭೀಮನಗೌಡ ಸಂಗನಗೌಡ ಪಾಟೀಲ್ ರಾಜಭವನದಲ್ಲಿ ನಡೆದ ವಿಶೇಷ ಸಮಾರಂಭದಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ರಾಜ್ಯಪಾಲ ಥಾವರ್‌ಚಂದ್ ಗೆಹಲೋಟ್ ಪ್ರಮಾಣ ವಚನ ಬೋಧಿಸಿದರು.

ಕನ್ನಡದಲ್ಲಿ ಭಗವಂತ ಮತ್ತು ಸತ್ಯ–ನಿಷ್ಠೆಯ ಹೆಸರಿನಲ್ಲಿ ಬಿ.ಎಸ್. ಪಾಟೀಲ್ ಪ್ರಮಾಣವಚನ ಸ್ವೀಕರಿಸಿದ ಬಳಿಕ ರಾಜ್ಯಪಾಲರು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪುಷ್ಪಗುಚ್ಛ ನೀಡಿ ಅಭಿನಂದಿಸಿದರು.

ಪಾಟೀಲ್ ಹೈಕೋರ್ಟ್ ನ್ಯಾಯಮೂರ್ತಿಯಾಗಿ ಹಾಗೂ ನಂತರ ಉಪ ಲೋಕಾಯುಕ್ತರಾಗಿ ಸೇವೆ ಸಲ್ಲಿಸಿದ್ದರು. ವಿಧಾನಸಭೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, ಸಚಿವರಾದ ಆರಗ ಜ್ಞಾನೇಂದ್ರ, ಸೋಮಣ್ಣ, ಶಾಸಕರಾದ ಬಸನಗೌಡ ಪಾಟೀಲ್ ಯತ್ನಾಳ್, ಪಿ. ರಾಜೀವ್, ಕೆ.ಜೆ. ಜಾರ್ಜ್, ಎಂ.ಬಿ. ಪಾಟೀಲ್, ಈಶ್ವರ್ ಖಂಡ್ರೆ, ಮಾಜಿ ಲೋಕಾಯುಕ್ತ ಸಂತೋಷ್ ಹೆಗ್ಡೆ ಮತ್ತು ಪಿ. ವಿಶ್ವನಾಥ್ ಶೆಟ್ಟಿ ಮತ್ತಿತರ ಗಣ್ಯರು, ವಿವಿಧ ನ್ಯಾಯಾಲಯಗಳ ನ್ಯಾಯಾಧೀಶರು ಮತ್ತು ನ್ಯಾಯಾಂಗ ಅಧಿಕಾರಿಗಳ ಹಾಜರಿದ್ದರು.

ಗೃಹ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಲೋಕಾಯುಕ್ತ ನೇಮಕಾತಿಗೆ ಹೊರಡಿಸಿರುವ ಅಧಿಸೂಚನೆ ವಾಚಿಸಿದರು.

ಆಧಾರ: ವಿಜಯವಾಣಿ, ದಿನಾಂಕ: 16.06.2022

# 40. ನಾಡಪ್ರಗತಿಗೆ ಕೇಂದ್ರದ ಹೆಗಲು

ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಸಂಪೂರ್ಣ ಹೆಗಲಿಗೆ ಹೆಗಲು ಕೊಡಲಿದೆ. ಕರ್ನಾಟಕದ ಅಭಿವೃದ್ಧಿಗೆ ವೇಗ ತುಂಬುವುದೇ 'ಡಬಲ್ ಎಂಜಿನ್' ಸರ್ಕಾರದ ಗುರಿ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದರು.

ನಗರದ ಕೊಮ್ಮಘಟ್ಟದಲ್ಲಿ ನಡೆದ ಸಮಾರಂಭದಲ್ಲಿ ರೂ.33,000 ಕೋಟಿ ವೆಚ್ಚದ ರೈಲ್ವೆ, ರಸ್ತೆ ಮತ್ತು ಇತರ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಮತ್ತು ಕಾಮಗಾರಿ ಪೂರ್ಣಗೊಂಡಿರುವ ಯೋಜನೆಗಳನ್ನು ಸಾರ್ವಜನಿಕ ಬಳಕೆಗೆ ಅರ್ಪಿಸಿ ಅವರು ಮಾತನಾಡಿದರು.

ರಾಜ್ಯದ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರಕ್ಕೆ ಕೇಂದ್ರ ಸರ್ಕಾರ ಸಂಪೂರ್ಣ ಸಹಕಾರ ನೀಡಲಿದೆ. ಈ ವಿಚಾರದಲ್ಲಿ ತಮ್ಮ ಸರ್ಕಾರ ನುಡಿದಂತೆ ನಡೆಯಲಿದೆ ಎಂದು ಭರವಸೆ ನೀಡಿದರು.

'ಡಬಲ್ ಎಂಜಿನ್ ಸರ್ಕಾರ (ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಎರಡೂ ಕಡೆ ಬಿಜೆಪಿ ಆಡಳಿತ) ಇದ್ದರೆ ಪ್ರಗತಿ ಕೆಲಸಗಳಿಗೆ ವೇಗ ದೊರೆಯುತ್ತದೆ ಎಂದು ನಾನು ಈ ಹಿಂದೆ ಕರ್ನಾಟಕದ ಜನರಿಗೆ ಭರವಸೆ ನೀಡಿದ್ದೆ. ಅದು ಸಾಕಾರಗೊಳ್ಳುತ್ತಿರುವುದಕ್ಕೆ ಇಲ್ಲಿ ಮೊದಲ ಸಾಕ್ಷ್ಯ ಕಣ್ಣ ಮುಂದಿದೆ' ಎಂದರು.

ರೂ. 15,767 ಕೋಟಿ ವೆಚ್ಚದ ಬೆಂಗಳೂರು ಉಪನಗರ ರೈಲು ಯೋಜನೆಗೆ (ಬಿಎಸ್‌ಆರ್ ಪಿ) ಶಂಕು ಸ್ಥಾಪನೆ ನೆರವೇರಿಸಿದ ಪ್ರಧಾನಿ '40 ವರ್ಷಗಳಿಂದ ಚರ್ಚೆಯಲ್ಲೇ ಇದ್ದ ಈ ಯೋಜನೆಗೆ ನಮ್ಮ ಸರ್ಕಾರ ಚಾಲನೆ ನೀಡಿದೆ. 40 ತಿಂಗಳಲ್ಲೇ ಕಾಮಗಾರಿಯನ್ನು ಪೂರ್ಣಗೊಳಿಸಿ, ಇಲ್ಲಿನ ಜನರ ಬಹುಜನದ ಕನಸನ್ನು ಸಾಕಾರಗೊಳಿಸುತ್ತೇವೆ' ಎಂದು ಘೋಷಿಸಿದರು.

ಉನ್ನತ ಶಿಕ್ಷಣ, ಸಂಶೋಧನೆ, ಕೌಶಲಾಭಿವೃದ್ಧಿ, ಆರೋಗ್ಯ ಸೇವೆ, ಸಂಪರ್ಕ ವ್ಯವಸ್ಥೆ ಸುಧಾರಣೆಗೆ ಪೂರಕವಾದ ಹಲವು ಯೋಜನೆಗಳಿಗೆ ಚಾಲನೆ ನೀಡಲಾಗಿದೆ. ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಪೂರಕವಾದ ಐದು ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳು ಮತ್ತು ಏಳು ರೈಲ್ವೆ ಕಾಮಗಾರಿಗಳಿಗೆ ಚಾಲನೆ ದೊರಕಿದೆ. ಜೀವನ ನಿರ್ವಹಣೆಯನ್ನು ಸುಲಭಗೊಳಿಸುವುದರ ಜೊತೆಯಲ್ಲೇ ವ್ಯಾಪಾರ, ವಹಿವಾಟು ನಡೆಸುವುದನ್ನೂ ಸುಲಭಗೊಳಿಸು ವತ್ತ ಕೇಂದ್ರ ಸರ್ಕಾರ ಹೊಂದಿರುವ ದೂರದೃಷ್ಟಿಗೆ ಇದು ಸಾಕ್ಷಿ ಎಂದರು.

ಯಲಹಂಕ – ಪೆನುಕೊಂಡ ರೈಲ್ವೆ ಮಾರ್ಗದ ಅಭಿವೃದ್ಧಿಯು ಅಂತರರಾಜ್ಯ ಸಂಪರ್ಕ ಸುಧಾರಣೆಗೆ ಕಾರಣವಾಗಲಿದೆ. ಕಳೆದ ಕೆಲವು ವರ್ಷಗಳಲ್ಲಿ ಇಲ್ಲಿ 1,200 ಕಿ.ಮೀ. ಉದ್ದದ ರೈಲ್ವೆ ಮಾರ್ಗಗಳ ನಿರ್ಮಾಣ, ಸುಧಾರಣೆ ನಡೆದಿದೆ ಎಂದು ಪ್ರಧಾನಿ ಹೇಳಿದರು.

**ತ್ವರಿತ ಅನುಷ್ಠಾನಕ್ಕೆ ಕ್ರಮ:** ರಾಷ್ಟ್ರೀಯ ಹೆದ್ದಾರಿಗಳ ವಿಸ್ತರಣೆ, ಬೆಂಗಳೂರು ಉಪನಗರ ವರ್ತುಲ ರಸ್ತೆ, 'ಮಲ್ಟಿ ಮಾಡೆಲ್ ಲಾಜಿಸ್ಟಿಕ್ ಪಾರ್ಕ್' ಕಾಮಗಾರಿಗಳಿಗೆ ಶಿಲಾನ್ಯಾಸ ನೆರವೇರಿಸಿದೆ. ಮೋದಿ, 'ಈ ಎಲ್ಲ ಕಾಮಗಾರಿಗಳೂ ತ್ವರಿತವಾಗಿ ಪೂರ್ಣಗೊಳ್ಳಲಿವೆ. ರಸ್ತೆ, ರೈಲು, ವಿಮಾನ ಮತ್ತು ಜಲಸಾರಿಗೆ ಮಾರ್ಗಗಳನ್ನು ಬೆಸೆಯುವ ಕೆಲಸ – ಆಗಲಿದೆ' ಎಂದರು.

ಮಲ್ಟಿ ಮಾಡೆಲ್ ಲಾಜಿಸ್ಟಿಕ್ ಪಾರ್ಕ್ ಅಭಿವೃದ್ಧಿಯು ಕರ್ನಾಟಕವನ್ನು ಹಲವು ರಾಜ್ಯಗಳ ಜೊತೆ ಬೆಸೆಯಲಿದೆ. ಈ ಯೋಜನೆಯಿಂದ ರಾಜ್ಯದಲ್ಲಿ ಸಾವಿರಾರು ಉದ್ಯೋಗಗಳು ಸೃಷ್ಟಿಯಾಗಲಿವೆ. ಸರಕು ಸಾಗಣೆಯ ವೆಚ್ಚವನ್ನು ಗಣನೀಯವಾಗಿ ತಗ್ಗಿಸಲಿದೆ ಎಂದು ಹೇಳಿದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಚಿವರಾದ ಎಸ್.ಟಿ.ಸೋಮಶೇಖರ್, ವಿ.ಸೋಮಣ್ಣ, ಸಂಸದರಾದ ಡಿ.ವಿ.ಸದಾನಂದಗೌಡ, ಪಿ.ಸಿ.ಮೋಹನ್, ತೇಜಸ್ವಿ ಸೂರ್ಯ ಉಪಸ್ಥಿತರಿದ್ದರು.

**ಮೋದಿಯಂಥ ಮುತ್ಸದ್ದಿ ಕಂಡಿಲ್ಲ: ಬಸವರಾಜ ಬೊಮ್ಮಾಯಿ**

'ದೇಶದ ಸಮಗ್ರ ಅಭಿವೃದ್ಧಿಯ ದೂರದೃಷ್ಟಿ ಹೊಂದಿರುವ ಪ್ರಧಾನಿ ನರೇಂದ್ರ ಮೋದಿ ಅವರಂಥಹ ಮತ್ತೊಬ್ಬ ಮುತ್ಸದ್ದಿಯನ್ನು ನನ್ನ ಜೀವನದಲ್ಲಿ ಕಂಡಿಲ್ಲ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು. ಕೊಮ್ಮಘಟ್ಟದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಒಬ್ಬ ರಾಜಕಾರಣಿಯ ಕಣ್ಣು ಮುಂದಿನ ಚುನಾವಣೆಯ ಮೇಲಿರುತ್ತದೆ. ಒಬ್ಬ ಮುತ್ಸದ್ದಿಯ ಕಣ್ಣು ಮುಂದಿನ ತಲೆಮಾರಿನ ಮೇಲಿರುತ್ತದೆ. ಮೋದಿ ಎರಡನೇ ಸಾಲಿಗೆ ಸೇರಿದ ನಾಯಕ' ಎಂದರು.

ದೇಶ ಈಗ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂಭ್ರಮದಲ್ಲಿದೆ. ಈಗ ದೇಶವನ್ನು ಮುನ್ನಡೆಸುತ್ತಿರುವ ಮೋದಿಯವರು, ಮುಂದಿನ 25 ವರ್ಷಗಳಿಗಾಗಿ ದೂರದೃಷ್ಟಿಯ ಯೋಜನೆಗಳನ್ನು ರೂಪಿಸಿದ್ದಾರೆ. ಅವರ ಆಶಯದಂತೆ ಮುನ್ನಡೆದರೆ 2047ರ ವೇಳೆಗೆ ಭಾರತ ಜಗತ್ತಿನ ಅತ್ಯಂತ ಶಕ್ತಿಶಾಲಿ ರಾಷ್ಟ್ರವಾಗಲಿದೆ ಎಂದು ಹೇಳಿದರು.

**'ಖಾಸಗಿ ಕ್ಷೇತ್ರದ ಬಗ್ಗೆ ಅನಗತ್ಯ ಟೀಕೆ ಸಲ್ಲದು'**

'ಈಗಲೂ ಖಾಸಗಿ ಕ್ಷೇತ್ರವನ್ನು ಟೀಕಿಸುವುದರಲ್ಲೇ ಮಗ್ನರಾಗಿರುವ ಅಧಿಕಾರಶಾಹಿ ಮನಸ್ಥಿತಿಯ ಜನರು ಹೇಗೆ ತಮ್ಮ ಯೋಚನಾ ಕ್ರಮವನ್ನು ಬದಲಿಸಿಕೊಳ್ಳಬೇಕು ಎಂಬ ಪಾಠವನ್ನು ಬೆಂಗಳೂರು ನಗರ ಕಲಿಸುತ್ತಿದೆ' ಎಂದು ಪ್ರಧಾನಿ ಮೋದಿ ಹೇಳಿದರು.

ಖಾಸಗಿ ಕ್ಷೇತ್ರವನ್ನು ಟೀಕಿಸುವವರ ವಿರುದ್ಧ ವಾಗ್ದಾಳಿ ನಡೆಸಿದ ಅವರು, 'ದೇಶದ ಪ್ರಗತಿಯಲ್ಲಿ ಸಕ್ರಿಯವಾಗಿ ಕೈಜೋಡಿಸುತ್ತಿರುವುದಕ್ಕೆ ಖಾಸಗಿ ಕ್ಷೇತ್ರವನ್ನು ನಾನು ಅಭಿನಂದಿಸುತ್ತೇನೆ. ಸಾರ್ವಜನಿಕ ಕ್ಷೇತ್ರದಂತೆ ಖಾಸಗಿ ಕ್ಷೇತ್ರವೂ ಈ ದೇಶದ ಆಸ್ತಿ' ಎಂದರು.

ಸರ್ಕಾರಿ–ಖಾಸಗಿ ಸಹಭಾಗಿತ್ವದ (ಪಿಪಿಪಿ) ಯೋಜನೆಗಳಿಗೆ ಚಾಲನೆ ನೀಡುವಾಗ ಈ ವಿಷಯ ಪ್ರಸ್ತಾಪಿಸಿದ ಪ್ರಧಾನಿ, 'ನಮ್ಮ ಸರ್ಕಾರವು ಉದ್ಯೋಗ ಸೃಜಿಸುವವರು, ಆಸ್ತಿ ಸೃಜಿಸುವವರ ಪರವಾಗಿದೆ. ಎಂಟು – ವರ್ಷಗಳಿಂದಲೂ ಅದೇ ದಿಕ್ಕಿನಲ್ಲಿ ಕೆಲಸ ಮಾಡುತ್ತಿದೆ' ಎಂದರು.

**ಕನ್ನಡದಲ್ಲಿ ಭಾಷಣ ಆರಂಭಿಸಿದ ಪ್ರಧಾನಿ**

"ಕರುನಾಡ ಜನತೆಗೆ ನನ್ನ ಪ್ರೀತಿಯ ನಮಸ್ಕಾರಗಳು, ಬೆಂಗಳೂರಿನ ಜನತೆಗೆ ವಿಶೇಷವಾದ ನಮಸ್ಕಾರಗಳು. ಕರ್ನಾಟಕ ರಾಜ್ಯದ ಜನತೆಗೆ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಸಮರ್ಪಿಸುತ್ತಿರುವುದಕ್ಕೆ ನನಗೆ ಸಂತೋಷವಾಗುತ್ತಿದೆ ಎಂದು ಪ್ರಧಾನಿ ತಮ್ಮ ಭಾಷಣದ ಆರಂಭದಲ್ಲಿ ಕನ್ನಡದಲ್ಲೇ ಹೇಳಿದರು.

ನರೇಂದ್ರ ಮೋದಿ ಕನ್ನಡದಲ್ಲಿ ಮಾತು ಆರಂಭಿಸುತ್ತಿದ್ದಂತೆ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಜನರು ಕರತಾಡನ, ಶಿಳ್ಳೆ, ಹರ್ಷೋದ್ಗಾರದೊಂದಿಗೆ "ಮೋದಿ... ಮೋದಿ..." ಎಂದು ಘೋಷಣೆ ಮೊಳಗಿಸಿ ಸಂಭ್ರಮಿಸಿದರು.

ಆಧಾರ: ಪ್ರಜಾವಾಣಿ, ದಿನಾಂಕ: 21.06.2022

## 41. ರೂ. 6,000 ಕೋಟಿ ಕ್ರಿಯಾ ಯೋಜನೆಗೆ ಸರ್ಕಾರ ಅಸ್ತು

'ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆ'ಯಡಿ ರೂ. 6 ಸಾವಿರ ಕೋಟಿ ಮೊತ್ತದ ಬಿಬಿಎಂಪಿ ವ್ಯಾಪ್ತಿಯ ಮೂಲ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳ ಕ್ರಿಯಾ ಯೋಜನೆಗೆ ರಾಜ್ಯ ಸರ್ಕಾರ ಅನುಮೋದನೆ ನೀಡಿ ಆದೇಶ ಹೊರಡಿಸಿದೆ.

ಮುಖ್ಯಮಂತ್ರಿಗಳು 75 ಸ್ವಾತಂತ್ರೋತ್ಸವ ಆಚರಣೆ ವೇಳೆ ಬೆಂಗಳೂರಿನ ರಸ್ತೆ, ಗ್ರೇಡ್ ಸಪರೇಟರ್, ಕೆರೆ, ರಾಜಕಾಲುವೆ, ಉದ್ಯಾನವನ, ಕೊಳಚೆ ಪ್ರದೇಶಗಳ ಅಭಿವೃದ್ಧಿ, ಕಟ್ಟಡ ನಿರ್ಮಾಣ, ಬೀದಿ ದೀಪ, ಘನತ್ಯಾಜ್ಯ ನಿರ್ವಹಣೆ ಹಾಗೂ ಇತ್ಯಾದಿ ಕಾಮಗಾರಿಗೆ ರೂ.6 ಸಾವಿರ ಕೋಟಿ ನೀಡುವುದಾಗಿ ಘೋಷಿಸಿದ್ದರು. ಈ ಸಂಬಂಧಿಸಿದಂತೆ ಸಂಪುಟ ಸಭೆಯಲ್ಲಿ ಅನುಮೋದನೆ ಪಡೆದು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಕ್ರಿಯಾ ಯೋಜನೆ ಸಲ್ಲಿಸುವಂತೆ ಸೂಚಿಸಿದ್ದರು. ಆಯುಕ್ತರು ಸಿದ್ಧಪಡಿಸಿ ಸಲ್ಲಿಸಲಾಗಿದ್ದ ಕ್ರಿಯಾ ಯೋಜನೆಗೆ ಇದೀಗ ಸರ್ಕಾರ ಅನುಮೋದನೆ ನೀಡಿದ್ದು, ಡಿಪಿಆರ್ ಸಿದ್ಧಪಡಿಸಿ ಟೆಂಡರ್ ಆಹ್ವಾನಿಸಿ ಕಾಮಗಾರಿ ಆರಂಭಿಸುವುದಕ್ಕೆ ಸೂಚಿಸಲಾಗಿದೆ.

ಒಟ್ಟು ರೂ.6 ಸಾವಿರ ಕೋಟಿ ವೆಚ್ಚದ ಕ್ರಿಯಾ ಯೋಜನೆಯಲ್ಲಿ ರೂ.3,850 ಕೋಟಿಗಳನ್ನು 28 ವಿಧಾನಸಭಾ ಕ್ಷೇತ್ರಗಳ ವಾರ್ಡ್ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗೆ ಹಂಚಿಕೆ ಮಾಡಲಾಗಿದೆ. ಉಳಿದಂತೆ ರೂ.2,149 ಕೋಟಿಗಳನ್ನು ಘನತ್ಯಾಜ್ಯ ನಿರ್ವಹಣೆ, ರಸ್ತೆ ಅಭಿವೃದ್ಧಿ, ಗ್ರೇಡ್ ಸಪರೇಟರ್ ನಿರ್ಮಾಣ, ಟೆಂಡರ್ ಶೂ ರಸ್ತೆಗಳು, ಶಾಲೆ–ಕಾಲೇಜು, ಆಸ್ಪತ್ರೆಗಳ ನಿರ್ಮಾಣ ಮತ್ತು ನವೀಕರಣ ಸೇರಿದಂತೆ ವಿವಿಧ ಕಾಮಗಾರಿಗೆ ಹಂಚಿಕೆ ಮಾಡಲಾಗಿದೆ.

**ವಿಧಾನಸಭಾ ಕ್ಷೇತ್ರದ ಅನುದಾನ ಹೆಚ್ಚಳ:**

ಬಿಬಿಎಂಪಿ ವ್ಯಾಪ್ತಿಯ 28 ವಿಧಾನಸಭಾ ಕ್ಷೇತ್ರಗಳಿಗೆ ಈ ಹಿಂದೆ ರೂ.3,661 ಕೋಟಿ ಅನುದಾನ ಹಂಚಿಕೆ ಮಾಡಲಾಗಿತ್ತು. ಈ ಮೊತ್ತವನ್ನು ರೂ.3,850 ಕೋಟಿಗೆ ಹೆಚ್ಚಳ. ಮಾಡಲಾಗಿದೆ. ಬಸವನಗುಡಿಗೆ ರೂ. 37 ಕೋಟಿ, ಬ್ಯಾಟರಾಯನಪುರ ಕ್ಷೇತ್ರಕ್ಕೆ ರೂ.25 ಕೋಟಿ, ಕೆಆರ್ ಪುರಕ್ಕೆ ರೂ.35 ಕೋಟಿ, ದಾಸರಹಳ್ಳಿಗೆ ರೂ.25 ಕೋಟಿ, ಮಹಾದೇವಪುರಕ್ಕೆ ರೂ.45.50 ಕೋಟಿ, ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರಕ್ಕೆ ರೂ.25 ಕೋಟಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವ ವೇಳೆ ವಿವಿಧ ಕಾಮಗಾರಿಗೆ ಹೆಚ್ಚುವರಿ ಅನುದಾನ ನಿಗದಿಪಡಿಸಿ ಹಂಚಿಕೆ ಮಾಡಲಾಗಿದೆ.

**ಮಹದೇವಪುರ ಕ್ಷೇತ್ರಕ್ಕೆ ಬಂಪರ್:**

ಮಹದೇವಪುರ ವಿಧಾನಸಭಾ ಕ್ಷೇತ್ರಕ್ಕೆ ಈ ಹಿಂದೆ ರೂ.208 ಕೋಟಿ ಅನುದಾನ ನೀಡಲಾಗಿತ್ತು. ಕ್ರಿಯಾ ಯೋಜನೆಗೆ ಅನುಮೋದನೆ ನೀಡುವ ವೇಳೆ ಬೆಸ್ಕಾಂ, ಯುಜಿ ಕೇಬಲ್ ಅಳವಡಿಸಲು ಅಗೆದ ರಸ್ತೆ ದುರಸ್ತಿಗೆ ಹೆಚ್ಚುವರಿಯಾಗಿ ರೂ.45.50 ಕೋಟಿ ನೀಡಲಾಗಿದೆ. ಈ ಮೂಲಕ ಮಹಾದೇವಪುರ ವಿಧಾನಸಭಾ ಕ್ಷೇತ್ರಕ್ಕೆ ಬರೋಬ್ಬರಿ ರೂ.253.50 ಕೋಟಿ ನೀಡಿದಂತಾಗಿದೆ.

| **ಯಾವ ಪಕ್ಷಕ್ಕೆ ಎಷ್ಟು?** | | |
|---|---|---|
| **ಪಕ್ಷ** | **ಶಾಸಕರು** | **ಅನುದಾನ (ಕೋಟಿ ರೂ.)** |
| ಬಿಜೆಪಿ | 15 | ರೂ. 2,857.50 |
| ಕಾಂಗ್ರೆಸ್ | 12 | ರೂ. 858.00 |
| ಜೆಡಿಎಸ್ | 1 | ರೂ. 135.00 |

ಆಧಾರ: ಕನ್ನಡಪ್ರಭ, ದಿನಾಂಕ: 22.06.2022

# 42. ಮೋದಿ ಬಂದಿದ್ದಕ್ಕೆ ಗುಂಡಿಗಳಿಗೆ ಮುಕ್ತಿ

ರಾಜಧಾನಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಆಗಮಿಸುತ್ತಿದ್ದ ಹಿನ್ನೆಲೆಯಲ್ಲಿ 5ಕ್ಕೂ ಅಧಿಕ ರಸ್ತೆಗಳಿಗೆ ಒಂದು ವಾರದಲ್ಲಿ ಬಿಬಿಎಂಪಿ ಡಾಂಬರೀಕರಣ ಮಾಡಿದೆ. ಜೊತೆಗೆ, ಅವರು ಸಂಚಾರ ಮಾಡುತ್ತಿದ್ದ ಎಲ್ಲ ಬೀದಿಗಳಿಗೆ ವಿದ್ಯುತ್ ದೀಪ, ಚರಂಡಿ ದುರಸ್ತಿ, ಪಾದಚಾರಿಮಾರ್ಗ ಅಭಿವೃದ್ಧಿ ಮತ್ತು ಬಣ್ಣ ಬಳಿಯುವ ಕಾರ್ಯವನ್ನು ಪೂರ್ಣಗೊಳಿಸಿದೆ.

ವಿವಿಧ ಕಾಮಗಾರಿಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ಹಿನ್ನೆಲೆಯಲ್ಲಿ ನಗರಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ಆಗಮಿಸಿದ್ದರು. ಆದರೆ, ನರೇಂದ್ರ ಮೋದಿ ಭೇಟಿ ಮಾಡುವ ಮತ್ತು ಅವರು ಸಂಚರಿಸುವ ರಸ್ತೆಗಳನ್ನು ಗುಂಡಿಮುಕ್ತಗೊಳಿಸಿ ಉತ್ತಮ ಸ್ಥಿತಿಯಲ್ಲಿಡಲು ನೆರವಾಗುವಂತೆ ಹೆಚ್ಚಿನ ಶ್ರಮ ವಹಿಸಿದೆ. ಇದರಿಂದಾಗಿ, ಸಾರ್ವಜನಿಕರು ನಿತ್ಯ ಅನುಭವಿಸುತ್ತಿದ್ದ ಗುಂಡಿಗಳ ಸಮಸ್ಯೆಗೆ ಮೋದಿ ಭೇಟಿಯಿಂದ ಮುಕ್ತಿ ಸಿಕ್ಕಿದಂತಾಗಿದೆ. ಬಳ್ಳಾರಿ ರಸ್ತೆ, ಬೆಂಗಳೂರು ವಿವಿ ರಸ್ತೆ, ತುಮಕೂರು ರಸ್ತೆ, ಮೈಸೂರು ರಸ್ತೆ ಹಾಗೂ ಕೊಮ್ಮಘಟ್ಟ ರಸ್ತೆಗೆ ಮರುಡಾಂಬರೀಕರಣ ಮಾಡಲಾಗಿದೆ. ಒಂದು ವಾರದಲ್ಲಿ 14 ಕಿ.ಮೀ. ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸಲಾಗಿದೆ.

| ರಸ್ತೆಗಳು | ಉದ್ದ | ವೆಚ್ಚ |
|---|---|---|
| ಬಳ್ಳಾರಿ ರಸ್ತೆ | 2.4 ಕಿ.ಮೀ. | 4.6 ಕೋಟಿ ರೂ. |
| ಮೈಸೂರು ರಸ್ತೆ | 0.10 ಕಿ.ಮೀ. | 35 ಲಕ್ಷ ರೂ. |
| ಬೆಂಗಳೂರು ವಿವಿ ರಸ್ತೆ | 3.60 ಕಿ.ಮೀ. | 6.5 ಕೋಟಿ ರೂ. |
| ತುಮಕೂರು ರಸ್ತೆ | 0.90 ಕಿ.ಮೀ. | 1.5 ಕೋಟಿ ರೂ. |
| ಕೊಮ್ಮಘಟ್ಟ ರಸ್ತೆ | 7 ಕಿ.ಮೀ. | 11.5 ಕೋಟಿ ರೂ. |

**23 ಕೋಟಿ ರೂಪಾಯಿ ಖರ್ಚು**

ನರೇಂದ್ರ ಮೋದಿ ಆಗಮನದ ಹಿನ್ನೆಲೆಯಲ್ಲಿ ರಸ್ತೆ ಅಭಿವೃದ್ಧಿ, ದುರಸ್ತಿ ಮತ್ತು ಡಾಂಬರೀಕರಣ ಕಾರ್ಯವನ್ನು ಬಿಬಿಎಂಪಿ ಅತಿ ವೇಗವಾಗಿ ಮಾಡಿದೆ. ಒಂದು ವಾರದಿಂದ ರಸ್ತೆಗಳಿಗೆ ಡಾಂಬರೀಕರಣದ ಜತೆಗೆ ರಸ್ತೆ ಬದಿಯ ಚರಂಡಿಗಳ ದುರಸ್ತಿ, ಬೀದಿದೀಪ ಅಳವಡಿಕೆ, ಕಾಲುವೆಗಳ ಸ್ವಚ್ಛತೆ ಹಾಗೂ ವಿಭಜಕಗಳ ಅಭಿವೃದ್ಧಿ ಸೇರಿ ಇನ್ನಿತರೆ ಕೆಲಸವನ್ನು ಹಗಲು ರಾತ್ರಿ ಕಾರ್ಯನಿರ್ವಹಿಸಿ ಪೂರ್ಣಗೊಳಿಸಿದೆ. ಒಟ್ಟಾರೆ, ಎಲ್ಲ ಕಾರ್ಯಗಳಿಗೆ 23 ಕೋಟಿ ರೂ.ಗಳನ್ನು ಖರ್ಚು ಮಾಡಿದೆ.

ಆಧಾರ:ವಿಜಯವಾಣಿ, ದಿನಾಂಕ: 22.06.2022

## 43. ಪ್ರಧಾನಿ ಮೋದಿ ಜೊತೆ ಯೋಗಾಭ್ಯಾಸಿಗಳ ಯೋಗ

ಮೈಸೂರು ನಗರದ ಅರಮನೆ ಆವರಣವು ಮುಂಜಾನೆ ಐತಿಹಾಸಿಕ ಯೋಗಾಭ್ಯಾಸಕ್ಕೆ ಸಾಕ್ಷಿಯಾಯಿತು. ಅಪರೂಪದ ಕಾರ್ಯಕ್ರಮಕ್ಕೆ ಹತ್ತು ಸಾವಿರಕ್ಕೂ ಹೆಚ್ಚು ಯೋಗಪಟುಗಳು ಸಾಕ್ಷಿಯಾದರು.

'ಮಾನವೀಯತೆಗಾಗಿ ಯೋಗ' ಘೋಷ ವಾಕ್ಯದಡಿ ನಡೆದ 8ನೇ ಅಂತರ ರಾಷ್ಟ್ರೀಯ ಯೋಗ ದಿನಾಚರಣೆಗೆ ಚಾಲನೆ ನೀಡಿದ ಪ್ರಧಾನಿ ನರೇಂದ್ರ ಮೋದಿ ಅವರು, ಸ್ವತಃ ಯೋಗಾಭ್ಯಾಸ ಮಾಡಿ ಇಡೀ ವಿಶ್ವವೇ ಮೈಸೂರಿನತ್ತ ನೋಡುವಂತೆ ಮಾಡಿದರು.

ಬೆಳಗಿನ ಜಾವ 4 ಗಂಟೆಯಿಂದಲೇ ಯೋಗಾಭ್ಯಾಸಿಗಳು ಅರಮನೆಯತ್ತ ನಡೆದು ಬಂದಿದ್ದು ವಿಶೇಷವಾಗಿತ್ತು. ಬೆಳಿಗ್ಗೆ 6.34 ರ ವೇಳೆಗೆ ವೇದಿಕೆಗೆ ಬಂದ ಪ್ರಧಾನಿ ಅಭ್ಯಾಸಿಗಳಲ್ಲಿ, ರೋಮಾಂಚನ ಮೂಡಿಸಿದರು.

'ಸಂಪ್ರದಾಯಸ್ಥ ಮನೆಗಳಲ್ಲಿ, ಅಧ್ಯಾತ್ಮ ಕೇಂದ್ರಗಳಲ್ಲಷ್ಟೇ ಇದ್ದ ಯೋಗ ಈಗ ವಿಶ್ವದ ಮನೆ ಮನೆಗೂ ತಲುಪಿದೆ. ಸಹಜ, ಸ್ವಾಭಾವಿಕ, ಮಾನವೀಯ ಚೈತನ್ಯದ ಸಂಕೇತ, ಕೊರೊನಾ ಆತಂಕದ ಬಳಿಕ ಯೋಗದ ವೈಶ್ವಿಕ ಪರ್ವ ಆರಂಭವಾಗಿದೆ' ಎಂದು ಪ್ರಧಾನಿ ಹೇಳಿದರು.

'ಸ್ವಾತಂತ್ರ್ಯದ ಅಮೃತ ಮಹೋತ್ಸವ ನಿಮಿತ್ತ 75 ಚಾರಿತ್ರಿಕ ಸ್ಥಳಗಳಲ್ಲಿ ಸಾಮೂಹಿಕ ಯೋಗ ನಡೆದಿದೆ. ಇತಿಹಾಸದಲ್ಲಿ ವಿಶೇಷ ಸ್ಥಾನವುಳ್ಳ ಮೈಸೂರು ಅರಮನೆ ಆವರಣದಲ್ಲಿ ನಡೆದಿರುವ ಅಭ್ಯಾಸವು ದೇಶದ ವೈವಿಧ್ಯತೆಯನ್ನು ಯೋಗದ ಒಂದೇ ಸೂತ್ರದಲ್ಲಿ ಕೂಡಿಸುತ್ತದೆ' ಎಂದರು.

ನಂತರ 45 ನಿಮಿಷಕ್ಕೂ ಹೆಚ್ಚು ಕಾಲ ಯೋಗ ಮಾಡಿದರು. ಹಲವು ಕಷ್ಟಕರ ಆಸನಗಳನ್ನು ಹಾಗೂ ಪ್ರಾಣಾಯಾಮವನ್ನು ನಿರಾಯಾಸವಾಗಿ ಮಾಡಿದ್ದು ವಿಶೇಷವಾಗಿತ್ತು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಸರ್ಬಾನಂದ್ ಸೋನಾವಲ್, ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಸಂಸದ ಪ್ರತಾಪಸಿಂಹ, ಪ್ರಮೋದಾದೇವಿ ಒಡೆಯರ್, ಯದುವೀರ ಕೃಷ್ಣ ದತ್ತ ಚಾಮರಾಜ ಒಡೆಯರ್ ಅವರೂ ಪಾಲ್ಗೊಂಡರು.

ಆಧಾರ: ಪ್ರಜಾವಾಣಿ, ದಿನಾಂಕ: 22.06.2022

## 44. ಸ್ತ್ರೀಶಕ್ತಿ ಸ್ವಸಹಾಯ ಸಂಘಗಳಿಗೆ 1.5 ಲಕ್ಷ ರೂ. ಧನ ಸಹಾಯ

ಸ್ತ್ರೀಶಕ್ತಿ ಸ್ವ–ಸಹಾಯ ಸಂಘಗಳು ಮತ್ತು ಇತರ ಸ್ವಯಂ ಸೇವಾ ಸಂಸ್ಥೆಗಳಿಗೆ ತಲಾ ಒಂದೂವರೆ ಲಕ್ಷ ರೂಪಾಯಿಗಳ ಆರ್ಥಿಕ ಅನುದಾನ ನೀಡುವ ಮೂಲಕ ಸಮಾಜಮುಖಿ ಸೇವಾ ಸಂಸ್ಥೆಗಳ ಕೈ ಬಲಪಡಿಸಲು ಸರ್ಕಾರ ಬದ್ಧವಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹೇಳಿದರು.

ಗಾಂಧಿಭವನದಲ್ಲಿ ಆಯೋಜಿಸಲಾದ ರಾಜ್ಯ ಮಟ್ಟದ ಸ್ವಯಂ ಸೇವಾ ಸಂಸ್ಥೆಗಳ ಸಮಾವೇಶವನ್ನು ಉದ್ಘಾಟಿಸಿ ಬಳಿಕ ಮಾತನಾಡಿದ ಅವರು, ಸ್ವಯಂ ಸೇವಾ ಸಂಸ್ಥೆಗಳ ಆರ್ಥಿಕ ಮಟ್ಟವನ್ನು ಹೆಚ್ಚಿಸಲು ಸರ್ಕಾರ ಈಗಾಗಲೇ ನೂತನ ಕಾರ್ಯಕ್ರಮವನ್ನು ರೂಪಿಸಲಾಗಿದ್ದು, ಅಕ್ಟೋಬರ್ 2ರ ಗಾಂಧಿಜಯಂತಿಯಂದು ಯೋಜನೆ ಜಾರಿಗೊಳಿಸಲಾಗುತ್ತದೆ ಎಂದರು.

ಸ್ವಯಂ ಸೇವಾ ಸಂಸ್ಥೆಗಳಿಗೆಂದೇ ಮೊಟ್ಟ ಮೊದಲ ಬಾರಿಗೆ ಬಜೆಟ್‌ನಲ್ಲಿ ಹಣ ಮೀಸಲಿರಿಸಲಾಗಿದೆ. ಇನ್ನು ಈಗಾಗಲೇ ಕಾರ್ಯನಿರ್ವಹಿಸುವಂಥ ಸ್ವಯಂ ಸೇವಾ ಸಂಸ್ಥೆಗಳಿಗೆ ಸರ್ಕಾರದ ವತಿಯಿಂದಲೇ ಆರ್ಥಿಕ ನೆರವು, ಅಗತ್ಯ ಯಂತ್ರೋಪಕರಣ, ಮಾರುಕಟ್ಟೆ ಸೌಲಭ್ಯ ಸೇರಿದಂತೆ ಎಲ್ಲ ಮೂಲಭೂತ ವ್ಯವಸ್ಥೆ ಕಲ್ಪಿಸಲಾಗುವುದು.

ಜೊತೆಗೆ ಸ್ಥಳೀಯ ಜನರ ಅಗತ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ಸ್ವಯಂ ಸೇವಾ ಸಂಸ್ಥೆಗಳು ಉತ್ಪಾದನೆ ಮಾಡುವಂತೆ ಕಾರ್ಯಯೋಜನೆ ಸಿದ್ಧಪಡಿಸಲಾಗಿದ್ದು, ಚನ್ನಪಟ್ಟಣದ ಬೊಂಬೆ, ಮೊಳಕಾಲ್ಮೂರು, ಇಳಕಲ್ ಸೀರೆ ತಯಾರಿಕೆ ಸೇರಿದಂತೆ ಆಯಾ ಭಾಗಗಳ ವಸ್ತುಗಳ ಉತ್ಪಾದನೆ ಮತ್ತು ಮಾರಾಟಕ್ಕೆ ಒತ್ತು ನೀಡಲಾಗುತ್ತದೆ.

ಸ್ವಯಂ ಸೇವಾ ಸಂಸ್ಥೆಗಳು ಸ್ವಾವಲಂಬನೆಯಿಂದ ಕೆಲಸ ಮಾಡುವಂತಾಗಲು ನಮ್ಮ ಸರ್ಕಾರ ಎಲ್ಲ ಕ್ರಮ ಕೈಗೊಂಡಿದೆ. ಇನ್ನು ತಿಂಗಳಿಗೆ ರೂ. 5–10 ಲಕ್ಷಗಳ ವ್ಯವಹಾರ ನಡೆಸುವಂಥ ಸ್ವಯಂ ಸೇವಾ ಸಂಸ್ಥೆಗಳು ಮುಂದಿನ ದಿನಗಳಲ್ಲಿ ತಿಂಗಳೊಂದಕ್ಕೆ 50 ಲಕ್ಷಗಳಷ್ಟು ವ್ಯವಹಾರ ನಡೆಸಬೇಕೆಂಬ ಆಶಯವನ್ನು ಸರ್ಕಾರ ಹೊಂದಿದೆ ಮುಖ್ಯಮಂತ್ರಿಯವರು ಹೇಳಿದರು.

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ, ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಕೃಷ್ಣ ಪಿ.ವೊಡೆ, ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ್, ಸುಮಂಗಲಿ ಸೇವಾ ಆಶ್ರಮದ ಸುಶೀಲಮ್ಮ ಸೇರಿದಂತೆ ಮತ್ತಿತರ ಗಣ್ಯರು ಉಪಸ್ಥಿತರಿದ್ದರು. ಕರ್ನಾಟಕ ರಾಜ್ಯ ಸ್ವಯಂಸೇವಾ ಸಂಸ್ಥೆಗಳ ಒಕ್ಕೂಟ, ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಗಾಂಧಿ ಸ್ಮಾರಕ

ನಿಧಿ, ಸುಮಂಗಲಿ ಸೇವಾ ಆಶ್ರಮದ ಸಂಯುಕ್ತಾಶ್ರಯದಲ್ಲಿ 3 ಸ್ವಯಂ ಸೇವಾ ಸಂಸ್ಥೆಗಳ ಸಮಾವೇಶ ನಡೆಯಿತು.

ಸುಮಂಗಲಿ ಸೇವಾಶ್ರಮದ ಮೂಲಕ ಹಲವರ ಬಾಳಿಗೆ ದಾರಿದೀಪವಾದ ಸುಶೀಲಮ್ಮನವರು ನಮಗೆಲ್ಲ ಮದರ್ ತೆರೆಸಾ ಇದ್ದಂತೆ ಎಂದು ಸಿಎಂ ಬಸವರಾಜ ಬೊಮ್ಮಾಯಿ ಅವರು ಬಣ್ಣಿಸಿದರು. ನಾವು ದೂರದವರನ್ನು ಹೊಗಳುವ ಮೂಲಕ ನಮ್ಮ ಹತ್ತಿರದಲ್ಲಿರುವವರನ್ನೇ ಮರೆಯುತ್ತೇವೆ. ಹಾಗಾಗಬಾರದು, ಸೇವಾ ಮನೋಭವನೆಯಿಂದ ಸಮಾಜಮುಖಿ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡ ನಮ್ಮ ಸುಶೀಲಮ್ಮ ಅವರು ಮದರ್ ತೆರೆಸಾ ಅವರಿಗಿಂತ ಕಡಿಮೆಯಲ್ಲ ಎಂದು ಮುಖ್ಯಮಂತ್ರಿಯವರು ಹೇಳಿದರು.

ಆಧಾರ: ಸಂಯುಕ್ತ ಕರ್ನಾಟಕ, ದಿನಾಂಕ: 23.06.2022

## 45. ಬರಗೂರು ಪಠ್ಯ ಸಮಿತಿಯ ತಪ್ಪು ಬಿಚ್ಚಿಟ್ಟ ಸರ್ಕಾರ

ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿನ ಬರಗೂರು ರಾಮಚಂದ್ರಪ್ಪ ಅವರ ಪಠ್ಯ ಪರಿಷ್ಕರಣೆ ಸಮಿತಿಯು ರಾಷ್ಟ್ರಕವಿ ಕುವೆಂಪು, ನಾಡಪ್ರಭು ಕೆಂಪೇಗೌಡ ಸೇರಿದಂತೆ ಹಲವರ ಪ್ರಮುಖ ವಿಚಾರಗಳನ್ನು ಕೈಬಿಟ್ಟಿದೆ ಎಂದು ಸಚಿವ ಆರ್. ಅಶೋಕ್ ಆರೋಪಿಸಿದ್ದಾರೆ.

ವಿಧಾನಸೌಧದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಹಿಂದಿನ ಪಠ್ಯ ಪರಿಷ್ಕರಣೆ ಸಮಿತಿಯಲ್ಲಿ ಉಂಟಾಗಿದ್ದ ಲೋಪಗಳು ಹಾಗೂ ಕೈಬಿಟ್ಟಿರುವ ಅಂಶಗಳ ಬಗ್ಗೆ ವಿವರಣೆ ನಡೆಸಿದರು.

**ಕುವೆಂಪು ಕುರಿತ ಪಠ್ಯಕ್ಕೆ ಕತ್ತರಿ:** ಹಿಂದೆ ಬಿಜೆಪಿ ಸರ್ಕಾರ ಇದ್ದಾಗ ಪಠ್ಯದಲ್ಲಿ ರಾಷ್ಟ್ರಕವಿ ಕುವೆಂಪು ಅವರ ಎಂಟು ಅಧ್ಯಾಯಗಳು ಇದ್ದವು. ಕಾಂಗ್ರೆಸ್ ಸರ್ಕಾರ ಅಜ್ಜಯ್ಯನ ಅಭ್ಯಂಜನ, ಅನಲೆ ಶ್ರೀರಾಮಾಯಣ ದರ್ಶನಂ ಕುರಿತ ಗದ್ಯವನ್ನು ಕೈಬಿಟ್ಟಿತ್ತು. ಮೊದಲು ಎಂಟು ಇದ್ದ ಅಧ್ಯಾಯಗಳನ್ನು ಏಳಕ್ಕೆ ಕಡಿತಗೊಳಿಸಿತ್ತು. ನಾವು ಕುವೆಂಪು ಅವರ 10 ಅಂಶಗಳನ್ನು ಸೇರಿಸಿದ್ದೇವೆ. ನಮ್ಮ ಪರಿಷ್ಕೃತ ಪಠ್ಯದಲ್ಲಿ ಕಾಮನಬಿಲ್ಲು ಕಮಾನು ಕಟ್ಟಿದೆ, ಬೊಮ್ಮನಹಳ್ಳಿ ಕಿಂದರಿ ಜೋಗಿ, ಬಹುಮಾನ ಸೇರಿ ಮೂರು ಕುವೆಂಪು ಅವರ ಅಂಶಗಳನ್ನು ಮರು ಸೇರ್ಪಡೆ ಮಾಡಿದ್ದೇವೆ ಎಂದು ಹೇಳಿದರು.

ಇನ್ನು ಕುವೆಂಪು ಅವರ ಪರಿಚಯದಲ್ಲಿ ಅನೇಕರ ಪ್ರೋತ್ಸಾಹದಿಂದ ಅವರು ಪ್ರಖ್ಯಾತ ಕವಿ ಆದರು ಎಂಬ ಪದ ಸೇರಿಸಲಾಗಿದೆ ಎಂದು ಕಾಂಗ್ರೆಸ್ ಆರೋಪಿಸುತ್ತಿದೆ. ಆ ಪರಿಷ್ಕರಣೆ ರೋಹಿತ್ ಚಕ್ರತೀರ್ಥ ಸಮಿತಿ ಮಾಡಿಲ್ಲ. ಆ ಅಂಶ ಸಿದ್ದರಾಮಯ್ಯ ಸರ್ಕಾರ ಅವಧಿಯಲ್ಲಿದ್ದ ಪಠ್ಯದಲ್ಲಿ ಹಾಗೆ ಇತ್ತು ಎಂದೂ ಸ್ಪಷ್ಟನೆ ನೀಡಿದರು.

**ಕೆಂಪೇಗೌಡರ ಉಲ್ಲೇಖವಿರಲಿಲ್ಲ:** ನಮ್ಮ ಸರ್ಕಾರ ಕೆಂಪೇಗೌಡರ ಕನಸು ಎಂಬ ಹೊಸ ಪಾಠವನ್ನು ಅಳವಡಿಸಿದೆ. ಕಾಂಗ್ರೆಸ್ ಸರ್ಕಾರದ ಅವಧಿಯ ಪಠ್ಯದಲ್ಲಿ ಬೆಂಗಳೂರು ವಿಭಾಗದ ಪರಿಚಯದಲ್ಲಿ ಬೆಂಗಳೂರು ನಿರ್ಮಾತೃ ನಾಡಪ್ರಭು ಕೆಂಪೇಗೌಡರ ಕುರಿತು ಯಾವುದೇ ಉಲ್ಲೇಖವಿರಲಿಲ್ಲ. ಉದ್ದೇಶಪೂರ್ವಕವಾಗಿ ಕೆಂಪೇಗೌಡರ ಹೆಸರನ್ನು ಕೈ ಬಿಟ್ಟಿತ್ತು ಎಂದು ಆರೋಪಿಸಿದರು.

**ಮೈಸೂರು ರಾಜರ ಕಡೆಗಣನೆ:** ಸಿದ್ದರಾಮಯ್ಯರಿಗೆ ಟಿಪ್ಪು ಅಂದರೆ ಮೈಮೇಲೆ ಬರುತ್ತದೆ. ಅವರ ಕಾಲದ ಪಠ್ಯದಲ್ಲಿ ಮೈಸೂರು ರಾಜ ಒಡೆಯರ್ ಕಡೆಗಣನೆ ಮಾಡಿದ್ದರು. ಟಿಪ್ಪು ಹಾಗೂ ಹೈದರಾಲಿ ಅಂಶವನ್ನು ಹೆಚ್ಚಾಗಿ ಪಠ್ಯದಲ್ಲಿ ಸೇರಿಸಿದ್ದರು. ಟಿಪ್ಪುವನ್ನು ವೈಭವೀಕರಣ ಮಾಡಿದ್ದರು. ಹಿಂದಿನ ಬಿಜೆಪಿ ಸರ್ಕಾರ ಇದ್ದಾಗ ಮೈಸೂರು ರಾಜವಂಶಸ್ಥರಾದ ಒಡೆಯರ್ ಕುರಿತ ಪಾಠವನ್ನು ಆರನೇ ತರಗತಿಯ ಸಮಾಜ ವಿಜ್ಞಾನ ಪಠ್ಯದಲ್ಲಿ ಅಳವಡಿಸಲಾಗಿತ್ತು. ಈ ಪಠ್ಯವನ್ನು ಸಿದ್ದರಾಮಯ್ಯ ಸರ್ಕಾರ ತೆಗೆದುಹಾಕಿ ರಾಜವಂಶಸ್ಥರನ್ನು ಕಡೆಗಣಿಸಿತ್ತು.

**ನಾಡಿನ ವಿಚಾರಗಳಿಗೆ ಕತ್ತರಿ:** ನಾಡಿನ ಅಭಿಮಾನದ ಗೀತೆ 'ಚೆಲುವ ಕನ್ನಡ ನಾಡಿದು' ಎಂಬ ಗೀತೆ ತೆಗೆದಿದ್ದರು. ವಿಜಯನಗರ ಮರೆಯಲಾಗದ ಸಾಮ್ರಾಜ್ಯ ಎಂಬ ಪಾಠದ ಹೆಸರಿಗೆ ಕತ್ತರಿ ಹಾಕಿದ್ದರು.

**ಅಲ್ಪಸಂಖ್ಯಾತರ ಓಲೈಸಲು ಯತ್ನ:** ಕಾಂಗ್ರೆಸ್‌ನವರು ತಮಗೆ ಬೇಕಾದ ಅಜೆಂಡಾ, ಕಮ್ಯುನಿಸ್ಟ್ ಕಾಂಗ್ರೆಸ್ ಅಜೆಂಡಾವನ್ನು ಪಠ್ಯದಲ್ಲಿ ತುರುಕಿಸಿದ್ದರು. ಕಾಂಗ್ರೆಸ್ ಅಧಿಕಾರದ ವೇಳೆ ಹಿಂದೂ ಪದವನ್ನು ತೆಗೆದು ಟಿಪ್ಪು ಸೇರಿದಂತೆ ಮುಸ್ಲಿಂ ದೊರೆಗಳನ್ನು ಓಲೈಸಬೇಕಿತ್ತು. ಹಲವು ಕಡೆ ರಾಮನ, ಶಿವನ ಹೆಸರು ಇತ್ತು. ಅದನ್ನು ತೆಗೆಯಲು ಬರಗೂರು ನೇತೃತ್ವದ ಪಠ್ಯ ಪರಿಷ್ಕರಣಾ ಸಮಿತಿ ರಚಿಸಿದ್ದರು. ಹೀಗಾಗಿ ದೇವಾಲಯ ಚಿತ್ರಗಳನ್ನು ಕೈ ಬಿಟ್ಟಿದ್ದರು. ಮಥುರಾ ಶ್ರೀಕೃಷ್ಣ ಮಂದಿರ ಮತ್ತು ಸೋಮನಾಥ ದೇವಾಲಯದ ಅಂಶಗಳನ್ನು ಕೈಬಿಟ್ಟಿದ್ದರು. ದಿಲ್ಲಿ ಸುಲ್ತಾನರ ಕಾಲದ ಖಿಲ್ಜಿ ಕಾಲದ ಗುಲಾಮಗಿರಿ ಅಂಶ ಕೈ ಬಿಟ್ಟಿದ್ದರು. ಶಿವಾಜಿ ಮಹಾರಾಜರ ಉಲ್ಲೇಖಕ್ಕೆ ಕತ್ತರಿ ಹಾಕಿದ್ದರು. ರಜಪೂತರ ಗುಣ ಧರ್ಮಗಳನ್ನು ಕೈಬಿಟ್ಟು ಮೊಘಲರಿಗೆ ಹೆಚ್ಚಿನ ಆದ್ಯತೆ ನೀಡಿದ್ದರು ಎಂದು ಕಿಡಿಕಾರಿದರು.

**ಗಾಂಧೀಜಿಯವರ ಗೀತ ಪಠಣಕ್ಕೆ ಕತ್ತರಿ:** ಕಾಂಗ್ರೆಸ್ ಸರ್ಕಾರದ ವೇಳೆ ಗಾಂಧೀಜಿಯವರ ಗೀತ ಪಠಣದ ಅಂಶಗಳಿಗೆ ಕತ್ತರಿ ಹಾಕಿದ್ದರು. ವಲಸೆಯ ಸಂದರ್ಭದಲ್ಲಿ ನಡೆದ ಮತೀಯ ಗಲಭೆಗಳನ್ನು ನಿಯಂತ್ರಣಕ್ಕೆ ತರುವುದು ಸರ್ಕಾರಕ್ಕೆ ಹರಸಾಹಸದ ಕೆಲಸವಾಗಿತ್ತು. ಈ ವೇಳೆಯಲ್ಲಿ ಗಾಂಧಿಯವರು ಕೋಲ್ಕತ್ತಾದಲ್ಲಿ ಗೀತೆಯನ್ನು ಪಠಿಸುತ್ತಾ ಉಪವಾಸ ಕೈಗೊಂಡರು. ಈ ಅಂಶವನ್ನು ಸಿದ್ದರಾಮಯ್ಯ ಪಠ್ಯಪುಸ್ತಕದಲ್ಲಿ ಕತ್ತರಿ ಹಾಕಿದ್ದರು ಎಂದು ದೂರಿದರು.

ಆಧಾರ: ಕನ್ನಡಪ್ರಭ, ದಿನಾಂಕ: 24.06.2022

## 46. ಬೊಮ್ಮನಹಳ್ಳಿ, ಆರ್.ಆರ್.ನಗರಕ್ಕೆ 14 ವಾರ್ಡ್

198 ರಿಂದ 243ಕ್ಕೆ ಏರಿಕೆಯಾದ ವಾರ್ಡ್‌ಗಳಲ್ಲಿ ಬೊಮ್ಮನಹಳ್ಳಿ, ರಾಜರಾಜೇಶ್ವರಿನಗರ ವಿಧಾನ ಸಭಾ ಕ್ಷೇತ್ರಗಳಿಗೇ ಅತೀ ಹೆಚ್ಚು 14 ವಾರ್ಡ್‌ಗಳನ್ನು ವಿಂಗಡಿಸಲಾಗಿದೆ.

ಮಲ್ಲೇಶ್ವರ, ಶಾಂತಿನಗರ, ಗಾಂಧಿನಗರ, ರಾಜಾಜಿನಗರ, ಚಿಕ್ಕಪೇಟೆ, ಹೆಬ್ಬಾಳ ಮತ್ತು ಪುಲಕೇಶಿ ನಗರ ಕ್ಷೇತ್ರಗಳಲ್ಲಿ ವಾರ್ಡ್‌ಗಳು ಬದಲಾಗಿಲ್ಲ. ಆದರೆ, ಅವುಗಳ ಗಡಿಗಳು ಬದಲಾಗಿರುವ ಸಾಧ್ಯತೆ ಇದೆ.

ಬ್ಯಾಟರಾಯನಪುರ ಮತ್ತು ಯಲಹಂಕ ಹೊರತುಪಡಿಸಿ ನಗರದ ಹೊರವಲಯದ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲೂ ವಾರ್ಡ್‌ಗಳ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಿಸಲಾಗಿದೆ. ಬ್ಯಾಟರಾಯನಪುರದಲ್ಲಿ ಮೂರು ವಾರ್ಡ್‌ಗಳು ಹೆಚ್ಚಾಗಿದ್ದರೆ, ಯಲಹಂಕದಲ್ಲಿ ಒಂದು ವಾರ್ಡ್ ಮಾತ್ರ ಅಧಿಕವಾಗಿದೆ. ಮಹದೇವಪುರ, ಬೆಂಗಳೂರು ದಕ್ಷಿಣ ಮತ್ತು ರಾಜರಾಜೇಶ್ವರಿ ನಗರ ಕ್ಷೇತ್ರಗಳಲ್ಲಿ ತಲಾ ಐದು ವಾರ್ಡ್ಗಳು, ಕೆ.ಆರ್.ಪುರ ಮತ್ತು ದಾಸರಹಳ್ಳಿ ಕ್ಷೇತ್ರಗಳಲ್ಲಿ ತಲಾ ನಾಲ್ಕು ವಾರ್ಡುಗಳು ಹೊಸದಾಗಿ ಸೇರ್ಪಡೆಯಾಗಿವೆ.

‘ಬಿಜೆಪಿ ಶಾಸಕರು ಪ್ರತಿನಿಧಿಸುವ ಕ್ಷೇತ್ರಗಳಲ್ಲಿ ವಾರ್ಡ್‌ಗಳ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಿಸಲಾಗಿದೆ. ಕಾಂಗ್ರೆಸ್ ಶಾಸಕರ ಕ್ಷೇತ್ರಗಳಲ್ಲಿ ಮೂರು ಕಡೆ ಕಡಿತ ಮಾಡಿದ್ದರೆ, ವಾರ್ಡ್‌ಗಳ ಸಂಖ್ಯೆಯನ್ನು ಹಾಗೇ ಉಳಿಸಲಾಗಿದೆ’ ಎಂಬ ಆರೋಪಗಳು ಕಾಂಗ್ರೆಸ್ ಶಾಸಕರಿಂದ ವ್ಯಕ್ತವಾಗಿವೆ.

‘ವಾರ್ಡ್‌ಗಳ ಗಡಿಗಳನ್ನು ಗುರುತಿಸಲು ಕರಡಿನಲ್ಲಿ ನಾಲ್ಕು ದಿಕ್ಕಿನ ಕೆಲವು ಸ್ಥಳಗಳನ್ನು ತಿಳಿಸಲಾಗಿದೆ. ಆದರೆ, ಪ್ರತಿವಾರ್ಡಿಗೆ ಸಂಬಂಧಿಸಿದ ನಕ್ಷೆ ನೀಡಿಲ್ಲ. ಇದು ಗೊಂದಲಗಳನ್ನು ಹುಟ್ಟುಹಾಕಿದೆ ಎಂಬ ಟೀಕೆಗಳು ವ್ಯಕ್ತವಾಗುತ್ತಿವೆ. ಈ ಎಲ್ಲಾ ದೋಷಗಳ ಬಗ್ಗೆ ಆಕ್ಷೇಪಣೆಗಳನ್ನು ಸಲ್ಲಿಸಲಾಗುವುದು’ ಎಂದರು.

‘ಒಟ್ಟಾರೆ ಜನಸಂಖ್ಯೆಯನ್ನು 243 ಕ್ಷೇತ್ರಗಳಿಗೆ ವಿಭಾಗಿಸಿ ಸರಾಸರಿ 34 ಸಾವಿರ ಜನಸಂಖ್ಯೆ ಇರುವಂತೆ ವಾರ್ಡ್ಗಳನ್ನು ವಿಂಗಡಿಸಲಾಗಿದೆ. ಕೆಲವು ವಾರ್ಡ್‌ಗಳಲ್ಲಿ ಈ ಸಂಖ್ಯೆ ಶೇ.10ರಷ್ಟು ಕಡಿಮೆ ಇರಬಹುದು, ಕೆಲವು ವಾರ್ಡ್‌ಗಳಲ್ಲಿ ಶೇ.10 ರಷ್ಟು ಹೆಚ್ಚಿರಬಹುದು. ಜನಸಂಖ್ಯೆಯೇ ವಾರ್ಡ್ ವಿಂಗಡಣೆಯ ಮಾನದಂಡ’ ಎಂದು ಬಿಬಿಎಂಪಿ ಅಧಿಕಾರಿಗಳು ಹೇಳಿದರು.

| ಯಾವ ಕ್ಷೇತ್ರಕ್ಕೆ ಎಷ್ಟು ವಾರ್ಡ್ | | |
|---|---|---|
| **ವಿಧಾನಸಭಾ ಕ್ಷೇತ್ರಗಳು** | **ಹಾಲಿಇದ್ದ ವಾರ್ಡ್‌ಗಳ ಸಂಖ್ಯೆ** | **ವಿಂಗಡನೆಯಾದ ವಾರ್ಡ್‌ಗಳ ಸಂಖ್ಯೆ** |
| ಯಲಹಂಕ | 4 | 5 |
| ಕೆ.ಆರ್.ಪುರ | 9 | 13 |
| ಬ್ಯಾಟರಾಯನಪುರ | 7 | 10 |

| ಯಾವ ಕ್ಷೇತ್ರಕ್ಕೆ ಎಷ್ಟು ವಾರ್ಡ್ | | |
|---|---|---|
| **ವಿಧಾನಸಭಾ ಕ್ಷೇತ್ರಗಳು** | **ಹಾಲಿಇದ್ದ ವಾರ್ಡ್‌ಗಳ ಸಂಖ್ಯೆ** | **ವಿಂಗಡನೆಯಾದ ವಾರ್ಡ್‌ಗಳ ಸಂಖ್ಯೆ** |
| ಯಶವಂತಪುರ | 5 | 8 |
| ರಾಜರಾಜೇಶ್ವರಿನಗರ | 9 | 14 |
| ದಾಸರಹಳ್ಳಿ | 8 | 12 |
| ಮಹಾಲಕ್ಷ್ಮಿ ಲೇಔಟ್ | 7 | 9 |
| ಮಲ್ಲೇಶ್ವರ | 7 | 7 |
| ಹೆಬ್ಬಾಳ | 8 | 8 |
| ಪುಲಕೇಶಿನಗರ | 7 | 7 |
| ಸರ್ವಜ್ಞನಗರ | 8 | 8 |
| ಸಿ.ವಿ.ರಾಮನ್ ನಗರ | 7 | 9 |
| ಶಿವಾಜಿನಗರ | 7 | 6 |
| ಶಾಂತಿನಗರ | 7 | 7 |
| ಗಾಂಧಿನಗರ | 7 | 7 |
| ರಾಜಾಜಿನಗರ | 7 | 7 |
| ಗೋವಿಂದರಾಜನಗರ | 9 | 10 |
| ವಿಜಯನಗರ | 8 | 9 |
| ಚಾಮರಾಜಪೇಟೆ | 7 | 6 |
| ಚಿಕ್ಕಪೇಟೆ | 7 | 7 |
| ಬಸವನಗುಡಿ | 6 | 7 |
| ಪದ್ಮನಾಭನಗರ | 8 | 10 |
| ಬಿಟಿಎಂ ಲೇಔಟ್ | 8 | 9 |
| ಜಯನಗರ | 7 | 6 |
| ಮಹದೇವಪುರ | 8 | 13 |
| ಬೊಮ್ಮನಹಳ್ಳಿ | 8 | 14 |
| ಬೆಂಗಳೂರು ದಕ್ಷಿಣ | 7 | 12 |
| ಆನೇಕಲ್ | 1 | 1 |
| **ಒಟ್ಟು** | **198** | **243** |

ಆಧಾರ: ಪ್ರಜಾವಾಣಿ, ದಿನಾಂಕ: 24.06.2022

## 47. 13 ಜಿಲ್ಲೆಗಳಲ್ಲಿ ಹಿಂದುಳಿದ ವರ್ಗಗಳ ಸ್ಥಿತಿಗತಿ ಅಧ್ಯಯನ

ರಾಜ್ಯದ 13 ಜಿಲ್ಲೆಗಳಲ್ಲಿ ಈಗಾಗಲೆ ಹಿಂದುಳಿದ ವರ್ಗಗಳ ಸಾಮಾಜಿಕ–ಶೈಕ್ಷಣಿಕ ಸ್ಥಿತಿಗತಿ ಅಧ್ಯಯನ ನಡೆಸಲಾಗಿದೆ. ಬಾಕಿ 18 ಜಿಲ್ಲೆಗಳ ಪ್ರವಾಸ ಮುಗಿಸಿ ಶೀಘ್ರವೇ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು ಎಂದು ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕೆ.ಜಯಪ್ರಕಾಶ ಹೆಗ್ಡೆ ತಿಳಿಸಿದರು. ನಗರದಲ್ಲಿ ಮಾತನಾಡಿದ ಅವರು, ಸರ್ಕಾರದ ಸೌಲಭ್ಯ ಮೀಸಲಾತಿ ಕುರಿತು ಹಿಂದುಳಿದ ವರ್ಗದ ಸಣ್ಣಪುಟ್ಟ ಜಾತಿ, ಪಂಗಡಗಳ ಅಹವಾಲುಗಳನ್ನು ಸ್ವೀಕರಿಸಲಾಗಿದೆ. ಈ ಸಮುದಾಯಗಳ ಸಾಮಾಜಿಕ–ಶೈಕ್ಷಣಿಕ ಸ್ಥಿತಿಗತಿ ಕುರಿತಾಗಿ ಎಲ್ಲರೂ ಒಪ್ಪುವ ರೀತಿ ಆಯೋಗ ವರದಿ ಸಲ್ಲಿಸಲಿದೆ ಎಂದರು.

ಅಧ್ಯಯನ ಸಂದರ್ಭದಲ್ಲಿ ವಿವಿಧ ವರ್ಗ, ಸಮುದಾಯ, ಪಂಗಡಗಳು ಮೀಸಲಾತಿಗೆ ಬೇಡಿಕೆ ಸಲ್ಲಿಸಿವೆ. ಪ್ರವರ್ಗಗಳ ಬದಲಾವಣೆಗೆ ಬೇಡಿಕೆ ಬಂದಿದೆ. ವಿಶೇಷವಾಗಿ 3ಎ ನಿಂದ 2ಎ ಪ್ರವರ್ಗಕ್ಕೆ ಸೇರ್ಪಡೆ ಕುರಿತಾಗಿನ ಹೆಚ್ಚಿನ ಬೇಡಿಕೆ ಬಂದಿದೆ. ಎಲ್ಲವನ್ನೂ ನಿಖರವಾಗಿ ಪರಿಶೀಲಿಸಿ ಆಯೋಗ ವರದಿ ಸಿದ್ಧಪಡಿಸಲಿದೆ ಎಂದರು. ರಾಜ್ಯದಲ್ಲಿ ಕೆಲ ಸಣ್ಣಸಣ್ಣ ಜಾತಿಗಳು ಹಿಂದುಳಿದ ವರ್ಗಗಳ ಮೀಸಲಾತಿಯಿಂದ ಹೊರಗುಳಿದಿವೆ. ಆಯೋಗ ಇಂತಹ ಸಣ್ಣ ಗುಂಪುಗಳ ಶೈಕ್ಷಣಿಕ–ಸಾಮಾಜಿಕ ಸ್ಥಿತಿಗತಿಗಳಿಗನುಗುಣವಾಗಿ ಯಾವ ವರ್ಗದಲ್ಲಿ ಸೇರಿಸಬಹುದು ಎಂದು ನಿರ್ಧರಿಸಲಿದೆ ಎಂದು ಹೇಳಿದರು.

ಆಧಾರ: ವಿಜಯವಾಣಿ, ದಿನಾಂಕ: 25.06.2022

## 48. ಮೂವರಿಗೆ ಕೆಂಪೇಗೌಡ ಪ್ರಶಸ್ತಿ

ನಾಡಪ್ರಭು ಕೆಂಪೇಗೌಡರ ಹೆಸರಿನಲ್ಲಿ ರಾಜ್ಯ ಸರ್ಕಾರ ಇದೇ ಮೊದಲ ಬಾರಿಗೆ ಆರಂಭಿಸಿರುವ ಕೆಂಪೇಗೌಡ ಅಂತಾರಾಷ್ಟ್ರೀಯ ಪ್ರಶಸ್ತಿಗೆ ಹಿರಿಯ ರಾಜಕಾರಣಿ ಎಸ್.ಎಂ.ಕೃಷ್ಣ, ಇನ್ಫೋಸಿಸ್ ಸಂಸ್ಥಾಪಕ ಎನ್.ಆರ್. ನಾರಾಯಣಮೂರ್ತಿ ಮತ್ತು ಖ್ಯಾತ ಬ್ಯಾಡ್ಮಿಂಟನ್ ಆಟಗಾರ ಪ್ರಕಾಶ್ ಪಡುಕೋಣೆ ಅವರನ್ನು ಆಯ್ಕೆ ಮಾಡಲಾಗಿದೆ.

ಜೂನ್ 27ರಂದು ವಿಧಾನಸೌಧದಲ್ಲಿ ನಡೆಯಲಿರುವ ಬೆಂಗಳೂರು ನಿರ್ಮಾತೃ ಕೆಂಪೇಗೌಡರ 513ನೇ ಜಯಂತಿ ಕಾರ್ಯಕ್ರಮದಲ್ಲಿ ತಲಾ 5 ಲಕ್ಷ ರೂ. ನಗದು ಸಹಿತ ಪ್ರಶಸ್ತಿಯನ್ನು ಸಿಎಂ ಬಸವರಾಜ ಬೊಮ್ಮಾಯಿ ಪ್ರದಾನ ಮಾಡಲಿದ್ದಾರೆ ಎಂದು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು. ಸಚಿವರು ಎಸ್.ಎಂ. ಕೃಷ್ಣರನ್ನು ಅವರ ಮನೆಯಲ್ಲಿ ಭೇಟಿಯಾಗಿ ಸರ್ಕಾರದ ಪರವಾಗಿ ಕಾರ್ಯಕ್ರಮಕ್ಕೆ ಆಹ್ವಾನಿಸಿದರು. ಇದಕ್ಕೆ ಸಮ್ಮತಿಸಿದ ಕೃಷ್ಣ ಪ್ರಶಸ್ತಿಗೆ ಆಯ್ಕೆ ಮಾಡಿರುವುದಕ್ಕೆ ಸಂತಸ ವ್ಯಕ್ತಪಡಿಸಿದರು. ಮೂವರೂ ಪುರಸ್ಕೃತರು ಬೆಂಗಳೂರಿನ ಬೆಳವಣಿಗೆಗೆ ಮತ್ತು ಕೀರ್ತಿಗೆ ತಮ್ಮದೇ ಆದ ಅನನ್ಯ ಕೊಡುಗೆ ನೀಡಿದ್ದಾರೆ ಎಂದು ಸಚಿವ ಅಶ್ವತ್ಥನಾರಾಯಣ ಹೇಳಿದರು. ಪ್ರಶಸ್ತಿಗಾಗಿ ಸಾಧಕರನ್ನು

ಆಯ್ಕೆ ಮಾಡಲು ಸ್ಟಾರ್ಟಪ್ ವಿಷನ್ ಗ್ರೂಪ್' ಅಧ್ಯಕ್ಷ ಪ್ರಶಾಂತ್ ಪ್ರಕಾಶ್ ನೇತೃತ್ವದಲ್ಲಿ ಸರ್ಕಾರ ಉನ್ನತ ಮಟ್ಟದ ಸಮಿತಿ ರಚಿಸಿತ್ತು. ಇದರಲ್ಲಿ ಉದ್ಯಮಿ ಮೋಹನದಾಸ್ ಪೈ, ವಿವೇಕಾನಂದ ಯೂತ್ ಮೂವ್ ಮೆಂಟ್ ಸ್ಥಾಪಕ ಆರ್. ಬಾಲಸುಬ್ರಹ್ಮಣ್ಯಂ, ನಿವೃತ್ತ ಐಎಎಸ್ ಅಧಿಕಾರಿ ಎಂ.ಕೆ. ಶಂಕರಲಿಂಗೇಗೌಡ ಸದಸ್ಯರಾಗಿದ್ದರು. ಕೆಂಪೇಗೌಡ ಪಾರಂಪರಿಕ ತಾಣ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಆರ್. ವಿನಯದೀಪ್ ಸದಸ್ಯ ಕಾರ್ಯದರ್ಶಿಯಾಗಿದ್ದರು.

ಆಧಾರ: ವಿಜಯವಾಣಿ, ದಿನಾಂಕ: 26.06.2022

## 49. ಸೌಧದಲ್ಲಿ ಕೆಂಪೇಗೌಡ ಪ್ರತಿಮೆ

ಮುಂದಿನ ಕೆಂಪೇಗೌಡ ಜಯಂತಿಗೂ ಮುನ್ನ ವಿಧಾನಸೌಧದ ಆವರಣದಲ್ಲಿ ನಾಡಪ್ರಭು ಕೆಂಪೇಗೌಡ ಪ್ರತಿಮೆಯನ್ನು ಸ್ಥಾಪಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಶ್ವಾಸನೆ ನೀಡಿದ್ದಾರೆ. ವಿಧಾನಸೌಧದಲ್ಲಿ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡ ಅವರ 513ನೇ ಜಯಂತಿ ಮತ್ತು ನಾಡಪ್ರಭು ಕೆಂಪೇಗೌಡ ಅಂತಾರಾಷ್ಟ್ರೀಯ ಪ್ರಶಸ್ತಿ ಪ್ರಧಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ತಮ್ಮ ಬದುಕಿನ ಆದರ್ಶಗಳಿಂದಾಗಿ ಕೆಂಪೇಗೌಡ ಅವರು ನಾಡಪ್ರಭು ಎಂಬ ಬಿರುದನ್ನು ಪಡೆದು, ನಾಡಿನ ಸಮಗ್ರ ಚಿಂತನೆ ಮಾಡುವ ಮೂಲಕ ಪ್ರತಿ ಜನರ ಬದುಕಿಗೂ ಕೊಡುಗೆ ನೀಡಿದ್ದಾರೆ. ಅಂತಹವರ ಪ್ರತಿಮೆ ಶಕ್ತಿಸೌಧದಲ್ಲಿ ಹಲವು ವರ್ಷಗಳ ಹಿಂದೆಯೇ ನಿರ್ಮಾಣವಾಗಬೇಕಿತ್ತು. ಆದರೆ, ಯಾವ ಕಾರಣದಿಂದ ಆಗಿಲ್ಲವೋ ಗೊತ್ತಿಲ್ಲ. ಮುಂದಿನ ವರ್ಷದ ಜಯಂತಿ ವೇಳೆಗೆ ವಿಧಾನಸೌಧದ ಆವರಣದಲ್ಲಿ ಕೆಂಪೇಗೌಡ ಅವರ ಪ್ರತಿಮೆಯನ್ನು ನಿರ್ಮಿಸಲಾಗುವುದು. ಈ ಸಂಬಂಧ ಅಗತ್ಯ ಇರುವ ಆರ್ಥಿಕ ನೆರವು ನೀಡಲಾಗುವುದು ಎಂದು ಹೇಳಿದರು.

ಮಾಗಡಿಯಲ್ಲಿ ಸುಮಾರು ರೂ. 250 ಕೋಟಿ ವೆಚ್ಚದಲ್ಲಿ ನಾಡಪ್ರಭುಗಳ ಇತಿಹಾಸ ಬಿಂಬಿಸುವ ಕೆಲಸವಾಗುತ್ತಿದೆ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕೆಂಪೇಗೌಡ ಅವರ ಅಧ್ಯಯನ ಕೇಂದ್ರ ಸ್ಥಾಪಿಸಲು ರೂ.50 ಕೋಟಿ ಬಿಡುಗಡೆ ಮಾಡಲಾಗಿದೆ. ಒಟ್ಟು ರೂ.100 ಕೋಟಿ ಯೋಜನೆಯನ್ನು ನಿಗದಿತ ಸಮಯದಲ್ಲಿ ಪೂರ್ಣ ಮಾಡುತ್ತೇವೆ. ಒಕ್ಕಲಿಗ ಅಭಿವೃದ್ಧಿ ನಿಗಮಕ್ಕೆ ರೂ.150 ಕೋಟಿ ಅನುದಾನ ನೀಡಲಾಗಿದೆ. ಸಮುದಾಯವನ್ನು ಕಟ್ಟಲೆಂದು ಯುವಕರ ಶಿಕ್ಷಣ ಮತ್ತು ಉದ್ಯೋಗಕ್ಕೆ ಮಹತ್ವ ನೀಡಲಾಗುತ್ತಿದೆ. ಇದರ ರೂಪು ರೇಷೆಗಳನ್ನು ಸಿದ್ಧಪಡಿಸಿ ಜುಲೈ ತಿಂಗಳಲ್ಲಿ ಅದಕ್ಕೆ ಚಾಲನೆ ನೀಡಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ, ಗುರುಗುಂಡ ಬ್ರಹ್ಮೇಶ್ವರಸ್ವಾಮಿ ಮಠದ ಪೀಠಾಧಿಪತಿ ನಂಜಾವಧೂತ ಸ್ವಾಮೀಜಿ, ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಚಂದ್ರಶೇಖರನಾಥ ಸ್ವಾಮೀಜಿ, ಸಚಿವರಾದ ಡಾ। ಸಿ.ಎನ್.ಅಶ್ವತ್ಥ ನಾರಾಯಣ, ಆರ್.ಅಶೋಕ್, ಕೆ.ಗೋಪಾಲಯ್ಯ, ವಿ.ಸುನಿಲ್ ಕುಮಾರ್, ಪ್ರಶಸ್ತಿ ಪುರಸ್ಕೃತರಾದ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ, ಇನ್ಫೋಸಿಸ್ ಫೌಂಡೇಷನ್ ಮುಖ್ಯಸ್ಥೆ ಸುಧಾಮೂರ್ತಿ ಉಪಸ್ಥಿತರಿದ್ದರು.

**ಏರ್ಪೋರ್ಟ್ ಪ್ರತಿಮೆ ಮೋದಿ ಕೈಯಿಂದ ಉದ್ಘಾಟನೆ:** ಸಿಎಂ ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಕೆಂಪೇಗೌಡ ಅವರ ಪ್ರತಿಮೆಯನ್ನು ಬಹುತೇಕ ಟರ್ಮಿನಲ್–2 ಉದ್ಘಾಟನೆ ವೇಳೆ ಅನಾವರಣ ಮಾಡಲಾಗುವುದು. ಪ್ರಧಾನಿ ನರೇಂದ್ರ ಮೋದಿ ಅವರಿಂದ ಉದ್ಘಾಟನೆ ಮಾಡಿಸುವ ಉದ್ದೇಶ ಇದೆ ಎಂದು ಬೊಮ್ಮಾಯಿ ಹೇಳಿದರು. ಪ್ರತಿಮೆ ಕಾರ್ಯಕ್ಕೆ ಈಗಾಗಲೇ ಸುಮಾರು ರೂ.85 ಕೋಟಿ ಬಿಡುಗಡೆ ಮಾಡಲಾಗಿದೆ. ಜೊತೆಗೆ ರೂ. 23 ಕೋಟಿ ಸೌಂದರ್ಯೀಕರಣಕ್ಕೆ ಬಿಡುಗಡೆ ಮಾಡಲಾಗಿದೆ. ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್–2 ಸಿದ್ಧವಾದಾಗ ದೇಶದಲ್ಲಿಯೇ ಅತ್ಯುತ್ತಮ ವಿಮಾನ ನಿಲ್ದಾಣವಾಗಲಿದೆ. ಈ ವೇಳೆ ಕೆಂಪೇಗೌಡರ ಹೆಸರು ಶಾಶ್ವತವಾಗಿ ಉಳಿಯುವ ಕೆಲಸವಾಗಲಿದೆ ಎಂದು ನುಡಿದರು.

**ರೂ.5 ಲಕ್ಷ ರಾಮಕೃಷ್ಣ ಆಶ್ರಮಕ್ಕೆ ನೀಡಿದ ಎಸ್ಸೆಂಕೆ**

ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ನಾಡಪ್ರಭು ಕೆಂಪೇಗೌಡ ಅಂತಾರಾಷ್ಟ್ರೀಯ ಪ್ರಶಸ್ತಿಯ ಜೊತೆ ಸ್ವೀಕರಿಸಿದ ಐದು ಲಕ್ಷ ರೂ. ಮೊತ್ತವನ್ನು ತಮಗೆ ವಿದ್ಯಾದಾನ ಮಾಡಿದ ಮೈಸೂರಿನ ರಾಮಕೃಷ್ಣ ಆಶ್ರಮಕ್ಕೆ ನೀಡಿದ್ದಾರೆ. ಪ್ರಶಸ್ತಿ ಸ್ವೀಕರಿಸಿದ ಬಳಿಕ ಮಾತನಾಡಿದ ಅವರು, ನಾಡಪ್ರಭು ಕೆಂಪೇಗೌಡ ಅಂತಾರಾಷ್ಟ್ರೀಯ ಪ್ರಶಸ್ತಿ ಸ್ವೀಕರಿಸಿರುವುದು ಸಂತಸ ತಂದಿದೆ ಎಂದರು.

ಆಧಾರ: ಕನ್ನಡಪ್ರಭ, ದಿನಾಂಕ: 28.06.2022

## 50. ಜಿ.ಎಸ್.ಟಿ. ಕೌನ್ಸಿಲ್ಗೆ ಮಧ್ಯಂತರ ವರದಿ ಸಲ್ಲಿಕೆ

ಕೆಳಮುಖ ತೆರಿಗೆ ರಚನೆಯಲ್ಲಿ ತಿದ್ದುಪಡಿ ಮಾಡಬೇಕು ಮತ್ತು ತೆರಿಗೆ ವಿನಾಯಿತಿ ಕಡಿಮೆ ಮಾಡಬೇಕು ಎಂಬ ಎರಡು ಒತ್ತಾಯಗಳ ಪ್ರಮುಖ ಶಿಫಾರಸ್ಸುಗಳನ್ನು ಜಿಎಸ್‌ಟಿ ಸಚಿವ ಸಮಿತಿ, ಜಿಎಸ್‌ಟಿ ಮಂಡಳಿಗೆ ಮಾಡಿದೆ.

ಸಮಿತಿಯ ಅಧ್ಯಕ್ಷ ರಾಜ್ಯದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಂಡೀಗಡದಲ್ಲಿ ನಡೆದ ಜಿಎಸ್‌ಟಿ ಕೌನ್ಸಿಲ್ ಸಭೆಯಲ್ಲಿ ತೆರಿಗೆ ದರಗಳಲ್ಲಿನ ಪರಾಮರ್ಶೆಗೆ ಸಂಬಂಧಿಸಿದಂತೆ ಈ ಶಿಫಾರಸ್ಸುಗಳನ್ನು ಮಂಡಿಸಿದರು.

ವಿಶೇಷವೆಂದರೆ, ಸಮಿತಿಯ ಶಿಫಾರಸ್ಸುಗಳ ಪ್ರತ್ಯೇಕ ಅಂಶಗಳನ್ನು ಚರ್ಚಿಸದೆ, ಸಚಿವರ ಸಮಿತಿಯ ವರದಿಯನ್ನು ಜಿಎಸ್‌ಟಿ ಕೌನ್ಸಿಲ್ ಸರ್ವಾನುಮತದಿಂದ ಅಂಗೀಕರಿಸಿತು. ವರದಿಯ ಸಿದ್ಧಪಡಿಸುವಿಕೆಯಲ್ಲಿ ಮುಖ್ಯ ಮತ್ತು ಪ್ರಸ್ತುತವಾದ ಅಂಶಗಳನ್ನು ಒದಗಿಸಿದ್ದಕ್ಕಾಗಿ ಎಲ್ಲ ರಾಜ್ಯಗಳ ಸದಸ್ಯರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೃತಜ್ಞತೆ ಸಲ್ಲಿಸಿದರು.

ಇದಕ್ಕೂ ಮುನ್ನ ಸಚಿವರ ಸಮಿತಿಯು ತನ್ನ ವರದಿಯಲ್ಲಿ ಮಂಡಿಸಿರುವ ವಿವರವಾದ ವಿಶ್ಲೇಷಣೆಯ ಕುರಿತು ಕೌನ್ಸಿಲ್‌ನ ಸದಸ್ಯರು ಪ್ರಶಂಸೆ ವ್ಯಕ್ತಪಡಿಸಿದರು. ಸಮಿತಿಯ ಸಂಚಾಲಕರ ಪರಿಶ್ರಮವನ್ನು ಶ್ಲಾಘಿಸಿದ ಸಮಿತಿಯ ದೆಹಲಿ ಸದಸ್ಯ ಮನೀಷ್ ಸಿಸೋಡಿಯಾ, ಶಿಫಾರಸ್ಸಿನ ಅಂಶವಾರು ವಿವರಗಳನ್ನು ಚರ್ಚಿಸದೆ, ವರದಿಯನ್ನು ಯಥಾವತ್ತಾಗಿ ಅಳವಡಿಸಿಕೊಳ್ಳಬೇಕೆಂದು ಸಲಹೆ ಮಾಡಿದರು.

ಸಮಿತಿಯ ಉತ್ತರ ಪ್ರದೇಶ ಮತ್ತು ಬಿಹಾರ ರಾಜ್ಯಗಳ ಸದಸ್ಯರು ಮಾತನಾಡಿ, ಸಮತೋಲನದ ದೃಷ್ಟಿಕೋನವನ್ನು ಪ್ರದರ್ಶಿಸುತ್ತ, ಗ್ರಾಹಕರ ಸೂಕ್ಷ್ಮತೆಗಳಿಗೆ 33 ಸಂವೇದಿಸುವ ವರದಿಯನ್ನು ಕರ್ನಾಟಕ ಮುಖ್ಯಮಂತ್ರಿಗಳ ನೇತೃತ್ವದ ಸಚಿವರ ಸಮಿತಿ ನೀಡಿದೆ ಎಂದರು.

2021ರ ಸೆಪ್ಟೆಂಬರ್ 17ರಂದು ನಡೆದ ಜಿಎಸ್‌ಟಿ ಕೌನ್ಸಿಲ್ ಸಭೆಯಲ್ಲಿ ಜಿಎಸ್‌ಟಿ ದರಗಳಲ್ಲಿ ಪರಾಮರ್ಶೆ, ಕೆಳಮುಖ ತೆರಿಗೆ ರಚನೆಗಳಲ್ಲಿ ತಿದ್ದುಪಡಿ ಹಾಗೂ ತೆರಿಗೆ ವಿನಾಯಿತಿಗಳನ್ನು ಕಡಿಮೆ ಮಾಡುವ ಪ್ರಕ್ರಿಯೆಗಳನ್ನು ಪರಿಶೀಲಿಸಲು ಸಚಿವರ ಸಮಿತಿ ರಚಿಸಲಾಗಿತ್ತು.

ಈ ಸಮಿತಿಗೆ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷರಾಗಿದ್ದರೆ, ಪಶ್ಚಿಮ ಬಂಗಾಳ, ಬಿಹಾರ, ಕೇರಳ, ರಾಜಸ್ಥಾನ, ಉತ್ತರ ಪ್ರದೇಶ ಮತ್ತು ಗೋವಾ ರಾಜ್ಯಗಳ ಹಣಕಾಸು ಮಂತ್ರಿಗಳು ಸದಸ್ಯರಾಗಿದ್ದಾರೆ. ಇದೀಗ ಈ ಸಮಿತಿ ತನ್ನ ಮಧ್ಯಂತರ ವರದಿಯನ್ನು ಜಿಎಸ್‌ಟಿ ಕೌನ್ಸಿಲ್‌ಗೆ ಸಲ್ಲಿಸಿದೆ.

ಆಧಾರ: ವಿಶ್ವವಾಣಿ, ದಿನಾಂಕ: 29.06.2022

## 51. 40 ಪರ್ಸೆಂಟ್ ಕಮಿಷನ್ ದಾಖಲೆ ಕೇಳಿದ ಕೇಂದ್ರ

ರಾಜ್ಯ ರಾಜಕೀಯದಲ್ಲಿ ಭಾರಿ ಸಂಚಲನ ಮೂಡಿಸಿದ್ದ '40 ಪರ್ಸೆಂಟ್ ಸರಕಾರ'ದ ಆರೋಪಕ್ಕೆ ಇದೀಗ ಮರುಜೀವ ಬಂದಿದ್ದು, ಬೆಂಗಳೂರಿನಲ್ಲಿರುವ ಕೇಂದ್ರ ಗೃಹ ಇಲಾಖೆಯ ಅಧಿಕಾರಿಗಳನ್ನು ಭೇಟಿ ಮಾಡಿ ಶೇ. 40ರಷ್ಟು ಕಮಿಷನ್ ಆರೋಪದ ಬಗ್ಗೆ ದಾಖಲೆಗಳನ್ನು ಸಲ್ಲಿಸಿ ಎಂದು ಪ್ರಧಾನಿ ಕಾರ್ಯಾಲಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಅವರಿಗೆ ಸೂಚನೆ ನೀಡಿದೆ.

ರಾಜ್ಯ ಸರಕಾರದಲ್ಲಿ ಯಾವುದೇ ಕೆಲಸವಾಗಬೇಕೆಂದರೂ ಶೇ.40 ಕಮಿಷನ್ ಲಂಚದ ರೂಪದಲ್ಲಿ ನೀಡಬೇಕು ಎಂಬ ಗುತ್ತಿಗೆದಾರರ ಆರೋಪಕ್ಕೆ ಸಂಬಂಧಿಸಿದಂತೆ ಪ್ರಧಾನಿ ಕಚೇರಿ ಮತ್ತು ಕೇಂದ್ರ ಗೃಹ

ಕಚೇರಿಯಿಂದ ಪ್ರತಿಕ್ರಿಯೆ ಬಂದಿದ್ದು, ಆರೋಪಗಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ನೀಡುವಂತೆ ಅವರಿಗೆ ಸೂಚಿಸಲಾಗಿದೆ.

ಕಮಿಷನ್ ಬಗ್ಗೆ ಗುತ್ತಿಗೆದಾರರ ಸಂಘ ಕೆಲ ತಿಂಗಳ ಹಿಂದೆ ಆರೋಪಿಸಿತ್ತು. ಅಲ್ಲದೆ, ಈ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರ ಕಚೇರಿ ಹಾಗೂ ಗೃಹ ಸಚಿವ ಅಮಿತ್ ಶಾ ಅವರ ಕಚೇರಿಗೆ ಪತ್ರ ರವಾನಿಸಿ, ಕೂಡಲೇ ಕ್ರಮಕೈಗೊಳ್ಳುವಂತೆ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಮಾಡಿದ್ದರು.

**ರಾಜಕೀಯ ವಾಕ್ಸಮರ:** ಕಮಿಷನ್ ಆರೋಪ ಮಾಡಿದ್ದ ಗುತ್ತಿಗೆದಾರರ ಸಂಘದ ಕೆಂಪಣ್ಣ ಅವರ ದೂರನ್ನೇ ಮುಂದಿಟ್ಟುಕೊಂಡು ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ನಡುವೆ ವಾಕ್ಸಮರ ನಡೆಯುತ್ತಲೇ ಇದೆ. ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಅವರು, ಪ್ರಧಾನಿ ನರೇಂದ್ರ ಮೋದಿ ಅವರನ್ನು ಗುರಿಯಾಗಿಸಿಕೊಂಡು ಈ ವಿಷಯವನ್ನು ಆಗಾಗ್ಗೆ ಪ್ರಸ್ತಾಪಿಸುತ್ತಿದ್ದರು. ನರೇಂದ್ರ ಮೋದಿ, ಅಮಿತ್ ಶಾ, ಜೆ.ಪಿ ನಡ್ಡಾ ಅವರು ರಾಜ್ಯಕ್ಕೆ ಭೇಟಿ ನೀಡಿದ ಸಮಯದಲ್ಲೂ ಸಿದ್ದರಾಮಯ್ಯ ಇದನ್ನು ಪ್ರಸ್ತಾಪಿಸಿ, ಕ್ರಮ ಕೈಗೊಳ್ಳದ ಬಗ್ಗೆ ಆಕ್ಷೇಪ ಎತ್ತಿದ್ದರು.

2018ರ ವಿಧಾನಸಭಾ ಚುನಾವಣೆಯಲ್ಲಿ 10 ಪರ್ಸೆಂಟ್ ಸರಕಾರವೆಂದು, ಕಾಂಗ್ರೆಸ್ ಅನ್ನು ಪ್ರಧಾನಿ ನರೇಂದ್ರ ಮೋದಿ ಜರಿದಿದ್ದ ಬಗ್ಗೆ ಪ್ರಸ್ತಾಪಿಸಿದ್ದ ಸಿದ್ದರಾಮಯ್ಯ, ಬಿಜೆಪಿ ಸರಕಾರದಲ್ಲಿ 40 ಪರ್ಸೆಂಟ್ ಕಮಿಷನ್ ದಂಧೆ ನಡೆಯುತ್ತಿದ್ದರೂ ಏಕೆ ಕ್ರಮ ವಹಿಸಿಲ್ಲ ಎಂದು ಪ್ರಶ್ನಿಸಿದ್ದರು.

ವಿಧಾನಸಭೆ ಸೇರಿದಂತೆ ನಾನಾ ಚುನಾವಣೆಗಳಲ್ಲಿ ಬಿಜೆಪಿ ಸರಕಾರದ ವಿರುದ್ಧ ಕಾಂಗ್ರೆಸ್ ಇದೇ ಅಸ್ತ್ರವನ್ನು ಪ್ರಯೋಗಿಸಲು ಮುಂದಾಗಿರುವ ಹಿನ್ನೆಲೆಯಲ್ಲಿ ಇದೀಗ, ಆರೋಪದ ಬಗ್ಗೆ ದಾಖಲೆಗಳನ್ನು ಕೇಳುವ ಮೂಲಕ ಪ್ರಕರಣವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲು ಕೇಂದ್ರದ ಬಿಜೆಪಿ ಸರಕಾರ ಮುಂದಾಗಿದೆ ಎಂದು ಹೇಳಲಾಗುತ್ತಿದೆ.

ಆಧಾರ:ವಿಶ್ವವಾಣಿ, ದಿನಾಂಕ: 29.06.2022

# ಭಾಗ – 5

# ರಾಜ್ಯ ನೆಲ ಜಲ ಭಾಷೆ

## 1. Mekedatu to bleed state of prized forests

Karnataka might be determined to executive the Mekedatu project but the state government is perhaps unaware of what it is likely to lose in terms of economy.

The reservoir project will submerge more than 52 sq km, of forests. According to ecological scientists from the Indian Institute of Science (IISc), Karnataka is set to lose forests worth about “Rs.81.60 billion”.

The first-ever analysis of the economic worth of forest resources by the IISc shows that each hectare of forests in Karnataka is worth Rs.6.56 lakh annually. The estimation has been carried out as per the United Nations ‘Natural capital accounting and valuation of ecosystem services’ (NCAVES) project that was launched in 2017 with a view to improving the measurement of ecosystems and their services (physical monetary).

The project was rolled out on a pilot basis in five countries that are rich in natural capital and biodiversity, including India, which is part of the System of Environmental-Economic Accounting (SEEA) frame work. Karnataka was the only state in the country where the analysis was carried out by ecological scientists.

Chief Minister Basavaraj Bommai had in fact directed the forest department in September 2021 to estimate the losses to natural resources and the total deficit with a promise to address that deficit in the form of a ‘Green Budget’.

Dr.T.V.Ramachandra, scientist and coordinator at the Energy and Wetland Research Group at the Centre for Ecological Sciences in IISc, who led the team, told DH that Karnataka was chosen for the global project as there was already a similar estimation done by his team of researchers for Uttara Kannada district.

“Initially the UN wanted the study to be done in 10 districts of Karnataka. But we ended up doing it for all the districts. The services of any forest ecosystem are estimated considering the provisioning, regulating and cultural significance of forests” Ramachandra explained.

While provisioning services include any benefit to humans which is directly extracted from nature such as food, timber and fuel, regulating services comprise benefits provided by the ecosystem to aid natural phenomena like carbon sequestration, water purification, climate regularation and flood control. Cultural services constitute recreation and spiritual experiences.

“A total of 48.35 sq km (4,835 hectares) of forest land (about 3,000 hectares in the Cauvery Wildlife Sanctuary) is expected to be affected directly. If you extrapolate the results based on the annually ecosystem services, the NPV (Net Present Value) of forests that will be submerged for the Mekedatu project is worth Rs.81.60 billion including ecosystem services worth Rs.27.30 billion (provisioning) Rs. 41.19 billion (regulating) and Rs.13.11 billion (cultural)” he said.

He added that the entire forest acts as sponges assisting the percolation of rainwater. “During monsoon the region helps in the recharge of 80-100 TMC of water”, he pointed out. If the government is keen to of ahead with the disastrous project, it has to pay an ecological compensation of Rs. 85 to 100 billion to the Karnataka Forest Department (KFD), which is the total NPV of the forest to be submerged based on the annually ecosystem services.

The researcher’s team found it ironic that the state government is spending a whooping Rs. 5,912 crore to build a balancing reservoir to hold 65 TMC of water when the forest in the area is actually worth Rs. 81.60 billion (NPV) and aid in retaining 100 TMC of water every year.

“The viable alternative to avert this possible disaster is to catch rainwater in Bengaluru. The city gets 750 to 850 mm of rainfall annually which in itself amounts to 15 TMC of water. We require about 18 TMC of water annually. With rainwater harvesting and wastewater treatment the city will have more than 30 TMC of water, which is the best and most economical option. The government should invest in the rejuvenation of lakes and decentralised wastewater treatment options than destroying 5,000 hectares of ecologically and hydrologically vital forests” the researchers said.

## FOREST ECOSYSTEM SERVICES

| Ecosystem | Provisioning | Regulating | Cultural | Total Ecosystem Supply Value |
|---|---|---|---|---|
| Forest in Karnataka (per Hectare per year) | Rs. 2,19,494.8 | Rs.3,31,216.4 | Rs.1,05,461.6 | Rs.6,56,172.8 |
| NPV of Forests in Mekedatu (4,835 ha)* | Rs.27.30 | Rs.41.19 | Rs.13.11 | Rs.81.60 |

Courtesy: Deccan Herald, Dated: 11.04.2022

## 2. ಪಶ್ಚಿಮ ಘಟ್ಟ: ಹೊಸ ಸಮಿತಿ ರಚನೆ

ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಅಭಿವೃದ್ಧಿ ಚಟುವಟಿಕೆಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಕಸ್ತೂರಿರಂಗನ್ ಸಮಿತಿ ನೀಡಿದ ವರದಿಗೆ ವಿರೋಧ ಸೂಚಿಸಿದ ರಾಜ್ಯಗಳ ಅಹವಾಲುಗಳನ್ನು ಪರಿಶೀಲಿಸುವ ಸಲುವಾಗಿ ಕೇಂದ್ರ ಪರಿಸರ ಸಚಿವಾಲಯವು ಹೊಸ ಸಮಿತಿಯನ್ನು ರಚಿಸಿದೆ.

ಕಸ್ತೂರಿರಂಗನ್ ಸಮಿತಿಯು ಪಶ್ಚಿಮ ಘಟ್ಟ ಮೂರನೇ ಒಂದಕ್ಕಿಂತಲೂ ಅಧಿಕ ಭಾಗವನ್ನು ‘ಪರಿಸರ ಸೂಕ್ಷ್ಮ ಪ್ರದೇಶ’ ಎಂದು ಗುರುತಿಸಲು ಸಲಹೆ ನೀಡಿತ್ತು. ಕರ್ನಾಟಕ ಸಹಿತ ಪಶ್ಚಿಮ ಘಟ್ಟ ಪ್ರದೇಶ ವ್ಯಾಪ್ತಿಗೆ ಬರುವ ಆರು ರಾಜ್ಯಗಳಿಂದ ಇದಕ್ಕೆ ತೀವ್ರ ವಿರೋಧ ವ್ಯಕ್ತವಾಗಿರುವ ಕಾರಣ ಹಿರಿಯ ಅರಣ್ಯ ಅಧಿಕಾರಿ ಸಂಜಯ್ ಕುಮಾರ್ ನೇತೃತ್ವದ ಐವರು ಸದಸ್ಯರ ಸಮಿತಿಯನ್ನು ರಚಿಸಲಾಗಿದೆ.

ಈಗಾಗಲೇ ರಚನೆಯಾಗಿರುವ ಈ ಸಮಿತಿ ಮೇ 30ರೊಳಗೆ ತನ್ನ ವರದಿ ಸಲ್ಲಿಸಬೇಕಿತ್ತು. ಆದರೆ ಈ ಗಡುವು ಮೀರಿರುವ ಕಾರಣ ವರದಿ ಸಲ್ಲಿಕೆಗೆ ಇನ್ನಷ್ಟು ಸಮಯ ನೀಡುವ ಸಾಧ್ಯತೆ ಇದೆ ಎಂದು ಮೂಲಗಳು ಪ್ರಜಾವಾಣಿಗೆ ತಿಳಿಸಿವೆ.

ಪಶ್ಚಿಮ ಘಟ್ಟ ಸಂರಕ್ಷಣೆಗೆ ಸಂಬಂಧಿಸಿದಂತೆ ಮಾಧವ ಗಾಡ್ಗೀಳ್ ಸಮಿತಿ ವರದಿ ಸಲ್ಲಿಸಿ 12 ವರ್ಷ ಕಳೆದಿದ್ದು, ಕಸ್ತೂರಿರಂಗನ್ ಸಮಿತಿ ವರದಿ ನೀಡಿ ದಶಕವೇ ಕಳೆದಿದೆ. ಕಸ್ತೂರಿ ರಂಗನ್ ವರದಿ ಆಧರಿಸಿ ಪರಿಸರ ಸಚಿವಾಲಯ 2014ರಲ್ಲಿ ಪರಿಸರ ಸೂಕ್ಷ್ಮ ಪ್ರದೇಶ ಗುರುತಿಸುವ ನಿಟ್ಟಿನಲ್ಲಿ ಕರಡು ಅಧಿಸೂಚನೆ ಹೊರಡಿಸಿತ್ತು. ವಿವಿಧ ರಾಜ್ಯಗಳಿಂದ ತೀವ್ರ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ನಾಲ್ಕು ಬಾರಿ ಕರಡು ವರದಿಯನ್ನು ದೃಢೀಕರಿಸುವ ಅವಕಾಶ ತಪ್ಪಿಹೋಗಿದೆ. ಸದ್ಯದ ಅಧಿಸೂಚನೆಗೆ ಇದೇ 30ರವರೆಗೆ ಅವಧಿ ಇದೆ.

'ಕೇರಳದ ಬಿಷಪ್‌ಗಳು ಸಹಿತ ಹಲವರಿಂದ ನಾವು ಸಲಹೆಗಳನ್ನು ಸ್ವೀಕರಿಸಿದ್ದೇವೆ. ಹೊಸ ಸಮಿತಿ ಇವುಗಳನ್ನೆಲ್ಲ ಪರಿಶೀಲಿಸಲಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಗುಜರಾತ್, ಮಹಾರಾಷ್ಟ್ರ, ಗೋವಾ, ಕರ್ನಾಟಕ, ಕೇರಳ ಮತ್ತು ತಮಿಳುನಾಡು ರಾಜ್ಯ ಸರ್ಕಾರಗಳ ಪ್ರತಿನಿಧಿಗಳೊಂದಿಗೆ ಆಕ್ಷೇಪಗಳ ಕುರಿತು ಸಮಗ್ರ ಚರ್ಚೆ ನಡೆಸುವುದು, ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಈಚೆಗೆ ಸಂಭವಿಸದ ನೈಸರ್ಗಿಕ ವಿಕೋಪಗಳನ್ನು ಗಮನದಲ್ಲಿ ಇಟ್ಟುಕೊಂಡು ಬಂದಿರುವ ಸಲಹೆಗಳನ್ನು ಪರಿಶೀಲಿಸುವ ಹೊಣೆಗಾರಿಕೆಯನ್ನು ಈ ಸಮಿತಿಗೆ ನೀಡಲಾಗಿದೆ.

**ಜನರ ಧ್ವನಿ ಆಲಿಸುವ ಆಶಯ**: ಪರಿಸರ ಸೂಕ್ಷ್ಮ ಪ್ರದೇಶವನ್ನು ಗುರುತಿಸುವಾಗ ಗ್ರಾಮವೊಂದನ್ನು ಒಂದು ಘಟಕವೆಂದು ಪರಿಗಣಿಸಬೇಕೇ? ಅರಣ್ಯ, ಅರಣ್ಯೇತರ ಪ್ರದೇಶಗಳನ್ನು ಗುರುತಿಸುವುದು, ಅಧಿಸೂಚಿತ ಪ್ರದೇಶಗಳಿಂದ ಕಂದಾಯ ಪ್ರದೇಶಗಳನ್ನು ಹೊರಗಿಡುವುದರ ಬಗ್ಗೆ ಸಮಿತಿ ನಿರ್ಧಾರ ಕೈಗೊಳ್ಳಲಿದೆ. ಜೊತೆಗೆ ಸ್ಥಳೀಯ ಜನರ ಅಗತ್ಯಗಳ ಬಗ್ಗೆಯೂ ಪರಿಶೀಲನೆ ನಡೆಸಲಿದೆ.

ಆಧಾರ:ಪ್ರಜಾವಾಣಿ, ದಿನಾಂಕ:08.06.2022

## 3. ನದಿ ಜೋಡಣೆ ಯೋಜನೆ ಜಾರಿಗೊಳಿಸದಿರಿ

ಪಶ್ಚಿಮ ಘಟ್ಟದ ಯಾವುದೇ ನದಿ ತಿರುಗಿಸುವ ಯೋಜನೆ ಕೈಗೊಳ್ಳುವ ನಿರ್ಧಾರವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರ ಕೈಗೊಳ್ಳದಂತ ಒತ್ತಡ ತರುವ ನಿರ್ಣಯವನ್ನು ಬೇಡ್ತಿ–ವರದಾ ನದಿ ಜೋಡಣೆ ಕುರಿತ ಜನಜಾಗೃತಿ ಸಮಾವೇಶದಲ್ಲಿ ಕೈಗೊಳ್ಳಲಾಯಿತು.

ಬೇಡ್ತಿ ಮತ್ತು ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ ಯಲ್ಲಾಪುರ ತಾಲ್ಲೂಕಿನ ಮಂಚಿಕೇರಿಯಲ್ಲಿ ಆಯೋಜಿಸಿದ್ದ ಈ ಸಮಾವೇಶ ಸ್ವರ್ಣದಲ್ಲಿ ಮಠದ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ, ಜೈನ ಮಠದ ಭಟ್ಟಾಕಲಂಕ ಭಟ್ಟಾರಕ ಸ್ವಾಮೀಜಿ ನೇತೃತ್ವದಲ್ಲಿ ನಡೆಯಿತು. ನೂರಾರು ಜನರು ಪಾಲ್ಗೊಂಡಿದ್ದರು.

ಅವೈಜ್ಞಾನಿಕವಾದ ಬೇಡ್ತಿ–ವರದಾ ನದಿ ಜೋಡಣೆ ಯೋಜನೆ ಕೈಬಿಡುವ ಜೊತೆಗೆ ಎತ್ತಿನಹೊಳೆ ನದಿ ತಿರುವು ಬೃಹತ್ ಯೋಜನೆ ವಿಫಲವಾಗಿರುವುದನ್ನು ಗಮನದಲ್ಲಿಟ್ಟು ದಕ್ಷಿಣ ಭಾರತದ ನೀರಿನ ಸುರಕ್ಷತೆಯ ದೃಷ್ಟಿಯಿಂದ ಸರ್ಕಾರಗಳು ಇಂತಹ ಯೋಜನೆ ಕೈಗೊಳ್ಳಬಾರದು ಎಂಬ ಒತ್ತಾಯ ಸಮಾವೇಶದಲ್ಲಿ ಕೇಳಿಬಂತು.

'ಜಿಲ್ಲೆಯ ಎಲ್ಲಾ ಜನ ಪ್ರತಿನಿಧಿಗಳು ಪಕ್ಷ ಭೇದ ಮರೆತು ಒಕ್ಕೊರಲಿನಿಂದ ಬೇಡ್ತಿ ವರದಾ ಯೋಜನೆಯನ್ನು ಅನುಷ್ಠಾನ ಮಾಡದಂತೆ ಸರ್ಕಾರಕ್ಕೆ ಒತ್ತಡ ಹಾಕಬೇಕು. ಕಾಳಿ ನದಿ ತಿರುಗಿಸುವ ಯೋಜನೆಯ ವಿರುದ್ಧದ ಹೋರಾಟಕ್ಕೆ ಬೆಂಬಲ ನೀಡಬೇಕು' ಎಂದು ಸ್ವರ್ಣವಲ್ಲಿ ಸ್ವಾಮೀಜಿ ಹೇಳಿದರು.

ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ಮಾತನಾಡಿ ಜನರ ಭಾವನೆಗೆ ಸ್ಪಂದಿಸಿ ಯೋಜನೆ ಪರಾಮರ್ಶೆಗೆ ಜಿಲ್ಲೆಯ ಜನಪ್ರತಿನಿಧಿಗಳ ನಿಯೋಗವನ್ನು ಕರೆದೊಯ್ಯಲಾಗುವುದು. ಯೋಜನೆಯ ಬಾಧಕದ ಕುರಿತು ಮುಖ್ಯಮಂತ್ರಿ ಗಮನಕ್ಕೆ ತರಲಾಗುವುದು ಎಂದರು.

ಸಭೆಯಲ್ಲಿ ವಿಧಾನ ಪರಿಷ್ಯತ್ ಸದಸ್ಯ ಶಾಂತರಾಮ ಸಿದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಕೇಂದ್ರೀಕರಣ ಸಮಿತಿ ಉಪಾಧ್ಯಕ್ಷ ಪ್ರಮೋದ ಹೆಗಡೆ, ವಾಯುವ್ಯ ರಸ್ತೆ ಸಾರಿಗೆ ಸಂಸ್ಥೆ ಅಧ್ಯಕ್ಷ ವಿ.ಎಸ್.ಪಾಟೀಲ ವೃಕ್ಷಲಕ್ಷ ಆಂದೋಲನದ ಅನಂತ ಹೆಗಡೆ ಅಶೀಸರ, ಜೆಡಿಎಸ್ ಮುಖಂಡ ಶಶಿಭೂಷಣ ಹೆಗಡೆ, ಪರಿಸರ ಬರಹಗಾರ ಶಿವಾನಂದ ಕಳವೆ, ಸಂರಕ್ಷಣಾ ಜೀವಶಾಸ್ತ್ರಜ್ಞ ಡಾ:ಕೇಶವ ಕೊರ್ಸೆ, ಬಾಲಚಂದ್ರ ಸಾಯಿಮನೆ, ಡಾ:ಜಿ.ವಿ.ಹೆಗಡೆ ಪಾಲ್ಗೊಂಡಿದ್ದರು.

ಆಧಾರ:ಪ್ರಜಾವಾಣಿ, ದಿನಾಂಕ:15.06.2022

## 4. ಕೇಂದ್ರದಿಂದ ರೂ. 9,675 ಕೋಟಿ ನೆರವು

ಕರ್ನಾಟಕದ ಭದ್ರಾ ಮೇಲ್ದಂಡೆ ಯೋಜನೆಗೆ ರಾಷ್ಟ್ರೀಯ ಯೋಜನೆ ಎಂದು ಪರಿಗಣಿಸಲು ಕೇಂದ್ರ ಹಣಕಾಸು ಸಚಿವಾಲಯ ಒಪ್ಪಿಗೆ ನೀಡಿದೆ. ಈ ಯೋಜನೆಗೆ ಕೇಂದ್ರ ಸರ್ಕಾರವು ರೂ.9,675 ಕೋಟಿ ಮೊತ್ತವನ್ನು ನೀಡಲಿದೆ ಎಂದು ಕರ್ನಾಟಕ ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ತಿಳಿಸಿದರು. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹಾಗೂ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರನ್ನು ಭೇಟಿ ಮಾಡಿದ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಈ ಯೋಜನೆಗೆ ರಾಷ್ಟ್ರೀಯ ಯೋಜನೆಯ ಮಾನ್ಯತೆ ಸಿಗಲು ಕೇಂದ್ರ ಸಚಿವ ಸಂಪುಟದ ಅನುಮೋದನೆಯಷ್ಟೇ ಬಾಕಿ ಇದೆ. ಅದು ಕೆಲವೇ ದಿನಗಳಲ್ಲಿ ಸಿಗುವ ನಿರೀಕ್ಷೆ ಇದೆ ಎಂದು ಹೇಳಿದರು.

ಭದ್ರಾ ಮೇಲ್ದಂಡೆ ಯೋಜನೆಯಲ್ಲಿ 29.90 ಟಿಎಂಸಿ ಆಡಿ ನೀರು (ತುಂಗಾ ನದಿಯಿಂದ 17.40 ಟಿಎಂಸಿ ಅಡಿ ಹಾಗೂ ಭದ್ರಾ ಜಲಾಶಯದಿಂದ 12.50 ಟಿಎಂಸಿ ಅಡಿ) ಬಳಕೆ ಮಾಡಲಾಗುತ್ತದೆ. ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು ಹಾಗೂ ದಾವಣಗೆರೆ ಜಿಲ್ಲೆಗಳ 2,23,515 ಹೆಕ್ಟೇರ್ (5,57,022 ಎಕರೆ) ಪ್ರದೇಶಕ್ಕೆ ಸೂಕ್ಷ್ಮ ನೀರಾವರಿ ಮೂಲಕ ನೀರಾವರಿ ಸೌಲಭ್ಯ ಕಲ್ಪಿಸಲು ಹಾಗೂ ಈ ಜಿಲ್ಲೆಗಳ 367 ಕೆರೆಗಳನ್ನು ಅವುಗಳ ಸಾಮರ್ಥ್ಯದ ಶೇಕಡಾ 50 ರಷ್ಟನ್ನು ತುಂಬಿಸುವ ಯೋಜನೆ ಎಂದು ಅವರು ಮಾಹಿತಿ ನೀಡಿದರು.

ಈ ಯೋಜನೆಗೆ ತಗಲುವ ಒಟ್ಟಾರೆ ವೆಚ್ಚ ರೂ.21,47,67 ಕೋಟಿ. ರಾಷ್ಟ್ರೀಯ ಯೋಜನೆಯಾಗಿ ಪರಿಗಣಿತವಾದ ನಂತರ ಕೇಂದ್ರ ಸರ್ಕಾರ ಈ ಯೋಜನೆಗೆ ರೂ.9,675.29 ಕೋಟಿ ನೀಡಲಿದೆ ಎಂದರು.

ಈ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಿಸಲು ನಿರ್ಮಲಾ ಸೀತಾರಾಮನ್ ಒಪ್ಪಿಗೆ ಸೂಚಿಸಿದ್ದಾರೆ. ಇದು ಕರ್ನಾಟಕದ ಮೊದಲನೆಯ ರಾಷ್ಟ್ರೀಯ ಯೋಜನೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ ಎಂದರು.

ಮಹಾದಾಯಿ ಯೋಜನೆಯ ಕುರಿತು ಗಜೇಂದ್ರ ಸಿಂಗ್ ಶೇಖಾವತ್ ಅವರಿಗೆ ಮನವಿ ಸಲ್ಲಿಸಲಾಯಿತು. ಈ ಯೋಜನೆಗೆ ಅನುಮೋದನೆ ನೀಡುವ ಕುರಿತು ಸಚಿವರು ಸಕಾರಾತ್ಮಕ ಪ್ರತಿಕ್ರಿಯೆ ನೀಡಿದರು. ಕೂಡಲೇ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡಿದರು ಎಂದು ಕಾರಜೋಳ ಹೇಳಿದರು.

ಮೇಕೆದಾಟು ಯೋಜನೆಯ ಕುರಿತು ಪ್ರಸಾಪಿಸಲಾಯಿತು. ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ಇದೇ 23 ರಂದು ಈ ವಿಷಯದ ಬಗ್ಗೆ ಚರ್ಚೆಯಾಗಲಿದೆ ಅಂದಿನ ಸಭೆಯಲ್ಲಿ ಯೋಜನೆಗೆ ಅನುಮೋದನೆ ಸಿಗಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಕೃಷ್ಣಾ ಮೇಲ್ದಂಡೆ ಯೋಜನೆಯ ಮೂರನೇ ಹಂತದ ಕಾಮಗಾರಿಗಳಿಗೆ ರೂ.13 ಸಾವಿರ ಕೋಟಿಯನ್ನು ಈಗಾಗಲೇ ವೆಚ್ಚ ಮಾಡಲಾಗಿದೆ. ಕೇಂದ್ರ ಸರ್ಕಾರದ ಗೆಜೆಟ್‌ನಲ್ಲಿ ಕೃಷ್ಣಾ ಜಲ ವಿವಾದ ಎರಡನೇ ನ್ಯಾಯಾಧೀಕರಣದ ಐತೀರ್ಪನ್ನು ಪ್ರಕಟಿಸುವ ಮೂಲಕ ಈ ಯೋಜನೆಗೆ ನ್ಯಾಯ ಒದಗಿಸಬೇಕೆಂದು ವಿನಂತಿಸಲಾಯಿತು ಎಂದರು.

**ಮೇಕೆದಾಟುಗೆ ಸುಪ್ರೀಂ ತಡೆಯಾಜ್ಞೆ ಇಲ್ಲ:** ಮೇಕೆದಾಟು ಯೋಜನೆಗೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿಲ್ಲ. ಪ್ರಕರಣ ಕುರಿತು ಸುಪ್ರೀಂ ಕೋರ್ಟ್ ಅಂತಿಮ ಆದೇಶ ನೀಡುವವರೆಗೂ ಕರ್ನಾಟಕವು ಯೋಜನೆ ಕಾಮಗಾರಿ ಆರಂಭಿಸಬಾರದು ಎಂದು ತಮಿಳುನಾಡಿನ ಜಲಸಂಪನ್ಮೂಲ ಸಚಿವ ಮುರುಗನ್ ಹೇಳಿರುವುದರಲ್ಲಿ ಯಾವುದೇ ಅರ್ಥ ಇಲ್ಲ ಎಂದು ಮುಖ್ಯಮಂತ್ರಿಯವರು ಹೇಳಿದರು. ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ನಗರಕ್ಕೆ ಬಂದಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಈಗಾಗಲೇ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ನೀರು ಬಳಕೆ ಕುರಿತು 15 ಸಭೆಗಳನ್ನು ನಡೆಸಿದೆ. ಮುಂದಿನ ವಾರ ಮತ್ತೆ ಸಭೆ ನಡೆಯುವ ಸಾಧ್ಯತೆ ಇದೆ. ನೀರು ಬಳಕೆ ಕುರಿತಂತೆ ಈಗಾಗಲೇ ನಾವು ವಾದ ಮಂಡಿಸಿದ್ದೇವೆ. ಮೇಕೆದಾಟು ಯೋಜನೆ ಕುರಿತು ಕರ್ನಾಟಕ ಸಿದ್ಧಪಡಿಸಿರುವ ವಿಸ್ತೃತ ಯೋಜನಾ ವರದಿ (ಡಿಪಿಆರ್) ಗೆ ಕೇಂದ್ರ ಅನುಮೋದನೆ ನೀಡುವ ವಿಶ್ವಾಸ ಇದೆ ಎಂದು ಅವರು ತಿಳಿಸಿದರು.

ಭಕ್ತವತ್ಸಲಂ ನೇತೃತ್ವದ ಸಮಿತಿಯು ಹಿಂದುಳಿದ ವರ್ಗಗಳ ಮೀಸಲಾತಿ ಪ್ರಮಾಣ ಅಂತಿಮಗೊಳಿಸಲು ಸಂಬಂಧಿಸಿದ ವರದಿ ನೀಡಲು ತಯಾರಿ ನಡೆಸಿದೆ. ಆ ವರದಿಯ ಮೊದಲ ಹಂತದಲ್ಲಿ ಬಿಬಿಎಂಪಿ ಚುನಾವಣೆಗೆ ಅನ್ವಯವಾಗಲಿದೆ. ನಂತರ ಜಿಲ್ಲಾ ಹಾಗೂ ತಾಲ್ಲೂಕು ಪಂಚಯತಿ ಚುನಾವಣೆಗಳಿಗೂ ಮೀಸಲಾತಿ ನಿಗದಿಪಡಿಸಲು ಪರಿಗಣಿಸಲಾಗುವುದು ಎಂದು ಮುಖ್ಯಮಂತ್ರಿಯವರು ಸ್ಪಷ್ಟಪಡಿಸಿದರು.

ಆಧಾರ:ಪ್ರಜಾವಾಣಿ, ದಿನಾಂಕ:17.06.2022

## 5. ಕನ್ನಡ ಭಾಷೆ ಕಡ್ಡಾಯ ಕಲಿಕೆಗೆ ಹೈಕೋರ್ಟ್ ತಡೆ

ಪದವಿ ಹಂತದ ಶಿಕ್ಷಣದಲ್ಲಿ ಕನ್ನಡವನ್ನು ಒಂದು ಭಾಷಾ ವಿಷಯವಾಗಿ ಕಲಿಯುವುದನ್ನು ಕಡ್ಡಾಯಗೊಳಿಸಿ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶಕ್ಕೆ ಹೈಕೋರ್ಟ್ ತಡೆಯಾಜ್ಞೆ ನೀಡಿದೆ. ಇದರಿಂದ, ಕನ್ನಡ ಕಡ್ಡಾಯವನ್ನು ಬಲವಾಗಿ ಸಮರ್ಥಿಸಿಕೊಂಡಿದ್ದ ಸರ್ಕಾರಕ್ಕೆ ಹಿನ್ನಡೆಯಾದಂತಾಗಿದೆ. ಪದವಿ ವಿದ್ಯಾರ್ಥಿಗಳಿಗೆ ಕನ್ನಡ ಕಲಿಕೆ ಕಡ್ಡಾಯಗೊಳಿಸಿ ಸರ್ಕಾರ ಹೊರಡಿಸಿರುವ ಆದೇಶ ರದ್ದು ಕೋರಿ ಸಂಸ್ಕೃತ ಭಾರತಿ (ಕರ್ನಾಟಕ) ಟ್ರಸ್ಟ್, ಮಹಾವಿದ್ಯಾಲಯ ಸಂಸ್ಕೃತ ಪ್ರಾಧ್ಯಾಪಕ ಸಂಘ ಹಾಗೂ ಕೆಲ ವಿದ್ಯಾರ್ಥಿಗಳು ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ರಿತುರಾಜ್ ಅವಸ್ಥಿ ಹಾಗೂ ನ್ಯಾಯಮೂರ್ತಿ ಎಸ್.ಆರ್. ಕೃಷ್ಣಕುಮಾರ್ ಅವರಿದ್ದ ಪೀಠ ಈ ಆದೇಶ ಮಾಡಿದೆ.

**ಕೇಂದ್ರದ ನಿಲುವು ಪರಿಗಣನೆ:** ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ (ಎನ್‌ಇಪಿ) ಪ್ರಾದೇಶಿಕ ಭಾಷೆಗಳನ್ನು ಕಡ್ಡಾಯಗೊಳಿಸಲಾಗಿಲ್ಲ ಎಂದು ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ. ಇದರಿಂದ, ರಾಜ್ಯದಲ್ಲಿ ಎನ್‌ಇಪಿ ಜಾರಿಗೊಳಿಸುವ ನಿಟ್ಟಿನಲ್ಲಿ ಕನ್ನಡ ಕಲಿಕೆ ಕಡ್ಡಾಯಗೊಳಿಸುವಂತಿಲ್ಲ ಎಂದು ಮೇಲ್ನೋಟಕ್ಕೆ ಸ್ಪಷ್ಟವಾಗುತ್ತಿದೆ ಎಂದು ಅಭಿಪ್ರಾಯಪಟ್ಟ ಕೋರ್ಟ್, ಕೇಂದ್ರದ ನಿಲುವು ಆಧರಿಸಿ ರಾಜ್ಯ ಸರ್ಕಾರದ ಆದೇಶಕ್ಕೆ ತಡೆ ನೀಡುವುದಾಗಿ ತಿಳಿಸಿದೆ.

ಬಳಿಕ, ಪದವಿ ಹಂತದ ವಿದ್ಯಾರ್ಥಿಗಳಿಗೆ ಕನ್ನಡ ಕಲಿಕೆ ಕಡ್ಡಾಯಗೊಳಿಸಿ 2021ರ ಆಗಸ್ಟ್ 7 ಹಾಗೂ ಸೆಪ್ಟೆಂಬರ್ 15ರಂದು ರಾಜ್ಯ ಸರ್ಕಾರ ಹೊರಡಿಸಿರುವ ಆದೇಶಗಳ ಜಾರಿಗೆ ನ್ಯಾಯಾಲಯದ

ಮುಂದಿನ ಆದೇಶದ ವರೆಗೆ ತಡೆಯಾಜ್ಞೆ ನೀಡಿದ ಪೀಠ, ವಿಚಾರಣೆಯನ್ನು ಜುಲೈ ತಿಂಗಳಿಗೆ ಮುಂದೂಡಿದೆ. ಸರ್ಕಾರದ ಪರ ಹಾಜರಿದ್ದ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವದಗಿ, 'ಕನ್ನಡ ಭಾಷೆ ಕಲಿಕೆ ವಿಚಾರದಲ್ಲಿ ವಿದ್ಯಾರ್ಥಿಗಳನ್ನು ಒತ್ತಾಯಿಸದಂತೆ ಹೈಕೋರ್ಟ್ ಈಗಾಗಲೇ ಮಧ್ಯಂತರ ಆದೇಶ ನೀಡಿದೆ. ಆ ಆದೇಶದ ಅನುಸಾರ ಸರ್ಕಾರವೂ ವಿವಿಗಳಿಗೆ ಸುತ್ತೋಲೆ ಹೊರಡಿಸಿದೆ. ಆದ್ದರಿಂದ, ಅದೇ ನಿರ್ದೇಶನವನ್ನು ಮುಂದುವರಿಸಬಹುದು. ಈಗ ನೀಡುವ ಆದೇಶ ನಿರ್ಣಾಯಕ ಎಂಬ ರೀತಿಯಲ್ಲಿ ಬಿಂಬಿತವಾಗಬಾರದು' ಎಂದು ಕೋರಿದರು.

**ಆಕ್ಷೇಪಣೆ ಸಲ್ಲಿಸಲು ಸೂಚನೆ:** ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಪರ ವಕೀಲರು ಮಧ್ಯಂತರ ಅರ್ಜಿ ಸಲ್ಲಿಸಿ, ಪ್ರಕರಣದಲ್ಲಿ ತಮ್ಮನ್ನೂ ಪ್ರತಿವಾದಿಯನ್ನಾಗಿಸಿ, ವಾದ ಆಲಿಸುವಂತೆ ಕೋರಿದರು. ಅದಕ್ಕೆ ನ್ಯಾಯಪೀಠ, ಎನ್‌ಇಪಿ ಅಡಿ ಪ್ರಾದೇಶಿಕ ಭಾಷೆಯನ್ನು ಕಡ್ಡಾಯಗೊಳಿಸಬಹುದೇ ಅಥವಾ ಇಲ್ಲವೇ ಎಂಬ ಏಕೈಕ ಪ್ರಶ್ನೆ ನಮ್ಮ ಮುಂದಿದೆ. ಈ ಪ್ರಕರಣಕ್ಕೂ ಕನ್ನಡ ಅಭಿವೃದ್ಧಿಗೂ ಸಂಬಂಧವಿಲ್ಲ ಎಂದು ಮೌಖಿಕವಾಗಿ ಹೇಳಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಧ್ಯಂತರ ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ಅರ್ಜಿದಾರರ ಪರ ವಕೀಲ ಶ್ರೀಧರ ಪ್ರಭುಗೆ ಸೂಚಿಸಿ, ವಿಚಾರಣೆ ಮುಂದೂಡಿತು.

**ಪರಿಶೀಲನೆಗೆ ಸೂಚಿಸಲಾಗಿತ್ತು:** ಎನ್‌ಇಪಿಯಲ್ಲಿ ಪ್ರಾದೇಶಿಕ ಭಾಷೆಗಳನ್ನು ಕಡ್ಡಾಯ ಮಾಡಲಾಗಿಲ್ಲ ಎಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ. ಹೊರಗಿನಿಂದ ಬಂದ ವಿದ್ಯಾರ್ಥಿಗಳ ಮೇಲೆ ಕನ್ನಡ ಭಾಷೆ ಕಲಿಕೆಯನ್ನು ಹೇರುವುದು ಸರಿಯಲ್ಲ. ಉದ್ಯೋಗ ಪಡೆಯಲು ಕನ್ನಡ ಕಲಿಯುವಂತೆ ಷರತ್ತು ವಿಧಿಸಬಹುದು. ಆದರೆ, ಶಿಕ್ಷಣದಲ್ಲಿ ಕನ್ನಡ ಕಲಿಕೆಯನ್ನು ಹೇರಲಾಗದು. ಸರ್ಕಾರದ ನೀತಿಯಿಂದ ಪದವಿಗೂ ಮೊದಲು ಕನ್ನಡ ಕಲಿಯದ ವಿದ್ಯಾರ್ಥಿಗಳಿಗೆ ತೊಂದರೆಯಾಗಲಿದೆ. ಆದ್ದರಿಂದ, ಸರ್ಕಾರ ತನ್ನ ನಿರ್ಧಾರವನ್ನು ಮರು ಪರಿಶೀಲಿಸಬೇಕು. ಇಲ್ಲವಾದರೆ, ಅರ್ಜಿದಾರರ ಮಧ್ಯಂತರ ಮನವಿ ಪರಿಗಣಿಸಿ ಸರ್ಕಾರದ ಆದೇಶಕ್ಕೆ ತಡೆಯಾಜ್ಞೆ ನೀಡಲಾಗುವುದು ಎಂದು ಹೈಕೋರ್ಟ್ ಈ ಹಿಂದೆ ಹೇಳಿತ್ತು. ಆದರೆ, ಆದೇಶ ಮರುಪರಿಶೀಲಿಸುವ ಬಗ್ಗೆ ರಾಜ್ಯ ಸರ್ಕಾರ ನಿಲುವು ಸ್ಪಷ್ಟಪಡಿಸದ ಹಿನ್ನೆಲೆಯಲ್ಲಿ ಇದೀಗ ತಡೆಯಾಜ್ಞೆ ನೀಡಿದೆ.

**ಒತ್ತಾಯ ಬೇಡ**: ಕಳೆದ ಡಿಸೆಂಬರ್ 16ರಂದು ಅರ್ಜಿಯ ವಿಚಾರಣೆ ನಡೆಸಿದ್ದ ಹೈಕೋರ್ಟ್, ಎನ್‌ಇಪಿ ಆಧಾರದಲ್ಲಿ ಕನ್ನಡ ಕಲಿಕೆ ಕಡ್ಡಾಯಗೊಳಿಸಬಹುದೇ ಪ್ರಶ್ನೆ ನ್ಯಾಯಾಲಯದ ಮುಂದಿದ್ದು, ಮೊದಲು ಈ ವಿಚಾರವನ್ನು ಪರಿಗಣಿಸಬೇಕಿದೆ. ಈ ಬಗ್ಗೆ ಕೇಂದ್ರ ಸರ್ಕಾರ ನಿಲುವು ತಿಳಿಸಬೇಕಿದೆ. ಆದ್ದರಿಂದ, ಈ ಹಂತದಲ್ಲಿ ರಾಜ್ಯ ಸರ್ಕಾರ ಕನ್ನಡ ಕಲಿಕೆ ಭಾಷೆಯನ್ನು ಕಡ್ಡಾಯಗೊಳಿಸಬಾರದು. ಸ್ವ ಇಚ್ಛೆಯಿಂದ ಕನ್ನಡ ಆಯ್ಕೆ ಮಾಡಿಕೊಂಡಿರುವ ವಿದ್ಯಾರ್ಥಿಗಳು ಅಧ್ಯಯನ ಮುಂದುವರಿಸಬಹುದು. ಆದರೆ, ಕನ್ನಡ ಆಯ್ಕೆ

ಮಾಡಿಕೊಳ್ಳಲು ಬಯಸದ ವಿದ್ಯಾರ್ಥಿಗಳಿಗೆ ಕನ್ನಡ ಅಧ್ಯಯನ ಮಾಡುವಂತೆ ನ್ಯಾಯಾಲಯದ ಮುಂದಿನ ಆದೇಶದವರೆಗೆ ಒತ್ತಾಯಿಸಬಾರದು ಎಂದು ಮಧ್ಯಂತರ ಆದೇಶ ನೀಡಿತ್ತು.

**ಎನ್‌ಇಪಿಯಲ್ಲಿ ಭಾಷೆ ಕಡ್ಡಾಯವಲ್ಲ:** ಸ್ಥಳೀಯ, ಪ್ರಾದೇಶಿಕ ಮತ್ತು ರಾಷ್ಟ್ರೀಯ ಮಟ್ಟದ ಮಹತ್ವಾಕಾಂಕ್ಷೆಗಳನ್ನು ಮನದಲ್ಲಿಟ್ಟುಕೊಂಡು ಜನರಿಗೆ ಸುಲಭವಾಗಿ ಸಮಗ್ರ ಶೈಕ್ಷಣಿಕ ವ್ಯವಸ್ಥೆ ಕಲ್ಪಿಸುವ ಉದ್ದೇಶದಿಂದ ಎನ್‌ಇಪಿ ಜಾರಿಗೊಳಿಸಲಾಗಿದೆ. ಎನ್‌ಇಪಿಯ 22ನೇ ಅಧ್ಯಾಯದಲ್ಲಿ ಭಾರತದ ಭಾಷೆಗಳು, ಕಲೆ ಮತ್ತು ಸಂಸ್ಕೃತಿ ಪ್ರಚಾರದ ಬಗ್ಗೆ ಹೇಳಲಾಗಿದ್ದು, ಈ ಅಧ್ಯಾಯವನ್ನು ಭಾರತೀಯ ಭಾಷೆ ಮತ್ತು ಪ್ರಾದೇಶಿಕ ಭಾಷೆಗಳ ಪ್ರಚಾರಕ್ಕೆ ಮೀಸಲಿಡಲಾಗಿದೆ. ಇದೇ ಅಧ್ಯಾಯದಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳು ಮಾತೃಭಾಷೆ ಅಥವಾ ಸ್ಥಳೀಯ ಭಾಷೆಯನ್ನು ಬೋಧನಾ ಭಾಷೆಯನ್ನಾಗಿ ಬಳಕೆ ಮಾಡಬಹುದಾಗಿದ್ದು, ದ್ವಿಭಾಷೆಗೆ ಅವಕಾಶವಿದೆ. ಎನ್‌ಇಪಿ ನಿಯಮಗಳಲ್ಲಿ ಯಾವುದೇ ಭಾಷೆಯನ್ನು ಕಡ್ಡಾಯಗೊಳಿಸುವ ಸಂಬಂಧ ಉಲ್ಲೇಖಗಳಿಲ್ಲ. ಆದ್ದರಿಂದ, ಎನ್‌ಇಪಿ ನಿಯಮಗಳನ್ನು ಮರು ವ್ಯಾಖ್ಯಾನಿಸುವ ಅಗತ್ಯ ಉದ್ಭವಿಸುವುದಿಲ್ಲ ಎಂದು ಜ.22ರಂದು ಹೈಕೋರ್ಟ್‌ಗೆ ಸಲ್ಲಿಸಿದ್ದ ಪ್ರಮಾಣಪತ್ರದಲ್ಲಿ ಕೇಂದ್ರ ಸರ್ಕಾರ ತಿಳಿಸಿತ್ತು.

ಆಧಾರ: ವಿಜಯವಾಣಿ, ದಿನಾಂಕ: 07.04.2022

# ಭಾಗ – 6

# ನ್ಯಾಯಾಲಯದ ಸುದ್ದಿಗಳು

## 1. ಮೀಸಲು ಗಿಫ್ಟ್‌ಗೆ ಲಗಾಮು

ತಮಿಳುನಾಡಿನಲ್ಲಿ ವನ್ನಿಯಾರ್ ಸಮುದಾಯಕ್ಕೆ ಸರ್ಕಾರಿ ಉದ್ಯೋಗ ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ಶೇ.10.5ರಷ್ಟು ಮೀಸಲಾತಿ ನೀಡಲು ರಾಜ್ಯ ಸರ್ಕಾರ ಜಾರಿಗೆ ತಂದಿದ್ದ ಕಾಯಿದೆ ರದ್ದುಗೊಳಿಸಿ ಮದ್ರಾಸ್ ಹೈಕೋರ್ಟ್ ನೀಡಿದ್ದ ತೀರ್ಪನ್ನು ಸುಪ್ರೀಂಕೋರ್ಟ್ ಎತ್ತಿ ಹಿಡಿದಿದೆ. ರಾಜ್ಯ ಸರ್ಕಾರ ಜಾರಿಗೆ ತಂದಿರುವ ಕಾಯಿದೆಯು 'ಅಸಾಂವಿಧಾನಿಕ' ಎಂದು ತಿಳಿಸಿದೆ.

ಕರ್ನಾಟಕವೂ ಸೇರಿದಂತೆ ಹಲವು ರಾಜ್ಯಗಳಲ್ಲಿ ಮೀಸಲು ಹೆಚ್ಚಳಕ್ಕಾಗಿ ಮತ್ತು ಒಳಮೀಸಲಿಗಾಗಿ ಹೋರಾಟ ನಡೆಯುತ್ತಿರುವ ಹಿನ್ನೆಲೆಯಲ್ಲಿ ಸುಪ್ರೀಂಕೋರ್ಟ್‌ನ ಈ ತೀರ್ಪು ಮಹತ್ವ ಪಡೆದಿದೆ.

ಮದ್ರಾಸ್ ಹೈಕೋರ್ಟ್ ತೀರ್ಪು ಪ್ರಶ್ನಿಸಿ ತಮಿಳುನಾಡು ಸರ್ಕಾರ ಸಲ್ಲಿಸಿದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಎಲ್.ನಾಗೇಶ್ವರ ರಾವ್ ಹಾಗೂ ಬಿ.ಆರ್.ಗವಾಯಿ ಅವರಿದ್ದ ಪೀಠವು ಮೀಸಲಾತಿಯನ್ನು ರದ್ದುಗೊಳಿಸಿದೆ.

"ವಹ್ನಿಕುಲ ಕ್ಷತ್ರಿಯ (ವನ್ನಿಯಾರ್) ಸಮುದಾಯವನ್ನು 115 ಅತಿ ಹಿಂದುಳಿದ ಸಮುದಾಯ (ಎಂಬಿಸಿ)ಗಳಿಂದ ವಿಭಿನ್ನ ಎಂದು ಗುರುತಿಸಲು ಆಗುವುದಿಲ್ಲ. ಹಾಗಾಗಿ, ರಾಜ್ಯ ಸರ್ಕಾರವು ವನ್ನಿಯಾರ್ ಸಮುದಾಯಕ್ಕೆ ಶೇ.10.5ರಷ್ಟು ಮೀಸಲಾತಿ ನೀಡಲು 2021ರಲ್ಲಿ ಜಾರಿಗೆ ತಂದ ಕಾಯಿದೆಯು ಸಂವಿಧಾನದ 14,15 ಹಾಗೂ 16ನೇ ವಿಧಿಗಳ ಉಲ್ಲಂಘನೆಯಾಗುತ್ತದೆ. ಹಾಗಾಗಿ ಕಾಯಿದೆಯನ್ನು ರದ್ದುಗೊಳಿಸಲಾಗುತ್ತಿದೆ" ಎಂದು ಸ್ಪಷ್ಟಪಡಿಸಿದೆ.

**ರಾಜ್ಯದ ಮೀಸಲು ಕತೆ ಏನು**: ಸದ್ಯ ಮೀಸಲಿಗೆ ಪಂಚಮಸಾಲಿ, ಹಾಲು ಮತಸ್ಥರೂ ಸೇರಿ ನಾನಾ ಸಮುದಾಯದವರು ಹೋರಾಟ ನಡೆಸುತ್ತಿದ್ದಾರೆ. ವಿವಿಧ ಜಾತಿಗಳ ಮುಖಂಡರು ಆಗಾಗ ಸಮಾವೇಶ ನಡೆಸಿ ಒತ್ತಡ ಹೇರುತ್ತಿದ್ದಾರೆ. ಆದರೆ ರಾಜ್ಯ ಸರ್ಕಾರ ತಕ್ಷಣ ಯಾವುದೇ ಕ್ರಮ ಕೈಗೊಳ್ಳಲಾಗದೆ ಒದ್ದಾಡುತ್ತಿದೆ. ಪರಿಶೀಲನಾ ಸಮಿತಿ ರಚಿಸಿ, ಮುಂದಕ್ಕೆ ತಳ್ಳುತ್ತಿದೆ. ಒತ್ತಡಕ್ಕೆ ಸಿಲುಕಿ ಈಗ ಮೀಸಲು ಘೋಷಿಸಿದರೂ, ಜಾತಿ ಗಣತಿ ಮತ್ತಿತರರ ನಿಖರ ಅಂಕಿ ಸಂಖ್ಯೆ ಇಲ್ಲದಿದ್ದರೆ ಸುಪ್ರೀಂನಿಂದ ಮನ್ನಣೆ ಸಿಗದು ಎಂಬ ಅಭಿಪ್ರಾಯವಿದೆ.

| ದೇಶದಲ್ಲಿ ಮೀಸಲಾತಿ | | ತಮಿಳುನಾಡಲ್ಲಿ ಮೀಸಲು | |
|---|---|---|---|
| ಸಮುದಾಯ/ವರ್ಗ | ಪ್ರಮಾಣ | ಸಮುದಾಯ | ಪ್ರಮಾಣ |
| ಎಸ್.ಸಿ | 15% | ಹಿಂದುಳಿದ ವರ್ಗ | 30% |
| ಎಸ್.ಟಿ | 7.5% | ಎಂಬಿಸಿ ಡಿಎನ್‌ಸಿ | 20% |
| ಒಬಿಸಿ | 27% | | |
| ಇಡಬ್ಲ್ಯೂಎಸ್ | 10% | ಎಸ್.ಸಿ | 18% |
| ವಿಶಿಷ್ಟಚೇತನರು | 04% | ಎಸ್.ಟಿ | 01% |

**ಇತ್ತೀಚಿನ ಸುಪ್ರೀಂ ತೀರ್ಪುಗಳು**

- ಮಹಾರಾಷ್ಟ್ರದಲ್ಲಿ ಮರಾಠ ಸಮುದಾಯಕ್ಕೆ ನೀಡಿದ್ದ ಶೇ.50ರಷ್ಟು ಮೀಸಲಾತಿಯನ್ನು 2021ರ ಮೇನಲ್ಲಿ ರದ್ದುಗೊಳಿಸಿದ ಸುಪ್ರೀಂಕೋರ್ಟ್.
- ಮಹರಾಷ್ಟ್ರದ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಒಬಿಸಿಗಳಿಗೆ ಶೇ.27ರಷ್ಟು ಮೀಸಲಾತಿ ನೀಡಲು ಸರ್ಕಾರ ಯತ್ನ, ಸರ್ವೋಚ್ಚ ನ್ಯಾಯಾಲಯ ತಡೆ.
- ಎಸ್.ಸಿ/ಎಸ್.ಟಿಯವರಿಗೆ ಬಡ್ತಿಯಲ್ಲಿ ಮೀಸಲು ನೀಡುವ ಮಾನದಂಡ ರೂಪಿಸಲು ಇದೇ ವರ್ಷದ ಜನವರಿಯಲ್ಲಿ ಕೋರ್ಟ್ ನಕಾರ.

| **ಪ್ರಮುಖ ರಾಜ್ಯಗಳಲ್ಲಿ ಮೀಸಲು** | | | |
|---|---|---|---|
| **ರಾಜ್ಯ** | **ಎಸ್‌ಸಿ** | **ಎಸ್‌ಟಿ** | **ಒಬಿಸಿ** |
| ಕರ್ನಾಟಕ | 15 | 03 | 32 |
| ತಮಿಳುನಾಡು | 18 | 01 | 50 |
| ಮಧ್ಯಪ್ರದೇಶ | 16 | 20 | 27 |
| ಮಹಾರಾಷ್ಟ್ರ | 19 | 13 | 19 |
| ಆಂಧ್ರಪ್ರದೇಶ | 15 | 06 | 27 |
| ಕೇರಳ | 08 | 02 | 40 |

ರಾಜ್ಯ ಸರ್ಕಾರಗಳು ಮೀಸಲಾತಿ ನೀಡುವ ಅಧಿಕಾರದ ಕುರಿತು ವಿವರಿಸಿದ ನ್ಯಾಯಾಲಯವು **"**ಆಯಾ ರಾಜ್ಯ ಸರ್ಕಾರಗಳು ಮೀಸಲಾತಿ ಕಲ್ಪಿಸುವ ಅಧಿಕಾರವನ್ನು ನಿರ್ಬಂಧಿಸಲು ಆಗದು. ಸಂವಿಧಾನದ ಅಡಿಯಲ್ಲಿ ಮೀಸಲಾತಿ ಕಲ್ಪಿಸಬಹುದು. ಆದರೆ, ಅತಿ ಹಿಂದುಳಿದ ಸಮುದಾಯ ಹಾಗೂ ಡಿನೋಟಿಫೈಡ್ ಸಮುದಾಯ(ಡಿಎನ್‌ಸಿ)ಗಳಲ್ಲಿ ಒಳ ಮೀಸಲಾತಿ ನಿರ್ಧರಿಸುವಾಗ ಜಾತಿಯೇ ಆಧಾರವಾಗಬಾರದು**"** ಎಂದು ತಿಳಿಸಿದೆ.

ತಮಿಳುನಾಡಿನಲ್ಲಿ ವನ್ನಿಯಾರ್ ಸಮುದಾಯಕ್ಕೆ ಸರ್ಕಾರದ ಉದ್ಯೋಗ ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ಒಳ ಮೀಸಲಾತಿ ನೀಡುವ ದಿಸೆಯಲ್ಲಿ ಕಳೆದ ವರ್ಷದ ಫೆಬ್ರವರಿಯಲ್ಲಿ ಆಗ ಅಸ್ತಿತ್ವದಲ್ಲಿದ್ದ ಎಐಎಡಿಎಂಕೆ ಸರ್ಕಾರವು ವಿಧಾನಸಭೆಯಲ್ಲಿ ವಿಧೇಯಕ ಮಂಡಿಸಿ, ಅಂಗೀಕಾರ ಪಡೆದಿತ್ತು. ಬಳಿಕ ಬಂದ ಡಿಎಂಕೆ ಸರ್ಕಾರವು ಕಳೆದ ವರ್ಷದ ಜುಲೈನಲ್ಲಿ ಕಾಯಿದೆ ಜಾರಿಗೆ ಆದೇಶ ಹೊರಡಿಸಿತ್ತು. ಆದರೆ, ರಾಜ್ಯದಲ್ಲಿ ಅತಿ ಹಿಂದುಳಿದ ಸಮುದಾಯಗಳು ಹಾಗೂ ಡಿನೋಟಿಫೈಡ್ ಸಮುದಾಯಗಳಿಗೆ ನೀಡಲಾಗಿರುವ ಮೀಸಲಾತಿಯಲ್ಲೇ ವನ್ನಿಯಾರ್ ಸಮುದಾಯಕ್ಕೆ ಶೇ.10.5ರಷ್ಟು ಮೀಸಲಾತಿ ನೀಡಿದ ಕಾರಣ ಕಳೆದ ವರ್ಷದ ನವೆಂಬರ್‌ನಲ್ಲಿ ಮದ್ರಾಸ್ ಹೈಕೋರ್ಟ್ ಕಾಯಿದೆಯನ್ನು ರದ್ದುಗೊಳಿಸಿತ್ತು.

**ಏನಿದು ವಿವಾದ**: ತಮಿಳುನಾಡು ಸರ್ಕಾರವು ಏಕಾಏಕಿ ವನ್ನಿಯಾರ್ ಸಮುದಾಯದವರಿಗೆ ಮೀಸಲಾತಿ ನೀಡುವ ಕುರಿತು ಕಾಯಿದೆ ಜಾರಿಗೆ ತಂದಿರಲಿಲ್ಲ. ತಮಿಳುನಾಡು ಹಿಂದುಳಿದ ವರ್ಗಗಳ ಆಯೋಗವು ಅತಿ ಹಿಂದುಳಿದ ಹಾಗೂ ಡಿನೋಟಿಫೈಡ್ ಸಮುದಾಯಗಳಿಗೆ ನೀಡಿರುವ ಶೇ.20ರಷ್ಟು ಮೀಸಲಾತಿ ವಿಭಾಗಿಸಿ, ಅತಿ ಹಿಂದುಳಿದ ಸಮುದಾಯಗಳಿಗೆ ಶೇ.10.5ರಷ್ಟು ಮೀಸಲಾತಿ ನೀಡಬೇಕು ಎಂದು ಶಿಫಾರಸ್ಸು ಮಾಡಿತ್ತು. ಹಾಗೆಯೇ, 68 ಡಿಎನ್‌ಸಿಗಳಿಗೆ ಮತ್ತು 25 ಇತರೆ ಎಂಬಿಸಿಗಳಿಗೆ (ಒಟ್ಟು

93 ಜಾತಿಗಳಿಗೆ) ಶೇ.7ರಷ್ಟು ಹಾಗೂ ಇತರೆ 22 ಎಂಬಿಸಿಗಳಿಗೆ ಶೇ2.5ರಷ್ಟು ಮೀಸಲಾತಿ ನೀಡಬೇಕು ಎಂದು ಶಿಫಾರಸ್ಸು ಮಾಡಿತ್ತು.

ಆಧಾರ:–ವಿಜಯವಾಣಿ, ದಿನಾಂಕ:01.04.2022

## 2. ನ್ಯಾಯಾಲಯದಲ್ಲಿ ಸ್ಥಳೀಯ ಭಾಷೆ ಬಳಕೆ

ಕೋರ್ಟ್‌ಗಳಲ್ಲಿ ಸ್ಥಳೀಯ ಭಾಷೆ ಬಳಕೆಯನ್ನು ಪ್ರಧಾನಿ ಹಾಗೂ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಎನ್.ವಿ.ರಮಣ ಅವರು ಪ್ರಬಲವಾಗಿ ಪ್ರತಿಪಾದಿಸಿದ್ದಾರೆ. 'ಹಿಂದಿ ಹೇರಿಕೆ' ವಿಚಾರವಾಗಿ ದೇಶದಲ್ಲಿ ತೀವ್ರ ಚರ್ಚೆ ನಡೆಯುತ್ತಿರುವ ಈ ಸಂದರ್ಭದಲ್ಲಿಯೇ ಈ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದ್ದಾರೆ.

ಕೋರ್ಟ್‌ಗಳಲ್ಲಿ ಸ್ಥಳೀಯ ಭಾಷೆ ಬಳಕೆಯಿಂದ ನ್ಯಾಯಾಂಗ ವ್ಯವಸ್ಥೆಯಲ್ಲಿ ಜನರಿಗೆ ನಂಬಿಕೆ ಹೆಚ್ಚುತ್ತದೆ. ವ್ಯವಸ್ಥೆಯ ಜೊತೆಗೆ ಸಂಪರ್ಕ ಸಾಧಿಸಲು ಅವರಿಗೆ ಸಾಧ್ಯವಾಗುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಅಭಿಪ್ರಾಯಪಟ್ಟಿದ್ದಾರೆ. ನ್ಯಾಯಾಂಗ ವ್ಯವಸ್ಥೆಯಲ್ಲಿ ಸ್ಥಳೀಯ ಭಾಷೆಗಳ ಬಳಕೆ ಆರಂಭಿಸಲು ಇದು ಸಕಾಲ ಎಂದು ಸಿಜೆಐ ರಮಣ ಅಭಿಪ್ರಾಯಪಟ್ಟಿದ್ದಾರೆ.

ಮುಖ್ಯಮಂತ್ರಿಗಳು ಹಾಗೂ ಹೈಕೋರ್ಟ್ ಮುಖ್ಯನ್ಯಾಯಮೂರ್ತಿಗಳ ಜಂಟಿ ಸಮಾವೇಶದ ಉದ್ಘಾಟನಾ ಸಮಾಂಭದಲ್ಲಿ ಪ್ರಧಾನಿ ಮಾತನಾಡಿದರು. ನ್ಯಾಯಾಂಗ ವ್ಯವಸ್ಥೆಯಲ್ಲಿ ಎರಡು ರೀತಿಯ ಭಾಷಾ ಬಳಕೆಯಿದ್ದು, ಒಂದು ಕಾನೂನು ಪರಿಭಾಷೆಗಳುಳ್ಳ ಭಾಷೆಯದ್ದು ಒಂದು ಮಾದರಿ. ಮತ್ತೊಂದು ಮಾದರಿಯು ಸಾಮಾನ್ಯ ಜನರು ಅರ್ಥ ಮಾಡಿಕೊಳ್ಳುವ ಸರಳ ಭಾಷೆಯಾಗಿದೆ. ಹಲವು ದೇಶಗಳಲ್ಲಿ ನಡೆಯುತ್ತಿರುವ ನ್ಯಾಯದಾನ ವಿಧಾನಗಳನ್ನು ಗಮನಿಸಿದರೆ, ಎರಡೂ ರೀತಿಯ ಮಾದರಿಗಳು ಕಾನೂನು ಪ್ರಕಾರ ಸ್ವೀಕಾರಾರ್ಹವಾಗಿವೆ ಎಂದು ಪ್ರಧಾನಿ ವಿವರಿಸಿದರು.

**ಭಾಷಾ ಪ್ರಾವೀಣ್ಯವೇ ಮುಖ್ಯವಲ್ಲ**: ಪ್ರಧಾನಿ ಭಾಷಣಕ್ಕೂ ಮುನ್ನ ಮಾತನಾಡಿದ ಸಿಜೆಐ ಅವರು ಸ್ಥಳೀಯ ಭಾಷೆಗಳ ಪರವಾಗಿ ದನಿ ಎತ್ತಿದರು. ಸಾಂವಿಧಾನಿಕ ನ್ಯಾಯಾಲಯಗಳ ಮುಂದೆ ಮಂಡಿಸುವ ವಾದವು ಬುದ್ಧಿವಂತಿಕೆ ಮತ್ತು ಕಾನೂನಿನ ತಿಳಿವಳಿಕೆಯ ಆಧಾರದಲ್ಲಿ ಇರಬೇಕು. ಭಾಷಾ ಪ್ರಾವೀಣ್ಯವಷ್ಟೇ ಇಲ್ಲಿ ಮುಖ್ಯವಲ್ಲ ಎಂದು ಹೇಳಿದ್ದಾರೆ.

'ಪ್ರಜಾಪ್ರಭುತ್ವದ ಇತರ ಸಂಸ್ಥೆಗಳ ರೀತಿಯಲ್ಲೇ ನ್ಯಾಯಾಂಗ ಸಹ ಸಮಾಜ ಮತ್ತು ಭೌಗೋಳಿಕ ವೈವಿಧ್ಯವನ್ನು ಪ್ರತಿ ಬಿಂಬಿಸಬೇಕು. ಹೈಕೋರ್ಟ್‌ಗಳಲ್ಲಿ ಸ್ಥಳೀಯ ಭಾಷೆ ಬಳಸಬೇಕು ಎಂಬ ಬಗ್ಗೆ ನನಗೆ ಸಾಕಷ್ಟು ಅಹವಾಲುಗಳು ಬಂದಿವೆ. ಈ ಬೇಡಿಕೆ ಬಗ್ಗೆ ನಿರ್ಧಾರ ತೆಗೆದುಕೊಳ್ಳುವ ಸಮಯ ಬಂದಿದೆ' ಎಂದು ರಮಣ ಹೇಳಿದರು.

ಆಧಾರ:–ಪ್ರಜಾವಾಣಿ, ದಿನಾಂಕ:01.05.2022

## 3. ಮೀಸಲಾತಿ ತೊಡಕು ನಿವಾರಣೆಗೆ ನ್ಯಾಯ ಮೂರ್ತಿ ಭಕ್ತವತ್ಸಲ ನೇತೃತ್ವದ ಆಯೋಗ

ಹಿಂದುಳಿದ ವರ್ಗಗಳಿಗೆ ಸ್ಥಳೀಯ ಸಂಸ್ಥೆಗಳಲ್ಲಿ ನೀಡಿರುವ ಮೀಸಲಾತಿಯನ್ನು ಖಾತರಿಪಡಿಸಲು ಆಯಾ ಸಮುದಾಯಗಳ ರಾಜಕೀಯ ಹಿಂದುಳಿದಿರುವಿಕೆಯನ್ನು ಗುರುತಿಸಲು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಕೆ.ಭಕ್ತವತ್ಸಲ ನೇತೃತ್ವದಲ್ಲಿ ಆಯೋಗ ರಚಿಸಿ ಆದೇಶ ಹೊರಡಿಸಲಾಗಿದೆ.

ನಿವೃತ್ತ ಐಎಎಸ್ ಅಧಿಕಾರಿ ಸಿ.ಆರ್.ಚಿಕ್ಕಮಠ ಅವರನ್ನು ಆಯೋಗದ ಸದಸ್ಯರನ್ನಾಗಿ ನೇಮಿಸಲಾಗಿದೆ. ಹಿಂದುಳಿದ ವರ್ಗಗಳಿಗೆ ರಾಜಕೀಯ ಮೀಸಲಾತಿ ಕಲ್ಪಿಸಲು ಉಂಟಾಗಿರುವ ತೊಡಕು ನಿವಾರಣೆಗೆ ಮಾರ್ಚ್, 31 ರಂದು ನಡೆದ ಸರ್ವಪಕ್ಷ ಸಭೆಯ ನಿರ್ಧಾರದಂತೆ ಆಯೋಗ ರಚಿಸಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಆದೇಶ ಹೊರಡಿಸಿದೆ.

ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ಸಮುದಾಯಗಳ ರಾಜಕೀಯ ಹಿಂದುಳಿದಿರುವಿಕೆಯನ್ನು ಗುರುತಿಸುವುದು ಮತ್ತು ಈ ಸಮುದಾಯಗಳಿಗೆ ರಾಜಕೀಯ ಮೀಸಲಾತಿ ಕಲ್ಪಿಸುವ ಸಂಬಂಧ

ಅಧ್ಯಯನ ನಡೆಸಿ ಶಿಫಾರಸ್ಸು ಮಾಡುವ ಜವಾಬ್ದಾರಿಯನ್ನು ಆಯೋಗಕ್ಕೆ ನೀಡಲಾಗಿದೆ. ಆಯೋಗವು ತನ್ನ ಕೆಲಸವನ್ನು ಪೂರ್ಣಗೊಳಿಸಲು ಯಾವುದೇ ಕಾಲಮಿತಿ ವಿಧಿಸಿಲ್ಲ.

'ನಿಖರವಾದ ಅಂಕಿಅಂಶಗಳ ಆಧಾರದಲ್ಲಿ ಮೂರು ಹಂತದ ಪರಿಶೀಲನೆ ನಡೆಸಿ ಆಯಾ ಸಮುದಾಯಗಳ ರಾಜಕೀಯ ಹಿಂದುಳಿದಿರುವಿಕೆಯನ್ನು ಖಾತರಿಪಡಿಸಿದ ಬಳಿಕವೇ ರಾಜಕೀಯ ಮೀಸಲಾತಿ ನೀಡಬೇಕು' ಎಂದು ಸುಪ್ರೀಂಕೋರ್ಟ್ 2010ರಲ್ಲಿ ತೀರ್ಪು ನೀಡಿತ್ತು. 2021ರ ಮಾರ್ಚ್‌ನಲ್ಲಿ ಸುಪ್ರೀಂಕೋರ್ಟ್ ಇದನ್ನು ಪುನರುಚ್ಚರಿಸಿತ್ತು. 2022ರ ಜನವರಿಯಲ್ಲಿ ಮಹಾರಾಷ್ಟ್ರ ಹಾಗೂ ಮಧ್ಯಪ್ರದೇಶ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಮೂರು ಹಂತದ ಪರಿಶೀಲನೆ ಇಲ್ಲದೆ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡಲು ಅವಕಾಶ ನಿರಾಕರಿಸಿತ್ತು. ಈ ಆದೇಶ ಇಡೀ ದೇಶಕ್ಕೆ ಅನ್ವಯವಾಗುತ್ತದೆ ಎಂದು ಸುಪ್ರೀಂಕೋರ್ಟ್ ಹೇಳಿತ್ತು.

ರಾಜ್ಯದಲ್ಲಿ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಬಿಬಿಎಂಪಿ ಸೇರಿದಂತೆ ಹಲವು ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ಬಾಕಿ ಇವೆ. ಮೂರು ಹಂತದ ಪರಿಶೀಲನೆ ನಡೆಸದಿದ್ದರೆ, ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡಲು ಸಾಧ್ಯವಿಲ್ಲ. ಈ ಕಾರಣದಿಂದ ಮೂರು ಹಂತದ ಪರಿಶೀಲನೆಯ ಭಾಗವಾಗಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನೇತೃತ್ವದ ಆಯೋಗ ರಚಿಸಲಾಗಿದೆ.

ಆಧಾರ:–ಪ್ರಜಾವಾಣಿ, ದಿನಾಂಕ:09.05.2022

## 4. ಸ್ಥಳೀಯ ಸಂಸ್ಥೆ ಚುನಾವಣೆ ನಡೆಸಿ

ಮೂರು ಹಂತದ ಪರಿಶೀಲನೆ ಇಲ್ಲದೆ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡಲು ಸಾಧ್ಯವಿಲ್ಲ. ಆದರೆ, ಸ್ಥಳೀಯ ಸಂಸ್ಥೆಗಳ ಅಧಿಕಾರ ಅವಧಿ ಪೂರ್ಣಗೊಂಡ ನಂತರ ನಿರ್ವಾತ ಸೃಷ್ಟಿಯಾಗಲು ಬಿಡದೇ ಚುನಾವಣೆ ನಡೆಸುವುದು ರಾಜ್ಯಗಳ ಸಾಂವಿಧಾನಿಕ ಹೊಣೆಗಾರಿಕೆಯಾಗಿದೆ ಎಂದು ಸುಪ್ರೀಂಕೋರ್ಟ್ ಹೇಳಿದೆ.

ಮಧ್ಯಪ್ರದೇಶದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವುದಕ್ಕೆ ಸಂಬಂಧಿಸಿದ ಅರ್ಜಿಯ ವಿಚಾರಣೆ ವೇಳೆ, ನ್ಯಾಯಮೂರ್ತಿ ಎ.ಎಂ. ಖಾನ್ವಿಲ್ಕರ್ ನೇತೃತ್ವದ ನ್ಯಾಯಪೀಠ ಈ ವಿಷಯವನ್ನು ಸ್ಪಷ್ಟಪಡಿಸಿತು. ನ್ಯಾಯಮೂರ್ತಿಗಳಾದ ಅಭಯ್, ಎಸ್.ಓಕಾ ಹಾಗೂ ಸಿ.ಟಿ.ರವಿಕುಮಾರ್ ಈ ಪೀಠದಲ್ಲಿದ್ದಾರೆ.

ರಾಜ್ಯದ 23,263 ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವ ಸಂಬಂಧ ಎರಡು ವಾರಗಳ ಒಳಗಾಗಿ ಅಧಿಸೂಚನೆ ಹೊರಡಿಸುವಂತೆ ಮಧ್ಯಪ್ರದೇಶ ರಾಜ್ಯ ಚುನಾವಣಾ ಆಯೋಗಕ್ಕೆ ಸೂಚಿಸಿದ ನ್ಯಾಯಪೀಠ, ವಿಚಾರಣೆಯನ್ನು ಜುಲೈ 12 ಕ್ಕೆ ಮುಂದೂಡಿತು.

ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಂಬಂಧಿಸಿದ ಮಧ್ಯಪ್ರದೇಶ ಹೈಕೋರ್ಟ್‌ನಲ್ಲಿ ಕೆಲ ಅರ್ಜಿಗಳ ವಿಚಾರಣೆ ಬಾಕಿ ಇದೆ. ಕೆಲ ಅರ್ಜಿಗಳಿಗೆ ಸಂಬಂಧಿಸಿ ಮಧ್ಯಂತರ ಆದೇಶಗಳನ್ನು ಹೊರಡಿಸಲಾಗಿದ್ದು, ಇವು ಚುನಾವಣೆ ಅಧಿಸೂಚನೆ ಪ್ರಕಟಿಸಲು ಅಡ್ಡಿಯಾಗಬಹುದು ಎಂಬುದಾಗಿ ರಾಜ್ಯ ಚುನಾವಣಾ ಆಯೋಗದ ಪರ ವಕೀಲರು ನ್ಯಾಯಪೀಠದ ಗಮನಕ್ಕೆ ತಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ಈ ವಿಷಯವಾಗಿ ಸುಪ್ರೀಂಕೋರ್ಟ್ ನೀಡುವ ಆದೇಶ ಮತ್ತು ನಿರ್ದೇಶನಗಳನ್ನು ರಾಜ್ಯ ಚುನಾವಣಾ ಆಯೋಗ ಪಾಲಿಸಬೇಕು. ಹೈಕೋರ್ಟ್ ಅಥವಾ ಸಿವಿಲ್ ನ್ಯಾಯಾಲಯ ನೀಡುವ ಆದೇಶಗಳಿಂದ ಪ್ರಭಾವಕ್ಕೆ ಒಳಗಾಗಬಾರದು ಎಂದು ಸೂಚಿಸಿತು.

ಒಂದು ವೇಳೆ ಮಧ್ಯಪ್ರದೇಶ ಹೈಕೋರ್ಟ್ ಅಥವಾ ಸಿವಿಲ್ ಕೋರ್ಟ್ ಯಾವುದಾದರೂ ಆದೇಶ ನೀಡಿದಲ್ಲಿ ಅಥವಾ ನೀಡುವುದಿದ್ದರೆ ಹಾಗೂ ಅದು ಸುಪ್ರೀಂಕೋರ್ಟ್‌ನ ನಿರ್ದೇಶನಕ್ಕೆ ವಿರುದ್ಧವಾಗಿದ್ದಲ್ಲಿ, ಅಂಥ ಆದೇಶವು ವಜಾಗೊಂಡಿದೆ ಎಂದೇ ಭಾವಿಸಬೇಕು. ಅಲ್ಲದೇ ಸುಪ್ರೀಂಕೋರ್ಟ್‌ನ ಪೂರ್ವಾನುಮತಿ ಇಲ್ಲದೇ ಯಾವುದೇ ಕ್ರಮ ಕೈಗೊಳ್ಳಬಾರದು ಎಂದು ನ್ಯಾಯಪೀಠ ಸೂಚಿಸಿತು.

**ಎಲ್ಲಾ ರಾಜ್ಯಗಳಿಗೆ ಅನ್ವಯ**:ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಂಬಂಧಿಸಿದ ಸುಪ್ರೀಂಕೋರ್ಟ್‌ನ ಈ ಆದೇಶ ಹಾಗೂ ನಿರ್ದೇಶನಗಳು ಮಧ್ಯಪ್ರದೇಶ ಹಾಗೂ ಮಹಾರಾಷ್ಟ್ರಕ್ಕೆ ಮಾತ್ರ ಸೀಮಿತವಲ್ಲ. ಎಲ್ಲಾ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಹಾಗೂ ಸಂಬಂಧಿಸಿದ ಚುನಾವಣಾ ಆಯೋಗಗಳಿಗೆ ಅನ್ವಯ ಎಂದೂ ನ್ಯಾಯಪೀಠ ಸ್ಪಷ್ಟಪಡಿಸಿದೆ.

‘ನಿಖರವಾದ ಅಂಕಿಅಂಶಗಳ ಆಧಾರದಲ್ಲಿ ಮೂರು ಹಂತದ ಪರಿಶೀಲನೆ ನಡೆಸಿ, ಆಯಾ ಸಮುದಾಯಗಳ ರಾಜಕೀಯ ಹಿಂದುಳಿದಿರುವಿಕೆಯನ್ನು ಖಾತರಿಪಡಿಸಿದ ಬಳಿಕವೇ ರಾಜಕೀಯ ಮೀಸಲಾತಿ ನೀಡಬೇಕು’ ಎಂದು ಸುಪ್ರೀಂಕೋರ್ಟ್ 2010ರಲ್ಲಿ ತೀರ್ಪು ನೀಡಿತ್ತು. 2021ರ ಮಾರ್ಚ್‌ನಲ್ಲೂ ಇದನ್ನು ಪುನರುಚ್ಚರಿಸಿತ್ತು.

ರಾಜ್ಯದ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಲು ಎರಡು ವಾರಗಳ ಒಳಗಾಗಿ ಅಧಿಸೂಚನೆ ಹೊರಡಿಸುವಂತೆ ಮಹಾರಾಷ್ಟ್ರದ ರಾಜ್ಯ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಿ ಮೇ 4 ರಂದು ಸುಪ್ರೀಂಕೋರ್ಟ್ ಆದೇಶಿಸಿತ್ತು.

**ಕೋರ್ಟ್ ಹೇಳಿದ್ದೇನು :**

- ಮೂರು ಹಂತದ ಪರಿಶೀಲನೆ ಕ್ಷೇತ್ರಗಳ ಪುನರ್‌ವಿಂಗಡಣೆ ಎಂಬುದು ನಿರಂತರ ಹಾಗೂ ಸಂಕೀರ್ಣವಾದ ಪ್ರಕ್ರಿಯೆ.
- ಅವಧಿ ಮುಗಿದ ಸ್ಥಳೀಯ ಸಂಸ್ಥೆಗಳಲ್ಲಿ ನೂತನ ಚುನಾಯಿತ ಮಂಡಳಿ ಇರಬೇಕಾದುದು ಅಗತ್ಯ.
- ಮೂರು ಹಂತದ ಪರಿಶೀಲನೆ ಪೂರ್ಣಗೊಳ್ಳುವವರೆಗೆ, ಹಿಂದುಳಿದ ವರ್ಗಗಳಿಗೆ ಮೀಸಲಾದ ಸ್ಥಾನಗಳನ್ನು ಸಾಮಾನ್ಯ ವರ್ಗಕ್ಕೆ ನೀಡಿ ಅಧಿಸೂಚನೆ ಹೊರಡಿಸಬೇಕು.

**‘ಮೀಸಲಾತಿ ಉದ್ದೇಶ, ಸ್ವರೂಪ ಬೇರೆಯಾಗಿವೆ’**: ಸ್ಥಳೀಯ ಸಂಸ್ಥೆಗಳಲ್ಲಿ ನೀಡಲಾಗಿರುವ ಮೀಸಲಾತಿಯ ಸ್ವರೂಪ ಹಾಗೂ ಉದ್ದೇಶವೇ ಬೇರೆ, ಶಿಕ್ಷಣ ಹಾಗೂ ಉದ್ಯೋಗದಲ್ಲಿ ನೀಡಿರುವ ಮೀಸಲಾತಿಯೇ ಬೇರೆ ಎಂಬುದನ್ನು ಸುಪ್ರೀಂಕೋರ್ಟ್‌ನ ಸಾಂವಿಧಾನಿಕ ಪೀಠ ಈಗಾಗಲೇ ವ್ಯಾಖ್ಯಾನಿಸಿದೆ.

ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡುವುದಕ್ಕೆ ಸಂಬಂಧಿಸಿ ಮೂರು ಹಂತದ ಪರಿಶೀಲನೆ ಪ್ರಕ್ರಿಯೆ ಪೂರ್ಣಗೊಂಡ ನಂತರ, ಭವಿಷ್ಯದಲ್ಲಿ ನಡೆಯುವ ಚುನಾವಣೆಗಳಿಗೆ ಮೀಸಲಾತಿಯನ್ನು ಪರಿಗಣಿಸಬಹುದು. ಆದರೆ, ಸಾಂವಿಧಾನಿಕ ಹೊಣೆಗಾರಿಕೆ ದೃಷ್ಟಿಯಿಂದ ನೋಡಿದಾಗ, ಚುನಾವಣೆಗಳು ನಡೆಯಲೇಬೇಕು ಹಾಗೂ ಯಾವುದೇ ಕಾರಣಕ್ಕೂ ವಿಳಂಬ ಮಾಡಬಾರದು ಎಂದು ನ್ಯಾಯಪೀಠ ಹೇಳಿತು.

**‘ಎಲ್ಲಾ ಚುನಾವಣೆಗಳಿಗೂ ಸಿದ್ಧ’**: ಬಿಬಿಎಂಪಿ, ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಸೇರಿ ಎಲ್ಲ ಚುನಾವಣೆಗಳಿಗೂ ಬಿಜೆಪಿ ಸಿದ್ಧವಿದೆ ಎಂದು ಮುಖ್ಯಮಂತ್ರಿಯವರು ಹೇಳಿದ್ದಾರೆ.

ಮಧ್ಯಪ್ರದೇಶ ರಾಜ್ಯದ ಸ್ಥಳೀಯ ಸಂಸ್ಥೆ ಚುನಾವಣೆ ಬಗ್ಗೆ ಸುಪ್ರೀಂಕೋರ್ಟ್ ನೀಡಿರುವ ತೀರ್ಪಿನ ಬಗ್ಗೆ ನವದೆಹಲಿಯಲ್ಲಿ ಸುದ್ದಿಗಾರರಿಗೆ ಅವರು ಪ್ರತಿಕ್ರಿಯಿಸಿದರು.

ಕಾಂಗ್ರೆಸ್‌ನವರು ಚುನಾವಣೆಗೆ ಸಿದ್ಧರಿದ್ದಾರೆಯೇ ಎಂದು ಪ್ರಶ್ನಿಸಿದ್ದಾರೆ. ನಾವು ಎಲ್ಲ ಚುನಾವಣೆಗಳಿಗೂ ಸಿದ್ಧರಿದ್ದೇವೆ. ಚುನಾವಣೆಗೆ ಹಿಂದೇಟು ಹಾಕುವುದಿಲ್ಲ. ಕಾಂಗ್ರೆಸ್ ಪಕ್ಷ ಅವರದ್ದನ್ನು ಅವರು ನೋಡಿಕೊಳ್ಳಲಿ ಎಂದರು.

**ತೀರ್ಪಿನ ಅಧ್ಯಯನ**: ಮಧ್ಯಪ್ರದೇಶ ಸ್ಥಳಿಯ ಸಂಸ್ಥೆ ಚುನಾವಣೆ ಬಗ್ಗೆ ಸುಪ್ರೀಂಕೋರ್ಟ್ ನೀಡಿರುವ ಆದೇಶವನ್ನು ಕಾನೂನು ಇಲಾಖೆ ಮತ್ತು ಅಡ್ವೋಕೇಟ್ ಜನರಲ್ ಅವರಿಗೆ ಸಂಪೂರ್ಣ ಅಧ್ಯಯನ ಮಾಡುವಂತೆ ತಿಳಿಸಿದ್ದೇನೆ ಎಂದು ಬಸವರಾಜ ಬೊಮ್ಮಾಯಿ ಹೇಳಿದರು.

'ಸುಪ್ರೀಂಕೋರ್ಟ್ ಆದೇಶದ ಪ್ರತಿ ನಮಗೆ ಬಂದಿಲ್ಲ. ನ್ಯಾಯಾಲಯ ಮತ್ತು ಚುನಾವಣಾ ಆಯೋಗ ಏನು ತೀರ್ಮಾನ ಮಾಡುತ್ತವೆಯೋ ಅದನ್ನು ಪಾಲಿಸಬೇಕಾಗುತ್ತದೆ. ಸುಪ್ರೀಂಕೋರ್ಟ್ ಆದೇಶ ಎಲ್ಲಾ ರಾಜ್ಯಗಳಿಗೆ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಅನ್ವಯವಾಗುತ್ತದೆ ಎಂದು ಹೇಳಲಾಗಿದ್ದು. ಚುನಾವಣಾ ಆಯೋಗದೊಂದಿಗೆ ಚರ್ಚೆ ಮಾಡಲಾಗುವುದು. ಅವರ ಸೂಚನೆಯಂತೆ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

**'ಪರಿಶೀಲನಾ ಅರ್ಜಿ ಸಲ್ಲಿಕೆ'**: ಹಿಂದುಳಿದ ವರ್ಗಗಳಿಗೆ ಮೀಸಲಾತಿ ನಂತರವೇ ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲಾಗುವುದು ಎಂಬ ಬಗ್ಗೆ ಸುಪ್ರೀಂಕೋರ್ಟ್‌ಗೆ ಮರುಪರಿಶೀಲನಾ ಅರ್ಜಿ ಸಲ್ಲಿಸಲಾಗುವುದು ಎಂದು ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಇಲ್ಲಿ ಹೇಳಿದರು.

ರಾಜ್ಯದ ಸ್ಥಳಿಯ ಸಂಸ್ಥೆಗಳಿಗೆ ಚುನಾವಣೆ ನಡೆಸುವ ಸಂಬಂಧ ಎರಡು ವಾರಗಳ ಒಳಗಾಗಿ ಅಧಿಸೂಚನೆ ಹೊರಡಿಸುವಂತೆ ಸುಪ್ರೀಂಕೋರ್ಟ್ ನಿರ್ದೇಶನ ನೀಡಿರುವ ಕುರಿತು ಅವರು ಪ್ರತಿಕ್ರಿಯಿಸಿದರು.

ಆಧಾರ:–ಪ್ರಜಾವಾಣಿ, ದಿನಾಂಕ:11.05.2022

## 5. ದೇಶದ್ರೋಹ ಕಾಯ್ದೆಯೆಂದರೇನು

ಬ್ರಿಟೀಷರ ಕಾಲದ ದೇಶದ್ರೋಹ ಕಾನೂನಿಗೆ ಸುಪ್ರೀಂಕೋರ್ಟ್ ತಾತ್ಕಾಲಿಕ ತಡೆ ನೀಡಿದೆ. ಕಾನೂನನ್ನು ಕೇಂದ್ರದ ಪರಿಶೀಲನೆಗೆ ವಹಿಸಲಾಗಿದ್ದು, ಪರಿಶೀಲನೆ ಮುಗಿಯುವವರೆಗೂ ಕಾನೂನನ್ನು ತಡೆ ಹಿಡಿಯಲಾಗಿದೆ. ಈ ಹಿನ್ನೆಲೆಯಲ್ಲಿ ಕಾಯ್ದೆಯ ಕುರಿತು ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

ದೇಶದ್ರೋಹ ಕಾಯ್ದೆಯನ್ನು ವಿವರಿಸುವುದು ಭಾರತೀಯ ದಂಡ ಸಂಹಿತೆಯ (ಐಪಿಸಿ) 124 ಎ ಎಂಬ ವಿಧಿ, ಯಾವುದೇ ವ್ಯಕ್ತಿ ತನ್ನ ಮಾತಿನಿಂದ, ಬರವಣಿಗೆಯಿಂದ, ಸನ್ನೆಗಳಿಂದ ಸರ್ಕಾರಿ ವ್ಯವಸ್ಥೆಯನ್ನು ನಿಂದಿಸಿದರೆ, ಅದರ ವಿರುದ್ಧ ದ್ವೇಷ ಹುಟ್ಟಿಸಿದರೆ, ಕಾನೂನು ಪ್ರಕಾರ ಅವರಿಗೆ ಜೀವಾವಧಿ ಶಿಕ್ಷೆ ವಿಧಿಸಬಹುದು ಎಂದು ಆ ವಿಧಿ ಹೇಳುತ್ತದೆ. ಅದರ ಜೊತೆಗೆ, ದೇಶದ್ರೋಹವೆಂದು ಯಾವುದನ್ನು ಪರಿಗಣಿಸಬೇಕೆಂಬ ಉಲ್ಲೇಖವೂ ಇದೆ.

1. ವ್ಯಕ್ತಿಯೊಬ್ಬರು ತಮ್ಮ ನಡವಳಿಕೆಯಿಂದ ಸರ್ಕಾರದ ವಿರುದ್ಧ ಅವಿಧೇಯತೆ ತೋರಿದರೆ, ದ್ವೇಷ ಹುಟ್ಟಿಸಿದರೆ ಅದು ದೇಶದ್ರೋಹ.
2. ವ್ಯಕ್ತಿಯೊಬ್ಬರು ಹಿಂಸೆಗೆ ಕಾರಣವಾಗದಂತೆ ಸರ್ಕಾರದ ಅಸಮರ್ಪಕತೆಯನ್ನು ತಿದ್ದುವಂತಹ ಮಾತನಾಡಿದರೆ ಅದು ತಪ್ಪಲ್ಲ.
3. ಹಿಂಸೆಗೆ ಕಾರಣವಾಗದಂತೆ ಸರ್ಕಾರದ ಆಡಳಿತ ವೈಫಲ್ಯವನ್ನು ಇತರೆ ಕ್ರಮಗಳನ್ನು ಟೀಕಿಸಿದರೆ ಅದು ತಪ್ಪಲ್ಲ.

**ಹಿಂದೆ ಶಿಕ್ಷೆ ಹೇಗಿತ್ತು, ಈಗ ಹೇಗಿದೆ**: ಬ್ರಿಟಿಷ್ ಕಾಲದಲ್ಲಿ ದೇಶದ್ರೋಹ ಕಾಯ್ದೆಯಡಿ ಬಂಧಿತನಾದ ವ್ಯಕ್ತಿಯನ್ನು ಸಾಗರೋತ್ತರವಾಗಿ ಜೀವಮಾನಪರ್ಯಂತ ಗಡಿಪಾರು ಮಾಡಲಾಗುತ್ತಿತ್ತು. 1955ರಲ್ಲಿ ಅದನ್ನು ಜೀವಾವಧಿ ಶಿಕ್ಷೆಯಾಗಿ ಪರಿವರ್ತಿಸಲಾಯಿತು.

**ಹೋರಾಟ ಹತ್ತಿಕ್ಕಲು ರೂಪಿಸಿದ್ದು**: ದೇಶದ್ರೋಹ ಕಾಯ್ದೆ ರೂಪಿಸಿದ್ದು ಥಾಮಸ್ ಮೆಕಾಲೆ ಎಂಬ ಬ್ರಿಟಿಷ್ ಅಧಿಕಾರಿ, 1860ರಲ್ಲಿ ಆದರೆ ಅದು ಜಾರಿಯಾಗಿದ್ದು, 1890ರಲ್ಲಿ ಅಂದಿನ ಬ್ರಿಟಿಷ್ ಸರ್ಕಾರ ಸ್ವಾತಂತ್ರ್ಯ ಹೋರಾಟ ಹತ್ತಿಕ್ಕಲೆಂದೇ ಇದನ್ನು ರೂಪಿಸಿತ್ತು. ದೊಡ್ಡದೊಡ್ಡ ಸ್ವಾತಂತ್ರ್ಯ ಹೋರಾಟಗಾರರನ್ನು ಈ ಕಾಯ್ದೆಯಡಿ ಬಂದಿಸಲಾಗಿತ್ತು. 1898ರಲ್ಲಿ ಬಾಲಗಂಗಾಧರ ತಿಲಕ್ ಮತ್ತು ಬ್ರಿಟನ್ ರಾಣಿ ನಡುವಿನ ಕಾನೂನು ಹೋರಾಟ ಇದರಲ್ಲಿ ಮಹತ್ವದ್ದು.

**ಕೇದಾರನಾಥ ವರ್ಸಸ್ ಬಿಹಾರ ಸರ್ಕಾರ**: 1962ರಲ್ಲಿ ಈ ಪ್ರಕರಣ ಸರ್ವೋಚ್ಚ ನ್ಯಾಯಾಲಯದಲ್ಲಿ ವಿಚಾರಣೆಗೆ ಬಂತು, ಆಗ ಐಪಿಸಿ 124 ಎ ಕಾನೂನನ್ನು ನ್ಯಾಯಪೀಠ ಎತ್ತಿಹಿಡಿಯಿತು. ಅದರ ಜೊತೆಯಲ್ಲೇ ಹಿಂಸೆಗೆ ಪ್ರಚೋದನೆ ನೀಡದ ಪ್ರಕರಣಗಳು ದೇಶದ್ರೋಹ ಅಲ್ಲವೆಂದೂ ಸ್ಪಷ್ಟಪಡಿಸಿತು.

**ಎಷ್ಟು ಪ್ರಕರಣ**

**(2010–2020)**

| ರಾಜ್ಯ | ಸಂಖ್ಯೆ |
|---|---|
| ಬಿಹಾರ | 168 |
| ತಮಿಳುನಾಡು | 139 |
| ಉತ್ತರ ಪ್ರದೇಶ | 115 |
| ಜಾರ್ಖಂಡ್ | 62 |
| ಕರ್ನಾಟಕ | 50 |
| ಒಡಿಶಾ | 30 |
| ಹರ್ಯಾಣ | 29 |
| ಜಮ್ಮು ಕಾಶ್ಮೀರ | 26 |
| ಪಶ್ಚಿಮ ಬಂಗಾಳ | 22 |
| ಪಂಜಾಬ್ | 21 |
| ಗುಜರಾತ್ | 17 |
| ಹಿಮಾಚಲ | 15 |
| ದೆಹಲಿ | 14 |
| ಲಕ್ಷದ್ವೀಪ | 14 |
| ಕೇರಳ | 14 |

**326 ಪ್ರಕರಣ**: 2014 ರಿಂದ 2019ರ ನಡುವೆ ಭಾರತದಲ್ಲಿ 326 ಪ್ರಕರಣಗಳು ದಾಖಲಾಗಿದೆ. ಇವುಗಳಲ್ಲಿ 6 ಮಂದಿಗೆ ಶಿಕ್ಷೆಯಾಗಿದೆ.

ಆಧಾರ:ಉದಯವಾಣಿ, ದಿನಾಂಕ:12.05.2022

## 6. ಜ್ಞಾನವಾಪಿ ವಿಚಾರಣೆಗೆ ಸುಪ್ರೀಂ ತಾತ್ಕಾಲಿಕ ತಡೆ

ಜ್ಞಾನವಾಪಿ ಮಸೀದಿ ಪ್ರಕರಣ ವಿಚಾರಣೆ ಮುಂದುವರಿಸದಂತೆ ಸುಪ್ರೀಂಕೋರ್ಟ್ ವಾರಣಾಸಿ ನ್ಯಾಯಾಲಯಕ್ಕೆ ಆದೇಶಿಸಿದೆ.

ಪ್ರಕರಣದ ವಿಚಾರಣೆಯನ್ನು ಸುಪ್ರೀಂಕೋರ್ಟ್ ಕೈಗೆತ್ತಿಕೊಳ್ಳಲಿರುವ ಹಿನ್ನೆಲೆಯಲ್ಲಿ ಅಲ್ಲಿಯವರೆಗೂ ವಿಚಾರಣೆ ನಡೆಸದಂತೆ ವಾರಣಾಸಿ ಕೋರ್ಟ್‌ಗೆ ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್, ಸೂರ್ಯಕಾಂತ್ ಮತ್ತು ಪಿ.ಎಸ್.ನರಸಿಂಹ ಅವರನ್ನೊಳಗೊಂಡ ಪೀಠ ಆದೇಶಿಸಿದೆ. ಈ ಹಿನ್ನೆಲೆಯಲ್ಲಿ ವಾರಣಾಸಿ ಕೋರ್ಟ್ ವಿಚಾರಣೆಯನ್ನು ಮೇ, 23ಕ್ಕೆ ಮುಂದೂಡಿದೆ.

ಹಿಂದೂ ಅರ್ಜಿದಾರರ ಪರ ವಕೀಲ ವಿಷ್ಣು ಶಂಕರ್ ಜೈನ್, ಪ್ರಮುಖ ವಕೀಲ ಹರಿಶಂಕರ್ ಜೈನ್ ಅವರ ಆರೋಗ್ಯ ಸರಿ ಇರದ ಕಾರಣ ಪ್ರಕರಣದ ವಿಚಾರಣೆಯನ್ನು ಮುಂದೂಡುವಂತೆ ಮನವಿ ಮಾಡಿಕೊಂಡರು. ಈ ವೇಳೆ ಮಧ್ಯ ಪ್ರವೇಶಿಸಿದ ಮಸೀದಿ ಆಡಳಿತ ಸಮಿತಿ ಪರ ವಕೀಲ ಹುಝೇಫಾ ಅಹ್ಮದಿ, "ವಿವಿಧ ಮಸೀದಿಗಳಿಗೆ ಸಂಬಂಧಿಸಿದಂತೆ ದೇಶಾದ್ಯಂತ ಹಲವು ಕೋರ್ಟ್‌ಗಳಲ್ಲಿ ಅರ್ಜಿಗಳು ಸಲ್ಲಿಕೆಯಾಗಿವೆ. ವಾರಣಾಸಿಯ ಜ್ಞಾನವಾಪಿ ಮಸೀದಿ ಪ್ರಕರಣದಲ್ಲಿ ಮಸೀದಿ ಸುತ್ತಮುತ್ತಲಿನ ಗೋಡೆ (ವಝುಖಾನ) ತೆರವುಗೊಳಿಸುವಂತೆ ಅರ್ಜಿ ಸಲ್ಲಿಕೆಯಾಗಿದ್ದು, ಇದನ್ನು ಆದ್ಯತೆ ಮೇರೆಗೆ ವಿಚಾರಣೆ ಕೈಗೆತ್ತಿಕೊಳ್ಳಬೇಕು" ಎಂದು ಮನವಿ ಮಾಡಿಕೊಂಡರು.

ವಾದ–ಪ್ರತಿವಾದ ಆಲಿಸಿದ ಸುಪ್ರೀಂಕೋರ್ಟ್ ಪೀಠವು ಸದ್ಯಕ್ಕೆ ವಿಚಾರಣೆ ನಡೆಸದಂತೆ ವಾರಣಾಸಿ ಸಿವಿಲ್ ಕೋರ್ಟ್‌ಗೆ ಸೂಚಿಸಿದ್ದಲ್ಲದೇ, ಮಧ್ಯಾಹ್ನ 3 ಗಂಟೆಗೆ ತಾನು ವಿಚಾರಣೆ ನಡೆಸುವುದಾಗಿ ಹೇಳಿತು. ಮುಖ್ಯ ನ್ಯಾಯಮೂರ್ತಿಗಳಿಂದ ರಿಜಿಸ್ಟ್ರಿಯು ನಿರ್ದೇಶನ ಪಡೆಯಲಿದ್ದು, ನಂತರ ವಿಚಾರಣೆಗೆ ನ್ಯಾಯಪೀಠ ರಚನೆಯಾಗಲಿದೆ ಎಂದು ಹೇಳಿದೆ.

**ಮುಚ್ಚಿದ ಲಕೋಟೆಯಲ್ಲಿ ವರದಿ ಸಲ್ಲಿಕೆ**: ಕೋರ್ಟ್ ನೇಮಿಸಿದ್ದ ಅಡ್ವೊಕೇಟ್ ಕಮಿಷನರ್ ವಿಶಾಲ್‌ಸಿಂಗ್ ನೇತೃತ್ವದ ತಂಡವು ಜ್ಞಾನವಾಪಿ ಮಸೀದಿಯ ವಿಡಿಯೋ ಚಿತ್ರೀಕರಣ ಸಮೀಕ್ಷೆಯ ವರದಿಯನ್ನು ವಾರಣಾಸಿಯ ಸ್ಥಳೀಯ ಕೋರ್ಟ್‌ಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದೆ. ಈ ಹಿಂದೆ ಕೋರ್ಟ್ ಅಜಯ್ ಕುಮಾರ್ ಮಿಶ್ರಾ ಅವರನ್ನು ಅಡ್ವೊಕೇಟ್ ಕಮಿಷನರ್ ಆಗಿ ನೇಮಿಸಿತ್ತು. ಆದರೆ ಅವರ ಮೇಲೆ ಆರೋಪಗಳು ಕೇಳಿಬಂದ ನಂತರ ಕೋರ್ಟ್ ಬದಲಾಯಿಸಿತ್ತು.

ಮಸೀದಿ ಆವರಣಕ್ಕೆ ಹೊಂದಿಕೊಂಡಂತೆ ಶೃಂಗಾರ ಗೌರಿ ದೇವಸ್ಥಾನವಿದ್ದು, ಅಲ್ಲಿ ಪೂಜೆ ಕೈಗೊಳ್ಳಲು ಅವಕಾಶ ನೀಡಬೇಕೆಂದು ಕೋರಿ ಐವರು ಹಿಂದೂ ಮಹಿಳೆಯರು ಕೋರ್ಟ್ ಮೊರೆ ಹೋಗಿದ್ದರಿಂದ, ಜ್ಞಾನವಾಪಿ ಮಸೀದಿಯ ವಿಡಿಯೋ ಸಮೀಕ್ಷೆಗೆ ವಾರಣಾಸಿ ಕೋರ್ಟ್ ಆದೇಶಿಸಿತ್ತು. ಸಮೀಕ್ಷೆ ವೇಳೆ ಪುಷ್ಕರಣಿಯಲ್ಲಿ ಶಿವಲಿಂಗ ಪತ್ತೆಯಾಗಿತ್ತು ಎಂದು ವಕೀಲರ ತಂಡ ಹೇಳಿತ್ತು.

**ವರದಿಯಲ್ಲಿವೆ ಎಂದು ಹೇಳಲಾಗುತ್ತಿರುವ ಅಂಶಗಳು**:

- ವಿವಾದಿತ ಸ್ಥಳದಲ್ಲಿ ಹಿಂದೂ ಕೆತ್ತನೆಗಳು, ದೀಪದ ಮಾದರಿಯ ಕಲಾಕೃತಿಗಳು ಹಾಗೂ ಶೇಷನಾಗ ಪತ್ತೆ.
- ಸಿಂಧೂರ ಗುರುತಿನ 3–4 ಶಿಲ್ಪಗಳು ಹಾಗೂ 'ಚೌಕತ್' ಮಾದರಿಯ ಕಲ್ಲಿನ ಚಪ್ಪಡಿ ಸಿಕ್ಕಿದೆ.
- ಮಸೀದಿ ನೆಲಮಹಡಿಯ ಗೋಡೆಯಲ್ಲಿ ತ್ರಿಶೂಲ ಆಕಾರದ ಚಿತ್ರಗಳ ಕೆತ್ತನೆ ಇವೆ.
- ಪಿಲ್ಲರ್‌ಗಳ ಮೇಲೆ ಹಿಂದಿ ಭಾಷೆಯಲ್ಲಿ ಕೆತ್ತನೆ, ಹೂವಿನ ಚಿತ್ತಾರ, ಕಲಶ ಆಕಾರದ ಚಿತ್ರಗಳಿವೆ.
- ಮಸೀದಿಯ ಮೂರನೇ ಗುಮ್ಮಟದ ಕೆಳಗಡೆ ಇರುವ ಕಲ್ಲಿನಲ್ಲಿ 'ಕಮಲ'ದ ಕೆತ್ತನೆಗಳಿವೆ.

- ಮಸೀದಿ ಆವರಣದಲ್ಲಿರುವ ಪುಷ್ಕರಣೆಯಲ್ಲಿ 2.5 ಅಡಿ ಎತ್ತರದ ಶಿವಲಿಂಗ ಪತ್ತೆ.
- ಇದು ಶಿವಲಿಂಗ ಅಲ್ಲ, ವಾಜೂ (ನಮಾಜ್‌ಗೆ ಮುನ್ನ ಕೈಕಾಲು ತೊಳೆದುಕೊಳ್ಳುವ ಸ್ಥಳ) ನಲ್ಲಿರುವ ಫೌಂಟೇನ್ ಎಂಬುದು ಮಸೀದಿಯ ವಾದ.

ಆಧಾರ:ವಿಜಯ ಕರ್ನಾಟಕ, ದಿನಾಂಕ:20.05.2022

## 7. HC: Can't let free speech violate citizens' rights

Freedom of speech cannot be permitted to violate rights of citizens, especially political functionaries who spend their lifetime on building their image in public, the Delhi high court has said while restraining AAP MLA and Rajasthan election in-charge Vinay Mishra from posting controversial statements against RLP MP Hanuman Beniwai till further orders.

In an interim order delivered on June 13, Justice Anoop Kumar Mendiratta directed micro-biogging site Twitter to remove all the posts related to the matter and said that the tweets, prima facie appeared to be libelous, defamatory and reckless in the absence of any supporting material.

On June 6, Beniwal had decided to support BJP backed Independent candidate Subhash Chandra in the Rajya Sabha elections scheduled for June 10. In response, Mishra put out serious of tweets accusing Beniwal and the saffron party of corruption and horse-trading.

The HC said if the tweets are permitted to continue on record, "it is likely to further biemish/bolt the reputation and goodwill of the plaintiffs and may cause a misimpression in the trust of the voters/supporters of the party or common citizens of the country in the absence of any cogent evidence". "It cannot be ruled out that the tweets may have been actuated by malice, with an attempt to impact the Rajya Sabha elections, which were scheduled for 10$^{th}$ June 2022, and to cause loss of reputation to the plaintiffs, which may have been built by sheer dedication and hard work over a long period of time" the HC said.

The court further said that the voting strategy of an individual or a political party, or their nominees, is purely based upon the ideology and policy of the political party or an individual and alleging that the same had been sold off, without any foundational basis, deeply causes an irreparable harm loss and damage to the reputation of the individual/party concerned and clearly encroaches upon the right of privacy.

"This freedom (of speech) needs to be exercised with circumspection and care and cannot be permitted to violate the rights of other citizens and jeopardize their public interest. More so, in case of political functionaries who spend their lifetime on building their image in the public, the same cannot be permitted to be tumbled by baseless defamatory statements by any political entity/individual for petty gains" the HC observed.

Courtesy:Times of India, Dated: 16.06.2022

## 8. Minority govt's dissolution of House

Facing the threat of losing majority in Maharashtra Assembly after rebellion in Shiv Sena, the MVA government's possible recommendation to dissolve the assembly may become otiose as the Supreme Court judgements mandate the governor in such situations to give chance to a party which stakes claim to form government.

In two landmark judgements S.R.Bommai (1994) and Rameshwar Prasad (2006) the SC had repeatedly said that floor test was the only method to be adopted by the governor to test the popular support enjoyed by a government and that he could not surmise the number or MLAs supporting a party or a coalition which is staking claim to form government sitting in the Raj Bhawan.

In Rameshwar Prasad case, a five judge bench of the SC had said, "if a political party with the support of other political party or other MLA's stakes claim to form a Governor about its majority to form a stable Government, the Governor cannot refuse formation of Government and over-ride the majority claim because of his subjective assessment that the majority was cobbled by illegal and unethical means".

"No such power has been vested with the Governor. Such a power would be against the democratic principles of majority rule. The Governor is not an autocratic political Ombudsman. If such a power is vested in the Governor and/or the President, the consequences can be horrendous" the SC had said.

This means that even if the MVA government after getting reduced to minority recommends dissolution of the assembly to opt for fresh elections, the governor has power to discard the recommendation and explore possibility of installing a new government by a party staking claim to majority in the 288 member Maharashtra assembly.

In Bommai judgement a nine judge bench of the SC had restricted the discretionary powers of a governor. "Whether the Council of Ministers has lost the confidence of the House is not a matter to be determined by the Governor as far that matter anywhere else except the floor of the House. The principle of democracy underlying our Constitution necessarily means that any such question should be decided on the floor of the House. The House is the place where democracy is in action. It is not for the Governor to determine the said question on his own or on his own verification. This is not a matter within his subjective satisfaction".

Courtesy: Times of India, Dated: 23.06.2022

## 9. Floor test will prevent horse-trading

The Supreme Court dashed the hopes of the Uddav Thackeray-led Maha Vikas Aghadi government to retain power in Maharastra by refusing to stay a floor test called by Maharastra Governor Bhagat Singh Koshyari on a request made by Leader of the Opposition and BJP leader Devendra Fadnavis.

This is the second consecutive body blow the Supreme Court has dealt the beleaguered Sena-led government in two days.

On June 27, a Vacation Bench of Justices Surya Kant and J.B.Pardiwala virtually froze Deputy Speaker Narahari Zirwal's power to proceed with the disqualification of Shiv Sena dissident MLA's led by Eknath Shinde for defection. The dissidents were given extra time till July 12 to respond to the charges.

Wednesday saw the court agree with Governor Koshyari and the dissident MLAs that delaying the floor test would further damage democracy. Holding a floor test in Maharashtra was the sure remedy against horse-trading. Delay of trust vote was the very antithesis of democracy.

"We are not staying the floor test," Justice Kant briefly conveyed the Benches' final order to the warring Shiv Sena factions at 9 p.m. after a four-hour marathon hearing.

During the hearing Solicitor-General Tushar Mehta, appearing for Governor Koshyari said the "who is the majority in the House is not determined in Raj Bhavan but on the floor of the Assembly where everybody can see".

The Court session began with senior advocate Abhishek Manu Singhvi, for the Thackeray camp, urging the court to either stay the floor test or unshackle the Deputy Speaker so that he could go ahead with the disqualification proceedings against 16 of a total 39 dissident MLAs.

Mr.Singhavi then said Governor Koshyari showed "undue haste" by calling a floor test when the question of disqualification was pending in the court.

"Floor test was called on June 28 at supersonic speed.... Holding a floor test, before determining the question of disqualification of the rebels is like plunging into a pool without determining the size of the pool. It is like putting the cart before the horse. The first thing to do in this whole political crisis is to determine who has committed the constitutional sin of defection... The Governor cannot short-circuit the Supreme Court's proceedings or the Deputy Speaker's authority to adjudicate disqualification proceedings...The floor test cannot make these proceedings in fructuous", Mr.Singhavi submitted.

'**Extradinary situation**': Justice Kant, speaking for the Bench observed that the court had intervened on June 27 because it was an "extradinary situation" in which the Speaker himself was facing action for removal from office.

Mr.Singhavi said the rebel MLAs facing action for defection, "no longer represent the will of the people".

They should not be allowed to vote. But Justice Kant asked whether a government, knowing it has lost its majority could be allowed to use the Speaker to issue disqualification notices "*en masse*".

"When the Speaker himself is under a cloud, should we go ahead and presume that the MLAs are already deemed to have been disqualified", the judge asked.

Senior advocate Neerah Kishan Kaul, for the Shinde camp declared “we are the Shiv Sena”. They said they have 39 Sena MLAs out of a total 55. “The Thackeray faction is a hopeless minority within the party itself”, Mr.Kaul submitted.

He said a pending petition in the Supreme Court questioning the disqualification proceedings cannot stay the authority and discretion of the Governor to call for a floor test.

## 10. ನ್ಯಾಯಾಂಗಕ್ಕೆ ಬೇಕಾದ ತಂತ್ರಜ್ಞಾನ ಅಭಿವೃದ್ಧಿಗೆ ಸರ್ಕಾರ ಬದ್ಧ: ಆರ್ ಸಿ

ನ್ಯಾಯಾಂಗದ ತಂತ್ರಜ್ಞಾನ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಬದ್ಧವಾಗಿದೆ ಹಾಗೂ ಆಧುನಿಕ ತಂತ್ರಜ್ಞಾನ ನೆರವಿನೊಂದಿಗೆ ತ್ವರಿತ ನ್ಯಾಯದಾನ ಕಲ್ಪಿಸಲು ನ್ಯಾಯಾಂಗ ಕೈಗೊಳ್ಳುವ ಕ್ರಮಗಳಿಗೆ ಸಂಪೂರ್ಣ ಸಹಕಾರ ನೀಡಲಿದೆ ಎಂದು ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವ ರಾಜೀವ್ ಚಂದ್ರಶೇಖರ್ ಭರವಸೆ ನೀಡಿದರು.

ಬೆಂಗಳೂರು ವಕೀಲರ ಸಂಘದ ಆಶ್ರಯದಲ್ಲಿ ಹೈಕೋರ್ಟ್ ವಕೀಲರ ಸಭಾಂಗಣದಲ್ಲಿ ನಡೆದ ‘ನ್ಯಾಯ ವಿತರಣೆಯಲ್ಲಿ ಆಧುನಿಕ ತಂತ್ರಜ್ಞಾನ’ ವಿಷಯ ಕುರಿತ ಸಂಕೀರಣದಲ್ಲಿ ‘ಇ–ಗ್ರೀವಿಯೆನ್ಸ್ ಪೋರ್ಟಲ್’ ಉದ್ಘಾಟಿಸಿ ಅವರು ಮಾತನಾಡಿದರು.

ಕಳೆದ ಎರಡು ವರ್ಷಗಳ ಕೋವಿಡ್ ಸಂಕಟದ ಸಮಯದಲ್ಲಿ ಭಾರತೀಯ ನ್ಯಾಯಾಂಗವು ತಂತ್ರಜ್ಞಾನದ ಗರಿಷ್ಠ ಬಳಕೆ ಮಾಡಿಕೊಂಡಿದೆ. ಹಾಗಾಗಿ, ನ್ಯಾಯಾಂಗದ ತಂತ್ರಜ್ಞಾನ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಸಂಪೂರ್ಣ ಸಹಕಾರ ನೀಡಲಿದೆ. ಆಧುನಿಕ ತಂತ್ರಜ್ಞಾನ ನೆರವಿನೊಂದಿಗೆ ತ್ವರಿತ ನ್ಯಾಯದಾನಕ್ಕೆ ಅನುವಾಗುವಂತೆ ಎಲ್ಲ ಅಗತ್ಯ ಕ್ರಮ ತೆಗೆದುಕೊಳ್ಳಲು ಬದ್ಧವಾಗಿದೆ ಎಂದು ತಿಳಿಸಿದರು.

ಆಧುನಿಕ ತಂತ್ರಜ್ಞಾನ ಬಳಕೆಯಲ್ಲಿ ಭಾರತ ಇಂದು ಪ್ರಪಂಚದಲ್ಲೇ ಅಗ್ರಗಣ್ಯ ದೇಶವಾಗಿದೆ. ಕಳೆದ ಆರು ವರ್ಷಗಳಲ್ಲಿ ಕೇಂದ್ರ ಸರ್ಕಾರ ತನ್ನ ಯೋಜನೆಗಳನ್ನು ಆಧುನಿಕ ತಂತ್ರಜ್ಞಾನದ ಮೂಲಕ ಫಲಾನುಭವಿಗಳಿಗೆ ತಲುಪಬೇಕಾದ ಸೌಲಭ್ಯಗಳನ್ನು ಸಕಾಲದಲ್ಲಿ ತಲುಪಿಸುವ ಪ್ರಯತ್ನ ಮಾಡುತ್ತಿದೆ ಎಂದು ತಿಳಿಸಿದರು.

ರಾಜ್ಯ ಕಾನೂನು ಸಚಿವ ಜೆ.ಸಿ ಮಾಧುಸ್ವಾಮಿ ಮಾತನಾಡಿ, ನ್ಯಾಯಾಂಗದಲ್ಲಿ ತಂತ್ರಜ್ಞಾನದ ವೇಗಕ್ಕೆ ಹೆಚ್ಚಿನ ಆದ್ಯತೆ ನೀಡಲು ಚಿಂತಿಸುವ ಅವಶ್ಯಕತೆಯಿದೆ. ನ್ಯಾಯಾಲಯದಲ್ಲಿ ಬಾಕಿ ಪ್ರಕರಣಗಳ ಸಂಖ್ಯೆ ಬೃಹತ್ ಪ್ರಮಾಣದಲ್ಲಿದೆ. ಅವುಗಳ ತ್ವರಿತ ವಿಲೇವಾರಿಗೆ ತಂತ್ರಜ್ಞಾನ ಬಳಕೆಯಾಗಬೇಕು. ಸುಪ್ರೀಂಕೋರ್ಟ್ ತೀರ್ಪುಗಳು, ತಿದ್ದುಪಡಿಗಳು ವಕೀಲರಿಗೆ ತಕ್ಷಣಕ್ಕೇ ಲಭ್ಯವಾಗಬೇಕು. ವಕೀಲರಿಗೆ ಗ್ರಂಥಾಲಯ ಸೌಲಭ್ಯ ದೊರೆಯುಂತೆ ಮಾಡಬೇಕು. ಈ ನಿಟ್ಟಿನಲ್ಲಿ ಯಾವುದೇ ಸೌಕರ್ಯಗಳನ್ನು

ಕರ್ನಾಟಕದ ನ್ಯಾಯಾಂಗ ವ್ಯವಸ್ಥೆ ಬಯಸಿದರೂ ಅದನ್ನು ಒದಗಿಸಲು ರಾಜ್ಯ ಸರ್ಕಾರ ಸಿದ್ಧವಿದೆ ಎಂದು ತಿಳಿಸಿದರು.

ಹೈಕೋರ್ಟ್ ಹಿರಿಯ ನ್ಯಾಯಮೂರ್ತಿ ಅಲೋಕ್ ಅರಾಧೆ ಮಾತನಾಡಿ, ರಾಜ್ಯದ ನ್ಯಾಯಾಲಯವು ಕೋವಿಡ್ ಅವಧಿಯಲ್ಲಿ ತಂತ್ರಜ್ಞಾನ ಹೆಚ್ಚಿನ ಪ್ರಮಾಣದಲ್ಲಿ ಬಳಕೆ ಮಾಡಿಕೊಳ್ಳುವ ಮೂಲಕ ಕಕ್ಷಿದಾರರಿಗೆ ತ್ವರಿತವಾಗಿ ನ್ಯಾಯದಾನ ಮಾಡುವಲ್ಲಿ ಪ್ರಮುಖ ಪಾತ್ರ ನಿರ್ವಹಿಸಿವೆ ಎಂದು ಶ್ಲಾಘಿಸಿದರು.

ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ರೆಡ್ಡಿ, ಸಂಘದಿಂದ ಆಗಬೇಕಿರುವ ಕೆಲಸಗಳು, ಹಾಲಿಯಿರುವ ಸಮಸ್ಯೆಗಳ ಬಗ್ಗೆ ವಕೀಲರು ಇನ್ನು ಮುಂದೆ 'ಇ–ಗ್ರೀವಿಯೆನ್ ಪೋರ್ಟಲ್' ಮುಖಾಂತರ ತಿಳಿಸಬಹುದು. ವಕೀಲರು ತಮ್ಮ ಕುಂದುಕೊರತೆ ಬಗ್ಗೆ ಸಂಘದ ಗಮನಕ್ಕೆ ತಂದಲ್ಲಿ ಅವುಗಳನ್ನು ಪರಿಹರಿಸಲು ಪ್ರಯತ್ನಿಸಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ರಾಜ್ಯ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ.ನಾವದಗಿ, ಬೆಂಗಳೂರು ಸಂಘದ ಪ್ರಧಾನ ಕಾರ್ಯದರ್ಶಿ ಟಿ.ಜಿ.ರವಿ ಮತ್ತಿತರರು ಉಪಸ್ಥಿತರಿದ್ದರು.

ಆಧಾರ: ಕನ್ನಡಪ್ರಭ, ದಿನಾಂಕ: 12.04.2022

# ಭಾಗ – 7

# ಚುನಾವಣಾ ಸುದ್ದಿಗಳು

## 1. ಮೇಲ್ಮನೆ 7 ಸ್ಥಾನಗಳಿಗೆ ಜೂನ್ 3ರಂದು ಚುನಾವಣೆ

ರಾಜ್ಯ ವಿಧಾನಸಭೆಯಿಂದ ವಿಧಾನಪರಿಷತ್ತಿಗೆ ಏಳು ಸ್ಥಾನಗಳ ಚುನಾವಣೆಗೆ ಮುಹೂರ್ತ ನಿಗದಿಯಾಗಿದ್ದು, ಜೂನ್ 3ರಂದು ಮತದಾನ ನಡೆಸಲು ಚುನಾವಣಾ ಆಯೋಗ ಅಧಿಸೂಚನೆ ಹೊರಡಿಸಿದೆ.

ಬಿಜೆಪಿಯ ಲಕ್ಷ್ಮಣ ಸವದಿ, ಕಾಂಗ್ರೆಸ್‌ನ ಅಲ್ಲಂ ವೀರಭದ್ರಪ್ಪ, ಜೆಡಿಎಸ್‌ನ ಹೆಚ್.ಎಂ.ರಮೇಶ್ ಗೌಡ ಸೇರಿ ಕಾಂಗ್ರೆಸ್‌ನ 3, ಬಿಜೆಪಿ ಹಾಗೂ ಜೆಡಿಎಸ್‌ನ ತಲಾ ಇಬ್ಬರು ಸದಸ್ಯರ ಅವಧಿ ಜೂನ್ 14ಕ್ಕೆ ಕೊನೆಗೊಳ್ಳಲಿದೆ. ತೆರವಾಗುವ ಈ ಸ್ಥಾನಗಳಿಗೆ ಚುನಾವಣೆ ಘೋಷಣೆಯಾಗಿದೆ. ಮೇ17ರಂದು ಅಧಿಸೂಚನೆ ಹೊರಬೀಳಲಿದೆ.

ನಾಮಪತ್ರ ಸಲ್ಲಿಸಲು ಮೇ 24 ಕೊನೇ ದಿನ. 25ರಂದು ನಾಮಪತ್ರ ಪರಿಶೀಲನೆ, 27ರಂದು ಉಮೇದುವಾರಿಕೆ ವಾಪಸ್‌ಗೆ ಕೊನೇ ದಿನ. ಜೂನ್ 3ರಂದು ಮತದಾನ ನಡೆಯಲಿದ್ದು ಅಂದೇ ಸಂಜೆ 5ಕ್ಕೆ ಫಲಿತಾಂಶ ಹೊರಬೀಳಲಿದೆ.

**ಲೆಕ್ಕಾಚಾರ**: ಒಬ್ಬ ವಿಧಾನಪರಿಷತ್ತಿನ ಸದಸ್ಯರ ಆಯ್ಕೆಗೆ ಮೊದಲ ಪ್ರಾಶಸ್ತ್ಯದ 29 ಮತ ಬೇಕು. ಸ್ಪೀಕರ್ ಹಾಗೂ ನಾಮನಿರ್ದೇಶಿತ ಸದಸ್ಯರು ಸೇರಿ ಎಲ್ಲ 225 ಶಾಸಕರು ಮತ ಚಲಾಯಿಸಬಹುದು. ವಿಧಾನಸಭೆಯಲ್ಲಿ ಒಬ್ಬರು ಬಿಎಸ್‌ಪಿ ಶಾಸಕ ಸೇರಿ ಬಿಜೆಪಿಯ 120 ಶಾಸಕರಿದ್ದು, 4 ಸ್ಥಾನಗಳನ್ನು ಸಲೀಸಾಗಿ ಗೆಲ್ಲಬಹುದು. 70 ಶಾಸಕರ ಸಂಖ್ಯಾಬಲ ಹೊಂದಿರುವ ಕಾಂಗ್ರೆಸ್ 2 ಸ್ಥಾನ, 32 ಶಾಸಕರನ್ನು ಹೊಂದಿರುವ ಜೆಡಿಎಸ್‌ಗೆ 1 ಸ್ಥಾನ ನಿಚ್ಚಳವಾಗಿ ಸಿಗಲಿದೆ. ಬಿಜೆಪಿಗೆ 2 ಸ್ಥಾನಗಳ ಲಾಭವಾದರೆ, ಕಾಂಗ್ರೆಸ್‌ಗೆ 1 ಮತ್ತು ಜೆಡಿಎಸ್‌ಗೆ 1 ಸ್ಥಾನ ಖೋತಾ ಆಗಲಿದೆ.

| ವಿಧಾನಸಭೆಯ ಸಂಖ್ಯಾ ಬಲ | |
|---|---|
| ಬಿಜೆಪಿ | 119 |
| ಕಾಂಗ್ರೆಸ್ | 69 |
| ಜೆಡಿಎಸ್ | 32 |
| ಬಿಎಸ್‌ಪಿ (ಬಿಜೆಪಿ ಸೇರ್ಪಡೆ) | 1 |
| ಪಕ್ಷೇತರರು | 2 |
| ಸ್ಪೀಕರ್ | 1 |
| ನಾಮ ನಿರ್ದೇಶನ | 1 |

ಆಧಾರ:ಪ್ರಜಾವಾಣಿ, ದಿನಾಂಕ:11.05.2022

## 2. ಮೇಲ್ಮನೆಗೆ 18 ನಾಮಪತ್ರ

ವಿಧಾನಪರಿಷತ್ತಿನ 2 ಪದವೀಧರ ಹಾಗೂ 2 ಶಿಕ್ಷಕರ ಕ್ಷೇತ್ರಗಳ ಚುನಾವಣೆಗೆ ಇಬ್ಬರು ಮಹಿಳೆಯರು, 12 ಜನ ಪುರುಷರು ಸೇರಿ 18 ನಾಮಪತ್ರ ಸಲ್ಲಿಸಿದ್ದಾರೆ. ಕರ್ನಾಟಕ ವಾಯುವ್ಯ

ಪದವೀಧರ ಕ್ಷೇತ್ರದಿಂದ 3, ಕರ್ನಾಟಕ ದಕ್ಷಿಣ ಪದವೀಧರ ಕ್ಷೇತ್ರದಿಂದ 9, ಕರ್ನಾಟಕ ವಾಯುವ್ಯ ಶಿಕ್ಷಕರ ಕ್ಷೇತ್ರದಿಂದ 5, ಕರ್ನಾಟಕ ಪಶ್ಚಿಮ ಶಿಕ್ಷಕರ ಕ್ಷೇತ್ರದಿಂದ 1 ಸೇರಿ 18 ನಾಮಪತ್ರ ಸಲ್ಲಿಕೆಯಾಗಿವೆ. ಈ ಪೈಕಿ ಬಿಜೆಪಿಯಿಂದ 7, ಜೆಡಿಎಸ್‌ನಿಂದ, ಎಸ್‌ಡಿಪಿಐನಿಂದ 2, ಪಕ್ಷೇತರರು 8 ಮಂದಿ ನಾಮಪತ್ರ ಸಲ್ಲಿಸಿದ್ದಾರೆ. ನಾಮಪತ್ರ ಸಲ್ಲಿಸಲು ಮಂಗಳವಾರ ಕೊನೆಯ ದಿನವಾಗಿದೆ. ಜೂನ್ 3 ರಂದು ಚುನಾವಣೆ ನಡೆಯಲಿದೆ.

**ಜೆಡಿಎಸ್‌ನಿಂದ ಗಡದಿನ್ನಿ, ಚಂದ್ರಶೇಖರ ಕಣಕ್ಕೆ:** ವಿಧಾನಪರಿಷತ್ತಿನ 2 ಶಿಕ್ಷಕರ ಕ್ಷೇತ್ರಗಳ ಚುನಾವಣೆಗೆ ಜೆಡಿಎಸ್ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದೆ. ಪಶ್ಚಿಮ ಶಿಕ್ಷಕರ ಕ್ಷೇತ್ರಕ್ಕೆ ಶ್ರೀಶೈಲ ನಿಂಗಪ್ಪ ಗಡದಿನ್ನಿ ಮತ್ತು ವಾಯುವ್ಯ ಶಿಕ್ಷಕರ ಕ್ಷೇತ್ರದಿಂದ ಚಂದ್ರಶೇಖರ ಇ.ಲೋಣಿ ಅವರನ್ನು ಅಭ್ಯರ್ಥಿಗಳನ್ನಾಗಿ ಕಣಕ್ಕಿಳಿಸಲಿದೆ. ಜೆಡಿಎಸ್ ಪರಮೋಚ್ಚ ನಾಯಕ ಹೆಚ್.ಡಿ.ದೇವೇಗೌಡರ ಜೊತೆ ಮಾಜಿ ಸಿ.ಎಂ. ಕುಮಾರಸ್ವಾಮಿ ಸುದೀರ್ಘ ಚರ್ಚೆ ಬಳಿಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಕಣಕ್ಕಿಳಿಸಲು ನಿರ್ಧರಿಸಲಾಗಿದೆ. ಜೆ.ಪಿ.ಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಮಾಜಿ ಸಿ.ಎಂ.ಕುಮಾರಸ್ವಾಮಿ ಅವರು ವಿಧಾನಸಭೆಯಿಂದ ವಿಧಾನಪರಿಷತ್ತಿಗೆ ನಡೆಯುವ ಚುನಾವಣೆಗೆ ಇಬ್ರಾಹಿಂ ಟಿಕೆಟ್ ಆಕಾಂಕ್ಷೆಯಾಗಿದ್ದರು. ಆದರೆ ಜೆಡಿಎಸ್ ರಾಜ್ಯಾಧ್ಯಕ್ಷರಾಗಿರುವ ಅವರು ಪಕ್ಷ ಸಂಘಟನೆಗಾಗಿ ಪಕ್ಷದ ತೀರ್ಮಾನಕ್ಕೆ ಎಲ್ಲ ರೀತಿ ಸಹಮತ ಇರುತ್ತದೆ ಎಂದು ಹೇಳಿದ್ದರು. ಕೆ.ಸಿ.ವೀರೇಂದ್ರ, ಟಿ.ಎ.ಶರವಣ ಎಂದು ಮಾಧ್ಯಮಗಳೇ ಪ್ರಸಾರ ಮಾಡಿವೆ. ಈ ಬಗ್ಗೆ ತೀರ್ಮಾನ ಮಾಡಲಾಗುತ್ತದೆ ಎಂದರು.

ಆಧಾರ:ವಿಜಯವಾಣಿ, ದಿನಾಂಕ:24.05.2022

## 3. ವಿಧಾನಪರಿಷತ್ ಗೆ ಅವಿರೋಧ ಆಯ್ಕೆ

ವಿಧಾನ ಪರಿಷತ್‌ನ ಏಳು ಸ್ಥಾನಗಳಿಗೆ ನಡೆದ ಚುನಾವಣೆ ಪ್ರಕ್ರಿಯು ಮತದಾನ ನಡೆಯದೆ ಅವಿರೋಧ ರೂಪದಲ್ಲೇ ಆಯ್ಕೆ ನಡೆದಿದೆ.

ರಾಜ್ಯ ವಿಧಾನಸಭೆಯಿಂದ ವಿಧಾನಪರಿಷತ್‌ನ ಏಳು ಸ್ಥಾನಗಳಿಗೆ ಜೂನ್ 6ರಂದು ಮತದಾನ ನಡೆಯಬೇಕಿತ್ತು. ಆದರೆ, ವಿಧಾನಸಭೆ ಹಾಗೂ ಪಕ್ಷವಾರು ಬಲಾಬಲ ಆಧಾರದಲ್ಲಿ ಅಭ್ಯರ್ಥಿಗಳು ಕಣದಲ್ಲಿದ್ದರು. ಮೂರು ಪಕ್ಷ ಹೆಚ್ಚುವರಿ ಅಭ್ಯರ್ಥಿಯನ್ನು ಕಣಕ್ಕಿಳಿಸಿರಲಿಲ್ಲ. ಹೀಗಾಗಿ ಏಳು ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಹಾಗೂ ರಾಜ್ಯ ವಿಧಾನಸಭೆಯ ಕಾರ್ಯದರ್ಶಿಯೂ ಆದ ವಿಶಾಲಾಕ್ಷಿ ಘೋಷಿಸಿದರು.

ಭಾರತೀಯ ಜನತಾ ಪಕ್ಷದಿಂದ ಸ್ಪರ್ಧಿಸಿದ್ದ ಸವದಿ ಲಕ್ಷಣ, ಟಿ. ನಾರಾಯಣ ಸ್ವಾಮಿ, ಹೇಮಾಲತಾ ನಾಯಕ ಹಾಗೂ ಎಸ್. ಕೇಶವ ಪ್ರಸಾದ, ಭಾರತೀಯ ಕಾಂಗ್ರೆಸ್‌ನಿಂದ ಕೆ.ಅಬ್ದುಲ್ ಜಬ್ಬಾರ್ ಹಾಗೂ ಎಂ.ನಾಗರಾಜು, ಜೆಡಿಎಸ್‌ನಿಂದ ಶರವಣ ಅವಿರೋಧವಾಗಿ ಆಯ್ಕೆಯಾದ ಅಭ್ಯರ್ಥಿಗಳಾಗಿದ್ದಾರೆ.

ಆಧಾರ: ವಿಜಯವಾಣಿ, ದಿನಾಂಕ: 28.05.2022

## 4. Nirmala, Jaggesh BJP's RS candidates from Karnataka

The BJP fielded Union Finance Minister Nirmala Sitharaman and actor-turned-politician Jaggesh from Karnataka for the June 10 Rajya Sabha polls. The announcement came amid speculation that Sitharaman could be fielded from Uttar Pradesh to make room for candidates from Karnataka.

Chief Minister Basavaraj Bommai earlier said discussions were held to secure the third seat out of four seats.

The BJP announced two candidates for the four seats by virtue of its numbers in the Assembly. The Congress renominated Rajya Sabha Chief Whip Jairam Ramesh for another term from Karnataka and left out G-23 leaders Ghulam Nabi Azad and Anand Sharma.

Of the 16 candidates, six are from Uttar Pradesh.

Former BJP MLA Radha Mohan Das Aggarwal who left his Gorakhpur Urban constituency for Uttar Pradesh Chief Minister Yogi Adityanath to contest in the recent Assembly polls was among the candidates.

The name of BJP general secretary Dushyant Gautam, who was a Rajya Sabha member from Haryana, was also missing from the first list of candidates.

The party has given ticket to former MLA Krishan Lal Panwar from Haryana.

Kavita Patidar will be the party's nominee from Madhya Pradesh, Ghanshyam Tiwari from Rajasthan and Kalpana Saini from Uttarakhand.

From Bihar, the party has fielded Satish Chandra Dubey and Shambhu Sharan Patel.

Union Commerce & Industry Minister Goyal and Anil Sukhdevrao Bonde have been nominated from Maharashtra.

Courtesy: Deccan Herald, dt: 30.05.2022

## 5. ಕಾಂಗ್ರೆಸ್ ನಿಂದ ಜೈರಾಂ, ಮನ್ಸೂರ್ ನಾಮಪತ್ರ

ಕಾಂಗ್ರೆಸ್ ಪಕ್ಷವು ಕೊನೆಗೂ ಎರಡನೇ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದು, ರಾಜ್ಯಸಭೆ ಚುನಾವಣೆಗೆ ಮೊದಲನೇ ಅಭ್ಯರ್ಥಿಯಾಗಿ ಜೈರಾಮ್ ರಮೇಶ್ ಹಾಗೂ ಎರಡನೇ ಅಭ್ಯರ್ಥಿಯಾಗಿ ಮನ್ಸೂರ್ ಅಲಿಖಾನ್ ಅವರು ಉಮೇದುವಾರಿಕೆ ಸಲ್ಲಿಕೆ ಮಾಡಿದ್ದಾರೆ.

ಜೂನ್ 10ರಂದು ನಾಲ್ಕು ಸ್ಥಾನಗಳಿಗೆ ನಡೆಯಲಿರುವ ರಾಜ್ಯಸಭೆ ಚುನಾವಣೆಗೆ ಕಾಂಗ್ರೆಸ್ ಸ್ವಂತ ಬಲದಿಂದ ಒಂದು ಸ್ಥಾನ ಗೆಲ್ಲಲು ಮಾತ್ರ ಅವಕಾಶವಿದ್ದರೂ, ಅಂತಿಮ ಹಂತದ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಮನ್ಸೂರ್ ಅಲಿ ಖಾನ್‌ರನ್ನು ಎರಡನೇ ಅಭ್ಯರ್ಥಿಯಾಗಿ ಕಣಕ್ಕಿಳಿಸಿದೆ.

ವಿಧಾನಸೌಧದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಕಚೇರಿಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಂದ ಬಿ–ಫಾರಂ ಸ್ವೀಕರಿಸಿದ ಜೈರಾಮ್ ರಮೇಶ್, ಮನ್ಸೂರ್ ಅಲಿ ಖಾನ್ ಅವರು ವಿಧಾನಸಭೆ ಕಾರ್ಯದರ್ಶಿ ಹಾಗೂ ರಾಜ್ಯಸಭೆ ಚುನಾವಣೆಯ ಚುನಾವಣಾಧಿಕಾರಿಯಾಗಿರುವ ಎಂ.ಕೆ.ವಿಶಾಲಾಕ್ಷಿ ಅವರಿಗೆ ನಾಮಪತ್ರ ಸಲ್ಲಿಸಿದರು.

ಈ ವೇಳೆ ಜೈರಾಮ್ ರಮೇಶ್ ಅವರಿಗೆ ರಾಜ್ಯಸಭೆ ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ, ಹಿರಿಯ ನಾಯಕ ಎಚ್.ಕೆ. ಪಾಟೀಲ್ ಅವರು ಸಾಥ್ ನೀಡಿದರು. ಮನ್ಸೂರ್ ಅಲಿ ಖಾನ್ ಅವರಿಗೆ ಡಿ.ಕೆ. ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಅವರು ಸಾಥ್ ನೀಡಿದರು.

**ಎರಡನೇ ಅಭ್ಯರ್ಥಿ ಗೆಲ್ಲುವ ವಿಶ್ವಾಸ:** ನಾಮಪತ್ರ ಸಲ್ಲಿಕೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಡಿ.ಕೆ.ಶಿವಕುಮಾರ್, ನಮ್ಮದೂ ಕೆಲವು ಲೆಕ್ಕಾಚಾರ ಇರುತ್ತದೆ. ನಾಲ್ಕನೇ ಅಭ್ಯರ್ಥಿ ಗೆಲುವಿಗೆ ಎಲ್ಲಾ ಪಕ್ಷಗಳಿಗೂ ಹೆಚ್ಚುವರಿ ಮತಗಳು ಅಗತ್ಯವಿದೆ. ಮನ್ಸೂರ್ ಅಲಿಖಾನ್ ಅವರು ಗೆಲ್ಲುತ್ತಾರೆ ಎಂಬ ವಿಶ್ವಾಸವಿದೆ. ಜೆಡಿಎಸ್ ಬೆಂಬಲ ಕೇಳಿದ್ದಾರೆ. ನಾವು ನೀವು ನಮ್ಮ ಎರಡನೇ ಅಭ್ಯರ್ಥಿಗೆ ಬೆಂಬಲ ಕೊಡಿ ಎಂದು ಕೇಳಿದ್ದೇವೆ. ಏನಾಗುತ್ತೋ ನೋಡೋಣ ಎಂದು ಹೇಳಿದರು.

ಆಧಾರ: ಕನ್ನಡಪ್ರಭ, ದಿನಾಂಕ: 31.05.2022

## 6. ರಂಗೇರಿತು ರಾಜ್ಯಸಭಾ ಕಣ

ವಿಧಾನಸಭೆಯಿಂದ ರಾಜ್ಯಸಭೆಗೆ ನಡೆಯಲಿರುವ ಚುನಾವಣೆಯಲ್ಲಿ ಕಾಂಗ್ರೆಸ್ ತನ್ನ ಎರಡನೇ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಮೂಲಕ, ರಾಜ್ಯಸಭಾ ಚುನಾವಣೆಗೆ ಹೊಸ ರಂಗನ್ನು ತಂದಿದೆ.

ಎರಡನೇ ಅಭ್ಯರ್ಥಿ ಗೆಲ್ಲಲು ಬೇಕಿರುವಷ್ಟು ಮತ ಇಲ್ಲದಿದ್ದರೂ ಮನ್ಸೂರ್ ಆಲಿ ಖಾನ್ ಅವರಿಂದ ಕಾಂಗ್ರೆಸ್ ನಾಮಪತ್ರ ಹಾಕಿಸಿದೆ. ಈ ಮೂಲಕ, ರಾಜ್ಯಸಭೆ ಸ್ಥಾನಕ್ಕೆ ಚುನಾವಣೆ ನಿಶ್ಚಿತವಾಗಿದೆ. ಒಂದು ವೇಳೆ ಕಾಂಗ್ರೆಸ್ ಮೇಲಿನ ಜಿದ್ದಿಗೆ ಬಿಜೆಪಿಯೂ ಮೂರನೇ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿದ್ದು ಈ ಬಾರಿಯ ಚುನಾವಣೆ ಮತ್ತಷ್ಟು ರಂಗೇರಿದೆ. ಈಗಾಗಲೇ ಬಿಜೆಪಿ ಲೇಹರ್ ಸಿಂಗ್ ಸೇರಿದಂತೆ ಮೂವರು ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಕಾಂಗ್ರೆಸ್ ಇಬ್ಬರು ಹಾಗೂ ಜೆಡಿಎಸ್ ಒಬ್ಬರನ್ನು ನಿಲ್ಲಿಸಿದೆ. ಪರಿಣಾಮ ಕಣದಲ್ಲೀಗ ಒಟ್ಟು ಆರು ಅಭ್ಯರ್ಥಿಗಳಾದಂತಾಗಿದ್ದು, ಕುತೂಹಲ ಹೆಚ್ಚಿದೆ.

ಆದರೆ, ರಾಜ್ಯದಿಂದ ನಾಲ್ಕೇ ಸ್ಥಾನ ಖಾಲಿ ಇದ್ದು, ನಾಲ್ಕನೇ ಸ್ಥಾನಕ್ಕೆ ಯಾವ ಪಕ್ಷಕ್ಕೂ ಗೆಲ್ಲಲು ಅಗತ್ಯ ಸ್ಪಷ್ಟ ಮತಗಳು ಇಲ್ಲ. ಇದರಿಂದ ಆ ಸ್ಥಾನಕ್ಕೆ ಯಾವುದೇ ಪಕ್ಷದ ಅಭ್ಯರ್ಥಿ ಇರಲಿ, ಇನ್ನೊಂದು ಪಕ್ಷದ ನೆರವು ಅಗತ್ಯವಾಗಲಿದೆ. ಯಾರಿಗೆ ಯಾರು ಸಹಾಯ ಮಾಡಲಿದ್ದಾರೆ ಎನ್ನುವುದು ಈಗಿನ ಕುತೂಹಲ.

**ಜೆಡಿಎಸ್‌ಗೆ ಕೈಏಟು?** ಮೂಲಗಳ ಪ್ರಕಾರ ಜೆಡಿಎಸ್‌ಗೆ ಠಕ್ಕರ್ ಕೊಡಲು ಕಾಂಗ್ರೆಸ್ ಎರಡನೇ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿದೆ. ಅಲ್ಪಸಂಖ್ಯಾತ ಅಭ್ಯರ್ಥಿಗೆ ಟಿಕೆಟ್ ನೀಡಿರುವುದರಿಂದ ಒಂದು ವೇಳೆ ಜೆಡಿಎಸ್ ಬಿಜೆಪಿಯನ್ನು ಬೆಂಬಲಿಸಿದರೆ, ಜೆಡಿಎಸ್ ಅನ್ನು ಅಲ್ಪಸಂಖ್ಯಾತ ವಿರೋಧಿ ಎಂದು ಬಿಂಬಿಸಬಹುದು. ಇಲ್ಲದಿದ್ದರೆ ಜೆಡಿಎಸ್ ಮತಗಳನ್ನಾದರೂ ಒಡೆಯಬಹುದು ಎನ್ನುವ ಲೆಕ್ಕಾಚಾರ

ಕಾಂಗ್ರೆಸ್ನದ್ದಾಗಿದೆ. ಆದರೆ ಜೆಡಿಎಸ್–ಕಾಂಗ್ರೆಸ್ ಜಗಳದಲ್ಲಿ ಬಿಜೆಪಿಗೆ ಲಾಭವಾಗುವ ಸಾಧ್ಯತೆಯೂ ದಟ್ಟವಾಗಿದೆ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಆಧಾರ: ವಿಶ್ವವಾಣಿ, ದಿನಾಂಕ: 31.05.2022

## 7. ಕೈ 2ನೇ ಅಭ್ಯರ್ಥಿ ಸೋತ್ರೆ ಯಾರು ಹೊಣೆ

ಇಷ್ಟು ವರ್ಷವೂ ವಿವಿಧ ಸಂದರ್ಭದಲ್ಲಿ ತಮ್ಮ ಮೇಲೆ ಸವಾರಿ ಮಾಡುತ್ತಿದ್ದ ಜೆಡಿಎಸ್‌ಗೆ ಸರಿಯಾದ ಪಾಠ ಕಲಿಸಬೇಕೆಂಬ ಉದ್ದೇಶದಿಂದ ರಾಜ್ಯಸಭಾ ಚುನಾವಣೆಯಲ್ಲಿ ಎರಡನೇ ಅಭ್ಯರ್ಥಿಯನ್ನು ಕಣಕ್ಕಿಳಿಸಿದ ರಾಜ್ಯ ಕಾಂಗ್ರೆಸ್‌ನಲ್ಲೀಗ ಕಸಿವಿಸಿ ಶುರುವಾಗಿದೆ. ವಿಧಾನಸಭೆ ಬಲದ ಆಧಾರದಲ್ಲಿ ಕಾಂಗ್ರೆಸ್ ಒಂದು ಸ್ಥಾನ ಮಾತ್ರ ಗೆಲ್ಲಬಹುದು. ಆದರೆ, ಎರಡನೇ ಸ್ಥಾನ ಗೆಲ್ಲಲು 20 ಶಾಸಕರ ಕೊರತೆ ಇದೆ. ಎರಡನೇ ಪ್ರಾಶಸ್ತ್ಯದ ಮೇಲೆ ಗೆಲ್ಲುವ ಪ್ರಯತ್ನವೂ ಕಷ್ಟಸಾಧ್ಯದ ದಾರಿ, ವಿಧಾನಸಭೆ ಚುನಾವಣೆ ದೃಷ್ಟಿಯಲ್ಲಿಟ್ಟುಕೊಂಡು, ಮುಸ್ಲಿಂ ಸಮುದಾಯದ ಮತಗಳ ಕ್ರೋಢೀಕರಣದ ಉದ್ದೇಶದಲ್ಲಿ ಮುಸ್ಲಿಂ ಅಭ್ಯರ್ಥಿಯನ್ನು ರಾಜ್ಯಸಭೆ ಚುನಾವಣೆಗೆ ಕಣಕ್ಕಿಳಿಸಿ ಜೆಡಿಎಸ್‌ನ ಬಹಿರಂಗ ಬೆಂಬಲ ಕೋರುವುದು ಕಾಂಗ್ರೆಸ್ನ ತಂತ್ರಗಾರಿಕೆಯಾಗಿತ್ತು. ಆದರೆ, ಜೆಡಿಎಸ್ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸಿ, ಕಾಂಗ್ರೆಸ್ ಹೈಕಮಾಂಡ್ ಬಳಿ ಬೆಂಬಲ ಕೇಳಿಯೇ ನಾವು ಅಭ್ಯರ್ಥಿ ಹಾಕಿದ್ದೇವೆ ಎಂದು ಆ ಪಕ್ಷದ ನಾಯಕರು ಹೇಳಿಕೆ ನೀಡಿದ್ದು, ರಾಜ್ಯ ಕೈ ನಾಯಕರಿಗೆ ಕಸಿವಿಸಿ ಉಂಟುಮಾಡಿದೆ.

ಅದರಲ್ಲೂ ಎರಡನೇ ಅಭ್ಯರ್ಥಿ ಸೋತರೆ ಯಾರು ಹೊಣೆ ಎಂಬ ಚರ್ಚೆ ಪಕ್ಷದಲ್ಲಿ ಶುರುವಾಗಿದೆ. ಗೆಲುವು ಸಾಧ್ಯವಿಲ್ಲದ ಕಡೆ ಮುಸ್ಲಿಂ ಅಭ್ಯರ್ಥಿಯನ್ನು ಕಣಕ್ಕಿಳಿಸಿ ಸೋತರೆ ಸಮಾಜದಲ್ಲಿ ಬೇರೆ ಸಂದೇಶ ಹೋಗುತ್ತದೆ ಎಂದು ಕೈ ಅಲ್ಪಸಂಖ್ಯಾತ ಮುಖಂಡರೇ ಅಭಿಪ್ರಾಯಪಟ್ಟಿದ್ದಾರೆ. ಒಂದು ವೇಳೆ ಎರಡನೇ ಅಭ್ಯರ್ಥಿ ಕಣದಿಂದ ಹಿಂದೆ ಸರಿಯಲು ನಾಮಪತ್ರ ಹಿಂಪಡೆದರೂ ಅದೂ ಹಿನ್ನೆಡೆಯೇ ಆಗಲಿದೆ ಎಂಬ ವಾದ ಪಕ್ಷದಲ್ಲಿದೆ. ಎರಡನೇ ಅಭ್ಯರ್ಥಿ ಕಣಕ್ಕಿಳಿಸುವ ತಂತ್ರಗಾರಿಕೆ ಪಕ್ಷದ ನಾಯಕರ ತೀರ್ಮಾನವೋ ಅಥವಾ ಪ್ರಮುಖ ನಾಯಕರ ನಿರ್ಣಯವೋ ಎಂಬ ಬಗ್ಗೆ ಚರ್ಚೆ ನಡೆದಿದೆ. ಈ ತೀರ್ಮಾನ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರದ್ದೋ ಅಥವಾ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯರದ್ದೋ ಎಂಬ ಬಗ್ಗೆಯೂ ಚರ್ಚೆ ನಡೆಯುತ್ತಿದೆ. ಜೆಡಿಎಸ್ ಅಭ್ಯರ್ಥಿ ಕಣಕ್ಕಿಳಿಸುವ ಮುನ್ನ ಎರಡನೇ ಅಭ್ಯರ್ಥಿ ಹೂಡಿದಾಗ ತಂತ್ರಗಾರಿಕೆ ಎಂದು ಹೊಗಳಿದವರೇ ಈಗ ತಲೆ ಚಚ್ಚಿಕೊಳ್ಳುತ್ತಿದ್ದಾರೆ.

**ಹೈಕಮಾಂಡ್ ಕೆಂಗಣ್ಣು:** ಜೆಡಿಎಸ್‌ಗೆ ಪಾಠ ಕಲಿಸಲು ಹೋಗಿ ಬಿಜೆಪಿ ಮೂರನೇ ಅಭ್ಯರ್ಥಿ ಗೆಲುವು ಸಾಧಿಸಿದರೆ ಹೈಕಮಾಂಡ್ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ ಎಂಬ ಅಳುಕು ರಾಜ್ಯ ನಾಯಕರಿಗಿದೆ. ಈಗಿನ ಲೆಕ್ಕಾಚಾರದ ಪ್ರಕಾರ ಅಡ್ಡ ಮತದಾನ ಆಗದೇ ಇದ್ದರೆ ಬಿಜೆಪಿ ಮೂರನೇ ಅಭ್ಯರ್ಥಿಗೆ ಸಲೀಸೆಂಬ ವಾತಾವರಣ ಇದೆ.

**ಹೊಣೆ ಹೊತ್ತ ಜಮೀರ್**

ತಮ್ಮ ಪಕ್ಷದ ಎರಡನೇ ಅಭ್ಯರ್ಥಿಗೆ ಹೆಚ್ಚುವರಿ ಮತ ತರಲು ಶಾಸಕ ಜಮೀರ್ ಅಹ್ಮದ್ 'ಆಪರೇಷನ್ ಹಸ್ತ'ದ ಹೊಣೆ ಹೊತ್ತಿದ್ದಾರೆಂದು ಹೇಳಲಾಗುತ್ತಿದೆ. ಜೆಡಿಎಸ್‌ನಲ್ಲಿರುವ ತಮ್ಮ ಹಳೆಯ ಸ್ನೇಹಿತರಲ್ಲಿ ಏಳೆಂಟು ಮಂದಿಯನ್ನಾದರೂ ಸೆಳೆಯಬಹುದೆಂಬ ಗುಸುಗುಸು ಕೇಳಿಬಂದಿದೆ.

**ಕುಪೇಂದ್ರ ರೆಡ್ಡಿ ಬಳಿ ರೂ. 576 ಕೋಟಿ**

ಜೆಡಿಎಸ್‌ನಿಂದ ಸ್ಪರ್ಧಿಸಿರುವ ಕುಪೇಂದ್ರ ರೆಡ್ಡಿ ನಾಮಪತ್ರದ ಜೊತೆಗೆ ಆಸ್ತಿ ವಿವರ ನೀಡಿದ್ದು, ಒಟ್ಟು 353.42 ಕೋಟಿ ರೂ. ಮೌಲ್ಯದ ಚರಾಸ್ತಿ ಹಾಗೂ ರೂ. 222,47,60,624 ಮೌಲ್ಯದ ಸ್ತಿರಾಸ್ತಿ ಸೇರಿ ರೂ. 575,89,75,550 ಒಡೆಯರಾಗಿದ್ದಾರೆ. ಕುಪೇಂದ್ರ ರೆಡ್ಡಿ ರೂ. 21,12,381 ನಗದು ಹೊಂದಿದ್ದರೆ, ಅವರ ಪತ್ನಿ ಆರ್.ಪುಷ್ಪಾವತಿ 43,41,108 ರೂ. ಹೊಂದಿದ್ದಾರೆ. ಅವಿಭಕ್ತ ಕುಟುಂಬದಲ್ಲಿ ರೂ. 9,32,408 ನಗದು ಇದೆ.

**ವಿವಿಧ ಹೂಡಿಕೆಗಳು:** ಬಾಂಡ್, ಷೇರು, ಮ್ಯೂಚುವಲ್ ಫಂಡ್‌ಗಳಲ್ಲಿ ರೂ. 88.44 ಕೋಟಿ ಹೂಡಿಕೆ ಮಾಡಿದ್ದರೆ, ಪತ್ನಿ ಹೆಸರಿನಲ್ಲಿ ರೂ. 9.06 ಲಕ್ಷ ಹೂಡಿಕೆ ಮಾಡಲಾಗಿದೆ. ವೈಯಕ್ತಿಕ ಸಾಲ, ಮುಂಗಡ ಸೇರಿ ಒಟ್ಟು ರೂ. 244.46 ಲಕ್ಷ ಮತ್ತು ಪತ್ನಿ ಹೆಸರಿನಲ್ಲಿ ರೂ. 242.18 ಲಕ್ಷ ಹಾಗೂ ಅವಿಭಕ್ತ ಕುಟುಂಬದ ಹೆಸರಿನಲ್ಲಿ ರೂ. 43.95 ಲಕ್ಷ ಇದೆ.

1 ಆಡಿ ಹಾಗೂ 2 ಟೊಯೋಟಾ ಫಾರ್ಚುನರ್ ಕಾರುಗಳನ್ನು ಹೊಂದಿದ್ದು, ಅವುಗಳ ಒಟ್ಟು ಮೌಲ್ಯ ರೂ. 1.35 ಕೋಟಿ ಗಳಾಗಿದೆ. ರೆಡ್ಡಿ ಬಳಿ ರೂ. 1.74 ಕೋಟಿ ಮೌಲ್ಯದ ಚಿನ್ನಾಭರಣವಿದ್ದರೆ, ಅವರ ಪತ್ನಿ ಹೆಸರಿನಲ್ಲಿ ರೂ. 3.51 ಕೋಟಿ ಬೆಲೆಯ ಚಿನ್ನಾಭರಣಗಳಿವೆ.

**ನಿರ್ಮಲಾಗೆ ಪತಿಯ ಚರ-ಸ್ಥಿರಾಸ್ತಿ ಗೊತ್ತಿಲ್ಲ**

ದೇಶದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಮ್ಮ ಪತಿ ಪ್ರಭಾಕರ್ ಪರಕಳ ಅವರ ವಾರ್ಷಿಕ ಆದಾಯ, ಚರ-ಸ್ಥಿರಾಸ್ತಿ ವಿವರ ಗೊತ್ತಿಲ್ಲ ಎಂಬುದಾಗಿ ಪ್ರಮಾಣಪತ್ರದಲ್ಲಿ ತಿಳಿಸಿದ್ದಾರೆ. ಉಳಿದಂತೆ ಅವರು ಘೋಷಿಸಿದ ಆಸ್ತಿ ವಿವರ ಹೀಗಿದೆ.

ದೆಹಲಿ ಜವಾಹರಲಾಲ್ ನೆಹರು ವಿವಿಯಲ್ಲಿ ಎಂ.ಫಿಲ್ ವ್ಯಾಸಂಗ 2016-17ರಲ್ಲಿ 5.85 ಲಕ್ಷ ರೂ. ಇದ್ದ ವಾರ್ಷಿಕ ಆದಾಯ 2020-21ಕ್ಕೆ 8 ಲಕ್ಷಕ್ಕೆ ಏರಿಕೆ ಠೇವಣಿ, ಎಫ್‌ಡಿ, ದ್ವಿಚಕ್ರ ವಾಹನ, ಕುಟುಂಬ ಸದಸ್ಯರಿಗೆ ನೀಡಿದ ಸಾಲ, ಬಂಗಾರ-ಬೆಳ್ಳಿ ಸೇರಿ ರೂ. 63.39 ಲಕ್ಷ ಮೊತ್ತದ ಚರಾಸ್ತಿ ಹೈದರಾಬಾದ್‌ನಲ್ಲಿನ ಮನೆ-ನಿವೇಶನ ಸೇರಿ ರೂ. 1.87 ಕೋಟಿ ಮೌಲ್ಯದ ಸ್ಥಿರಾಸ್ತಿ, ರೂ. 30.44 ಲಕ್ಷ ಸಾಲ.

**ಲೆಹರ್ ಸಿಂಗ್ ಸಿರೋಯಿ:** 2016–17ರಲ್ಲಿ ರೂ.71.37 ಲಕ್ಷ ಇದ್ದ ವಾರ್ಷಿಕ ಆದಾಯ 2020–21ಕ್ಕೆ ರೂ. 2.11 ಕೋಟಿಗೆ ಏರಿಕೆ ನಗದು, ಠೇವಣಿ, ವಿವಿಧ ಕಂಪನಿಗಳಲ್ಲಿ ಹೂಡಿಕೆ, ಷೇರು, ಬಂಗಾರ–ಬೆಳ್ಳಿ ಸೇರಿ ಒಟ್ಟು ರೂ. 16.15 ಕೋಟಿ ಮೌಲ್ಯದ ಚರಾಸ್ತಿ ನಿವೇಶನ, ಮನೆಗಳು ಸೇರಿ ರೂ. 29.40 ಕೋಟಿ ಮೌಲ್ಯದ ಸ್ಥಿರಾಸ್ತಿ ರೂ. 40.50 ಲಕ್ಷ ಸಾಲ. ಪತ್ನಿ ಶಾಂತಬಾಯಿ: 2016–17ರಲ್ಲಿ ರೂ. 18.10 ಲಕ್ಷ ಇದ್ದ ವಾರ್ಷಿಕ ಆದಾಯ 2020–21ರಲ್ಲಿ ರೂ. 41.76 ಲಕ್ಷ ಗೆ ಏರಿಕೆ ರೂ. 6.94 ಕೋಟಿ ಮೊತ್ತದ ಚರಾಸ್ತಿ, ರೂ. 88 ಲಕ್ಷ ಸ್ಥಿರಾಸ್ತಿ, ರೂ. 52.50 ಲಕ್ಷ ಸಾಲ, ಅವಿಭಜಿತ ಕುಟುಂಬದ ಹೆಸರಿನಲ್ಲಿ ರೂ. 1.21 ಕೋಟಿ ಮೌಲ್ಯದ ಚರಾಸ್ತಿ, ರೂ. 6.50 ಲಕ್ಷ ಮೌಲ್ಯದ ಸ್ಥಿರಾಸ್ತಿ.

**ಜಗ್ಗೇಶ್:** ರೂ. 1.52 ಕೋಟಿ ಮೌಲ್ಯದ ಐಷಾರಾಮಿ ವಾಹನ, ಠೇವಣಿ, ಬಂಗಾರ–ಬೆಳ್ಳಿ ಸೇರಿ ರೂ. 4.39 ಕೋಟಿ ಮೊತ್ತದ ಚರಾಸ್ತಿ 3 ಎಕರೆ ಕೃಷಿ ಜಮೀನು, ನಿವೇಶನ–ಮನೆ ಸೇರಿ ರೂ. 13.25 ಕೋಟಿ ಮೌಲ್ಯದ ಸ್ಥಿರಾಸ್ತಿ, ರೂ. 2.91 ಕೋಟಿ ಸಾಲ. ಪತ್ನಿ ಪರಿಮಳಾ: ಠೇವಣಿ, ವಾಹನ, ಶೇರು ಹೂಡಿಕೆ ಸಹಿತ ರೂ. 67.45 ಲಕ್ಷ ಮೌಲ್ಯದ ಚರಾಸ್ತಿ ಮನೆ ನಿವೇಶನ ಸೇರಿ ರೂ. 4.5 ಕೋಟಿ ಮೊತ್ತದ ಸ್ಥಿರಾಸ್ತಿ, ರೂ. 4 ಲಕ್ಷ ಸಾಲ.

**ನಂಟು ಉಳಿಸಿಕೊಂಡ ಜೈರಾಮ್:** ಮೂಲತಃ ಕರ್ನಾಟಕದವರಾಗಿದ್ದು ಬಹುಕಾಲ ದೆಹಲಿಯಲ್ಲೇ ಇರುವ ಕಾಂಗ್ರೆಸ್ ಅಭ್ಯರ್ಥಿ ಜೈರಾಮ್ ರಮೇಶ್ ಚಿಕ್ಕಮಗಳೂರಿನಲ್ಲಿ ಬ್ಯಾಂಕ್ ಖಾತೆ ಹೊಂದಿದ್ದು, ಸಾಕಷ್ಟು ಠೇವಣಿ ಕೂಡ ಇಟ್ಟಿದ್ದಾರೆ. ಒಟ್ಟಾರೆ ಅವರ ಬಳಿ 6 ಖಾತೆಗಳಲ್ಲಿ ರೂ. 90.59 ಲಕ್ಷ ಠೇವಣಿ ಇದ್ದು, ರೂ. 45 ಲಕ್ಷನ ಚಿನ್ನ, ರೂ. 4.5 ಲಕ್ಷ ಮೌಲ್ಯದ ವಜ್ರ, ರೂ. 1.2 ಲಕ್ಷ ನ ಬೆಳ್ಳಿ ಸಾಮಗ್ರಿಗಳಿವೆ. ಚೆನ್ನೈನಲ್ಲಿ 2 ಮನೆ ಹೊಂದಿದ್ದು, ಅದರ ಮಾರುಕಟ್ಟೆ ದರ ರೂ. 2.84 ಕೋಟಿ, ರೂ. 35.47 ಲಕ್ಷ ಸಾಲ ಹೊಂದಿದ್ದಾರೆ.

**ಮನ್ಸೂರ್ ರೂ.44 ಕೋಟಿ ಸ್ಥಿರಾಸ್ತಿ:** ಮನ್ಸೂರ್ ಆಲಿಖಾನ್ ಬಳಿ ರೂ, 8.39 ಕೋಟಿ ಪತ್ನಿ ಬಳಿ ರೂ. 4.41 ಕೋಟಿ ಮತ್ತು ಇಬ್ಬರ ಅವಲಂಬಿತರ ಬಳಿ 36 ಲಕ್ಷದಷ್ಟು ಚರಾಸ್ತಿ ಇದೆ. 10 ಕಡೆ ಕೃಷಿ ಭೂಮಿ, 9 ಕಡೆ ಕೃಷಿಯೇತರ ಭೂಮಿ, ಐದು ವಸತಿ ಕಟ್ಟಡಗಳು ಸೇರಿ 44 ಕೋಟಿಯಷ್ಟು (ಪತಿ– ಪತ್ನಿ ಸೇರಿ) ಮೌಲ್ಯದ ಸ್ಥಿರಾಸ್ತಿ ಇದೆ. 'ಸಾಲದ ವಿಚಾರಕ್ಕೆ ಬಂದರೆ ಮನ್ಸೂರ್ ಪತ್ನಿ ಹೆಸರಲ್ಲಿ ರೂ. 2 ಕೋಟಿ ಸಾಲವಿದ್ದರೆ, ಮನ್ಸೂರ್ 1.92 ಲಕ್ಷ ಸಾಲಗಾರರಾಗಿದ್ದಾರೆ. ಅವರ ಬಳಿ ರೂ. 48 ಲಕ್ಷ ಮಿನಿ ಕೂಪರ್ ಹಾಗೂ ಪತ್ನಿ ಬಳಿ 1.09 ಕೋಟಿ ಮೌಲ್ಯದ ಬಿಎಂಡಬ್ಲ್ಯು ಮತ್ತು 17.5 ಲಕ್ಷದ ಹುಂಡೈ ಕ್ರೆಟಾ ಕಾರಿದೆ.

ಆಧಾರ: ವಿಜಯವಾಣಿ, ದಿನಾಂಕ: 01.06.2022

## 8. ರಾಜ್ಯಸಭೆ ಚುನಾವಣೆ: ನಾಮಪತ್ರ ಸಲ್ಲಿಕೆ

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ರಾಜ್ಯ ವಿಧಾನಸಭೆಯಿಂದ ಮತ್ತೊಂದು ಅವಧಿಗೆ ರಾಜ್ಯಸಭೆಗೆ ಪುನರಾಯ್ಕೆ ಬಯಸಿ ನಾಮಪತ್ರ ಸಲ್ಲಿಸಿದರು.

ಬೆಳಗ್ಗೆ ನಗರದ ಗವಿಗಂಗಾಧರೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದ ಬಳಿಕ ವಿಧಾನಸೌಧಕ್ಕೆ ಆಗಮಿಸಿದ ನಿರ್ಮಲಾ ಸೀತಾರಾಮನ್ ಅವರು ಚುನಾವಣಾಧಿಕಾರಿಯಾದ ವಿಧಾನಸಭೆ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ಅವರಿಗೆ ನಾಮಪತ್ರ ಸಲ್ಲಿಸಿದರು. ಸಿಎಂ ಬಸವರಾಜ ಬೊಮ್ಮಾಯಿ, ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹಾಗೂ ಹಲವು ಸಚಿವರು ಈ ಸಂದರ್ಭದಲ್ಲಿ ಭಾಗವಹಿಸಿದ್ದರು.

ನಂತರ ಚಿತ್ರನಟರಾದ ಮಾಜಿ ಶಾಸಕ ಜಗ್ಗೇಶ್ ಅವರು ನಳಿನ್‌ಕುಮಾರ್ ಕಟೀಲ್, ಕಾನೂನು ಸಚಿವ ಮಾಧುಸ್ವಾಮಿ ಅವರೊಂದಿಗೆ ತೆರಳಿ ನಾಮಪತ್ರ ಸಲ್ಲಿಸಿದರು. ಬಿಜೆಪಿಯ 3ನೇ ಅಭ್ಯರ್ಥಿಯಾಗಿ ಮಾಜಿ ಎಂಎಲ್ಸಿ ಲೆಹರ್ ಸಿಂಗ್ ಕೊನೆಯವರಾಗಿ ನಾಮಪತ್ರ ಸಲ್ಲಿಸಿದರು. ಈ ಸಂದರ್ಭದಲ್ಲಿ ನಳಿನ್ ಕುಮಾರ್ ಕಟೀಲ್, ಕಂದಾಯ ಸಚಿವ ಆರ್.ಅಶೋಕ್ ಇದ್ದರು.

**ಮುನಿಸು ತೊರೆದ ಬಿಎಸ್‌ವೈ:** ಮೇಲ್ಮನೆ ಚುನಾವಣೆಯಲ್ಲಿ ಪುತ್ರ ಬಿ.ವೈ.ವಿಜಯೇಂದ್ರಗೆ ಟಿಕೆಟ್ ನಿರಾಕರಣೆಯಿಂದ ಅಸಮಾಧಾನಗೊಂಡರೂ ತೋರ್ಪಡಿಸಿಕೊಳ್ಳದ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರು ರಾಜ್ಯಸಭಾ ಚುನಾವಣೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದು ಗಮನ ಸೆಳೆಯಿತು. ಬಿಎಸ್‌ವೈ ಮುನಿಸು ಇನ್ನೂ ಕೆಲಸಮಯ ಮುಂದುವರಿಯಬಹುದು ಎಂಬ ನಿರೀಕ್ಷೆಯನ್ನು ಹುಸಿ ಮಾಡಿದರು.

ವಿಧಾನಸೌಧಕ್ಕೆ ಆಗಮಿಸಿ, ನಿರ್ಮಲಾ ಸೀತಾರಾಮನ್ ಅವರು ನಾಮಪತ್ರ ಸಲ್ಲಿಕೆ ವೇಳೆ ಯಡಿಯೂರಪ್ಪ ಹಾಜರಾದರು. ಈ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, "ರಾಜ್ಯಸಭೆ ಚುನಾವಣೆಗೆ ನಿರ್ಮಲಾ ಸೀತಾರಾಮನ್ ಅವರು ಕರ್ನಾಟಕದಿಂದ ಸ್ಪರ್ಧಿಸಲು ಅವಕಾಶ ಮಾಡಿಕೊಟ್ಟ ಪ್ರಧಾನಿ ನರೇಂದ್ರ ಮೋದಿಯವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಎರಡು ಸ್ಥಾನಗಳನ್ನು ಗೆಲ್ಲುವ ಜೊತೆಗೆ, 3ನೇ ಅಭ್ಯರ್ಥಿಯಾಗಿರುವ ಲೆಹರ್ ಸಿಂಗ್ ಅವರನ್ನೂ ಗೆಲ್ಲಿಸಿಕೊಳ್ಳಲು ಪ್ರಯತ್ನ ಮಾಡುತ್ತೇವೆ. ಪಕ್ಷದಿಂದ ಮೂವರನ್ನು ರಾಜ್ಯಸಭೆಗೆ ಆರಿಸಿ ಕಳುಹಿಸಲು ಶಕ್ತಿಮೀರಿ ಪ್ರಯತ್ನ ಮಾಡುತ್ತೇವೆ" ಎಂದು ಹೇಳಿದರು.

**ಬರಿಗಾಲಿನಲ್ಲಿ ಬಂದ ರೇವಣ್ಣ:** ಜೆಡಿಎಸ್ ಅಭ್ಯರ್ಥಿಯಾಗಿ ಕುಪೇಂದ್ರ ರೆಡ್ಡಿ ಅವರು ರಾಜ್ಯಸಭೆ ಚುನಾವಣೆಗೆ ಎರಡು ಪ್ರತಿ ನಾಮಪತ್ರ ಸಲ್ಲಿಸಿದರು. ಎಚ್.ಡಿ.ರೇವಣ್ಣ ಅವರು ಬರಿಗಾಲಿನಲ್ಲಿ ಪಕ್ಷದ

ಅಭ್ಯರ್ಥಿಯೊಂದಿಗೆ ಆಗಮಿಸಿದ್ದರು. ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ, ಮಾಜಿ ಸಚಿವರಾದ ಬಂಡೆಪ್ಪ ಕಾಶೆಂಪುರ್, ಸಿ.ಎಸ್.ಪುಟ್ಟರಾಜು, ಶಾಸಕ ಎ.ಟಿ.ರಾಮಸ್ವಾಮಿ ಮತ್ತಿತರರು ಕುಪೇಂದ್ರ ರೆಡ್ಡಿ ನಾಮಪತ್ರ ಸಲ್ಲಿಕೆ ವೇಳೆ ಹಾಜರಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಎಚ್.ಡಿ.ರೇವಣ್ಣ "ಜೆಡಿಎಸ್ ಬಳಿ 32 ಮತಗಳಿದ್ದು, ತಮ್ಮ ಅಭ್ಯರ್ಥಿಗೆ ಬೆಂಬಲ ನೀಡುವಂತೆ ದೇವೇಗೌಡರು ಎಐಸಿಸಿ ಮುಖ್ಯಸ್ಥರಾದ ಸೋನಿಯಾ ಗಾಂಧಿ ಅವರೊಂದಿಗೆ ದೂರವಾಣಿಯಲ್ಲಿ ಮಾತನಾಡಿ ಮನವಿ ಮಾಡಿದ್ದರು. ಆದರೆ, ಕಾಂಗ್ರೆಸ್ ನವರು ಅಗತ್ಯ ಮತ ಇಲ್ಲದಿದ್ದರೂ ದಿಢೀರ್ 2ನೇ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದಾರೆ. ಆದರೂ, ಕೋಮುವಾದಿ ಪಕ್ಷವನ್ನು ದೂರವಿಡಲು ಜೆಡಿಎಸ್ ಅಭ್ಯರ್ಥಿಗೆ ಬೆಂಬಲ ನೀಡುವಂತೆ ಕಾಂಗ್ರೆಸ್‌ನ ಎಲ್ಲ ನಾಯಕರಿಗೆ ಮನವಿ ಮಾಡಲಾಗಿದೆ" ಎಂದರು.

**ಇಬ್ರಾಹಿಂ ಆಕ್ರೋಶ**

"ರಾಜ್ಯ ಕಾಂಗ್ರೆಸ್‌ನಲ್ಲಿ ಸಿದ್ದರಾಮಯ್ಯ ಮತ್ತು ಉಳಿದ ನಾಯಕರ ಮಧ್ಯೆ ಹೊಂದಾಣಿಕೆ ಇಲ್ಲ. ಹಾಗಾಗಿ, ಬಿಜೆಪಿ ಗೆಲ್ಲಿಸಬೇಕು ಎಂದು ಪಣ ತೊಟ್ಟಂತೆ ಕಾಂಗ್ರೆಸ್ ತನ್ನ 2ನೇ ಅಭ್ಯರ್ಥಿಯನ್ನು ಕಣಕ್ಕಿಳಿಸಿದೆ. ದೇವೇಗೌಡರು ಎಐಸಿಸಿ ಮುಖ್ಯಸ್ಥೆ ಸೋನಿಯಾ ಗಾಂಧಿ ಅವರೊಂದಿಗೆ ಮಾತನಾಡಿದ್ದು, ಎಚ್.ಡಿ.ಕುಮಾರಸ್ವಾಮಿ ಅವರು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್‌ಗೆ ಮನವಿ ಮಾಡಿದ್ದರು. ಇಷ್ಟಾದರೂ, ಕಾಂಗ್ರೆಸ್ ತುಳಿದಿರುವ ಹಾದಿ ಸರಿ ಇಲ್ಲ" ಎಂದು ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಅಸಮಾಧಾನ ವ್ಯಕ್ತಪಡಿಸಿದರು.

ಆಧಾರ: ವಿಜಯ ಕರ್ನಾಟಕ, ದಿನಾಂಕ: 01.06.2022

## 9. ಎಲ್ಲ ಪಕ್ಷಗಳಿಗೂ ಅಡ್ಡಮತ ಭೀತಿ

ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಆರು ನಾಮಪತ್ರ ಸಲ್ಲಿಕೆಯಾಗುವ ಮೂಲಕ ಚುನಾವಣೆ ಕುತೂಹಲದ ಘಟ್ಟ ತಲುಪಿದ್ದು, ಮೂರೂ ಪ್ರಮುಖ ರಾಜಕೀಯ ಪಕ್ಷಗಳಿಗೆ ಅಡ್ಡ ಮತದಾನವಾಗುವ ಭೀತಿ ಎದುರಾಗಿದೆ.

ಈಗಾಗಲೇ ತೆರೆಮರೆಯಲ್ಲಿ ಶಾಸಕರನ್ನು ಸೆಳೆಯುವ ಪ್ರಯತ್ನ ಆರಂಭವಾಗಿದ್ದು, ರಾಷ್ಟ್ರೀಯ ಪಕ್ಷಗಳಾದ ಬಿಜೆಪಿ ಮತ್ತು ಕಾಂಗ್ರೆಸ್ ಎರಡೂ ಜೆಡಿಎಸ್‌ನ ಶಾಸಕರಿಗೆ ಬಲೆ ಬೀಸಿವೆ ಎಂಬ ಮಾತು ಕೇಳಿಬಂದಿದೆ.

ಇದರಲ್ಲಿ ಮುಂಬರುವ ವಿಧಾನಸಭಾ ಚುನಾವಣೆಯ ಲೆಕ್ಕಾಚಾರ ಅಡಗಿರಲಿದೆ. ಅಂದರೆ, ಮುಂದಿನ ಚುನಾವಣೆಯಲ್ಲಿ ಒಂದು ಪಕ್ಷ ತೊರೆದು ಬೇರೊಂದು ಪಕ್ಷಕ್ಕೆ ಹಾರುವವರು ಈಗಲೇ ತಮ್ಮ

ನಿಷ್ಠೆ ಪ್ರದರ್ಶಿಸುವ ನಿರೀಕ್ಷೆಯಿದೆ. ಜೆಡಿಎಸ್‌ನಲ್ಲಿ ಅಸಮಾಧಾನಿತ ಶಾಸಕರ ಸಂಖ್ಯೆ ಹೆಚ್ಚಾಗಿರುವುದರಿಂದ ಅಂಥವರು ಈಗ ಪಕ್ಷದ ಸೂಚನೆ ಉಲ್ಲಂಘಿಸಿ ತಮ್ಮ ಒಲವಿನ ಪಕ್ಷದೆಡೆಗೆ ವಿಶ್ವಾಸತೋರಬಹುದು ಎನ್ನಲಾಗುತ್ತಿದೆ. ಒಂದು ವೇಳೆ ಯಾವುದೇ ಅಡ್ಡ ಮತದಾನ ನಡೆಯದಿದ್ದರೆ ಜೆಡಿಎಸ್ ಅಭ್ಯರ್ಥಿಗೆ ಗೆಲುವು ಸಿಗುವ ಸಾಧ್ಯತೆಯಿದೆ.

ಶುಕ್ರವಾರ ನಾಮಪತ್ರ ವಾಪಸ್ ಪಡೆಯಲು ಕೊನೆಯ ದಿನವಾಗಿರುವುದರಿಂದ ಅಂದು ನಾಲ್ಕನೇ ಸ್ಥಾನಕ್ಕೆ ಸ್ಪರ್ಧಿಸಿರುವ ಮೂವರು ಅಭ್ಯರ್ಥಿಗಳ ಪೈಕಿ ಯಾರಾದರೂ ವಾಪಸ್ ಪಡೆದಲ್ಲಿ ಕಣದ ಚಿತ್ರಣ ಬದಲಾಗಲಿದೆ. ಅಂದು ಮಧ್ಯಾಹ್ನ 3 ಗಂಟೆ ನಂತರ ರಾಜ್ಯಸಭಾ ಚುನಾವಣೆಯ ಸ್ಪಷ್ಟ ಚಿತ್ರಣ ಹೊರಬೀಳಲಿದೆ.

ವಿಧಾನಸಭೆಯ ಸಂಖ್ಯಾಬಲದ, ಆಧಾರದ ಮೇಲೆ ಬಿಜೆಪಿ ಎರಡು ಮತ್ತು ಕಾಂಗ್ರೆಸ್ ಸ್ಥಾನವನ್ನು ನಿರಾಯಾಸವಾಗಿ ಗೆಲ್ಲಬಹುದಾಗಿದೆ. ನಾಲ್ಕನೇ ಸ್ಥಾನ ಗೆಲ್ಲುವಷ್ಟು ಮತಗಳ ಬಲ ಜೆಡಿಎಸ್ ಸೇರಿದಂತೆ ಯಾವುದೇ ಪಕ್ಷಕ್ಕೂ ಇಲ್ಲ. ಆದರೂ ಮೂರೂ ಪಕ್ಷಗಳು ಈ ನಾಲ್ಕನೇ ಸ್ಥಾನಕ್ಕೆ ತಮ್ಮ ಅಭ್ಯರ್ಥಿಯನ್ನು ಕಣಕ್ಕಿಳಿಸಿ ಅದೃಷ್ಟ ಪರೀಕ್ಷೆಗಿಳಿದಿವೆ.

ಒಬ್ಬ ಅಭ್ಯರ್ಥಿ ಗೆಲ್ಲುವುದಕ್ಕೆ ಕನಿಷ್ಠ 45 ಒಟ್ಟು ಮತಗಳ ಅಗತ್ಯವಿದೆ. ಬಿಜೆಪಿಗೆ ತಮ್ಮ ಮೊದಲ ಹಾಗೂ ಎರಡನೇ ಆದ್ಯತೆಯ ಅಭ್ಯರ್ಥಿಗಳಾದ ನಿರ್ಮಲಾ ಸೀತಾರಾಮನ್ ಹಾಗೂ ಜಗ್ಗೇಶ್ ಅವರನ್ನು ಗೆಲ್ಲಿಸಿಕೊಳ್ಳುವುದು ಮುಖ್ಯ. ಅದೇ ರೀತಿ ಕಾಂಗ್ರೆಸ್‌ಗೆ ಮೊದಲ ಆದ್ಯತೆಯ ಜೈರಾಂ ರಮೇಶ್ ಅವರನ್ನು ಗೆಲ್ಲಿಸಿಕೊಳ್ಳುವುದು ಪ್ರತಿಷ್ಠೆಯ ವಿಷಯ, ಬಿಜೆಪಿಗೆ ಲೆಹರ್ ಸಿಂಗ್ ಸಿರೋಯ ಮತ್ತು ಕಾಂಗ್ರೆಸ್‌ಗೆ ಮನ್ಸೂರ್ ಖಾನ್ ಹೆಚ್ಚುವರಿ ಅಭ್ಯರ್ಥಿ ಇದ್ದಂತೆ.

ಹೀಗಾಗಿ, ಕನಿಷ್ಠ ಮತಗಳಿಗಿಂತ ಒಂದು ಅಥವಾ ಎರಡು ಮತಗಳನ್ನು ಹೆಚ್ಚಿಗೆ ಇರುವಂತೆ ಆಯಾ ಪಕ್ಷಗಳು ನಿಗದಿ ಮಾಡಲಿವೆ. ಆದ್ಯತೆಯ ಅಭ್ಯರ್ಥಿಗಳಿಗೆ ಬೇಕಾದಷ್ಟು ಮತಗಳನ್ನು ನಿಗದಿಪಡಿಸಿದ ಬಳಿಕ ಉಳಿಯುವ ಮತಗಳನ್ನು ಹೆಚ್ಚುವರಿ ಅಭ್ಯರ್ಥಿಗಳಿಗೆ ನೀಡಲಿವೆ. ಆದರೆ, ಜೆಡಿಎಸ್‌ಗೆ ಈ ಸಮಸ್ಯೆ ಇಲ್ಲ. ಒಬ್ಬ ಅಭ್ಯರ್ಥಿ ಗೆಲ್ಲಲು ಬೇಕಾದಷ್ಟು ಮತಗಳು ಇಲ್ಲದಿದ್ದರೂ ತನ್ನ ಅಭ್ಯರ್ಥಿಯನ್ನಾಗಿ ಕುಪೇಂದ್ರ ರೆಡ್ಡಿ ಅವರನ್ನು ಕಣಕ್ಕಿಳಿಸಿದೆ. ಆ ಪಕ್ಷದ ಎಲ್ಲ ಮತಗಳೂ ರೆಡ್ಡಿ ಅವರಿಗೇ ಲಭಿಸಬಹುದು.

ಮೂರು ಪಕ್ಷಗಳೂ ಮತದಾರರಾಗಿರುವ ತಮ್ಮ ಶಾಸಕರಿಗೆ ವಿಪ್ ಜಾರಿಗೊಳಿಸಿ ಪಕ್ಷದ ಅಧಿಕೃತ ಅಭ್ಯರ್ಥಿಗೇ ಮತ ಚಲಾಯಿಸುವಂತೆ ಸೂಚಿಸಲಿವೆ. ಮೇಲಾಗಿ ಇದು ಗೌಪ್ಯ ಮತದಾನವಲ್ಲ, ಚಲಾಯಿಸಿದ ಮತಪತ್ರವನ್ನು ಪೆಟ್ಟಿಗೆಗೆ ಹಾಕುವ ಮೊದಲು ಪಕ್ಷದ ಪ್ರತಿನಿಧಿಗೆ ತೋರಿಸಬೇಕಾಗುತ್ತದೆ. ಯಾರು ಅಡ್ಡ ಮತದಾನ ಮಾಡಿದರೂ ಸ್ಪಷ್ಟವಾಗಿ ಗೊತ್ತಾಗುತ್ತದೆ. ಪಕ್ಷದ ವಿಪ್ ಉಲ್ಲಂಘಿಸಿ ಬೇರೊಬ್ಬರಿಗೆ ಮತ

ಚಲಾಯಿಸಿದ ಪ್ರಸಂಗಗಳು ಹಿಂದೆ ನಡೆದಿವೆ. ಈ ಬಾರಿಯೂ ಅದೇ ಪುನರಾವರ್ತನೆಯಾಗುವ ಸಾಧ್ಯತೆಯನ್ನೂ ಅಲ್ಲಗಳೆಯುವಂತಿಲ್ಲ.

ವಿಧಾನಸಭೆಯಲ್ಲಿ ಬಿಜೆಪಿಯ ಸಂಖ್ಯಾಬಲ 119, ಬಿಎಸ್‌ಪಿ ಶಾಸಕ ಎನ್.ಮಹೇಶ್ ಬಿಜೆಪಿ ಸೇರ್ಪಡೆಯಾಗಿದ್ದಾರೆ. ಪಕ್ಷೇತರ ಶಾಸಕ ನಾಗೇಶ್ ಬಿಜೆಪಿ ಜೊತೆ ಗುರುತಿಸಿಕೊಂಡಿದ್ದಾರೆ. ಹೀಗಾಗಿ, ಸ್ಪೀಕರ್ ಅವರನ್ನೂ ಸೇರಿಸಿದರೆ ಬಿಜೆಪಿಯ ಬಲ 122ಕ್ಕೆ ಏರುತ್ತದೆ. ಅದೇ ರೀತಿ ಕಾಂಗ್ರೆಸ್ ಸಂಖ್ಯಾಬಲ 69, ಪಕ್ಷೇತರ ಶಾಸಕ ಶರತ್ ಬಚ್ಚೇಗೌಡ ಕಾಂಗ್ರೆಸ್ ಸೇರ್ಪಡೆಯಾಗಿದ್ದಾರೆ. ಅಲ್ಲಿಗೆ ಕಾಂಗ್ರೆಸ್ ಬಲ 70ಕ್ಕೆ ತಲುಪುತ್ತದೆ.

ಕನಿಷ್ಠ ಮತಗಳ ಚಲಾವಣೆ ಲೆಕ್ಕಕ್ಕೆ ಹಿಡಿದರೆ ಬಿಜೆಪಿ ತನ್ನ ಮೊದಲ ಎರಡು ಅಭ್ಯರ್ಥಿಗಳಿಗೆ ತಲಾ 46 ಮತಗಳನ್ನು ಹಂಚಿಕೆ ಮಾಡಿದರೂ ಹೆಚ್ಚುವರಿಯಾಗಿ 30 ಮತಗಳು ಉಳಿಯಲಿವೆ. ಅವುಗಳನ್ನು ಪಕ್ಷದ ಮೂರನೇ ಅಭ್ಯರ್ಥಿ ಲೆಹರ್ ಸಿಂಗ್ ಸಿರೋಯ ಅವರಿಗೆ ನೀಡಬಹುದಾಗಿದೆ. ಕಾಂಗ್ರೆಸ್ ತನ್ನ ಮೊದಲ ಅಭ್ಯರ್ಥಿಗೆ 46 ಮತ ಹಂಚಿಕೆ ಮಾಡಿದರೂ ಹೆಚ್ಚುವರಿಯಾಗಿ 24 ಮತಗಳು ಉಳಿದುಕೊಳ್ಳುತ್ತವೆ. ಅವುಗಳನ್ನು ತನ್ನ ಎರಡನೆಯ ಅಭ್ಯರ್ಥಿ ಮನ್ಸೂರ್ ಖಾನ್‌ಗೆ ನೀಡಬಹುದು. ಜೆಡಿಎಸ್ ತನ್ನ 32 ಶಾಸಕರ ಮತಗಳನ್ನೂ ಪಕ್ಷದ ಅಭ್ಯರ್ಥಿ ಕುಪೇಂದ್ರ ರೆಡ್ಡಿ ಅವರಿಗೇ ನೀಡುವ ಅವಕಾಶವಿದೆ. ಈ ಚುನಾವಣೆಯಲ್ಲಿ ದ್ವಿತೀಯ ಪ್ರಾಶಸ್ತ್ಯದ ಮತಗಳಿಗೆ ಹೆಚ್ಚು ಮೌಲ್ಯ ಇಲ್ಲ.

ಮೇಲ್ನೋಟಕ್ಕೆ ನೋಡಿದರೆ ನಾಲ್ಕನೇ ಸ್ಥಾನದ ಅಭ್ಯರ್ಥಿಗಳ ಪೈಕಿ ಜೆಡಿಎಸ್, ಅಭ್ಯರ್ಥಿಗೆ ಹೆಚ್ಚಿನ ಮತಗಳು ಲಭಿಸುವ ಅವಕಾಶ ಹೆಚ್ಚಿದೆ. ಆದರೆ, ಹಾಗಾಗಲು ಬಿಜೆಪಿ ಮತ್ತು ಕಾಂಗ್ರೆಸ್ ಬಿಡುವ ಸಾಧ್ಯತೆ ಕಡಿಮೆ.

ಆಧಾರ: ಕನ್ನಡಪ್ರಭ, ದಿನಾಂಕ: 01.06.2022

## 10. ರಾಜ್ಯಸಭೆ : ನಾಲ್ಕನೇ ಸ್ಥಾನಕ್ಕೇ ತೀವ್ರ ಹಣಾಹಣಿ

ಜೂನ್ 10 ರಂದು ನಡೆಯುವ ರಾಜ್ಯಸಭಾ ಚುನಾವಣೆಯಲ್ಲಿ ನಾಲ್ಕನೇ ಸ್ಥಾನಕ್ಕೆ ಮೂರು ಪಕ್ಷಗಳೂ ತಲಾ ಒಬ್ಬ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿರುವುದರಿಂದ ತೀವ್ರ ಹಣಾಹಣಿ ಏರ್ಪಟ್ಟಿದೆ.

ಒಟ್ಟು ನಾಲ್ಕು ಸ್ಥಾನಗಳಲ್ಲಿ ಬಿಜೆಪಿ 2 ಮತ್ತು ಕಾಂಗ್ರೆಸ್ 1 ಸ್ಥಾನವನ್ನು ಅನಾಯಾಸವಾಗಿ ಗೆದ್ದುಕೊಳ್ಳುವ ಸಾಧ್ಯತೆ ಇದೆ. ನಾಲ್ಕನೇ ಸ್ಥಾನಕ್ಕೆ ಮೂವರು ಅಭ್ಯರ್ಥಿಗಳು ಕಣದಲ್ಲಿ ಇರುವುದರಿಂದ, ನಾಮಪತ್ರ ಹಿಂದಕ್ಕೆ ಪಡೆಯದೇ ಇದ್ದರೆ ಮತದಾನ ಅನಿವಾರ್ಯವಾಗಲಿದೆ.

ಬಿಜೆಪಿಯಲ್ಲಿ ಇಬ್ಬರು ಅಭ್ಯರ್ಥಿಗಳಿಗೆ ತಲಾ 45 ಮತಗಳನ್ನು ಚಲಾಯಿಸಿದ (ಒಟ್ಟು 90 ಮತಗಳು) ನಂತರ 32 ಮತಗಳು ಹೆಚ್ಚುವರಿಯಾಗಿ ಉಳಿಯುತ್ತವೆ. ಕಾಂಗ್ರೆಸ್‌ನ ಒಬ್ಬ ಅಭ್ಯರ್ಥಿಗೆ 45

ಮತಗಳನ್ನು ನೀಡಿದ ನಂತರ 25 ಹೆಚ್ಚುವರಿ ಮತಗಳು ಉಳಿಯುತ್ತವೆ. ಜೆಡಿಎಸ್ ಬಳಿ 32 ಮತಗಳು ಮಾತ್ರ ಇವೆ. ಆಂಗ್ಲೊ ಇಂಡಿಯನ್ ಸದಸ್ಯೆಗೆ ಮತದಾನದ ಹಕ್ಕು ಇಲ್ಲ. ನಾಲ್ಕನೇ ಅಭ್ಯರ್ಥಿಯ ಗೆಲುವಿಗೆ ಎಷ್ಟು ಮತ ಅಗತ್ಯ ಎಂಬುದನ್ನು ಮತಗಳ ಚಲಾವಣೆ ಬಳಿಕ ತೀರ್ಮಾನಿಸಲಾಗುತ್ತದೆ.

ಬಿಜೆಪಿಯಿಂದ ಲೆಹರ್ ಸಿಂಗ್ ಸಿರೋಯಾ, ಕಾಂಗ್ರೆಸ್‌ನಿಂದ ಮನ್ಸೂರ್ ಅಲಿಖಾನ್ ಮತ್ತು ಜೆಡಿಎಸ್‌ನಿಂದ ಕುಪೇಂದ್ರರೆಡ್ಡಿ ನಾಲ್ಕನೇ ಅಭ್ಯರ್ಥಿಯಾಗಿ ಆಯ್ಕೆಯಾಗಲು ಜಿದ್ದಾಜಿದ್ದಿನ ಪೈಪೋಟಿ ನಡೆಸಿದ್ದಾರೆ. ಬಿಜೆಪಿ ಮತ್ತು ಕಾಂಗ್ರೆಸ್ ಎರಡನೇ ಪ್ರಾಶಸ್ತ್ಯದ ಮತಗಳನ್ನು ಚಲಾಯಿಸಬಹುದು.

ಕಾಂಗ್ರೆಸ್ ಮುಸ್ಲಿಂ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿ ಜೆಡಿಎಸ್‌ನ ಜಾತ್ಯಾತೀತ ನಿಲುವಿಗೆ ಸವಾಲು ಹಾಕಿತ್ತು, ಜೆಡಿಎಸ್ ಅಭ್ಯರ್ಥಿಯನ್ನು ಕಣಕ್ಕೆ ಇಳಿಸದೇ ಮುಸ್ಲಿಂ ಅಭ್ಯರ್ಥಿಯನ್ನು ಬೆಂಬಲಿಸಬೇಕು. ಒಂದು ವೇಳೆ ಬಿಜೆಪಿಯ ಅಭ್ಯರ್ಥಿಯನ್ನು ಬೆಂಬಲಿಸಿದರೆ, ಬಿಜೆಪಿಯ 'ಬಿ' ಟೀಂ ಎಂದು ಬಿಂಬಿಸಲು ಸಿದ್ದರಾಮಯ್ಯ ಬಣ ರಣತಂತ್ರ ಹೆಣೆದಿತ್ತು. ಇದಕ್ಕಾಗಿ ಡಿ.ಕೆ.ಶಿವಕುಮಾರ್ ಒಪ್ಪಿಗೆ ಪಡೆದೇ ಮನ್ಸೂರ್ ಖಾನ್ ಅವರನ್ನು ಕಣಕ್ಕೆ ಇಳಿಸಿತ್ತು ಎಂದು ಮೂಲಗಳು ಹೇಳಿವೆ.

ಆದರೆ, ಜೆಡಿಎಸ್ ಬೇರೆಯದೇ ಲೆಕ್ಕಾಚಾರ ಹಾಕಿ ಕುಪೇಂದ್ರ ರೆಡ್ಡಿ ಅವರನ್ನು ಕಣಕ್ಕೆ ಇಳಿಸಲು ತೀರ್ಮಾನಿಸಿದೆ. ಕುಪೇಂದ್ರ ರೆಡ್ಡಿ ಅವರನ್ನು ಕಣಕ್ಕೆ ಇಳಿಸಲು ಎಚ್.ಡಿ.ದೇವೇಗೌಡರೇ ಹೆಚ್ಚಿನ ಉತ್ಸಾಹ ತೋರಿದ್ದರು. ಈ ಸಂಬಂಧ ದೆಹಲಿಯಲ್ಲಿರುವ ಕಾಂಗ್ರೆಸ್‌ನ ಹಿರಿಯ ನಾಯಕರೊಬ್ಬರ ಬೆಂಬಲವನ್ನೂ ಕೋರಿದ್ದರು ಎನ್ನಲಾಗಿದೆ. ಆದರೆ, ಸ್ಥಳೀಯ ಕಾಂಗ್ರೆಸ್ ನಾಯಕರು ಬೇರೆಯದೇ ತಂತ್ರ ಹೆಣೆದು ಮುಸ್ಲಿಂ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿದರು. ಇದರಿಂದ ಜೆಡಿಎಸ್ ಅಭ್ಯರ್ಥಿ ಯಾವ ತಂತ್ರ ಅನುಸರಿಸುತ್ತಾರೆ ಎಂಬುದನ್ನು ಕಾದು ನೋಡಬೇಕಾಗಿದೆ.

ಕುಪೇಂದ್ರ ರೆಡ್ಡಿ ಅವರೂ ವೈಯಕ್ತಿಕ ನೆಲೆಯಲ್ಲಿ ಕಾಂಗ್ರೆಸ್‌ನಿಂದ ಒಂದಷ್ಟು ಮತಗಳನ್ನು ಸೆಳೆಯಲು ಸಿದ್ಧತೆ ನಡೆಸಿ ಕೊಂಡಿದ್ದಾರೆ. ಕಾಂಗ್ರೆಸ್‌ಗೆ ಈಗ ಜೈರಾಂ ರಮೇಶ್ ಅವರನ್ನು ಗೆಲ್ಲಿಸಿಕೊಳ್ಳುತ್ತದೆಯೋ, ಮುಸ್ಲಿಂ ಅಭ್ಯರ್ಥಿ ಮನ್ಸೂರ್ ಖಾನ್ ಅವರನ್ನು ಗೆಲ್ಲಿಸಿಕೊಂಡು ಅಲ್ಪಸಂಖ್ಯಾತರ ಪರ ನಿಲ್ಲುತ್ತದೋ ಎಂಬುದನ್ನು ಸಾಬೀತು ಮಾಡುವ ಹೊಣೆಗಾರಿಕೆ ಕಾಂಗ್ರೆಸ್‌ಗಿದೆ ಎನ್ನುತ್ತಾರೆ ಜೆಡಿಎಸ್ ನಾಯಕರು.

ಬಿಜೆಪಿಯಿಂದ ಮೂರನೇ ಅಭ್ಯರ್ಥಿಯಾಗಿ ಕಣಕ್ಕೆ ಇಳಿದಿರುವ ಲೆಹರ್ ಸಿಂಗ್ ಅವರು, 'ಬಿಜೆಪಿ ಮಾತ್ರವಲ್ಲ, ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳಲ್ಲೂ ನನಗೆ ಹಲವರು ಮಿತ್ರರಿದ್ದಾರೆ. ಇವರೆಲ್ಲರ ನೆರವಿನಿಂದ ಚುನಾವಣೆಯಲ್ಲಿ ಗೆದ್ದೇ ತೀರುತ್ತೇನೆ' ಎಂದು ಹೇಳಿಕೊಂಡಿದ್ದಾರೆ.

ಆಧಾರ: ಪ್ರಜಾವಾಣಿ, ದಿನಾಂಕ: 01.06.2022

## 11. How voting happens

Karnataka will send four members to the Rajya Sabha through the June 10 polls. All the 224 MLAs will exercise their franchise through Single Transferable Vote. Parties set the quota for the victory of each RS candidate based on a formula. The total number of valid votes exercised, divided by the number of RS seats going for polls plus 1 additional vote is required If all the 224 MLAs vote, the quota will be 44.8 plus one vote. If the decimal is ignored, a candidate has to get at least 45 votes. BJP, which has 122 MLAs including the support of an independent, is likely to allot 46 votes to each of its first two candidates to be on the safer side. Surplus 32 votes will be allotted to its third candidate. Congress, which has 70 votes including that of an independent, is likely to allot 46 votes to its first candidate and the surplus 24 to its second candidate. JDS with 32 MLAs will allot them to its candidate. If candidates contesting for the fourth seat get 45 votes, they will be declared elected. If none of them get the required votes, those who secure the highest votes among the three will be considered for the counting of the second preferential votes (polled by the MLAs) by eliminating the one who takes the lowest.

Courtesy: Indian Express, dt: 01.06.2022

## 12. ನಾಮಪತ್ರ ಕ್ರಮಬದ್ಧ

ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಕ್ಕೆ ನಡೆದಿರುವ ಚುನಾವಣೆಗೆ ಆರು ಮಂದಿ ಸಲ್ಲಿಸಿರುವ ನಾಮಪತ್ರ ಕ್ರಮಬದ್ಧವಾಗಿವೆ.

ಬಿಜೆಪಿಯಿಂದ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್, ನಟ ಜಗ್ಗೇಶ್, ಪರಿಷತ್ ಸದಸ್ಯ ಲೆಹರ್ ಸಿಂಗ್, ಕಾಂಗ್ರೆಸ್‌ನಿಂದ ರಾಜ್ಯಸಭಾ ಸದಸ್ಯ ಜೈರಾಮ್ ರಮೇಶ್, ಮನ್ಸೂರ್ ಅಲಿ ಖಾನ್ ಹಾಗೂ ಜೆಡಿಎಸ್‌ನಿಂದ ಮಾಜಿ ರಾಜ್ಯಸಭಾ ಸದಸ್ಯ ಕುಪೇಂದ್ರ ರೆಡ್ಡಿ ನಾಮಪತ್ರ ಸಲ್ಲಿಸಿದ್ದಾರೆ.

ಬುಧವಾರ ನಡೆದ ಪರಿಶೀಲನೆಯಲ್ಲಿ ಎಲ್ಲ ಆರೂ ಅಭ್ಯರ್ಥಿಗಳ ನಾಮಪತ್ರ ಕ್ರಮಬದ್ಧವಾಗಿವೆ ಹಾಗೂ ಅಂಗೀಕೃತವಾಗಿವೆ ಎಂದು ಚುನಾವಣಾಧಿಕಾರಿಯಾದ ವಿಧಾನಸಭೆ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ತಿಳಿಸಿದ್ದಾರೆ.

ನಾಮಪತ್ರ ಹಿಂಪಡೆಯಲು ಜೂನ್ 3 ಕಡೆಯ ದಿನವಾಗಿದೆ. ಜೂನ್ 10ಕ್ಕೆ ಮತದಾನ ನಡೆಯಲಿದ್ದು, ಅಂದು ಸಂಜೆ ಮತ ಎಣಿಕೆ ನಡೆಯಲಿದೆ. ವಿಧಾನಸಭೆಯಲ್ಲಿ ಪಕ್ಷಗಳ ಬಲಾಬಲ ಆಧರಿಸಿ

ಬಿಜೆಪಿ ಎರಡು, ಕಾಂಗ್ರೆಸ್ ಒಂದು ಸ್ಥಾನವನ್ನು ಅನಾಯಾಸವಾಗಿ ಗೆಲ್ಲಬಹುದಾಗಿದೆ. ನಾಲ್ಕನೇ ಸ್ಥಾನಕ್ಕೆ ಮೂರೂ ಪಕ್ಷದ ಅಭ್ಯರ್ಥಿಗಳಿದ್ದು, ಗೆಲುವಿಗೆ ತೀವ್ರ ಕಸರತ್ತು ನಡೆಸಿರುವುದು ಕುತೂಹಲ ಮೂಡಿಸಿದೆ.

ಆಧಾರ: ವಿಜಯಕರ್ನಾಟಕ, ದಿನಾಂಕ: 02.06.2022

## 13. ರಾಜ್ಯಸಭೆ : ಚಿದಂಬರಂ, ಶುಕ್ಲಾ ಅವಿರೋಧ ಆಯ್ಕೆ

ಎಲ್ಲಾ ರಾಜ್ಯಗಳಲ್ಲೂ ರಾಜ್ಯಸಭಾ ಚುನಾವಣೆಯ ಕಸರತ್ತು ತಾರಕಕ್ಕೇರಿದೆ. ಜೂನ್ 10ರಂದು ನಡೆಯುವ ಚುನಾವಣೆಗಾಗಿ ಈಗಾಗಲೇ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಮುಗಿದಿದ್ದು ಅವುಗಳನ್ನು ವಾಪಸ್ ಪಡೆಯಲು ಜೂನ್ 3 ಕಡೆಯ ದಿನವಾಗಿತ್ತು. ಆ ಹಿನ್ನೆಲೆಯಲ್ಲಿ ತಮಿಳುನಾಡು, ಪಂಜಾಬ್, ಮಧ್ಯಪ್ರದೇಶ ಸೇರಿ ಕೆಲವು ರಾಜ್ಯಗಳಿಂದ ಸ್ಪರ್ಧಿಸಿದ್ದ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಅವರಲ್ಲಿ ಕೇಂದ್ರದ ಮಾಜಿ ಸಚಿವರಾದ ಪಿ. ಚಿದಂಬರಂ, ರಾಜೀವ್ ಶುಕ್ಲಾ ಪ್ರಮುಖರು.

ಪಿ. ಚಿದಂಬರಂ ಸೇರಿದಂತೆ ತಮಿಳುನಾಡಿನಿಂದ ಸ್ಪರ್ಧಿಸಿದ್ದ ಎಲ್ಲಾ ಆರು ಕಾಂಗ್ರೆಸ್ ಅಭ್ಯರ್ಥಿಗಳು ಹಾಗೂ ಡಿಎಂಕೆಯ ಮೂವರು ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಚಿದಂಬರಂ ಆಯ್ಕೆಯ ಮೂಲಕ ಕಾಂಗ್ರೆಸ್ ಪಕ್ಷಕ್ಕೆ ತಮಿಳುನಾಡಿನಿಂದ ದೀರ್ಘಾವಧಿಯ ನಂತರ ತನ್ನ ಪ್ರಾತಿನಿಧ್ಯ ಸಿಕ್ಕಂತಾಗಿದೆ. 2016ರಲ್ಲಿ ಚಿದಂಬರಂ ಅವರು ಮಹಾರಾಷ್ಟ್ರದಿಂದ ರಾಜ್ಯಸಭೆಗೆ ಆಯ್ಕೆಯಾಗಿದ್ದರು. ಅವರ ಸೇವಾವಧಿ ಇದೇ ಜೂನ್ 4ರಂದು ಕೊನೆಗೊಳ್ಳಲಿದೆ. ಇವರಲ್ಲದೆ, ಡಿಎಂಕೆಯ ಎಸ್. ಕಲ್ಯಾಣ ಸುಂದರಂ, ಆರ್, ಗಿರಿರಾಜನ್, ಕೆಆರ್‌ನ್ ರಾಜೇಶ್ ಕುಮಾರ್, ಎಐಎಂಡಿಎಂಕೆಯ ಸಿ.ವೆ.ಷಣ್ಮುಗಂ ಹಾಗೂ ಆರ್ ಧರ್ಮಾರ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಇನ್ನು, ಉತ್ತರಾಖಾಂಡದಲ್ಲಿ ಬಿಜೆಪಿಯ ಕಲ್ಪನಾ ಸೈನಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಆಂಧ್ರ ಪ್ರದೇಶದಲ್ಲಿ ಆಡಳಿತಾರೂಢ ವೈಎಸ್ಆರ್ ಕಾಂಗ್ರೆಸ್‌ನ ವಿಜಯ ಸಾಯಿ ರೆಡ್ಡಿ, ಬೀಡಾ ಮಸ್ತಾನ್ ರಾವ್, ಆರ್.ಕೃಷ್ಣಯ್ಯ ಹಾಗೂ ಎಸ್.ನಿರಂಜನ್ ರೆಡ್ಡಿ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಜಾರ್ಖಂಡ್‌ನಲ್ಲಿ ಜೆಎಂಎಂ ಪಕ್ಷದ ಮಹುವಾಮೊಜಿ, ಬಿಜೆಪಿಯ ಆದಿತ್ಯ ಸಾಹು ಅವಿರೋಧವಾಗಿ ಆಯ್ಕೆಯಾಗಿದ್ದರೆ, ಛತ್ತೀಸ್‌ಗಡದಲ್ಲಿ ಕಾಂಗ್ರೆಸ್ ನಾಯಕರಾದ ರಾಜೀವ್ ಶುಕ್ಲಾ ರಂಜಿತ್ ರಂಜನ್, ಪಂಜಾಬ್‌ನಲ್ಲಿ ಆಡಳಿತಾರೂಢ ಆಮ್ ಆದ್ಮಿ ಪಾರ್ಟಿಯ (ಆಪ್), ಬಲ್ಬರ್ ಸಿಂಗ್ ಸೀಚೆವಾಲ್, ವಿಕ್ರಮ್ ಜಿತ್ ಸಿಂಗ್ ಸಾಹಿ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಏನತ್ಮಧ್ಯೆ, ಬಿಹಾರದಿಂದ ರಾಜ್ಯಸಭೆಗೆ ನಾಮಪತ್ರ ಸಲ್ಲಿಸಿದ್ದ ಮಿಸಾ ಭಾರತಿ, ಫೈಯದ್ ಅಹ್ಮದ್ (ಆರ್ ಜೆಡಿ), ಸತೀಸ್ ಚಂದ್ರ ದುಬೆ, ಶಂಭು ಶರಣ್ ಪಟೇಲ್ (ಬಿಜೆಪಿ), ಖೀರು ಮಹತೋ (ಜೆಡಿಯು) ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

**ಕೈ ಶಾಸಕರು ರೆಸಾರ್ಟ್‌ನಲ್ಲಿ!**

ಈ ಬಾರಿಯ ರಾಜ್ಯಸಭಾ ಚುನಾವಣೆಯಲ್ಲಿ ರಾಜಸ್ಥಾನದ ಕಾಂಗ್ರೆಸ್ ಅಭ್ಯರ್ಥಿಗಳ ಜೊತೆಗೆ ಬಿಜೆಪಿ ಕುದುರೆ ವ್ಯಾಪಾರ ನಡೆಸಬಹುದು ಎಂಬ ಭೀತಿಗೆ ಒಳಗಾಗಿರುವ ಕಾಂಗ್ರೆಸ್, ತನ್ನ 70 ಶಾಸಕರನ್ನು ರಾಜಸ್ಥಾನದ ಉದಯಪುರದ ರೆಸಾರ್ಟ್ ಒಂದಕ್ಕೆ ರವಾನಿಸಿರುವುದಾಗಿ ಹೇಳಿಕೊಂಡಿದೆ. ಇವರಲ್ಲಿ ಕೆಲವರು ಸಚಿವರು ಇದ್ದಾರೆಂದು ಪಕ್ಷ ತಿಳಿಸಿದೆ.

ಆಧಾರ: ಉದಯವಾಣಿ, ದಿನಾಂಕ: 04.06.2022

## 14. ರಾಜ್ಯಸಭೆ : ಫಾರ್ಮುಲಾ ಪ್ರಕಾರ ಮತ ಬರಬೇಕು

ಕುತೂಹಲ ಮೂಡಿಸಿರುವ ವಿಧಾನಸಭೆಯಿಂದ ರಾಜ್ಯ ಸಭೆಗೆ ನಡೆಯುವ ಚುನಾವಣೆಯಲ್ಲಿ ನಾಲ್ಕನೇ ಸ್ಥಾನಕ್ಕೆ ಫಾರ್ಮುಲಾ ಪ್ರಕಾರ ಮತಗಳು ಬರಬೇಕಾಗಿದ್ದು, ಮೊದಲ ಪ್ರಾಶಸ್ತ್ಯ ಮತಗಳ ಆಧಾರದ ಮೇಲೆ ಎರಡನೇ ಪ್ರಾಶಸ್ತ್ಯಗಳ ಮತ ಮೌಲ್ಯ ನಿರ್ಧರಿಸಲಾಗುತ್ತದೆ ಎಂದು ಚುನಾವಣಾಧಿಕಾರಿಯೂ ಆಗಿರುವ ವಿಧಾನಸಭೆ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ತಿಳಿಸಿದ್ದಾರೆ.

ವಿಧಾನಸೌಧದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಪ್ರತಿ ಅಭ್ಯರ್ಥಿ ಗೆಲುವಿಗೆ 45 ಮತಗಳ ಅಗತ್ಯವಿದ್ದು, ಮೊದಲ ಪ್ರಾಶಸ್ಯ ಮತಗಳು ಸಿಂಧುವಾಗಿರುವ ಮತಗಳ ಮೇಲೆ ಕೋಟಾ ನಿಗದಿಯಾಗುತ್ತದೆ. ಸಿಂಧು ಮತಗಳು ಬದಲಾವಣೆಯಾದರೆ ಕೋಟಾ ಕೂಡ ಬದಲಾವಣೆಯಾಗುತ್ತದೆ. ಅದರ ಮೇಲೆ ಎರಡನೇ ಪ್ರಾಶಸ್ತ್ಯ ಮತಗಳ ಮೌಲ್ಯ ಸಹ ಬದಲಾಗುತ್ತದೆ.

ಈ ಬಗ್ಗೆ ಯಾವುದನ್ನೂ ಈಗಲೇ ಹೇಳಲು ಸಾಧ್ಯವಾಗುವುದಿಲ್ಲ, ಮತ ಎಣಿಕೆ ಪ್ರಾರಂಭವಾದ ನಂತರ ಸ್ಪಷ್ಟ ಚಿತ್ರಣ ಸಿಗಲಿದೆ ಎಂದರು.

ನಾಲ್ಕನೇ ಸ್ಥಾನಕ್ಕೆ ಕಡಿಮೆ ಮತಗಳನ್ನು ಪಡೆದವರು ಎಲಿಮಿನೇಟ್ ಆಗುತ್ತಾರೆ. ಸಿಂಧುವಾದ ಮತಗಳ ಆಧಾರದಲ್ಲಿ ಕೋಟಾ ಫಿಕ್ಸ್ ಮಾಡಿ ಎರಡನೇ ಪ್ರಾಶಸ್ತ್ಯ ಮತಗಳ ಎಣಿಕೆ ಆಗುತ್ತದೆ ಎಂದು ಇದೇ ವೇಳೆ ಅವರು ಹೇಳಿದರು.

ಆಧಾರ: ಕನ್ನಡಪ್ರಭ, ದಿನಾಂಕ: 04.06.2022

## 15. ಕೈ–ದಳ ಜಿದ್ದು : ಲಹರ್‌ಗೆ ಲಾಟರಿ

ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳ ಜಿದ್ದಾಜಿದ್ದಿನ ಕಿತ್ತಾಟದಿಂದ ಬಿಜೆಪಿಗೆ ಲಾಭವಾಗಿದೆ. 'ಕಮಲ' ಪಕ್ಷದ ಮೂರನೇ ಅಭ್ಯರ್ಥಿ ಲಹರ್ ಸಿಂಗ್ ಗೆಲುವು ಸಾಧಿಸಿದ್ದಾರೆ. ನಾಲ್ಕು ಸ್ಥಾನಗಳ ಪೈಕಿ ಬಿಜೆಪಿ ಮೂರು ಹಾಗೂ ಕಾಂಗ್ರೆಸ್ ಒಂದು ಸ್ಥಾನ ದಕ್ಕಿಸಿಕೊಂಡಿವೆ.

ಬಿಜೆಪಿಯ ನಿರ್ಮಲಾ ಸೀತಾರಾಮನ್ 46, ಜಗ್ಗೇಶ್ 44, ಲಹರ್ ಸಿಂಗ್ 33 ಮತ್ತು ಕಾಂಗ್ರೆಸ್‌ನ ಜೈರಾಂ ರಮೇಶ್ ಅವರು 46 ಮತಗಳನ್ನು ಪಡೆದು ಗೆಲುವು ಸಾಧಿಸಿದರು. ಜೆಡಿಎಸ್‌ನ ಕುಪೇಂದ್ರ ರೆಡ್ಡಿ 30 ಮತ್ತು ಕಾಂಗ್ರೆಸ್‌ನ ಎರಡನೇ ಅಭ್ಯರ್ಥಿ ಮನ್ಸೂರ್ ಖಾನ್ 25 ಮತಗಳನ್ನಷ್ಟೇ ಪಡೆಯಲು ಶಕ್ಯರಾದರು.

ನಿರ್ಮಲಾ ಮತ್ತು ಜೈರಾಂ ರಮೇಶ್ ತಲಾ 46 ಪ್ರಥಮ ಪ್ರಾಶಸ್ತ್ಯ ಮತಗಳನ್ನು ಪಡೆದು ಜಯಗಳಿಸಿದರು. ಜಗ್ಗೇಶ್ ಮೊದಲ ಪ್ರಾಶಸ್ತ್ಯದ 44 ಮತಗಳನ್ನು ಪಡೆದರೆ, ಲಹರ್‌ಸಿಂಗ್ ಮೊದಲ ಪ್ರಾಶಸ್ತ್ಯದಲ್ಲಿ (33) ಒಂದು ಹೆಚ್ಚುವರಿ ಮತ, ಎರಡನೇ ಪ್ರಾಶಸ್ತ್ಯದಲ್ಲಿ ಎರಡು ಹೆಚ್ಚುವರಿ ಮತಗಳನ್ನು ಪಡೆದರು. ಆ ಎರಡೂ ಮತಗಳು ಕಾಂಗ್ರೆಸ್ ಕಡೆಯಿಂದ ಬಂದಿವೆ ಎಂದು ಮೂಲಗಳು ಹೇಳಿವೆ.

ತಮ್ಮ ಎರಡನೇ ಅಭ್ಯರ್ಥಿ ಮನ್ಸೂರ್ ಖಾನ್ ಗೆಲುವಿಗಾಗಿ ಕಾಂಗ್ರೆಸ್ ಮತ್ತು ಕುಪೇಂದ್ರ ರೆಡ್ಡಿ ಗೆಲುವಿಗಾಗಿ ಜೆಡಿಎಸ್ ಹೆಣೆದ ತಂತ್ರಗಳು ಫಲ ನೀಡಲಿಲ್ಲ. ಅಡ್ಡ ಮತದಾನದ ಭೀತಿ ಮತ್ತು ಸಿದ್ದರಾಮಯ್ಯ – ಎಚ್.ಡಿ.ಕುಮಾರಸ್ವಾಮಿ ಪರಸ್ಪರ ಜಗ್ಗಾಟದ ಮಧ್ಯೆಯೂ ಮತದಾನದ ವೇಳೆ ದೊಡ್ಡ ಮಟ್ಟದ ನಾಟಕೀಯ ಬೆಳವಣಿಗೆಗಳೂ ನಡೆಯಲಿಲ್ಲ. ಆದರೆ, ಜೆಡಿಎಸ್‌ನ ಕೋಲಾರ ಶಾಸಕ ಕೆ.ಶ್ರೀನಿವಾಸಗೌಡ ಕಾಂಗ್ರೆಸ್‌ಗೂ, ಗುಬ್ಬಿ ಶಾಸಕ ಎಸ್.ಆರ್. ಶ್ರೀನಿವಾಸ್ ಬಿಜೆಪಿ ಅಭ್ಯರ್ಥಿಗೆ ಅಡ್ಡ ಮತದಾನ ಮಾಡಿದರು. 'ಆತ್ಮಸಾಕ್ಷಿ'ಯ ಮತವನ್ನು ಹಾಕಿ ಎಂದು ಸಿದ್ದರಾಮಯ್ಯ ಅವರು ಜೆಡಿಎಸ್ ಶಾಸಕರಿಗೆ ಮನವಿ ಮಾಡಿ ಬರೆದ ಪತ್ರ ಯಾವುದೇ ಪರಿಣಾಮ ಬೀರಲಿಲ್ಲ.

- ಜೆಡಿಎಸ್‌ನ ಕೆ. ಶ್ರೀನಿವಾಸಗೌಡ ಕಾಂಗ್ರೆಸ್‌ಗೆ ಅಡ್ಡ ಮತದಾನ ಮಾಡಿದ್ದೂ ಅಲ್ಲದೇ, ತಾವು ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸುವುದಾಗಿ ಹೇಳಿದರು. ಇದರಿಂದ ಸಿಟ್ಟಿಗೆದ್ದ ಎಚ್.ಡಿ.ಕುಮಾರಸ್ವಾಮಿ ಪಕ್ಷ ಬಿಟ್ಟು ಹೋಗುವಂತೆ ಶ್ರೀನಿವಾಸಗೌಡ ಅವರಿಗೆ ಹೇಳಿದರು.
- ಜೆಡಿಎಸ್‌ನ ಎಸ್.ಆರ್.ಶ್ರೀನಿವಾಸ್ ಅವರು ಚಾಣಾಕ್ಷತೆಯಿಂದ ಮತ ಪತ್ರವನ್ನು ಮಡಚಿ ಖಾಲಿ ಭಾಗವನ್ನು ಮಾತ್ರ ಎಚ್.ಡಿ.ರೇವಣ್ಣ ಅವರಿಗೆ ತೋರಿಸಿ, ಬಳಿಕ ಲಹರ್ ಸಿಂಗ್ ಅವರಿಗೆ ಮತ ಚಲಾಯಿಸಿದ್ದಾರೆ ಎಂದು ಜೆಡಿಎಸ್ ನಾಯಕರು ದೂರಿದ್ದಾರೆ.
- ಜೆಡಿಎಸ್‌ನ ಎಚ್.ಡಿ.ರೇವಣ್ಣ ಅವರು ತಾವು ಮತವನ್ನು ಚಲಾಯಿಸುವುದಕ್ಕೆ ಮುನ್ನ ಮತ ಪತ್ರವನ್ನು ಕಾಂಗ್ರೆಸ್‌ನ ಡಿ.ಕೆ.ಶಿವಕುಮಾರ್ ತೋರಿಸಿದ್ದು ವಿವಾದಕ್ಕೆ ಕಾರಣವಾಯಿತು. ರೇವಣ್ಣ ಅವರ ಮತವನ್ನು ಅಸಿಂಧುಗೊಳಿಸಬೇಕು ಎಂದು ಚುನಾವಣಾ ಆಯೋಗಕ್ಕೆ ಬಿಜೆಪಿ ಮತ್ತು ಕಾಂಗ್ರೆಸ್ ದೂರು ಸಲ್ಲಿಸಿದವು.

ಆಧಾರ: ಪ್ರಜಾವಾಣಿ, ದಿನಾಂಕ: 11.06.2022

## 16. ವಿಧಾನ ಪರಿಷತ್ 4 ಕ್ಷೇತ್ರ ಚುನಾವಣೆ : 74.39% ಮತ

ವಿಧಾನ ಪರಿಷತ್ತಿನ 2 ಪದವೀಧರ ಮತ್ತು 2 ಶಿಕ್ಷಕರ ಕ್ಷೇತ್ರಗಳಿಗೆ ಅತ್ಯಂತ ಶಾಂತಿಯುತವಾಗಿ ಮತದಾನ ನಡೆದಿದ್ದು, ಒಟ್ಟಾರೆ ಶೇ.74.39ರಷ್ಟು ಮಂದಿ ಹಕ್ಕು ಚಲಾಯಿಸಿದ್ದಾರೆ. ಆರು ವರ್ಷಗಳ ಹಿಂದೆ ಈ ಕ್ಷೇತ್ರಗಳಿಗೆ ನಡೆದ ಚುನಾವಣೆಯಲ್ಲಿ ಶೇ.57.35ರಷ್ಟು ಮತದಾನವಾಗಿತ್ತು. ಅದಕ್ಕೆ ಹೋಲಿಸಿದರೆ ಈ ಬಾರಿ ಹಕ್ಕು ಚಲಾಯಿಸಿದವರ ಸಂಖ್ಯೆಯಲ್ಲಿ ಹೆಚ್ಚಳ ಕಂಡುಬಂದಿದೆ. ವಿಧಾನ ಪರಿಷತ್ ಮಾಜಿ ಸಭಾಪತಿ ಬಸವರಾಜ ಹೊರಟ್ಟಿ ಸೇರಿದಂತೆ ಮತದಾರರು 49 ಅಭ್ಯರ್ಥಿಗಳ ಭವಿಷ್ಯವನ್ನು ಬರೆದಿದ್ದು, ಜೂನ್ 15ರಂದು ಫಲಿತಾಂಶ ಹೊರಬೀಳಲಿದೆ.

ವಾಯವ್ಯ ಪದವೀಧರ ಕ್ಷೇತ್ರದಲ್ಲಿ ಶೇ.59.59 ಮತ್ತು ದಕ್ಷಿಣ ಪದವೀಧರ ಕ್ಷೇತ್ರದಲ್ಲಿ ಶೇ.71.30ರಷ್ಟು ಮತದಾನವಾಗಿದೆ. ವಾಯವ್ಯ ಶಿಕ್ಷಕರ ಕ್ಷೇತ್ರದಲ್ಲಿ ಶೇ.80 ಮತ್ತು ಪಶ್ಚಿಮ ಶಿಕ್ಷಕರ ಕ್ಷೇತ್ರದಲ್ಲಿ ಶೇ.86.67ರಷ್ಟು ಮಂದಿ ಹಕ್ಕು ಚಲಾಯಿಸಿದ್ದಾರೆ. ಎರಡೂ ಶಿಕ್ಷಕರ ಕ್ಷೇತ್ರಗಳಲ್ಲಿ ಬಿರುಸಿನ ಮತದಾನ ನಡೆದಿದ್ದರೆ, ಪದವೀಧರ ಕ್ಷೇತ್ರಗಳಲ್ಲಿ ನೀರಸವಾಗಿತ್ತು. ಅದರಲ್ಲೂ ವಾಯವ್ಯ ಪದವೀಧರ ಕ್ಷೇತ್ರದಲ್ಲಿ ಶೇ.60ನ್ನೂ ದಾಟಿಲ್ಲ.

ಎಲ್ಲೆಡೆ ಬೆಳಗ್ಗೆ 8 ಗಂಟೆಯಿಂದಲೇ ಮತದಾನ ಆರಂಭಗೊಂಡಿದ್ದು ಸಂಜೆ 5ರವರೆಗೆ ಮತದಾರರು ಸರದಿ ಸಾಲಿನಲ್ಲಿ ನಿಂತು ತಮ್ಮ ಹಕ್ಕನ್ನು ಚಲಾಯಿಸಿದರು.

**ಕಳೆದ ಬಾರಿಗಿಂತ ಅಧಿಕ:** ವಿಜಯಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲಾ ವ್ಯಾಪ್ತಿ ಹೊಂದಿರುವ ವಾಯವ್ಯ ಪದವೀಧರ ಕ್ಷೇತ್ರಕ್ಕಿಂತ ವಾಯವ್ಯ ಶಿಕ್ಷಕರ ಕ್ಷೇತ್ರಕ್ಕೆ ಹೆಚ್ಚಿನ ಮತದಾನವಾಗಿದೆ. 2016ರಲ್ಲಿ ವಾಯವ್ಯ ಶಿಕ್ಷಕರ ಕ್ಷೇತ್ರಕ್ಕೆ ಶೇ.53.68ರಷ್ಟು ಮತದಾನವಾಗಿತ್ತು. ಪ್ರಸಕ್ತ ಶೇ.80ರಷ್ಟು ಮತದಾನವಾಗುವ ಮೂಲಕ ಕಳೆದ ಬಾರಿಗಿಂತ ಶೇ.26.32ರಷ್ಟು ಅಧಿಕ ಮತದಾನವಾಗಿದೆ. ಅದರಂತೆ ವಾಯವ್ಯ ಪದವೀಧರ ಕ್ಷೇತ್ರಕ್ಕೆ 2016 ರಲ್ಲಿ ಶೇ.45.09ರಷ್ಟು ಮತದಾನವಾಗಿತ್ತು. ಈ ಅವಧಿಯಲ್ಲಿ ಶೇ.59.59ರಷ್ಟು ಮತದಾನವಾಗುವ ಮೂಲಕ ಶೇ.14.5ರಷ್ಟು ಮತದಾರರು ಹಕ್ಕು ಚಲಾಯಿಸಿದ್ದಾರೆ.

ಧಾರವಾಡ, ಹಾವೇರಿ, ಗದಗ, ಉತ್ತರ ಕನ್ನಡ ಜಿಲ್ಲಾ ವ್ಯಾಪ್ತಿಯ ಪಶ್ಚಿಮ ಶಿಕ್ಷಕರ ಕ್ಷೇತ್ರದಲ್ಲಿ ಕಳೆದ ಬಾರಿ ಶೇ.66.72ರಷ್ಟು ಮತದಾನವಾಗಿತ್ತು. ಈ ಬಾರಿ ಶೇ.19.95 ರಷ್ಟು ಹೆಚ್ಚು ಮತದಾನವಾಗಿದೆ. ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಜಿಲ್ಲೆಗಳ ವ್ಯಾಪ್ತಿಯ ಕ್ಷೇತ್ರದಲ್ಲೂ ಕಳೆದ ಬಾರಿ ಶೇ.63.92ರಷ್ಟು ಮತದಾನವಾಗಿತ್ತು.

**49 ಮಂದಿ ಭವಿಷ್ಯ ಭದ್ರ:** ವಾಯವ್ಯ ಪದವೀಧರ ಕ್ಷೇತ್ರದಲ್ಲಿ ಬಿಜೆಪಿಯ ಹಣಮಂತ ನಿರಾಣಿ, ಕಾಂಗ್ರೆಸ್ ಅಭ್ಯರ್ಥಿ ಸುನಿಲ್ ಸಂಕ ಸೇರಿ 11 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ವಾಯವ್ಯ ಶಿಕ್ಷಕರ ಕ್ಷೇತ್ರದಲ್ಲಿ

ಬಿಜೆಪಿಯ ಅರುಣ ಶಹಾಪುರ, ಕಾಂಗ್ರೆಸ್‌ನ ಪ್ರಕಾಶ ಹುಕ್ಕೇರಿ, ಪಕ್ಷೇತರ ಅಭ್ಯರ್ಥಿ ಎನ್ .ಬಿ.ಬನ್ನೂರ ಮತ್ತು ಜೆಡಿಎಸ್ ಅಭ್ಯರ್ಥಿ ಚಂದ್ರಶೇಖರ ಲೋನಿ ಸೇರಿದಂತೆ ಒಟ್ಟು 12 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಪಶ್ಚಿಮ ಶಿಕ್ಷಕರ ಕ್ಷೇತ್ರದಲ್ಲಿ ಬಿಜೆಪಿಯ ಬಸವರಾಜ ಹೊರಟ್ಟಿ, ಕಾಂಗ್ರೆಸ್‌ನ ಬಸವರಾಜ ಗುರಿಕಾರ, ಜೆಡಿಎಸ್‌ನ ಶ್ರೀಶೈಲ ಗಡದಿನ್ನಿ ಸೇರಿದಂತೆ 7 ಮಂದಿ ಕಣದಲ್ಲಿದ್ದಾರೆ. ದಕ್ಷಿಣ ಪದವೀಧರ ಕ್ಷೇತ್ರದಲ್ಲಿ ಬಿಜೆಪಿಯ ಮೈ.ವಿ. ರವಿ ಶಂಕರ್, ಕಾಂಗ್ರೆಸ್‌ನ ಮಧು ಮಾದೇಗೌಡ, ಜೆಡಿಎಸ್‌ನ ಎಚ್.ಕೆ. ರಾಮು ಕಣದಲ್ಲಿರುವ ಪ್ರಮುಖ ಅಭ್ಯರ್ಥಿಗಳು. ಒಟ್ಟು 19 ಮಂದಿ ಸ್ಪರ್ಧೆಯಲ್ಲಿದ್ದಾರೆ.

**ನಾಳೆ ಫಲಿತಾಂಶ:** ನಾಲ್ಕು ಕ್ಷೇತ್ರಗಳ ಒಟ್ಟು 190 ಮತಕೇಂದ್ರಗಳಲ್ಲಿ ಮತದಾನವಾಗಿದ್ದು ಈಗ ಎಲ್ಲ ಅಭ್ಯರ್ಥಿಗಳ ಭವಿಷ್ಯ ಮತ ಪೆಟ್ಟಿಗೆಯಲ್ಲಿ ಭದ್ರವಾಗಿವೆ. ಆಯಾ ಜಿಲ್ಲೆಗಳ ಸಹಾಯಕ ಚುನಾವಣಾಧಿಕಾರಿಗಳು ಮತ್ತು ಹಿರಿಯ ಪೊಲೀಸ್ ಅಧಿಕಾರಿಗಳ ಸಮ್ಮುಖದಲ್ಲಿ ಮತಪೆಟ್ಟಿಗೆಗಳನ್ನು ಸ್ಟ್ರಾಂಗ್ ರೂಂನಲ್ಲಿ ಸುರಕ್ಷಿತವಾಗಿಡಲಾಗಿದೆ.

ಆಧಾರ: ಕನ್ನಡಪ್ರಭ, ದಿನಾಂಕ: 14.06.2022

## 17. Result shows come in Cong and JD(S) voted for BJP

The result of last week's Rajya Sabha elections, or rather the victory of Lahar Singh Siroya, BJP's third candidate, has not only left Congress and JD(S) intrigued but has led to finger pointing and some soul searching. Siroya polled more than the leftover votes from his party, which indicates cross-voting not only from JD(S) but Congress too.

A section of functionaries is now blaming seniors in JD(S) and Congress for the fiasco. With a candidate needing 4,481 votes to win, BJP, with 122 MLAs (weightage of 100 for each vote) could have won only two seats. But Siroya bagged 3,617 votes when the party had only 3,200 votes left after winning the first two seats (Nirmala Sitharaman-4,600 Jaggesh-4,400). Congress, with 69 MLAs. had allotted 4,600 votes to its first candidate, Jairam Ramesh, while Mansoor Ali Khan, its second candidate, bagged 2,592 thanks to a cross-vote from JD(S) legislator K Srinivas Gowda. Another vote was presumably from Sharath Bachchegowda, who did not have to show his ballot paper before voting because he is an independent. Khan also got 92 surplus votes transferred from Ramesh.

Despite having 33 MLAs, the JD(S) candidate, D Kupendra Reddy, received only 3,000 votes. While Gowda openly admitted to voting for Congress, the identity of the other member who cross voted is shrouded in mystery.

It's clear that a first preference vote from JD(S) and two second preference votes meant for Congress candidate Mansoor Ali Khan were transferred. The identity of those who voted for Siroya though remains unclear.

While JD(S) has 'maintained a studied silence, Congress said that an internal "check" is underway to identify the black sheep.

HD Kumaraswamy, JD(S) floor leader, had blamed SR Srinivas, a dissident MLA from Gubbi. HD Revanna, the former chief minister's MLA brother, who was party agent at the polling booth, claimed Srinivas did not show his ballot paper properly.

However, Srinivas denied the allegation, insisting that he voted for JD(S) candidate D Kupendra Reddy. Srinivas alleged someone from the Kumaraswamy camp had crossed-voted and he is being made the scapegoat.

"It is a known fact that Kumaraswany and I are not on good terms," Srinivas said. "I have also made it clear that I will join Congress soon so I could have voted for Congress. But I did not. This means an MLA has cross voted at the behest of Kumaraswamy as he had the twin objective of ensuring a win for the BJP candidate while blaming me."

But KA Tippe Swamy, MLC and JD(S) counting agent, rebutted Srinivas, saying: "It is clear Srinivas cross-voted. He covered his ballot paper when he showed it to our agent."

On the allegation that a couple of Congress members also facilitated Siroya's win, KPCC working president R Dhruvanaraya said: "All votes of our 69 MLAs were intact. The two second preference votes Siroya got did not come from us."

**HOW VOTES WERE SHARED**

- Total electoral college: 224 MLAS
- Value of an MLA's vote: 100
- Votes required for a win: 4,481
- Nirmala Sitharaman (BJP): 4,600
- Jaggesh (BJP): 4,400
- Lahar Singh Siroya (BJP): 3,617 (100 first preference votes from cross voting, 200 second preference votes from Congress's second candidate and 117 surplus votes from Sitharaman)
- Jairam Ramesh (Cong): 4,600
- Mansoor Ali Khan (Cong): 2,500 (100 first preference votes from cross voting and 92 surplus votes transferred from Ramesh)
- D Kupendra Reddy (JD-S): 3,000 (lost 200 votes thanks to cross-voting)

Courtesy: Times of India, dt: 14.06.2022

## 18. ಮೇಲ್ಮನೆ 2 ಸ್ಥಾನ ಬಿಜೆಪಿ, 2 ಕೈ ತೆಕ್ಕೆಗೆ

ವಿಧಾನ ಪರಿಷತ್‌ನ 2 ಶಿಕ್ಷಕರು ಹಾಗೂ 2 ಪದವೀಧರರ ಕ್ಷೇತ್ರಗಳಿಗೆ ನಡೆದ ಚುನಾವಣೆಯಲ್ಲಿ ತಲಾ ಎರಡು ಸ್ಥಾನಗಳನ್ನು ಬಿಜೆಪಿ ಹಾಗೂ ಕಾಂಗ್ರೆಸ್ ಗೆದ್ದುಕೊಂಡಿವೆ. ಜೆಡಿಎಸ್ ತನ್ನ ವಶದಲ್ಲಿದ್ದ

ಪಶ್ಚಿಮ ಶಿಕ್ಷಕರ ಕ್ಷೇತ್ರ ಹಾಗೂ ದಕ್ಷಿಣ ಪದವೀಧರರ ಕ್ಷೇತ್ರಗಳನ್ನು ಕಳೆದುಕೊಂಡಿದೆ. ನಾಲ್ಕು ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ 3 ಕ್ಷೇತ್ರಗಳ ಫಲಿತಾಂಶವನ್ನು ಚುನಾವಣಾ ಆಯೋಗ ಅಧಿಕೃತವಾಗಿ ಪ್ರಕಟಿಸಿತ್ತು. ಪಶ್ಚಿಮ ಶಿಕ್ಷಕರ ಕ್ಷೇತ್ರದಿಂದ ಬಸವರಾಜ ಹೊರಟ್ಟಿ ಜಯಗಳಿಸಿದ್ದರು. ವಾಯವ್ಯ ಶಿಕ್ಷಕರ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಪ್ರಕಾಶ್ ಹುಕ್ಕೇರಿ, ವಾಯವ್ಯ ಪದವೀಧರರ ಕ್ಷೇತ್ರದಲ್ಲಿ ಹಣಮಂತ ನಿರಾಣಿ ವಿಜಯ ಸಾಧಿಸಿದ್ದರು. ದಕ್ಷಿಣ ಪದವೀಧರರ ಕ್ಷೇತ್ರದ ಮತ ಎಣಿಕೆ ವಿಳಂಬವಾದ್ದರಿಂದ ಫಲಿತಾಂಶ ಪ್ರಕಟಗೊಂಡಿದೆ. ಈ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಮಧು ಜಿ.ಮಾದೇಗೌಡ ವಿಜಯಶಾಲಿಯಾಗಿದ್ದಾರೆ. ಮಧು ಮಾದೇಗೌಡ ಮತ ಎಣಿಕೆ ಆರಂಭದಿಂದಲೂ ಪ್ರತಿ ಸುತ್ತಿನಲ್ಲೂ ಮುನ್ನಡೆ ಕಾಯ್ದುಕೊಂಡಿದ್ದರು. ಬುಧವಾರ ಬೆಳಗ್ಗೆ ಆರಂಭವಾದ ಮತ ಎಣಿಕೆ ಗುರುವಾರ ಬೆಳಗ್ಗೆ ವರೆಗೆ ನಡೆಯಿತು.

**ಜೆಡಿಎಸ್‌ಗೆ ದೊಡ್ಡ ಹಿನ್ನಡೆ:** ದಕ್ಷಿಣ ಪದವೀಧರರ ಕ್ಷೇತ್ರವನ್ನು ಜೆಡಿಎಸ್‌ನ ಕೆ.ಟಿ.ಶ್ರೀಕಂಠೇಗೌಡ ಪ್ರತಿನಿಧಿಸುತ್ತಿದ್ದರು. ಈ ಬಾರಿ ಅವರು ಚುನಾವಣೆಗೆ ಸ್ಪರ್ಧಿಸಲು ನಿರಾಕರಿಸಿದ ಕಾರಣ ಜೆಡಿಎಸ್ ಸಭಾಪತಿ ವರಿಷ್ಠರು ಎಚ್.ಕೆ.ರಾಮು ಅವರನ್ನು ಕಣಕ್ಕಿಳಿಸಿದ್ದರು. ಆದರೆ, ರಾಮುಗೆ ಟಿಕೆಟ್ ಕೊಡಲು ಮರಿತಿಬ್ಬೇಗೌಡ ವಿರೋಧ ವ್ಯಕ್ತಪಡಿಸಿದ್ದಲ್ಲದೆ, ಅಭ್ಯರ್ಥಿ ಬೆಂಬಲಿಸದೇ ಹಿಂದೆ ಸರಿದಿದ್ದರು.

**ಪ್ರಬುದ್ಧ ಶಿಕ್ಷಕರ ಮತಗಳು ಅಸಿಂಧು**

ವಾಯವ್ಯ ಶಿಕ್ಷಕರ ಮತ್ತು ಪದವೀಧರ ಹಾಗೂ ಪಶ್ಚಿಮ ಶಿಕ್ಷಕರ ಮತ ಕ್ಷೇತ್ರದ ವಿಧಾನಪರಿಷತ್ ಚುನಾವಣೆಯಲ್ಲಿ 11,499 ಮತಗಳು ತಿರಸ್ಕೃತ (ಅಸಿಂಧು) ಗೊಂಡಿವೆ. ಅಲ್ಲದೆ, ಇದು ಅಭ್ಯರ್ಥಿಗಳ ಗೆಲುವಿನ ನಿರೀಕ್ಷೆಯನ್ನು ಹುಸಿ ಮಾಡಿದೆ. ವಾಯವ್ಯ ಮತ್ತು ಪಶ್ಚಿಮ ಶಿಕ್ಷಕರ ಎರಡು ಮತ ಕ್ಷೇತ್ರದ ಚುನಾವಣೆಯಲ್ಲಿ 36,985 ಮತಗಳು ಚಲಾವಣೆಗೊಂಡಿವೆ. ಇದರಲ್ಲಿ 2,493 ಮತಗಳು ಅಸಿಂಧುಗೊಂಡಿವೆ. ವಾಯವ್ಯ ಪದವೀಧರ ಮತ ಕ್ಷೇತ್ರದಲ್ಲಿ 65,922 ಮತಗಳು ಚಲಾವಣೆಗೊಂಡಿವೆ. ಇದರಲ್ಲಿ 9006 ಮತಗಳು ತಿರಸ್ಕೃತಗೊಂಡಿದ್ದವು. ಇನ್ನು, ದಕ್ಷಿಣ ಪದವೀಧರರ ಕ್ಷೇತ್ರದಲ್ಲಿ 99,471 ಮತಗಳು ಚಲಾವಣೆಗೊಂಡಿದ್ದವು. ಈ ಪೈಕಿ 7,307 ಮತ ತಿರಸ್ಕೃತಗೊಂಡು, 92,164 ಮತ ಕ್ರಮಬದ್ಧವಾಗಿದ್ದವು.

**29 ಗಂಟೆ ಮತ ಎಣಿಕೆ:** ಮೈಸೂರು ನಗರದ ಪಡುವಾರಹಳ್ಳಿಯ ಮಹಾರಾಣಿ ಮಹಿಳಾ ಕಾಲೇಜಿನಲ್ಲಿ ದಕ್ಷಿಣ ಪದವೀಧರರ ಕ್ಷೇತ್ರದ ಮತ ಎಣಿಕೆ ಕಾರ್ಯ ಸತತ 29 ಗಂಟೆ ಕಾಲ ನಡೆಯಿತು. ಬುಧವಾರ ಬೆಳಗ್ಗೆ 8 ರಿಂದ ಮಧ್ಯರಾತ್ರಿ 12.45ರವರೆಗೆ ಪ್ರಥಮ ಪ್ರಾಶಸ್ತ್ಯದ ಮತ ಎಣಿಕೆ ಕಾರ್ಯ ನಡೆಯಿತು. ಗುರುವಾರ ಮುಂಜಾನೆ 1.25 ರಿಂದ ಮಧ್ಯಾಹ್ನ 1 ಗಂಟೆವರೆಗೆ ದ್ವಿತೀಯ ಪ್ರಾಶಸ್ತ್ರದ ಮತಗಳ ಎಣಿಕೆ ನಡೆಯಿತು.

**ದಕ್ಷಿಣ ಪದವೀಧರರ ಕ್ಷೇತ್ರ**

* ಮಧು ಜಿ.ಮಾದೇಗೌಡ: ಕಾಂಗ್ರೆಸ್–46,082

* ಎಂ.ವಿ.ರವಿಶಂಕರ್: ಬಿಜೆಪಿ–33,878

* ಎಚ್.ಕೆ.ರಾಮು: ಜೆಡಿಎಸ್–19,630

**ವಾಯವ್ಯ ಪದವೀಧರರ ಕ್ಷೇತ್ರ**

* ಹಣಮಂತ ನಿರಾಣಿ: ಬಿಜೆಪಿ–44,815

* ಸುನೀಲ್ ಅಣ್ಣಪ್ಪ ಸಂಕ: ಕಾಂಗ್ರೆಸ್–10,122

**ನಿರಾಣ ದಾಖಲೆ:** ವಾಯವ್ಯ ಪದವೀಧರ ಕ್ಷೇತ್ರದಲ್ಲಿ ಬಿಜೆಪಿಯ ಹಣಮಂತ ನಿರಾಣಿ ಗೆಲುವಿನಲ್ಲಿಯೂ ದಾಖಲೆ ಬರೆದಿದ್ದಾರೆ. ಕಾಂಗ್ರೆಸ್‌ನ ಸುನೀಲ್ ಸಂಕ ಅವರನ್ನು 34693 ಮತಗಳ ಅಂತರದಿಂದ ಸೋಲಿಸಿದ್ದಾರೆ. ಪರಿಷತ್ ಚುನಾವಣೆಯಲ್ಲಿಯೇ ಇಷ್ಟೊಂದು ಮತಗಳ ಅಂತರದ ಗೆಲುವು ಇದೇ ಮೊದಲು.

| ಪರಿಷತ್ ಬಲಾಬಲ | |
|---|---|
| ಒಟ್ಟು ಸದಸ್ಯರು | 75 |
| ಬಿಜೆಪಿ | 38 |
| ಕಾಂಗ್ರೆಸ್ | 26 |
| ಜೆಡಿಎಸ್ | 08 |
| ಪಕ್ಷೇತರ | 1 |
| ಸಭಾಪತಿ | 1 |
| ಖಾಲಿ ಸ್ಥಾನ | 1 |

**ಸಂತೋಷ್ ಪ್ರಚಾರಕ್ಕೂ ಗೆಲುವು ಸಿಗಲಿಲ್ಲ**

ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ದಕ್ಷಿಣ ಪದವೀಧರ ಕ್ಷೇತ್ರದ ರವಿಶಂಕರ್ ಪರ ಸಾಕಷ್ಟು ಪ್ರಚಾರ ನಡೆಸಿದ್ದರು. ಜೂ.21ರಂದು ಯೋಗ ದಿನಕ್ಕೆ ಮೈಸೂರಿಗೆ ಬರುತ್ತಿರುವ ಪ್ರಧಾನಿ ಮೋದಿ ಅವರಿಗೆ ಈ ಕ್ಷೇತ್ರದ ಗೆಲುವಿನ ಉಡುಗೊರೆ ನೀಡುವಂತೆ ಕೋರಿದ್ದರು. ಅದೇ ಕಾರಣಕ್ಕೆ ಪಕ್ಷದ ಮುಖಂಡರು ಸಾಕಷ್ಟು ಪ್ರಚಾರ ಮಾಡಿದ್ದರು. ಆದರೂ ಮತದಾರರು ಒಲಿಯಲಿಲ್ಲ. ವಾಯವ್ಯ ಶಿಕ್ಷಕರ ಕ್ಷೇತ್ರದ ಅರುಣ ಶಹಾಪುರ ಸಹ ಸಂಘದ ಅಭ್ಯರ್ಥಿಯಾಗಿದ್ದರು. ಮಾಜಿ

ಸಿಎಂ ಬಿ.ಎಸ್. ಯಡಿಯೂರಪ್ಪ ಅವರು ಪಶ್ಚಿಮ ಶಿಕ್ಷಕರ ಕ್ಷೇತ್ರ, ವಾಯವ್ಯ ಶಿಕ್ಷಕರ ಮತ್ತು ಪದವೀಧರ ಕ್ಷೇತ್ರಗಳಲ್ಲಿ ಪ್ರಚಾರ ಮಾಡಿದ್ದರು. ಅದರಲ್ಲಿ ಬಿಜೆಪಿ ಎರಡು ಕ್ಷೇತ್ರದಲ್ಲಿ ಗೆಲುವು ಸಾಧಿಸಿದೆ.

ಆಧಾರ: ವಿಜಯವಾಣಿ, ದಿನಾಂಕ: 17.06.2022

## 19. ರಾಷ್ಟ್ರಪತಿ ಚುನಾವಣೆ : ವಿಶೇಷ ಪೆನ್ ಬಳಕೆ

'ರಾಷ್ಟ್ರಪತಿ ಚುನಾವಣೆಯಲ್ಲಿ ಮತದಾನದ ಗೋಪ್ಯತೆ ರಕ್ಷಿಸಲು ಮತದಾರರಿಗೆ ವಿಶೇಷವಾಗಿ ರೂಪಿಸಿರುವ, ನೇರಳೆ ಬಣ್ಣದ ಶಾಯಿ ಯುಳ್ಳ ಪೆನ್ ಒದಗಿಸಬೇಕು' ಎಂದು ಚುನಾವಣಾ ಆಯೋಗವು ಚುನಾವಣಾಧಿಕಾರಿಗಳಿಗೆ ಸೂಚಿಸಿದೆ.

ಗೋಪ್ಯತೆಯ ರಕ್ಷಣೆ ಮತ್ತು ಮತದಾರರ ಗುರುತು ಪತ್ತೆಯಾಗುವ ಸಾಧ್ಯತೆ ತಪ್ಪಿಸಲು ಪ್ರತಿಯೊಬ್ಬ ಮತದಾರರಿಗೆ ನೇರಳೆ ಶಾಯಿಯುಳ್ಳ ವಿಶೇಷ ಪೆನ್ ಒದಗಿಸಬೇಕು. ಅಗತ್ಯವಿರುವ ಸಂಖ್ಯೆಯಷ್ಟು ಪೆನ್ ಗಳನ್ನು ಆಯೋಗವು ಚುನಾವಣಾಧಿಕಾರಿಗಳಿಗೆ ಒದಗಿಸಲಿದೆ. ಮತದಾರರು ಈ ಪೆನ್ ಬಳಸಿಯೇ ತಮ್ಮ ಪ್ರಾಶಸ್ತ್ರದ ಅನುಸಾರ ಮತಚಲಾಯಿಸಬೇಕು ಎಂದು ಸೂಚಿಸಲಾಗಿದೆ.

ಉಲ್ಲೇಖಿತ ಪೆನ್ ಹೊರತುಪಡಿಸಿ, ಇತರೆ ಯಾವುದೇ ಪೆನ್ ಬಳಸಿ ಮತ ಚಲಾವಣೆ ಮಾಡಿದಲ್ಲಿ ಅದು ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿ ಚುನಾವಣಾ ನಿಯಮಗಳು 1974ರ ಅನ್ವಯ ಅಸಿಂಧುಗೊಳ್ಳಲಿದೆ ಎಂದು ರಾಜ್ಯಸಭೆಯ ಪ್ರಧಾನ ಕಾರ್ಯದರ್ಶಿ ಅವರು ಈ ಸಂಬಂಧ ವಿವಿಧ ರಾಜ್ಯಗಳ ಚುನಾವಣಾಧಿಕಾರಿಗಳಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

ರಾಷ್ಟ್ರಪತಿ ಚುನಾವಣೆಯಲ್ಲಿ ಸಂಸತ್ತಿನ ಉಭಯ ಸದನಗಳ ಸದಸ್ಯರು, ರಾಜ್ಯಗಳ ವಿಧಾನಸಭೆ ಹಾಗೂ ದೆಹಲಿ, ಪುದುಚೇರಿ ಕೇಂದ್ರಾಡಳಿತ ಪ್ರದೇಶಗಳ ಚುನಾಯಿತ ಸದಸ್ಯರು ಮತದಾರರಾಗಿರುತ್ತಾರೆ. ಸಂಸತ್ತಿನ ಉಭಯ ಸದನಗಳಿಗೆ ನಾಮಕರಣಗೊಂಡ ಹಾಗೂ ರಾಜ್ಯಗಳ ವಿಧಾನಪರಿಷತ್ತುಗಳ ಸದಸ್ಯರಿಗೆ ಮತದಾನದ ಹಕ್ಕು ಇರುವುದಿಲ್ಲ.

ನೂತನ ರಾಷ್ಟ್ರಪತಿ ಆಯ್ಕೆಗೆ ಜುಲೈ 18ರಂದು ಚುನಾವಣೆ ನಡೆಯಲಿದ್ದು, ಮತಗಳ ಎಣಿಕೆ ಪ್ರಕ್ರಿಯೆ ರಾಷ್ಟ್ರ ರಾಜಧಾನಿಯಲ್ಲಿ ಜುಲೈ21 ರಂದು ನಡೆಯಲಿದೆ. ರಾಜಕೀಯ ಪಕ್ಷಗಳು ಈ ಚುನಾವಣೆಯಲ್ಲಿ ತನ್ನ ಸದಸ್ಯರಿಗೆ ವಿಪ್ ಜಾರಿ ಮಾಡಲು ಅವಕಾಶವಿರುವುದಿಲ್ಲ.

ಆಧಾರ: ಪ್ರಜಾವಾಣಿ, ದಿನಾಂಕ: 17.06.2022

## 20. ಮತದಾನ ಹಕ್ಕು : ಎಡವಿದ ಪದವೀಧರರು, ಶಿಕ್ಷಕರು

ಮತದಾನದ ಬಗ್ಗೆ ಚುನಾವಣಾ ಆಯೋಗ ಹಾಗೂ ಆಯಾ ಜಿಲ್ಲಾಡಳಿತಗಳು ಎಷ್ಟೇ ಜಾಗೃತಿ ಮೂಡಿಸಿದ್ದರೂ, ಈ ಬಾರಿ ಚುನಾವಣೆಯಲ್ಲಿ ತಿರಸ್ಕೃತ ಮತಗಳ ಸಂಖ್ಯೆ 10 ಸಾವಿರಕ್ಕೂ ಹೆಚ್ಚು,

ಅದರಲ್ಲೂ ಪ್ರಜ್ಞಾವಂತರು ಎಂದು ಕರೆಸಿಕೊಳ್ಳುವವರೇ ಹಕ್ಕು ಚಲಾಯಿಸುವಲ್ಲಿ ಎಡವಿದ್ದು ಅಚ್ಚರಿಗೆ ಕಾರಣವಾಗಿದೆ.

ಬೆಳಗಾವಿ, ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳ ವ್ಯಾಪ್ತಿ ಒಳಗೊಂಡ ವಾಯವ್ಯ ಶಿಕ್ಷಕರು, ಪದವೀಧರರ ಕ್ಷೇತ್ರಗಳು ಹಾಗೂ ಧಾರವಾಡ, ಗದಗ, ಉತ್ತರ ಕನ್ನಡ, ಹಾವೇರಿ ಜಿಲ್ಲೆ ಒಳಗೊಂಡ ಪಶ್ಚಿಮ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಈ ಬಾರಿ ದಾಖಲೆ ಪ್ರಮಾಣದಲ್ಲಿ ಮತದಾನವಾಗಿತ್ತು. ಪದವೀಧರರು, ಶಿಕ್ಷಕರು ಸೇರಿ ಮೂರು ಕ್ಷೇತ್ರಗಳಲ್ಲಿ ಒಟ್ಟು 1,02,907 ಜನರು ಮತ ಚಲಾಯಿಸಿದ್ದರು. ಈ ಪೈಕಿ 91,408 ಮತಗಳು ಸಿಂಧುವಾಗಿವೆ. 11,499 ಮತಗಳು ತಿರಸ್ಕೃತವಾಗಿವೆ.

**ಪದವೀಧರ ಕ್ಷೇತ್ರದಲ್ಲೇ ಅಧಿಕ:** ಪದವೀಧರ ಕ್ಷೇತ್ರದಲ್ಲಿ ಈ ಬಾರಿ 65,922 ಮತಗಳು ಚಲಾವಣೆಯಾಗಿದ್ದವು. ಈ ಪೈಕಿ 56,916 ಮತಗಳು ಸಿಂಧುವಾಗಿದ್ದರೆ, 9,006 ಮತಗಳು ತಿರಸ್ಕೃತಗೊಂಡಿವೆ. ವಾಯವ್ಯ ಶಿಕ್ಷಕರ ಕ್ಷೇತ್ರದಲ್ಲಿ 21,402 ಮತ ಚಲಾವಣೆಯಾಗಿವೆ. ಇದರಲ್ಲಿ 20,132 ಮತಗಳು ಸಿಂಧುವಾಗಿದ್ದು, 1,270 ಮತ ತಿರಸ್ಕೃತಗೊಂಡಿವೆ. ಪಶ್ಚಿಮ ಶಿಕ್ಷಕರ ಕ್ಷೇತ್ರದಲ್ಲಿ 15,583 ಮತಗಳು ಚಲಾವಣೆಗೊಂಡಿದ್ದು, 14,360 ಮತಗಳು ಸಿಂಧುವಾಗಿವೆ. 1,223 ತಿರಸ್ಕೃತವಾಗಿವೆ.

2016ರಲ್ಲಿ ನಡೆದ ವಾಯವ್ಯ ಶಿಕ್ಷಕರು ಹಾಗೂ ಪದವೀಧರ ಕ್ಷೇತ್ರಗಳ ಚುನಾವಣೆಯಲ್ಲೂ 11,402 ಮತಗಳು ತಿರಸ್ಕೃತಗೊಂಡಿದ್ದವು. ಅದರಲ್ಲೂ ಪದವೀಧರ ಕ್ಷೇತ್ರವೊಂದರಲ್ಲೇ 10,455 ಮತ ತಿರಸ್ಕೃತವಾಗಿದ್ದವು. ಶಿಕ್ಷಕರ ಕ್ಷೇತ್ರದಲ್ಲಿ 947 ಮತಗಳು ಅಸಿಂಧುವಾಗಿದ್ದವು. ಈ ಬಾರಿ ಪದವೀಧರ ಮತಗಳ ತಿರಸ್ಕೃತ ಸಂಖ್ಯೆ ತುಸು ಕಡಿಮೆಯಾಗಿದ್ದರೆ, ಶಿಕ್ಷಕರ ತಿರಸ್ಕೃತ ಮತಗಳ ಸಂಖ್ಯೆ ಹೆಚ್ಚಿದೆ.

**ತಿರಸ್ಕೃತವಾಗಲು ಕಾರಣವೇನು?:** 'ಇತ್ತೀಚೆಗೆ ನಡೆಯುತ್ತಿರುವ ಹಲವು ಚುನಾವಣೆಗಳಲ್ಲಿ ಇವಿಎಂ ಯಂತ್ರ ಬಳಸಲಾಗುತ್ತಿದೆ. ಆದರೆ, ವಿಧಾನ ಪರಿಷತ್ ಚುನಾವಣೆಯಲ್ಲಿ ಇಂದಿಗೂ ಬ್ಯಾಲೆಟ್ ಪೇಪರ್ ಬಳಸಲಾಗುತ್ತದೆ. ಮತದಾರರು ತಾವು ಆಯ್ಕೆ ಮಾಡಲು ಇಚ್ಛಿಸುವ ಅಭ್ಯರ್ಥಿ ಹೆಸರಿನ ಮುಂದೆ '1' ಅಂಕಿಯನ್ನು ಬರೆಯಬೇಕು. ಇದನ್ನು ಪ್ರಥಮ ಪ್ರಾಶಸ್ತ್ಯದ ಮತ ಎಂದು ಗುರುತಿಸಲಾಗುತ್ತದೆ. ಆದರೆ, ಸಾವಿರಾರು ಅಭ್ಯರ್ಥಿಗಳು ಮತದಾನ ವೇಳೆ ನಿಯಮ ಸರಿಯಾಗಿ ಪಾಲಿಸಿಲ್ಲ. ಕೆಲವರು ಒಂದಕ್ಕಿಂತ ಹೆಚ್ಚಿನ ಅಭ್ಯರ್ಥಿಗಳ ಹೆಸರಿನ ಮುಂದೆ 1 ಅಂಕಿ ಬಳಸಿದ್ದರೆ, ಇನ್ನೂ ಕೆಲವರು ರೈಟ್ ಮಾರ್ಕ್ ಹಾಕಿದ್ದಾರೆ. ಇವೆಲ್ಲ ಕಾರಣಗಳಿಂದ ಮತ ತಿರಸ್ಕೃತಗೊಂಡಿವೆ' ಎಂದು ಚುನಾವಣೆ ಕರ್ತವ್ಯಕ್ಕೆ ನಿಯೋಜನೆಯಾಗಿದ್ದ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

**ಮೂರಂಕಿ ತಲುಪದ 11 ಮಂದಿ**

ಮೂರು ಕ್ಷೇತ್ರಗಳಲ್ಲಿ 30 ಅಭ್ಯರ್ಥಿಗಳು ಕಣದಲ್ಲಿದ್ದರು. ಈ ಪೈಕಿ 11 ಅಭ್ಯರ್ಥಿಗಳ ಮತ ಮೂರಂಕಿಯನ್ನೇ ತಲುಪಿಲ್ಲ. ಅದರಲ್ಲೂ ಮೂವರು ಬೆರಳೆಣಿಕೆಯಷ್ಟು ಮತಗಳಿಸಿದ್ದಾರೆ.

ಪದವೀಧರ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿ ಘಟಿಗೆಪ್ಪ ಮಗದುಮ್ಮ 68 ಮತ ಪಡೆದಿದ್ದಾರೆ. ವಾಯವ್ಯ ಶಿಕ್ಷಕರ ಕ್ಷೇತ್ರದಲ್ಲಿ ಬಸಪ್ಪ ಮಣಿಗಾರ 39, ಶ್ರೀಕಾಂತ ಪಾಟೀಲ 19, ಜಯಪಾಲ ದೇಸಾಯಿ 10, ಅಪ್ಪಾಸಾಹೇಬ ಕುರಣೆ 9, ಶ್ರೇನಿಕ್ ಜಾಂಗಟೆ 8, ಸಂಗಮೇಶ ಚಿಕ್ಕನರಗುಂದ 4 ಮತ ಪಡೆದಿದ್ದಾರೆ. ಪಶ್ಚಿಮ ಶಿಕ್ಷಕರ ಕ್ಷೇತ್ರದಲ್ಲಿ ವೆಂಕನಗೌಡ ಗೋವಿಂದಗೌಡರ 79, ಎಂ.ಪಿ. ಕರಿಬಸಪ್ಪ 60, ಕೃಷ್ಣವೇಣಿ 58 ಹಾಗೂ ಪ್ರೊ.ಎಫ್.ವಿ.ಕಲ್ಲನಗೌಡರ 27 ಮತ ಗಳಿಸಿದ್ದಾರೆ.

ಆಧಾರ: ಪ್ರಜಾವಾಣಿ, ದಿನಾಂಕ: 17.06.2022

## 21. ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಸ್ಪರ್ಧಿಸುವುದಕ್ಕೆ ನಿರ್ಬಂಧ

ಚುನಾವಣೆಗಳಲ್ಲಿ ಒಬ್ಬನೇ ಅಭ್ಯರ್ಥಿ ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಸ್ಪರ್ಧಿಸುವುದಕ್ಕೆ ನಿರ್ಬಂಧ ಹೇರುವಂತೆ ಚುನಾವಣಾ ಆಯೋಗವು ಕೇಂದ್ರ ಸರಕಾರಕ್ಕೆ ಶಿಫಾರಸ್ಸು ಮಾಡಿದೆ. ಈ ಸಂಬಂಧ ಜನಪ್ರತಿನಿಧಿಗಳ ಕಾಯಿದೆಗೆ ತಿದ್ದುಪಡಿ ತರಬೇಕು ಎಂದು ಆಯೋಗ ಸಲಹೆ ನೀಡಿದೆ.

ಮುಖ್ಯ ಚುನಾವಣಾ ಆಯುಕ್ತ ರಾಜೀವ್‌ಕುಮಾರ್ ಅವರೇ ಖುದ್ದಾಗಿ ಕಾನೂನು ಸಚಿವಾಲಯದ ಶಾಸಕಾಂಗ ಕಾರ್ಯದರ್ಶಿಯವರಿಗೆ ಈ ಕುರಿತು ಪ್ರಸ್ತಾವ ಸಲ್ಲಿಸಿದ್ದಾರೆ.

ಸದ್ಯದ ಕಾನೂನಿನ ಪ್ರಕಾರ ಸಾರ್ವತ್ರಿಕ ಚುನಾವಣೆ ಅಥವಾ ಉಪ ಚುನಾವಣೆ ಅಥವಾ ರಾಜ್ಯಸಭೆ/ವಿಧಾನ ಪರಿಷತ್ ಚುನಾವಣೆಗಳಲ್ಲಿ ಒಂದಕ್ಕಿಂತ ಹೆಚ್ಚು ಅಂದರೆ ಎರಡು ಕ್ಷೇತ್ರಗಳಿಂದ ಸ್ಪರ್ಧಿಸಲು ಅವಕಾಶವಿದೆ. ಒಂದೊಮ್ಮೆ ಅಭ್ಯರ್ಥಿಯು ಎರಡೂ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದಲ್ಲಿ ಒಂದನ್ನು ಉಳಿಸಿಕೊಂಡು ಮತ್ತೊಂದು ಕ್ಷೇತ್ರವನ್ನು ತೆರವು ಮಾಡಬೇಕಾಗುತ್ತದೆ. ಇದು ಉಪ ಚುನಾವಣೆಗಳಿಗೆ ದಾರಿ ಮಾಡಿಕೊಡುವ ಕಾರಣ ಆರ್ಥಿಕ ಹೊರೆ ಎನಿಸಿದೆ. ಸುಧಾರಣಾ ಕ್ರಮವಾಗಿ ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಿಂದ ಸ್ಪರ್ಧಿಸುವುದಕ್ಕೆ ನಿರ್ಬಂಧ ಹೇರುವುದು ಅಗತ್ಯವಾಗಿದೆ. ಈ ಸಂಬಂಧ ಜನಪ್ರತಿನಿಧಿಗಳ ಕಾಯಿದೆಗೆ ತಿದ್ದುಪಡಿ ತರಬೇಕು ಎಂದು ಆಯೋಗವು ವಿವರಿಸಿದೆ.

ಒಂದೊಮ್ಮೆ ಜನಪ್ರತಿನಿಧಿಗಳ ಕಾಯಿದೆಯಲ್ಲಿರುವ ನಿಯಮಗಳನ್ನು ಹಾಗೆಯೇ ಉಳಿಸಿಕೊಂಡಲ್ಲಿ, ಗೆಲುವು ಸಾಧಿಸಿದ ಎರಡೂ ಕ್ಷೇತ್ರಗಳ ಪೈಕಿ ಒಂದನ್ನು ಬಿಟ್ಟುಕೊಡುವ ಅಭ್ಯರ್ಥಿಗೆ ಭಾರಿ ಮೊತ್ತದ ದಂಡ ಹಾಕುವ ನಿಯಮವನ್ನಾದರೂ ಜಾರಿಗೆ ತರಬೇಕು ಎಂದು ಚುನಾವಣಾ ಆಯೋಗವು ಸರಕಾರವನ್ನು ಆಗ್ರಹಿಸಿದೆ.

**ಆಯೋಗದ ಶಿಫಾರಸ್ಸಿನಂತೆ ದಂಡದ ಮೊತ್ತ ಎಷ್ಟಿರಬೇಕು?**

- ವಿಧಾನಸಭೆ/ವಿಧಾನ ಪರಿಷತ್ ಚುನಾವಣೆಯಾದಲ್ಲಿ ರೂ. 5 ಲಕ್ಷ.
- ಲೋಕಸಭೆ ಚುನಾವಣೆಯಾದಲ್ಲಿ ರೂ.10 ಲಕ್ಷ.

- ದಂಡದ ಮೊತ್ತ ಕಾಲಕಾಲಕ್ಕೆ ಪರಿಷ್ಕರಣೆಗೆ ಒತ್ತು.
- ಚುನಾವಣಾ ಆಯೋಗದ ಪ್ರಸ್ತಾವಕ್ಕೆ ಕಾನೂನು ಆಯೋಗ ಬೆಂಬಲ.

**2 ದಶಕಗಳ ಆಗ್ರಹ**

ಇದೇನೂ ಹೊಸ ಪ್ರಸ್ತಾವವಲ್ಲ, 2004 ರಿಂದಲೂ ಇಂತಹದೊಂದು ಚರ್ಚೆ ಚಾಲ್ತಿಯಲ್ಲಿದ್ದರೂ ಯಾವ ಸರಕಾರಗಳೂ ಕಾನೂನು ತಿದ್ದುಪಡಿಗೆ ಮುಂದಾಗಿಲ್ಲ, ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರು ಇತ್ತೀಚೆಗೆ ಕಾನೂನು ಸಚಿವಾಲಯದಲ್ಲಿ ಶಾಸಕಾಂಗ ಕಾರ್ಯದರ್ಶಿಯ ಜೊತೆಗೆ ನಡೆಸಿದ ಸಂವಾದದ ನಂತರ ಈ ಪ್ರಸ್ತಾವಕ್ಕೆ ಮರು ಜೀವ ತುಂಬಿದ್ದಾರೆ.

**ಕೊನೆ ತಿದ್ದುಪಡಿ ಯಾವಾಗ?** 1996ರಲ್ಲಿ ಜನಪ್ರತಿನಿಧಿಗಳ ಕಾಯಿದೆಗೆ ತಿದ್ದುಪಡಿ ತಂದು ಒಬ್ಬ ಅಭ್ಯರ್ಥಿಯು ಎರಡಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಸ್ಪರ್ಧಿಸದಂತೆ ನಿರ್ಬಂಧ ವಿಧಿಸಲಾಗಿದೆ. ಇದಕ್ಕೂ ಮೊದಲು ಅಭ್ಯರ್ಥಿಯು ಎಷ್ಟು ಕ್ಷೇತ್ರಗಳಿಗೆ ಬೇಕಾದರೂ ಸ್ಪರ್ಧಿಸಲು ಅವಕಾಶವಿತ್ತು.

ಆಧಾರ: ವಿಜಯ ಕರ್ನಾಟಕ, ದಿನಾಂಕ: 18.06.2022

## 22. Droupadi Murmu is NDA Pick; Opposition parties field Sinha

The ruling National Democratic Alliance (NDA) and the Opposition have declared their respective candidates for the Presidential election in July.

The Bharatiya Janata Party (BJP) Parliamentary Board nominated Former Jharkhand Governor Droupadi Murmu, who hails from Odisha and will be the first tribal woman to be the President of India, if elected. The Opposition declared Former Finance Minister Yashwant Sinha as its candidate.

**High-level meeting**

The BJP called a meeting of the Parliamentary Board and after discussions, attended by Prime Minister Narendra Modi and lasting a little over an hour, announced Ms. Murmu's name.

Party President J.P.Nadda said that during the meeting, some 20 names were discussed, but it was felt that the new President of India should hail from the east and be a woman and an Adivasi (Ms. Murmu belongs to the Santhal community).

For the Opposition, the choice of Mr. Sinha took a circuitous route. After two rounds of deliberations and many informal meetings, the 84-year-old bureaucrat turned politician was declared the Opposition's common candidate.

Congress leader Jairam Ramesh read out from a joint statement of the Opposition parties at the press meet. "Ideally, a consensus candidate of the government and the Opposition should be elected for the highest office of the Republic. However, the initiative for this should have been taken by the government. We regret the fact that the Modi government made no serious efforts in this direction. We, therefore, date of the

government and the Opposition should be elected for the highest office of the Republic. However, the initiative for this should have been taken by the government. We regret the fact that the Modi government made no serious efforts in this direction. We, therefore, appeal to all political parties to support the candidate of Mr. Sinha so that the nation can have a worthy Rashtrapati (President) elected unopposed."

**No consensus**

Mr. Nadda said that while a consensus candidate for the post of President was desirable, it did not materialise. "Both Defence Minister Rajnath Singh and I spoke to leaders of the various parties, including the UPA (United Progressive Alliance), but a commonality was not emerging. Therefore, we decided to field a common NDA candidate for the post of President of India," Mr. Nadda said.

"Looking at all this, it was decided that former Jharkhand Governor Droupadi Murmu would be the NDA's candidate for President of India," Mr.Nadda said.

The members of the Parliamentary Board, the BJP's highest decision-making body, include Defence Minister Rajnath Singh, Home Minister Amit Shah, Roads and Highways Minister Nitin Gadkari, Madhya Pradesh Chief Minister Shivraj Singh Chouhan, and BJP general secretary B.L.Santhosh. Speaking of Ms. Murmu, Mr. Nadda said that just like India's second President, Dr. S.Radhakrishnan, was identified with the work of education, so did Ms.Murmu. "She was a teacher and later went into politics, as a councilor, then an MLA, [and] as a Minister for Commerce, Fisheries and Animal Husbandry. In 2007, she also received the Neelkanth Award for best MLA. Between 2015 and 2021, she was Governor of Jharkhand, and is an apt choice for the position [of President]. She is a leader of great sensitivity. Whatever responsibility has been accorded to her, she has fulfilled it with grace and ability," Mr.Nadda said.

Tuesday's Opposition parties' meeting was chaired by Mr.Pawar and attended by representatives of 14 Opposition parties. Mr.Pawar said at a press conference that he had spoken to Telangana Chief Minister K.Chandrashekhar Rao and Delhi Chief Minister Arvind Kejriwal. The Opposition, he said, could count on the support of both the Telangana Rashtra Samithi (TRS) and the Aam Aadmi Party (AAP).

Mr. Sinha was elected after three public figures NCP patriarch Sharad Pawar, former J&K Chief Minister Farooq Abdullah, and former West Bengal Governor Gopalkrishna Gandhi - declined to contest.

With both the names now out, the NDA has an advantage over the UPA, not just in terms of numbers but also in terms of the candidate, as the idea of the first Adivasi to ever be President of India would be a powerful inducement to secure support from different fence-sitting political parties such as the Biju Janata Dal (BJD), the Yuvajana Shramika Rythu Congress Party (YSRCP), and others.

Courtesy: The Hindu, dt: 27.06.2022

## 23. ಉಪಸಮರದಲ್ಲಿ ಬಿಜೆಪಿ ಜಯಭೇರಿ

6 ರಾಜ್ಯಗಳ 3 ಲೋಕಸಭೆ ಹಾಗೂ 7 ವಿಧಾನಸಭೆ ಕ್ಷೇತ್ರಗಳಿಗೆ ಜೂ.23ರಂದು ನಡೆದಿದ್ದ ಉಪಚುನಾವಣೆಯ ಫಲಿತಾಂಶ ಪ್ರಕಟವಾಗಿದ್ದು, ಬಿಜೆಪಿ ಭರ್ಜರಿ ಜಯ ಸಾಧಿಸಿದೆ. 3 ಲೋಕಸಭೆ ಕ್ಷೇತ್ರಗಳ ಪೈಕಿ 2ರಲ್ಲಿ ಮತ್ತು 7 ವಿಧಾನಸಭೆ ಕ್ಷೇತ್ರಗಳಲ್ಲಿ 3ರಲ್ಲಿ ಬಿಜೆಪಿ ಸಂಪಾದಿಸಿದೆ. ಜಯ ವಿಶೇಷ ವೆಂದರೆ ಉತ್ತರಪ್ರದೇಶದಲ್ಲಿ ಸಮಾಜವಾದಿ ಪಕ್ಷದ ಭದ್ರಕೋಟೆಯಾಗಿದ್ದ ಆಜಂಗಢ ಹಾಗೂ ರಾಂಪುರ ಲೋಕಸಭೆ ಉಪಚುನಾವಣೆಯಲ್ಲಿ ಜಯ ಭೇರಿ ಬಾರಿಸಿದೆ. ಮತ್ತೊಂದೆಡೆ ತ್ರಿಪುರಾದಲ್ಲಿ ಇತ್ತೀಚೆಗಷ್ಟೇ ನೂತನ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದ ಬಿಜೆಪಿಯ ಮಾಣಿಕ್ ಸಾಹಾ ಜಯ ಗಳಿಸಿದ್ದಾರೆ.

ಇದೇ ವೇಳೆ, ಪಂಜಾಬ್‌ನಲ್ಲಿ ಮುಖ್ಯಮಂತ್ರಿ ಭಗವಂತ್ ಮಾನ್ ಲೋಕಸಭೆ ಕ್ಷೇತ್ರವಾಗಿದ್ದ ಸಂಗೂರ್‌ನಲ್ಲಿ ಆಪ್ ಅಭ್ಯರ್ಥಿ 5 ಸಾವಿರಕ್ಕೂ ಹೆಚ್ಚು ಮತದಿಂದ ಸೋತಿದ್ದಾರೆ. ಇಲ್ಲಿ ಪ್ರತ್ಯೇಕ ಖಲಿಸ್ತಾನಿ ಹೋರಾಟ ನಡೆಸುವ ಶಿರೋಮಣಿ ಅಕಾಲಿದಳ (ಅಮೃತಸರ) ಪಕ್ಷದ ಸಿಮ್ರನ್‌ಜಿತ್ ಸಿಂಗ್ ಮಾನ್ ಗೆದ್ದಿದ್ದಾರೆ. ಪಂಜಾಬ್ ವಿಧಾನಸಭೆಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ 117ರ ಪೈಕಿ 92 ಸ್ಥಾನ ಗೆದ್ದ 3 ತಿಂಗಳಲ್ಲೇ ಸಂಭವಿಸಿದ ಈ ಸೋಲು ಆಪ್‌ಗೆ ಭಾರೀ ಮುಖಭಂಗ ಉಂಟು ಮಾಡಿದೆ. 2019ರ ಲೋಕಸಭೆ ಚುನಾವಣೆಯಲ್ಲಿ ಕೇವಲ 1 ಸ್ಥಾನ ಗೆದ್ದಿದ್ದ ಆಪ್ ಈಗ ಅದನ್ನೂ ಕಳೆದುಕೊಂಡಿದ್ದು, ಲೋಕಸಭೆಯಲ್ಲಿ ಆ ಪಕ್ಷಕ್ಕೆ ಪ್ರಾತಿನಿಧ್ಯವೇ ಇಲ್ಲದಂತಾಗಿದೆ.

**ಉತ್ತರ ಪ್ರದೇಶದಲ್ಲಿ ಎಸ್‌ಪಿ ಮುಖಭಂಗ:** ಉತ್ತರಪ್ರದೇಶದಲ್ಲಿ ಎಸ್‌ಪಿ ಅಧ್ಯಕ್ಷ ಅಖಿಲೇಶ್ ಯಾದವ್ ರಾಜೀನಾಮೆಯಿಂದ ತೆರವಾದ ಆಜಂಗಢ ಕ್ಷೇತ್ರದಲ್ಲಿ ಬಿಜೆಪಿಯ ದಿನೇಶ್ ಲಾಲ್ ಯಾದವ್ ನಿರಾಹುವಾ 42,000 ಮತಗಳ ಅಂತರದಿಂದ ಜಯಗಳಿಸಿದ್ದಾರೆ. ಇದೇ ವೇಳೆ ಎಸ್‌ಪಿ ನಾಯಕ ಆಜಂಖಾನ್ ಭದ್ರಕೋಟೆ ರಾಂಪುರದಲ್ಲಿ ಬಿಜೆಪಿಯ ಘನಶಾಂಸಿಂಗ್ ಲೋಧಿ 8679 ಮತಗಳ ಅಂತರದಿಂದ ಗೆದ್ದಿದ್ದಾರೆ. ಈ ಮೂಲಕ ಯೋಗಿ ಪಡೆಯು ಅಖಿಲೇಶ್ ಪಡೆಯ ಗರ್ವಭಂಗ ಮಾಡಿದೆ.

**ತ್ರಿಪುರಾದಲ್ಲಿ ಕಮಲ ಕಲರವ:** ತ್ರಿಪುರಾದ 4 ವಿಧಾನಸಭೆ ಕ್ಷೇತ್ರಗಳಲ್ಲಿ ಬಿಜೆಪಿ 3 ಹಾಗೂ ಕಾಂಗ್ರೆಸ್ 1ರಲ್ಲಿ ಗೆದ್ದಿವೆ. ಇತ್ತೀಚೆಗಷ್ಟೇ ಮುಖ್ಯಮಂತ್ರಿ ಆಗಿದ್ದ ಬಿಜೆಪಿ ರಾಜ್ಯಸಭೆ ಸದಸ್ಯ ಮಾಣಿಕ್ ಸಾಹಾ ಗೆದ್ದಿರುವವರಲ್ಲಿ ಪ್ರಮುಖರು. ಕಳೆದ ಚುನಾವಣೆಯಲ್ಲಿ ಶೂನ್ಯ ಸಾಧನೆ ಮಾಡಿದ್ದ ಕಾಂಗ್ರೆಸ್ 1 ಸ್ಥಾನ ಗೆದ್ದಿದೆ. ಇತರರಿಗೆ ಅಲ್ಪತೃಪ್ತಿ: ದಿಲ್ಲಿಯಲ್ಲಿ ಆಪ್, ಆಂಧ್ರದಲ್ಲಿ ವೈಎಸ್ಸಾರ್ ಕಾಂಗ್ರೆಸ್, ಜಾರ್ಖಂಡಲ್ಲಿ ಕಾಂಗ್ರೆಸ್, ತ್ರಿಪುರಾದಲ್ಲಿ ಕಾಂಗ್ರೆಸ್‌ಗೆ ತಲಾ 1 ಸೀಟು ಗೆದ್ದಿವೆ.

- 6 ರಾಜ್ಯಗಳ 3 ಲೋಕಸಭೆ, 7 ಅಸೆಂಬ್ಲಿ ಕ್ಷೇತ್ರಗಳಿಗೆ ಜೂ.23ಕ್ಕೆ ನಡೆದಿದ್ದ ಚುನಾವಣೆ.
- ಸಮಾಜವಾದಿ ಪಕ್ಷದ ಸಂಸದರಿದ್ದ ಆಜಂಗಢ, ರಾಂಪುರ ಲೋಕಸಭೆ ಸೀಟು ಬಿಜೆಪಿಗೆ.

- ಈ ಪೈಕಿ ಆಜಂಗಢ ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಸ್ವಕ್ಷೇತ್ರ.
- ಆ ಪಕ್ಷದ ಪ್ರಭಾವಿ ಮುಸ್ಲಿಂ ನಾಯಕ ಆಜಂಖಾನ್ ಪ್ರತಿನಿಧಿಸುತ್ತಿದ್ದ ಕ್ಷೇತ್ರ ರಾಂಪುರ.
- ಪಂಜಾಬ್ ಸಿಎಂ ರಾಜೀನಾಮೆಯಿಂದ ತೆರವಾಗಿದ್ದ ಲೋಕಸಭೆ ಕ್ಷೇತ್ರ ಅಕಾಲಿ ಬಣಕ್ಕೆ.
- ತ್ರಿಪುರದ 4 ವಿಧಾನಸಭೆ ಕ್ಷೇತ್ರಗಳ ಪೈಕಿ 3ರಲ್ಲಿ ಬಿಜೆಪಿ ಅಭ್ಯರ್ಥಿಗಳು ಜಯಭೇರಿ.
- ತ್ರಿಪುರಾದಲ್ಲಿ ಇತ್ತೀಚೆಗಷ್ಟೇ ಸಿಎಂ ಆಗಿದ್ದ ಬಿಜೆಪಿಯ ಮಾಣಿಕ್ ಸಾಹಾಗೂ ಗೆಲುವು.

**ಐತಿಹಾಸಿಕ ಜಯ**

ಆಜಂಗಡ, ರಾಂಪುರದಲ್ಲಿನ ಬಿಜೆಪಿ ಉಪಚುನಾವಣಾ ಜಯ ಐತಿಹಾಸಿಕ ಇದು ಬಿಜೆಪಿಗೆ ಸರ್ವವ್ಯಾಪಿ ಮಾನ್ಯತೆ ದೊರಕುತ್ತಿದೆ ಹಾಗೂ ಡಬಲ್ ಎಂಜಿನ್ ಸರ್ಕಾರಗಳು ಉ.ಪ್ರ. ಹಾಗೂ ಕೇಂದ್ರದಲ್ಲಿ ಚೆನ್ನಾಗಿ ಕೆಲಸ ಮಾಡುತ್ತಿವೆ ಎಂಬುದರ ಸಂಕೇತ. ಹಾಗೆಯೇ ತ್ರಿಪುರಾದಲ್ಲೂ ಬಿಜೆಪಿ ಅಭೂತಪೂರ್ವ ಜಯ ಸಾಧಿಸಿದೆ. ಇದಕ್ಕಾಗಿ ನಾನು ಕಾರ್ಯಕರ್ತರು, ಜನರಿಗೆ ಆಭಾರಿ.

ಆಧಾರ: ಕನ್ನಡಪ್ರಭ, ದಿನಾಂಕ: 27.06.2022

## 24. ರಾಜ್ಯಸಭೆ: ಶೇ. 31 ಸದಸ್ಯರಿಗೆ ಕ್ರಿಮಿನಲ್ ಹಿನ್ನಲೆ

ರಾಜ್ಯಸಭೆಯ ಶೇ. 31ರಷ್ಟು ಸದಸ್ಯರು ಕ್ರಿಮಿನಲ್ ಹಿನ್ನೆಲೆ ಹೊಂದಿದ್ದಾರೆ ಎಂಬುದು ಅಸೋಸಿಯೇಷನ್ ಫಾರ್ ಡೆಮಾಕ್ರೆಟಿಕ್ ರಿಫಾರ್ಮ್ಸ್ (ಎಡಿಆರ್) ನಡೆಸಿದ ವಿಶ್ಲೇಷಣಾ ವರದಿಯಿಂದ ಗೊತ್ತಾಗಿದೆ. ರಾಜ್ಯಸಭೆಯ 233 ಸದಸ್ಯರ ಪೈಕಿ 226 ಸದಸ್ಯರ ಅಪರಾಧ ಹಿನ್ನೆಲೆ, ಹಣಕಾಸು, ಶಿಕ್ಷಣ, ಲಿಂಗ ಹಾಗೂ ಇತರ ವಿಷಯಗಳ ಬಗ್ಗೆ ಎಡಿಆರ್ ಈ ವಿಶ್ಲೇಷಣೆ ನಡೆಸಿದೆ.

ಬಿಜೆಪಿಯ 20, ಕಾಂಗ್ರೆಸ್‌ನ 12, ಆರ್‌ಜೆಡಿಯ ಆರು ಸದಸ್ಯರ ಪೈಕಿ 5 ಸದಸ್ಯರು ಕ್ರಿಮಿನಲ್ ಹಿನ್ನೆಲೆ ಹೊಂದಿದ್ದಾರೆ. ಉತ್ತರ ಪ್ರದೇಶದಿಂದ ಆಯ್ಕೆಯಾದ 7, ಮಹಾರಾಷ್ಟ್ರದಿಂದ ಆಯ್ಕೆಯಾದ 12, ತಮಿಳುನಾಡಿನಿಂದ ಆಯ್ಕೆಯಾದ 6, ಕೇರಳದ 6 ಸದಸ್ಯರು, ಬಿಹಾರದ 10 ಸದಸ್ಯರು ಇದರಲ್ಲಿ ಸೇರಿದ್ದಾರೆ.

ಇಬ್ಬರು ಸದಸ್ಯರು ಕೊಲೆ ಪ್ರಕರಣಗಳಲ್ಲಿ, ನಾಲ್ವರು ಕೊಲೆ ಯತ್ನ ಪ್ರಕರಣಗಳಲ್ಲಿ ಭಾಗಿಯಾಗಿದ್ದಾರೆ. ರಾಜಸ್ಥಾನದಿಂದ ಆಯ್ಕೆಯಾಗಿರುವ ಕಾಂಗ್ರೆಸ್‌ನ ಕೆ.ಸಿ. ವೇಣುಗೋಪಾಲ್ ಅತ್ಯಾಚಾರ ಪ್ರಕರಣದಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿದ್ದಾರೆ ಎಂದು ವರದಿಯಲ್ಲಿ ಹೇಳಲಾಗಿದೆ.

86 ಸದಸ್ಯರು ರೂ. 10 ಕೋಟಿಗಿಂತ ಹೆಚ್ಚು ಆಸ್ತಿ ಹೊಂದಿದ್ದಾರೆ. 34 ಸದಸ್ಯರು ರೂ.5 ಕೋಟಿಗಿಂತ, 77 ಸದಸ್ಯರು ರೂ.1 ಕೋಟಿಗಿಂತ ಹೆಚ್ಚು ಆಸ್ತಿ ಹೊಂದಿದ್ದಾರೆ. ಕೋಟಿ ವೀರರ ಪೈಕಿ 74 ಸದಸ್ಯರು ಬಿಜೆಪಿಗೆ ಸೇರಿದವರು 29 ಸದಸ್ಯರು ಕಾಂಗ್ರೆಸ್‌ನವರು.

ಟಿಆರ್‌ಎಸ್ ಪಕ್ಷದ ಏಳು ಸದಸ್ಯರ ಸರಾಸರಿ ಆಸ್ತಿ ರೂ.799 ಕೋಟಿ. ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ಸದಸ್ಯರ 9 ಸದಸ್ಯರ ಸರಾಸರಿ ಆಸ್ತಿ ರೂ.395 ಕೋಟಿ ಇದೆ. ಎನ್‌ಸಿಪಿಯ ನಾಲ್ವರು ಸದಸ್ಯರ ಸರಾಸರಿ ಆಸಿ ರೂ.118 ಕೋಟಿ, ಕಾಂಗ್ರೆಸ್ ಸದಸ್ಯರ ಸರಾಸರಿ ಆಸ್ತಿ ರೂ.50ಕೋಟಿ ಇದ್ದರೆ, ಬಿಜೆಪಿ ಸದಸ್ಯರದ್ದು ರೂ.27 ಕೋಟಿ ಇದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಆಧಾರ: ಪ್ರಜಾವಾಣಿ, ದಿನಾಂಕ: 29.06.2022

## 25. ರಾಷ್ಟ್ರಪತಿ ಚುನಾವಣೆ: 115 ನಾಮಪತ್ರ ಸಲ್ಲಿಕೆ

ರಾಷ್ಟ್ರಪತಿ ಚುನಾವಣೆಗೆ ನಾಮಪತ್ರ ಸಲ್ಲಿಸಲು ಬುಧವಾರ ಕೊನೆಯ ದಿನವಾಗಿದ್ದು, ಈವರೆಗೆ ಒಟ್ಟು 115 ನಾಮಪತ್ರಗಳು ಸಲ್ಲಿಕೆಯಾಗಿವೆ. ಈ ಪೈಕಿ 87 ನಾಮಪತ್ರಗಳು ಪರಿಶೀಲನೆಗೆ ಒಳಪಟ್ಟಿವೆ ಎಂದು ರಾಜ್ಯಸಭಾ ಸಿಬ್ಬಂದಿ ಸಚಿವಾಲಯ ತಿಳಿಸಿದೆ.

ಒಟ್ಟು ನಾಮಪತ್ರಗಳ ಪೈಕಿ 28 ನಾಮಪತ್ರಗಳು ತಿರಸ್ಕೃತವಾಗಿವೆ. ಜುಲೈ 18ರಂದು ಚುನಾವಣೆ ನಡೆಯಲಿದೆ.

ಆಧಾರ: ಪ್ರಜಾವಾಣಿ, ದಿನಾಂಕ: 30.06.2022

## 26. ಆಗಸ್ಟ್ 6 ರಂದು ಉಪರಾಷ್ಟ್ರಪತಿ ಎಲೆಕ್ಷನ್, ಅಂದೇ ಫಲಿತಾಂಶ

ರಾಷ್ಟ್ರಪತಿ ಚುನಾವಣೆ ಬೆನ್ನಲ್ಲೇ ಉಪರಾಷ್ಟ್ರಪತಿ ಚುನಾವಣೆ ಕೂಡ ಘೋಷಣೆ ಆಗಿದೆ. ಆಗಸ್ಟ್ 6ರಂದು ಚುನಾವಣೆ ನಡೆಯಲಿದ್ದು, ಅಂದೇ ಫಲಿತಾಂಶ ಪ್ರಕಟವಾಗಲಿದೆ. ಚುನಾವಣಾ ಆಯೋಗ, ಅಧಿಸೂಚನೆ ಹೊರಡಿಸಿದೆ.

ಜುಲೈ 19ರವರೆಗೆ ನಾಮಪತ್ರ ಸಲ್ಲಿಸಲು ಅವಕಾಶ ನೀಡಲಾಗಿದೆ. ಜುಲೈ 20ರಂದು ನಾಮಪತ್ರ ಪರಿಶೀಲನೆ ನಡೆಯಲಿದ್ದು, ಹಿಂಪಡೆಯಲು ಜುಲೈ 22 ಕೊನೆಯ ದಿನ.

ಲೋಕಸಭೆ, ರಾಜ್ಯಸಭೆಯಲ್ಲಿ ಬಹುಮತ ಹೊಂದಿದ್ದ ಎನ್‌ಡಿಎ ಅಭ್ಯರ್ಥಿಯೇ ಉಪರಾಷ್ಟ್ರಪತಿ ಆಗುವುದು ನಿಶ್ಚಿತ.

ಆಧಾರ: ಕನ್ನಡಪ್ರಭ, ದಿನಾಂಕ: 30.06.2022

# ಭಾಗ – 8

# ಹೊರ ರಾಜ್ಯಗಳ ಸುದ್ಧಿಗಳು

## 1. Punjab passes resolution to transfer Chandigarh to itself

The Punjab State Assembly unanimously passed a resolution to immediately transfer union territory of Chandigarh-the joint capital of Punjab and Haryana , to Punjab.

Haryana Chief Minister Manohar Lal said that Chandigarh is and will remain the capital of Haryana and Punjab. "Both the States have several other issue to talk about apart from Chandigarh," he said.

Punjab Chief Minister Bhagwant Mann moved the resolution in the special session of the State assembly, urging the Central government to honour the principles of federalism enshrined in the Constitutuion and not to take any step which may disturb the balance in the administration of Chandigarh, adding that through its recent actions, the Central government has beeen trying to upset this balance.

Apart from the Bharatiya Janata Party (BJP), MLAs of all political parties, including the Congress, Shiromani Akali dal (SAD), the Aam Aadmi Party (AAP) and the Bahujan Samaj Party (BSP) supported the resolution.

Mr. Mann said his government would exploit all channels by seeking prior appointment from the Centre to call on the Prime Minister and Home Minister to mount pressure on Union government in order to take their fight for legitimate rights of Punjab to its logical end.

Hitting out at the BJP-led Central government, Mr.Mann said that its leadership was bent upon to indulge in vendetta politics especially in states like Punjab, Delhi, and West Bengal where it has miserably failed to get people's mandate.

Haryana Congress President Kumari Selja said the resolution reflects the 'anti-Haryana' thinking of the Aam Aadmi Party. "Chandigarh belongs to Haryana and Haryana has full right over Chandigarh," She said.

Courtesy: The Hindu, Dated:02.04.2022.

## 2. TMC pushes for long-pending women's reservation bill

The Trinamool Congress is pushing for bringing a motion in Rajya Sabha in the last week of Budget Session on the long-pending Women's Reservation Bill that provides for 33% reservation for women in Parliament and state Assemblies.

Trinamool Rajya Sabha floor leader Derek O'Brien has submitted a notice under Rule 168 of the Rules of Procedures and Conduct of Business seeking to table a motion in the Upper House urging the government to introduce the Bill to amend the Constitution to allow 33% of the seats of Lok Sabha, Rajya Sabha and state Assemblies to be reserved for women.

According to the text of the motion, it also urges the government to "create a mechanism by which the government can investigate the barriers of entry to women in electoral politics" and "look at ways to encourage more women to participate in electoral politics".

Asked about the urgency of bringing the motion,O'Brien noted that women account for Trinamool Congress' 34% of tis MPs. " which party has 34% of its MPs. "Which party has 34% women MPs ? Action needed. Not words," he told DH.

The motion noted that India has slipped 28 places to rank 140th among 156 countries in the World Economic Forum's Global Gender Gap Report 2021 majorly on account of the significant decline in the share of women among ministers, which halved, from 23% in 2019 to 9.1% in 2021 and share currently stands at 14%.

"India's rank has steadily deteriorated over the years in Inter-Parliamentary Union's Women in National Parliaments Rankings. In 1998, India ranked 95$^{th}$. As of March 2022, India ranks 144th out of 184 countries. There are 15% women MPs in the 17$^{th}$ Lok Sabha and 12.2% women MPs in the Rajya Sabha. This is lower than the global average of 25.5% only 8% of the total MLAs are women across all states in India," it said.

The motion also referred to the commitment made by the Narendra Modi government to provide 33% reservation to women in Parliament and Assemblies.

The Bill was first introduced in Lok Sabha on September 12, 1996 by the United Front government led by HD.Deve Gowda and similar versions of the bill were introduced later in 1998,1999, and 2008.

The Bill was introduced in Rajya Sabha on May 6, 2008 was passed by the Upper House on March 9, 2010. Between May 8, 2008 and December 17, 2009, the Bill was scrutinised by a Parliamentary Standing Committee.

The Bill passed by the RS was transmitted to the LS but the government could not pass it before the dissolution of the Lower House in 2014.

Courtesy: The Hindu, Dated:04.04.2022.

### 3. All 24 Ministers in A.P Cabinet submit their resignations to CM

All the 24 Ministers in the Andhra Pradesh Cabinet submitted their resignations to Chief Minitster Y.S. Jagan Mohan Reddy immediately after Cabinet meeting.

The resignations have been necessitated as Mr. Jagan had announced at the time of forming the government that the Cabinet would be reconstituted after two and half years to give an opportunity to others. The current Cabinet was sworn in on June 8, 2019, and was supposed to be in offfice till December 8, 2021. Due to many reasons, including the COVID-19 pandemic, the Cabinet reorganisation was put off even past the due date.

Later, speaking to reporters, Municipal Administration Minister Botsa Satyanarayana said the Chief minister had already said that there would be a cabinet

reshuffle after two and half years. Every Minister submitted their resignation happily and voluntarily, he said.

Mr. Satyanarayana said it was the prerogative of the party president to delegate the responsibilities. It was also his decision and prerogative to continue the existing Ministers or select new Ministers. Even though serving as a Minister, he or she should work as an election team. Everyone would strive for the victory of the YSR congress Party (YSRCP) in the 2024 elections, he said.

Civil Supplies Minister Kodali Sri Venkateswara Rao said there was a possibility that a few Ministers would continue in the new Cabinet also. The Chief Minister would decide who should continue. Based on their experience, some of the existing Ministers would be retained, he said, adding, " More than us, it was the Chief Minister who felt bad for asking our resignations. However everyone submitted their resignations wholeheartedly."

The Council of Ministers would be reconstituted at Amaravati on April 11. It is learnt that in the Cabinet reshuffle, only four of the incumbent Minsters were expected to retain their positions. Mr. Jagan would submit the final list of new Ministers to Governor Biswa Bhushan Harichandan before April 9.

Courtesy: The Hindu, Dated:08.04.2022.

## 4. 25 Minister take oath in A.P Cabinet

Dhone MLA Buggana Rajendranath Reddy retained the Finance and planning, Commercial Taxes and Legislative Affairs portfolio in the reorganised Cabinet of Andhra Pradesh. Taneti vanith (Kovvur) has been made Minister for Home and Disaster Management.

Peddireddy Ramachandra Reddy(Punganur) was given Energy, Environment and Forests, Minies and Geology and Science and Technology portfolio. Dharmana Prasasd Rao(Srikakulam) got Revenue, Registrations and Stamps while Botsa Satyanarayana (Cheepurupalli) has been allocated Education.

Ambati Rambabu (Sattnapalli) was allocated the water Resources portfolio and Audimulapu Suresh (Yarragondapalem-SC) Municipal Administration and Urban Development.

Gudivada Amarnath (Anakapalli) was given the all-important Industries, Infrastructure and Investment and Information Technology portfolio.

K. Narayana Swamy (Gangadhara Nellore) and Sk. Amzath Basha Bepari (kadapa) have their portfolios i.e. Excise and Minorities Welfare intact. They were among five Deputy Chief Ministers in the previous Cabinet and they continue to be so now.

The other Deputy Chief Ministers in the new-look Cabinet are Peedika Rajanna Dora(salur-ST), Budi Mutyala Naidu(Madugula) and Kottu Satyanarayana (Tadepalligudem) with Tribal Welfare, Panchayat Raj and Rural Development and Endowments portfolios in that order.

Seediri Appala Raju (Palasa) retained Fisheries, Dairy Development and Animal Husbandry Portfolio.

Dadisetti Ramalingeswara Rao (Tuni) and Pinipe Viswarup (Amaalapuram-SC) were entrusted Roads and Buildings and Transport respectively.

Ch. Venugopala Krishna (Ramachandrapuram) retained the BC welfare Portfolio and has now got Information and Public Relations and Cinematography.

Karumuri Nageswara Rao (Tanuku) is given Civil Supplies and Consumer Affairs. Jogi Ramesh (Pedana) and Meruga Nagarjuna (Vemuru-SC) got Housing and Social Welfare portfolios.

Vidakala Rajani(Chilakaluripet) is made Minister for Health and Family Welfare and Medical Education.

Kakani Govardhan Reddy (Sarvepalli) was given Agriculture and Cooperation, Marketing and Food Processing.

R.K. Roja (Nagari) has been allocated Tourism and Culture and Youth Advancement, Gummanuru Jayaram (Aluru) Labour and Employment and Factories, and K.V. Ushasri Charan (Kalyanadurgam) Women and Child Development and Differently Abled and Senior Ctitizens' Welfare.

Of the 25 Ministers who were sworn in, Peddireddy Ramachandra Reddy, Botsa Satyanarayan, Buggana Rajendranth Reddy, Pinipe Viswarup, C. Venugopala Krishna, Gummanuru Jayaram, Seediri Appalaraju, Thaneti Vanitha, Amjazth Basha, K. Narayana Swamy and Audimulapu Suresh are from the previous Cabinet.

Courtesy: The Hindu, Dated:12.04.2022.

### 5. TN passes bills to clip Guv's power to appoint vice-chancellors

Tamil Nadu Assembly passed two bills that seek to transfer the power of appointing vice-chancellors to state-funded universities from Governor R N Ravi to the state government , amid a full-blown tussle between the DMK dispensation and the Raj Bhavan over exemption from NEET.

The move by the M K Stalin-led government to amend two laws came on the day Ravi inaugurated a two-day conference of vice-chancellors of state, central and private universities of the state in the picturesque Nilgiris district, apparently not taking the state government into confidence.

The amended laws seek to transfer the powers of appointing V-Cs to 13 stateowned universities from the Governor to the state government.

Both the bills cited the Gujarat University Act, 1949, Telangana Universities Act, 1991, and Karnataka State Universities Act, and Karnataka State Universities Act, 2000 to drive home the point that the state government should be empowered to appoint V-Cs of state universities.

As principal Opposition AIADMK and BJP opposed the bill, Stalin cited the example of Gujarat, ruled by the BJP for decades together, where the state government appoints V-Cs and not the Governor.

While BJP staged a walkout, the AIADMK, which passed two bills that allow the state government to appoint V-Cs to two newly-formed universities, said it was opposing the legislation at their "introduction stage."

The government's move comes amid its confrontation with Ravi over a slew of issue as many as nine bills are pending with the Governor and if one includes the two passed, the number will be 11.

According to the bills, the state government will constitute a three-member committee to search for V-Cs and appoint them, instead of the Governor.

**Clash of functions:** Recalling the observations of the Punchhi Commission on Centre-state relations that "there would be a clash of functions and power"s if the authority to choose the top academician was wrested with the Governor, Stalin said V-Cs in Telangana, Karnataka, Andhra Pradesh, and Gujarat are appointed by the respective state governments.

Courtesy: Deccan Herald, Dated:26.04.2022.

## 6. ಹಿಮಾಚಲ ವಿಧಾನಸೌಧಕ್ಕೆ ಖಲಿಸ್ತಾನ್ ಉಗ್ರರ ಧ್ವಜ

ಕಳೆದ ಒಂದು ವರ್ಷದಿಂದ ಮತ್ತೆ ಸಕ್ರಿಯವಾಗಿರುವ ಪ್ರತ್ಯೇಕವಾದಿ ಖಲಿಸ್ತಾನಿ ಸಂಘಟನೆ, ಇದೀಗ ಹಿಮಾಚಲ ಪ್ರದೇಶದ ಧರ್ಮಶಾಲಾದಲ್ಲಿರುವ ವಿಧಾನಸೌಧದ ಮುಂಬಾಗಿಲ ಕಟ್ಟಡಕ್ಕೆ ತನ್ನ ಧ್ವಜ ಕಟ್ಟಿ, ಗೋಡೆಯ ಮೇಲೆ ಖಲಿಸ್ತಾನಿ ಪರ ಬರಹ ಬರೆಯುವ ಮೂಲಕ ದೇಶ ಮತ್ತೊಮ್ಮೆ ದೇಶ ವಿರೋಧಿ ಕೃತ್ಯ ಮೆರೆದಿದೆ.

ಈ ವಿಷಯ ಅಧಿಕಾರಿಗಳು ಮತ್ತು ಪೋಲಿಸರ ಗಮನಕ್ಕೆ ಬಂದಿದ್ದು, ತಕ್ಷಣವೇ ಧ್ವಜವನ್ನು ಇಳಿಸಿ, ಗೋಡೆಯ ಮೇಲಿನ ಬರಹವನ್ನು ಅಳಿಸಲಾಗಿದೆ. ಘಟನೆಯನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ದೋಷಿಗಳ ವಿರುದ್ಧ ಸೂಕ್ತ ಕ್ರಮದ ಭರವಸೆ ನೀಡಿದೆ ಹಾಗೂ ವಿಶೇಷ ತನಿಖಾ ತಂಡ(ಎಸ್‌ಐಟಿ) ರಚಿಸಿ ತನಿಖೆಗೆ ಆದೇಶಿಸಿದೆ. ನಿಷೇಧಿತ ಸಿಖ್ಸ್ ಫಾರ್ ಜಸ್ಟೀಸ್ ಸಂಘಟನೆ ಮುಖ್ಯಸ್ಥನ ಮೇಲೆ ಎಫ್‌ಐಆರ್ ದಾಖಲಿಸಲಾಗಿದೆ.

ಆದರೆ, ಮತ್ತೊಂದೆಡೆ ವಿಪಕ್ಷಗಳು, 'ವಿಧಾನ ಸೌಧಕ್ಕೆ ರಕ್ಷಣೆ ನೀಡಲಾಗದ ಸರ್ಕಾರ, ರಾಜ್ಯದ ಜನರಿಗೆ ಏನು ರಕ್ಷಣೆ ನೀಡಿತ್ತು' ಎಂದು ಟೀಕಿಸಿವೆ.

**ಗುಪ್ತಚರ ಮಾಹಿತಿ ಇತ್ತು:** ಕಳೆದ ವಾರ ಹಿಮಾಚಲ ಪ್ರದೇಶದ ಮುಖ್ಯಮಂತ್ರಿ ಜೈರಾಂ ಠಾಕೂರ್ ಅವರಿಗೆ ಪತ್ರವೊಂದನ್ನು ಬರೆದಿದ್ದ ಖಲಿಸ್ತಾನ್ ಸಂಘಟನೆ, ಶಿಮ್ಲಾದಲ್ಲಿ ಖಲಿಸ್ತಾನ್ ಮತ್ತು ಭಿಂದ್ರನ್ ವಾಲೆ ಧ್ವಜವನ್ನು ಹಾರಿಸುವುದಾಗಿ ಎಚ್ಚರಿಸಿತ್ತು. ಅದರ ಬೆನ್ನಲ್ಲೇ ಗುಪ್ತಚರ ಇಲಾಖೆ ಕೂಡಾ ಇಂಥ ಸಾಧ್ಯತೆ ದಟ್ಟವಾಗಿದೆ ಎಂದು ಎಚ್ಚರಿಸಿತ್ತು.

ಈ ಎಚ್ಚರಿಕೆಯ ನಡುವೆಯೇ ಸಾಮಾನ್ಯವಾಗಿ ಚಳಿಗಾಲದ ವಿಧಾನಸಭೆಯ ಅಧಿವೇಶನ ನಡೆಯುವ ಧರ್ಮಶಾಲಾದ ವಿಧಾನಸೌಧದ ಕಟ್ಟಡದ ಮುಂಭಾಗದ ಗೇಟ್‌ಗೆ ಖಲಿಸ್ತಾನ್ ಧ್ವಜ ಕಟ್ಟಿ, ಗೋಡೆಯ ಮೇಲೆ ಬರಹ ಬರೆಯಲಾಗಿದೆ.

**ಹಗಲು ಹೊತ್ತು ಬನ್ನಿ–ಸಿಎಂ ಸವಾಲು:** ಘಟನೆಯನ್ನು ತೀವ್ರವಾಗಿ ಖಂಡಿಸಿರುವ ಸಿಎಂ ಠಾಕೂರ್, 'ರಾತ್ರಿ ವೇಳೆ ಬಂದು ಧರ್ಮಶಾಲಾ ವಿಧಾನಸಭೆ ಕಾಂಪ್ಲೆಕ್ಸ್‌ನ ಗೇಟ್‌ಗೆ ಧ್ವಜ ಕಟ್ಟಿರುವ

ಖಲಿಸ್ತಾನ್ ಸಂಘಟನೆಯ ಹೇಡಿತನವನ್ನು ಖಂಡಿಸುತ್ತೇನೆ. ಆರೋಪಿಗಳನ್ನು ಶೀಘ್ರವೇ ಬಂಧಿಸಿ ಕಠಿಣ ಶಿಕ್ಷೆಗೆ ಒಳಪಡಿಸಲಾಗುವುದು. ಇಂಥ ಕೃತ್ಯಗಳನ್ನು ಸರ್ಕಾರ ಸಹಿಸುವುದಿಲ್ಲ. ಧೈರ್ಯವಿದ್ದರೆ ಹಗಲು ಹೊತ್ತಿನಲ್ಲಿ ಬಂದು ನಿಮ್ಮ ಸಾಮರ್ಥ್ಯ ಪ್ರದರ್ಶಿಸಿ' ಎಂದು ಸವಾಲು ಹಾಕಿದ್ದಾರೆ.

ಇದೇ ವೇಳೆ, 'ಇಲ್ಲಿ ಚಳಿಗಾಲದ ಅಧಿವೇಶನ ಮಾತ್ರ ನಡೆಯುವ ಕಾರಣ ರಾತ್ರಿಯ ಹೊತ್ತು ಹೆಚ್ಚಿನ ಭದ್ರತೆ ಒದಗಿಸಲಾಗಿಲ್ಲ. ಹೀಗಾಗಿ ಆರೋಪಿಗಳು ರಾತ್ರಿ ವೇಳೆ ಬಂದು ದುಷ್ಕೃತ್ಯ ಎಸಗಿರಬಹುದು' ಎಂದು ಹೇಳಿದ್ದಾರೆ.

**ವಜಾಕ್ಕೆ ಆಗ್ರಹ:** ಇದು ಭದ್ರತಾಲೋಪಕ್ಕೆ ಉದಾಹರಣೆ ಎಂದಿರುವ ಆಪ್, ರಾಷ್ಟ್ರೀಯ ಭದ್ರತೆಯನ್ನು ಕಾಪಾಡಲು ಬಿಜೆಪಿ ವಿಫಲವಾಗಿದೆ. ಹೀಗಾಗಿ ಘಟನೆಗೆ ಹೊಣೆ ಮಾಡಿ ಮುಖ್ಯಮಂತ್ರಿ ಠಾಕೂರ್‌ರನ್ನು ವಜಾ ಮಾಡಬೇಕು ಎಂದು ಆಗ್ರಹಿಸಿದೆ.

ಆಧಾರ: ಕನ್ನಡ ಪ್ರಭ, ದಿನಾಂಕ:09.05.2022.

## 7. ರಾಜ್ಯಪಾಲರ ಜೊತೆ ಡಿಎಂಕೆ ಡಿಶುಂ ಡಿಶುಂ

ರಾಜ್ಯಪಾಲರ ಹುದ್ದೆ ಬೇಕೆ ಬೇಡವೇ ಎಂಬ ಬಗ್ಗೆ ವಿಸ್ತೃತ ಚರ್ಚೆಗಳು ಆಗಿಂದಾಗ್ಗೆ ಸಾಮಾಜಿಕ–ರಾಜಕೀಯ ವಲಯಗಳಲ್ಲಿ ಆಗುತ್ತಲೇ ಇರುತ್ತದೆ. ಸಾಂವಿಧಾನಿಕವಾಗಿ ರಾಜ್ಯಪಾಲರ ಹುದ್ದೆಗೆ ಅಂತಹ ವಿಶೇಷ ಮಹತ್ವವೇನೂ ಇಲ್ಲ. ಅದೊಂದು ಬಗೆಯಲ್ಲಿ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಹ ಹುದ್ದೆ ಅಭಿಪ್ರಾಯ ಸಾಕಷ್ಟು ಮಂದಿಯಲ್ಲಿದೆ. ವಿಧಾನಸಭೆಯಲ್ಲಿ ಮಂಡನೆಯಾಗಿ ಅಂಗೀಕೃತವಾಗುವ ವಿಧೇಯಕಗಳಿಗೆ ಅಂಕಿತ ಹಾಕುವುದಷ್ಟೆ ಅವರ ಕೆಲಸ, ಆ ಹುದ್ದೆಗೆ ಇನ್ನೇನೂ ಮಹತ್ವವಿಲ್ಲ, ನಿರ್ಣಾಯಕ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಆ ಹುದ್ದೆಗಿಲ್ಲ. ಹಾಗಿದ್ದಾಗ ರಾಜ್ಯಪಾಲರ ಹುದ್ದೆ ಬೇಕೇ ಬೇಡವೇ ಎಂಬುದು ಬಹು ಚರ್ಚಿತ ವಿಚಾರ. ಇದೀಗ ತಮಿಳುನಾಡಿನ ಬೆಳವಣಿಗೆ ಈ ಚರ್ಚೆಯನ್ನು ಮತ್ತೆ ಮುನ್ನೆಲೆಗೆ ತಂದಿದೆ.

**ಏನಾಗಿದೆ ತಮಿಳುನಾಡಿನಲ್ಲಿ:** 2021ರಲ್ಲಿ ತಮಿಳುನಾಡಿನ ರಾಜ್ಯಪಾಲರಾಗಿ ನೇಮಕವಾಗಿರುವ ನಿವೃತ್ತ ಐಪಿಎಸ್ ಅಧಿಕಾರಿ ಆರ್.ಎನ್.ರವಿ ಬಗ್ಗೆ ರಾಜಕೀಯ ವಲಯದಲ್ಲಿ ಬಹಳಷ್ಟು ಚರ್ಚೆಗಳಾಗುತ್ತಿದೆ. ಡಿಎಂಕೆಯ ಸಹವರ್ತಿ ಪಕ್ಷವಾಗಿರುವ ವಿಡುತಲೈ ಚಿರುಗಳಕೈ ಕಚ್ಚಿಯ ಅಧ್ಯಕ್ಷ ತಿರುಮಾವಲನ್, ರಾಜ್ಯಪಾಲ ರವಿಯವರ ಇತಿಹಾಸವನ್ನು ಕೆದಕಿದ್ದಾರೆ. ಇತ್ತೀಚಿಗೆ ಎಪ್ರಿಲ್–25 ರಂದು ರಾಜ್ಯಪಾಲ ರವಿಯವರು ಉದಕಮಂಡಲದಲ್ಲಿ ನಡೆದ ನಾನಾ ವಿಶ್ವವಿದ್ಯಾಲಯಗಳ ಉಪಕುಲಪತಿಗಳ ಸಮಾವೇಶದಲ್ಲಿ ಭಾಗವಹಿಸಿದ್ದರು. ಅದೇ, ಸಂದರ್ಭದಲ್ಲಿ ಚೆನ್ನೈನಲ್ಲಿ ಮುಖ್ಯಮಂತ್ರಿ ಸ್ಟಾಲಿನ್ ರಾಜ್ಯಪಾಲರ ಅಧಿಕಾರ ಮೊಟಕುಗೊಳಿಸುವ ಎರಡು ವಿಧೇಯಕಗಳನ್ನು ವಿಧಾನಸಭೆಯಲ್ಲಿ ಮಂಡಿಸಿದ್ದರು. ತಮಿಳುನಾಡಿನ ನಾನಾ ಯುನಿವರ್ಸಿಟಿಗಳಿಗೆ ಉಪಕುಲಪತಿಗಳ ನೇಮಕಕ್ಕೆ ಸಂಬಂಧಪಟ್ಟ ತಿದ್ದುಪಡಿ ವಿಧೇಯಕ ಅದಾಗಿತ್ತು. ಜೊತೆಗೆ ನೀಟ್ ಪರೀಕ್ಷೆಯ ವಿರುದ್ಧ ತಮಿಳುನಾಡು ಸರ್ಕಾರ ತನ್ನದೆ ಆದ ನಿಲುವನ್ನೂ ತಳೆದಿತ್ತು.

**ಯಾಕೆ ಈ ವಿರೋಧ:** ವಿಶ್ವ ವಿದ್ಯಾಲಯವೊಂದರ ಉಪಕುಲಪತಿ ಹುದ್ದೆಗೆ ನೇಮಕ ಮಾಡುವ ಅಧಿಕಾರ ಒಂದು ಚುನಾಯಿತ ಸರ್ಕಾರ ಇಲ್ಲವೆಂದಾದರೆ ಅದು ಪ್ರಜಾಪ್ರಭುತ್ವ ವಿರೋಧಿ ನಿಲುವು ಎಂಬುದು ಮುಖ್ಯಮಂತ್ರಿ ಸ್ಟಾಲಿನ್ ಅವರ ಅಭಿಪ್ರಾಯ. ಉಪಕುಲಪತಿಗಳ ನೇಮಕ ಮಾಡುವಾಗ ರಾಜ್ಯ ಸರ್ಕಾರವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಇರುವುದು ಸರಿಯಾದ ಕ್ರಮವಲ್ಲ ಎಂಬುದು ಒಂದು ವಾದವಾದರೆ, ಈ ಹಿಂದೆ ರಾಜ್ಯಪಾಲರಾಗಿದ್ದ ಬನ್ವಾರಿಲಾಲ್ ಪುರೋಹಿತ್ ಅವರು ಸ್ಥಳೀಯ ಸಂಪ್ರದಾಯಗಳನ್ನು ಮುರಿದು ರಾಜ್ಯದಿಂದ ಹೊರಗಿನವರಿಗೆ ಮಣೆ ಹಾಕಿದ್ದು ಕೂಡ ಚರ್ಚೆಗೆ ಗ್ರಾಸವಾಗಿತ್ತು. ಕೇಂದ್ರ ಸರ್ಕಾರ ಮತ್ತು ಯುಜಿಸಿಗೆ ಉತ್ತರದಾಯಿಗಳಾದ ಈ ಉಪಕುಲಪತಿಗಳು ರಾಜ್ಯ ಸರ್ಕಾರವನ್ನು ಸಂಪೂರ್ಣವಾಗಿ ಕಡೆಗಣಿಸುವಂತಾಗಿತ್ತು ಎಂಬುದು ರಾಜಕೀಯ ವಿಶ್ಲೇಷಕ ಸತ್ಯಮೂರ್ತಿಯವರ ಅಭಿಪ್ರಾಯ. ಇದರಿಂದಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಕಂದಕ ಸೃಷ್ಟಿಯಾಗಿತ್ತು ಎಂಬುದು ಕೂಡ ಅಷ್ಟೇ ಸತ್ಯ.

**ಏನಿದು ಎ.ಎಂ.ಪುಂಚಿ ಆಯೋಗ:** ಕೇಂದ್ರ–ರಾಜ್ಯಗಳ ನಡುವಣ ಸಂಬಂಧದ ಕುರಿತಾಗಿ ಅಧ್ಯಯನ ನಡೆಸಲು 2007ರಲ್ಲಿ ಅಸ್ತಿತ್ವಕ್ಕೆ ಬಂದ ಮದನ್ ಮೋಹನ್ ಪುಂಚಿ ಆಯೋಗ ನೀಡಿರುವ ವರದಿಯ ಪ್ರಕಾರ ರಾಜ್ಯಪಾಲರಿಗೆ ಉಪಕುಲಪತಿಗಳ ಹುದ್ದಗೆ ನೇಮಕ ಅವಕಾಶ ನೀಡುವುದು ಸರಿಯಾದ ಕ್ರಮವಲ್ಲ. ಆಯೋಗದ ವರದಿಯನ್ನು ತಮಿಳುನಾಡು ಸೇರಿದಂತೆ 19 ರಾಜ್ಯಗಳು ಅನುಮೋದಿಸಿವೆ. 2017ರಲ್ಲಿ ಅಧಿಕಾರದಲ್ಲಿದ್ದ ಎಐಡಿಎಂಕೆ ಇದನ್ನು ತಾತ್ವಿಕವಾಗಿ ಅನುಮೋದಿಸಿದ್ದು, ನಂತರ ಬಂದ ಡಿಎಂಕೆ ಸರ್ಕಾರ ಕೂಡ ಇದನ್ನೇ ಪುನರುಚ್ಚರಿಸಿ ಕೇಂದ್ರಕ್ಕೆ ತನ್ನ ನಿಲುವನ್ನು ತಿಳಿಸಿದೆ. ಬೇರೆ ರಾಜ್ಯಗಳು ಕೂಡ ಅದನ್ನು ಅಳವಡಿಸಿಕೊಂಡಿವೆ. ಆಂಧ್ರ, ತೆಲಂಗಾಣ ಕರ್ನಾಟಕಗಳಲ್ಲಿ ಉಪಕುಲಪತಿಗಳ ಹುದ್ದಗೆ ನೇಮಕ ಮಾಡುವಾಗ ರಾಜ್ಯ ಸರ್ಕಾರಗಳ ಅಭಿಪ್ರಾಯವನ್ನು ಮತ್ತು ಸಮ್ಮತಿಯನ್ನು ಪಡೆಯುವ ಸಂಪ್ರದಾಯವಿದೆ.

**ಎಲ್ಲಿಂದ ವಿವಾದ ಆರಂಭ:** 1994ರಲ್ಲಿ ತಮಿಳುನಾಡಿನಲ್ಲಿ ಜಯಲಲಿತಾ ಸರ್ಕಾರವಿದ್ದಾಗ, ಆಗಿನ ರಾಜ್ಯಪಾಲ ಚೆನ್ನಾರೆಡ್ಡಿಯವರು ಉಪಕುಲಪತಿಗಳ ನೇಮಕಕ್ಕೆ ಸಂಬಂಧಪಟ್ಟಂತೆ ರಾಜ್ಯಸರ್ಕಾರದ ಅಭಿಪ್ರಾಯವನ್ನು ಬದಿಗೊತ್ತಿದ್ದರಲ್ಲದೇ ಅದನ್ನು ಪುರಸ್ಕರಿಸಿದರೆ ವಿಶ್ವವಿದ್ಯಾನಿಲಯಗಳ ಆಡಳಿತದಲ್ಲಿ ರಾಜಕೀಯ ಹಸ್ತಕ್ಷೇಪಕ್ಕೆ ದಾರಿ ಮಾಡಿಕೊಟ್ಟಂತಾಗುತ್ತದೆ ಎಂದು ಹೇಳಿದ್ದರು. ಉನ್ನತ ಮಟ್ಟದಲ್ಲಿ ಜಯಲಲಿತಾ ಮತ್ತು ಚೆನ್ನಾರೆಡ್ಡಿ ನಡುವೆ ಹೇಳಿಕೆ–ಪ್ರತಿ ಹೇಳಿಕೆಗಳ ಸಮರ ಆಗ ನಡೆದಿತ್ತು. ಇದಾಗಿ ಒಂದು ವರ್ಷದ ಬಳಿಕ ಅಂದರೆ 1995ರಲ್ಲಿ ಚೆನ್ನಾರೆಡ್ಡಿಯವರನ್ನು ವಾಪಸ್ಸು ಕರೆಸಿಕೊಂಡು ಹೊಸ ರಾಜ್ಯಪಾಲರ ನೇಮಕ ಮಾಡುವಂತೆ ತಮಿಳುನಾಡಿನಲ್ಲಿ ಅಭಿಯಾನ ಶುರುವಾಗಿತ್ತು. ತಮಿಳುನಾಡಿನ ವಿಧಾನಸಭೆಯಲ್ಲಿ ಅಂದಿನ ಹಣಕಾಸು ಸಚಿವ ನೆಡುಂಚೆಳಿಯನ್ ಗೊತ್ತುವಳಿಯನ್ನು ಮಂಡಿಸಿ ರಾಜ್ಯಪಾಲರ ಅಧಿಕಾರ ಮೊಟಕುಗೊಳಿಸುವ ವಿಚಾರದಲ್ಲಿ ಪ್ರಸ್ತಾವವನ್ನು ಸಭೆಯ ಮುಂದಿಟ್ಟಿದ್ದರು.

**ಸ್ಟಾಲಿನ್ ನಿಲುವೇನು**

ರಾಜ್ಯಪಾಲರ ಹುದ್ದೆ ಎಂದರೆ ಅದೊಂದು ತರಹ ಪೋಸ್ಟಮನ್ ಕೆಲಸವಿದ್ದಂತೆ. ವಿಧಾನಸಭೆಯಲ್ಲಿ ಅಂಗೀಕೃತವಾದುದ್ದನ್ನು ರಾಷ್ಟಪತಿಗಳಿಗೆ ಕಳುಹಿಸುವುದಷ್ಟೇ ಅವರ ಕೆಲಸ ಎಂಬಂತಿದೆ ಮುಖ್ಯಮಂತ್ರಿ ಸ್ಟಾಲಿನ್ ಅವರ ನಿಲುವು. ಆದರೆ ನೀಟ್ ಪರೀಕ್ಷೆಯ ಕುರಿತಾದ ರಾಜ್ಯ ಸರ್ಕಾರದ ನಿಲುವಿನ ವಿರುದ್ಧ ರಾಜ್ಯಪಾಲ ರವಿ ಸಡ್ಡು ಹೊಡೆ ಇದ್ದಾರೆ. ಇದೇ ಸಂದರ್ಭದಲ್ಲಿ ಡಿ.ಎಂ.ಕೆ ಸಂಸದರು ರಾಜ್ಯಪಾಲ ರವಿಯವರನ್ನು ವಾಪಾಸು ಕರೆಸಿಕೊಳ್ಳುವಂತೆ ಆಗ್ರಹಿಸಿ ಅಭಿಯಾನ ಪ್ರಾರಂಭಿಸಿದ್ದಾರೆ.

**ವಿರೋಧಕ್ಕೆ ಇತಿಹಾಸ:**

ಅಲ್ಲಿ ಕಾಂಗ್ರೆಸ್ಸೇತರ ಸರ್ಕಾರ ಮೊದಲ ಬಾರಿಗೆ ಅಧಿಕಾರಕ್ಕೆ ಬಂದಿದ್ದು 1967ರಲ್ಲಿ. ಆಗ ಕಾಂಗ್ರೆಸೇತರ ಮುಖ್ಯಮಂತ್ರಿಯಾಗಿ ಅಧಿಕಾರ ಗ್ರಹಣ ಮಾಡಿದ ಅಣ್ಣಾದೊರೈ ಅವರು ರಾಜ್ಯಪಾಲರ ಹುದ್ದೆಯ ಬಗ್ಗೆ ಕಟುವಿಮರ್ಶೆಯನ್ನೇ ಮಾಡಿದ್ದರು. ರಾಜ್ಯವೊಂದರ ರಾಜ್ಯಪಾಲರ ಹುದ್ದೆಯನ್ನು ಅವರು ಹೋತದ ಗಡ್ಡಕ್ಕೆ ಹೋಲಿಸಿದ್ದರು. ಹೋತಕ್ಕೆ ಗಡ್ಡ ಇದ್ದರೆಷ್ಟು ಬಿಟ್ಟರೆಷ್ಟು ಎನ್ನುವಂತಿತ್ತು ಅವರ ವಿಶ್ಲೇಷಣೆ. ಅದಿರಲಿ, ತಮಿಳುನಾಡಿನ ಇತಿಹಾಸದಲ್ಲಿ ಎರಡುಬಾರಿ ರಾಷ್ಟ್ರಪತಿ ಆಳ್ವಿಕೆ ಹೇರಿಕೆಯಾಗಿತ್ತು. ಅದು 1976 ಮತ್ತು 1991 ರಲ್ಲಿ ಎಂಬುದು ನೆನಪಿನಲ್ಲಿಡಬೇಕಾದ ಸಂಗತಿ.

**ಈಗೇನಾಗಿದೆ?**

ಇದೀಗ ನೀಟ್ ಪರೀಕ್ಷೆಯ ಕುರಿತಾಗಿ ಎದ್ದಿರುವ ಪ್ರತಿರೋಧ ತೀವ್ರವಾಗುತ್ತಿದ್ದು, ತಮಿಳುನಾಡಿನಲ್ಲಿ ಭಾಷೆಯ ವಿಚಾರವನ್ನು ಮುಂದಿಟ್ಟುಕೊಂಡು ಭಾವನಾತ್ಮಕವಾದ ಹೋರಾಟ ನಡೆಯುತ್ತಿದೆ. ಆಂಗ್ಲಮಾಧ್ಯಮದಿಂದಾಗಿ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ ಎಂಬುದು ಅಲ್ಲಿರುವ ಪ್ರಮುಖ ಅಂಶ. ರಾಜಕೀಯವಾಗಿ ಎದುರಾಗಿರುವ ಅಡೆತಡೆಗಳನ್ನು ನಿವಾರಿಸಿ ಮುನ್ನಡೆಯುವುದು ರಾಜ್ಯಪಾಲ ರವಿಯವರ ಮುಂದಿರುವ ಬಹುದೊಡ್ಡ ಸವಾಲು. ತಮಿಳುನಾಡು ಸರ್ಕಾರ ಮತ್ತು ಆ ರಾಜ್ಯದ ರಾಜ್ಯಪಾಲರ ಅಂಗಳದಲ್ಲಿ ಈಗಾಗಲೇ 52 ವಿಧೇಯಕಗಳು ಅಂಗೀಕಾರದ ಅಂಕಿತಕ್ಕೆ

ಕಾಯುತ್ತಿವೆ. ರಾಜ್ಯಪಾಲರು ರಾಜ್ಯ ಸರ್ಕಾರದ ಅಭಿಪ್ರಾಯಗಳಿಗೆ ಮನ್ನಣೆ ಕೊಡುತ್ತಿಲ್ಲ. ಮುಂದೇನಾಗುವುದೋ ಗೊತ್ತಿಲ್ಲ.

ಆಧಾರ: ಪ್ರಜಾವಾಣಿ, ದಿನಾಂಕ:10.05.2022.

## 8. Manik Saha replaces Biplab as Tripura CM

Tripura Chief Minister Biplab Kumar Deb stepped down from his post after meeting Bharatiya Janata Party (BJP) president J.P Nadda and Union Home Minister Amit Shah during a two-day trio to New Delhi.

His successor will be Manik Saha, the party's state unit chief and a lone Rajya Sabha member from Tripura. Dr. Saha was elected as the BJP Legislature Party leader soon after Mr.Deb submitted his resignation to Gov S.N. Arya. The state is slated to go as asembly election in 2023.

Senior BJP leaders Bhupendra Yadav and Vinod Tawde were present as observers at the meeting held at the Chief Minister's offcial residence, which witnessed a scuffle among MLAs after Minister Ram Prasad Paul registered his protest at Dr. Saha being proposed as Mr. Deb'successor.

Dr. Saha, along with Mr. Deb and BJP central leaders, went the the Raj Bhavan after the meeting to stake claim to form the next government. The wearing-in ceremony of the new Cabinet will take place at 11.30 a.m. on Sunday.

**Jharkhand effect:** Mr.Deb is the fifth Chief Minister to be replaced in a BJP-ruled State after B.S. Yediyurappa in Karnataka, Trivendra Singh Rawat and Tirath Singh Rawat in Uttarakhand, and Vijay Rupani in Gujarat. He was appointed Chief Minister after the BJP stormed to power in 2018, ending 25 years of Left Front-rule in the State.

According to senior party sources, the quick change in leadership in BJP-ruled States, especially with the Assembly elections round the cornor, shows the long shadow of the party's defeat in Jharkhand being cast on the continuation of Chief Ministers.

"Earlier, the high command was conservative in terms of changing Chief Ministers, but it cost the BJP the state of Jharkhand where internal strife did it in 2019," a senior party leader said.

The Tripura unit was also facing discord with Mr. Deb's growing unpopularity as Chief Minister. Two sitting MLAs, Sudip Roy Barman and Ashish Saha, quit the party in February and joined the Congress.

"Tripura is important in ideological terms as the BJP defeated the Left there, a first for it. This has been brewing for a while," the source said.

Sources in the State BJP unit said Mr. Deb would be given important organisational responsibilities and was expected to replace Dr. Saha as the State party chief.

"You will always see surprises in the BJP," the outgoing Chief Minister said when asked about his sudden removal.

**A former Congressman:** A dental surgeon by Profession, Dr.Saha comes from a renowned business family and was associated with the Tripura Cricket Association. He started his political career with the Congress some 15 years ago and joined the BJP ahead of the 2018 Assembly election.

Dr. Saha told reporters that he was"a common worker of the party and will continue to be so". He is expected to resign as the BJP State president by next week and will have to get elected to the Assembly within six months.

He is likely to contest from the Town Bardowali constituency in Agartala, sources said.

Courtesy: The Hindu, Dated:15.05.2022.

## 9. ದಿಲ್ಲಿ ಲೆ. ಗವರ್ನರ್ ರಾಜೀನಾಮೆ

ದಿಢೀರ್ ಬೆಳವಣಿಗೆಯೊಂದರಲ್ಲಿ ದಿಲ್ಲಿ ಲೆಫ್ಟಿನೆಂಟ್ ಗವರ್ನರ್ ಅನಿಲ್ ಬೈಜಾಲ್ ರವರು ರಾಜೀನಾಮೆ ನೀಡಿದ್ದು, ಹೊಸ ಬೆಳವಣಿಗೆಗಳಿಗೆ ಕಾರಣವಾಗಿದೆ. ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರಿಗೆ ಸಲ್ಲಿಸಿದ ರಾಜೀನಾಮೆ ಪತ್ರದಲ್ಲಿ ಅವರು "ವೈಯುಕ್ತಿಕ ಕಾರಣ," ನೀಡಿದ್ದಾರೆ. ನಿವೃತ್ತ ಐಎಎಸ್ ಅಧಿಕಾರಿಯಾದ ಬೈಜಾಲ್ ಅವರು ಇಂತಹದ್ದೇ ದಿಢೀರ್ ಬೆಳವಣಿಗೆಯಲ್ಲಿ 2016ರ ಡಿಸೆಂಬರ್‌ನಲ್ಲಿ ಅಧಿಕಾರ ವಹಿಸಿಕೊಂಡಿದ್ದರು. ಈ ಮೊದಲಿನ ಲೆ.ಗವರ್ನರ್ ನಜೀಬ್ ಜಂಗ್ ಕೂಡ ವೈಯುಕ್ತಿಕ ಕಾರಣ ನೀಡಿ ದಿಢೀರ್ ರಾಜೀನಾಮೆ ನೀಡಿದ್ದರು. ದಿಲ್ಲಿ ಮೇಲಿನ ಆಡಳಿತಾತ್ಮಕ ಅಧಿಕಾರದ ವ್ಯಾಪ್ತಿಗೆ ಸಂಬಂಧಿಸಿದಂತೆ ಆಮ್ ಆದ್ಮಿ ಪಕ್ಷ ಮತ್ತು ಕೇಂದ್ರದ ಬಿಜೆಪಿ ನಡುವೆ ತೀವ್ರ ಸಂಘರ್ಷ ನಡೆಯುತ್ತಲೇ ಬಂದಿತ್ತು. 2018 ರಲ್ಲಿ ಸುಪ್ರೀಂ ಕೋರ್ಟ್, ನಿರ್ದಿಷ್ಟ ಅಧಿಕಾರ ವ್ಯಾಪ್ತಿಯ ಗಡಿರೇಖೆ ಗುರುತಿಸಿದ ಬಳಿಕ ಒಂದು ಮಟ್ಟಿಗೆ ಸಂಘರ್ಷ ತಣ್ಣಗಾಗಿತ್ತು. ಆದರೆ, ಒಳಗೊಳಗೇ ಮೇಲುಗೈ ಸಾಧಿಸುವ ಮುಸುಕಿನ ಗುದ್ದಾಟ ಮುಂದುವರಿದಿದೆ. ಈ ನಡುವೆ ಲೆಫ್ಟಿನೆಂಟ್ ಗವರ್ನರ್ ಹುದ್ದೆ ನಿಭಾಯಿಸುವುದು ಜಂಗ್ ಪಾಲಿಗೆ ದೊಡ್ಡ ಸವಾಲಿನ ಕೆಲಸ ಎನ್ನಿಸಿತ್ತು.

ಆಧಾರ: ವಿಜಯ ಕರ್ನಾಟಕ, ದಿನಾಂಕ:19.05.2022.

## 10. Meghalaya govt. under fire after Assembly dome collapse

The Meghalaya government has been under fire for allegedly encouraging corruption and misuse of funds after the dome of the under-construction Assembly building colapsed on May 22.

The BJP, a constituent of the alliance government headed by the National People's Party (NPP), has been particularly severe on Chief Minster Conrad K.Sangama. It accused him of misusing the Central funds "provided by the BJP" for the benefit fo NPP leaders and contractors and setting an example of bad governance.

Bernard N. Marak, VicePresident of the State BJP unit, said Mr. Sangma should either let the CBI probe the collapse of the 70 tonne dome and other irregularities or quit.

"The BJP had anticipated good governance, all-round development and zero coruption when it lent support to the NPP . But the Chief Minister let the BJP and the people of the State down," he stated.

The congress and the Trinamool Congress also slammed Mr. Sangma for "Commission raj" resulting in shoddy work on several infrastructure projects. They cited the collapse of a few under-construction bridges linking strategic villages and the inter-State bus terminus (ISBT) that has been crumbling after the first showers in Meghalaya.

Near State capital Shillong, the ISBT was inaugurated a few months ago. But its ceiling has been leaking and its walls have cracked.

Courtesy: The Hindu, Dated:25.05.2022.

## 11. ಅನ್ನದಾತರ ಅಭಿವೃದ್ಧಿಗೆ ಸರ್ಕಾರದ ನೆರವು

ತೆಲಂಗಾಣ ರಾಷ್ಟ್ರ ಸಮಿತಿ ನಾಯಕ ಹಾಗೂ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ನೇತೃತ್ವದ ತೆಲಂಗಾಣ ರಾಜ್ಯ ಸರ್ಕಾರ ಹಲವು ಜನೋಪಯೋಗಿ–ಜನಕಲ್ಯಾಣ ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ಇಡೀ ದೇಶದ ಗಮನ ಸೆಳೆದಿದೆ. ಹತ್ತು ಹಲವು ಯೋಜನೆಗಳ ಅನುಷ್ಠಾನದಲ್ಲಿ ಭಾರತದಲ್ಲೇ ನಂಬರ ಒನ್ ಸ್ಥಾನಗಳಿಸಿಕೊಂಡು ತನ್ನ ಹಿರಿಮೆಯನ್ನು ಹೆಚ್ಚಿಸಿಕೊಂಡಿದೆ. ರೈತ ಬಂಧು ಎನ್ನುವ ಯೋಜನೆ ಮೂಲಕ ಕೃಷಿ ಕ್ಷೇತ್ರದಲ್ಲಿ ಬಂಡವಾಳ ಹೂಡಿ ಅನ್ನದಾತರ ಅಭಿವೃದ್ಧಿಗೆ ಸರ್ಕಾರ ನೆರವಾಗಿದೆ. ರೈತ ಭೀಮಾ ಎಂಬ ಕೃಷಿಕ–ಸ್ನೇಹಿ ವಿಮಾಯೋಜನೆಯನ್ನು ಸರ್ಕಾರ ಜಾರಿ ಮಾಡಿದೆ.

**ಜಲ ತೆರಿಗೆ ರದ್ದು:** ಜೀವಜಲ ನೀರಿಗೆ ವಿಧಿಸುವ ಸೆಸ್ ಅನ್ನು ರದ್ದು ಮಾಡುವ ಮೂಲಕ ತೆಲಂಗಾಣ ಸರ್ಕಾರ ಜನಪರ ನೀತಿಯನ್ನು ಮೆರೆದಿದೆ.

**ರೈತ–ಪರ ಕಾಳಜಿ:** ಉಚಿತ ವಿದ್ಯುತ್ ಸಹಿತ ಹಲವು ಯೋಜನೆಗಳ ಮೂಲಕ ಕೆಸಿಆರ್ ಸರ್ಕಾರ ರೈತ–ಪರ ಕಾಳಜಿಯನ್ನು ಮೆರೆದಿದೆ. ಕೆಳಗಿನ ಕಾರ್ಯಕ್ರಮಗಳು ಅವುಗಳಲ್ಲಿ ಕೆಲವು ಪ್ರಮುಖ ಯೋಜನೆಗಳಾಗಿವೆ.

- ರೈತ ಬಂಧುತ್ವ ಸಮಿತಿಗಳ ರಚನೆ.
- ಬೆಳೆಗಳ ಆನ್‌ಲೈನ್ ಆಡಿಟ್ ಪದ್ದತಿ ಜಾರಿ.
- ರೈತರ ಪಂಪ್ ಸೆಟ್‌ಗಳಿಗೆ ದಿನದ 24 ತಾಸೂ ಉಚಿತ ವಿದ್ಯುತ್ ಪೂರೈಕೆ.
- ಕೃಷಿ ಮಾರುಕಟ್ಟೆ ಸಮಿತಿಗಳಲ್ಲಿ ಮಹಿಳೆಯರಿಗೆ ಮೀಸಲಾತಿ.
- ಪ್ರತಿ 5,000 ಎಕರೆ ಪ್ರದೇಶ ಒಂದು ಕ್ಲಸ್ಟರ್ ಎಂದು ವರ್ಗೀಕರಣ. ಅವುಗಳಿಗೆ ಕೃಷಿ ವಿಸ್ತರಣಾಧಿಕರಗಳ ನೇಮಕ.
- ರೈತ ವೇದಿಕೆಗಳ ನಿರ್ಮಾಣ.
- ಭೂ ದಾಖಲೆಗಳನ್ನು ಸಮಗ್ರವಾಗಿ ಸ್ವಚ್ಛಗೊಳಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ.
- ಪತ್ರಕರ್ತರು, ಗೃಹ ರಕ್ಷಕರು, ನಿರ್ಮಾಣ ಕಾರ್ಮಿಕರು ಮತ್ತು ಚಾಲಕರಿಗೆ ಐದು ಲಕ್ಷ ರೂಪಾಯಿಗಳ ಅಪಘಾತ ವಿಮೆ ಒದಗಿಸುವ ಮೂಲಕ ಈ ವಿಭಾಗಗಳ ಕುಟುಂಬಗಳಿಗೆ ಭದ್ರತೆ.
- ಕಲ್ಯಾಣ ಲಕ್ಷ್ಮಿ/ಶಾದಿ ಮುಬಾರಕ್‌ಗೆ ನೆರವು.

- ಶುದ್ಧ ಕುಡಿಯುವ ನೀರು.
- ಮಿಷನ್ ಭಗೀರಥ ಮೂಲಕ ಪ್ರತಿ ಮನೆಗೆ ಶುದ್ಧ ಕುಡಿಯುವ ನೀರನ್ನು ಪೂರೈಸುವ ಯೋಜನೆ.
- ವಿಧಾನ ಸಭಾ ಕ್ಷೇತ್ರಗಳಲ್ಲಿ ಶಾಸಕರ ಕಚೇರಿಗಳ ನಿರ್ಮಾಣ.
- ಒಂಟಿ ಮಹಿಳೆಯರಿಗೆ ಭತ್ಯೆ ನೀಡುವ ಮೂಲಕ ಅವರ ಜೀವನಕ್ಕೆ ಭದ್ರತೆ.
- ಬೀಡಿ ಕಾರ್ಮಿಕರಿಗೆ ಭತ್ಯೆ ನೀಡಿಕೆ.
- ಸಂತ್ರಸ್ತರಿಗೆ ಬೋಧನಾ ಭತ್ಯೆ.
- ಇಮಾಮ್ ಮತ್ತು ಮೌಜಮ್‌ಗಳಿಗೆ ಭತ್ಯೆ ನೀಡುವ ಮೂಲಕ ಸಹಾಯ.
- ಕಲಾವಿದರಿಗೆ ಗೌರವ.
- ಕಲಾವಿದರಿಗೆ ಸರ್ಕಾರಿ ಉದ್ಯೋಗ ಒದಗಿಸುವ ಮೂಲಕ ಸಾಂಸ್ಕೃತಿಕ ಕ್ಷೇತ್ರದ ರಾಯಭಾರಿಗಳ ಜೀವನಕ್ಕೆ ಭದ್ರತೆ.
- ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಅಕ್ಕಿ ನೀಡಿಕೆ.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ವಿಶೇಷ ಪ್ರಗತಿ ನಿಧಿ.
- ಅಲೆಮಾರಿಗಳಿಗಾಗಿ ಪಶು ಕ್ಲಿನಿಕ್‌ಗಳು.
- ಆಟೋಗಳು ಮತ್ತು ಕೃಷಿ ಟ್ರ್ಯಾಕ್ಟರ್‌ಗಳ ಮೇಲೆ ಸಾರಿಗೆ ತೆರಿಗೆ ರದ್ದತಿ.
- ಟ್ರಾಫಿಕ್ ಪೊಲೀಸರಿಗೆ ಶೇಕಡ 30 ಮಾಲಿನ್ಯ ಭತ್ಯೆ ನೀಡಿಕೆ.
- ಭದ್ರತಾ ವಿಭಾಗದ ಪೊಲೀಸರಿಗೆ ಶೇಕಡ 30 ರಿಸ್ಕ್ ಭತ್ಯೆ.

ಆಧಾರ: ವಿಜಯ ವಾಣಿ, ದಿನಾಂಕ:27.05.2022.

## 12. BJP suspends Rajasthan MLA for cross-voting in RS polls

The BJP suspended its Rajasthan MLA Shobharani Kushwah for cross-voting in favour of Congress candidate Pramod Tiwari in the Rajya Sabha elections to four seats from the State. Ms.Kushwah sprang a surprise by her act, which she said was guided by her “voice of conscience”.

The BJP’s central disciplinary committee issued notice to M.Kushwah, elected from the Dhoplur constituency in the 2018 Assembly election asking her to show cause why she should not be expelled from the party’s primary membership. Ms.Kushwah was told that she had been suspended from the BJP’s membership as well as all other responsibilities until an inquiry was completed.

The show-cause notice, signed by central disciplinary committee’s member secretary Om Pathak, stated that Ms.Kushwah displayed “gross indiscipline” by defying the party whip and violated Rule 10-B of Article 25 of the BJP’s constitution and rules. The MLA was given seven days time to explain her conduct.

The BJP had fielded former Minister Ghanshyam Tiwari as its official candidate in the Rajya Sabha polls and extended support to media baron Subhash Chandra, who contested as an Independent. Leader of the Opposition Gulab Chand Kataria and BJP state president Satish Poonia recommended action against Ms.Kushwah after she cross-voted.

**Rumoured motive**: A second time MLA, Ms. Kushwah is wife of farmerr Bhajan Samaj Party MLA, B.L.Kushwah, who is serving life imprisonment following his conviction in 2016 in a case of murder of a student leader.

Ms. Kushwah's cross-voting was being linked in political circles in Jaipur to her husband's imprisonment, even as she said after the polling that it was her own decision. After Ms. Kushwah's disqualification from the membership of the Assembly, the BJP had fielded Ms. Kushwah's as its candidate in the by-election from Dholpur in early 2017, which she won.

She was again fielded by the BJP from the same seat in the 2018 Assembly election and she went on win to once again.

Courtesy: The Hindu, Dated: 12.06.2022

## 13. Bengal assembly passes bill removing guv as chancellor of varsities

Bengal assembly passed the West Bengal University Laws (Amendment) Bill 2022, removing the governor from the chancellorship of state universities and replacing him with the chief minister.

A total of 167 MLAs voted in favour of the bill and 55 against it. |Earlier, the Bengal cabinet had unanimously passed a resolution on May 26 to make the CM the chancellor of the 31state-run universities.

While introducing the bill, state education minister Bratya Basu referred to the Punchhi Commission report, which recommentded that the governor should not be burdened with positions and poweres not envisaged under the Indian Constitution. "Making the governor chancellor of universities and conferring owers on him may have had some relevance in the past. But it has ceased to be so with changed circumstances," Basu said.

"I would like to remind those, who interpret this as greater political influence in academics, that PM Narendra Modi is the chancelor of Visva-Bharati, which is now hitting the headlines for all the wrong reasons. Let the PM set an example by resigning from the Visva-Bharati chancellor's post; we will then think of reconsidering this bill," he added.

Gujarat, Maharashtra, and Tamil Nadu had passed similar bills much before Bengal, Basu said. It was under the Modi government that Gujarat stripped the governor of all powers to decide about vice-chancellors of state-run universities, he said." I have sent as may as 16 files to the governor. But he did not sign even one These involved urgent and imortant issues like extension of a VC's tenure. If three

names were sent to him for a VC's nomination, he would suggest a fourth," Basu added.

Opposition leader suvendu Adhikari suggested the bill would meet the same fate as the prosposals to rename Bengal and set up an upper house in the Bengal assembly. "The governor will send it to the Centre. It (education) is on the convurrent list. It will meet the same fate," he claimed. Rules say the governor can send a bill back to the assembly once but must sign it if the assembly sends the same bill to him again. But he can also, as Adhikari suggested, send it to the President.

Courtesy: Times of India, Dated:14.06.2022.

## 14. ಮಹಾಮೈತ್ರಿಗೆ ಶಿಂಧೆ ಮಹಾಘಾತ

ಮಹಾರಾಷ್ಟ್ರದಲ್ಲಿ ಶಿವಸೇನೆ–ಎನ್‌ಸಿಪಿ–ಕಾಂಗ್ರೆಸ್ ಹಾಗೂ ಸಣ್ಣಪುಟ್ಟ ಪಕ್ಷಗಳನ್ನೊಳಗೊಂಡ ಮಹಾ ವಿಕಾಸ್ ಅಘಾಡಿ ಸರ್ಕಾರದ ಬುಡ ಅಲುಗಾಡಲು ಶುರುವಾಗಿದೆ. ಹಿರಿಯ ಸಚಿವ, ಶಿವಸೇನೆ ಪ್ರಭಾವಿ ನಾಯಕ ಏಕನಾಥ್ ಶಿಂಧೆ ಸಿ.ಎಂ.ಉದ್ಧವ್ ಠಾಕ್ರೆ ವಿರುದ್ಧವೇ ಬಂಡಾಯದ ಬಾವುಟ ಬೀಸಿದ್ದು, ಮೈತ್ರಿ ಸರ್ಕಾರದ ಬೇರನ್ನೇ ಕಿತ್ತೊಗೆಯಲು ತಂತ್ರ ಹೂಡಿದ್ದಾರೆ. 22 ಶಾಸಕರ ಬೆಂಬಲದೊಂದಿಗೆ ಗುಜರಾತ್‌ನ ಸೂರತ್‌ನಲ್ಲಿರುವ ರೆಸಾರ್ಟ್‌ವೊಂದಕ್ಕೆ ತೆರಳಿ, ಬಿಜೆಪಿ ಜೊತೆ ಕೈಜೋಡಿಸಿ ಸರ್ಕಾರ ರಚನೆಗೆ ಯತ್ನಿಸಿದ್ದಾರೆ.

ಈಚಿನ ರಾಜ್ಯಸಭೆ ಚುನಾವಣೆ ಹಾಗೂ ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿ ನಿರೀಕ್ಷೆಗೂ ಮೀರಿ ಫಲಿತಾಂಶಗಳಿಸಲು ಸಾಧ್ಯವಾಗಿರುವುದು ಶಿವಸೇನೆ ಶಾಸಕರ ಪರೋಕ್ಷ ನೆರವಿನಿಂದಲೇ ಪಕ್ಷದಲ್ಲಿ ಠಾಕ್ರೆ ಏಕಚಕ್ರಾಧಿಪತ್ಯಕ್ಕೆ ಅಂತ್ಯ ಹಾಡಲೆಂದೇ ಶಿಂಧೆ ಬಂಡಾಯ ಸಾರಿ, ಸರ್ಕಾರವನ್ನು ಅನಿಶ್ಚಿತತೆಯ ಅಡಕತ್ತರಿಯಲ್ಲಿ ಸಿಲುಕಿಸಿದ್ದಾರೆ.

ಸದ್ಯ 22 ಶಾಸಕರು ಶಿಂಧೆ ಬೆಂಬಲಕ್ಕಿದ್ದಾರೆ. ಆದರೆ, ಮೂರನೇ ಎರಡರಷ್ಟು ಶಾಸಕರ ಬೆಂಬಲವಿದ್ದಾಗ (55ರಲ್ಲಿ 36) ಮಾತ್ರ ಶಿವಸೇನೆಯನ್ನು ಇಬ್ಭಾಗ ಮಾಡಿ ತಮ್ಮದೇ ಗುಂಪೊಂದನ್ನು ಅಧಿಕೃತವಾಗಿ ರಚನೆ ಮಾಡಿಕೊಳ್ಳಬಹುದು. ಆದರೆ, ಸದ್ಯಕ್ಕೆ ಅಂಥದ್ದೊಂದು ಸನ್ನಿವೇಶ ಕಾಣುತ್ತಿಲ್ಲ. ಹೀಗಾಗಿ, ಮುಂದಿನ ದಿನಗಳಲ್ಲಿನ ಬೆಳವಣಿಗೆಗಳು ಪಕ್ಷದ ಭವಿಷ್ಯವನ್ನು ನಿರ್ಧರಿಸಲಿವೆ.

**ಫಡ್ನವೀಸ್ ಜೊತೆ ಶಿಂಧೆ ಸಂಪರ್ಕ**: ಬಿಜೆಪಿ ನಾಯಕ, ಮಾಜಿ ಸಿ.ಎಂ.ದೇವೇಂದ್ರ ಫಡ್ನವಿಸ್ ಜೊತೆ ನಿರಂತರ ಸಂಪರ್ಕದಲ್ಲಿದ್ದ ಏಕನಾಥ್ ಶಿಂಧೆ, ವಿಧಾನ ಪರಿಷತ್ ಚುನಾವಣೆಯಲ್ಲಿ ಮೂವರು ಶಿವಸೇನೆ ಶಾಸಕರು ಬಿಜೆಪಿ ಪರ ಅಡ್ಡ ಮತದಾನ ಮಾಡಿದ ಬೆನ್ನಲ್ಲೇ ಬೆಂಬಲಿಗ ಶಾಸಕರನ್ನು ಕಟ್ಟಿಕೊಂಡು ಗುಜರಾತ್‌ಗೆ ಹಾರಿದ್ದಾರೆ. ಇವರಿಗೆ ಮಹಾರಾಷ್ಟ್ರ ಮತ್ತು ಗುಜರಾತ್ ಬಿಜೆಪಿ ನಾಯಕರು ಬೆಂಗಾವಲಾಗಿ ಕೆಲಸ ಮಾಡುತ್ತಿದ್ದಾರೆ. ಏತನ್ಮಧ್ಯೆ, ದೇವೇಂದ್ರ ಫಡ್ನವೀಸ್ ದೆಹಲಿಯಲ್ಲಿದ್ದು, ಗೃಹ ಸಚಿವ ಅಮಿತ್ ಶಾ ಜೊತೆಗೆ ಸರ್ಕಾರ ರಚನೆ ಸಾಧ್ಯ ಸಾಧ್ಯತೆಗಳ ಬಗ್ಗೆ ವಿಸ್ತೃತ ಚರ್ಚೆ ನಡೆಸಲಿದ್ದಾರೆ.

| **ಪಕ್ಷಗಳ ಬಲಾಬಲ** | |
|---|---|
| ಶಿವಸೇನೆ | 55 |
| ಎನ್‌ಸಿಪಿ | 53 |
| ಕಾಂಗ್ರೆಸ್ | 44 |
| ಬಿಜೆಪಿ | 106 |
| ಸಣ್ಣಪಕ್ಷಗಳು | 16 |
| ಪಕ್ಷೇತರರು | 13 |

**ಶಿಂಧೆ ಆಕ್ರೋಶಕ್ಕೆ ಕಾರಣ:**

- ರಾಜ್ಯದಲ್ಲಿ ಮೈತ್ರಿ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದಲೂ ಸಿ.ಎಂ. ಠಾಕ್ರೆ ಪುತ್ರ ಅದಿತ್ಯ ಠಾಕ್ರೆ ಹಾಗೂ ಆಪ್ತ ಸಂಜಯ್ ರಾವತ್‌ಗೆ ಇನ್ನಿಲ್ಲದ ಮಹತ್ವ ನೀಡುತ್ತಿರುವುದು.
- ಇಲಾಖೆ ನಿರ್ವಹಣೆಯಲ್ಲಿ ಸಿ.ಎಂ.ಉದ್ಧವ್ ಠಾಕ್ರೆ ಪೂರ್ಣ ಅಧಿಕಾರ ನೀಡಿಲ್ಲ. ಇಲಾಖೆ ವ್ಯವಹಾರಗಳಲ್ಲಿ ಸಂಪುಟದ ಮತ್ತಿಬ್ಬರು ಸಹೋದ್ಯೋಗಿಗಳಿಂದ ಪದೇಪದೇ ಹಸ್ತಕ್ಷೇಪ.
- ಮುಖ್ಯಮಂತ್ರಿಗೆ ಸಂಬಂಧಿಸಿದ ಫೈಲ್‌ಗಳಿಗೆ ಪೂರ್ವಾನುಮತಿಯಿಲ್ಲದೆ ಸಹಿ ಹಾಕದಿರಲು ಇಲಾಖೆಯ ಉನ್ನತಾಧಿಕಾರಿಗಳಿಗೆ ಸೂಚನೆ.
- ವಿಧಾನಪರಿಷತ್ ಚುನಾವಣೆ ನಿರ್ವಹಣೆಯಲ್ಲೂ ಕಡೆಗಣನೆ.

**ಯಾರು ಈ ಏಕನಾಥ್ ಶಿಂಧೆ**: ಮೈತ್ರಿ ಸರ್ಕಾರದಲ್ಲಿ ನಗರಾಭಿವೃದ್ಧಿ ಮತ್ತು ಸಾರ್ವಜನಿಕ ಕಾರ್ಯ (ಸಾರ್ವಜನಿಕ ಉದ್ಯಮಗಳು) ಕ್ಯಾಬಿನೆಟ್ ಮಂತ್ರಿಯಾದ ಏಕನಾಥ್ ಶಿಂಧೆ, 2004 ರಿಂದ ಸತತ ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಪ್ರಸ್ತುತ ಥಾಣೆಯ ಕೊಪ್ರಿ–ಪಚ್ಚಖಾಡಿ ವಿಧಾನಸಭಾ ಕ್ಷೇತ್ರ ಪ್ರತಿನಿಧಿಸುತ್ತಿದ್ದಾರೆ. ಮರಾಠ ಸಮುದಾಯಕ್ಕೆ ಸೇರಿದ ಶಿಂಧೆ, ದಿವಂಗತ ಭಾಳಾ ಠಾಕ್ರೆಗೆ ನಿಷ್ಠರು, ಶಿಂಧೆ ಸಹೋದರ ಪ್ರಕಾಶ್ ಶಿಂಧೆ ಕೌನ್ಸಿಲರ್ ಮತ್ತು ಪುತ್ರ ಶ್ರೀಕಾಂತ್ ಶಿಂಧೆ ಸಂಸದ ಆಗಿದ್ದಾರೆ.

**ಬಲಾಬಲದ ಲೆಕ್ಕಾಚಾರ:**

- 288 ಸದಸ್ಯ ಬಲದ ವಿಧಾನಸಭೆಯಲ್ಲಿ ಇಬ್ಬರು ಶಾಸಕರು ಜೈಲಿನಲ್ಲಿದ್ದಾರೆ. ಓರ್ವ ಶಾಸಕ ನಿಧನರಾಗಿದ್ದಾರೆ. ಹೀಗಾಗಿ, 285 ಶಾಸಕರಿದ್ದು, ಬಹುಮತಕ್ಕೆ 142 ಶಾಸಕರ ಬೆಂಬಲ ಅಗತ್ಯ.
- ಶಿವಸೇನೆ 55 ಶಾಸಕರ ಪೈಕಿ ಸೂರತ್ ರೆಸಾರ್ಟ್‌ನಲ್ಲಿ 21 ಶಿವಸೇನೆ ಶಾಸಕರು ಮತ್ತು ಓರ್ವ ಪಕ್ಷೇತರ ಶಾಸಕರಿದ್ದಾರೆ. ಮೈತ್ರಿ ಸರ್ಕಾರದ ಶಾಸಕರ ಬಲ 131ಕ್ಕೆ ತಗ್ಗಲಿದೆ.
- 22 ಶಾಸಕರ ರಾಜೀನಾಮೆ ನೀಡಿದರೆ ಬಹುಮತಕ್ಕೆ 133 ಶಾಸಕರ ಬೆಂಬಲ ಅಗತ್ಯವಾಗಲಿದೆ.
- ಬಿಜೆಪಿ ರಾಜ್ಯಾಧ್ಯಕ್ಷರು ತಮಗೆ 135 ಶಾಸಕರ ಬೆಂಬಲವಿದೆ ಎಂದು ಘೋಷಿಸಿದ್ದಾರೆ.
- ರಾಜ್ಯದಲ್ಲಿ 13 ಪಕ್ಷೇತರ ಶಾಸಕರಿದ್ದು, 6 ಮಂದಿ ಬಿಜೆಪಿ ಬೆಂಬಲಿಸುತ್ತಾರೆ. 5 ಮಂದಿ ಶಿವಸೇನೆ ಬೆಂಬಲಿಸಿದ್ದರೆ, ಇಬ್ಬರು ಕಾಂಗ್ರೆಸ್ ಮತ್ತು ಎನ್‌ಸಿಪಿಯನ್ನು ಕ್ರಮವಾಗಿ ಬೆಂಬಲಿಸಿದ್ದಾರೆ.

**ಮನವೊಲಿಕೆಗೆ ಸಿ.ಎಂ.ಉದ್ಧವ್ ಠಾಕ್ರೆ ಪ್ರಯತ್ನ**: ಏಕನಾಥ್ ಶಿಂಧೆ ಅವರನ್ನು ರೆಸಾರ್ಟ್‌ನಲ್ಲಿ ಭೇಟಿಯಾದ ಶಿವಸೇನೆ ನಾಯಕರಾದ ಮಿಲಿಂದ್ ನಾವೇಕರ್ ಮತ್ತು ರವೀಂದ್ರ ಪಾಠಕ್ ಮನವೊಲಿಸುವ ಯತ್ನ ಮಾಡಿದ್ದಾರೆ. ಈ ವೇಳೆ ಉದ್ಧವ್ ಠಾಕ್ರೆ ಜೊತೆಗೆ ದೂರವಾಣಿಯಲ್ಲಿ ಮಾತನಾಡಿರುವ ಶಿಂಧೆ, ಸುಮಾರು 15 ರಿಂದ 20 ನಿಮಿಷಗಳ ಕಾಲ ಮಾತುಕತೆ ನಡೆಸಿದ್ದಾರೆ. ಶಿವಸೇನೆಯು ಮಹಾಮೈತ್ರಿಯಿಂದ ಹೊರಬಂದು ಮತ್ತೆ ಎನ್‌ಡಿಎ ಸೇರಬೇಕು ಎಂದು ಸ್ಪಷ್ಟ ನುಡಿಗಳಲ್ಲಿ ತಿಳಿಸಿದ್ದಾರೆ. ಹಿಂದುತ್ವವನ್ನು ಎತ್ತಿಹಿಡಿಯುವುದೇ ನನ್ನೊಂದಿಗಿರುವ ಶಾಸಕರ ಪ್ರಾಥಮಿಕ ಆದ್ಯತೆ. ಕಾಂಗ್ರೆಸ್ ಮತ್ತು ಎನ್‌ಸಿಪಿ ನಾಯಕರಿಂದ ನಮ್ಮ ಶಾಸಕರು ತೀವ್ರ ಕಡೆಗಣನೆಗೆ ಒಳಗಾಗಿದ್ದಾರೆ ಎಂದು ಶಿಂಧೆ ಸ್ಪಷ್ಟವಾಗಿ ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿರುವ ಠಾಕ್ರೆ ಈ ಬಗ್ಗೆ ಚರ್ಚಿಸೋಣ. ಮೊದಲು ಮುಂಬೈಗೆ ಹಿಂತಿರುಗುವಂತೆ ಹೇಳಿದರು. ಆದರೆ, ಶಿಂಧೆ ನಿಲುವಿನಲ್ಲಿ ದೃಢವಾಗಿದ್ದಾರೆ. ಎನ್‌ಡಿಎ ಮೈತ್ರಿಕೂಟ ಸೇರುವ ಬಗ್ಗೆ ತೀರ್ಮಾನ ಮಾಡಿ ಎಂದು ಷರತ್ತು ಹಾಕಿದ್ದಾರೆನ್ನಲಾಗಿದೆ. ಶಿವಸೇನೆ ನಾಯಕರು ಮೊದಲಿನಿಂದಲೂ ಕಟ್ಟರ್ ಹಿಂದುತ್ವ ಸಿದ್ಧಾಂತ ಪಾಲಿಸುತ್ತಿದ್ದು, ಮಹಾಮೈತ್ರಿ ಸರ್ಕಾರದೊಂದಿಗೆ ಮತ್ತಷ್ಟು ದಿನ ಮುಂದುವರಿದಲ್ಲಿ ಮುಂಬರುವ ಚುನಾವಣೆಯಲ್ಲಿ ಗೆಲ್ಲುವುದು ಅಸಾಧ್ಯ ಎಂಬ ಭಾವನೆ ಬಂದಿದೆ.

ಹೀಗಾಗಿ ಬಿಜೆಪಿ ಜೊತೆ ಮೈತ್ರಿ ಮಾಡಿಕೊಳ್ಳುವುದು ಭವಿಷ್ಯದ ದೃಷ್ಟಿಯಿಂದಲೂ ಅನುಕೂಲ ಎಂದೇ ಎನ್‌ಡಿಎ ಸೇರುವ ಉದ್ದೇಶ ಪ್ರಕಟಿಸಿದ್ದಾರೆ.

ಆಧಾರ:ವಿಜಯವಾಣಿ, ದಿನಾಂಕ:22.06.2022

## 15. 'ಅಘಾಡಿ' ಸರ್ಕಾರ ಅತಂತ್ರ

ಮಹಾರಾಷ್ಟ್ರದ ಮಹಾ ವಿಕಾಸ ಅಘಾಡಿ (ಎಂವಿಎ) ಸರ್ಕಾರದ ಭವಿಷ್ಯ ಇನ್ನೂ ಅತಂತ್ರವಾಗಿಯೇ ಇದೆ. ಅಘಾಡಿ ಸರ್ಕಾರವನ್ನು ಉರುಳಿಸುತ್ತೇವೆ ಎಂದು ಶಿವಸೇನಾ ಭಿನ್ನಮತೀಯ ಶಾಸಕ ಏಕನಾಥ ಶಿಂಧೆ ಅವರು ಹೇಳಿದ್ದಾರೆ.

ಪಕ್ಷದ ಶಾಸಕರು ಬಯಸಿದರೆ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ ಎಂದು ಉದ್ಧವ್ ಠಾಕ್ರೆ ಅವರು ಪ್ರತಿಕ್ರಿಯಿಸಿದ್ದಾರೆ. ಜೊತೆಗೆ ಶಿವಸೇನಾ ಶಾಸಕರೇ ಮುಖ್ಯಮಂತ್ರಿಯಾಗಬೇಕು ಎಂದು ಅವರು ಷರತ್ತು ಹಾಕಿದ್ದಾರೆ.

ಆದರೆ, ಉದ್ಧವ್ ಅವರು ರಾಜೀನಾಮೆ ನೀಡದೆ ಇದ್ದರೂ ಮುಖ್ಯಮಂತ್ರಿಗಳ ಅಧಿಕೃತ ನಿವಾಸವನ್ನು ತೆರೆದು ತಮ್ಮ ನಿವಾಸ 'ಮಾತೋಶ್ರೀ' ಹೋಗಿದ್ದಾರೆ. ಠಾಕ್ರೆ ಅವರ ಹೇಳಿಕೆಗೆ ಪ್ರತಿಕ್ರಿಯೆ ನೀಡಿರುವ ಶಿಂಧೆ ಶಿವಸೇನಾ ಉಳಿಯಬೇಕು ಎಂದಿದ್ದರು. ಎನ್‌ಸಿಪಿ ಮತ್ತು ಕಾಂಗ್ರೆಸ್ ಜೊತೆಗಿನ ಅಸಹಜ ಮೈತ್ರಿಯನ್ನು ತೊರೆಯಿರಿ ಎಂದು ಪಟ್ಟು ಹಿಡಿದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಶಿಂಧೆ ಅವರ ಜೊತೆಗೆ ಬಿಜೆಪಿಯ ಹಿರಿಯ ನಾಯಕರು ಸಂಪರ್ಕದಲ್ಲಿ ಇದ್ದಾರೆ. ಶಿವಸೇನಾ ಭಿನ್ನಮತೀಯ ಶಾಸಕರ ಏಕನಾಥ್ ಶಿಂಧೆ ಅವರಿಗೇ ಮುಖ್ಯಮಂತ್ರಿ ಸ್ಥಾನ ನೀಡುವ ಪ್ರಸ್ತಾಪವನ್ನು ಎನ್‌ಸಿಪಿ ಮತ್ತು ಕಾಂಗ್ರೆಸ್ ಇರಿಸಿವೆ ಎಂದು ಮೂಲಗಳು ಹೇಳಿವೆ. ಆದರೆ, ಇದನ್ನು ಶಿಂಧೆ ನಿರಾಕರಿಸಿದ್ದಾರೆ.

ಸೈದ್ಧಾಂತಿಕ ವಿರೋಧಿಗಳ ಜೊತೆಗೆ ಅಸಹಜ ಮೈತ್ರಿ ಸಾಧ್ಯ ಇಲ್ಲ ಎಂದು ಅವರ ಪ್ರಶ್ನೆಗೆ ಉತ್ತರಿಸಿದ್ದಾರೆ. ಇಂತಹ ಯಾವುದೇ ಪ್ರಸ್ತಾಪ ಬಂದಿಲ್ಲ ಎಂದು ಶಿವಸೇನಾ ಹೇಳಿದೆ. ಪಕ್ಷದ ಶಾಸಕರನ್ನು ಉದ್ದೇಶಿಸಿ ಫೇಸ್‌ಬುಕ್ ಲೈವ್‌ನಲ್ಲಿ ಮಾತನಾಡಿದ ಠಾಕ್ರೆ ಅವರು ನಾನು ರಾಜೀನಾಮೆ ನೀಡಬೇಕು ಎಂದು ಹೇಳುತ್ತಿರುವ ಶಾಸಕರು ನನ್ನ ಎದುರಿಗೇ ಬರಲಿ, ರಾಜೀನಾಮೆ ನೀಡಿ ಎಂದು ನನ್ನ ಎದುರಿಗೆ ಅವರು ಹೇಳಲಿ ಎನ್‌ಸಿಪಿ, ಕಾಂಗ್ರೆಸ್ ಬೆಂಬಲ ನೀಡಿದ್ದರೂ, ನಮ್ಮದೇ ಶಾಸಕರು ಬೇಡ ಎಂದ ಮೇಲೆ ನಾನು ಈ ಹುದ್ದೆಯಲ್ಲಿ ಹೇಗೆ ಮುಂದುವರಿಯಲಿ. ಮುಖ್ಯಮಂತ್ರಿ ಸ್ಥಾನ ಮಾತ್ರವಲ್ಲ ಪಕ್ಷದ ಅಧ್ಯಕ್ಷನ ಸ್ಥಾನವನ್ನೂ ತೊರೆಯುತ್ತೇನೆ ಎಂದು ಅವರು ಹೇಳಿದ್ದಾರೆ.

ಇದರ ಮಧ್ಯೆ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್, ಕಾಂಗ್ರೆಸ್ ನಾಯಕರು ಉದ್ಧವ್ ಠಾಕ್ರೆ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. ಮಾತುಕತೆಯ ವಿವರಗಳು ಲಭ್ಯವಾಗಿಲ್ಲ. ಎಂವಿಎ ಸರ್ಕಾರದ ಭವಿಷ್ಯದ ಬಗ್ಗೆ ಮುಖ್ಯಮಂತ್ರಿ ಠಾಕ್ರೆ ಮತ್ತು ರಾಜ್ಯಪಾಲ ಭಗತ್ ಸಿಂಗ್ ಕೊಶ್ಯಾರಿ ಅವರು ಮಾತುಕತೆ ನಡೆಸಲಿದ್ದಾರೆ. ಇಬ್ಬರಿಗೂ ಕೋವಿಡ್ ಇರುವ ಕಾರಣ ಸಭೆಯು ಆನ್‌ಲೈನ್‌ನಲ್ಲಿ ನಡೆಯಲಿದೆ.

**ವಿಸರ್ಜನೆಯತ್ತ ವಿಧಾನಸಭೆ:** ಮಹಾರಾಷ್ಟ್ರ ವಿಧಾನಸಭೆಯು ವಿಸರ್ಜನೆಯತ್ತ ಜಾರುತ್ತಿದೆ ಎಂದು ಶಿವಸೇನಾ ವಕ್ತಾರ ಮತ್ತು ಸಂಸದ ಸಂಜಯ್ ರಾವುತ್ ಟ್ವೀಟ್ ಮಾಡಿದ್ದರು.

ವಿಧಾನಸಭೆಯನ್ನು ವಿಸರ್ಜನೆ ಮಾಡುವ ಯೋಚನೆಯನ್ನು ಎಂವಿಎ ಮಿತ್ರಪಕ್ಷಗಳಾದ ಎನ್‌ಸಿಪಿ ಮತ್ತು ಕಾಂಗ್ರೆಸ್ ವಿರೋಧಿಸಿವೆ. ಅದರ ಬೆನ್ನಲ್ಲೇ ರಾವುತ್ ಸ್ಪಷ್ಟನೆ ನೀಡಿದ್ದು, ನಾನು ಹಲವು ದಶಕಗಳಿಂದ ರಾಜಕೀಯದಲ್ಲಿದ್ದೇನೆ. ಅದರ ಅನುಭವದಲ್ಲಿ ಈ ಮಾತು ಹೇಳಿದ್ದೇನೆ ಎಂದು ಹೇಳಿದ್ದಾರೆ.

**ರಾಜ್ಯಪಾಲರಿಗೆ ಪತ್ರ**: ಏಕನಾಥ್ ಶಿಂಧೆ ಅವರೇ ನಮ್ಮ ನಾಯಕ ಎಂದು 34 ಶಾಸಕರು ಸಹಿ ಮಾಡಿರುವ ಪತ್ರವನ್ನು ಶಿಂಧೆ ಅವರು ರಾಜ್ಯಪಾಲರಿಗೆ ಸಲ್ಲಿಸಿದ್ದಾರೆ. 34ರಲ್ಲಿ, 30 ಶಿವಸೇನಾ ಮತ್ತು ನಾಲ್ವರು ಪಕ್ಷೇತರ ಶಾಸಕರಿದ್ದಾರೆ.

ಬಿಜೆಪಿಗೆ 106 ಶಾಸಕರ ಬಲವಿದೆ. ಈಗಿನ ಸರ್ಕಾರವನ್ನು ಉರುಳಿಸಿ, ತಮ್ಮ ಸರ್ಕಾರವನ್ನು ರಚಿಸಲು ಬಿಜೆಪಿಗೆ ಇನ್ನೂ 37 ಶಾಸಕರ ಅಗತ್ಯವಿದೆ. ಆದರೆ, ಮೂಲಗಳ ಪ್ರಕಾರ ಶಿಂಧೆ ಅವರ ಬಣದಲ್ಲಿ ಅಷ್ಟು ಶಾಸಕರಿಲ್ಲ. ಹೀಗಾಗಿ ಮತ್ತಷ್ಟು ಶಾಸಕರನ್ನು ಸೆಳೆಯುವ ಯತ್ನ ನಡೆಯುತ್ತಿದೆ. ಇದರ ಮಧ್ಯೆ ಗುವಾಹಟಿಯಲ್ಲಿರುವ ಶಾಸಕರಲ್ಲಿ 17 ಮಂದಿ ಮುಂಬೈಗೆ ವಾಪಸಾಗಲು ಸಿದ್ಧರಿದ್ದಾರೆ. ಆದರೆ, ಅವರನ್ನು ಬಲವಂತವಾಗಿ ಇರಿಸಿಕೊಳ್ಳಲಾಗಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಆಧಾರ:ಪ್ರಜಾವಾಣಿ, ದಿನಾಂಕ:23.06.2022

## 16. ಬಿಕ್ಕಟ್ಟಲ್ಲೂ ಭರ್ಜರಿ ಅನುದಾನ

ಶಿವಸೇನೆ ನಾಯಕ, ಸಚಿವ ಏಕನಾಥ್ ಶಿಂಧೆ ಬಂಡಾಯದಿಂದಾಗಿ ಸರ್ಕಾರ ಪತನಗೊಳ್ಳುವ ಸಾಧ್ಯತೆ ಹೆಚ್ಚಾಗಿರುವ ಮಧ್ಯೆ ಆಡಳಿತಾರೂಢ ಮಹಾಮೈತ್ರಿಯ ಮಿತ್ರಪಕ್ಷಗಳಾದ ಎನ್‌ಸಿಪಿ ಮತ್ತು ಕಾಂಗ್ರೆಸ್ ಪಕ್ಷಗಳ ಸಚಿವರು ವಿವಿಧ ಇಲಾಖೆಗಳಿಂದ ಸಾವಿರಾರು ಕೋಟಿ ಮೌಲ್ಯದ ಅನುದಾನ ಬಿಡುಗಡೆಗೆ ಸರ್ಕಾರಿ ಆದೇಶಗಳನ್ನು ಹೊರಡಿಸುತ್ತಿದ್ದಾರೆ. ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದ ಕಳೆದ ನಾಲ್ಕು ದಿನಗಳಲ್ಲಿ ಇಂತಹ ಹಲವಾರು ಆದೇಶಗಳು ಹೊರಬಿದ್ದಿವೆ.

ಜೂನ್ 20–23ರ ನಡುವೆ ಇಲಾಖೆಗಳು 182 ಸರ್ಕಾರಿ ನಿರ್ಣಯಗಳನ್ನು (ಜಿಆರ್‌ಗಳು) ನೀಡಿದ್ದರೆ, ಜೂನ್ 17ರಂದು 107 ಆದೇಶಗಳು ಹೊರಬಿದ್ದಿವೆ. ಸರ್ಕಾರದ ಅಧಿಕೃತ ವೆಬ್‌ಸೈಟ್‌ನಲ್ಲಿ ಈ ಮಾಹಿತಿಯಿದೆ. ತಾಂತ್ರಿಕವಾಗಿ, ಜಿಆರ್‌ಗಳನ್ನು ಸರ್ಕಾರಿ ನಿರ್ಣಯಗಳು ಎಂದು ಕರೆಯಲಾಗುತ್ತದೆ. ಮೂಲಭೂತವಾಗಿ ಇದು ಅಭಿವೃದ್ಧಿ ಸಂಬಂಧಿಸಿದ ಕೆಲಸಗಳಿಗೆ ಹಣವನ್ನು ಬಿಡುಗಡೆ ಮಾಡುವ ಅನುಮೋದನೆಯ ಆದೇಶವಾಗಿದೆ. ಈ ಆದೇಶಗಳ ಬಗ್ಗೆ ಸಂಶಯ ವ್ಯಕ್ತಪಡಿಸಿರುವ ಬಿಜೆಪಿ ಇದಕ್ಕೆ ತಡೆಹಿಡಿಯಬೇಕೆಂದು ರಾಜ್ಯಪಾಲ ಭಗತ್ ಸಿಂಗ್ ಕೊಶಿಯಾರಿ ಅವರಿಗೆ ಮನವಿ ಸಲ್ಲಿಸಿದೆ.

ಸರ್ಕಾರ ಉರುಳುವುದನ್ನು ಮಿತ್ರಪಕ್ಷಗಳಾದ ಕಾಂಗ್ರೆಸ್ ಮತ್ತು ಎನ್‌ಸಿಪಿ ನಿರೀಕ್ಷಿಸಿದ್ದರಿಂದ ಆ ಪಕ್ಷದ ಸಚಿವರು ತರಾತುರಿಯಲ್ಲಿ ಆ ಆದೇಶಗಳನ್ನು ಹೊರಡಿಸಿ ಹಣ ಬಿಡುಗಡೆ ಮಾಡಿಸಿಕೊಳ್ಳಲು ಯತ್ನಿಸಿದ್ದಾರೆ. ಶಿವಸೇನೆಯ ಗುಲಾಬರಾವ್ ಪಾಟೀಲ್ ನೇತೃತ್ವದ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯು ಜೂನ್ 17 ರಂದು 84 ಜಿಆರ್‌ಗಳನ್ನು ಹೊರಡಿಸಿದೆ. ಹೆಚ್ಚಿನ ಆದೇಶಗಳು ಹಣ ಮಂಜೂರಾತಿ, ಆಡಳಿತಾತ್ಮಕ ಅನುಮೋದನೆ ಮತ್ತು ವಿವಿಧ ನೀರು ಸರಬರಾಜು ಯೋಜನೆಗಳಲ್ಲಿ ಕೆಲಸ ಮಾಡುವ ಸಿಬ್ಬಂದಿಯ ವೇತನಕ್ಕೆ ಸಂಬಂಧಿಸಿವೆ.

ಗುವಾಹಟಿ ತಲುಪುವ ಮೂಲಕ ಶಿಂಧೆ ನೇತೃತ್ವದ ಬಂಡಾಯ ಪಾಳಯಕ್ಕೆ ಸೇರಿದ ಕೊನೆಯ ಸೇನಾ ಶಾಸಕರಲ್ಲಿ ಪಾಟೀಲ್ ಕೂಡ ಒಬ್ಬರು. ಜೂನ್ 20–23ರ ಅವಧಿಯಲ್ಲಿ 28 ಜಿಆರ್ ಹೊರಬಿದ್ದಿವೆ. ಮಾರನೇ ದಿನ 66 ಜಿಆರ್ ಕಳೆದ ಎರಡು ದಿನಗಳಲ್ಲಿ ಜೂನ್ 22, 23 ರಂದು ಕ್ರಮವಾಗಿ 44 ಮತ್ತು 43 ಆದೇಶಗಳನ್ನು ಹೊರಡಿಸಲಾಗಿದೆ. ಕಳೆದ ಸೋಮವಾರದಿಂದ ಎನ್‌ಸಿಪಿ ಮತ್ತು ಕಾಂಗ್ರೆಸ್‌ನ ನಿಯಂತ್ರಣದಲ್ಲಿರುವ ಇಲಾಖೆಗಳು ಈ ಅವಧಿಯಲ್ಲಿ 182 ಆದೇಶಗಳಲ್ಲಿ 70 ಪ್ರತಿಶತದಷ್ಟು ಆದೇಶಗಳನ್ನು ಹೊರಡಿಸಿವೆ. ಎನ್‌ಸಿಪಿ ನೇತೃತ್ವದ ಸಾಮಾಜಿಕ ನ್ಯಾಯ, ಜಲಸಂಪನ್ಮೂಲ, ಕೌಶಲ್ಯಾಭಿವೃದ್ಧಿ, ವಸತಿ ಅಭಿವೃದ್ಧಿ, ಹಣಕಾಸು ಮತ್ತು ಗೃಹ ಇಲಾಖೆಗಳು ಗರಿಷ್ಠ ಸಂಖ್ಯೆಯ ಜಿಆರ್‌ಗಳನ್ನು ನೀಡಿವೆ. ಸ್ವತಂತ್ರ ಶಾಸಕ ಮತ್ತು ಸಚಿವ ಶಂಕರರಾವ್ ಗಡಾಖ್ ಅವರ ಮಣ್ಣು ಮತ್ತು ಸಂರಕ್ಷಣಾ ಇಲಾಖೆ ಸುಮಾರು 20 ಆದೇಶಗಳನ್ನು ಜಾರಿಗೊಳಿಸಿದೆ. ಉಪಮುಖ್ಯಮಂತ್ರಿ ಮತ್ತು ಎನ್‌ಸಿಪಿ ನಾಯಕ ಅಜಿತ್ ಪವಾರ್ ನಿಯಂತ್ರಣದಲ್ಲಿರುವ ಹಣಕಾಸು ಇಲಾಖೆಯು ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯನ್ನು ಒಟ್ಟು ರೂ. 319 ಕೋಟಿಗಳಿಗೆ ಹೆಚ್ಚಿಸುವ ಜಿಆರ್‌ನ್ನು ಬಿಡುಗಡೆ ಮಾಡಿದೆ. ಅನುಮಾನಾಸ್ಪದ ವರ್ಗಾವಣೆಗಳಿಂದಾಗಿ ಮಾಜಿ ಗೃಹ ಸಚಿವರು ಈಗ ಜೈಲಿನಲ್ಲಿದ್ದಾರೆ. ಜಿಆರ್‌ಗಳನ್ನು

ಹೊರಡಿಸಿರುವುದು ಅತ್ಯಂತ ಶಂಕ್ಯಾಸ್ಪದವಾಗಿದೆ ಮತ್ತು ಹಣ ಲೂಟಿ ಹೊಡೆಯುವ ಸಾಧ್ಯತೆ ಇದೆ ಎಂದು ರಾಜ್ಯ ಬಿಜೆಪಿ ನಾಯಕ ಪ್ರವೀಣ್ ದಾರೆಕರ್ ದೂರಿದ್ದಾರೆ.

**ಸ್ಪೀಕರ್ ವಿರುದ್ಧ ಅವಿಶ್ವಾಸ ನಿರ್ಣಯ ಪ್ರಸ್ತಾವ:** ಡೆಪ್ಯೂಟಿ ಸ್ಪೀಕರ್ ನರಹರಿ ಝಿರ್ವಾಲ್ ಅವರು ಶಿಂಧೆ ಅವರನ್ನು ಬದಲಿಸುವ ಮೂಲಕ ಅಜ್ಯ ಚೌಧರಿ ಅವರನ್ನು ಶಿವಸೇನೆಯ ಶಾಸಕಾಂಗ ಪಕ್ಷದ ನಾಯಕರನ್ನಾಗಿ ಮಾಡಲಾಗಿದೆ. ಭರತ್ ಗೊಗವಾಲಾ ಅವರನ್ನು ಶಿವಸೇನೆಯ ವಿಪ್ ಆಗಿ ನೇಮಿಸುವಂತೆ ಶಿಂಧೆ ಬಣದ ಸಲಹೆಯನ್ನು ಉಪಸಭಾಪತಿ ತಿರಸ್ಕರಿಸಿದ್ದಾರೆ. ಠಾಕ್ರೆ ಬಣದ ಅನರ್ಹತೆಯ ಮನವಿಯ ಕುರಿತು ಬಂಡಾಯ ಶಾಸಕರಿಗೆ ನೋಟಿಸ್ ನೀಡಲಾಗಿದೆ. ಈ ಮಧ್ಯೆ ಇಬ್ಬರು ಪಕ್ಷೇತರ ಶಾಸಕರು ಡೆಪ್ಯೂಟಿ ಸ್ಪೀಕರ್ ವಿರುದ್ಧವೇ ಅವಿಶ್ವಾಸ ನಿರ್ಣಯದ ಪ್ರಸ್ತಾವ ಮಂಡಿಸಿದ್ದಾರೆ. ಬಂಡಾಯ ಶಾಸಕರು ಚುನಾವಣಾ ಆಯೋಗದ ಮೊರೆ ಹೋಗುವುದಾಗಿ ಹೇಳಿದ್ದಾರೆ.

**50 ಶಾಸಕರ ಬೆಂಬಲ**: ಬಂಡಾಯ ಗುಂಪಿನ ನಾಯಕ ಏಕನಾಥ್ ಶಿಂಧೆ ಅವರು ತಮಗೆ 50 ಶಾಸಕರ ಬೆಂಬಲವಿದೆ ಎಂದು ಹೇಳಿಕೊಂಡಿದ್ದು, 40 ಶಾಸಕರು ಶಿವಸೇನೆಯವರೇ ಆಗಿದ್ದಾರೆ ಎಂದು ತಿಳಿಸಿದ್ದಾರೆ. ಉದ್ದವ್ ಠಾಕ್ರೆ ಬಣದಲ್ಲಿ 15–16 ಶಾಸಕರಷ್ಟೇ ಇದ್ದಾರೆ ಎನ್ನಲಾಗಿದ್ದು, ರಾಜೀನಾಮೆ ನೀಡುವುದು ಅನಿವಾರ್ಯವಾಗಲಿದೆ ಎಂದು ಹೇಳಲಾಗುತ್ತಿದೆ. ಶಿವಸೇನೆಯ 15 ಬಂಡಯ ಶಾಸಕರ ಅನರ್ಹತೆಗೆ ಠಾಕ್ರೆ ಬಣ ಕೋರಿದ್ದರೂ, ಶಾಸಕರ ಅನರ್ಹತೆಗೆ ಡೆಪ್ಯೂಟಿ ಸ್ಪೀಕರ್ ಬಳಿಕ ಕಾನೂನುಬದ್ಧವಾದ ಯಾವುದೇ ಆಧಾರವಿಲ್ಲ ಎಂದು ವಿಶ್ಲೇಷಿಸಲಾಗುತ್ತಿದೆ. ಏತನ್ಮಧ್ಯೆ, ಉದ್ಧವ್ ಠಾಕ್ರೆ ಶಿವಸೇನೆಯ ರಾಷ್ಟ್ರೀಯ ಕಾರ್ಯಕಾರಿಣಿ ಕರೆದಿದ್ದು, ಶನಿವಾರ ಮಧ್ಯಾಹ್ನ 1 ಗಂಟೆಗೆ ಶಿವಸೇನೆ ಭವನದಲ್ಲಿ ಪ್ರಾರಂಭಗೊಳ್ಳಲಿದೆ.

ಆಧಾರ:ವಿಜಯವಾಣಿ, ದಿನಾಂಕ:25.06.2022

## 17. ಸುಪ್ರೀಂ ಅಂಗಳಕ್ಕೆ ಮಹಾ ಬಂಡಾಯ

ಕಳೆದೊಂದು ವಾರದಿಂದ ನಡೆಯುತ್ತಿರುವ ಮಹಾರಾಷ್ಟ್ರದ ರಾಜಕೀಯ ಹೈಡ್ರಾಮಾ ಈಗ ಸುಪ್ರೀಂಕೋರ್ಟ್ ಅಂಗಳವನ್ನು ತಲುಪಿದೆ.

ವಿಧಾನಸಭೆಯ ಉಪಸ್ಪೀಕರ್ ರವಾನಿಸಿರುವ 16 ಮಂದಿ ಬಂಡಾಯ ಶಾಸಕರ ಅನರ್ಹತೆ ನೋಟಿಸ್ ಅನ್ನು ಪ್ರಶ್ನಿಸಿ ಸಚಿವ ಏಕನಾಥ್ ಶಿಂಧೆ ಸರ್ವೋಚ್ಚ ನ್ಯಾಯಾಲಯದ ಮೆಟ್ಟಿಲೇರಿದ್ದಾರೆ. ಈ ಅರ್ಜಿಯನ್ನು ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ಜೆ.ಬಿ.ಪರ್ದಿವಾಲಾ ಅವರನ್ನೊಳಗೊಂಡ ನ್ಯಾಯಪೀಠ ವಿಚಾರಣೆಗೆ ಕೈಗೆತ್ತಿಕೊಳ್ಳುವ ಸಾಧ್ಯತೆ ಇದೆ.

ಮಹಾ ವಿಕಾಸ ಅಘಾಡಿ ಮೈತ್ರಿಯಿಂದ ಶಿವಸೇನೆ ಹೊರಬರಬೇಕು ಎನ್ನುವುದು ಬಂಡಾಯ ಶಾಸಕರ ಆಗ್ರಹವಾಗಿದ್ದು, ಇದಕ್ಕೆ ಒಪ್ಪದ ಸಿ.ಎಂ. ಉದ್ಧವ್ ಠಾಕ್ರೆ, ರಾಜೀನಾಮೆ ನೀಡಿ ಮತ್ತೊಮ್ಮೆ ಚುನಾವಣೆ ಎದುರಿಸಿ ಎಂದು ಸವಾಲು ಹಾಕಿದ್ದಾರೆ. ಅಲ್ಲದೇ ಶಿಂಧೆ ಸೇರಿದಂತೆ 16 ಮಂದಿ ಬಂಡಾಯ ಶಾಸಕರಿಗೆ ಸಮನ್ಸ್ ಜಾರಿ ಮಾಡಿರುವ ಮಹಾರಾಷ್ಟ್ರ ವಿಧಾನಸಭೆ ಕಾರ್ಯಾಲಯವು ಅನರ್ಹತೆ ದೂರಿಗೆ ಸಂಬಂಧಿಸಿ ಸೋಮವಾರ ಸಂಜೆ 5.30ರೊಳಗಾಗಿ ಲಿಖಿತ ಪ್ರತಿಕ್ರಿಯೆ ನೀಡುವಂತೆ ಸೂಚಿಸಿದೆ. ಈ ಎಲ್ಲ ಬೆಳವಣಿಗೆಗಳು ಈಗ ಮಹಾ ಡ್ರಾಮಾವನ್ನು ಸುಪ್ರೀಂ ಅಂಗಳಕ್ಕೆ ತಂದು ನಿಲ್ಲಿಸಿದೆ.

ಅನರ್ಹತೆ ಮಾತ್ರವಲ್ಲದೇ, ಶಿವಸೇನೆ ಶಾಸಕಾಂಗ ಪಕ್ಷದ ನಾಯಕನಾಗಿ ಅಜಯ್ ಚೌಧರಿ ನೇಮಕ ಮತ್ತು ಉಪಸ್ಪೀಕರ್ ನರಹರಿ ಝಿರ್ವಾಲ್ ವಿರುದ್ಧ ಅವಿಶ್ವಾಸ ಗೊತ್ತುವಳಿ ತಿರಸ್ಕರಿಸಿರುವುದನ್ನೂ ಸುಪ್ರೀಂಗೆ ಸಲ್ಲಿಸಿದ ಅರ್ಜಿಯಲ್ಲಿ ಪ್ರಶ್ನಿಸಲಾಗಿದೆ. ಉಪಸ್ಪೀಕರ್‌ರನ್ನು ಅವರ ಸ್ಥಾನದಿಂದ ಕಿತ್ತುಹಾಕುವ ಕುರಿತು ಅಂತಿಮ ನಿರ್ಧಾರ ಹೊರಬೀಳುವವರೆಗೆ ಅವರು ಅನರ್ಹತೆ ವಿಚಾರದಲ್ಲಿ ಮುಂದುವರಿಯುವಂತಿಲ್ಲ ಎಂದು ಆದೇಶಿಸುವಂತೆಯೂ ಅರ್ಜಿಯಲ್ಲಿ ಮನವಿ ಮಾಡಲಾಗಿದೆ. ಇನ್ನೊಂದೆಡೆ, ಉದ್ಧವ್ ಬಣ ಕೂಡ ಕಾನೂನು ಹೋರಾಟಕ್ಕೆ ಎಲ್ಲ ರೀತಿಯಲ್ಲೂ ಸಿದ್ಧತೆ ಆರಂಭಿಸಿದೆ.

**ಹೋಂಮಿನಿಸ್ಟರ್ ಸಂಧಾನ**: ದಿನೇದಿನೇ ಉದ್ಧವ್ ಜಂಘಾಬಲ ಉದುಗಿ ಹೋಗುತ್ತಿರುವುದನ್ನು ಮನಗಂಡ ಅವರ ಪತ್ನಿ ರಶ್ಮಿ ಠಾಕ್ರೆ, ಈಗ ತಾವೇ ರಂಗ ಪ್ರವೇಶ ಮಾಡಿದ್ದಾರೆ. ಗುವಾಹಟಿಯಲ್ಲಿರುವ ಬಂಡಾಯ ಶಾಸಕರ ಪತ್ನಿಯರೊಂದಿಗೆ ರಶ್ಮಿ ಸಂಪರ್ಕ ಸಾಧಿಸಿದ್ದಾರೆ. ಅವರಿಗೆ ದೂರವಾಣಿ ಕರೆ ಮಾಡಿ ಮಾತನಾಡಿ ತಮ್ಮ ತಮ್ಮ ಪತಿರಾಯರನ್ನು ವಾಪಸ್ ಬರುವಂತೆ ಮನವೊಲಿಸಿ ಎಂದು ಕೇಳಿಕೊಳ್ಳುತ್ತಿದ್ದಾರೆ ಎಂದು ತಿಳಿದುಬಂದಿದೆ.

**ಉಳಿದಿರುವುದು ಅಪ್ಪ–ಮಗ ಮಾತ್ರ**: ಮಹಾರಾಷ್ಟ್ರ ಸಚಿವ ಉದಯ್ ಸಾವಂತ್ ಕೂಡ ಸದ್ದಿಲ್ಲದೇ ಗುವಾಹಟಿ ತಲುಪಿ ಬಂಡಾಯ ಬಣವನ್ನು ಸೇರಿಕೊಂಡಿದ್ದಾರೆ. ಈ ಮೂಲಕ ಶಿಂಧೆಗೆ ಬೆಂಬಲ ಘೋಷಿಸಿರುವ ಸಚಿವರ ಸಂಖ್ಯೆ 9ಕ್ಕೇರಿದೆ. ಅಲ್ಲದೇ, ಈಗ ಉದ್ಧವ್ ಬಣದಲ್ಲಿ ಉಳಿದಿರುವ ಏಕೈಕ ಕ್ಯಾಬಿನೆಟ್ ಸಚಿವರೆಂದರೆ ಪುತ್ರ ಆದಿತ್ಯ ಠಾಕ್ರೆ ಮಾತ್ರ. ಮತ್ತೊಂದೆಡೆ, ಬಂಡಾಯ ಶಾಸಕರ ಪೈಕಿ 20 ಮಂದಿ ಸಿ.ಎಂ.ಉದ್ಧವ್ ಜೊತೆ ಸಂಪರ್ಕದಲ್ಲಿದ್ದಾರೆ ಎಂದು ಹೇಳಲಾಗಿದೆ. ತಮ್ಮ ಬಣವನ್ನು ಬಿಜೆಪಿ ಜೊತೆ ವಿಲೀನ ಮಾಡುವ ಶಿಂಧೆ ಯೋಜನೆ ಬಗ್ಗೆ ಬಂಡಾಯ ಶಾಸಕರಲ್ಲೇ ಅಸಮಾಧಾನ ಮೂಡಿದೆ ಎನ್ನಲಾಗಿದೆ.

ಆಧಾರ:–ಉದಯವಾಣಿ, ದಿನಾಂಕ:27.06.2022

## 18. SC relief for Maha rebel MLAs

The Supreme Court offered temporary relief to 16 rebel MLAs of the Shiv Sena, as it gave them time till July 12 to file their response to the disqualification notice issued by the Deputy Speaker.

The MLAs of the Eknath Shinde faction, currently camping in Guwahati were supposed to tile their response by Monday 5.30 p.m. But a bench of Justices Surya Kant and J.B.Pardiwala said the status quo needs to be maintained in the matter in order to decide the competing claims in the crisis that has engulfed Maharashtra.

"We have to decide the question on the very competence of the Deputy Speaker if he is entitled to proceed with the matter. Today, we have to ensure that the matter does not become infructuous" the bench said.

The court also asked if the Deputy Speaker can become a judge in his own cause and decide whether to remove him is invalid. Acting on writ petitions filed by Shinde and other MLAs the top court asked the Deputy Speaker to file an affidavit explaining if he should deal with the disqualification proceedings until a question related to his removal is decided. The rebel MLAs had served a notice of having no-confidence in him.

The court also issued notice to the Maharashtra government newly appointed chief whip of Shiv Sena Sunil Prabhu and leader of Shiv Sena Legislature Party Ajay Chaudhary and the Union government among others.

The top court also decided to keep alive the question of maintainability of writ petitions filed by rebel MLAs as the Uddav Thackeray's faction contended that they should have approached the High Court first instead of "leapfrogging" to the SC Senior advocate Neeraj Kishan Kaul appearing for the MLAs questioned the "undue haste" shown by the Deputy Speaker in issuing notice on the disqualification petitions.

He maintained that the Deputy Speaker had no authority to decide the disqualification petitions, until the matter of his removal is not adjudicated upon under Article 179 C of the Constitution.

Senior advocate AM Singhvi appearing for Shiv Sena Legislature Party leader and Chief Whip contended that there was no reason for not sending the rebel MLAs to the High Court.

Appearing for the Deputy Speaker, senior advocate Rajeev Dhavan said a notice sent by rebel MLAs on June 22, expressing no confidence in him, was rejected as he was not sure of genuineness and authenticity of emails.

"A fly-by-night notice cannot do in such cases. We will file a detailed reply" he said. Senior advocate Devadutt Kamat, also appearing for Shiv Sena Legislature Party leader and Chief Whip submitted that a bogey of no confidence against the Speaker and Deputy Speaker is unsanctioned under the law as the removal has to be due to a "cause or on a charge".

"If it is so, this would be having far-reaching consequences because the Speaker and the Deputy Speaker would be condemned unheard" the bench said.

Courtesy: Deccan Herald, Dated: 28.06.2022

## 19. ಉದ್ಧವ್ ರಾಜೀನಾಮೆ

ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ಶಿವಸೇನಾ ಮುಖಂಡ ಹಾಗೂ ಸಚಿವ ಏಕನಾಥ್ ಶಿಂಧೆ ಅವರ ನೇತೃತ್ವದಲ್ಲಿ 39 ಶಾಸಕರು ಮಹಾ ವಿಕಾಸ್ ಆಘಾಡಿ ಸರ್ಕಾರದ ವಿರುದ್ಧ ಬಂಡಾಯವೆದ್ದ 9 ದಿನಗಳ ಬಳಿಕ ಠಾಕ್ರೆ ನೇತೃತ್ವದ ಸರ್ಕಾರ ಬಿದ್ದಿದೆ.

ವಿಶ್ವಾಸಮತ ಸಾಬೀತುಪಡಿಸಿಬೇಕು ಎಂಬ ರಾಜ್ಯಪಾಲರ ಆದೇಶಕ್ಕೆ ತಡೆ ಕೋರಿ ಶಿವಸೇನಾ ಸಲ್ಲಿಸಿದ ಅರ್ಜಿಯನ್ನು ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ ವಿಶ್ವಾಸಮತ ಯಾಚಿಸಬೇಕು ಎಂದು ಹೇಳಿತು, ಇದರ ಬೆನ್ನಲ್ಲೇ ಠಾಕ್ರೆ ಅವರು ಸ್ವತಃ ತಮ್ಮ ಕಾರನ್ನು ರಾಜಭವನಕ್ಕೆ ಚಲಾಯಿಸಿಕೊಂಡು ಬಂದು ರಾಜ್ಯಪಾಲರಿಗೆ ರಾಜೀನಾಮೆ ಸಲ್ಲಿಸಿದರು.

ಇದರೊಂದಿಗೆ ಕಳೆದ ಎರಡೂವರೆ ವರ್ಷಗಳಿಂದ ಮಹಾರಾಷ್ಟ್ರದಲ್ಲಿದ್ದ ಶಿವಸೇನಾ ಎನ್‌ಸಿಪಿ ಹಾಗೂ ಕಾಂಗ್ರೆಸ್ ಮೈತ್ರಿಯ ಮಹಾವಿಕಾಸ್ ಆಘಾಡಿ ಸರ್ಕಾರವು ಪತನವಾಗಿದೆ.

ಶಿವಸೇನಾ ಮುಖ್ಯಸ್ಥ ಠಾಕ್ರೆ ಅವರು ಮಹಾರಾಷ್ಟ್ರದ ವಿಧಾನಪರಿಷತ್‌ನ ಸದಸ್ಯತ್ವಕ್ಕೂ ರಾಜೀನಾಮೆ ಸಲ್ಲಿಸಿದ್ದಾರೆ. **'**ನನ್ನ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುತ್ತಿದ್ದೇನೆ. ನನಗೆ ಯಾವುದೇ ವಿಷಾದ ಇಲ್ಲ. ಆದರೆ ಬಂಡಾಯ ಸಾರಿದವರಿಂದ ನೋವಾಗಿದೆ**'** ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಇದರ ಬೆನ್ನಲ್ಲೇ ವಿರೋಧ ಪಕ್ಷದ ನಾಯಕ ದೇವೇಂದ್ರ ಫಡ್ನವೀಸ್ ಅವರು ಮುಂದಿನ ಸರ್ಕಾರ ರಚನೆಯ ಪ್ರಕ್ರಿಯೆಯನ್ನು ಸದ್ದಿಲ್ಲದೆ ಆರಂಭಿಸಿದ್ದಾರೆ ಎನ್ನಲಾಗಿದೆ.

**ವಿಶ್ವಾಸಮತ ಸಾಬೀತಿಗೆ ಸುಪ್ರೀಂ ಸೂಚನೆ**: ಏಕನಾಥ್ ಶಿಂಧೆ ಮತ್ತು ಇತರ 48 ಶಾಸಕರ ಬಂಡಾಯದ ನಂತರ ಉದ್ಧವ್ ಠಾಕ್ರೆ ನೇತೃತ್ವದ ಮಹಾ ವಿಕಾಸ್ ಆಘಾಡಿ ಸರ್ಕಾರಕ್ಕೆ ವಿಧಾನಸಭೆಯಲ್ಲಿ ವಿಶ್ವಾಸಮತ ಯಾಚಿಸುವಂತೆ ಮಹಾರಾಷ್ಟ್ರ ರಾಜ್ಯಪಾಲರು ನೀಡಿರುವ ನಿರ್ದೇಶನಕ್ಕೆ ತಡೆನೀಡಲು ಸುಪ್ರೀಂಕೋರ್ಟ್ ನಿರಾಕರಿಸಿದೆ.

ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಜೆ.ಬಿ.ಪರ್ದಿವಾಲಾ ನೇತೃತ್ವದ ನ್ಯಾಯಪೀಠವು ಜೂನ್ 30 ರಂದು ಬೆಳಿಗ್ಗೆ 11.00 ಗಂಟೆಗೆ ವಿಶ್ವಾಸಮತದ ಏಕೈಕ ಕಾರ್ಯಸೂಚಿಯೊಂದಿಗೆ ಮಹಾರಾಷ್ಟ್ರ ವಿಧಾನಸಭೆಯ ವಿಶೇಷ ಅಧಿವೇಶನವನ್ನು ಕರೆಯುವುದನ್ನು ನಿಲ್ಲಿಸಲು ನಮಗೆ ಯಾವುದೇ ಆಧಾರವಿಲ್ಲ. ಪ್ರಜಾಪ್ರಭುತ್ವದ ಸಮಸ್ಯೆಗಳನ್ನು ಇತ್ಯರ್ಥಪಡಿಸಲು ಸದನವೇ ಸೂಕ್ತ ಮಾರ್ಗ ಎಂದು ಅಭಿಪ್ರಾಯಪಟ್ಟಿತು.

ಉಪಸ್ಪೀಕರ್ ಅವರು ತಮ್ಮ ವಿರುದ್ಧ ನೀಡಿರುವ ಅನರ್ಹತೆಯ ನೋಟಿಸ್‌ಗಳನ್ನು ಪ್ರಶ್ನಿಸಿ ಶಿಂಧೆ ಮತ್ತು ಇತರರು ಸಲ್ಲಿಸಿರುವ ರಿಟ್ ಅರ್ಜಿಯ ವಿಚಾರಣೆಯನ್ನು ಜುಲೈ 11 ರಂದು ನಡೆಸಲು ನಿರ್ಧರಿಸಲಾಗಿದೆ ಎಂದು ನ್ಯಾಯಪೀಠವು ತಿಳಿಸಿದೆ.

ಸುಮಾರು ಮೂರುವರೆ ಗಂಟೆಗಳ ಕಾಲ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ ಸಂಕ್ಷಿಪ್ತವಾಗಿ ಆದೇಶ ನೀಡಿ, ರಾಜ್ಯಪಾಲರು ಹೊರಡಿಸಿದ್ದ ಸೂಚನೆ ಪ್ರಕಾರ ವಿಧಾನಸಭೆಯ ಕಲಾಪಗಳನ್ನು ನಡೆಸಲು ಅವಕಾಶ ಮಾಡಿಕೊಟ್ಟಿತು.

ಶಿವಸೇನಾ ಪರ ವಾದ ಮಂಡಿಸಿದ ಹಿರಿಯ ವಕೀಲ ಎ.ಎಂ.ಸಿಂಘ್ವಿ, ರಾಜ್ಯಪಾಲರು ದೇವರಲ್ಲ. ಅವರೂ ಮನುಷ್ಯರು. ಅದಕ್ಕಾಗಿಯೇ ನಮಗೆ ಎಸ್.ಆರ್.ಬೊಮ್ಮಾಯಿ ಮತ್ತು ರಾಮೇಶ್ವರ್ ಪ್ರಸಾದ್ ಅವರಂಥ ತೀರ್ಪುಗಳಿವೆ. ರಾಜ್ಯಪಾಲರು ಮುಖ್ಯಮಂತ್ರಿಯನ್ನು ಮಾತುಕತೆಗೆ ಕರೆಯುವ ಬದಲು ವಿರೋಧಪಕ್ಷದ ನಾಯಕ ದೇವೇಂದ್ರ ಫಡ್ನವೀಸ್ ಅವರ ಸಲಹೆಯಿಂದ ನಡೆದುಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

ರಾಜ್ಯಪಾಲರ ನಿರ್ಧಾರವು ಪ್ರಜಾಪ್ರಭುತ್ವದ ಮೂಲ ಆಶಯಗಳಿಗೆ ಪೆಟ್ಟು ನೀಡುತ್ತದೆ. ಉಪಸ್ಪೀಕರ್ ಅವರು ತೀರ್ಮಾನಿಸುವವರೆಗೂ ನ್ಯಾಯಾಲಯವು ವಿಶ್ವಾಸಮತಯಾಚನೆಗೆ ಅವಕಾಶ ನೀಡಬಾರದು ಎಂದು ಪ್ರತಿಪಾದಿಸಿದರು.

ಶಿವಸೇನಾ ಆರೋಪವನ್ನು ವಿರೋಧಿಸಿ ರಾಜ್ಯಪಾಲರ ಪರ ವಾದ ಮಂಡಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ವಿಶ್ವಾಸಮತ ಯಾಚನೆಯನ್ನು ತಡೆಯಲು ಸಾಧ್ಯವಿಲ್ಲ ಎಂದು ಹೇಳಿದರು. ಬಂಡಾಯ ಶಾಸಕರ ಪರ ವಾದ ಮಂಡಿಸಿದ ಹಿರಿಯ ವಕೀಲ ಎನ್.ಕೆ.ಕೌಲ್ ಅವರು ಉದ್ಧವ್ ಠಾಕ್ರೆ ನೇತೃತ್ವದ ಮಹಾವಿಕಾಸ ಅಘಾಡಿ ಸರ್ಕಾರವು ತಮ್ಮದೇ ಪಕ್ಷದ ಮತ್ತು ಸದನದಲ್ಲಿ ಬಹುಮತವನ್ನು ಕಳೆದುಕೊಂಡ ನಂತರವೂ ಅಧಿಕಾರಕ್ಕೆ ಅಂಟಿಕೊಂಡಿದೆ ಎಂದು ಆರೋಪಿಸಿದರು.

ಶಿವಸೇನಾ ಬಂಡಾಯ ನಾಯಕ ಏಕನಾಥ್ ಶಿಂಧೆ ಅವರು ಶಿವಸೇನಾದ 39 ಶಾಸಕರು ಮತ್ತು ಪಕ್ಷೇತರ ಮತ್ತು ಸಣ್ಣ ಪಕ್ಷಗಳ 10 ಶಾಸಕರನ್ನು ಒಟ್ಟುಗೂಡಿಸಿಕೊಂಡು ಬಂಡಾಯ ಸಾರಿದರು.

**ಪಕ್ಷ ಮತ್ತೆ ಕಟ್ಟುವೆ, ಉದ್ಧವ್**: ಪ್ರಜಾಪ್ರಭುತ್ವದಲ್ಲಿ ಸಂಖ್ಯೆಗಳಿಗಾಗಿ ತಲೆಗಳನ್ನು ಎಣಿಸಲಾಗುತ್ತದೆ. ಆದರೆ, ಅದರಲ್ಲಿ ನನಗೆ ಆಸಕ್ತಿ ಇಲ್ಲ. ಇಂಥ ಆಟಗಳನ್ನು ಆಡುವುದು ನನಗೆ ಬೇಕಾಗಿಲ್ಲ. ನಾಳೆ (ಭವಿಷ್ಯದಲ್ಲಿ) ಶಿವಸೇನಾ ಮುಖ್ಯಸ್ಥ ಬಾಳಾಸಾಹೇಬ್ ಠಾಕ್ರೆ ಅವರ ಮಗನ ಸರ್ಕಾರವನ್ನು ಉರುಳಿಸಿದೆವು ಎಂದು ಹೇಳುತ್ತಾರೆ. ಶಿವಸೇನೆಯು ಒಂದು ಕುಟುಂಬ, ನಾನು ನಮ್ಮ ಎಲ್ಲ ಬೆಂಬಲಿಗರನ್ನು ಒಟ್ಟುಗೂಡಿಸಿ ಪಕ್ಷವನ್ನು ಮತ್ತೆ ಕಟ್ಟುತ್ತೇನೆ ಎಂದು ಹೇಳಿದರು. ಇದಕ್ಕೂ ಮುನ್ನ ಅವರು ಸರ್ಕಾರ ರಚನೆಗೆ ನೆರವಾದ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಮತ್ತು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರಿಗೆ ಧನ್ಯವಾದ ತಿಳಿಸಿದ್ದರು.

- ಮುಂದೆ ಏನು ಮಾಡಬೇಕು ಎಂಬುದು ಫಡ್ನವೀಸ್ ಮತ್ತು ಶಿವಸೇನಾ ಬಂಡಾಯ ನಾಯಕ ಏಕನಾಥ್ ಶಿಂಧೆ ನಿರ್ಧರಿಸುತ್ತಾರೆ: ಮಹಾರಾಷ್ಟ್ರ ಬಿಜೆಪಿ ಅಧ್ಯಕ್ಷ ಚಂದ್ರಕಾಂತ್ ಪಾಟೀಲ್.

- ಬಿಜೆಪಿ ಕಾರ್ಯಕರ್ತರು ಸದ್ಯಕ್ಕೆ ಜಯ ಆಚರಣೆಯಲ್ಲಿ ತೊಡಗಬಾರದು: ಪಕ್ಷ ಸೂಚನೆ.

- ಸರ್ಕಾರ ರಚನೆ ಕುರಿತು ನಮ್ಮ ಪಕ್ಷದ ನಿಲುವು ಏನು ಎಂಬುದನ್ನು ತಿಳಿಸುತ್ತೇವೆ: ದೇವೇಂದ್ರ ಫಡಣವೀಸ್
- ಫಡಣವೀಸ್ ಮುಖ್ಯಮಂತ್ರಿ ನೇತೃತ್ವದಲ್ಲಿ ಹೊಸ ಸಕಾರ ರಚನೆಯಾಗಲಿದೆ ಎಂಬ ನಿರೀಕ್ಷೆ ಇದೆ.
- ಶಿವಸೇನಾ ಬಂಡಾಯ ಶಾಸಕರ ನಿವಾಸಗಳಿಗೆ ನೀಡಲಾಗಿದ್ದ ಪೊಲೀಸ್ ಭದ್ರತೆಯನ್ನು ಬಿಗಿಗೊಳಿಸಲಾಗಿದೆ. ಜೊತೆಗೆ ಎಲ್ಲಾ ಪ್ರಮುಖ ಸ್ಥಳಗಳಲ್ಲಿ ಮಹಾರಾಷ್ಟ್ರ ರಾಜ್ಯ ಮೀಸಲು ಪೊಲೀಸ್ ಪಡೆ (ಎಸ್ಆರ್‌ಪಿಎಫ್) ನಿಯೋಜಿಸಲಾಗಿದೆ. ಬಂಡಾಯ ಶಾಸಕರು ಖಾಸಗಿ ವಿಮಾನದಲ್ಲಿ ಮುಂಬೈಗೆ ಬರುವ ನಿರೀಕ್ಷೆ ಇದೆ.

ಆಧಾರ:–ಪ್ರಜಾವಾಣಿ, ದಿನಾಂಕ:30.06.2022

# ಭಾಗ – 9

# ಶ್ರದ್ಧಾಂಜಲಿ

## 1. ಜಿ.ವಿ.ಶ್ರೀರಾಮರೆಡ್ಡಿ, ಚಳವಳಿಗಳ ಜನಕ

ಎಡಪಂಥೀಯ ಚಳುವಳಿಯ ಧುರೀಣ ಮಾಜಿ ಶಾಸಕ, ಜನಪರ ಹೋರಾಟಗಾರ ಜಿ.ವಿ. ಶ್ರೀರಾಮರೆಡ್ಡಿ ಇವರು ನಿಧನ ಹೊಂದಿದ್ದಾರೆ. ಅವರಿಗೆ 73 ವರ್ಷ ವಯಸ್ಸಾಗಿತ್ತು.

ಅವಿವಾಹಿತರಾದ ರೆಡ್ಡಿಯವರು ಹುಟ್ಟಿದ್ದು ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಬೈರಬಂಡ್ಲವಾದರೂ, ಬಾಗೇಪಲ್ಲಿ ನಗರವನ್ನು ಕರ್ಮಭೂಮಿಯನ್ನಾಗಿಸಿಕೊಂಡಿದ್ದರು. ಕಾನೂನು ಪದವೀಧರರಾಗಿ ಎಡಪಂಥೀಯ ನಾಯಕರಾಗಿ ಹಲವು ಹೋರಾಟಗಳನ್ನು ರೂಪಿಸಿದ್ದರು. ರಾಜಕೀಯ ಪ್ರವೇಶ ಮಾಡಿ ಎರಡು ಬಾರಿ ಶಾಸಕರಾಗಿ ಅಭಿವೃದ್ಧಿ ಯೋಜನೆಗಳ ಮೂಲಕ ಜನನಾಯಕರಾಗಿದ್ದರು.

**ಉತ್ತಮ ಸಂಸದೀಯ ಪಟು:** ಶ್ರೀರಾಮರೆಡ್ಡಿಯವರು ಸಿಪಿಐಎಂನಿಂದ ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಿಂದ ಐದು ಬಾರಿ ಸ್ಪರ್ಧಿಸಿ 1999,2004ರಲ್ಲಿ ಎರಡು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು. ಶಾಸಕರಾಗಿದ್ದ ಅವಧಿಯಲ್ಲಿ ಉತ್ತಮ ಸಂಸದೀಯ ಪಟುವಾಗಿದ್ದರು. ಅವರ ವಿದ್ವತ್ತು, ಜನಪರ ಕಾಳಜಿ, ರಾಜ್ಯದ ಬಗೆಗಿನ ಮಾಹಿತಿಗೆ ಇಡೀ ಸದನ ತಲೆದೂಗುತ್ತಿತ್ತು.

**ವಿದ್ಯಾರ್ಥಿಯು ಆಗಿದ್ದಾಗಲೇ ಹೋರಾಟ**: ವಿದ್ಯಾರ್ಥಿ ದೆಸೆಯಿಂದಲೇ ಹೋರಾಟ ಮೈಗೂಡಿಸಿ ಕೊಂಡಿದ್ದ ಶ್ರೀರಾಮರೆಡ್ಡಿ ಜನ ನಾಯಕರಾಗಿ ಬೆಳೆದು ನಿಂತರು. ಎಡಪಂಥೀಯ ಸಿದ್ಧಾಂತಗಳನ್ನು ಬಲವಾಗಿ ನಂಬಿದ್ದರು. ರಾಷ್ಟ್ರೀಯ ಪಕ್ಷಗಳಿಂದ ಹಲವು ಬಾರಿ ಆಹ್ವಾನ ಬಂದಿದ್ದರೂ ತಿರಸ್ಕರಿಸಿದ್ದರು. ಕೊನೆಗೆ ಸಿಪಿಎಂ ಪಕ್ಷದವರೇ ಪಕ್ಷ ವಿರೋಧಿ ಚಟುವಟಿಕೆ ನೆಪದಲ್ಲಿ ಉಚ್ಚಾಟಿಸಿದಾಗಲೂ ಪ್ರಜಾ ಸಂಘರ್ಷ ಸಮಿತಿಯನ್ನು ಹುಟ್ಟು ಹಾಕಿ ಹೋರಾಟದಲ್ಲಿ ತೊಡಗಿಕೊಂಡಿದ್ದರು.

**ಶಾಶ್ವತ ನೀರಾವರಿ ಹೋರಾಟದ ರೂವಾರಿ:** ಅವಿಭಜಿತ ಕೋಲಾರ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ನೀರಾವರಿ ಸಮಸ್ಯೆ ವಿರುದ್ಧ ಹೋರಾಡಿದ್ದೇ ಶ್ರೀರಾಮ ರೆಡ್ಡಿಯವರು ಬಾಗೇಪಲ್ಲಿಯಿಂದ ಸುಮಾರೂ 10 ಸಾವಿರ ಜನರ ರೈತರೊಂದಿಗೆ ಬೆಂಗಳೂರುವರೆಗೂ ಪಾದಯಾತ್ರೆ ನಡೆಸಿ ಇಡೀ ಸರ್ಕಾರವನ್ನು ನಡುಗುವಂತೆ ಮಾಡಿದ್ದರು. ಶಾಶ್ವತ ನೀರಾವರಿ ಬಗ್ಗೆ ಅರಿವು ಮೂಡಿಸಿ ಹೋರಾಟದ ಮನೋಭಾವನೆಗೆ ನಾಂದಿ ಹಾಡಿದರು. ಅದರ ಭಾಗವಾಗಿಯೇ ಶಾಶ್ವತ ನೀರಾವರಿ ಹೋರಾಟ ಹುಟ್ಟಿಕೊಂಡಿದ್ದು, ಇಂದಿಗೂ ಜೀವಂತವಾಗಿ ನಡೆಯುತ್ತಲೇ ಇದೆ. ಚಿತ್ರಾವತಿ ವಂಡಮಾನ್ ಪಿನಾಕಿನಿ ಸೇರಿದಂತೆ ಅವಿಭಜಿತ ಜಿಲ್ಲೆ ವ್ಯಾಪ್ತಿಯ ಜಲಮೂಲಗಳ ರಕ್ಷಣೆಗೆ ಹಲವು ಹೋರಾಟಗಳನ್ನು ರೂಪಿಸಿದ್ದರು.

**ಮೌಢ್ಯದ ವಿರುದ್ಧ ಹೋರಾಟ**: ಉಡುಪಿಯಲ್ಲಿ ಹಾಜಬ್ಬ ಹಸನಬ್ಬ ಎಂಬ ದನದ ವ್ಯಾಪಾರಿಗಳನ್ನು ಹಿಂದೂ ಸಂಘಟನೆಗಳು ಬೆತ್ತಲೆ ಮಾಡಿ ರಸ್ತೆಯಲ್ಲಿ ಕೂರಿಸಿದಾಗ ಅದನ್ನು ಸದನದಲ್ಲಿ ಪ್ರಸ್ತಾಪಿಸಿ ತನಿಖೆಗೆ ಆಗ್ರಹಿಸಿದ್ದರು. ಆ ಪ್ರಕರಣ ರಾಷ್ಟ್ರಮಟ್ಟದಲ್ಲಿ ಗಮನ ಸೆಳೆದು ಆರೋಪಿಗಳ ಬಂಧನವಾಯ್ತು. ಆ ಬಳಿಕ ಉಡುಪಿ ಮಠದ ಪಂಕ್ತಿಬೇಧ, ಕುಕ್ಕೆ ಸುಬ್ರಮಣ್ಯದ ಮಡೆಸ್ನಾನದ ವಿರುದ್ಧ ಚಟುವಳಿಗಳನ್ನು ನಡೆಸಿ ಲಾಠಿಚಾರ್ಜ್‌ಗೆ ಒಳಗಾಗಿದ್ದರು.

ಆಧಾರ: ವಿಜಯ ಕರ್ನಾಟಕ, ದಿನಾಂಕ:16.04.2022.

## 2. ಈಶಣ್ಣ ಗುಳಗಣ್ಣವರ, ಮಾಜಿ ಶಾಸಕ

ಯುಲಬುರ್ಗಾ ಕ್ಷೇತ್ರದ ಮಾಜಿ ಶಾಸಕ ಈಶಣ್ಣ ಗುಳಗಣ್ಣವರ, ಇವರು ನಿಧನ ಹೊಂದಿರುತ್ತಾರೆ. ಇವರಿಗೆ 69 ವರ್ಷ ವಯಸ್ಸಾಗಿತ್ತು. ಕುಕನೂರು ತಾಲ್ಲೂಕಿನ ಇಟಗಿ ಗ್ರಾಮದವರಾದ ಈಶಣ್ಣ 2008ರಲ್ಲಿ ಶಾಸಕರಾಗಿ ಆಯ್ಕೆಯಾಗಿದ್ದರು. ಶಾಸಕರಾಗಿದ್ದಾಗಲೇ ಪಾರ್ಶ್ವವಾಯು ಪೀಡಿತರಾಗಿ ಹಾಸಿಗೆ ಹಿಡಿದಿದ್ದರು.

ಆಧಾರ: ಪ್ರಜಾವಾಣಿ, ದಿನಾಂಕ:17.04.2022.

## 3. ಪಂಡಿತ ರಾಜಶೇಖರ ಮನಸೂರ, ಖ್ಯಾತ ಹಿಂದುಸ್ತಾನಿ ಗಾಯಕ

ಖ್ಯಾತ ಹಿಂದುಸ್ತಾನಿ ಗಾಯಕ ಪಂಡಿತ ರಾಜಶೇಖರ ಮನಸೂರ ನಿಧನ ಹೊಂದಿರುತ್ತಾರೆ. ಅವರಿಗೆ 80 ವರ್ಷ ವಯಸ್ಸಾಗಿತ್ತು.

ಪಂಡಿತ ರಾಜಶೇಖರ ಅವರು ಮೂಲತ: ಧಾರವಾಡ ತಾಲ್ಲೂಕಿನ ಮನಸೂರ ಗ್ರಾಮದವರು. ಹಿಂದುಸ್ತಾನಿ ಸಂಗೀತ ದಿಗ್ಗಜ ಪಂಡಿತ ಮಲ್ಲಿಕಾರ್ಜುನ ಮನಸೂರ ಅವರ 8 ಜನ ಮಕ್ಕಳಲ್ಲಿ ಏಕೈಕ ಪುತ್ರರಾಗಿ 1942 ರ ಡಿಸೆಂಬರ್ 16 ರಂದು ಜನಿಸಿದ ರಾಜಶೇಖರ ಧಾರವಾಡದ ಸೇಂಟ್ ಜೋಸೆಫ್ ಹೈಸ್ಕೂಲ್ ನಂತರ ಕರ್ನಾಟಕ ಕಾಲೇಜಿನಲ್ಲಿ ವ್ಯಾಸಂಗ ಮಾಡಿದರು. 18ನೇ ವಯಸ್ಸಿನಲ್ಲಿ ಸಂಗೀತ ವಿಶಾರದ ಪರೀಕ್ಷೆಯಲ್ಲಿ ಚಿನ್ನದ ಪದಕ ಗೆದ್ದರು. ಅಕಾಶವಾಣಿ ಯುವ ಸಂಗೀತ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ, ಬ್ರಿಟಿಷ್ ಕೌನ್ಸಿಲ್ ವಿದ್ಯಾರ್ಥಿ ವೇತನದಲ್ಲಿ ವೇಲ್ಸ್ ವಿಶ್ವವಿದ್ಯಾಲಯದಿಂದ ಇಂಗ್ಲಿಷ್ ಸಾಹಿತ್ಯದಲ್ಲಿ ಎಂ.ಎ ಮತ್ತು ಭಾಷಾಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದಿದ್ದರು. ರಾಜಶೇಖರ 20ನೇ ವಯಸ್ಸಿನಲ್ಲೇ ತಂದೆಯೊಂದಿಗೆ ಸಂಗೀತ ಕಛೇರಿಗಳಲ್ಲಿ ಭಾಗವಹಿಸಲು ಆರಂಭಿಸಿದರು. ಪೂರ್ಣಕಾಲಿಕ ಸಂಗೀತಗಾರನಾಗುವ ಬದಲು ಉದ್ಯೋಗ ಹೊಂದಬೇಕು ಎಂಬುದು ತಂದೆಯ ಆಶಯವಾಗಿತ್ತು. ಹಾಗಾಗಿ ಅವರು ಸುಮಾರು 35 ವರ್ಷಗಳ ಕಾಲ ಸಾಹಿತ್ಯ ಮತ್ತು ಭಾಷಾಶಾಸ್ತ್ರ ಕಲಿಸಿದರು. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದರು. ಹಾಡುಗಾರಿಕೆಯನ್ನು ಮುಂದುವರಿಸಿದ್ದ ಅವರು ತಂದೆಯ ಗಾಯನಕ್ಕೆ ಬೆಂಬಲ ನೀಡಿದ್ದರು. ಹಲವಾರು ಪ್ರತಿಷ್ಠಿತ ಸಂಗೀತ ಉತ್ಸವ, ಆಕಾಶವಾಣಿ ಕಾರ್ಯಕ್ರಮಗಳಲ್ಲಿ ಸ್ವತಂತ್ರವಾಗಿ ಭಾಗವಹಿಸಿದ್ದರು. ಸರಳ ಸಜ್ಜನಿಕೆಯ ಸ್ವಭಾವದವರಾಗಿದ್ದ ಮನಸೂರ, ಸಂಗೀತ ಶುದ್ಧತೆಗೆ ಶಾಸ್ತ್ರದ ಬದ್ಧತೆಗೆ ಸಮರ್ಪಿಸಿಕೊಂಡಿದ್ದರು. ಸಂಗೀತ ಸೂಕ್ಷ್ಮ ಗ್ರಹಿಕೆಗೆ ಮಹತ್ವ ನೀಡುತ್ತ ಪ್ರಬುದ್ಧ ಗಾಯನವನ್ನು ಉಣಬಡಿಸುತ್ತಿದ್ದರು.

ಆಧಾರ: ವಿಜಯವಾಣಿ, ದಿನಾಂಕ:04.05.2022.

## 4. ಶಿವಕುಮಾರ್ ಶರ್ಮಾ, ಖ್ಯಾತ ಸಂತೂರ್ ವಾದಕ

ಖ್ಯಾತ ಸಂತೂರ್ ವಾದಕ ಪಂಡಿತ್ ಪದ್ಮವಿಭೂಷಣ ಶಿವಕುಮಾರ್ ಶರ್ಮಾ ನಿಧನ ಹೊಂದಿರುತ್ತಾರೆ. ಅವರಿಗೆ 84 ವರ್ಷ ವಯಸ್ಸಾಗಿತ್ತು.

ಜಮ್ಮುವಿನಲ್ಲಿ 1938ರ ಜನವರಿ 13 ರಂದು ಜನಿಸಿದ ಶಿವಕುಮಾರ್ ಶರ್ಮಾ ಕಾಶ್ಮೀರ ಕಣಿವೆಯಲ್ಲಿ ಪ್ರಚಲಿತದಲ್ಲಿದ್ದ ಸಂತೂರ್ ಎಂಬ ಜನಪದೀಯ ವಾದ್ಯವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಚುರಪಡಿಸಿದ ಹೆಗ್ಗಳಿಕೆಯುಳ್ಳವರು. ದೂರದರ್ಶನಕ್ಕೆ ಅವರು ಸಂಯೋಜಿಸಿಕೊಟ್ಟ ಮಿಲೇ ಸುರ್ ಮೇರಾ ತುಮ್ಹಾರಾ ಇಂದಿಗೂ ಜನಮನದಲ್ಲಿ ಅಚ್ಚಳಿಯದೇ ಉಳಿದ ಗೀತೆ.

ಶಾಸ್ತ್ರೀಯ ಸಂಗೀತ ಮಾತ್ರವಲ್ಲದೆ ಡರ್ ಸಿಲ್ಸಿಲಾ, ಲಾಮ್ಹೆ, ಚಾಂದ್‌ನಿ, ಝುನಕ್ ಝುನಕ್ ಪಾಯಲ್ ಬಾಜೇ ಮೊದಲಾದ ಹಿಂದಿ ಚಿತ್ರಗಳಿಗೆ ಸಂಗೀತ ಸಂಯೋಜನೆ ಮಾಡಿದ್ದಾರೆ. ಕಾಲ್ ಆಫ್ ದಿ ವ್ಯಾಲೆ ಸಂಪ್ರದಾಯ ಮ್ಯೂಸಿಕ್ ಆಫ್ ದಿ ಮೌಂಟೆನ್ಸ್ ಮೇಘ ಮಲ್ಹಾರ್ ಮೊದಲಾದವುಗಳು ಅವರ ಜನಪ್ರಿಯ ಆಲ್ಬಮ್‌ಗಳು, ಅವರು ತಮ್ಮ ಸಂಗೀತ ಸಾಧನೆಗೆ ಪದ್ಮಶ್ರೀ ಪದ್ಮವಿಭೂಷಣ, ಸಂಗೀತ ನಾಟಕ ಆಕಾಡೆಮಿ ಸೇರಿದಂತೆ ಹಲವಾರು ಪ್ರತಿಷ್ಠಿತ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:11.05.2022

## 5. ಸಿ.ಎಂ. ದೇಸಾಯಿ, ಮಾಜಿ ಶಾಸಕ

ಸಿಂಧಗಿ ವಿಧಾನಸಭೆ ಕ್ಷೇತ್ರದ ಮಾಜಿ ಶಾಸಕ ಮತ್ತು ಹೈಕೋರ್ಟ್ ವಕೀಲರಾಗಿದ್ದ ಸಿ.ಎಂ. ದೇಸಾಯಿ ನಿಧನಹೊಂದಿರುತ್ತಾರೆ. ಅವರಿಗೆ 88 ವರ್ಷ ವಯಸ್ಸಾಗಿತ್ತು. ಅವರು 1960ರ ದಶಕದಲ್ಲಿ ಎರಡು ಅವಧಿಗೆ ಅಂದರೆ 10 ವರ್ಷಗಳ ಕಾಲ ಸಿಂಧಗಿಯ ಮತಕ್ಷೇತ್ರದ ಶಾಸಕರಾಗಿದ್ದರು.

ಆಧಾರ: ವಿಜಯವಾಣಿ, ದಿನಾಂಕ:11.05.2022

## 6. ಸುಖರಾಂ, ಮಾಜಿ ಕೇಂದ್ರ ಸಚಿವ

ಹಿಮಾಚಲ ಪ್ರದೇಶದ ಕಾಂಗ್ರೆಸ್ ನಾಯಕ ಮಾಜಿ ಕೇಂದ್ರ ಸಚಿವ ಪಂಡಿತ್ ಸುಖರಾಂ ನಿಧನ ಹೊಂದಿರುತ್ತಾರೆ. ಅವರಿಗೆ 94 ವರ್ಷ ವಯಸ್ಸಾಗಿತ್ತು. ಇವರು 1993 ರಿಂದ 1996ರವರೆಗೆ ನರಸಿಂಹರಾವ್ ಸಂಪುಟದಲ್ಲಿ ಕೇಂದ್ರ ರಾಜ್ಯ ಟೆಲಿಕಾಂ ಖಾತೆಯ ಸಚಿವರಾಗಿದ್ದರು. ಆದರೆ, ಈ ವೇಳೆ ನಡೆಸಿದ ಹಗರಣಕ್ಕೆ ಸಂಬಂಧಿಸಿದಂತೆ 2011ರಲ್ಲಿ ಅವರು 5 ವರ್ಷ ಜೈಲು ಶಿಕ್ಷೆಗೆ ಗುರಿಯಾಗಿದ್ದರು. ಇವರು 5 ಬಾರಿ ವಿಧಾನಸಭೆ ಚುನಾವಣೆಯಲ್ಲಿ, 3 ಬಾರಿ ಲೋಕಸಭೆ ಚುನಾವಣೆಯಲ್ಲಿ ಗೆಲವು ಸಾಧಿಸಿದ್ದರು.

ಆಧಾರ: ಕನ್ನಡ ಪ್ರಭ, ದಿನಾಂಕ:12.05.2022

## 7.ಡಿ.ಎಸ್. ನಾಗಭೂಷಣ, ಸಾಹಿತಿ

ಚಿಂತಕ, ಸಾಹಿತಿ, ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ಪುರಸ್ಕೃತ ಡಿ.ಎಸ್. ನಾಗಭೂಷಣ್ ಅವರು ನಿಧನ ಹೊಂದಿರುತ್ತಾರೆ. ಅವರಿಗೆ 70 ವರ್ಷ ವಯಸ್ಸಾಗಿತ್ತು.

ಬೆಂಗಳೂರೂ ಗ್ರಾಮಾಂತರ ಜಿಲ್ಲೆ ಹೊಸಕೋಟೆ ತಾಲ್ಲೂಕು ತಿಮ್ಮಸಂದ್ರದ ನಾಗಭೂಷಣ ಅವರು ಗಣಿತ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದರು. ಆಕಾಶವಾಣಿಯ ವಿವಿಧ ಹುದ್ದೆಗಳಲ್ಲಿ 30 ವರ್ಷ ಕಾರ್ಯನಿರ್ವಹಿಸಿದ್ದರು. ಸ್ವಯಂ ನಿವೃತ್ತೀ ಪಡೆದ ನಂತರ ಶಿವಮೊಗ್ಗದ ಕಲ್ಲಹಳ್ಳಿಯಲ್ಲಿ ನೆಲೆಸಿದ್ದರು. ಸಾಹಿತ್ಯ ವಿಮರ್ಶೆ, ಸಮಾಜವಾದಿ ಚಿಂತನೆ ಅವರ ಆಸಕ್ತಿಯ ಕ್ಷೇತ್ರಗಳು, ಗಮನ, ಅನೇಕ ಈ ಭೂಮಿಯಿಂದ ಈ ಆಕಾಶದವರೆಗೆ, ಕುವೆಂಪು ಸಾಹಿತ್ಯ ದರ್ಶನ, ಲೋಹಿಯ ಸಮಾಜವಾದದ ದರ್ಶನ, ಬೇರು ಬಿಳಿಲು, ಇದು ಭಾರತ ಇದು ಭಾರತ, ಇಲ್ಲಿ ಯಾವುದೂ ಮುಖ್ಯವಲ್ಲ, ಕನ್ನಡ ಕರ್ನಾಟಕದ ಕಥಾ ಸಂಕಲನಗಳು ಅವರ ಪ್ರಮುಖ ಕೃತಿಗಳು. ಅವರ ಗಾಂಧಿ ಕಥನ ಕೃತಿ ಈಚೆಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಭಾಜನವಾಗಿತ್ತು. ಕೆ.ರಾಮದಾಸ್, ಕಡಿದಾಳು ಶಾಮಣ್ಣ ಸೇರಿದಂತೆ ಹಲವರ ಅಭಿನಂದನಾ ಗ್ರಂಥ ಹೊರತಂದಿದ್ದಾರೆ.

ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನದ ಅಧ್ಯಕ್ಷರಾಗಿ ಸಮಾಜವಾದಿ ಚಿಂತನೆಯ ಹಲವು ಕಾರ್ಯಾಗಾರಗಳನ್ನು ಆಯೋಜಿಸಿದ್ದರು. ರಾಜಕೀಯ ಗ್ರಹಿಕೆ ಮಾತ್ರವಲ್ಲ ಸಾಹಿತ್ಯ ಕೃತಿಗಳ ಸೂಕ್ಷ್ಮ ಓದುಗರಾಗಿದ್ದ ಇವರು ಎಂಥ ಅನಾರೋಗ್ಯದಲ್ಲಿಯೂ ಹೊಸ ಮನುಷ್ಯ ಪತ್ರಿಕೆಯನ್ನು ನಿರಂತರವಾಗಿ ಹೊರತಂದಿದ್ದು ಅವರ ಬದ್ಧತೆಗೆ ಸಾಕ್ಷಿ. ಕುವೆಂಪುರವರು ಮಲೆಗಳಲ್ಲಿ ಮಧುಮಗಳು ಕಾದಂಬರಿ 50 ವರ್ಷ ಪೂರೈಸಿದಾಗ ರಾಜ್ಯಾದ್ಯಂತ ಕಾರ್ಯಕ್ರಮ ಮಾಡಿದ್ದರು. ಅವರ ಗಾಂಧಿ ಕಥನ ಕೃತಿ 25ನೇ ಮುದ್ರಣಕ್ಕೆ ಸಜ್ಜಾಗಿತ್ತು. ಅದಕ್ಕಾಗಿ ವಿಶೇಷ ಕಾರ್ಯಕ್ರಮ ರೂಪಿಸುವ ಹಂತದಲ್ಲಿದ್ದರು. ಇವರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಘೋಷಣೆಯಾದರೂ ಕನ್ನಡ ಮಾಧ್ಯಮ ಸಂಪೂರ್ಣ ಅನುಷ್ಠಾನಗೊಂಡಿಲ್ಲ ಎಂಬ ಕಾರಣಕ್ಕೆ ಪ್ರಶಸ್ತಿ ನಿರಾಕರಿಸಿದ್ದರು.

ಆಧಾರ: ಉದಯವಾಣಿ, ದಿನಾಂಕ:20.05.2022

## 8. ಭಜನ್ ಸೋಪೋರಿ , ಪ್ರಸಿದ್ಧ ಸಂತೂರ್ ವಾದಕ

ಪ್ರಸಿದ್ಧ ಸಂತೂರ್ ವಾದಕ ಭಜನ್ ಸೋಪೋರಿಯವರು ನಿಧನ ಹೊಂದಿರುತ್ತಾರೆ. ಅವರಿಗೆ 73 ವರ್ಷ ವಯಸ್ಸಾಗಿತ್ತು. ಇವರ ಇಬ್ಬರು ಮಕ್ಕಳು ಕೂಡಾ ಸಂತೂರ್ ವಾದಕರಾಗಿದ್ದಾರೆ. ಸೋಪೋರಿ 2004ರಲ್ಲಿ ಪದ್ಮಶ್ರೀ, 1992ರಲ್ಲಿ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ಜಮ್ಮು ಕಾಶ್ಮೀರದ ಜೀವಮಾನ ಸಾಧನೆ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

ಆಧಾರ: ಕನ್ನಡ ಪ್ರಭ,ದಿನಾಂಕ:03.06.2022

## 9. ಎ.ಜಿ. ಕೊಡ್ಗಿ, ಮಾಜಿ ಶಾಸಕ,

ಪ್ರಗತಿಪರ ಕೃಷಿಕ, ಭೂ ಮಸೂದೆ ಹೋರಾಟಗಾರ ನೇರ ಹಾಗೂ ನಿಷ್ಠುರ ನಡೆಯ ಮಾಜಿ ಶಾಸಕ, ಮೂರನೆಯ ಹಣಕಾಸು ಆಯೋಗದ ಅಧ್ಯಕ್ಷರಾಗಿದ್ದ ಅಮಾಸೆಬೈಲ್ ಗೋಪಾಲಕೃಷ್ಣ ಕೊಡ್ಗಿ ನಿಧನ ಹೊಂದಿರುತ್ತಾರೆ. ಅವರಿಗೆ 93 ವರ್ಷ ವಯಸ್ಸಾಗಿತ್ತು.

ಬೈಂದೂರು ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಪಕ್ಷದಿಂದ 1972ರಲ್ಲಿ ಮೊದಲ ಅವಧಿಗೆ 1978ರಲ್ಲಿ ಎರಡನೇ ಅವಧಿಗೆ ಶಾಸಕರಾಗಿದ್ದರು. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಪರಿಷತ್ ಚುನಾವಣೆಗೆ ಸ್ಪರ್ಧಿಸುವ ಮೊದಲು ಪಕ್ಷದ ಪ್ರಮುಖರು ನೀಡಿದ ಭರವಸೆಯಂತೆ ನಡೆದುಕೊಂಡಿಲ್ಲ ಎನ್ನುವ ಕಾರಣವೂ ಸೇರಿ ಕಾರಣಾಂತರದಿಂದ ಪಕ್ಷ ಚಟುವಟಿಕೆಯಿಂದ ಅವರು ದೂರಾಗಿದ್ದರು 1993ರಲ್ಲಿ ಬಿಜೆಪಿಗೆ ಸೇರ್ಪಡೆಯಾಗಿ ತಾಲ್ಲೂಕು ಘಟಕ, ಉಡುಪಿ ಜಿಲ್ಲಾ ಅಧ್ಯಕ್ಷ ರಾಜ್ಯ ಉಪಾಧ್ಯಕ್ಷ ಸದಸ್ಯತ್ವ ಅಭಿಯಾನದ ರಾಜ್ಯ ಮುಖ್ಯಸ್ಥರಾಗಿ 1994ರಲ್ಲಿ ಕುಂದಾಪುರ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. 2013ರಲ್ಲಿ ಮತ್ತೆ ರಾಜಕಾರಣವೊಂದರಿಂದ ಮನನೊಂದು ರಾಜಕೀಯ ನಿವೃತ್ತಿ ಘೋಷಿಸಿದ್ದರು.

ಆಧಾರ:ಉದಯವಾಣಿ,ದಿನಾಂಕ:14.06.2022

# ಭಾಗ – 10

# ಪ್ರಮುಖ ಲೇಖನಗಳು

## 1. Spending on SC/ST welfare: A story of money lost in transit

Since 2014, Karnataka has spent an impressive ₹1.84 lakh crore on the welfare and development of the Scheduled Castes (SCs) and the Scheduled Tribe (STs), who jointly constitute 24.1% of the State's population. Yet, government data reveals that the communities are lagging behind the State averages in several parameters.

While the amount spent a mandate after the Karnataka Scheduled Castes Sub-Allocation and Tribal Sub-Allocation (Planning, Allocation & Utilisation of Financial Resources) Act, 2013, came into force on April 1, 2014, allocating resources as per the population ratio looks big on paper, in reality, data reveals, a large portion of the total amount has not reached the targeted population. In Karnataka, the SCs and STs constitute 17.15% and 6.95%, respectively, of the total population as per the 2011 Census.

After the Act came into force, as much as ₹2.26 lakh crore has been allocated to the Social Welfare Department, to be disbursed to different departments to undertake welfare works for the communities. While ₹1.9 lakh crore out of the ₹2.26 lakh crore allocated has been released, about ₹1.84 lakh crore has been spent.

**Expenditure per family**

The spent amount includes about ₹1.32 lakh crore for the welfare of SCs and about ₹52,000 crore for ST welfare. The data is part of an analysis done by the Planning and Statistics Department recently. If the total amount spent is calculated on the State's expenditure per family, it comes to about ₹66.09 lakh per SC family of an estimated 20.9 lakh SC families in the State, while it is about ₹62 lakh per ST family of an estimated 84,000 families in the State, government sources pointed out. However, one particular clause, it turns out, has been used extensively to divert funds. Section 7 D of the Act allows a certain amount of money to be used in exceptional cases on works that cannot be divided and considers such expenditure as "deemed expenditure". This has been used to divert funds for general purposes. Senior officials in the Social Welfare Department, however, insist that it cannot be termed as "diversion" since the Act provides for it.

A perusal of data of six big spending and infrastructure creating departments in the State Public Works, Urban Development, Major Irrigation, Minor Irrigation, Health, and Rural Development and Panchayat Raj shows that of the ₹1.32 lakh crore spent on the SC welfare, ₹44,356 crore or about 26% of the total money has been largely spent for general purposes. Similarly, of the ₹52,700 crore spent on ST welfare, 30% of the funds or about ₹15,938 crore has

been largely utilised by these six departments alone. Similarly, other departments have also used funds for infrastructure creation for the general public. Money is being spent on “contract-oriented works” that does not directly contribute to the welfare of SC/STs, sources said.

According to government sources, the money is being allocated and spent by various departments without an understanding of the development gaps that exist between the SC/ST population and the general population. For example, focus should have been on spending money meant for the SC/STs in 109 taluks of the State where their population is more than the State average of 24.1% instead of spreading thin resources across the State, sources said. “It is unfortunate that there has been no deep focus on education, literacy, malnutrition, skill development, and training that would have empowered the downtrodden communities,” said president of the Karnataka SC/ST Government Employees Association D. Chandrashekaraiah, underlining the need for targeted schemes.

**Planning cell**

“There is an urgent requirement for having a planning cell that can monitor works and expenditure in the Social Welfare Department to enable schemes/programmes to reach the targetted audience,” he said.

Sources said that the Planning Department has offered the Social Welfare Department help to formulate micro plans at the taluk level and macro plans for the districts and the State that can be monitored closely to achieve developmental goals. A senior Social Welfare Department official acknowledged the move, and said while it was a welcome step, it would also help bring about transparency in government expenditure.

**‘Deemed expenditure has been about 7%’**

Following demands from various quarters to remove the deemed expenditure clause from the Karnataka Scheduled Castes Sub-Allocation and Tribal Sub-Allocation Act, Social Welfare Minister Kota Srinivas Poojary said that Chief Minister Basavaraj Bommai had recently assured Dalit organisation leaders that it would be reviewed.

“There is also a thinking in the Government to review the deemed expenditure clause,” he told The Hindu. “The Act requires discussion and deemed expenditure can be removed only with an amendment.”

Insisting that the deemed expenditure stood at an average 7%, the Minister said that it remained at 7% even during the Congress Government led by Siddaramaiah that brought the Act. “On an average, the deemed expenditure has been around 7 % under all Chief Ministers.”

Further, on Mr. Siddaramaiah’s demand for the removal of Section 7D, Mr. Poojary said, “The Act was brought and followed by the Congress Government. The deemed expenditure continued under his rule. Now, he is insisting on the removal of 7D.”

When his views were sought on demand for a planning cell in his department, the Minister said he was not averse to the idea.

The Karnataka Scheduled Castes Sub-Allocation and Tribal Sub-Allocation (Planning, Allocation & Utilisation of Financial Resources) Act 2013 came into force on April 1, 2014. It mandates allocating funds according to the ratio of SC/ST population.

**Funds earmarked for SC welfare between 2014 and 2021: Rs.**1.61 lakh crore

**Funds released:** Rs. 1.36 lakh crore

**Funds utilised:** Rs. 1.32 lakh crore

**Funds earmarked for ST welfare between 2014 and 2021:** Rs. 65,400 crore

**Funds released:** Rs. 54,790 crore

**Funds utilised:** Rs. 52,700 crore

**Section 7 (D) Deemed expenditure:** In terms of non divisible infrastructure works, a portion of the scheme cost, as may be determined by the Government, shall be deemed to have been provided for the sub-allocation respectively.

Courtesy: The Hindu, dt: 02.04.2022

## 2. ಅಂಬೇಡ್ಕರ್ ಈ ಯುಗದ ಶ್ರೇಷ್ಠ ದಾರ್ಶನಿಕ

1930, ನವೆಂಬರ್ 17 ರಿಂದ 21ರವರೆಗೆ ನಡೆದ ಮೊದಲ ದುಂಡುಮೇಜಿನ ಸಮ್ಮೇಳನದಲ್ಲಿ ಡಾ: ಅಂಬೇಡ್ಕರ್ ಅವರು ಭಾಗವಹಿಸಿದ್ದರು. ಪರಿಣಾಮಕಾರಿ ಭಾಷಣವನ್ನು ಮಂಡಿಸಿದ ಅಂಬೇಡ್ಕರ್ "ಬ್ರಿಟಿಷ್‌ರ ಆಳ್ವಿಕೆಯಲ್ಲಿ ಅಸ್ಪೃಶ್ಯರ ಬದುಕಿನ ಬವಣೆ ನೀಗಿದೆಯೇ ಬ್ರಿಟಿಷ್ ಇಂಡಿಯಾದ ಒಟ್ಟು ಜನಸಂಖ್ಯೆಯ ಐದನೇ ಒಂದು ಭಾಗದಷ್ಟಿರುವ ನಿಮ್ಮ ವರ್ಗದವರ ಜನಸಂಖ್ಯೆ ಇಂಗ್ಲೆಂಡ್ ಅಥವಾ ಫ್ರಾನ್ಸ್ ದೇಶದ ಒಟ್ಟು ಜನಸಂಖ್ಯೆಗಿಂತಲೂ ಹೆಚ್ಚಿದೆ. ಬ್ರಿಟಿಷರ ಆಗಮನಕ್ಕೂ ಮುನ್ನ ನಿಮ್ಮ ವರ್ಗದವರು ಅಸಹ್ಯಕರ ಸ್ಥಿತಿಯಲ್ಲಿದ್ದರು. ಅದನ್ನು ತೊಡೆದುಹಾಕಲು ಬ್ರಿಟಿಷ್ ಸರ್ಕಾರದ ಕೊಡುಗೆ ಏನು ಬ್ರಿಟಿಷರಿಗಿಂತ ಮುಂಚೆ ನಾವು ದೇವಸ್ಥಾನವನ್ನು ಪ್ರವೇಶಿಸುವಂತಿರಲಿಲ್ಲ. ಈಗ ಪ್ರವೇಶಿಸಬಹುದೇ ಮೊದಲು ತೆರೆದ ಬಾವಿಯ ನೀರನ್ನು ಸ್ಪರ್ಶಿಸುವ ಹಕ್ಕು ಇರಲಿಲ್ಲ. ಈಗ ನಿಸರ್ಗದತ್ತವಾದ ನೀರನ್ನು ಮುಟ್ಟಬಹುದೇ ಇಂಥ ಸರ್ಕಾರದಿಂದ ಏನು ಉಪಯೋಗ, ಎಂದು ಗಟ್ಟಿಯಾಗಿ ಕೇಳುತ್ತಿದ್ದಂತೆ ಬ್ರಿಟಿಷ್ ಪ್ರತಿನಿಧಿಗಳು ಒಬ್ಬರ ಮುಖ ಒಬ್ಬರು ನೋಡಿಕೊಳ್ಳುವಂತಾಯಿತು. ಭಾರತೀಯ ಪ್ರತಿನಿಧಿಗಳಲ್ಲಿ ಗುಜುಗುಜು ಶುರುವಾಯಿತು. ಅಂಬೇಡ್ಕರ್ ಅವರ ನಿರ್ಭೀತ ಧ್ವನಿ, ದಿಟ್ಟ ಟೀಕೆಗಳು ಮುಚ್ಚುಮರೆ ಹಾಗೂ ಅಂಜಿಕೆಯಿಲ್ಲದ ವಾಗ್ಝರಿಗಳೂ ಇಡೀ ಸಭೆಯ ಮೇಲೆ ಮೇಲಷ್ಟೇ ಅಲ್ಲದೇ ಬ್ರಿಟಿಷ್ ಪ್ರಧಾನಿಯ ಮೇಲೂ ಗಾಢ ಪರಿಣಾಮವನ್ನು ಬೀರಿದವು. **ದಿ ಇಂಡಿಯನ್ ಡೇಲಿ ಮೇಲ್** ಈ ಭಾಷಣವನ್ನು ಮೊದಲ ದುಂಡು ಮೇಜಿನ ಸಮ್ಮೇಳನದ ಅತ್ಯುತ್ತಮ ಭಾಷಣಗಳಲ್ಲಿ ಒಂದು ಎಂದು ವರ್ಣಿಸಿತು. ಎಲ್ಲ ಅಂತಾರಾಷ್ಟ್ರೀಯ ಸುದ್ದಿಮಾಧ್ಯಮ ಇದನ್ನು ಮುಖಪುಟದಲ್ಲಿ ಬಣ್ಣಿಸಿ ಮುದ್ರಿಸಿದವು. ಸಭೆಯಲ್ಲಿ ಭಾಗವಹಿಸಿದ್ದ ಬರೋಡದ ಮಹಾರಾಜ ಗಾಯಕವಾಡ್ ಸಹ ಆನಂದಭಾಷ್ಪಗಳನ್ನು ತುಂಬಿಕೊಳ್ಳುವುದಕ್ಕೆ ಸಾಕ್ಷಿಯಾಗಿತ್ತು.

1931ರ ಆಗಸ್ಟ್ 6 ರಂದು ಮಹಾತ್ಮ ಗಾಂಧಿ ಅವರು ಡಾ:ಅಂಬೇಡ್ಕರ್‌ಗೆ ಪತ್ರ ಬರೆದು ತಮಗೆ ಬಿಡುವಿದ್ದರೆ ರಾತ್ರಿ 8 ಗಂಟೆಗೆ ದಲಿತ ವರ್ಗಗಳ ಬೇಡಿಕೆಗಳ ಕುರಿತು ಚರ್ಚಿಸುವುದಕ್ಕೆ ಆಗಮಿಸುವಂತೆ ಅಹ್ವಾನವನ್ನಿತ್ತರು. ಆಗ ಮಹಾತ್ಮ ಗಾಂಧಿ ಅವರಿಗೆ 50 ವರ್ಷ ವಯಸ್ಸು. ಡಾ: ಅಂಬೇಡ್ಕರ್ ಅವರಿಗೆ 39 ವರ್ಷ. ಈ ಅವಧಿಗೆ ಮುನ್ನ ಗಾಂಧಿ ಮತ್ತು ಅಂಬೇಡ್ಕರ್ ಭೇಟಿಯಾಗಿರಲಿಲ್ಲ. ಅಷ್ಟರಲ್ಲಿ

ಅಂಬೇಡ್ಕರ್ ಲಂಡನ್, ಅಮೆರಿಕ, ಜರ್ಮನಿ ದೇಶಗಳಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ ಭಾರತದಲ್ಲಿ ಜಾತಿ ವ್ಯವಸ್ಥೆಯ ವಿರುದ್ಧ ಹೋರಾಟವನ್ನು ಕೈಗೊಂಡಿದ್ದರು. ಮೂಕನಾಯಕ ಸಮತಾ ಜನತಾ ಹಾಗೂ ಪ್ರಭುದ್ಧ ಭಾರತ ಪತ್ರಿಕೆಗಳನ್ನು ಹೊರತಂದಿದ್ದರು. ಸಾಮಾಜಿಕ ಹಾಗೂ ರಾಜಕೀಯ ಹೋರಾಟಗಳಲ್ಲಿ ಶೋಷಿತ ವರ್ಗಗಳ ಪರವಾಗಿ ಮತ್ತು ಮಹಿಳೆಯರ ಹಕ್ಕುಗಳಿಗಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರೂ ಮಹಾತ್ಮ ಗಾಂಧಿ ಅವರ ಗಮನಕ್ಕೆ ಬಂದಿರಲಿಲ್ಲ. ದುಂಡು ಮೇಜಿನ ಪರಿಷತ್‌ಗೆ ಶೋಷಿತ ಸಮುದಾಯದ ಪರವಾಗಿ ಅಭಿಪ್ರಾಯವನ್ನು ಮಂಡಿಸಲು ಬ್ರಿಟಿಷ್ ಆಡಳಿತದಿಂದ ಡಾ: ಅಂಬೇಡ್ಕರ್ ಆಯ್ಕೆಯಾಗಿದ್ದರು. ಅಂದಿನ ಕಾಂಗ್ರೆಸ್ ದುಂಡು ಮೇಜಿನ ಪರಿಷತ್ ಅನ್ನು ಬಹಿಷ್ಕರಿಸಿದ್ದರಿಂದ ಗಾಂಧಿ ಸೇರಿದಂತೆ ಕಾಂಗ್ರೆಸಿನ ಯಾವುದೇ ಪ್ರಮುಖರು ಭಾಗವಹಿಸಿರಲಿಲ್ಲ. ಆದರೆ, ಆ ಸಭೆಯಲ್ಲಿ ಅಂಬೇಡ್ಕರ್ ಮಂಡಿಸಿದ ವಿಷಯದ ಪ್ರಬುದ್ಧತೆಗೆ ಅಂತಾರಾಷ್ಟ್ರೀಯ ಸುದ್ದಿಮಾಧ್ಯಮಗಳು ಬಿಬಿಸಿ ದಂಗಾಗಿದ್ದವು. ಅಂಬೇಡ್ಕರ್ ಅವರನ್ನು ಅಂತಾರಾಷ್ಟ್ರೀಯ ವೈಚಾರಿಕ ವಾರಸುದಾರನಂತೆ ಚಿಂತಕರಿಂದ ಹಿಡಿದು ಬ್ರಿಟಿಷ್ ಪ್ರಧಾನಿಯವರಿಗೆ ಸುದ್ದಿ ಹರಡಿದ್ದರಿಂದ ಸಹಜವಾಗಿ ಮಹಾತ್ಮಗಾಂಧಿ ಅವರಿಗೆ ಅಂಬೇಡ್ಕರ್ ಅವರನ್ನು ಕಾಣುವ ಸಹಜ ಕುತೂಹಲ ಉಂಟಾಗಿತ್ತು.

ಮಹಾತ್ಮ ಗಾಂಧಿ ಅವರು ನಿಗದಿಪಡಿಸಿದ ದಿನದಂದು ರಾತ್ರಿ 8 ಗಂಟೆಗೆ ಬರುವುದಾಗಿ ಅಂಬೇಡ್ಕರ್ ತಿಳಿಸಿದ್ದರು. ಸಂಜೆಯ ಹೊತ್ತಿಗೆ ಜ್ವರ 106 ಡಿಗ್ರಿಗೆ ಏರಿದ್ದರಿಂದ ಅದು ಇಳಿದ ಮೇಲೆ ಕಾಣುವುದಾಗಿ ಗಾಂಧಿ ಅವರಿಗೆ ಸಂದೇಶವನ್ನು ಕಳುಹಿಸಿದ್ದರು.

1931ರ ಆಗಸ್ಟ್ 14 ರಂದು ಅಂಬೇಡ್ಕರ್ ಮಧ್ಯಾಹ್ನ 2 ಗಂಟೆಗೆ ಅವರ ಅನುಯಾಯಿಗಳೊಂದಿಗೆ ಮಣಿಭವನಕ್ಕೆ ಹೋದರು. ಆದರೆ ಮೊದಲ ಭೇಟಿ ಡಾ: ಅಂಬೇಡ್ಕರ್ ಅವರಿಗೆ ನೀರಸವೆನಿಸಿತ್ತು. ಆಗ ಗಾಂಧಿ ಅವರು ಮುಂಬೈನ ಮಣಿಭವನದ 3ನೇ ಮಹಡಿಯಲ್ಲಿದ್ದರು. ಅಂಬೇಡ್ಕರ್ ತನ್ನ ಅನುಯಾಯಿಗಳೊಂದಿಗೆ 3ನೇ ಮಹಡಿಯನ್ನೇರಿ ಗಾಂಧಿ ಅವರಿಗೆ ನಮಸ್ಕರಿಸಿ ನೆಲದ ಮೇಲೆ ಹಾಸಿದ್ದ ರತ್ನಗಂಬಳಿಯ ಮೇಲೆ ಕುಳಿತುಕೊಂಡರು. ಗಾಂಧಿ ಅವರು ಪಕ್ಷದ ಕೆಲ ಸಂಗಡಿರೊಂದಿಗೆ ಹಾಗೂ ವಿದೇಶಿ ಮಹಿಳೆಯರೊಬ್ಬರೊಂದಿಗೆ ತಮ್ಮ ಮಾತನ್ನು ಮುಂದುವರಿಸಿದ್ದರು. ಸೌಜನ್ಯಯುತ ಬರ ಮಾಡಿಕೊಳ್ಳುವಿಕೆ ಅಂಬೇಡ್ಕರ್ ಅವರಿಗೆ ಲಭಿಸಿರಲಿಲ್ಲ. ಗಾಂಧಿ ಅವರ ಅನಾಸಕ್ತಿ ಇನ್ನೂ ಹೆಚ್ಚಾದಂತೆನಿಸಿ ಕಡು ಸ್ವಾಭಿಮಾನಿಯಾದ ಡಾ: ಅಂಬೇಡ್ಕರ್ ಎದ್ದು ಹೊರನಡೆದರು. ಇದೇ ವಿಷಯಕ್ಕೆ ಜಗಳವಾದರೂ ಅಚ್ಚರಿಯಿಲ್ಲ ಎಂದು ಸಹಚರರು ಯೋಚಿಸುವಷ್ಟರಲ್ಲಿ ಗಾಂಧಿ ಅವರು ಡಾ:ಅಂಬೇಡ್ಕರ್ ಕಡೆಗೆ ಮೊದಲ ಬಾರಿ ತಿರುಗಿ ನೋಡಿ ಎದ್ದು ಬಂದು ಮಾತನಾಡಿಸಿದರು. ಚುಟುಕು ಕುಶಲೋಪರಿಯೊಂದಿಗೆ ಒಳ್ಳೆಯದು ಡಾ: ಅಂಬೇಡ್ಕರ್ ವಿಷಯದ ಬಗ್ಗೆ ನೀವೂ ಏನು ಹೇಳಲಿದ್ದೀರಿ ಎಂದಾಗ ನಿಮ್ಮ ಅಭಿಪ್ರಾಯವನ್ನಾಲಿಸಲು ನನ್ನನ್ನು ಕರೆದಿದ್ದೀರಿ. ನೀವು ಹೇಳಬೇಕಾದದ್ದನ್ನು ಹೇಳಿ ಅಥವಾ ಏನಾದರೂ ಪ್ರಶ್ನೆಯನ್ನು ಕೇಳಿ ಉತ್ತರಿಸುವೆನು ಎಂದರು ಅಂಬೇಡ್ಕರ್.

ನನ್ನ ಶಾಲೆಯ ದಿನಗಳಲ್ಲಿ ನೀವಿನ್ನೂ ಹುಟ್ಟಿರಲಿಲ್ಲ. ಅಂದಿನಿಂದ ನಾನು ಅಸ್ಪೃಶ್ಯರ ಸಮಸ್ಯೆಯ ಕುರಿತು ಯೋಚಿಸುತ್ತಿದ್ದೇನೆ. ಕಾಂಗ್ರೆಸ್ಸಿನ ಕಾರ್ಯಕ್ರಮಗಳಲ್ಲಿ ಇದನ್ನು ಅಳವಡಿಸಲು ನಾನು ಮಾಡಿರುವ ಪ್ರಯತ್ನ ಪ್ರಾಯಶ: ನಿಮಗೆ ಗೊತ್ತಿರಬಹುದು. ಆದರೂ ನೀವು ಕಾಂಗ್ರೆಸ್ ಮತ್ತು ನನ್ನನ್ನು ವಿರೋಧಿಸುವುದೇಕೆ ಎಂದು ಗಾಂಧಿ ಪ್ರಶ್ನೆಯನ್ನಿತ್ತರು. ಅದಕ್ಕೆ ಉತ್ತರಿಸಿದ ಅಂಬೇಡ್ಕರ್ ಮಹಾತ್ಮಾಜಿ ಎಲ್ಲ ವೃದ್ಧ ಮತ್ತು ಹಿರಿಯ ವ್ಯಕ್ತಿಗಳು ತಮ್ಮ ವಯಸ್ಸಿನ ಕುರಿತು ಒತ್ತಿ ಹೇಳುವುದು ಸಹಜ. ದಲಿತರ ಉದ್ಧಾರಕ್ಕಾಗಿ ಕಾಂಗ್ರೆಸ್ಸು 20 ಲಕ್ಷಕ್ಕಿಂತ ಹೆಚ್ಚಿನ ಹಣವನ್ನು ಖರ್ಚು ಮಾಡಿದೆಯೆಂದು ಹೇಳುತ್ತಿದ್ದೀರಿ. ಅದೆಲ್ಲವೂ ವ್ಯರ್ಥವೆಂದು ಹೇಳುತ್ತೇನೆ. ಅಸ್ಪೃಶ್ಯರ ಬಗ್ಗೆ ಶುದ್ಧ ಭಾವವಿದ್ದಲ್ಲಿ ಕಾಂಗ್ರೆಸ್ ಸದಸ್ಯನಾಗಲು ಖಾದಿಯನ್ನು ಧರಿಸುವುದನ್ನು ಹೇಗೆ ಕಡ್ಡಾಯ ಮಾಡಲಾಗಿದೆಯೋ ಹಾಗೆಯೆ ಅಸ್ಪೃಶ್ಯತೆ ನಿವಾರಣೆಯನ್ನು ಒಂದು ಷರತ್ತಾಗಿ ಮಾಡಬಹುದಾಗಿತ್ತು.

ಅಂಥ ಒಂದು ಷರತ್ತು ಇದ್ದಿದ್ದರೆ ಅಸ್ಪೃಶ್ಯರ ದೇವಸ್ಥಾನದ ಪ್ರವೇಶವನ್ನು ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರು ವಿರೋಧಿಸುವಂತಹ ನಗೆಗೇಡು ಪ್ರಸಂಗವನ್ನು ನೀವು ತಪ್ಪಿಸಬಹುದಾಗಿತ್ತು. ಮಹಾತ್ಮರು ಮರೆಯಾಗುವ ಭೂತಗಳಂತೆ ಧೂಳನ್ನು ಎಬ್ಬಿಸುತ್ತಾರೆಯೆ ಹೊರತು ಮಟ್ಟವನ್ನು

ಎತ್ತರಿಸುವುದಿಲ್ಲವೆಂದು ಇತಿಹಾಸವು ಹೇಳುತ್ತದೆ. ಕಾಂಗ್ರೆಸ್ ಅಸ್ಪೃಶ್ಯರ ಚಳುವಳಿಯನ್ನೇಕೆ ವಿರೋಧಿಸಬೇಕು ಮತ್ತು ನನ್ನನ್ನು ದೇಶದ್ರೋಹಿ ಎಂದೇಕೆ ಕರೆಯಬೇಕು. ಇದು ಅಂದಿನ ಕಾಂಗ್ರೆಸಿನ ಪ್ರಶ್ನಾತೀತ ನಾಯಕ ಹಾಗೂ ನಿಮ್ಮ ವರ್ಗದ ಮೇರು ವ್ಯಕ್ತಿತ್ವದ ಎರಡು ಮಹಾನ್ ಶಕ್ತಿಗಳ ಮೊದಲ ಭೇಟಿಯ ಪ್ರಸಂಗ ಇದಾಗಿತ್ತು. ಆ ದಿನಗಳಲ್ಲಿ ಗಾಂಧಿ ಅವರಿಗೆ ಎದುರು ಮಾತನಾಡುವುದು, ಅವರೊಂದಿಗೆ ಕಹಿಯನ್ನು ಸೃಷ್ಟಿಸಿಕೊಳ್ಳುವುದು ಸ್ವತ: ಗಾಂಧಿ ಅವರ ಕಲ್ಪನೆಗೂ ಮೀರಿದುದಾಗಿತ್ತು. ಆದರೆ ಆಗಲೆ ದಾಳವನ್ನು ಉರುಳಿಸಿಯಾಗಿತ್ತು.

ಎರಡನೇಯ ದುಂಡುಮೇಜಿನ ಸಭೆಯಲ್ಲಿ ಗಾಂಧಿ ಅವರು ಭಾಗವಹಿಸಿದ್ದರು. ಅಂಬೇಡ್ಕರ್ ಮೂರು ಸಭೆಗಳಲ್ಲಿ ಭಾಗವಹಿಸಿ ನಿಮ್ಮ ವರ್ಗದ ಏಳಿಗೆಗಾಗಿ ಬ್ರಿಟಿಷ್ ಸರ್ಕಾರ ಕೈಗೊಳ್ಳಬೇಕಾದ ಅನಿವಾರ್ಯತೆಗಳನ್ನು ಅಷ್ಟೇ ಪ್ರಬುದ್ಧವಾಗಿ ಮಂಡಿಸಿದ್ದರು. ಲಂಡನ್‌ನಲ್ಲಿ ಬ್ರಿಟಿಷ್ ಪ್ರಧಾನಿ ರ‍್ಯಾ ಸೆ ಮೆಕ್ ಡೊನಾಲ್ಡ್ ಹಾಗೂ ಮಂತ್ರಿ ಮಂಡಳವನ್ನು ಭೇಟಿ ಮಾಡಿ 22 ಪುಟಗಳ ಜ್ಞಾಪನಾ ಪತ್ರವನ್ನು ಸಲ್ಲಿಸಿದ್ದರು. ಅಂಬೇಡ್ಕರ್ ಪ್ರತಿಪಾದಿಸಿದ್ದ, ದಲಿತರಿಗೆ ಎರಡು ವೋಟುಗಳ ಅವಕಾಶವನ್ನು ನೀಡಿ ಬ್ರಿಟನ್ ಸಂಸತ್ತು ಆದೇಶವನ್ನು ಹೊರಡಿಸಿತು. ಇದನ್ನು ವಿರೋಧಿಸಿದ ಗಾಂಧಿ ಅವರು 1932 ಸೆಪ್ಟೆಂಬರ್ 22 ರಿಂದ ಯರವಾಡ ಜೈಲಿನಲ್ಲಿ ಆಮರಣಾಂತರ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸಿದರು. ಮರುದಿನ ಅಂಬೇಡ್ಕರ್ ಅವರು ಮದನಗೋಪಾಲ ಮಾಳವೀಯ ಎಂ.ಆರ್. ಜಯಕರ್ ಸಿ. ರಾಜಗೋಪಾಲಚಾರಿಯವರೊಂದಿಗೆ ಯರವಾಡ ಜೈಲಿನಲ್ಲಿ ಗಾಂಧಿ ಅವರನ್ನು ಭೇಟಿ ಮಾಡಿ ನಿಮ್ಮ ವರ್ಗದ ಉದ್ಧಾರಕ್ಕಾಗಿ ಉಪವಾಸವನ್ನು ಕೈಬಿಡಿ ಎಂದು ವಿನಂತಿಸಿಕೊಂಡರು. ಗಾಂಧಿ ಹಿಂದೆ ಸರಿಯಲಿಲ್ಲ. ಗಾಂಧಿ ಅವರ ಪ್ರಾಣಕ್ಕೆ ತೊಂದರೆಯಾದರೆ ದಲಿತರನ್ನು ಸುಟ್ಟುಹಾಕುವುದಾಗಿ ಜಾತಿವಾದಿಗಳು ಬೆದರಿಕೆಯನ್ನು ಹಾಕಲಾರಂಭಿಸಿದರು. ಗಾಂಧಿ ಅವರ ಪ್ರಾಣಕ್ಕಿಂತಲೂ ಅಸ್ಪೃಶ್ಯರ ಏಳಿಗೆ ಮುಖ್ಯವಾದದ್ದು ಎಂದು ಅಂಬೇಡ್ಕರ್‌ರವರು ವಾದಿಸಿದರು. ಗಾಂಧಿ ಅವರ ಪ್ರಾಣವನ್ನುಳಿಸುವುದಕ್ಕಾಗಿ ಅನಿವಾರ್ಯವಾಗಿ ಒಪ್ಪಂದಕ್ಕೆ ಸಹಿ ಹಾಕಬೇಕಾಯಿತು. ಗಾಂಧಿ ಮತ್ತು ಅಂಬೇಡ್ಕರ್ ನಡುವಿನ ಪೂನಾ ಒಪ್ಪಂದವನ್ನು ಬ್ರಿಟಿಷ್ ಆಡಳಿತ ಅಂಗೀಕರಿಸಿತು.

ಬಾಲ್ಯದಿಂದಲೂ ಸಾಮಾಜಿಕ ಶೋಷಣೆಯನ್ನು ಅನುಭವಿಸುತ್ತ ಬಡತನ ಹಾಗೂ ತೀವ್ರ ಆರ್ಥಿಕ ಮುಗ್ಗಟ್ಟಿನ ನಡುವೆ ಅಮೆರಿಕದ ಕೊಲೊಂಬಿಯಾ ವಿಶ್ವವಿದ್ಯಾಲಯ, ಲಂಡನ್‌ನ ಸ್ಕೂಲ್ ಆಫ್ ಎಕನಾಮಿಕ್ಸ್ ಹಾಗೂ ಜರ್ಮನಿಯ ಬಾನ್ ವಿಶ್ವವಿದ್ಯಾಲಯಗಳಿಂದ ಪದವಿಯನ್ನು ಗಳಿಸಿ ಭಾರತಕ್ಕೆ ಬಂದಾಗ ಅಸ್ಪೃಶ್ಯತೆಯ ನೆರಳಿನಿಂದ ತಪ್ಪಿಸಿಕೊಳ್ಳಲಾಗಲಿಲ್ಲ. ಮಹಾನ್ ಮೇಧಾವಿಗೆ ಸಿಪಾಯಿಯೊಬ್ಬ ಕುಡಿಯುವ ನೀರಿನ ಲೋಟವನ್ನು ಸ್ಪರ್ಶಿಸಲು ಅವಕಾಶ ನೀಡುತ್ತಿರಲಿಲ್ಲ. ಸುಖ ಜೀವನದತ್ತ ಅಂಬೇಡ್ಕರ್ ಮನಸ್ಸು ವಾಲಿದ್ದರೆ ವಿದೇಶಕ್ಕೆ ಮರಳಿ ಐಷಾರಾಮಿ ಜೀವನವನ್ನು ನಡೆಸಬಹುದಾಗಿತ್ತು. 1925ರಲ್ಲಿ ಕೊಲ್ಲಾಪೂರ ಸಂಸ್ಥಾನಕ್ಕೆ ದಿವಾನರಾಗಲು ಆಹ್ವಾನ ಬಂದರು ಅಂಬೇಡ್ಕರ್ ಅದನ್ನು ನಿರಾಕರಿಸಿದರು. ಸಾಮಾಜಿಕ ಸಂಘರ್ಷಕ್ಕೆ ತಮ್ಮನ್ನು ಒಡ್ಡಿಕೊಳ್ಳುವುದರ ಮೂಲಕ ಚೌಡರ ಕೆರೆ ನೀರನ್ನು ಮುಟ್ಟುವ ಮಾನವೀಯ ಚಳುವಳಿಯನ್ನು ಪ್ರಾರಂಭಿಸಿದರು ನಾಸಿಕ್‌ದ ಕಾಳಿರಾಮ ದೇವಾಲಯ ಪ್ರವೇಶಕ್ಕಾಗಿ ಚಳುವಳಿಯನ್ನು ಪ್ರಾರಂಭಿಸಿದರು. ಮುಂಬೈನ ಶಾಸನ ಸಭೆಯಲ್ಲಿ ದೇಶದಲ್ಲಿ ತಾಯಂದಿರಿಗೆ ತಾಯಿತನದ ನಿರ್ದಿಷ್ಟದ ಅವಧಿಯಲ್ಲಿ ವಿಶ್ರಾಂತಿ ದೊರೆಯಬೇಕೆಂದು ಪ್ರತಿಪಾದಿಸಿ ಸ್ತ್ರೀಯರಿಗೆ ಹೆರಿಗೆ ರಜೆಯ ನೀಡಬೇಕೆಂದು ಒತ್ತಾಯಿಸಿದ್ದರ ಫಲವಾಗಿ ಇಂದು ಹೆರಿಗೆ ರಜೆಯು ಕಾನೂನಾಗಿದೆ. ತನ್ನನ್ನು ಸುಟ್ಟುಕೊಳ್ಳುವುದರ ಮೂಲಕ ಮಾನವತೆಗೆ ಬೆಳಕು ನೀಡಿದ ಅಂಬೇಡ್ಕರ್ ಈ ಯುಗದ ಶ್ರೇಷ್ಠ ದಾರ್ಶನಿಕ.

ಲೇಖಕರು. ಪಿ. ರಾಜೀವ್,
ಕುಡುಚಿ ಮತಕ್ಷೇತ್ರದ ಶಾಸಕರು,
ಬೆಳಗಾವಿ ಜಿಲ್ಲೆ.
ಆಧಾರ:ವಿಜಯ ಕರ್ನಾಟಕ, ದಿನಾಂಕ:14.04.2022.

## 3. ಕರಗುತ್ತಿದೆ ಪಶ್ಚಿಮ ಘಟ್ಟ

ಇಂದು ಭೂ ದಿನ ನಮ್ಮನ್ನು ಪೊರೆಯುತ್ತಿರುವ ಈ ಭೂಮಿಯ ಸಂರಕ್ಷಣೆಯು ಪ್ರತಿಯೊಬ್ಬರ ಹೊಣೆ. ಆದರೆ, ಈ ಜವಾಬ್ದಾರಿಯನ್ನು ಮರೆತಿದ್ದೇವೆ. ಅರಣ್ಯ, ಜೀವಜಲ, ಪ್ರಾಣವಾಯು ಎಲ್ಲವನ್ನು ಕಲುಷಿತಗೊಳಿಸುತ್ತಿದ್ದೇವೆ. ಪರಿಸರ ಮಾಲಿನ್ಯವನ್ನು ಹೀಗೆಯೇ ಮುಂದುವರಿಸಿದರೆ ಬಹುಶಃ ನಮ್ಮ ಮುಂದಿನ ಪೀಳಿಗೆಗೆ ನಾವು ವಿಷದ ಭೂಮಿಯನ್ನು ಕೊಡಬೇಕಾಗುತ್ತದೆ. ಹಾಗಾಗಿ, ಕನಿಷ್ಠ ಈ 'ಭೂ ದಿನ' ದಂದಾದರೂ ಭೂ ರಕ್ಷಣೆ ಬಗ್ಗೆ ಚಿಂತಿಸಿ, ಕಾರ್ಯೋನ್ಮುಖರಾಗುವ ಅಗತ್ಯವಿದೆಯಲ್ಲವೇ?

ರಾಜ್ಯಾದ್ಯಂತ ಭೂಪರಿವರ್ತನೆ ಗಣನೀಯ ಏರಿಕೆ ಕಾಣುತ್ತಿದ್ದು, ವಾತಾವರಣದ ಮೇಲೆ ಹಿಂದೆಂದಿಗಿಂತಲೂ ಗಂಭೀರ ಪರಿಣಾಮ ಬೀರಲಿದೆ ಎಂದು ಭಾರತೀಯ ವಿಜ್ಞಾನ ಸಂಸ್ಥೆ ಆತಂಕ ವ್ಯಕ್ತಪಡಿಸಿದೆ. ರಾಜ್ಯದ ಪಶ್ಚಿಮಘಟ್ಟದ ಮೂಲ ಪ್ರದೇಶದಲ್ಲಿ 1973 ರಲ್ಲಿ ಶೇ.74.19ರಷ್ಟಿದ್ದ ಅರಣ್ಯ 2018ರ ವೇಳೆಗೆ ಶೇ.48.14 ರಷ್ಟು ಕುಸಿತ ಕಂಡಿದೆ. ಭೂಪರಿವರ್ತನೆ, ಅರಣ್ಯ ಕೈಗಾರಿಕೆ, ನೀರಾವರಿ ಯೋಜನೆಗಳು, ನದಿ ಸ್ವರೂಪಗಳ ಬದಲು ಸೇರಿದಂತೆ ನಾನಾ ಯೋಜನೆಗಳ ಪರಿಣಾಮವಾಗಿ ವಾತಾವರಣ ನಿರೀಕ್ಷೆ ಮೀರಿ ಬದಲಾವಣೆ ಕಾಣುತ್ತಿದ್ದು, ಸಾವು ನೋವಿಗೆ ಕಾರಣವಾಗುತ್ತಿದೆ. ಈ ಪ್ರಮಾಣ ಮುಂಬರುವ ವರ್ಷಗಳಲ್ಲಿ ತೀವ್ರಗತಿಯಲ್ಲಿ ಏರಿಕೆ ಕಾಣಲಿದ್ದು, ಸರ್ಕಾರ ದಟ್ಟಾರಣ್ಯ ಹೆಚ್ಚಿಸಲು, ಸಹಜತೆ ಕಾಪಾಡಲು ಅಗತ್ಯ ಮಾರ್ಗೋಪಾಯಗಳನ್ನು ಕಂಡುಕೊಳ್ಳಬೇಕೆಂದು ವೈಜ್ಞಾನಿಕ ಲೋಕ ಸೂಚಿಸುತ್ತಿದೆ.

ಪಶ್ಚಿಮಘಟ್ಟ ಪ್ರದೇಶದಲ್ಲಿನ ನಿತ್ಯ ಹರಿದ್ವರ್ಣ ಕಾಡುಗಳ ಪ್ರಮಾಣದಲ್ಲಿ ಶೇ.50ರಷ್ಟು ಇಳಿಕೆ ಕಂಡುಬಂದಿದ್ದು, ಬಹುತೇಕ ಪ್ರದೇಶ ಕೃಷಿಗೆ ಭೂಪರಿವರ್ತನೆ ಹೊಂದುತ್ತಿದೆ. 1973ರಲ್ಲಿ ಶೇ.56.06ರಷ್ಟಿದ್ದ ನಿತ್ಯ ಹರಿದ್ವರ್ಣ ಅರಣ್ಯ ಪ್ರಮಾಣ 2018ರ ವೇಳೆಗೆ ಶೇ.24.85ಕ್ಕೆ ಕುಸಿತ ಕಂಡಿದೆ. ಜೊತೆಗೆ, ರಾಜ್ಯ ಮಾತ್ರವಲ್ಲದೆ ಕೇರಳ, ತಮಿಳುನಾಡು ವಾತಾವರಣದ ಮೇಲೆ ಪರಿಣಾಮ ಬೀರುವ ಕೊಡಗು ಅರಣ್ಯ ಪ್ರದೇಶದಲ್ಲೂ ಗಣನೀಯ ಇಳಿಕೆ ಕಂಡುಬಂದಿದೆ.

2010ರಲ್ಲಿ ಶೇ.53.17ರಷ್ಟಿದ್ದ ಅರಣ್ಯ ಪ್ರದೇಶ 2018ರ ವೇಳೆಗೆ ಶೇ.50.28ಕ್ಕೆ ಇಳಿಕೆ ಕಂಡಿದೆ. 2026ರ ವೇಳೆಗೆ ಈ ಪ್ರಮಾಣ ಶೇ.42.63ಕ್ಕೆ ಇಳಿಕೆಯಾಗಲಿದೆ. ಅರಣ್ಯ ಪ್ರದೇಶದಲ್ಲಿ ಪ್ಲಾಂಟೇಶನ್ ಪ್ರಮಾಣ ಶೇ.1.99ರಿಂದ 2026ರ ವೇಳೆಗೆ 2.31ಕ್ಕೆ ಏರಿಕೆ ಕಾಣಲಿದೆ. ಇದರೊಂದಿಗೆ ಮುಖ್ಯವಾಗಿ ತೋಟಗಾರಿಕೆ, ಕೃಷಿ, ಅರಣ್ಯ ಕೈಗಾರಿಕೆಗಳ ಪ್ರಮಾಣ ಈ ಪ್ರದೇಶದಲ್ಲಿ ಗಣನೀಯ ಏರಿಕೆ ಕಾಣಲಿದ್ದು, ಕೊಡಗು ಪ್ರದೇಶದಲ್ಲಿ ಪ್ರವಾಹ, ಭೂಕುಸಿತಗಳು ಹೆಚ್ಚಲಿವೆ. ಭೂಮಿಯ ಸಹಜತೆಯನ್ನು ಕಾಪಾಡದಿದ್ದರೆ ದೊಡ್ಡ ಪ್ರಮಾಣದ ಅಪಾಯವನ್ನು ರಾಜ್ಯ ಎದುರಿಸಬೇಕಾಗುತ್ತದೆ ಎಂದು ಭಾರತೀಯ ವಿಜ್ಞಾನ ಸಂಸ್ಥೆ ಎಚ್ಚರಿಸಿದೆ.

**ಭೂಮಿ ಮೇಲೆ ಹೂಡಿಕೆ ಮಾಡಿ:** 'ಇನ್ವೆಸ್ಟ್ ಇನ್ ಯುವರ್ ಪ್ಲಾನೆಟ್' (ನಿಮ್ಮ ಭೂಮಿ ಮೇಲೆ ಹೂಡಿಕೆ ಮಾಡಿ) ಎಂಬುದು 2022ರ ಭೂ ದಿನದ ಥೀಮ್. ಹಾಗೆಯೇ, ಐದು ಪ್ರಾಥಮಿಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ: ಬೃಹತ್ ಜಾಗತಿಕ ಸ್ವಚ್ಛತೆ, ಹವಾಮಾನ ಮತ್ತು ಪರಿಸರ ಸಾಕ್ಷರತೆ, ಕ್ಯನಪಿ ಪ್ರಾಜೆಕ್ಟ್, ಆಹಾರ ಮತ್ತು ಪರಿಸರ, ಜಾಗತಿಕ ಭೂ ಸವಾಲುಗಳು.

**ರಾಜ್ಯದಲ್ಲಿ ಅರಣ್ಯ ಹೆಚ್ಚಳ:** 2019ರ ಭಾರತೀಯ ಅರಣ್ಯ ಸ್ಥಿತಿಗತಿ ವರದಿ ಪ್ರಕಾರ 2017 ರಿಂದ 2019ರ ನಡುವೆ ದೇಶದಲ್ಲೇ ಅತಿಹೆಚ್ಚು ಅರಣ್ಯ ವಿಸ್ತರಣೆ ಹೊಂದಿದ ಪ್ರದೇಶವೆಂದು ರಾಜ್ಯ ಗುರುತಿಸಲ್ಪಟ್ಟಿದೆ. ಕರ್ನಾಟಕ 1025 ಚ.ಕಿ.ಮೀ, ಆಂಧ್ರ 990 ಚ.ಕಿ.ಮೀ, ಕೇರಳ 823 ಚ.ಕಿ.ಮೀ, ಅರಣ್ಯ ವಿಸ್ತರಣೆ ಕಂಡಿದೆ. ಆದರೆ, ಈ ವರದಿಯಲ್ಲಿ ನಿಜಕ್ಕೂ ವಿಸ್ತರಣೆ ಹೊಂದಿದ ಪ್ರದೇಶದ ಕುರಿತ ಪರಿಸರವಾದಿಗಳು ಆಕ್ಷೇಪ ವ್ಯಕ್ತಪಡಿಸುತ್ತಿದ್ದಾರೆ. ಫಾರಸ್ಟ್ ಸರ್ವೇ ಆಫ್ ಇಂಡಿಯಾ ಪ್ರಕಾರ ಹೆಕ್ಟೇರ್‌ಗಿಂತ ಹೆಚ್ಚಿನ ಪ್ರದೇಶದಲ್ಲಿ ಕಾಫಿ, ರಬ್ಬರ್, ತೆಂಗು ರೀತಿಯ ತೋಟಗಾರಿಕಾ ಬೆಳೆಯಿದ್ದರೆ ಅಂತಹ ಪ್ರದೇಶವನ್ನು ಅರಣ್ಯವೆಂದು ಪರಿಗಣಿಸಲಾಗುತ್ತದೆ. ಉಳಿದಂತೆ ಮರಗಳಿಂದ ಕೂಡಿದ್ದರೆ ಈ ಪ್ರದೇಶವನ್ನು ಮರಗಳ ದಟ್ಟಣೆಯಿಂದ ಕೂಡಿದ ಪ್ರದೇಶವೆಂದೂ ಕರೆಯಲಾಗುತ್ತದೆ. ಈ ಪ್ರಕಾರವಾಗಿ ಸಹಜ ಅರಣ್ಯ

ಪ್ರದೇಶವನ್ನು ಭೂಪರಿವರ್ತನೆ ಮಾಡಿ ತೋಟಗಾರಿಕಾ ಬೆಳಗಳಿಗೆ ಪ್ರೋತ್ಸಾಹ ನೀಡುವ ಮೂಲಕ ಮೂಲ ಅರಣ್ಯಕ್ಕೆ ಧಕ್ಕೆ ಮಾಡುವ ಪ್ರಕ್ರಿಯೆಗಳು ನಿರಂತರವಾಗಿ ನಡೆಯುತ್ತಿದ್ದು ಸರ್ಕಾರ ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ ಎಂದು ಪರಿಸರ ಹೋರಾಟಗಾರರು ಒತ್ತಾಯಿಸಿದ್ದಾರೆ.

**ಯಾಕೆ ಭೂ ದಿನ ಆಚರಣೆ:** ಪ್ರತಿ ವರ್ಷವೂ ಏಪ್ರಿಲ್ 22 ರಂದು 'ಭೂ ದಿನ' ಆಚರಿಸಲಾಗುತ್ತಿದೆ. ವಿಶ್ವದ ಎಲ್ಲಾ ಜನರ ಗಮನವನ್ನೂ ಒಂದೆಡೆ ಸೆಳೆದು ಭೂಮಿಯ ಪ್ರಾಮುಖ್ಯತೆ ಏನು? ಅದನ್ನು ಕಾಪಾಡುವಲ್ಲಿ ನಮ್ಮ ಹೊಣೆಗಾರಿಕೆ ಏನು? ನಮ್ಮ ಮುಂದಿನ ಪೀಳಿಗೆಗೆ ಭೂಮಿಯನ್ನು ಸುರಕ್ಷಿತವಾಗಿ ಉಳಿಸಲು ಏನು ಮಾಡಬೇಕು? ಎಂಬಿತ್ಯಾದಿ ವಿಚಾರಗಳನ್ನು ಈ ದಿನಾಚರಣೆಯ ಮುಖೇನ ಮುನ್ನೆಲೆಗೆ ತಂದು ನೆನಪಿಸಲಾಗುತ್ತದೆ. 1990ರ ಹೊತ್ತಿನಲ್ಲಿ ಒಂದು ಪರಿಸರ ಆಂದೋಲನವಾಗಿ ರೂಪುಗೊಂಡ ಭೂ ದಿನಾಚಾರಣೆಯನ್ನು ಇಂದು ಬಹುತೇಕ ರಾಷ್ಟ್ರಗಳಲ್ಲಿ ಪರಿಸರ ಪರ ಚಿಂತನೆಯನ್ನು ಬಿತ್ತುವ ಕಾರ್ಯಕ್ರಮವನ್ನಾಗಿ ಆಚರಿಸಲಾಗುತ್ತಿದೆ. ವಿಶ್ವ ಭೂ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲು ಸರಳ ವಿಧಾನಗಳಿವೆ. ಹಲವು ವರ್ಷಗಳ ಕಾಲ ಭೂ ದಿನವನ್ನು ಅಮೆರಿಕದಲ್ಲಿ ಮಾತ್ರ ಆಚರಿಸಲಾಗುತ್ತಿತ್ತು. 90ರ ದಶಕದ ನಂತರ ವಿಶ್ವದ ಉಳಿದ ರಾಷ್ಟ್ರಗಳು ಭೂಮಿಯ ಮಹತ್ವವನ್ನು ಸಾರುತ್ತಾ, ಜನಜಾಗೃತಿ ಮಾಡಲು ಮುಂದಾಗಿವೆ. ವಿಶ್ವ ಭೂ ದಿನಾಚರಣೆ ಎನ್ನುವುದು ಯಾವುದೋ ಒಂದು ಸಂಸ್ಥೆಗೆ ಮೀಸಲಾದ ದಿನಾಚರಣೆಯಲ್ಲ. ಈ ಭೂಮಿಯನ್ನು ಹಾಳುಗೆಡವಲು ಪ್ರತ್ಯಕ್ಷ ಅಥವಾ ಪರೋಕ್ಷ ಕಾರಣವಾಗಿರುವ ಪ್ರತಿ ಮನುಷ್ಯನೂ ಇದರ ಮಹತ್ವವನ್ನು ಅರಿತು ತನ್ನನ್ನು ತಾನು ತಿದ್ದಿಕೊಂಡು ಮುನ್ನಡೆಯಲು ಈ ದಿನಾಚರಣೆ ಒಂದು ಮಾರ್ಗವಾಗಿದೆ.

**ಏನಾಗಿದೆ:**

- 5 ದಶಕದಲ್ಲಿ ಶೇ.50 ಪಶ್ಚಿಮಘಟ್ಟ ನಿತ್ಯಹರಿದ್ವರ್ಣ ಕಾಡು ಭೂಪರಿವರ್ತನೆ.
- ಕಾಡು ಕಣ್ಮರೆಯಿಂದ ದಕ್ಷಿಣ ಭಾರತದ ರಾಜ್ಯಗಳಿಗೆ ಹೆಚ್ಚು ಆಪತ್ತು: ಐಐಎಸ್‌ಸಿ.

**ಪಶ್ಚಿಮಘಟ್ಟ ಬದಲಾಗಲು ಐಐಎಸ್‌ಸಿ ನೀಡಿದ ಕಾರಣಗಳು:**

- ಸಹಜ ನದಿ ಸ್ವರೂಪಕ್ಕೆ ಅಣೆಕಟ್ಟು ನಿರ್ಮಾಣ.
- ಅರಣ್ಯ ಇಲಾಖೆಯಿಂದ ಟೀಕ್, ನೀಲಗಿರಿ, ಅಕೇಶಿಯಾ ಮಾದರಿಯ ಏಕರೂಪದ ಪ್ಲಾಂಟೇಶನ್ ಏರಿಕೆ.
- ಅರಣ್ಯವನ್ನು ಕೃಷಿ, ತೋಟಗಾರಿಕೆ, ಖಾಸಗಿ ಅಭಿವೃದ್ಧಿಗೆ ನಿರಂತರ ಭೂಪರಿವರ್ತನೆ ಏರಿಕೆ.
- ಅರಣ್ಯ ಕೈಗಾರಿಕೆಗಳ ಸ್ಥಾಪನೆಗೆ ಹೆಚ್ಚಿನ ಪ್ರೋತ್ಸಾಹ.
- ನಿತ್ಯ ಹರಿದ್ವರ್ಣ ಅರಣ್ಯ ಪ್ರದೇಶಗಳ ವ್ಯಾಪ್ತಿಯಲ್ಲಿ ಕೈಗಾದಂಥ ಯೋಜನೆಗಳ ಸ್ಥಾಪನೆ.
- ಹೋಂ ಸ್ಟೇ, ರೆಸಾರ್ಟ್ ನಿರ್ಮಾಣ ಸೇರಿದಂತೆ ಅಭಿವೃದ್ಧಿಗೆ ಅರಣ್ಯ ನಾಶ.

**ಏನೇನು ಪರಿಣಾಮ:**

- ಕಳೆದ 4 ವರ್ಷಗಳಲ್ಲಿ ಪ್ರವಾಹ, ಭೂಕುಸಿತ ಹೆಚ್ಚಳ
- ವಾರ್ಷಿಕ ಮಳೆಯಲ್ಲಿ ಏರಿಳಿತ ಸಾಮಾನ್ಯ
- ಅತಿವೃಷ್ಟಿ, ಅನಾವೃಷ್ಟಿ, ಉಷ್ಣಾಂಶ ಏರಿಕೆ

**ಪರಿಹಾರೋಪಾಯಗಳು:**

- ಪಶ್ಚಿಮಘಟ್ಟ ಸೇರಿದಂತೆ ರಾಜ್ಯದ ಅರಣ್ಯ ಪ್ರದೇಶವನ್ನು ಸಹಜವಾಗಿಡಬೇಕು.

- ಈವರೆಗೆ ನಡೆದ ಅಭಿವೃದ್ಧಿಗೆ ಪರ್ಯಾಯವಾಗಿ ಅರಣ್ಯ ಸೃಜನೆಗೆ ಯೋಜನೆ ರೂಪಿಸಬೇಕು.
- ನದಿಗಳಿಗೆ ಡ್ಯಾಂ ನಿರ್ಮಾಣದಂತಹ ಯೋಜನೆಗಳಿಗೆ ವೈಜ್ಞಾನಿಕ ಸಲಹೆ ಪಾಲಿಸಬೇಕು.

**ಭೂ ರಕ್ಷಣೆ ನಮ್ಮ ಹೊಣೆ:**

- ಸಾಧ್ಯವಿರುವೆಡೆ ನಾವೆಲ್ಲ ಮರಗಳನ್ನು ಬೆಳೆಸಬೇಕು. ಆ ಮೂಲಕ ಪ್ರೀತಿ, ಸಮೃದ್ಧಿ, ಸೌಹಾರ್ದತೆಯನ್ನು ಪಸರಿಸಬೇಕು.
- ನೈಸರ್ಗಿಕ ಸಂಪನ್ಮೂಲಗಳ ರಕ್ಷಣೆಗೆ ಕಂಕಣ ಬದ್ಧರಾಗಬೇಕು. ಅವುಗಳ ಅವನತಿಯನ್ನು ತಡೆಯಲು ಪ್ರತಿಜ್ಞೆ ಮಾಡೋಣ.
- ನಮ್ಮ ಸುತ್ತಮುತ್ತಲಿನ ಪರಿಸರವನ್ನು ಹಸಿರೀಕರಣ ಮಾಡಲು ಪ್ರಯತ್ನಿಸಬೇಕು, ಈ ನೆಲವನ್ನು ಪ್ರೀತಿಸಬೇಕು.
- ಆರೋಗ್ಯಕರ ಭೂಮಿಯನ್ನು ನಮ್ಮ ಮುಂದಿನ ಪೀಳಿಗೆಗೆ ಹಸ್ತಾಂತರಿಸುವ ಜವಾಬ್ದಾರಿ ನಮ್ಮದು ಎಂಬುದನ್ನು ಮರೆಯಬಾರದು.
- ಪ್ರತಿ ವರ್ಷ ಪ್ರತಿಯೊಬ್ಬರೂ ಒಂದು ಗಿಡ ನೆಡೋಣ. ಹಸಿರು ಹೆಚ್ಚಿಸೋಣ.
- ಪರಿಸರ ಸಂರಕ್ಷಣೆಗೆ ಬೇರೆ ಯಾರಿಗೋ ಕಾಯುವುದು ಬೇಡ. ಆ ಕೆಲಸ ನಮ್ಮಿಂದಲೇ ಶುರುವಾಗಲಿ.
- ಭೂಮಿಯೂ ಇಂದು ಜೀವಿ ಎಂದು ತಿಳಿದು ಪ್ರೀತಿಸಿ ಮತ್ತು ಗೌರವಿಸಿ.
- ಭೂಮಿ ಮನುಷ್ಯನ ಆಸೆಗಳನ್ನು ಪೂರೈಸಬಲ್ಲದೇ ಹೊರತು ದುರಾಸೆಗಳನ್ನಲ್ಲ ಎಂಬ ಮಾತು ನೆನಪಿರಲಿ.
- ನಮ್ಮ ಹಿರಿಯರಿಂದ ಭೂಮಿಯನ್ನು ಬಳುವಳಿಯಾಗಿ ಪಡೆದಿಲ್ಲ. ನಮ್ಮ ಮಕ್ಕಳಿಗಾಗಿ ಸಾಲ ಪಡೆದಿದ್ದೇವೆ ಎಂದು ತಿಳಿಯಿರಿ.

ಆಧಾರ: ವಿಜಯ ಕರ್ನಾಟಕ, ದಿನಾಂಕ:22.04.2022.

## 4. ಪರೀಕ್ಷೆಯಲ್ಲಿ ಅಕ್ರಮಗಳು ಯಾಕಾಗಿ ನಡೆಯುತ್ತವೆ

ಸರ್ಕಾರಿ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಪರೀಕ್ಷೆ ನಡೆಸದೆ ನಿರ್ವಾಹವಿಲ್ಲ. ಲಕ್ಷಾಂತರ ಮಂದಿ ಸ್ಪರ್ಧಿಸುವ ಕೇಂದ್ರ ಸೇವಾ ಆಯೋಗ ಹಾಗೂ ನೀಟ್ ಪರೀಕ್ಷೆಗಳನ್ನು ಅಕ್ರಮಗಳಿಲ್ಲದೆ ನಡೆಸಲು ಸಾಧ್ಯವಾಗುತ್ತಿರುವಾಗ ನಮ್ಮ ರಾಜ್ಯದಲ್ಲಿ ಮಾತ್ರ ಅದೆಷ್ಟು ಗೋಜಲು ಇದೆ. ಇದಕ್ಕೆ ಮುಖ್ಯ ಕಾರಣವೆಂದರೆ ರಾಜಕಾರಣಿಗಳ ಭ್ರಷ್ಟಾಚಾರ ಮತ್ತು ಅನೈತಿಕತೆ

ಯಾವುದೇ ಪರೀಕ್ಷೆಗೆ ಹಾಜರಾಗುವ ಇಟ್ಟುಕೊಳ್ಳಬೇಕಾದ ಕನಿಷ್ಠ ನೈತಿಕತೆ ಎಂದರೆ ಓದಿ ಅಭ್ಯರ್ಥಿಯು ಕಲಿತು ತನಗೆ ಗೊತ್ತಿದ್ದಷ್ಟನ್ನೇ ಬರೆಯುವುದು. ಅಕ್ಕಪಕ್ಕದವರ ಉತ್ತರ ಪತ್ರಿಕೆಗಳಿಂದ ನಕಲು ಮಾಡಿ ಬರೆಯುವುದಲ್ಲ ಅಥವಾ ಚೀಟಿಯಲ್ಲಿ ಬರೆದು ತಂದು ನೋಡಿ ಬರೆಯುವುದಲ್ಲ. ಪರೀಕ್ಷೆ ಇರುವುದೇ ಪಠ್ಯ ನೀಡಿದ ಮಾಹಿತಿಯನ್ನು ವಿದ್ಯಾರ್ಥಿಗಳು ಎಷ್ಟರ ಮಟ್ಟಿಗೆ ಅಂತರ್ಗತೀಕರಿಸಿಕೊಂಡಿದ್ದಾರೆಂಬುದರ ಮೌಲ್ಯಮಾಪನಕ್ಕಾಗಿ. ಹಾಗಾಗಿ ನಕಲು ಮಾಡಿ ಬರೆಯುವುದೆಂಬುದು ಅನೈತಿಕತೆ. ಈ ಅನೈತಿಕತೆಯ ಪತ್ತೆ ಮತ್ತು ಶಿಕ್ಷೆ ಪರೀಕ್ಷಾ ಕೊಠಡಿಯಿಂದ ವಿದ್ಯಾರ್ಥಿಯು ಹೊರಡುವ ಮೊದಲೇ ಆಗಬೇಕು. ಆದರೆ ಇತ್ತೀಚೆಗೆ ವರದಿಯಾದಂತೆ ಪಿ.ಎಸ್.ಐ ಹುದ್ದೆಗಳಿಗಾಗಿ ನಡೆದ ಆಯ್ಕೆ ಪರೀಕ್ಷೆಯಲ್ಲಿ ಹಾಗೂ ಕಾಲೇಜು ಪ್ರಾಧ್ಯಪಕರ ಹುದ್ದೆಗಳಿಗಾಗಿ ಆಯ್ಕೆ

ನಡೆಸಲು ಏರ್ಪಟ್ಟ ಪರೀಕ್ಷೆಗಳಲ್ಲಿ ಅಕ್ರಮ ನಡೆದಿದ್ದು ಅದು ಉತ್ತರ ಪತ್ರಿಕೆಗಳ ಮೌಲ್ಯಮಾಪನದ ಹಂತದಲ್ಲಿ ಬಯಲಾಗಿದೆ. ಆಮೇಲೆ ತನಿಖೆಯು ಆಳಕ್ಕಿಳಿದಂತೆ ಪರೀಕ್ಷೆಗಳ ನಿರ್ವಹಣೆಯ ಹಂತದಲ್ಲೇ ಅಕ್ರಮವಾಗಿ ಪ್ರಶ್ನೆಪತ್ರಿಕೆಗಳನ್ನು ಬಯಲು ಮಾಡಿದ ಮೂಲಗಳನ್ನು ಪತ್ತೆಹಚ್ಚಿದ್ದಾರೆ. ಒಬ್ಬೊಬ್ಬ ಅಪರಾಧಿಯನ್ನು ಹಿಡಿದು ಬಾಯಿ ಬಿಡಿಸಿದಾಗ ಮತ್ತಷ್ಟು ಅಪರಾಧಿಗಳ ಜಾಡು ಸಿಕ್ಕತೊಡಗಿದೆ. ಅಕ್ರಮವಾಗಿ ಪ್ರಶ್ನೆಪತ್ರಿಕೆಯನ್ನು ಮುಂದಾಗಿ ಪಡೆದು ಉತ್ತರಿಸಿದವರೆಲ್ಲರೂ ಅಪರಾಧಿಗಳೇ. ಏಕೆಂದರೆ ಇವರು ಒಂದು ವೇಳೆ ಸಿಕ್ಕಿ ಬೀಳದೆ ತೇರ್ಗಡೆಯಾಗಿ ಅಧಿಕಾರ ಪಡೆದಿದ್ದರೆ ಮತ್ತೆ ಅವರು ಮಾಡುವುದು ಅಪರಾಧಗಳನ್ನೇ. ಹೀಗಾಗಿ ಈ ಪರೀಕ್ಷಾ ಅಕ್ರಮಗಳ ಪತ್ತೆ ಹಾಗೂ ಶಿಕ್ಷೆ ಸೂಕ್ತವಾಗಿ ಆಗಲೇಬೇಕಾಗಿದೆ.

**ನಕಲು ಮಾಡುವ ಪ್ರವೃತ್ತಿ:**

ವಿದ್ಯಾರ್ಥಿಯೊಬ್ಬ ತನಗಾಗಿ ಅಂಕಗಳನ್ನು ಪಡೆಯುವುದಾದರೆ ಆತ ನಕಲು ಮಾಡುವುದಿಲ್ಲ. ಏಕೆಂದರೆ ಅತನಿಗೆ ತನ್ನ ಅರಿವಿನ ಪರೀಕ್ಷೆ ಆಗಬೇಕಾಗುತ್ತದೆ. ಅದು ತನ್ನ ಸಾಧನೆಯ ದಾರಿ ಮತ್ತು ಗುರಿಯನ್ನು ನಿರ್ಧರಿಸಲು ಸಹಾಯಕವಾಗುತ್ತದೆ. ಆದರೆ ಪೋಷಕರಿಗಾಗಿ ಅಥವಾ ಕುಟುಂಬದ ಪ್ರತಿಷ್ಠೆಗಾಗಿ ವಿದ್ಯಾರ್ಥಿಗೆ ಅಂಕಗಳು ಬೇಕಾಗುವುದಾದರೆ ಆಗ ಆತ ನಕಲಿನ ಮೊರೆ ಹೋಗಬೇಕಾಗುತ್ತದೆ. ಅದಕ್ಕಾಗಿ ಬೇಕಾದ ವ್ಯವಸ್ಥೆಗಳನ್ನು ಮಾಡಿಕೊಳ್ಳುತ್ತಾನೆ. ಮುಖ್ಯವಾಗಿ ಮಾಡಬೇಕಾದ್ದು ಸಿಕ್ಕಿ ಬೀಳದಂತಹ ವ್ಯವಸ್ಥೆಗಳು. ಅದಕ್ಕೆ ತಗಲುವ ವೆಚ್ಚಕ್ಕೆ ಆತನಲ್ಲಿ ಹೊನ್ನು ಇರುತ್ತದೆ. ಹಾಗಾಗಿ ಅಂಕಗಳ ಖರೀದಿ ಮತ್ತು ಗೋಪ್ಯದ ಅವಕಾಶಗಳಿರುವುದೇ ಪರೀಕ್ಷೆಗಳಲ್ಲಿ ಅಕ್ರಮಕ್ಕೆ ಕಾರಣವಾಗುತ್ತದೆ. ವಾಸ್ತವಿಕವಾಗಿ ಇದರ ಪ್ರಯೋಗವು ಶಾಲಾ ಮಟ್ಟದಿಂದಲೇ ಆರಂಭವಾಗುತ್ತದೆ.

ವಿದ್ಯಾರ್ಥಿಗಳಲ್ಲಿರುವ ನಕಲು ಪ್ರವೃತ್ತಿಯನ್ನು ತಡೆ ಹಿಡಿಯಬೇಕಾದವರು ಶಿಕ್ಷಕರು. ಸಾಮಾನ್ಯವಾಗಿ ಶಿಕ್ಷಕರು ಪರೀಕ್ಷಾ ಕೊಠಡಿಗಳಲ್ಲಿ ಪೊಲೀಸ್ ಡ್ಯೂಟಿಯನ್ನೇ ಮಾಡುತ್ತಾರೆ. ಅಂತಹ ಸಂಧರ್ಭದಲ್ಲಿ ನಕಲು ಮಾಡಲು ಆಸಕ್ತಿಯುಳ್ಳವರೂ ತಮ್ಮ ಪ್ರಯತ್ನವನ್ನು ಕೈ ಬಿಡುತ್ತಾರೆ. ಆದರೆ ತಮ್ಮ ವಿದ್ಯಾರ್ಥಿಗಳು ಹೆಚ್ಚು ಅಂಕಗಳಿಸಬೇಕಾದ ಅವಶ್ಯಕತೆ ಶಿಕ್ಷಕರಿಗೆ ಇದ್ದರೆ ಅವರು ನಕಲು ಮಾಡಲು ಅವಕಾಶ ನೀಡುತ್ತಾರೆ. ಶಿಕ್ಷಕರಿಗೇಕೆ ಈ ಅನಿವಾರ್ಯತೆ ಎಂದರೆ ಅದಕ್ಕೆ ಅನೇಕ ಉತ್ತರಗಳಿವೆ. ಒಂದು ಕಾರಣವೆಂದರೆ ಕೆಲವು ಶಿಕ್ಷಕ/ಶಿಕ್ಷಕಿಯರಿಗೆ ತಮ್ಮ ವಿದ್ಯಾರ್ಥಿಗಳು ಗಳಿಸಿದ ಹೆಚ್ಚಿನ ಅಂಕಗಳೇ ಅವರ ಕಲಿಸುವ ಸಾಮರ್ಥ್ಯದ ಮಾಪಕಗಳಾಗಿ ಬಿಂಬಿಸಿಕೊಳ್ಳಲು ಬೇಕಾಗುತ್ತವೆ. ಇನ್ನು ಕೆಲವರಿಗೆ ತಾನು ವಿದ್ಯಾರ್ಥಿಗಳ ಒಲವಿನ ಶಿಕ್ಷಕ/ಶಿಕ್ಷಕಿ ಎಂದೆನಿಸಿಕೊಳ್ಳಲು ಅವರಿಗೆ ಅಂಕಗಳು ಸಿಕ್ಕುವಂತೆ ಮಾಡುವ ಅಗತ್ಯವಿರುತ್ತದೆ. ಇದು ತಮ್ಮ ಪ್ರಗತಿಗೆ ಮಾರಕ ಎಂದು ತಿಳಿಯದ ವಿದ್ಯಾರ್ಥಿಗಳು ಶಿಕ್ಷಕ/ಶಿಕ್ಷಕಿಯರ ಸಹಕಾರದ ಅಭ್ಯಾಸಕ್ಕೆ ಬಿದ್ದು ಅಧ್ಯಯನದ ಅಭ್ಯಾಸ ಬಿಡುತ್ತಾರೆ. ಅಂಥವರು ಪಿ.ಎಸ್.ಐ. ಪರೀಕ್ಷೆಯ ಅಭ್ಯರ್ಥಿಗಳಾದರೆ ನಕಲು ಮಾಡುವುದರ ಸಾಧ್ಯತೆಗಳನ್ನು ಹುಡುಕುವಷ್ಟು ಅಧ್ಯಯನಕ್ಕಾಗಿ ಪಠ್ಯಗಳನ್ನು ಹುಡುಕುವುದಿಲ್ಲ.

**ಪರೀಕ್ಷೆ ನಡೆಸುವ ಸಂಸ್ಥೆ ಇರುವುದೇಕೆ:**

ಪ್ರಸ್ತುತ ಪತ್ರಿಕೆಗಳ ಮುಖಪುಟದಲ್ಲಿ ರಾರಾಜಿಸಿದ ಪಿ.ಎಸ್.ಐ.ಹುದ್ದೆಗಳಿಗೆ ನಡೆದ ಪರೀಕ್ಷೆಯ ಅಕ್ರಮವಷ್ಟೇ ಅಲ್ಲ. ಒಟ್ಟು ಹತ್ತು ಪ್ರಕರಣಗಳ ಪಟ್ಟಿ ಇದೆ. ಪಿ.ಎಸ್.ಐ.540, 402 ಮತ್ತು 200 ಹುದ್ದೆಗಳ ಮೂರು ಪ್ರಕರಣಗಳು, ಅಸಿಸ್ಟೆಂಟ್ ಪ್ರೊಫೆಸರ್ 1242 ಹುದ್ದೆಗಳ ಪರೀಕ್ಷೆ, 1010 ಹುದ್ದೆಗಳ ಎಫ್‌ಡಿಎ, ನಾನ್ ಟೆಕ್ನಿಕಲ್ ಹುದ್ದೆಗಳು, ಅಬಕಾರಿ ಎಸ್.ಐ ಮತ್ತು ಇತರ ಹುದ್ದೆಗಳು ಹೀಗೆ ವಿವಿಧ ಹುದ್ದೆಗಳಿಗಾಗಿ ನಡೆಸಲಾದ ಪರೀಕ್ಷೆಗಳಲ್ಲೆಲ್ಲಾ ಅಕ್ರಮವಿರುವುದು ಬಯಲಾಗಿದೆ. ಹಾಗಿದ್ದರೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಎಂಬ ಸಂಸ್ಥೆ ಇರುವುದಾದರೂ ಯಾಕೆ? ಇದೇನೋ ಹೊಸ ಪ್ರಕರಣವಲ್ಲ. ಕೆ.ಪಿ.ಎಸ್.ಸಿ ನಡೆಸುವ ಪರೀಕ್ಷೆಗಳ ಅಕ್ರಮಗಳು ಬಯಲಾಗುವುದು, ಕೆಲವರು ಕೋರ್ಟ್‌ಗಳಿಗೆ ಹೋಗುವುದು, ನಂತರ ಫಲಿತಾಂಶ ರದ್ದಾಗುವುದು, ನೇಮಕಾತಿಗಳು ಬಾಕಿ ಉಳಿಯುವುದು ಇತ್ಯಾದಿ ನಡೆಯುತ್ತಲೇ ಬಂದಿದೆ. ಈ ಮಧ್ಯೆ ಅಕ್ರಮ ನೇಮಕಾತಿ ಪಡೆದವರು ಕೂಡಾ ಹತ್ತು ಹನ್ನೆರಡು ವರ್ಷ ಅಧಿಕಾರ ನಡೆಸಿ ಅಮಾನತ್ತಾದ ಪ್ರಕರಣಗಳೂ ನಡೆದಿವೆ. ತಮ್ಮ ಅಧಿಕಾರವಧಿಯಲ್ಲಿ ಅವರು ಮಾಡಿದ ತೀರ್ಮಾನಗಳು

ಮತ್ತು ನೀಡಿದ ಆದೇಶಗಳು ಜಾರಿಯಲ್ಲಿ ಉಳಿಯುವುದೂ ಅಕ್ರಮವಲ್ಲವೇ? ಈ ಬಗ್ಗೆ ಯಾವ ನಿರ್ಧಾರಗಳೂ ಇಲ್ಲದೆ, ಅನುಕಂಪದ ಆಧಾರದಲ್ಲಿ ತಪ್ಪಿತಸ್ಥರು ಪುನರ್ ನೇಮಕಾತಿಯಾಗಿ ಅದೇ ಅಕ್ರಮಗಳು ಮುಂದುವರಿದಿರುವ ಉದಾಹರಣೆಗಳಿರುವಾಗ ಪರೀಕ್ಷೆಯಲ್ಲಿ ನಕಲು ಮಾಡಿ ತೇರ್ಗಡೆಯಾಗಿ ಚಾನ್ಸ್ ನೋಡುವ ಆಸೆಯೇ ಈ ಪರೀಕ್ಷಾ ಅಕ್ರಮಗಳಿಗೆ ಕಾರಣವಾಗಿದೆ.

**ಸರ್ಕಾರಿ ನೌಕರರ ಸುರಕ್ಷಿತ ವಲಯ:**

ನಾವು ಅಧಿಕಾರಿಗಳ ಕರ್ತವ್ಯ ಲೋಪದ ಎಷ್ಟೋ ವಾರ್ತೆಗಳನ್ನು ಕೇಳುತ್ತೇವೆ, ಟಿ.ವಿ.ಗಳಲ್ಲಿ ತೋರಿಸುತ್ತಾರೆ. ಭ್ರಷ್ಟ ಅಧಿಕಾರಿಗಳು ಖೆಡ್ಡಾಕ್ಕೆ ಬಿದ್ದ ವಾರ್ತೆಗಳು ಪತ್ರಿಕೆಗಳ ಮುಖಪುಟದಲ್ಲಿ ರಾರಾಜಿಸುತ್ತವೆ. ಆದರೆ ಮತ್ತೆ ಕೆಲವು ಸಮಯದ ಬಳಿಕ ಆ ಅಧಿಕಾರಿಗಳು ಅದೇ ಕುರ್ಚಿಗಳಲ್ಲಿರುತ್ತಾರೆ. ಕೆಲವೊಮ್ಮೆ ಇನ್ನೂ ಉನ್ನತ ಕುರ್ಚಿಗಳಿಗೇರುವುದೂ ಇದೆ. ಸಾರ್ವಜನಿಕ ವಿತರಣೆಗೆ ಇರುವ ಅಕ್ಕಿಯು ಗೋದಾಮಿನಲ್ಲಿ ಕೊಳೆತು ನಾರುತ್ತಿರುವ ಚಿತ್ರಣ ಟಿ.ವಿ.ಗಳಲ್ಲಿ ಪ್ರಸಾರವಾಗುತ್ತದೆ. ಆದರೆ ಅದಕ್ಕೆ ಕಾರಣರಾದವರ ಹುದ್ದೆಗಾಗಲೀ, ವೇತನಕ್ಕಾಗಲೀ ಯಾವುದೇ ಅಪಾಯವಾಗುವುದಿಲ್ಲ. ಏಕೆಂದರೆ ಅದು ಸಾರ್ವಜನಿಕ ಬೊಕ್ಕಸದಿಂದ ಕೊಡುವ ಹಣ ಅದನ್ನು ಮುಗಿಸುವ ಬಗ್ಗೆ ಯಾರಿಗೂ ನೋವಿಲ್ಲ. ಒಂದು ವೇಳೆ ಒಬ್ಬ ಸರ್ಕಾರಿ ನೌಕರ ಯಾವುದಾದರೂ ಅಪರಾಧಕ್ಕಾಗಿ ಅಮಾನತ್ತಾದರೆ ಆತನಿಗೆ ಮನೆಗೆ ಕುಳಿತಲ್ಲಿಗೆ ಅರ್ಧ ಸಂಬಳ ಬರುತ್ತದೆ. ಆರು ತಿಂಗಳ ಬಳಿಕ ಮುಕ್ಕಾಲು ಪಾಲು ವೇತನ ಕೈ ಸೇರುತ್ತದೆ. ವರ್ಷ ಕಳೆದರೂ ದೂರು ವಿಚಾರಣೆಯಾಗದಿದ್ದರೆ ಪೂರ್ತಿ ಸಂಬಳ ಸಿಗುತ್ತದಂತೆ. ಹಾಗಿದ್ದರೆ ಈ ಅಮಾನತ್ತು ಎಂಬ ನಾಟಕ ಯಾಕಾಗಿ? ಕೆಲವೊಮ್ಮೆ ಅಮಾನತ್ತಾದ ನೌಕರರೂ ಯಾವುದೇ ನಾಚಿಕೆ ಇಲ್ಲದೆ ತಮ್ಮದೆ ಕಚೇರಿಯ ಏಜೆಂಟರಾಗಿಯೂ ಕೆಲಸ ಮಾಡುತ್ತಾರೆ. ಅಂದರೆ ಅವರು ತಮ್ಮ ವೇತನಕ್ಕಿಂತಲೂ ಹೆಚ್ಚಿನ ಆದಾಯಗಳಿಸಲು ಸಾಧ್ಯವಾಗುತ್ತದೆ. ಇಂದಿನ ದಿನಗಳಲ್ಲಿ ಅಮಾನತ್ತುಗೊಳ್ಳುವುದು ನಾಚಿಕೆಯ ವಿಷಯವಲ್ಲ. ಬದಲಾಗಿ ಅವರಿಂದ ಉಪಕೃತರಾದವರು ಪಾಪ! ಹೇಗೆ ಸಿಕ್ಕಿಬಿದ್ದಿರಿ? ಎಂಬ ಅನುಕಂಪ ತೋರಿಸುತ್ತಾರೆ.

ಸರ್ಕಾರಿ ಸೇವೆಯಲ್ಲಿ ನೇಮಕಾತಿ ಪಡೆದ ಬಳಿಕ ವೇತನಕ್ಕೂ, ಅಕ್ರಮ ಆದಾಯಕ್ಕೂ, ಸಾರ್ವಜನಿಕ ಗೌರವಕ್ಕೂ ತೊಂದರೆ ಇಲ್ಲವೆಂಬುದು ಖಾತ್ರಿ ಇರುವಾಗ ನೇಮಕಾತಿಗಾಗಿ ಪರೀಕ್ಷಾ ಅಕ್ರಮ ನಡೆಸಿದರೇನು ಎಂಬ ಮನೋಧರ್ಮ ರೂಪುಗೊಳ್ಳುವುದರಲ್ಲಿ ಅಚ್ಚರಿ ಇಲ್ಲ. ಇದಕ್ಕೆ ನಮ್ಮ ರಾಜಕೀಯ ನಾಯಕರುಗಳೇ ತುಪ್ಪ ಸುರಿಯುತ್ತಾರೆಂಬುದು ಸದ್ಯ ನಡೆದಿರುವ ಎಲ್ಲಾ ಅಕ್ರಮ ಪರೀಕ್ಷಾ ಪ್ರಕರಣಗಳು ಬಹಿರಂಗಗೊಂಡಂತೆ ತಿಳಿದುಬರುವ ವಾಸ್ತವ.

**ಈ ಅಕ್ರಮಗಳಿಗೆ ಪರಿಹಾರವೇನು:**

ಸರ್ಕಾರಿ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಪರೀಕ್ಷೆ ನಡೆಸದೆ ನಿರ್ವಾಹವಿಲ್ಲ. ಲಕ್ಷಾಂತರ ಮಂದಿ ಸ್ಪರ್ಧಿಸುವ ಕೇಂದ್ರ ಸೇವಾ ಆಯೋಗ ಹಾಗೂ ನೀಟ್ ಪರೀಕ್ಷೆಗಳನ್ನು ಅಕ್ರಮಗಳಿಲ್ಲದೆ ನಡೆಸಲು ಸಾಧ್ಯವಾಗುತ್ತಿರುವಾಗ ನಮ್ಮ ರಾಜ್ಯದಲ್ಲಿ ಮಾತ್ರ ಅದೆಷ್ಟು ಗೋಜಲು ಇದೆ. ಇದಕ್ಕೆ ಮುಖ್ಯ ಕಾರಣವೆಂದರೆ ನಮ್ಮ ರಾಜ್ಯದಲ್ಲಿ ಆಡಳಿತ ಹಿಡಿದ ರಾಷ್ಟ್ರೀಯ ಪಕ್ಷಗಳಾಗಲೀ ಪ್ರಾದೇಶಿಕ ಪಕ್ಷದಲ್ಲಾಗಲೀ ಇರುವ ರಾಜಕಾರಣಿಗಳಿಗೆ ರಾಜನೈತಿಕತೆಯ ಹಾಗೂ ಸಮಾಜ ಸೇವೆಯ ಬದ್ಧತೆ ಇಲ್ಲ. ತಪ್ಪಿತಸ್ಥ ಅಧಿಕಾರಿಗಳಿಗೆ ಶಿಕ್ಷೆ ಆಗಬೇಕೆಂದು ಸಾರ್ವಜನಿಕವಾಗಿ ಹೇಳುತ್ತಲೇ ಗುಟ್ಟಿನಲ್ಲಿ ಅವರ ನೆರವಿಗೆ ನಿಲ್ಲುತ್ತಾರೆ. ಹೀಗಾಗಿ ಸರ್ಕಾರಿ ನೌಕರರ ಅಪರಾಧ ಪ್ರಕರಣಗಳು ವಿಚಾರಣೆ ಮತ್ತು ತೀರ್ಮಾನಗಳಿಲ್ಲದೆ ಹಳ್ಳ ಹಿಡಿಯುವುದು ಸಾಮಾನ್ಯವಾಗಿದೆ.

ಹೀಗಾಗಿ ಇದಕ್ಕೆ ಪರಿಹಾರವೆಂದರೆ, ಸರ್ಕಾರಿ ಅಧಿಕಾರಿಗಳನ್ನೆಲ್ಲ ಪ್ರತಿ ಐದು ವರ್ಷಗಳಿಗೊಮ್ಮೆ ಮೌಲ್ಯಮಾಪನ ಮಾಡಬೇಕು. ಅವರು ಏನೂ ಮಾಡದಿದ್ದರೂ ಏನೂ ಆಗುವುದಿಲ್ಲ ಎಂಬ ಸ್ಥಿತಿ ಇರಬಾರದು. ಈ ಮೌಲ್ಯ ಮಾಪನವನ್ನು ಮೇಲಾಧಿಕಾರಿಗಳ ಬದಲು ಸಾರ್ವಜನಿಕರು ಮಾಡಬೇಕು. ಅದಕ್ಕಾಗಿ ಏನಾದರೂ ಹೊಸ ವಿಧಾನವನ್ನು ಕಂಡು ಹಿಡಿಯಲು ಸಾಧ್ಯವಿದೆ. ಕೆಲಸ ಮಾಡದಿದ್ದರೆ, ಕರ್ತವ್ಯ ಚ್ಯುತಿ ಮಾಡಿದರೆ, ಹಾಗೂ ಅಕ್ರಮ ಸಂಭಾವನೆಯಂತಹ ಭ್ರಷ್ಟತೆಗೆ ಕೈಹಾಕಿದರೆ ಹುದ್ದೆಯನ್ನು

ಕಳಕೊಳ್ಳಬೇಕಾದ ಭೀತಿಯನ್ನು ಹುಟ್ಟುಹಾಕದ ಹೊರತು ನೇಮಕಾತಿ ಪರೀಕ್ಷೆಗಳಲ್ಲಿ ಅಕ್ರಮವಾಗುವುದನ್ನು ತಡೆಯುವುದು ಕಷ್ಟ. ಇದು ಕಾಲೇಜು ಪ್ರೊಫೆಸರ್‌ಗಳಿಗೂ ಅನ್ವಯವಾಗುವ ನಿಯಮವಾದಾಗ ಉನ್ನತ ಶಿಕ್ಷಣದ ಗುಣಮಟ್ಟವೂ ಹೆಚ್ಚಬಹುದು

ಲೇಖಕರು:–ಡಾ.ಚಂದ್ರಶೇಖರ ದಾಮ್ಲೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:06.05.2022.

## 5. ಕೋರ್ಟ್ ಕನ್ನಡೀಕರಣ ಸಾಧ್ಯವೇ

ಇತ್ತೀಚೆಗೆ ನಡೆದ ಮುಖ್ಯಮಂತ್ರಿಗಳ ಸಮ್ಮೇಳನದಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಸುಪ್ರಿಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್. ವಿ. ರಮಣ ಅವರು ಉನ್ನತ ನ್ಯಾಯಾಲಯಗಳ ಕಲಾಪವನ್ನು ಪ್ರಾದೇಶಿಕ ಭಾಷೆಗಳಲ್ಲಿ ನಡೆಸುವ ಬಗ್ಗೆ ಆಸಕ್ತಿಯನ್ನು ಪ್ರದರ್ಶಿಸಿದ್ದಾರೆ. ಭಾಷಾ ವೈವಿಧ್ಯತೆಯನ್ನು ಹೊಂದಿರುವ ನಮ್ಮಲ್ಲಿ ಕೋರ್ಟ್ ಕಲಾಪದಂಥ ಸಂಕೀರ್ಣ ವಿಷಯಗಳನ್ನು ಹಲವು ಭಾಷೆಗಳಲ್ಲಿ ನಡೆಸಲು ಸಾಧ್ಯವೇ, ಸಾಧುವೇ? ಇದಕ್ಕೆ ಯಾವೆಲ್ಲ ವ್ಯವಸ್ಥೆ ಇರಬೇಕು ಇಂಗ್ಲಿಷ್‌ನಲ್ಲೇ ಯಾಕೆ ಕಲಾಪ ನಡೆಸಲಾಗುತ್ತಿದೆ ಎಂಬ ಮಾಹಿತಿ ಇಲ್ಲಿದೆ.

ನ್ಯಾಯಾಲಯಗಳಲ್ಲಿ ಸ್ಥಳೀಯ ಭಾಷೆ ಬಳಕೆಗೆ ಒತ್ತು ನೀಡಬೇಕೆಂದು ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದಾರೆ. ಆದರೆ, ಹೈಕೋರ್ಟ್‌ನಲ್ಲಿ ಕನ್ನಡ ಬಳಕೆಗೆ ಅನುಮತಿ ನೀಡದ ಹೊರತು ಅಧೀನ ನ್ಯಾಯಾಲಯಗಳಲ್ಲಿ ಸಂಪೂರ್ಣ ಕನ್ನಡ ಬಳಕೆ ಅಸಾಧ್ಯ.

ಸದ್ಯ, ಕೆಲ ನ್ಯಾಯಾಲಯಗಳಲ್ಲಿ ಕನ್ನಡ ಭಾಷೆ ಬಳಕೆಯಲ್ಲಿದ್ದರೂ ಅದು ಕಡ್ಡಾಯವಲ್ಲ. ಬದಲಿಗೆ ಐಚ್ಛಿಕ. ಆ ಕುರಿತು ಯಾವುದೇ ಅಧಿಕೃತ ಆದೇಶವಿಲ್ಲ. ಕನ್ನಡ ಬಳಕೆ ಮಾಡಲೇಬೇಕೆಂಬ ನಿಯಮವು ಇಲ್ಲ. ಆದರೆ ಕನ್ನಡದ ಬಗ್ಗೆ ಪ್ರೀತಿ ಹೊಂದಿರುವ ನ್ಯಾಯಾಧೀಶರು, ವಕೀಲರು ಆಸ್ಥೆ ವಹಿಸುತ್ತಿರುವುದರಿಂದ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರ ನ್ಯಾಯಾಂಗದಲ್ಲಿ ಕನ್ನಡಕ್ಕೆ ಕೊಂಚ ಪ್ರೋತ್ಸಾಹ ನೀಡುತ್ತಿರುವುದರಿಂದ ಕೋರ್ಟ್‌ಗಳಲ್ಲಿ ಅಲ್ಲಲ್ಲಿ ಕನ್ನಡಮಯವಾದ ವಾತಾವರಣ ಕಂಡು ಬರುತ್ತಿದೆ.

ಆದರೆ, ಆ ಪ್ರಯಾಣ ಸ್ವಲ್ಪ ಮಾತ್ರ, ಶೇಕಡಾವಾರು ಹೇಳುವುದಾದರೆ ನ್ಯಾಯಾಂಗದಲ್ಲಿ ಕನ್ನಡ ಬಳಕೆ ಶೇ.5ಕ್ಕಿಂತ ಕಡಿಮೆಯೇ. ಉಳಿದಂತೆ ಶೇ. 95 ರಷ್ಟು ಭಾಗ ಆಂಗ್ಲ ಭಾಷೆಯೇ ಬಳಕೆಯಲ್ಲಿದೆ. ಅಧೀನ ನ್ಯಾಯಾಲಯಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ಕನ್ನಡದ ವಾತಾವರಣ ಹೆಚ್ಚುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದ್ದರೂ ಇನ್ನೂ ಸಂಪೂರ್ಣ ಕನ್ನಡಮಯವಾಗಲು ಸಾಕಷ್ಟು ಸಮಯ ಹಿಡಿಯುತ್ತದೆ ಎಂಬುದು ಕೂಡ ಅಷ್ಟೇ ಸತ್ಯ.

ಹೈಕೋರ್ಟ್‌ನಲ್ಲಂತೂ ತಾಂತ್ರಿಕ ತೊಂದರೆ ಕಾರಣಕ್ಕೆ ಕನ್ನಡ ಬಳಕೆ ಬಹುತೇಕ ಇಲ್ಲವೇ ಇಲ್ಲ. ಮುಖ್ಯ ನ್ಯಾಯಮೂರ್ತಿ ಸೇರಿ ಕೆಲವು ನ್ಯಾಯಮೂರ್ತಿಗಳು ಹೊರ ರಾಜ್ಯದವರಾಗಿರುವುದರಿಂದ ಹಾಗೂ ಅವರಿಗೆ ಕನ್ನಡ ತಿಳಿದಿಲ್ಲವಾದ್ದರಿಂದ ದಾಖಲೆಗಳನ್ನು ಆಂಗ್ಲ ಭಾಷೆಯಲ್ಲಿಯೇ ಒದಗಿಸಬೇಕಾಗಿದೆ. ಆದರೆ, ಕನ್ನಡದ ನ್ಯಾಯಾಮೂರ್ತಿಗಳಿರುವ ಕೋರ್ಟ್‌ಗಳಲ್ಲಿ ಪ್ರಕರಣದ ವಿಚಾರಣೆಗೆ ಬಂದರೆ ಅದರ ದಾಖಲೆಗಳು ಕನ್ನಡದಲ್ಲಿದ್ದರೂ ನಡೆಯುತ್ತದೆ. ಅದನ್ನು ಆಂಗ್ಲಭಾಷೆಗೆ ಅನುವಾದಿಸುವ ಅನಿವಾರ್ಯತೆ ಇಲ್ಲ. ಜೊತೆಗೆ ವಕೀಲರು ಕನ್ನಡದಲ್ಲಿಯೇ ವಾದ ಮಂಡಿಸಿದರೂ ನ್ಯಾಯಾಮೂರ್ತಿಗಳು ಕೇಳುತ್ತಾರೆ.

ಹೈಕೋರ್ಟ್‌ನಲ್ಲಿ ಕನ್ನಡ ಭಾಷೆ ಬಳಕೆಗೆ ಅನುಮತಿ ನೀಡಿದರೆ, ಸಹಜವಾಗಿಯೇ ವಿಚಾರಣಾ ಕೋರ್ಟ್‌ಗಳಲ್ಲೂ ಕನ್ನಡ ಬಳಕೆ ಹೆಚ್ಚಾಗಲಿದೆ. ಸಾಮಾನ್ಯ ಜನರಿಗೆ ನಿಜಕ್ಕೂ ನ್ಯಾಯದಾನ ಲಭ್ಯವಾಗುವಂತೆ ಮಾಡುವುದಾದರೆ ಅವರಿಗೆ ಅರ್ಥವಾಗುವ ಭಾಷೆಯಲ್ಲಿಯೇ ವಾದ–ಪ್ರತಿವಾದ ಮಂಡಿಸುವ ತೀರ್ಪು ನೀಡುವ ವ್ಯವಸ್ಥೆ ಜಾರಿಗೊಳಿಸಲು ಸುಪ್ರೀಂಕೋರ್ಟ್ ನಿರ್ಧಾರ ಕೈಗೊಳ್ಳಬೇಕು ಎನ್ನುತ್ತಾರೆ ತಜ್ಞರು.

**ಹೈಕೋರ್ಟ್‌ನಲ್ಲಿ ಕನ್ನಡ ದಾಖಲೆ ಏನಾಯ್ತು :** ಆಡಳಿತ ಭಾಷಾ ಕಾಯಿದೆ – 1963ರ ಪ್ರಕಾರ, 1965 ಜನವರಿ 26ರ ನಂತರವೂ ಒಕ್ಕೂಟದ ಆಡಳಿತ ಭಾಷೆಯಾಗಿ ಹಿಂದಿ ಜೊತೆಗೆ ಇಂಗ್ಲಿಷ್ ಮುಂದುವರಿಸಲು ಅವಕಾಶ ನೀಡಿದೆ. ಕಾಯಿದೆಯ ಸೆಕ್ಷನ್ 7ರ ಪ್ರಕಾರ ಒಂದು ರಾಜ್ಯದ ರಾಜ್ಯಪಾಲರು ರಾಷ್ಟ್ರಪತಿಗಳ ಪೂರ್ವಾನುಮತಿ ಪಡೆದು ಹಿಂದಿ ಅಥವಾ ಯಾವುದೇ ಪ್ರಾದೇಶಿಕ ಅಧಿಕೃತ ಭಾಷೆ ಬಳಸಲು ಅನುವು ಮಾಡಿಕೊಡಬಹುದಾಗಿದೆ.

ಅದನ್ನು ಆಧರಿಸಿ ಕರ್ನಾಟಕ ಹೈಕೋರ್ಟ್‌ನಲ್ಲೂ ಕನ್ನಡದ ಬಳಕೆಗೆ ಅವಕಾಶ ನೀಡಬೇಕೆಂದೂ 2014ರಲ್ಲಿ ವಿಧಾನ ಪರಿಷತ್ ಸದಸ್ಯರಾಗಿದ್ದ ಆರ್. ಕೆ. ಸಿದ್ದರಾಮಣ್ಣ ಖಾಸಗಿ ವಿಧೇಯಕ ಮಂಡನೆಗೆ ಮುಂದಾದರು. ಆದರೆ, ಆಗಿನ ಸರ್ಕಾರ ತಾನೇ ನಿರ್ಣಯ ಮಂಡಿಸಲು ತೀರ್ಮಾನಿಸಿತು. ಆದರಂತೆ, 2015ರಲ್ಲಿ ನಿರ್ಣಯ ಅಂಗೀಕರಿಸಿ ಅದನ್ನು ಅನುಮೋದನೆಗಾಗಿ ರಾಜ್ಯಪಾಲರಿಗೆ ಕಳುಹಿಸಲಾಗಿತ್ತು. ರಾಜ್ಯಪಾಲರು ಅದನ್ನು ರಾಷ್ಟ್ರಪತಿಗಳಿಗೆ ಕಳುಹಿಸಿದ್ದರು. ಆ ಪ್ರಸ್ತಾವ ಇನ್ನೂ ಅಲ್ಲೇ ಕೊಳೆಯುತ್ತಿದೆ.

ಸರ್ಕಾರ ಕಳುಹಿಸಿದ್ದ ಪ್ರಸ್ತಾವ ಆಧರಿಸಿ ರಾಷ್ಟ್ರಪತಿ ಭವನ, ಸುಪ್ರೀಂಕೋರ್ಟ್‌ನ ಅನುಮತಿ ಕೋರಿದೆ ಎಂಬ ಮಾಹಿತಿ ಇದೆ. ಆದರೆ, ಈವರೆಗೆ ಯಾವುದೇ ನಿರ್ಧಾರ ಕೈಗೊಂಡಿಲ್ಲ. ಕರ್ನಾಟಕದ ಪ್ರಸ್ತಾವ ಜೊತೆಗೆ ಇತರೆ ರಾಜ್ಯಗಳ ಪ್ರಸ್ತಾವಗಳೂ ರಾಷ್ಟ್ರಪತಿಗಳ ಮುಂದೆ ಬಾಕಿ ಇದೆ ಎನ್ನುತ್ತಾರೆ ಮಾಜಿ ಎಂಎಲ್‌ಸಿ ಸಿದ್ದರಾಮಣ್ಣ.

ಒಂದು ಕೇಂದ್ರ ಸರ್ಕಾರವೇ ಎಲ್ಲ ಹೈಕೋರ್ಟ್‌ಗಳಿಗೆ ಆಯಾ ಸ್ಥಳೀಯ ರಾಜ್ಯ ಭಾಷೆಗಳ ಬಳಕೆಗೆ ಅನುಮತಿ ನೀಡಲು ಸಾಂವಿಧಾನಿಕ ತಿದ್ದುಪಡಿ ಮಾಡಬೇಕು. ಇಲ್ಲವೇ ಸುಪ್ರೀಂಕೋರ್ಟ್ ಆ ಬಗ್ಗೆ ತಾನೇ ನಿರ್ಣಯ ಕೈಗೊಂಡು ಎಲ್ಲ ಹೈಕೋರ್ಟ್‌ಗಳಿಗೆ ಸ್ಥಳೀಯ ಭಾಷೆಗಳಲ್ಲಿ ಕಲಾಪ ನಡೆಸಲು ತೀರ್ಪುಗಳನ್ನು ನೀಡಲು ಅವಕಾಶ ಮಾಡಿಕೊಡಬೇಕು ಎನ್ನುತ್ತಾರೆ ಕಾನೂನು ತಜ್ಞರು.

**ಪ್ರಾಧಿಕಾರದಿಂದ ಕನ್ನಡ ಬಳಕೆಗೆ ಪ್ರೋತ್ಸಾಹ:** ನ್ಯಾಯಾಂಗದಲ್ಲಿ ಕನ್ನಡ ಬಳಕೆ ಪ್ರೋತ್ಸಾಹಿಸಲು ಮುಖ್ಯಮಂತ್ರಿ ಚಂದ್ರು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದಾಗ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಕನ್ನಡದಲ್ಲಿಯೇ ತೀರ್ಪು ನೀಡುವ ನ್ಯಾಯಾಧೀಶರನ್ನು ಗುರುತಿಸಿ ನಗದು, ಸ್ಮರಣಿಕೆ ಪ್ರಮಾಣ ಪತ್ರದ ಮೂಲಕ ಪ್ರೋತ್ಸಾಹಿಸುವ ಪರಿಪಾಠ ಆರಂಭಿಸಿದರು. ಅದನ್ನು ಪ್ರಾಧಿಕಾರ ಮುಂದುವರಿಸಿಕೊಂಡು ಬರುತ್ತಿದೆ. ನಾಗಾಭರಣ ಪ್ರಾಧಿಕಾರದ ಅಧ್ಯಕ್ಷರಾದ ಮೇಲೆ ನ್ಯಾಯಾಧೀಶರ ಜೊತೆಗೆ ಕನ್ನಡದಲ್ಲಿಯೇ ವಾದ ಮಂಡಿಸುವ ವಕೀಲರನ್ನೂ ಗುರುತಿಸಿ ಸನ್ಮಾನಿಸುವ ಕಾರ್ಯ ಆರಂಭಿಸಲಾಗಿದೆ. ಈ ಮಧ್ಯೆ, ನ್ಯಾಯಾಂಗದಲ್ಲಿ ಕನ್ನಡ ಬಳಕೆಗೆ ಎದುರಾಗುವ ಪದಬಳಕೆ, ಪರ್ಯಾಯ ಪದಗಳನ್ನು ಒದಗಿಸಲು ಪ್ರಾಧಿಕಾರ **'ಪದ ಕಣಜ'** ಎಂಬ ಆ್ಯಪ್ ರೂಪಿಸಿದ್ದು ಅದರಲ್ಲಿ 86 ನಿಘಂಟುಗಳ ಪದಗಳನ್ನು ಸೇರಿಸಲಾಗಿದೆ. ಇನ್ನು 126 ನಿಘಂಟುಗಳ ಪದಗಳನ್ನು ಸೇರ್ಪಡೆ ಮಾಡಲಾಗುವುದು. ಅಲ್ಲದೆ, ನ್ಯಾಯಾಂಗದ ಪದಕೋಶವನ್ನು ಹೊರತಂದಿದೆ.

ಕೆಳಹಂತದ ನ್ಯಾಯಾಲಯಗಳಲ್ಲಿ ಕನ್ನಡ ವಾತಾವರಣ ದಿನೇ ದಿನೇ ಹೆಚ್ಚುತ್ತಿದೆ. ಆದರೆ, ಹೈಕೋರ್ಟ್‌ನಲ್ಲಿ ಕನ್ನಡ ಬಳಕೆಯಾಗುತ್ತಿಲ್ಲ. ಹೈಕೋರ್ಟ್‌ನಲ್ಲಿ ಆಯಾ ಸ್ಥಳೀಯ ಭಾಷೆ ಬಳಕೆಗೆ ಸುಪ್ರೀಂಕೋರ್ಟ್ ಅನುಮತಿ ನೀಡಿದರೆ ಸಹಜವಾಗಿಯೆ ಎಲ್ಲ ಕೋರ್ಟ್‌ಗಳಲ್ಲೂ ಕನ್ನಡದ ಕಂಪು ಆರಳಲಿದೆ.

— ಟಿ.ಎಸ್. ನಾಗಭರಣ, ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ.

ಭಾಷೆಗಳ ಆಧಾರದ ಮೇಲೆ ಇಡೀ ದೇಶ ಏಕೀಕರಣವಾಗಿದೆ. ಈಗ ನಿಜಕ್ಕೂ ಪ್ರಾದೇಶಿಕ ಭಾಷೆಗಳನ್ನು ಉಳಿಸುವ ಮನಸ್ಸು ಕೇಂದ್ರ ಸರ್ಕಾರ ಅಥವಾ ಪ್ರಧಾನಿ ಅವರಿಗೆ ಇದ್ದರೆ ನ್ಯಾಯಾಂಗದಲ್ಲಿ ಮಾತ್ರವಲ್ಲದೆ ಬ್ಯಾಂಕಿಂಗ್, ಶಿಕ್ಷಣ ಸೇರಿ ಎಲ್ಲ ವಲಯಗಳಲ್ಲೂ ಸ್ಥಳೀಯ ರಾಜ್ಯ ಭಾಷೆಗೆ ಮೊದಲ ಆದ್ಯತೆ ನೀಡುವ ನೀತಿಯನ್ನು ರೂಪಿಸಿ ಜಾರಿಗೊಳಿಸಲಿ

– ಮುಖ್ಯಮಂತ್ರಿ ಚಂದ್ರು, ಮಾಜಿ ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ.

ಸಂವಿಧಾನದ ಕಲಂ 384 (2) ರಲ್ಲಿ ಹೈಕೋರ್ಟ್‌ಗಳಲ್ಲಿ ಇಂಗ್ಲೀಷ್ ಭಾಷೆ ಬಳಸಲು ಅವಕಾಶ ನೀಡಲಾಗಿದೆ. ಅಂತೆಯೇ , ಮಾತೃಭಾಷೆಯಲ್ಲಿ ಹೈಕೋರ್ಟ್ ಕಲಾಪ ನಡೆಸಲು ಅನುವಾಗುವಂತೆ ಪ್ರಧಾನಿ ನರೇಂದ್ರ ಮೋದಿ ಸಂಸತ್ತಿನಲ್ಲಿ ತಿದ್ದುಪಡಿ ತರಲು ಮುಂದಾಗಬೇಕು. ಹಾಗಾದಾಗ ಕನ್ನಡಿಗರ ಬಹುದಿನಗಳ ಕನ್ನಡದ ಕನಸು ನನಸಾಗುತ್ತೆ

– ಎ.ಪಿ. ರಂಗನಾಥ್, ಮಾಜಿ ಅಧ್ಯಕ್ಷರು, ಬೆಂಗಳೂರು ವಕೀಲರ ಸಂಘ.

**ತೀರ್ಪು ಇಂಗ್ಲೀಷ್ ಭಾಷೆಯಲ್ಲೇ ಇರಬೇಕು:** ಸಂವಿಧಾನದ 348 (1) ಆರ್ಟಿಕಲ್ ಪ್ರಕಾರ ಸಂಸತ್ತು ನಿಯಮ ಬದಲಾವಣೆ ಮಾಡದ ಹೊರತು ಸುಪ್ರೀಂಕೋರ್ಟ್ ಹಾಗೂ ಎಲ್ಲ ಹೈಕೋರ್ಟ್‌ಗಳ ಕಲಾಪವನ್ನು ಇಂಗ್ಲೀಷ್‌ನಲ್ಲೇ ನಡೆಸಬೇಕು. ಆದರೆ, 348 (2) ಆರ್ಟಿಕಲ್ ಮಾತ್ರ 348 (1) ಆರ್ಟಿಕಲ್‌ಗೆ ವಿರುದ್ಧವಾದ ವಾದವನ್ನು ಮಂಡಿಸುತ್ತದೆ. ಏನೆಂದರೆ, ಹೈಕೋರ್ಟ್‌ಗಳಲ್ಲಿ ರಾಜ್ಯಗಳ ರಾಜ್ಯಪಾಲರು ರಾಷ್ಟ್ರಪತಿಗಳ ಒಪ್ಪಿಗೆಯೊಂದಿಗೆ ಯಾವುದೇ ಅಧಿಕೃತ ಉದ್ದೇಶಕ್ಕಾಗಿ ಹಿಂದಿ ಅಥವಾ ಇತರೆ ಪ್ರಾದೇಶಿಕ ಭಾಷೆಯ ಬಳಕೆಯನ್ನು ಪ್ರಕ್ರಿಯೆಯಲ್ಲಿ ಅಧಿಕೃತಗೊಳಿಸಬಹುದಾಗಿದೆ.

ಉತ್ತರಪ್ರದೇಶ, ಬಿಹಾರ, ರಾಜಸ್ಥಾನ, ಮಧ್ಯಪ್ರದೇಶಗಳು ಈಗಾಗಲೇ ಹೈಕೋರ್ಟ್‌ಗಳಲ್ಲಿ ಹಿಂದಿಯಲ್ಲೇ ಕಲಾಪ ಮಾಡುವುದನ್ನು ಅಧಿಕೃತಗೊಳಿಸಿವೆ. ಇದೇ ರೀತಿಯಲ್ಲಿ ತಮಿಳುನಾಡು ಕೂಡ ಈ ಹಾದಿಯಲ್ಲಿ ಸಾಗುತ್ತಿದೆ. ಹೈಕೋರ್ಟ್‌ನಲ್ಲಿ ತಮಿಳು ಭಾಷೆಯಲ್ಲಿ ಕಲಾಪ ನಡೆಸುವುದನ್ನು ಅಧಿಕೃತಗೊಳಿಸುವ ಪ್ರಯತ್ನ ನಡೆದಿದೆ. ಆದರೆ, ಹೈಕೋರ್ಟ್ ನೀಡುವ ತೀರ್ಪು, ಡಿಕ್ರಿ ಅಥವಾ ಆದೇಶಗಳನ್ನು ಸ್ಥಳೀಯ ಭಾಷೆಯಲ್ಲೇ ನೀಡಬೇಕೆ ಅಥವಾ ಬೇಡವೇ ಎಂಬುದನ್ನು ಈ ವಿಧಿಗಳು ಸ್ಪಷ್ಟಪಡಿಸುವುದಿಲ್ಲ. ಈ ಹಿನ್ನೆಲೆಯಲ್ಲಿ ಸಂವಿಧಾನವು ಸುಪ್ರೀಂಕೋರ್ಟ್ ಅಥವಾ ಹೈಕೋರ್ಟ್‌ಗಳಲ್ಲಿ ಇಂಗ್ಲಿಷ್ ಅನ್ನು ಪ್ರಾಥಮಿಕ ಭಾಷೆಯಾಗಿ ಗುರುತಿಸಿದೆ. ಒಂದೊಮ್ಮೆ, ಹೈಕೋರ್ಟ್‌ನಲ್ಲಿ ಸ್ಥಳೀಯ ಭಾಷೆಗಳಲ್ಲಿ ಕಲಾಪಕ್ಕೆ ಮನವಿ ಬಂದರೆ ಹೈಕೋರ್ಟ್‌ಗಳು ತಮ್ಮ ತೀರ್ಪುಗಳನ್ನು ಇಂಗ್ಲೀಷ್‌ನಲ್ಲೇ ಪ್ರಕಟಿಸಲೇಬೇಕು.

**ಇಂಗ್ಲಿಷ್ ಬಳಕೆ ಯಾಕೆ:** ಕೋರ್ಟ್‌ಗಳಲ್ಲಿ ಇಂಗ್ಲೀಷ್ ಭಾಷೆ ಬಳಕೆ ಯಾಕೆ ಎಂಬ ಪ್ರಾಥಮಿಕ ಪ್ರಶ್ನೆ ಏಳುವುದು ಸಹಜ. ಪ್ರಸಕ್ತ ಭಾರತದಲ್ಲಿ ನ್ಯಾಯಾಂಗ ವ್ಯವಸ್ಥೆಯು ಸಶಕ್ತವಾಗಿ ಬೆಳೆದಿದ್ದು, ಏಕೀಕೃತಗೊಂಡಿದೆ. ಏಕರೂಪದಲ್ಲಿರುವುದಕ್ಕೆ ಇಂಗ್ಲೀಷ್ ನೆರವು ಒದಗಿಸಿದೆ. ಜೊತೆಗೆ ಕಾನೂನು ಮತ್ತು ಸಂವಿಧಾನಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ವಕೀಲರು, ನ್ಯಾಯಾಮೂರ್ತಿಗಳಿಗೆ ಇದರಿಂದ ಸುಲಭವಾಗುತ್ತದೆ. ಒಂದು ಹೈಕೋರ್ಟ್‌ನಿಂದ ಮತ್ತೊಂದು ಹೈಕೋರ್ಟ್‌ಗೆ ನ್ಯಾಯಮೂರ್ತಿಗಳು ವರ್ಗಾವಣೆಯಾಗುತ್ತಾರೆ. ಆಗ ಕಲಾಪ ನಡೆಸಲು ಇಂಗ್ಲೀಷ್ ಸೂಕ್ತ ಭಾಷೆಯಾಗಿ ಬಳಕೆಯಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಭಾಷಾ ವೈವಿಧ್ಯತೆ ಇರುವ ಭಾರತದಲ್ಲಿ ಇಂಗ್ಲೀಷ್ ಭಾಷೆಯು ಸಂಪರ್ಕ ಭಾಷೆಯ ಪಾತ್ರವನ್ನು ನಿರ್ವಹಿಸುತ್ತಿದೆ. ಈ ಕಾರಣಕ್ಕಾಗಿಯೇ ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್‌ಗಳ ಕಲಾಪಗಳನ್ನು ಇಂಗ್ಲೀಷ್‌ನಲ್ಲಿ ನಡೆಸಲು ಹೆಚ್ಚು ಆಸಕ್ತಿ ತೋರಿಸಲಾಗುತ್ತದೆ. ಆದರೆ, ಇದೇ ಸತ್ಯವನೇನಲ್ಲ. ಸಂಸತ್ತು ಈ ಬಗ್ಗೆ ಸ್ಪಷ್ಟವಾದ ಭಾಷಾ ಕಾಯಿದೆಯನ್ನು ರೂಪಿಸಿದರೆ ಮತ್ತು ಅತ್ಯಾಧುನಿಕ ಭಾಷಾಂತರ ವ್ಯವಸ್ಥೆಯು ಸಾಧ್ಯವಾದರೆ ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್‌ಗಳಲ್ಲಿ ಕನ್ನಡವೂ ಸೇರಿದಂತೆ ಪ್ರಾದೇಶಿಕ ಭಾಷೆಗಳಲ್ಲಿ ಕಲಾಪಗಳನ್ನು ನಡೆಸಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಸಶಕ್ತವಾಗುವ ವ್ಯವಸ್ಥೆಯನ್ನು ರೂಪಿಸಬೇಕಾದ ಅಗತ್ಯವಿದೆ.

ಉಚ್ಚ ನ್ಯಾಯಾಲಯಗಳಲ್ಲಿ ಹಿಂದಿ ಬಳಕೆ: ಉತ್ತರ ಪ್ರದೇಶ, ಬಿಹಾರ, ಮಧ್ಯಪ್ರದೇಶ ಹಾಗೂ ರಾಜಸ್ಥಾನ ಸೇರಿದಂತೆ ಹಲವು ಹೈಕೋರ್ಟ್‌ಗಳಲ್ಲಿ ಹಿಂದಿ ಭಾಷೆಯನ್ನು ಬಳಕೆ ಮಾಡಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ. ಅಲ್ಲಿನ ನ್ಯಾಯಮೂರ್ತಿಗಳು ಹಿಂದಿಯಲ್ಲೇ ಕಲಾಪ ನಡೆಸುತ್ತಾರೆ.

ಆಧಾರ: ವಿಜಯ ಕರ್ನಾಟಕ, ದಿನಾಂಕ:06.05.2022.

## 6. ಪಕ್ಷಾಂತರ ನಿಷೇಧ ಕಾನೂನಿಗೆ ಬೇಕು ಬಲ

ಜನಪ್ರತಿನಿಧಿಗಳು ಸಾಮೂಹಿಕವಾಗಿ ಪಕ್ಷಾಂತರ ಮಾಡುವುದನ್ನು ತಡೆಯುವಲ್ಲಿ ಪಕ್ಷಾಂತರ ನಿಷೇಧ ಕಾನೂನು ಸೋತಿದೆ ಎಂದು ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಅವರು ಈಚೆಗೆ ಹೇಳಿದ್ದಾರೆ. ಈ ರೀತಿಯ ಪಕ್ಷಾಂತರ ತಡೆಯಲು ಕಾನೂನು ತಿದ್ದುಪಡಿ ಸೂಚಿಸಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಹಲವು ಪಕ್ಷಾಂತರಗಳನ್ನು ಬಿಜೆಪಿ ಮುಖಂಡರೇ ಮಾಡಿಸಿರುವ ಕಾರಣ, ಬಿಜೆಪಿ ಹಿಂದೆ ಅಧ್ಯಕ್ಷರಾಗಿದ್ದ ನಾಯ್ಡು ಅವರು ಈ ಮಾತುಗಳನ್ನು ಹೇಳಿದರುವುದು ದಿಟ್ಟ ನಡೆ. ಆದರೆ, ಈ ಮಾತುಗಳನ್ನು ನಾಯ್ಡು ಅವರು ಬಿಜೆಪಿಯ ನಾಯಕನಾಗಿ ಅಲ್ಲ, ಉಪರಾಷ್ಟ್ರಪತಿಯಾಗಿ ಆಡಿದ್ದಾರೆ. ಹೀಗಾಗಿ, ಅವರ ಮಾತುಗಳು ಯಾವುದೇ ಒಂದು ಪಕ್ಷಕ್ಕೆ ಸೀಮಿತವಾಗುವುದಿಲ್ಲ. ಅಷ್ಟಕ್ಕೂ, ಈ ವಿಚಾರದಲ್ಲಿ ಬಿಜೆಪಿಯೊಂದನ್ನೇ ಏಕೆ ದೂಷಿಸಬೇಕು? ಎಲ್ಲ ಪಕ್ಷಗಳು ಈ ಕಾನೂನನ್ನು ಮೆಟ್ಟಿ ನಡೆದಿವೆ.

ತೀರ್ಮಾನವನ್ನು ಕೈಗೊಳ್ಳುವ ಸಂಪೂರ್ಣ ಅಧಿಕಾರವನ್ನು ವಿಧಾನಸಭೆ/ಲೋಕಸಭೆಯ ಸ್ಪೀಕರ್‌ಗೆ ನೀಡಿರುವುದು ಈ ಕಾನೂನಿನ ಮುಖ್ಯ ಲೋಪ. ಕಾನೂನಿನ ಆಶಯವನ್ನು ವಿಫಲಗೊಳಿಸಲು ಎಲ್ಲ ಪಕ್ಷಗಳು ಸ್ಪೀಕರ್ ಅವರನ್ನು ಅಸ್ತ್ರವಾಗಿ ಬಳಸಿವೆ. ತಾತ್ವಿಕವಾಗಿ, ಜನಪ್ರತಿನಿಧಿಯೊಬ್ಬ ಸ್ಪೀಕರ್ ಆದ ನಂತರದಲ್ಲಿ ಪಕ್ಷಪಾತಿಯಾಗಿ ಇರುವುದಿಲ್ಲ. ಆದರೆ ವಾಸ್ತವದಲ್ಲಿ, ಆತ ಪಕ್ಷಪಾತಿಯಾಗಿಯೇ ಇರುತ್ತಾನೆ. ಅವರು ತಮ್ಮ ಪಕ್ಷದ ನಾಯಕತ್ವ ಹೇಳಿದಂತೆಯೇ ಮಾಡುತ್ತಾರೆ.

ಸದನದ ಅವಧಿ ಪೂರ್ಣಗೊಳ್ಳುವವರೆಗೆ ಅನರ್ಹತೆಗೆ ಸಂಬಂಧಿಸಿದ ಅರ್ಜಿಯ ಬಗ್ಗೆ ಸ್ಪೀಕರ್ ತೀರ್ಮಾನ ಕೈಗೊಳ್ಳದಿರಲಿ ಎಂದು ಪಕ್ಷದ ನಾಯಕತ್ವವು ಬಯಸುತ್ತದೆ. ಆಗ ಅರ್ಜಿಯನ್ನು ನಿಷ್ಪ್ರಯೋಜಕವಾಗಿಸಲು ನಾಯಕತ್ವಕ್ಕೆ ಸಾಧ್ಯವಾಗುತ್ತದೆ. ನಾಯಕರು ಹೇಳಿದ್ದನ್ನು ಜಾಣತನದಿಂದ ಅನುಸರಿಸುವ ಸ್ಪೀಕರ್, ಅರ್ಜಿಯ ವಿಚಾರಣೆಗೆ ದೀರ್ಘ ಅವಧಿ ತೆಗೆದುಕೊಳ್ಳುತ್ತಾರೆ.

ಸ್ಪೀಕರ್ ಅವರನ್ನು ಯಾರೂ ಪ್ರಶ್ನಿಸಲಾಗದು. ಸ್ಪೀಕರ್ ತೋರುವ ಪಕ್ಷಪಾತಿ ಧೋರಣೆಯನ್ನು ಅರ್ಜಿದಾರರು ಸಹಿಸಿಕೊಳ್ಳಬೇಕು. ಅರ್ಜಿ ವಿಚಾರವಾಗಿ ಸ್ಪೀಕರ್ ತೀರ್ಮಾನ ಕೊಡುವವರೆಗೆ ನ್ಯಾಯಾಂಗ ಕೂಡ ಅವರನ್ನು ಪ್ರಶ್ನಿಸಲಾಗದು. ಇದರಿಂದಾಗಿ ಪಕ್ಷಾಂತರಿಗಳಿಗೆ ತಕ್ಷಣವೇ ಅಧಿಕಾರ ನೀಡಲು ಪಕ್ಷಗಳಿಗೆ ಸಾಧ್ಯವಾಗುತ್ತದೆ.

ಸಂವಿಧಾನದ 52ನೇ ತಿದ್ದುಪಡಿ ಕಾಯ್ದೆ–1985ರ ಮೂಲಕ ಪಕ್ಷಾಂತರ ನಿಷೇಧ ಕಾನೂನನ್ನು ಸಂವಿಧಾನಕ್ಕೆ ಸೇರಿಸಲಾಯಿತು. ಅದಾದ 35 ವರ್ಷಗಳವರೆಗೆ ಸ್ಪೀಕರ್‌ಗಳು ತಮ್ಮ ಪಕ್ಷದ ನಾಯಕರ ಜೊತೆ ಶಾಮೀಲಾಗಿ ವಿಚಾರಣೆಗಳನ್ನು ದೀರ್ಘವಾಗಿಸುತ್ತಿದ್ದರು. ಆದರೆ, 2020ರ ಆರಂಭದಲ್ಲಿ ಥೌನಾಓಜಂ ಶ್ಯಾಮ್ ಕುಮಾರ್ ಸಿಂಗ್ ಪ್ರಕರಣದ ನಂತರ ಪರಿಸ್ಥಿತಿ ಬದಲಾಯಿತು.

ಸಿಂಗ್ ಅವರು 2017ರಲ್ಲಿ ಮಣಿಪುರದಲ್ಲಿ ಕಾಂಗ್ರೆಸ್ಸಿನಿಂದ ಟಿಕೆಟ್ ಪಡೆದು ಶಾಸಕರಾಗಿ ಚುನಾಯಿತರಾಗಿದ್ದರು. ಚುನಾಯಿತರಾದ ನಂತರದಲ್ಲಿ ಅವರು ಬಿಜೆಪಿಗೆ ಪಕ್ಷಾಂತರ ಮಾಡಿದರು. ಅವರಿಗೆ ಹಲವು ಖಾತೆಗಳನ್ನು ಸಂಪುಟ ದರ್ಜೆ ಸ್ಥಾನವನ್ನು ನೀಡಲಾಯಿತು. ಸಿಂಗ್ ಅವರ ಅನರ್ಹತೆಗೆ ಸಂಬಂಧಿಸಿದ ಅರ್ಜಿಯನ್ನು ಸ್ಪೀಕರ್ ವೈ.ಖೇಮ್‌ಚಂದ್ ಅವರು 'ನ್ಯಾಯಸಮ್ಮತ ಅವಧಿಯೊಳಗೆ ಪೂರ್ಣಗೊಳಿಸಬೇಕು' ಎಂಬ ಸೂಚನೆ ನೀಡಿ ಎಂದು ಕೋರಿ ಕಾಂಗ್ರೆಸ್ ಪಕ್ಷವು ಮಣಿಪುರ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿತು. ಆದರೆ, ಸ್ಪೀಕರ್‌ಗೆ ಹೀಗೆ ನಿರ್ದೇಶನವನ್ನು ಹೈಕೋರ್ಟ್ ನೀಡಬಹುದೇ ಎಂಬ ಪ್ರಶ್ನೆಯು ಸುಪ್ರೀಂ ಕೋರ್ಟ್ ಎದುರು ವಿಚಾರಣೆಯ ಹಂತದಲ್ಲಿರುವ ಕಾರಣ ತಾನು ಯಾವುದೇ ಆದೇಶ ನೀಡುವುದಿಲ್ಲ ಎಂದು ಹೈಕೋರ್ಟ್ ಆ ಅರ್ಜಿಯನ್ನು ತಿರಸ್ಕರಿಸಿತು. ಪಕ್ಷವು 2018ರ ಜನವರಿಯಲ್ಲಿ ಮತ್ತೆ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿತು. ಸ್ಪೀಕರ್ ಕೂಡ ಅರೆನ್ಯಾಯಿಕ ಅಧಿಕಾರಿ, ಅವರು ನ್ಯಾಯಸಮ್ಮತ ಅವಧಿಯೊಳಗೆ ತೀರ್ಮಾನ ಕೈಗೊಳ್ಳಬೇಕು–ಅಂದರೆ, ಶಾಸನಸಭೆಯ ಅವಧಿಯಾದ ಐದು ವರ್ಷಕ್ಕೂ ಮುನ್ನ–ಎಂದು ಹೈಕೋರ್ಟ್ ಹೇಳಿತಾದರೂ, ಆದೇಶ ನೀಡಲಿಲ್ಲ.

ಇದು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತು. ನ್ಯಾಯಮೂರ್ತಿ ಆರ್.ಎಫ್.ನರಿಮನ್ ನೇತೃತ್ವದ ತ್ರಿಸದಸ್ಯ ಪೀಠವು, ಅನರ್ಹತೆಗೆ ಸಂಬಂಧಿಸಿದ ಅರ್ಜಿಯನ್ನು ನಾಲ್ಕು ವಾರಗಳಲ್ಲಿ ಇತ್ಯರ್ಥಪಡಿಸುವಂತೆ ಸ್ಪೀಕರ್ ಖೇಮ್‌ಚಂದ್ ಅವರಿಗೆ ಸೂಚಿಸಿತು. ಸ್ಪೀಕರ್‌ಗೆ ತೀರ್ಮಾನ ಕೈಗೊಳ್ಳಲು ಕೋರ್ಟ್ ಕಾಲಮಿತಿ

ವಿಧಿಸಿದ್ದು ಅದೇ ಮೊದಲು. ಆದರೆ ಖೇಮ್‌ಚಂದ್ ಅವರು ನಾಲ್ಕು ವಾರಗಳಲ್ಲಿ ಆದೇಶ ಹೊರಡಿಸಲಿಲ್ಲ. ಬದಲಿಗೆ, ಹೆಚ್ಚುವರಿಯಾಗಿ ಹತ್ತು ದಿನಗಳ ಅವಕಾಶ ಕೋರಿದರು. ಹತ್ತು ದಿನಗಳು ಪೂರ್ಣಗೊಂಡ ನಂತರ ಇನ್ನು ಹದಿನೈದು ದಿನಗಳು ಬೇಕು ಎಂದರು. ಆಗ ಸುಪ್ರೀಂ ಕೋರ್ಟ್, ಸಿಂಗ್ ಅವರನ್ನು ಸಂಪುಟದಿಂದ ತೆಗೆದುಹಾಕಿತು, ಅವರು ಮುಂದಿನ ಆದೇಶದವರೆಗೆ ವಿಧಾನಸಭೆ ಪ್ರವೇಶಿಸುವಂತಿಲ್ಲ ಎಂದು ಹೇಳಿತು.

ಸಂವಿಧಾನದ 212ನೇ ವಿಧಿಯ ಪ್ರಕಾರ, ಶಾಸನಸಭೆಯ ನಡಾವಳಿಗಳಲ್ಲಿ ಮಧ್ಯಪ್ರವೇಶಿಸಲು ನ್ಯಾಯಾಂಗಕ್ಕೆ ಅಧಿಕಾರವಿಲ್ಲ. ಸ್ಪೀಕರ್ ಸ್ಥಾನದಲ್ಲಿರುವವರು ಈ ವಿಧಿಯ ಅಡಿಯಲ್ಲಿ ರಕ್ಷಣೆ ಪಡೆದು, ತಮ್ಮ ನಾಯಕರು ಹೇಳಿದ ಆಟ ಆಡುತ್ತಿದ್ದರು. ಆದರೆ, ಸಿಂಗ್ ಪ್ರಕರಣದಲ್ಲಿ ಸ್ಪೀಕರ್ ಅವರು ಉದ್ದೇಶ ಪೂರ್ವಕವಾಗಿ ಯಾವುದೇ ತೀರ್ಮಾನ ಕೈಗೊಳ್ಳದ ಕಾರಣದಿಂದಾಗಿ, ಸುಪ್ರೀಂ ಕೋರ್ಟ್ ಮಧ್ಯಪ್ರವೇಶಿಸಿತು. ಸಂವಿಧಾನದ 142ನೇ ವಿಧಿಯ ಅಡಿಯಲ್ಲಿ ಆದೇಶ ನೀಡಿತು. ಈ ವಿಧಿಯು ಯಾವುದೇ ವಿಷಯದಲ್ಲಿ ಸಂಪೂರ್ಣ ನ್ಯಾಯ ಒದಗಿಸಲು ಯಾವುದೇ ತೀರ್ಪು ನೀಡುವ ಅಧಿಕಾರವನ್ನು ಸುಪ್ರೀಂ ಕೋರ್ಟ್‌ಗೆ ನೀಡಿದೆ.

ಇದಾದ ಸರಿಸುಮಾರು ಒಂದು ವರ್ಷದ ನಂತರ, ಗೋವಾದ ಪ್ರಕರಣದಲ್ಲಿ ಮಧ್ಯಪ್ರವೇಶಿಸಿದ ಸುಪ್ರೀಂ ಕೋರ್ಟ್, ತೀರ್ಮಾನ ಕೈಗೊಳ್ಳಲು ಸ್ಪೀಕರ್‌ಗೆ ಕಾಲಮಿತಿ ನಿಗದಿ ಮಾಡಿತು. 2019ರ ಜುಲೈನಲ್ಲಿ ಕಾಂಗ್ರೆಸ್ಸಿನ ಹತ್ತು ಶಾಸಕರು, ಎಂಜಿಪಿಯ ಇಬ್ಬರು ಶಾಸಕರು, ಬಿಜೆಪಿಗೆ ಪಕ್ಷಾಂತರ ಮಾಡಿದರು. ಅವರ ಅನರ್ಹತೆಗೆ ಸಂಬಂಧಿಸಿದ ಅರ್ಜಿಯ ವಿಚಾರವಾಗಿ ಸ್ಪೀಕರ್ ಒಂದೂವರೆ ವರ್ಷ ತೀರ್ಮಾನ ಕೈಗೊಳ್ಳಲಿಲ್ಲ. ಕಾಂಗ್ರೆಸ್ ಸುಪ್ರೀಂ ಕೋರ್ಟ್ ಮೊರೆ ಹೋಯಿತು. 2021ರ ಏಪ್ರಿಲ್ 20ರೊಳಗೆ ತೀರ್ಮಾನ ಕೈಗೊಳ್ಳುವಂತೆ ಸುಪ್ರೀಂ ಕೋರ್ಟ್ ಸೂಚಿಸಿತು. ಮುಕುಲ್ ರಾಯ್ ಅವರ ಅನರ್ಹತೆಗೆ ಸಂಬಂಧಿಸಿದ ಅರ್ಜಿಯ ವಿಚಾರವಾಗಿ ಕಾಲಮಿತಿಯಲ್ಲಿ ತೀರ್ಮಾನಿಸುವಂತೆ ಪಶ್ಚಿಮ ಬಂಗಾಳ ಸ್ಪೀಕರ್‌ಗೆ ಅದೇ ವರ್ಷದಲ್ಲಿ ಕಲ್ಕತ್ತಾ ಹೈಕೋರ್ಟ್ ತಾಕೀತು ಮಾಡಿತು.

ಇವುಗಳ ಸಾರಂಶ ಸ್ಪಷ್ಟವಾಗಿದೆ. ಪಕ್ಷಾಂತರ ನಿಷೇಧ ಕಾನೂನು ಪರಿಣಾಮಕಾರಿಯಾಗಬೇಕು ಎಂದಾದರೆ, ಅನರ್ಹತೆಗೆ ಸಂಬಂಧಿಸಿದ ಅರ್ಜಿಗಳ ವಿಚಾರದಲ್ಲಿ ತೀರ್ಮಾನ ಕೈಗೊಳ್ಳುವ ಅಧಿಕಾರವನ್ನು ಸ್ಪೀಕರ್ ಅವರಿಂದ ಹಿಂದಕ್ಕೆ ಪಡೆಯುವ ರೀತಿಯಲ್ಲಿ ಕಾನೂನು ತಿದ್ದುಪಡಿ ಆಗಬೇಕು. ಆ ಅಧಿಕಾರವನ್ನು ಸ್ವತಂತ್ರ ಪ್ರಾಧಿಕಾರವೊಂದರ ಕೈಯಲ್ಲಿ ಇರಿಸಬೇಕು. 'ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಅಥವಾ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ನೇತೃತ್ವದ ನ್ಯಾಯ ಮಂಡಳಿಯ ಕೈಗೆ ಅಥವಾ ಬೇರೆ ಯಾವುದಾದರೂ ಹೊರಗಿನ ಸ್ವತಂತ್ರ ವ್ಯವಸ್ಥೆಗೆ ಈ ಅಧಿಕಾರವನ್ನು ನೀಡುವ ರೀತಿಯಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತರುವ ಬಗ್ಗೆ ಸಂಸತ್ತು ಗಂಭೀರವಾಗಿ ಪರಿಶೀಲಿಸಬಹುದು' ಎಂದು ಸಿಂಗ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಹೇಳಿದೆ.

ಅನರ್ಹತೆಗೆ ಸಂಬಂಧಿಸಿದ ಅರ್ಜಿಗಳನ್ನು ನ್ಯಾಯ ಸಮ್ಮತವಾದ ಕಾಲಮಿತಿಯಲ್ಲಿ ತೀರ್ಮಾನಿಸುವ ಸ್ವತಂತ್ರ ಪ್ರಾಧಿಕಾರ ಮಾತ್ರವೇ ರಾಜಕೀಯ ಪಕ್ಷಗಳು ಹಾಗೂ ಚುನಾಯಿತ ಪ್ರತಿನಿಧಿಗಳು ಅವಕಾಶವಾದಿ ಒಪ್ಪಂದಕ್ಕೆ ಬರುವುದನ್ನು ತಡೆಯಬಹುದು, ಜನರ ಆದೇಶವು ವಿರೂಪಗೊಳ್ಳದಂತೆ ನೋಡಿಕೊಳ್ಳಬಹುದು. ಮೂರು ತಿಂಗಳಲ್ಲಿ ಅರ್ಜಿಗಳು ಇತ್ಯರ್ಥವಾಗುವಂತೆ ಇರಬೇಕು. ಸಕಾರಣ ಇದ್ದರೆ ಮಾತ್ರ ಹೆಚ್ಚುವರಿಯಾಗಿ ಮೂರು ತಿಂಗಳ ಕಾಲಾವಕಾಶ ನೀಡಬಹುದು.

ಪಕ್ಷಾಂತರ ಮಾಡಿದವರು ಶಾಸನಸಭೆಯ ಅದೇ ಅವಧಿಯಲ್ಲಿ ಅಧಿಕಾರ ಹಿಡಿಯುವುದಕ್ಕೆ ಅವಕಾಶ ಇರಬಾರದು. ಪಕ್ಷಾಂತರ ಮಾಡಿದ ನಂತರದಲ್ಲಿ ಯಾವುದೇ ಅಧಿಕಾರ ಸಿಗುವುದಿಲ್ಲ ಎಂದಾದರೆ ಅವರು ಪಕ್ಷಾಂತರ ಏಕೆ ಮಾಡುತ್ತಾರೆ? ರಾಜಕೀಯದಲ್ಲಿ 'ಶೀಲ, ನಡವಳಿಕೆ ಮತ್ತು ಸಾಮರ್ಥ್ಯಕ್ಕೆ' ಪ್ರಾಧಾನ್ಯ ಸಿಗಬೇಕು ಎಂದಾದರೆ ಕಾನೂನಿನಲ್ಲಿ ಈ ಬದಲಾವಣೆಗಳನ್ನು ತರಲು ಮುಂದಾಗುವಂತೆ ಸರ್ಕಾರಕ್ಕೆ ಸಲಹೆ ನೀಡಬೇಕು.

ಲೇಖಕರು: ಅರುಣ್ ಸಿನ್ಹಾ,

ಆಧಾರ: ಪ್ರಜಾವಾಣಿ, ದಿನಾಂಕ:07.05.2022.

## 7. ಕೋರ್ಟುಗಳಲ್ಲಿ ಪ್ರಾದೇಶಿಕ ಭಾಷೆ ಕಲರವ ಕೇಳೀತೆ

ಭಾರತದಲ್ಲಿ ಮೆಕಾಲೆ ಶಿಕ್ಷಣ ಪದ್ಧತಿ ಅನುಸರಿಸತೊಡಗಿ 2035ಕ್ಕೆ 200 ವರ್ಷ ಪೂರ್ಣಗೊಳ್ಳಲಿದೆ. 2035ರ ಒಳಗೆ ಇಂಗ್ಲಿಷ್ ಸಂಚಾಲಿತ ಭಾರತವನ್ನು ಭಾರತ ಭಾಷಾ ಸಂಚಾಲಿತ ವ್ಯವಸ್ಥೆಗೆ ತೆರೆದುಕೊಳ್ಳುವಂತೆ ಮಾಡಬೇಕು ಎಂಬ ಉದ್ದೇಶ ಕೇಂದ್ರ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಭಾರತೀಯ ಭಾಷೆಗಳ ಉನ್ನತ ಸಮಿತಿಯದ್ದಾಗಿದೆ. ಈ ನಿಟ್ಟಿನಲ್ಲಿ ಪೂರಕ ಮಾರ್ಗಸೂಚಿಗಳನ್ನು ಸಿದ್ಧಪಡಿಸುವಲ್ಲಿ ಸಮಿತಿ ತೊಡಗಿದೆ.

ಭಾರತೀಯ ಭಾಷೆಗಳ ಬೆಳವಣಿಗೆಗೆ ದೇಶದ ಆಡಳಿತ, ಕಾನೂನು, ಶಿಕ್ಷಣ ಸೇರಿದಂತೆ ಬಹುಪಾಲು ಕ್ಷೇತ್ರಗಳಲ್ಲಿ ಭಾರತೀಯ ಭಾಷೆಗಳ ಅಳವಡಿಕೆ ಅತ್ಯಗತ್ಯ. ಹೀಗಾಗಿಯೇ, ಕೆಲ ದಿನಗಳ ಹಿಂದೆ ನಡೆದ ಮುಖ್ಯಮಂತ್ರಿಗಳು ಮತ್ತು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಜಂಟಿ ಸಭೆ ಉದ್ದೇಶಿಸಿ ಮಾತನಾಡಿದ್ದ ಪ್ರಧಾನಿ ನರೇಂದ್ರ ಮೋದಿ, ದೇಶದ ನ್ಯಾಯಾಲಯಗಳ ಕಲಾಪ ಪ್ರಾಂತೀಯ ಭಾಷೆಗಳಲ್ಲಿ ನಡೆಯಬೇಕು ಎಂಬ ಅನಿಸಿಕೆ ವ್ಯಕ್ತಪಡಿಸಿದ್ದರು. ಇದಕ್ಕೆ ಪ್ರತಿಕ್ರಿಯೆ ನೀಡಿದ್ದ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ, ಸ್ಥಳೀಯ ಭಾಷೆಗಳ ಅಳವಡಿಕೆಯಂತಹ ಸುಧಾರಣೆಗಳು ಒಂದು ದಿನದಲ್ಲಿ ಆಗುವಂಥದ್ದಲ್ಲ. ಲಾಜಿಸ್ಟಿಕ್ಸ್ ತೊಂದರೆಗಳು, ಸವಾಲುಗಳಿಂದಾಗಿ ಸಮಯ ಬೇಕು. ಕೆಲವು ನ್ಯಾಯಾಧೀಶರಿಗೆ ಸ್ಥಳೀಯ ಭಾಷೆಯ ಪರಿಚಯವಿರುವುದಿಲ್ಲ. ಮುಖ್ಯ ನ್ಯಾಯಾಮೂರ್ತಿಗಳು ಯಾವಾಗಲೂ ಅನ್ಯ ರಾಜ್ಯದವರೇ ಆಗಿರುತ್ತಾರೆ. ಅಲ್ಲದೆ, ಹೆಚ್ಚಿನ ಹಿರಿಯ ನ್ಯಾಯಧೀಶರು ಹೊರ ರಾಜ್ಯದವರಾಗಿರುತ್ತಾರೆ. ಪ್ರಾದೇಶಿಕ ಭಾಷೆಯ ಅನುಷ್ಠಾನದಲ್ಲಿ ಹಲವಾರು ಅಡೆತಡೆ–ಅಡಚಣೆಗಳಿವೆ ಎಂದಿದ್ದಾರೆ.

ನ್ಯಾಯಾಲಯಗಳ ಕಲಾಪಗಳನ್ನು ಪ್ರಾಂತೀಯ ಭಾಷೆಗಳಲ್ಲಿ ನಡೆಸಬೇಕು ಎನ್ನುವುದು ಇಂದು ನೆನ್ನೆಯ ಬೇಡಿಕೆಯಲ್ಲ. ರಾಜ್ಯಗಳಲ್ಲಿ ಹೈಕೋರ್ಟ್ ಕಲಾಪಗಳನ್ನು ಸ್ಥಳೀಯ ಭಾಷೆಗಳಲ್ಲೇ ನಡೆಸಬೇಕು ಎಂದು ಒತ್ತಾಯಿಸಿ ದಿಲ್ಲಿಯಲ್ಲೂ ಪ್ರತಿಭಟನೆಗಳು ನಡೆದರೂ, ಹೆಚ್ಚಿನ ಪ್ರಯೋಜನವಾಗಿಲ್ಲ. ಆದರೆ, ಕೇಂದ್ರ ಸರ್ಕಾರವೇ ಈಗ ಪ್ರಾದೇಶಿಕ ಭಾಷೆಗಳ ಬಳಕೆಗೆ ಒತ್ತು ನೀಡಿರುವುದು ಹಾಗೂ ಭಾರತೀಯ ಭಾಷಾ ಸಮಿತಿ ಕೂಡ ಈ ದಿಕ್ಕಿನಲ್ಲಿ ಕಾರ್ಯೋನ್ಮುಖವಾಗಿರುವುದು ಗಮನಾರ್ಹ ಬೆಳವಣಿಗೆ.

**ಸಮಿತಿಯಿಂದ ಅಧ್ಯಯನ:** ಕೋರ್ಟುಗಳಲ್ಲಿ ಪ್ರಾಂತೀಯ ಭಾಷೆಗಳ ಅಳವಡಿಕೆಗೆ ವಕೀಲರು ಮತ್ತು ನ್ಯಾಯಾಧೀಶರೂ ಮನಸ್ಸು ಮಾಡಬೇಕು ದಾಖಲೆ–ದಸ್ತಾವೇಜುಗಳು ಪ್ರಾಂತೀಯ ಭಾಷೆಯಲ್ಲಿ ಸಿದ್ಧವಾಗಬೇಕು. ಇದಕ್ಕೆ ಅನುವಾದಕರು ಬೇಕಲ್ಲವೆ ಅವರಿಗೆ ಕಾನೂನು ಜ್ಞಾನವಿರುವುದೂ ಅಷ್ಟೇ ಮುಖ್ಯ. ಅದು ಸಾಧ್ಯವಾಗಬೇಕೆಂದರೆ ಕಾನೂನು ಶಿಕ್ಷಣ ಪ್ರಾಂತೀಯ ಭಾಷೆಗಳಲ್ಲೂ ಇರಬೇಕು. ಇದನ್ನು ಸಾಧ್ಯಗೊಳಿಸುವ ಬಗೆ ಹೇಗೆಂಬ ಬಗ್ಗೆ ಸಮಿತಿ ಅಧ್ಯಯನ ನಡೆಸುತ್ತಿದೆ ಮತ್ತು ಕೇಂದ್ರ ಸರ್ಕಾರಕ್ಕೆ ಸೂಕ್ತ ಶಿಫಾರಸು ಮಾಡಲಿದೆ ಎನ್ನುತ್ತಾರೆ. ಭಾರತೀಯ ಭಾಷಾ ಸಮಿತಿ ಮುಖ್ಯಸ್ಥರಾದ ಚ.ಮೂ. ಕೃಷ್ಣಶಾಸ್ತ್ರಿ. ಅದಕ್ಕೂ ಮುನ್ನ ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ನಡೆಸುವ ಕಾನೂನು ವಿಶ್ವವಿದ್ಯಾಲಯಗಳು ಮತ್ತು ಪಠ್ಯಕ್ರಮ ಸಿದ್ಧಪಡಿಸುವ ಬಾರ್ ಕೌನ್ಸಿಲ್ ಆಫ್ ಇಂಡಿಯಾದೊಂದಿಗೆ ಸಮಿತಿ ಸಮಾಲೋಚನೆ ನಡೆಸಿ ಅಭಿಪ್ರಾಯಗಳನ್ನು ಪಡೆದುಕೊಳ್ಳಲಿದೆ.

**"ಸಾಂವಿಧಾನಿಕ ಭಾದಕ" ಇಲ್ಲ:** ಹೈಕೋರ್ಟ್ ಕಲಾಪಗಳಲ್ಲಿ ಪ್ರಾದೇಶಿಕ ಭಾಷೆ ಜಾರಿ ಕಬ್ಬಿಣದ ಕಡಲೆಯಾಗಿ ಕಂಡುಬಂದರೂ ಸಾಂವಿಧಾನಿಕ ದೃಷ್ಟಿಯಿಂದ ಅಂತಹ ಕ್ಲಿಷ್ಟ ವಿಷಯವೇನಲ್ಲ ಎನ್ನುತ್ತಾರೆ ಸುಪ್ರೀಂಕೋರ್ಟ್ ವಕೀಲ ರಾಘವೇಂದ್ರ ಶ್ರೀವತ್ಸ, ಸಂವಿಧಾನದ ಅನುಚ್ಛೇದ 348ರ ಪ್ರಕಾರ ಸಂಸತ್ತು ಕಾನೂನು ರೂಪಿಸಿ ಅನ್ಯಥಾ ಸೂಚಿಸುವವರೆಗೂ ಸುಪ್ರೀಂಕೋರ್ಟ್ ಹಾಗೂ ಹೈಕೋರ್ಟ್ ಕಲಾಪಗಳು ಇಂಗ್ಲೀಷ್‌ನಲ್ಲಿರಬೇಕು. ಅದೇ ಅನುಚ್ಛೇದದ 2ನೇ ಭಾಗದಲ್ಲಿ ಉಚ್ಚ ನ್ಯಾಯಾಲಯಗಳಲ್ಲಿ ಪ್ರಾದೇಶಿಕ ಭಾಷೆಯ ಬಳಕೆಗೆ ಅನುವು ಮಾಡಿಕೊಡಲಾಗಿದೆ. ರಾಷ್ಟ್ರಪತಿಗಳ ಪೂರ್ವಾನುಮೋದನೆಯೊಂದಿಗೆ ರಾಜ್ಯಪಲರು ಆ ರಾಜ್ಯದಲ್ಲಿನ ಹೈಕೋರ್ಟ್‌ನಲ್ಲಿ ಸ್ಥಳೀಯ ಭಾಷೆಯ ಉಪಯೋಗಕ್ಕೆ ಅವಕಾಶ ಮಾಡಿಕೊಡಬಹುದು. ಇಂತಹ ಪ್ರಸ್ತಾವನೆಗಳನ್ನು ಹಿಂದೆ ಸಲ್ಲಿಸಲಾಗಿತ್ತಾದರೂ ಕಾರ್ಯರೂಪಕ್ಕೆ ಬರಲಿಲ್ಲ.

ಇದಕ್ಕೆ 1965ರ ಕೇಂದ್ರ ಸಂಪುಟ ಸಮಿತಿಯ ಅಭಿಪ್ರಾಯವೊಂದು ಅಡ್ಡಿಯುಂಟು ಮಾಡಿದೆ. ಹೈಕೋರ್ಟ್‌ಗಳಲ್ಲಿ ಪ್ರಾದೇಶಿಕ ಭಾಷೆಗೆ ಅವಕಾಶವಿರಬೇಕಾದರೆ ಸುಪ್ರೀಂಕೋರ್ಟಿನ ಸಮ್ಮತಿ ಅತ್ಯವಶ್ಯ ಎಂದು ಆ ಸಮಿತಿ ಅಭಿಪ್ರಾಯಪಟ್ಟಿತ್ತು. ಎರಡು ಬಾರಿ ಸುಪ್ರೀಂಕೋರ್ಟ್ ಅಂತಹ ಪ್ರಸ್ತಾವನೆಯನ್ನು ನಿರಾಕರಿಸಿದೆ. ಆದರೆ ಅಂದಿನ ಕೇಂದ್ರ ಸಂಪುಟ ಸಮಿತಿಯ ಅಂತಹ ಅಭಿಪ್ರಾಯ ತಪ್ಪು ಎಂಬುದು ಸಂವಿಧಾನದಿಂದಲೇ ಸ್ಪಷ್ಟವಾಗುತ್ತದೆ. ಹೈಕೋರ್ಟ್‌ಗಳಲ್ಲಿ ಪ್ರಾದೇಶಿಕ ಭಾಷೆಯ ಉಪಯೋಗಕ್ಕೆ ಸುಪ್ರೀಂಕೋರ್ಟ್‌ನ ಸಮ್ಮತಿ ಅವಶ್ಯವೆಂಬ ಕಟ್ಟಳೆ ಸಂವಿಧಾನದಲ್ಲಿ ಇಲ್ಲ. ಸಂವಿಧಾನದಡಿ ಇರುವ ನಮ್ಮ ನ್ಯಾಯಾಂಗ ವ್ಯವಸ್ಥೆಯಲ್ಲಿ ಕೇವಲ ನ್ಯಾಯಿಕ ವಿಚಾರಗಳಲ್ಲಿ  ರಾಜ್ಯಗಳ ಹೈಕೋರ್ಟ್‌ಗಳು ದೇಶದ ಸುಪ್ರೀಂಕೋರ್ಟ್‌ಗೆ ಅಧೀನವಾಗಿರುತ್ತವೆ. ಅರ್ಥಾತ್ ಹೈಕೋರ್ಟ್‌ಗಳ ತೀರ್ಪುಗಳಲ್ಲಿನ ತಪ್ಪುಗಳನ್ನು ಮೇಲ್ಮನವಿ ಮೂಲಕ ಸುಪ್ರೀಂಕೋರ್ಟ್ ಸರಿಪಡಿಸುವ ವ್ಯವಸ್ಥೆಯಿದ್ದರೂ ಆಡಳಿತಾತ್ಮಕವಾಗಿ ಹೈಕೋರ್ಟ್‌ಗಳು ಸಾಂವಿಧಾನಿಕ ಸಂಸ್ಥೆಗಳಾಗಿ ಅಧೀನ ನ್ಯಾಯಾಲಯಗಳಾಗಿರುವುದಿಲ್ಲ. ಆದ್ದರಿಂದ ಸಂವಿದಾನದ ಅನುಚ್ಛೇದ 348 (2)ರ ಪ್ರಕಾರ ಹೈಕೋರ್ಟ್‌ಗಳಲ್ಲಿ ಪ್ರಾದೇಶಿಕ ಭಾಷಾ ಉಪಯೋಗಕ್ಕೆ ಅವಕಾಶ ಕಲ್ಪಿಸಲು ಸಾಂವಿಧಾನಿಕ ಬಾದಕವೇನೂ ಇಲ್ಲ ಎಂದು ವಿವರಿಸುತ್ತಾರೆ ರಾಘವೇಂದ್ರ ಶ್ರೀವತ್ಸ.

ದೇಶದ ಹಲವಾರು ಕೆಳ ನ್ಯಾಯಾಲಯಗಳಲ್ಲಿ ಸ್ಥಳೀಯ ಭಾಷೆಗಳಲ್ಲಿ ವಿಚಾರಣೆ ನಡೆಯುತ್ತಿದ್ದರೂ, ಪೂರ್ಣ ಪ್ರಾಮಾಣದಲ್ಲೇನೂ ಅದನ್ನು ಅಳವಡಿಸಿಲ್ಲ. ಹೈಕೋರ್ಟ್‌ಗಳಲ್ಲಿ ಇಂಗ್ಲೀಷ್ ಭಾಷೆಯಲ್ಲೇ ವಾದ–ಪ್ರತಿವಾದ, ತೀರ್ಪುಗಳನ್ನು ನೀಡುವುದು ರೂಢಿಗತವಾಗಿರುವುದರಿಂದ ಪ್ರಾಂತೀಯ ಭಾಷೆಗಳ ಅಳವಡಿಕೆಗೆ ಮಹತ್ವ ಸಿಕ್ಕಿಲ್ಲ. ಅನೇಕ ಸರ್ವಿಸ್ ಕೇಸುಗಳ ಕಾಗದ ಪತ್ರಗಳು ಸ್ಥಳೀಯ ಅಧಿಕೃತ ಭಾಷೆಗಳಲ್ಲೇ ಇರುವುದರಿಂದ ಅವುಗಳನ್ನು ಇಂಗ್ಲೀಷ್‌ಗೆ ಅನುವಾದಿಸಬೇಕಾಗುತ್ತದೆ. ಪ್ರಾಂತೀಯ ಭಾಷೆಯನ್ನು ಸಮರ್ಪಕವಾಗಿ ಅಳವಡಿಸಬೇಕೆಂದರೆ ವ್ಯವಸ್ಥೆ ನೋಡುವ ದೃಷ್ಟಿಕೋನ ಬದಲಾಗಬೇಕು. ಉತ್ತರಖಂಡ, ಅಲಹಾಬಾದ್ ಹೈಕೋರ್ಟ್‌ಗಳ ಅನೇಕ ತೀರ್ಪುಗಳು ಹಿಂದಿಗಳಲ್ಲೇ ಪ್ರಕಟವಾಗುತ್ತವೆ. ಅಲ್ಲಿ ಆಡಳಿತಾತ್ಮಕ ಅನುಕೂಲತೆಗಾಗಿ ಹಿಂದಿಯನ್ನೇ ಹೆಚ್ಚಾಗಿ ಬಳಸಲಾಗುತ್ತದೆ. ಅಲ್ಲಿ ಸಾಧ್ಯವೆಂದರೆ ಕರ್ನಾಟಕದಲ್ಲೇಕೆ ಸಾಧ್ಯವಿಲ್ಲ,ಎಂದು ಪ್ರಶ್ನಿಸುತ್ತಾರೆ. ಕೇರಳ ಹೈಕೋರ್ಟ್ ವಕೀಲೆ ಮೈತ್ರೇಯಿ ಹೆಗಡೆ ಕರ್ನಾಟಕದಲ್ಲಿ ಕಾನೂನು ಶಿಕ್ಷಣ ಪಡೆಯುತ್ತಿರುವ 12–13000 ವಿದ್ಯಾರ್ಥಿಗಳಲ್ಲಿ ಶೇ.60 ರಷ್ಟು ಮಂದಿ ಕನ್ನಡ ಮಾಧ್ಯಮದಲ್ಲೇ ಓದುತ್ತಿರುವುದರಿಂದ ಈ ವಿದ್ಯಾರ್ಥಿಗಳೂ ಪ್ರಾಂತೀಯ ಭಾಷೆಯ ಬಳಕೆ ಮೂಲಕ ಉತ್ತಮ ಭವಿಷ್ಯ ಕಂಡುಕೊಳ್ಳಬಹುದು ಎನ್ನುತ್ತಾರವರು.

ನ್ಯಾಷನಲ್ ಲಾ ಯೂನಿವರ್ಸಿಟಿಯಂತಹ ವಿವಿಧ ರಾಜ್ಯಗಳ ವಿದ್ಯಾರ್ಥಿಗಳು ಓದುವ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರಾಂತೀಯ ಭಾಷೆಗಳಲ್ಲಿ ಶಿಕ್ಷಣ ನೀಡಲು ಸಂಸ್ಥೆಗಳ ಆಡಳಿತ ಮಂಡಳಿಯೆ ಒಪ್ಪಲಿಕ್ಕಿಲ್ಲ. ಆದರೆ, ಇಂಗ್ಲೀಷ್ ಭಾಷೆಯಲ್ಲಿ ದುರ್ಬಲವಿರುವ ವಿದ್ಯಾರ್ಥಿಗಳಿಗೆ ಪಠ್ಯ ಸಾಮಗ್ರಿಗಳು ಭಾರತೀಯ ಭಾಷೆಗಳಲ್ಲೂ ಲಭ್ಯವಿದ್ದಾಗ ನೆರವಾಗಲಿದೆ. ಕೆಳ ನ್ಯಾಯಾಲಯಗಳಲ್ಲಿ ವಕೀಲಿಕೆ ಮಾಡುವವರಿಗೆ ಪ್ರಾಂತೀಯ ಭಾಷೆಗಳ ಜ್ಞಾನ ಸಾಕು. ಆದರೆ, ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್‌ಗೆ ಹೋಗಬಯಸುವವರು ಇಂಗ್ಲೀಷ್‌ನಲ್ಲಿ ಓದಲು ಮುಂದಾಗುತ್ತಾರೆ ಉದಾಹರಣೆಗೆ ಮಧ್ಯಪ್ರದೇಶದಲ್ಲಿ ಎಲ್‌ಎಲ್‌ಬಿ ಪದವಿಯನ್ನು ಶೇ.55 ವಿದ್ಯಾರ್ಥಿಗಳು ಹಿಂದಿ ಮಾಧ್ಯಮದಲ್ಲಿ ಓದಿದರೆ ಶೇ.45 ವಿದ್ಯಾರ್ಥಿಗಳು ಇಂಗ್ಲೀಷ್‌ನಲ್ಲಿ ಓದುತ್ತಿದ್ದಾರೆ. ಆದರೆ, ಎಲ್‌ಎಲ್‌ಎಂ (ಮಾಸ್ಟರ್ ಆಫ್ ಲೆಜಿಸ್ಲೇಟಿವ್ ಲಾ) ಉನ್ನತ ವ್ಯಾಸಂಗವನ್ನು ಶೇ.88 ವಿದ್ಯಾರ್ಥಿಗಳು ಇಂಗ್ಲೀಷ್‌ನಲ್ಲೇ ಪಡೆಯುತ್ತಿದ್ದಾರೆ. ಇಂಗ್ಲಿಷ್ ಮಾಧ್ಯಮದಲ್ಲಿ ಓದುವವರು ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್‌ನಲ್ಲಿ ಪ್ರಾಕ್ಟೀಸ್ ಮಾಡುವ ಉದ್ದೇಶ ಹೊಂದಿರುತ್ತಾರೆ. ಎಲ್ಲಿಯವರೆಗೆ ಹೈಕೋರ್ಟ್‌ಗಳಲ್ಲೂ ಪ್ರಾಂತೀಯ ಭಾಷೆಗಳ ಅಳವಡಿಕೆ ಅನಿವಾರ್ಯವಾಗುವುದಿಲ್ಲವೋ ಅಲ್ಲಿಯವರೆಗೆ ವಿದ್ಯಾರ್ಥಿಗಳೂ ಭಾರತೀಯ ಭಾಷೆಗಳಲ್ಲಿ ಶಿಕ್ಷಣ ಪಡೆಯಲು ಆಸಕ್ತಿವಹಿಸುವುದಿಲ್ಲ. ಇಂಥ ಅನೇಕ ಸೂಕ್ಷ್ಮ ಮಾಹಿತಿಗಳನ್ನು ಭಾರತೀಯ ಭಾಷೆಗಳ ಸಮಿತಿ ಸಂಗ್ರಹಿಸಿದೆ.

ಮುಂದಿನ 10 ವರ್ಷಗಳಲ್ಲಿ ಹಂತಹಂತವಾಗಿ ಇಂಗ್ಲೀಷ್ ಪ್ರಧಾನ ವ್ಯವಸ್ಥೆಯಿಂದ ಭಾರತೀಯ ಭಾಷೆಗಳ ವ್ಯವಸ್ಥೆಗೆ ಬರಲು ಇದು ಮುನ್ನಡಿಯಾಗಬೇಕು. ಇದಕ್ಕಾಗಿ ಪ್ರಾಥಮಿಕ ಹಂತದಲ್ಲಿ ವ್ಯಾಪಕ

ಪ್ರಮಾಣದ ಸಾಮಾಗ್ರಿ ನಿರ್ಮಾಣವಾಗಬೇಕು. ಕರ್ನಾಟಕ ಸೇರಿ ಎಲ್ಲಾ ರಾಜ್ಯಗಳಲ್ಲಿ ಸರ್ಕಾರ, ಶೈಕ್ಷಣಿಕ ಸಂಸ್ಥೆಗಳು, ವಕೀಲರು, ಬಾರ್ ಅಸೋಸಿಯೇಷನ್‌ಗಳು, ಸರ್ಕಾರೇತರ ಸಂಸ್ಥೆಗಳು ಸೇರಿ ಕಾನೂನು ಪಠ್ಯಪುಸ್ತಕ, ತೀರ್ಪುಗಳು ರೆಫರೆನ್ಸ್ ಸಾಮಾಗ್ರಿಗಳನ್ನು ಭಾರತೀಯ ಭಾಷೆಗಳಿಗೆ ಅನುವಾದಿಸಲು ಅಭಿಯಾನ ನಡೆಸಬೇಕು. ಹಾಗಾದಾಗ ಕನ್ನಡ ಸೇರಿ ಎಲ್ಲಾ ಭಾರತೀಯ ಭಾಷೆಗಳಿಗೆ ಮಹತ್ವ ಸಿಗುವುದಲ್ಲದೆ, ಕನ್ನಡದಲ್ಲಿ ಓದಿದರೆ ಭವಿಷ್ಯವಿದೆ ಎಂಬ ಭಾವನೆ ವಿದ್ಯಾರ್ಥಿಗಳಲ್ಲೂ ಮೂಡಲಿದೆ ಎನ್ನುವುದು ಚಿ.ಮೂ. ಕೃಷ್ಣಶಾಸ್ತ್ರಿ ಅಭಿಮತ.

ಹೈಕೋರ್ಟ್‌ಗಳಲ್ಲಿ ಹಿಂದಿ: Official Languages Act 1963ರ (ಅಧಿಕೃತ ಭಾಷೆಗಳ ಕಾಯ್ದೆ) ಪ್ರಕಾರ ಈಗಾಗಲೇ ಉತ್ತರ ಭಾರತದ ಕೆಲವು ಹೈಕೋರ್ಟ್‌ಗಳಲ್ಲಿ ಹಿಂದಿ ಭಾಷಾ ಪ್ರಯೋಗಕ್ಕೆ ಅವಕಾಶ ಕೊಡಲಾಗಿದೆ. ಸುಪ್ರೀಂಕೋರ್ಟ್‌ನ ಕೆಲವು ತೀರ್ಪುಗಳನ್ನು ಪ್ರಾದೇಶಿಕ ಭಾಷೆಗಳಲ್ಲಿ ಅನುವಾದಗೊಳಿಸಲಾಗುತ್ತಿದೆ. ಅಗತ್ಯವಿದ್ದಾಗ ದಾಖಲೆ, ತೀರ್ಪುಗಳನ್ನು ಇಂಗ್ಲೀಷ್‌ಗೆ ಅನುವಾದ ಮಾಡಿ ಬಳಸಿಕೊಳ್ಳುವ ವ್ಯವಸ್ಥೆಯಿದ್ದಲ್ಲಿ ಪ್ರಾದೇಶಿಕ ಭಾಷೆ ಪ್ರಯೋಗಕ್ಕೆ ಯಾವುದೇ ಅಭ್ಯಂತರವಿರಕೂಡದು (Artificial Intelligence (ಕೃತಕ ಬುದ್ಧಿಮತ್ತೆ) ತಂತ್ರಜ್ಞಾನದ ಬಳಕೆಯೂ ಈ ದಿಸೆಯಲ್ಲಿ ನೆರವಾಗಬಹುದು. ಕಾನೂನು ಹಾಗೂ ನ್ಯಾಯಂಗ ವ್ಯವಸ್ಥೆ ಸಾಮಾನ್ಯ. ಜನರಿಗೆ ಅರ್ಥವಾಗುವ ರೀತಿಯಲ್ಲಿ ಇರಬೇಕೆಂಬ ಉದ್ದೇಶ ಸಾಕಾ ನಿಟ್ಟಿನಲ್ಲಿ ನ್ಯಾಯಾಲಯಗಳಲ್ಲಿ ಪ್ರಾದೇಶಿಕ ಭಾಷಾ ಪ್ರಯೋಗದ ಬಗ್ಗೆ ಕೇಂದ್ರ ಚಿಂತನೆ ನಡೆಸಿದೆ.

ಆಧಾರ:ವಿಶ್ವವಾಣಿ, ದಿನಾಂಕ:09.05.2022.

## 8. ದೇಶದ್ರೋಹ ಕಾನೂನು ಕಳಚಿತೇ ವ್ಯಾಮೋಹ

ಬ್ರಿಟಿಷ್ ಕಾಲದ ದೇಶದ್ರೋಹ ಕಾನೂನು ರದ್ದುಗೊಳಿಸಬೇಕೆಂಬ ಬೇಡಿಕೆ ಹಲವು ವರ್ಷಗಳಿಂದ ಇದೆ. ಆದರೆ, ಆಳುವ ಸರ್ಕಾರಗಳು ತಮ್ಮ ಎದುರಾಳಿಗಳನ್ನು ಹಣಿಯಲು ಈ ಕಾನೂನನ್ನು ದುರ್ಬಳಕೆ ಮಾಡುತ್ತಲೇ ಬಂದಿವೆ. ಸುಪ್ರೀಂ ಕೋರ್ಟ್ ಈ ಕಾನೂನಿನ ಸಾಂವಿಧಾನಿಕ ಸಿಂಧುತ್ವ ಪರೀಕ್ಷಿಸಲು ಮುಂದಾಗುತ್ತಿದ್ದಂತೆ, ಸೆಕ್ಷನ್ 124ಎ ಮರುಪರಿಶೀಲಿಸಲು ಸಿದ್ಧ ಎಂದು ಕೇಂದ್ರ ಹೇಳಿದೆ. ಈ ಹಿನ್ನೆಲೆಯಲ್ಲಿ ಏನಿದು ದೇಶದ್ರೋಹ ಕಾನೂನು, ಸೆಕ್ಷನ್ 124ಎ ಏನು ಹೇಳುತ್ತದೆ, ಯಾಕೆ ವಿವಾದ ಮತ್ತಿತರ ಮಾಹಿತಿ ಇಲ್ಲಿದೆ.

ವಿವಾದಿತ 'ದೇಶದ್ರೋಹ ಕಾನೂನು' ಅಗತ್ಯವನ್ನು ಬೆಂಬಲಿಸಿದ ಎರಡು ದಿನದಲ್ಲೇ ಕೇಂದ್ರ ಸರ್ಕಾರವು ಉಲ್ಟಾ ಹೊಡೆದಿದೆ. ಬ್ರಿಟಿಷ್ ಕಾಲದ ಈ ಕಾನೂನನ್ನು 'ಮರುಪರಿಶೀಲಿಸಲು ಸಿದ್ಧ' ಎಂದು ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಹೇಳಿದೆ. ವಸಾಹತುಶಾಹಿ ಕಾಲದ ಈ ಕಾನೂನು ಸಿಂಧುತ್ವದ ಬಹಳ ವರ್ಷಗಳಿಂದಲೂ ಚರ್ಚೆಯಲ್ಲಿದ್ದು, ರದ್ದುಗೊಳಿಸಬೇಕೆಂಬ ಬೇಡಿಕೆಯಿದೆ. ಆದರೆ, ಆಡಳಿತದಲ್ಲಿರುವ ಎಲ್ಲಾ ಸರ್ಕಾರಗಳು ರಾಜಕೀಯ ಎದುರಾಳಿಗಳನ್ನು, ತಮ್ಮ ಸೈದ್ಧಾಂತಿಕ ವಿರೋಧಿಗಳನ್ನು ಹಣಿಯಲು ಬಳಸಿಕೊಳ್ಳುತ್ತಾ ಬಂದಿದೆ. ಇತ್ತೀಚಿನ ಕೆಲವು ವರ್ಷಗಳಲ್ಲಿ ಈ ಕಾನೂನು ದುರ್ಬಳಕೆಯ ಪ್ರಮಾಣ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್ ಕಳೆದ ವರ್ಷವಷ್ಟೇ ಕಾನೂನು ರದ್ದು ಮಾಡುವ ಬಗ್ಗೆ ಪರಿಶೀಲಿಸುವಂತೆ ಸೂಚಿಸಿತ್ತು.

ವಸಾಹತು ಕಾಲದ ದೇಶದ್ರೋಹ ಕಾನೂನಿನ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗಳನ್ನು ಸುಪ್ರಿಂಕೋರ್ಟ್ ಈಗ ವಿಚಾರಣೆ ನಡೆಸುತ್ತಿದೆ. ಮುಖ್ಯ ನ್ಯಾ. ಎನ್ ವಿ ರಮಣ ನೇತೃತ್ವದ ಮೂವರು ಸದಸ್ಯರ ನ್ಯಾಯಪೀಠಕ್ಕೆ ಲಿಖಿತ ಹೇಳಿಕೆಯನ್ನು ಕೇಂದ್ರ ಸರ್ಕಾರವು ಸಲ್ಲಿಸಿ, ಕೇದಾರನಾಥ್ ಸಿಂಗ್ ಮತ್ತು ಬಿಹಾರ ರಾಜ್ಯ ನಡುವಿನ ಪ್ರಕರಣದಲ್ಲಿ ನ್ಯಾಯಾಲಯವು ದೇಶದ್ರೋಹ ಕಾನೂನನ್ನು ಎತ್ತಿಹಿಡಿಯುವ ತೀರ್ಪು ನೀಡಿದ್ದನ್ನು ಉಲ್ಲೇಖಿಸಿತ್ತು. ಆದರೆ, ಈಗ ಮರುಪರಿಶೀಲನೆಗೆ ಸಿದ್ಧವಿರುವುದಾಗಿ ಪ್ರಮಾಣಪತ್ರ ಸಲ್ಲಿಸಿದೆ.

"ದೇಶದ್ರೋಹ ಕಾನೂನು ಒಂದು ವಸಾಹತು ಕಾಲದ ಕಾನೂನು. ಸ್ವಾತಂತ್ರ್ಯ ದೊರೆತು 75 ವರ್ಷಗಳು ಕಳೆದ ಬಳಿಕವೂ ಈ ಕಾನೂನು ನಮಗೆ ಅಗತ್ಯವಿದಯೇ? ಎಂದು ಸುಪ್ರೀಂ ಕೋರ್ಟ್ ಕಳೆದ ವರ್ಷವೇ ಕೇಂದ್ರ ಸರ್ಕಾರಕ್ಕೆ ಕೇಳಿತ್ತು. ಅಲ್ಲದೇ, ದೇಶದ್ರೋಹ ಕಾನೂನನ್ನು ತಮಗಾಗದವರ ವಿರುದ್ಧ ಸೇಡು ತೀರಿಸಿಕೊಳ್ಳಲು ಬಳಸಲಾಗುತ್ತಿದೆ ಎಂದು ನ್ಯಾಯಾಲಯ ಅಸಮಾಧಾನ ವ್ಯಕ್ತಪಡಿಸಿತ್ತು. ಈ ಕಾನೂನು ದುರ್ಬಳಕೆ ಹೇಗಾಗಿದೆ ಎಂದರೆ, ಮರಗೆಲಸದವನಿಗೆ ಮರವೊಂದನ್ನು ಕತ್ತರಿಸಲು ಗರಗಸ ನೀಡಿದರೆ, ಆತ ಅದನ್ನು ಇಡೀ ಅರಣ್ಯವನ್ನು ಕತ್ತರಿಸಲು ಬಳಸಿದಂತೆ ಆಗಿದೆ ಎಂದು ವಿಶ್ಲೇಷಣೆ ಮಾಡಿತ್ತು.

**ಭಿನ್ನಾಭಿಪ್ರಾಯ ದೇಶದ್ರೋಹವೇ:**

"ಸರ್ಕಾರದ ಅಭಿಪ್ರಾಯಗಳಿಗಿಂತ ವಿಭಿನ್ನವಾದ ಅಭಿಪ್ರಾಯ ವ್ಯಕ್ತಪಡಿಸುವುದನ್ನು ದೇಶದ್ರೋಹವೆಂದು ಪರಿಗಣಿಸಲಾಗದು" ಎಂದು ನ್ಯಾಷನಲ್ ಕಾನ್ಫರೆನ್ಸ್ ನಾಯಕ ಫಾರೂಕ್ ಅಬ್ದುಲ್ಲಾ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಹೇಳಿತ್ತು. ನ್ಯಾಯಮೂರ್ತಿ ಸಂಜಯ್ ಕಿಶನ್ ಕೌಲ್ ನೇತೃತ್ವದ ಸುಪ್ರೀಂ ನ್ಯಾಯ ಪೀಠವು, "ಸರ್ಕಾರದ ವಿರುದ್ಧ ಭಿನ್ನ ಹೇಳಿಕೆಗಳನ್ನು ನೀಡಿದಾಕ್ಷಣ ಅದನ್ನು ದೇಶದ್ರೋಹವೆಂದು ಪರಿಗಣಿಸಲಾಗದು," ಎಂದು ಹೇಳಿ ಅರ್ಜಿಯನ್ನು ವಜಾಗೊಳಿಸಿ, ದೂರುದಾರರಿಗೆ ರೂ.50 ಸಾವಿರ ದಂಡ ವಿಧಿಸಿತ್ತು.

**ಕರ್ನಾಟಕದಲ್ಲಿ 22 ಕೇಸ್:**

ಕರ್ನಾಟಕದಲ್ಲಿ 22 ಜನರ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಾಗಿದ್ದು, 17 ಮಂದಿ ವಿರುದ್ಧ ಚಾರ್ಜ್ ಶೀಟ್ ಸಲ್ಲಿಸಲಾಗಿದೆ. ಆದರೆ, ಯಾರ ವಿರುದ್ಧವೂ ವಿಚಾರಣೆ ಪೂರ್ಣಗೊಂಡಿಲ್ಲ ಎಂದು ಕೇಂದ್ರ ಗೃಹ ಸಚಿವಾಲಯ ತಿಳಿಸಿದೆ.

**ಯಾವ ರಾಜ್ಯದಲ್ಲಿ ಹೆಚ್ಚು:**

ಎನ್‌ಸಿಆರ್‌ಬಿ ಅಂಕಿ ಸಂಖ್ಯೆಗಳ ಪ್ರಕಾರ, ಅಸ್ಸಾಮ್‌ನಲ್ಲಿ ಅತಿ ಹೆಚ್ಚು ಜನರನ್ನು ದೇಶದ್ರೋಹ ಕಾನುನು ಅಡಿ ಬಂದಿಸಲಾಗಿದೆ. ಒಟ್ಟಾರೆ 56 ಜನರನ್ನು ಅರೆಸ್ಟ್ ಮಾಡಲಾಗಿದೆ. ಇವುಗಳಲ್ಲಿ 26 ಪ್ರಕರಣಗಳಲ್ಲಿ ಚಾರ್ಜ್ ಶೀಟ್ ಸಲ್ಲಿಕೆಯಾದರೆ, 25 ಪ್ರಕರಣಗಳ ವಿಚಾರಣೆ ಮುಗಿದಿದೆ. ಅದರಂತೆ, ಜಾರ್ಖಂಡ್‌ನಲ್ಲಿ 40, ಹರಿಯಾಣ 31, ಕೇರಳ, ಬಿಹಾರ, ಜಮ್ಮು-ಕಾಶ್ಮೀರದಲ್ಲಿ ತಲಾ 25 ಪ್ರಕರಣಗಳು ದಾಖಲಾಗಿವೆ. ಹಾಗೆಯೇ, ಉತ್ತರ ಪ್ರದೇಶದಲ್ಲಿ 17, ಪಶ್ಚಿಮ ಬಂಗಾಳದಲ್ಲಿ ಎಂಟು, ಮಹಾರಾಷ್ಟ್ರ, ಪಂಜಾಬ್ ಹಾಗೂ ಉತ್ತರಾಖಂಡದಲ್ಲಿ ತಲಾ ಒಂದು ಕೇಸ್ ದಾಖಲಾಗಿವೆ. ಆದರೆ, ಮೇಘಾಲಯ, ಮಿಜೋರಾಂ, ತ್ರಿಪುರ, ಸಿಕ್ಕಿಂ, ಅಂಡಮಾನ್-ನಿಕೋಬಾರ್, ಲಕ್ಷದ್ವೀಪ, ಪುದುಚೇರಿ, ಚಂಡೀಗಢ, ದಮನ್ ಮತ್ತು ದಿಯು, ದಾದ್ರಾ ಮತ್ತು ನಗರ ಹವೇಲಿಯಲ್ಲಿ ಒಂದು ಪ್ರಕರಣ ದಾಖಲಾಗಿಲ್ಲ.

**ನಿಜವಾಗಿಯೂ ಸಮಸ್ಯೆ ಏನು:**

ಈ ದೇಶದ್ರೋಹ ಕಾನೂನಿನ ಮುಖ್ಯ ಸಮಸ್ಯೆ-ಅಸಮರ್ಪಕ ವ್ಯಾಖ್ಯಾನ ಮತ್ತು ಅದನ್ನು ಹೇಗೆ ಬೇಕೋ ಹಾಗೆ ಅರ್ಥೈಸಿಕೊಳ್ಳಬಹುದು. ರಾಜಕೀಯ ಎದುರಾಳಿಗಳನ್ನು ಹಣಿಯಲು ಸರ್ಕಾರಕ್ಕೆ ನಾನಾ ರೀತಿಯಲ್ಲಿ ಅವಕಾಶ ಕಲ್ಪಿಸಿಕೊಡುತ್ತದೆ. ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಬಳಸಿಕೊಂಡು ಯಾವುದೇ ವ್ಯಕ್ತಿ ಸರ್ಕಾರದ ವಿರುದ್ಧ ಅಭಿಪ್ರಾಯಗಳನ್ನು ಮಂಡಿಸಿದಾಗ ಮತ್ತು ಇತರ ಕಾರಣಗಳಿಗಾಗಿ ಈ ಕಾಯಿದೆ ಬಳಸಿಕೊಂಡು ಅವರನ್ನು ಪ್ರಕರಣದಲ್ಲಿ ಸಿಲುಕಿಸಲಾಗುತ್ತಿದೆ. ವರ್ಷಗಳು ಉರುಳಿದಂತೆ ಸರ್ಕಾರಗಳು, ಬುದ್ಧಿಜೀವಿಗಳು, ಮಾನವ ಹಕ್ಕುಗಳ ಕಾರ್ಯಕರ್ತರು, ಸಿನಿರಂಗಕರ್ಮಿಗಳು, ವಿವಿ ಪ್ರಾಧ್ಯಪಕರು ಮತ್ತು ವಿದ್ಯಾರ್ಥಿಗಳು, ಪತ್ರಕರ್ತರ ವಿರುದ್ಧ ಕಾನೂನು ಬಳಸಿಕೊಂಡು ಪ್ರಕರಣಗಳನ್ನು ದಾಖಲಿಸಲಾಗಿದೆ.

**ಕಾನೂನಿಗೆ ಬೆಂಬಲ ಏಕೆ:**

ದೇಶದ್ರೋಹ ಕಾನೂನು ನಿರೂಪಿಸುವ ಭಾರತೀಯ ದಂಡ ಸಂಹಿತೆಯು 124ಎ ಸೆಕ್ಷನ್ ಬೆಂಬಲಿಸಲು ನಾನಾ ಕಾರಣಗಳನ್ನು ನೀಡಲಾಗುತ್ತದೆ. ರಾಷ್ಟ್ರವಿರೋಧಿ, ಪ್ರತ್ಯೇಕತಾವಾದ ಮತ್ತು

ಭಯೋತ್ಪದಕ ಪ್ರಕರಣಗಳನ್ನು ಎದುರಿಸಲು ಈ ಕಾಯಿದೆ ಅಗತ್ಯವಾಗಿದೆ. ಜೊತೆಗೆ, ಚುನಾಯಿತ ಸರ್ಕಾರವನ್ನು ಕಿತ್ತೊಗೆಯುವ ಹುನ್ನಾರಗಳನ್ನು ತಡೆಯಲು ಈ ಕಾನೂನು ನೆರವು ಒದಗಿಸುತ್ತದೆ. ಹಾಗಾಗಿ, ದೇಶದ್ರೋಹ ಕಾನೂನು ಪ್ರಸ್ತುತವಾಗಿದೆ ಎಂದು ಬೆಂಬಲಿಸಲಾಗುತ್ತಿದೆ.

**ಯಾವಾಗ ಶುರುವಾಯಿತು:**

1862ರಲ್ಲಿ ಜಾರಿಗೆ ಬಂದ ಭಾರತೀಯ ದಂಡ ಸಂಹಿತೆಯಲ್ಲಿ ದೇಶದ್ರೋಹದ ಬಗ್ಗೆ ಸೆಕ್ಷನ್ ಇರಲಿಲ್ಲ. 1870ರಲ್ಲಿ ಇದನ್ನು ಸೇರಿಸಲಾಯಿತು. 1891ರಲ್ಲಿ ಪತ್ರಿಕಾ ಸಂಪಾದಕ ಜೋಗೆಂದ್ರ ಚಂದ್ರ ಭೋಸ ವಿರುದ್ಧ ಮೊದಲ ಬಾರಿಗೆ ಈ ಕಾನೂನಿನಡಿ ಪ್ರಕರಣ ದಾಖಲಿಸಲಾಯಿತು. ಆ ಬಳಿಕ ಸ್ವಾತಂತ್ರ್ಯ ಹೋರಾಟಗಾರರಾದ ಬಾಲ ಗಂಗಾಧರ ತಿಲಕ್, ಮಹಾತ್ಮ ಗಾಂಧಿ, ಜವಾಹರ್ ಲಾಲ್ ನೆಹರು, ಅಬ್ದುಲ್ ಕಲಾಂ ಆಜಾದ್, ವೀರ್ ಸಾವರ್ಕರ್ ಸೇರಿ ಮತ್ತಿತ್ತರ ವಿರುದ್ಧ ಬಳಸಲಾಗಿತ್ತು. ಈಗಲೂ ಹಲವರ ವಿರುದ್ದ ಕಾನೂನು ಅಡಿ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ.

**356 ಕೇಸ್, 7 ಪ್ರಕರಣದಲ್ಲಿ ಶಿಕ್ಷೆ:**

ನ್ಯಾಷನಲ್ ಕ್ರೈಮ್ ರೆಕಾರ್ಡ್ಸ್ ಬ್ಯೂರೋ(ಎನ್ಸಿಆರ್‌ಬಿ) ಪ್ರಕಾರ, 2015ರಿಂದ 2020ರವರೆಗೆ 356 ದೇಶದ್ರೋಹ ಪ್ರಕರಣಗಳನ್ನು ದಾಖಲಿಸಲಾಗಿದ್ದು, ಈ ಸಂಬಂಧ 548 ಮಂದಿಯನ್ನು ಬಂದಿಸಲಾಗಿದೆ. ಹಾಗೆಯೇ ಈ ಆರು ವರ್ಷದಲ್ಲಿ ಇಷ್ಟು ಪ್ರಕರಣಗಳ ಪೈಕಿ 7 ಕೇಸ್‌ಗಳಲ್ಲಿ ಮಾತ್ರ 12 ಜನರ ವಿರುದ್ಧ ದೋಷರೋಪ ಸಾಬೀತಾಗಿದೆ. ಅಂಕಿಸಂಖ್ಯೆಗಳ ಪ್ರಕಾರ, 2015ರಲ್ಲಿ 73, 2016ರಲ್ಲಿ 48, 2017ರಲ್ಲಿ 228, 2018ರಲ್ಲಿ 56, 2019ರಲ್ಲಿ 99, ಮತ್ತು 2020ರಲ್ಲಿ 44 ಜನರನ್ನು ಈ ದೇಶದ್ರೋಹ ಕಾನೂನು ಅಡಿ ಬಂಧಿಸಲಾಗಿದೆ. ಹಾಗೆಯೇ, ಸೆಕ್ಷನ್ 124ಎ ಅಡಿಯಲ್ಲಿ ದೇಶಾದ್ಯಾಂತ 2015ರಲ್ಲಿ 30, 2016ರಲ್ಲಿ 35, 2017ರಲ್ಲಿ 51, 2018ರಲ್ಲಿ 70, 2019ರಲ್ಲಿ 93 ಮತ್ತು 2020ರಲ್ಲಿ 73 ಪ್ರಕರಣಗಳನ್ನು ದಾಖಲಿಸಲಾಗಿದೆ. ಆದರೆ, ಶಿಕ್ಷೆಯ ಪ್ರಮಾಣ ಮಾತ್ರ ತೀರಾ ಕಡಿಮೆ. ಅದರರ್ಥ ದೇಶದ್ರೋಹ ಅರೋಪವನ್ನು ಸಾಬೀತುಪಡಿಸಲು ಸಾಧ್ಯವಾಗಿಲ್ಲ. 2021 ಮತ್ತು 2022ರ ಈವರೆಗಿನ ಮಾಹಿತಿ ಸದ್ಯಕ್ಕೆ ಲಭ್ಯವಿಲ್ಲ. ಕೇಂದ್ರ ಗೃಹ ಸಚಿವಾಲಯವು 2021ರಲ್ಲಿ ದೇಶದ್ರೋಹ ಕಾನೂನು ಮರು ಪರಿಶೀಲಿಸುವ ಬಗ್ಗೆ ಹೇಳಿಕೊಂಡಿತ್ತು.

**ವಿಶ್ವದ ಎಲ್ಲೆಲ್ಲಿ ಜಾರಿಯಲ್ಲಿದೆ:**

ಭಾರತ, ಅಮೆರಿಕ, ಜರ್ಮನಿ, ಸೌದಿ ಅರೇಬಿಯ, ಮಲೇಷ್ಯಾ, ಇರಾನ್, ಉಜ್ಬೇಕಿಸ್ತಾನ, ಸುಡಾನ್, ಸೆನ್‌ಗಲ್, ಟರ್ಕಿ ಸೇರಿದಂತೆ ಅನೇಕ ದೇಶಗಳಲ್ಲಿ ದೇಶದ್ರೋಹ ಕಾಯಿದೆ ಜಾರಿಯಲ್ಲಿದೆ. ಆದರೆ ಅಮೆರಿಕ ಮತ್ತು ಜರ್ಮನಿಯಲ್ಲಿ ಇದು ಅಪ್ರಸ್ತುತವಾಗಿದ್ದು, ಈ ಕಾನೂನು ಮುಂದಿಟ್ಟುಕೊಂಡು ಪ್ರಕರಣ ದಾಖಲಿಸಿದ ಉದಾಹರಣೆಗಳು ಸಿಗುತ್ತಿಲ್ಲ. ಬ್ರಿಟನ್, ಸ್ಕಾಟ್ಲೆಂಡ್, ದಕ್ಷಿಣ ಕೋರಿಯಾ ಮತ್ತು ಇಂಡೋನೇಷ್ಯಾದಲ್ಲಿಯೂ ದೇಶದ್ರೋಹದ ಕಾನೂನು ಚಾಲ್ತಿಯಲ್ಲಿತ್ತು. ಬ್ರಿಟನ್‌ನಲ್ಲಿ ಕಿವಿಗಳನ್ನು ಕತ್ತಿರಿಸುವ ಶಿಕ್ಷೆಯೂ ಇತ್ತು. ಆದರೆ ಇಂದು ಅವ್ಯಾವೂ ಜಾರಿಯಲ್ಲಿ ಇಲ್ಲ.

ಆಧಾರ: ವಿಜಯ ಕರ್ನಾಟಕ, ದಿನಾಂಕ:11.05.2022.

## 9. BRIEF HISTORY OF A LAW USED TO SILENCE INDIANS FOR 150 YEARS

The Indian penal Code (IPC) came into effect in 1860, three years after the Mutiny. But Section 124A was not part of it until 1870, when the British felt they needed to rein in sedition in India. Gandhi, Nehru, Tilak, Patel-124A snared them all. But 75 years after Independence, the colonial law is still very much the weapon of choice to silence dissent. However, the Centre has now agreed to review it , and on Wednesday the Supreme Court put the law on hold

till the reivew is done Kenneth Mohanty traces the origin and journey of this much-abused law.

**1870 to Independence: Origins and Application:**

The 1857 Mutiny was fresh in the minds of the colonial rulers and the need to double down against political ferment was cited as a reason for inserting Sec.124 A in 1870. As the freedom movement gathered steam, the who's who of Indian leaders-Mahtma Gandhi to Bhagat Singh-were slapped with sedition charges.

**1947 to 1962: debating Utility and Misuse:**

Framers of the Constitution debated whether the sedition law had a place in independent India. It was to be one of the restrictions on the fundamental right to free speech and expression. The term 'sedition' itself was dropped from the final document although it continued as part of the IPC.

The Supreme Court defined the limits of sedition in the landmark Kedar Nath Singh judgment of 1962. Singh, a leader of the Forward Communist party in Bihar , was convicted on a charge of sedition for a 1953 speech critical of the Congress government. He moved the Supreme Court where a five judge constitution bench upheld the validity of Sec. 124A but said it could only be used when there was an actual incitement to violence or disruption of public order, and that mere criticisim of the government did not amount to sedition.

**1962 to 2022: Persistence and Resistance:**

Governments have consistently stuck with Sec.124A. In the early 1970s, the Indira Gandhi government made sedition a cognisable offecnce, meaning one could be arrested without a warrant. However, courts have underlined the need to avoid abuse of the law. Multiple petitioners have moved the Supreme Court to strike down Sec.124A or to formulate safeguards against its misuse. A Law Commission report of 2018 also states that constructive criticism and debates might involve expressions that are "harsh and unpleasant to some", but do not amout to sedition.

**FIRST SEDITION CASE IN INDIA:** In 1891 a change in the law made sex with a girl below the age of 12 years tantamount to rape. A newspaper titled Bangobasi opposed the change as an attack on Indian traditions and morality, leading to the first case of sedition in British India. The proprietor, editor,manager and printer of Bangobasi were all charged with sedition but eventually got away with an apology.

**MK GANDHI:** in 1922 Gandhi was charged with sedition and sentenced to six years in jail for taking part in anti-government protests in Bombay. He pleaded guilty and famously said: "If one has no affection for a person or system, one should be free to give the fullest expression to his disaffection, so long as he does not contemplate, promote or incite violence."

**BAL GANGADHAR TILAK:** Tilak was first charged with sedition in 1897 for an article he wrote in his paper, Kesari. He was sentenced to year in prision. In 1908, he was handed a 6-years sentence for sedition, and exiled to Mandalay in Burma for writing in favour of the Bengal revolutionaries. He faced a charge of sedition again in 1916, but was eventually tried under another law.

**JAWAHARLAL NEHRU:** In October 1930, Nehru was charged with sedition for addressing farmers in Allahabad. He refused to defend himself and was sentenced to two years in jail. In 1934 he was again charged with sedition for speeches made in Bengal but refused to defend himself, and was sentenced to two years.

**SARDAR PATEL:** He made a speech at the Congress jubilee celebrations in Bombay, on Dec 30, 1935. The Home Department heard that it was 'seditious' and noted that "it would be useful to have a report of the speech". However, as no Gujarati shorthand reporter was present at the event, and a Marathi speaking sub-inspector was the only official witness, the file had to be closed.

**WHAT OTHER COUNTRIES HAVE DONE:**

Countries around the world, indcluding former colonies, have done away with sedition laws or watered down their rarely-invoked provisions.

**UK:** It scrapped the sedition law in 2009 but sedition by an alien (resident but not a national of the country) remains an offfence.

**NEW ZEALAND:** It scrapped the sedition law with an over whelming majority of 114 to 7 in 2007.

**AUSTRALIA:** After two reviews in 1984 and 1991, Australia replaced the word 'sedition' in its law with 'urging violent offence'.

**US:** It scrapped its sedition law in 1820, then brought it back in 1918 to protect US interests during world war I. However, America's robust freedom of speech protections mean the law is as good as dead.

Courtesy: Times of India, Dated:12.05.2022.

## 10. You can't suppress voices': Oppn hails SC order

Opposition parties lauded the Supreme Court order, which put a stay on the registration of cases under the sedition law even as Union Law Minister Kiren Rijiju flagged the need for all institutions to respect the "Lakshman Rekha".

"… Court should respect the government and legislature. The government should also respect (the) court. We have (a) clear demaracation of boundaries, and that Lakshman Rekha should not be crossed by anybody (sic)," Rijiju asaid, replying to questions by reporters.

The law minister's remarks evoked a quick report from former law minister and senior Congress leader M Veerappa Moily, who slammed Rijiju and asked if what the minister said was also the view of the Modi government.

Moily alleged that what the law minister said indicated the "evil intentions" of the government. Asserting that sedition law was" against the ethos of India", Moily hailed the apex court as "the guardian of the Constitution".

However, the BJP argued that the Supreme Court's order on sedition needs to be viewed in the context of the government's "positive suggestions". Party leader Nalin Kohil said that the government wishes to examine the matter, and the court has duly accepted it.

Senior party leader and former Law Minister Ravi Shankar Prasad said that Prime Minister Narendra Modi took a "very extraordinary courageous step" by saying that this "colonial law", which was enacted by the British, shall be "re-examined objectively" by the government of India.

In a tweet in Hindi, former Congress president Rahul Gandhi said, "speaking the truth is patriotism, not treason. To tell the truth is love for the Country, not treason. To listen to the truth is Raj Dharma, to crush is Raj hath… Don't be afraid!"

Rijiju hit back at Rahul saying "Empty words by @ Rahul Gandhi If there is one party that is the antithesis of freedom, democracy and respect for institutions, it tis the Indian National Congress…. Congress Party and its eco-system of the Tukde Tukde gang have no right to give sermons to otheres."

TRS social media convenor Y Sathish Reddy said "96% of sedition cases filed against 405 for criticising politicians were registered after 2014, of which 70% are accused of making critical remarks against just #Modi& #Yogi. During CAA protests, 22/25 cases involving 3,700 people were filed in BJP states!"

Trinamool Congress lawmaker Mahua Moitra said, "Victory! Supreme Court stays Sec 124A –no new cases can be filed, existing cases can apply for bail & release immediately."

While many Opposition parties and leaders flagged the "misuse of this law to suppress opinions voices for arm-twisting", social media also recorded reactions over sedition cases having been slapped even in opposition-ruled states.

Congress-ruled Rajasthan had slapped a police case against Noida-based journalist Aman Chopra, including Sections 124-A(sedition).

**Centre's proposal set aside**

The Supreme Court suspended the use of a draconian penal provision on sedition by rejecting the Union government's contention that a cognisable offence under Section 124A of IPC can't be stopped from being registered.

A bench of Chief Justice N V Ramana and Justices Surya Kant and Hime Kohli noted Attorney General K K Venugopal had earlier given some glaring instances of lodging FIRs under sedition, including one related to Amravati MP Navneet Rana and her husband for intending to recite Hanuman Chalisa.

"The case of the petitioners it that this provision of the law dates back to 1898, and pre-dates the Constitution itself, and is being misused. The attorney general had also, on an earlier date of hearing, given some instances of glaring misuse of this provision, like in the case of the recital of the Hanuman Chalisa," the bench said.

At the outset, Solicitor General Tushar Mehta submitted a proposal on behalf of the Union Government, contending since a cognisable offence under Section 124A can't be prevented from being registered, there can be scrutiny at the senior police officer level as per the mandate in the Vinod Dua case, depending on facts and situations.

This would also be subject to judical review, he said. On pending cases, Mehta said those are already before a judicial forum, which should be allowed to examine the matter.

"We do not know the gravity of the offence of each case. No accused is before this case. Statute can't be stayed at third party's behest in a PIL," Mehta submitted.

Senior advocate Kapil Sibal, appearing for petitioners, including S G Vombatkere, said the Centre's proposal is unacceptable to them.

He said Section 66A of the IT Act was struck down by the top court in the Shreya Singhal case for being unconstitutional, even though the power to lodge the case was entrusted with the SP level officer.

"It is because of a sea change, Secation 124A has become unconstitutional. When the Kedar Nath Singh (1962) was decided by the top court's five-judge Constitution bench upholding its validity, it was a non-cognisable offence and made cognisable in the year 1973 only," he said.

**Order of events:**

**1897:** Freedom fighter BalGangadhar Tilak was famously in the dock in a sedition trial.

**Jan 20, 1962:** A five-judge bench in the Kedar Nath Singh case upholds validity of sedition law.

**July 15,2021:** CJI N V Ramanaled bench issues notice to Centre on pleas challenging validity of provision.

**April 27,2022:** SC issues notice to centre on other pleas, grants time to Solicitor General to file response.

**May 7,2022:** S-G defends sedition law.

**May 9:** MHA files affidavit, urges SC not to invest time in examining the valdity of law.

**May 10:** SC agrees to Centre's view that an appropriate forum would reconsider protecting citizens' interest.

**May 11,2022:** A three-judge bench puts the law in abeyance. Fixes pleas for further hearing in the third week of july.

Courtesy: Deccan Hearled, Dated:12.05.2022.

## 11. ಚರ್ಚೆಯಲ್ಲದೆ ಸೊರಗುತ್ತಿದೆ ಸಂಸದೀಯ ವ್ಯವಸ್ಥೆ

ಉತ್ತರದಾಯಿತ್ವವನ್ನು ಖಾತ್ರಿಪಡಿಸುವ ಮತ್ತೊಂದು ಮಾರ್ಗವೆಂದರೆ ಸಂಸತ್ತಿನ ಸಮಿತಿಗಳು. ಆದರೆ, ಭಾರತದಲ್ಲಿ ದೀರ್ಘಾವಧಿಯ ಅಭಿವೃದ್ಧಿ ಯೋಜನೆಗಳು ಸಂಸದೀಯ ಪರಿಶೀಲನೆಗೆ ಒಳಪಡುವುದಿಲ್ಲ. ಕೇವಲ ವಾರ್ಷಿಕ ವೆಚ್ಚಗಳನ್ನು ಅನುಮೋದಿಸಲಾಗುತ್ತದೆ. ಸಮಿತಿಗಳ ಪರಿಶೀಲನೆಗೆ ಶಾಸನಗಳು ಒಳಪಟ್ಟಲ್ಲಿ ಸಾಕಷ್ಟು ಪರಿಣಾಮ ಕಾಣಬಹುದು.

ಸಂಸತ್ತಿನ ಮುಂಗಾರಿನ ಅಧಿವೇಶನದ ವೇಳೆ (2021) ಲೋಕಸಭೆಯಲ್ಲಿ 18 ಮಸೂದೆಗಳು ತಲಾ 34 ನಿಮಿಷಗಳ ಚರ್ಚೆಗಳೊಂದಿಗೆ ಅನುಮೋದನೆಗೊಂಡವು. ಅಗತ್ಯ ರಕ್ಷಣಾ ಸೇವೆಗಳ ಮಸೂದೆ (2021) ಬಗ್ಗೆ 12 ನಿಮಿಷ, ಇನ್ಸಾಲ್ವೆನ್ಸಿ ಮತ್ತು ಬ್ಯಾಂಕ್ರಪ್ಸಿ ಕೋಡ್ (ತಿದ್ದುಪಡಿ) ಮಸೂದೆ (2021) ಮೇಲೆ ಕೇವಲ 5 ನಿಮಿಷದ ಚರ್ಚೆ ನಡೆಯಿತು. ಒಂದು ಮಸೂದೆಯನ್ನೂ ಸಂಸದೀಯ ಸಮಿತಿಗೆ ಕಳುಹಿಸಲು ಸರ್ಕಾರ ಮುಂದಾಗಲಿಲ್ಲ. ಈಚಿನ ದಿನಗಳಲ್ಲಿ ಧ್ವನಿಮತಕ್ಕೆ ಹೆಚ್ಚಿನ ಆದ್ಯತೆ ಸಿಗುತ್ತಿರುವುದರಿಂದ ಮತಗಳನ್ನು ದಾಖಲಿಸಲು ಸಂಸದರ ಒಟ್ಟುಗೂಡುವಿಕೆಯೂ ಕಾಣಲಿಲ್ಲ. ಆದರೆ, ಸಂಸತ್ತಿನ ಉತ್ಪಾದಕತೆ ಗಮನಾರ್ಹವಾಗಿದೆ. ಉದಾಹರಣೆಗೆ 2022ರ ಬಜೆಟ್ ಅಧಿವೇಶನದಲ್ಲಿ ಲೋಕಸಭೆ 129% ಉತ್ಪಾದಕತೆ ಕಂಡಿದೆ. ಆದರೆ ಚರ್ಚೆ ನಡೆಸುವ ಸಂಪ್ರದಾಯ ಮರೆಯಾಗುತ್ತಿದೆ. ಅಂದರೆ, ಸಂಸತ್ತು ಕೇವಲ ಅಂಚೆಕಚೇರಿ ರೀತಿ ಕೆಲಸ ಮಾಡುತ್ತಿದೆಯೇ?

ಶಾಸನದ ಮೇಲಿನ ಚರ್ಚೆ ಸಂಸದೀಯ ಪ್ರಜಾಪ್ರಭುತ್ವದ ಪ್ರಮುಖ ಲಕ್ಷಣಗಳಲ್ಲೊಂದು. 2013ರಲ್ಲಿ ಅಮೆರಿಕದ ಸೆನೆಟ್ ಹೌಸನಲ್ಲಿ ಒಬಾಮಾಕೇರ್ ವಿರುದ್ಧ ಮಾತನಾಡಲು ಸೆನೆಟರ್ ಟೆಡ್ ಕ್ರೂಜ್ ಅವರಿಗೆ 21 ಗಂಟೆ 19 ನಿಮಿಷಗಳ ಕಾಲ ಅವಕಾಶ ನೀಡಲಾಗಿತ್ತು. ಸಂಸತ್ತು ಅಂಥ ಚರ್ಚೆಗಳಿಗೆ ಸಮಯ ಮೀಸಲಿಟ್ಟಾಗ, ಶಾಸನದ ಗುಣಮಟ್ಟ ಸುಧಾರಿಸುತ್ತದೆ. ಭಾರತದಲ್ಲಿ, ಕೃಷಿ ಕಾಯ್ದೆಗಳ ರದ್ದತಿ ಮಸೂದೆ (2021) ಕೇವಲ 8 ನಿಮಿಷಗಳಲ್ಲಿ (ಲೋಕಸಭೆಯಲ್ಲಿ 3, ರಾಜ್ಯ ಸಭೆಯಲ್ಲಿ 5 ನಿಮಿಷ) ಅಂಗೀಕರಿಸಲ್ಪಟ್ಟಿತ್ತು. ಸಂಸದರ ಉಪಸ್ಥಿತಿ ಇಲ್ಲಿ ಧ್ವನಿಮತಕ್ಕೆ ಮಾತ್ರ. ವಾಸ್ತವದಲ್ಲಿ, ಇದು ಒಳ್ಳೆಯ ಬೆಳವಣಿಗೆಯೇನಲ್ಲ. ಸಂವಿಧಾನವನ್ನು ರೂಪಿಸಲು ಭಾರತದ ಸಂವಿಧಾನ ಸಭೆಯ ಚರ್ಚೆಗಳು 166 ದಿನಗಳವರೆಗೆ ನಡೆದವು. ಸಂಸತ್ತಿನ ಕಾರ್ಯಕಲಾಪಗಳು ಉತ್ಕೃಷ್ಟತೆ ಕಂಡುಕೊಳ್ಳುವುದು ಮತ್ತು ಬಲಗೊಳ್ಳುವುದು ಮುಕ್ತ ಅಭಿಪ್ರಾಯ, ಚರ್ಚೆಗಳಿಗೆ ಅವಕಾಶವಿದ್ದಾಗ ಮಾತ್ರ. ಆದರೆ, ಈಗಿನ ವ್ಯವಸ್ಥೆಯಲ್ಲಿ ಸಂಸದರಿಗೆ ಆಳವಾದ ಸಂಶೋಧನೆ ನಡೆಸಲು ಸಾಕಷ್ಟು ಸಂಪನ್ಮೂಲಗಳು ಇಲ್ಲ. ಇದಕ್ಕಾಗಿ ಸಹಾಯಕರನ್ನು ನೇಮಿಸಿಕೊಳ್ಳಲು ಸರ್ಕಾರ ಸಂಸದರಿಗೆ ತಿಂಗಳಿಗೆ ತಲಾ ರೂ.40 ಸಾವಿರಗಳ ಭತ್ಯೆ ನಿಡುತ್ತದೆ. ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಸಂಸದರ ವೇತನ ಸರಾಸರಿ ರೂ.84,144 ನಷ್ಟಿದೆ. ಸಹಾಯಕರನ್ನು ನೇಮಿಸಿಕೊಳ್ಳಲು 2021 ರಲ್ಲಿ ಅವರಿಗೆ 1.93 ಲಕ್ಷದಿಂದ ರೂ.2.16ಲಕ್ಷವರೆಗೆ ಹೆಚ್ಚುವರಿ ಭತ್ಯೆ ನೀಡಲಾಯಿತು. ಪ್ರಜಾಪ್ರಭುತ್ವದ ಸ್ವಾಸ್ಥ್ಯ ಕಾಪಾಡಬೇಕಾದರೆ ಸಂಸತ್ತಿನಲ್ಲಿ ಚರ್ಚೆಯನ್ನು ಹೆಚ್ಚಿಸಬೇಕು. ಈ ನಿಟ್ಟಿನಲ್ಲಿ ಸಂಸದೀಯ ಸಂಶೋಧನೆಗಾಗಿ ಸರ್ಕಾರ ಹಣಕಾಸಿನ ನೆರವನ್ನು ಹೆಚ್ಚಿಸಬೇಕು.

ಬ್ರಿಟೀಷ್ ಪ್ರಧಾನಿಯು ಹೌಸ್ ಆಫ್ ಕಾಮನ್ಸ್‌ನಲ್ಲಿ ಪ್ರತಿ ಬುಧವಾರ ಅಪರಾಹ್ನ 12 ರಿಂದ 12.30ರವರೆಗೆ ಸಂಸದರ ಪ್ರಶ್ನೆಗಳಿಗೆ ಉತ್ತರಿಸುತ್ತಾರೆ. ಸಂಸದರು ಯಾವ ಪ್ರಶ್ನೆಗಳನ್ನು ಕೇಳುತ್ತಾರೆ

ಎಂಬುದು ಪ್ರಧಾನಿಗೆ ತಿಳಿದಿರುವುದಿಲ್ಲ. ಇಲ್ಲಿ ತನಿಖೆ ರೀತಿಯಲ್ಲಿ ಕೇಳುವ ಪ್ರಶ್ನೆಗಳು, ಉತ್ತರಿಸಲು ಪ್ರಧಾನಿ ತಡಬಡಾಯಿಸುವ ದೃಶ್ಯಗಳನ್ನು ಟಿವಿಯಲ್ಲಿ ನೋಡಬಹುದು. ಭಾರತದಲ್ಲಿ, ಹಲವು ಸಂದರ್ಭಗಳಲ್ಲಿ ಪ್ರಧಾನಮಂತ್ರಿ ಮತ್ತು ಮಂತ್ರಿಗಳಿಗೆ ಮುಂಚಿತವಾಗಿ ಪ್ರಶ್ನೆಗಳನ್ನು ನೀಡಲಾಗುತ್ತದೆ. ಕರೋನಾ ಲಾಕ್ಡೌನ್ ಸಂಬಂಧ ಕೂಡ ಬ್ರಿಟನ್ ಸಂಸತ್ತಿನಲ್ಲಿ ಚರ್ಚೆ ನಡೆಯಿತು. ಈ ಬಗೆಯ ಪ್ರಕ್ರಿಯೆ ಹೊಣೆಗಾರಿಕೆಯನ್ನು ಹೆಚ್ಚಿಸುತ್ತದೆ (ಕರೋನಾ ಅವಧಿಯಲ್ಲಿ ಭಾರತದಲ್ಲಿ ಪ್ರಶ್ನೋತ್ತರ ಅವಧಿ ರದ್ದುಗೊಂಡಿದ್ದು ಗಮನಾರ್ಹ).

ಉತ್ತರದಾಯಿತ್ವವನ್ನು ಖಾತ್ರಿಪಡಿಸುವ ಮತ್ತೊಂದು ಮಾರ್ಗವೆಂದರೆ ಸಂಸತ್ತಿನ ಸಮಿತಿಗಳು. ಅಮೆರಿಕದಲ್ಲಿ ಸೆನೆಟ್ ಮತ್ತು ಸದನ ಸಮಿತಿಗಳು ಕಾನೂನುಗಳನ್ನು ಪರಿಶೀಲಿಸುತ್ತವೆ. ಸರ್ಕಾರಿ ನೇಮಕಾತಿಗಳನ್ನು ದೃಢೀಕರಿಸುತ್ತವೆ, ತನಿಖೆ, ವಿಚಾರಣೆಗಳನ್ನು ನಡೆಸುತ್ತವೆ. ಯುನೈಟೆಡ್ ಕಿಂಗ್‌ಡಮ್‌ನ ಹೌಸ್ ಆಫ್ ಕಾಮನ್ಸ್‌ನಲ್ಲಿ (2013ರಲ್ಲಿ) ನಾಗರಿಕರು ವೆಬ್‌ಪೋರ್ಟಲ್ ಮೂಲಕ ಕರಡು ಶಾಸನಕ್ಕೆ ಕಾಮೆಂಟ್‌ಗಳನ್ನು ಸೇರಿಸುವ ಅವಕಾಶ ಒದಗಿಸಿತ್ತು. ಇದರಲ್ಲಿ 1,000 ದಷ್ಟು ಮಂದಿ 1,400ಕ್ಕೂ ಹೆಚ್ಚು ಕಾಮೆಂಟ್ ಮೂಲಕ ಸಲಹೆ ನೀಡಿದ್ದರು. ಭಾರತದಲ್ಲಿ, ದೀರ್ಘಾವಧಿಯ ಅಭಿವೃದ್ಧಿ ಯೋಜನೆಗಳು ಸಂಸದೀಯ ಪರಿಶೀಲನೆಗೆ ಒಳಪಡುವುದಿಲ್ಲ. ಕೇವಲ ವಾರ್ಷಿಕ ವೆಚ್ಚಗಳನ್ನು ಅನುಮೋದಿಸಲಾಗುತ್ತದೆ. ಸಮಿತಿಗಳ ಪರಿಶೀಲನೆಗೆ ಶಾಸನಗಳು ಒಳಪಟ್ಟಲ್ಲಿ ಸಾಕಷ್ಟು ಪರಿಣಾಮ ಕಾಣಬಹುದು. ನ್ಯೂಜಿಲೆಂಡ್‌ನಲ್ಲಿ ಎಲ್ಲಾ ಮಸೂದೆಗಳನ್ನು ಪರಿಶೀಲನೆಗಾಗಿ ಆಯ್ಕೆ ಸಮಿತಿಗೆ ಕಳುಹಿಕೊಡಲಾಗುತ್ತದೆ. ಅಷ್ಟೇ ಅಲ್ಲ. ಸಾರ್ವಜನಿಕ ಅಭಿಪ್ರಾಯ ಪಡೆದುಕೊಳ್ಳುವ, ಸಲಹೆಗಾರರನ್ನು ಕರೆಸಿ ಮಾಹಿತಿ ಕೇಳುವ ಪ್ರಕ್ರಿಯೆಯೂ ಪರಿಣಾಮಕಾರಿಯಾಗಿ ನಡೆಯುತ್ತದೆ. ಅಂತಹ ಸಮಿತಿಗಳ ಪ್ರಮುಖ ವರದಿಗಳನ್ನು ಸಂಸತ್ತಿನಲ್ಲಿ ಮಂಡಿಸಿ, ಚರ್ಚಿಸಲಾಗುತ್ತದೆ.

ಸಂಸದೀಯ ಪ್ರಜಾಪ್ರಭುತ್ವದ ಮತ್ತೊಂದು ವೈಶಿಷ್ಟ್ಯವೆಂದರೆ ಸಂಸತ್ತಿನ ಸದಸ್ಯರನ್ನು ಪ್ರೋತ್ಸಾಹಿಸುವುದು. ಉದಾಹರಣೆಗೆ, ಖಾಸಗಿ ವಿಧೇಯಕ ಮಂಡನೆ ವಿಷಯದಲ್ಲಿ ಉತ್ತೇಜನ ಇತ್ಯಾದಿ. ಬ್ರಿಟನ್‌ನಲ್ಲಿ 2019 ರಿಂದ 7 ಖಾಸಗಿ ಮಸೂದೆಗಳನ್ನು ಅಂಗೀಕರಿಸಲಾಗಿದೆ. ಅದೇ ರೀತಿ, ಕೆನಡಾ 6 ಮಸೂದೆಗಳನ್ನು ಅಂಗೀಕರಿಸಿದೆ; ಭಾರತದಲ್ಲಿ 1952ರಿಂದ ಇಲ್ಲಿಯವರೆಗೆ ಕೇವಲ 14 ಖಾಸಗಿ ಸದಸ್ಯ ಮಸೂದೆಗಳನ್ನು ಅಂಗೀಕರಿಸಲಾಗಿದೆ. (ಅವುಗಳಲ್ಲಿ 6 ನೆಹರು ಅಧಿಕಾರದಲ್ಲಿದ್ದಾಗ ಅಂಗೀಕೃತಗೊಂಡವು). ರಘುನಾಥ್ ಸಿಂಗ್ ಅವರು ಪರಿಚಯಿಸಿದ ಕ್ರಿಮಿನಲ್ ಪ್ರೊಸೀಜರ ಕೋಡ್ (ತಿದ್ದುಪಡಿ) ಮಸೂದೆಯು (1953) ಕೆಳ ನ್ಯಾಯಾಲಯಗಳು ಹೊರಡಿಸಿದ ಆದೇಶಗಳನ್ನು ತಡೆಹಿಡಿಯಲು ಅಥವಾ ರದ್ದುಗೊಳಿಸಲು ಉನ್ನತ ನ್ಯಾಯಾಲಯಗಳಿಗೆ ಅಧಿಕಾರ ನೀಡಲು ಪ್ರಯತ್ನಿಸಿತು ಎಂಬುದು ಗಮನಾರ್ಹ. ಭಾರತದಲ್ಲಿ ಖಾಸಗಿ ಸದಸ್ಯ ಮಸೂದೆಗಳ ಚರ್ಚೆ ಹಾಗೂ ಮತದಾನಕ್ಕೊಳಪಡಿಸಲು ಪೂರಕ ಕಾರ್ಯವಿಧಾನಗಳನ್ನು ರೂಪಿಸುವುದು ಇಂದಿನ ಅಗತ್ಯ.

**ಸೀಮಿತ ಪ್ರಮಾಣದ ಅವಕಾಶ:** ಭಾರತದ ಹೆಚ್ಚಿನ ಸಂಸದರಿಗೆ ತಮ್ಮ ಕ್ಷೇತ್ರಗಳಲ್ಲಿ ಬದಲಾವಣೆಗೆ ಚಾಲನೆ ನೀಡುವ ಅವಕಾಶ ಸೀಮಿತ ಪ್ರಮಾಣದಲ್ಲಿದೆ. ಸಂಸತ್ತಿನ ಸದಸ್ಯರ ಸ್ಥಳೀಯ ಪ್ರದೇಶ ಅಭಿವೃದ್ಧಿ ಯೋಜನೆ (MPLAD) ನಿಧಿ ಬಳಸಿಕೊಂಡು ಸಂಸದರು ಆಯ್ದ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳುವಂತೆ ಸ್ಥಳೀಯ ಜಿಲ್ಲಾಡಳಿತಕ್ಕೆ ಶಿಫಾರಸ್ಸು ಮಾಡಬಹುದಷ್ಟೆ. ಭಾರತದಲ್ಲಿ ಅಂದಾಜು 6.38 ಲಕ್ಷ ಹಳ್ಳಿಗಳಿದ್ದು, ಸಂಸತ್ತಿನ ಪ್ರತಿ ಕ್ಷೇತ್ರದಲ್ಲಿ ಸರಾಸರಿ 1 ಸಾವಿರ ಹಳ್ಳಿಗಳಿವೆ. ತಲಾ ಸಂಸದರ ಪ್ರದೇಶಾಭಿವೃದ್ಧಿ ನಿಧಿಯನ್ನು ಸಮಾನವಾಗಿ ವಿಭಜಿಸಿದರೆ, ಪ್ರತಿ ಹಳ್ಳಿಗೆ ರೂ.15 ಸಾವಿರ ಲಭ್ಯ ಆಗಬಹುದು. ಗ್ರಾಮಗಳ ಅಗತ್ಯಗಳನ್ನು ಪೂರೈಸಲು ಮತ್ತು ಮೂಲಸೌಕರ್ಯಗಳನ್ನು ವಿಸ್ತರಿಸಲು ಈ ಮೊತ್ತ ಯಾವುದಕ್ಕೂ ಸಾಕಾಗದು. ಈ ಹಣವನ್ನೂ ಕಳೆದ ಒಂದೂವರೆ ವರ್ಷದಿಂದ ಅಮಾನತ್ತಿನಲ್ಲಿಡಲಾಗಿದೆ. ಅಂದರೆ ಸರ್ಕಾರ ರೂ.6,320 ಕೋಟಿ ಉಳಿತಾಯ ಮಾಡಿದೆ. ಫಿಲಿಪೈನ್ಸ್‌ನಲ್ಲಿ, ಆದ್ಯತಾ ಅಭಿವೃದ್ಧಿ ಸಹಾಯ ನಿಧಿಯು ಸೆನೆಟರ್‌ಗಳಿಗೆ ಸಣ್ಣ–ಪ್ರಮಾಣದ ಮೂಲ ಸೌಕರ್ಯಕ್ಕಾಗಿ ಹಣಕಾಸು ನೆರವನ್ನು ಒದಗಿಸುತ್ತದೆ. ಅಂತಹ ಯೋಜನೆಗಳು ಕ್ಷೇತ್ರದ ನಿರ್ದಿಷ್ಟ ಅಭಿವೃದ್ಧಿಗೆ ಸಹಕಾರಿಯಾಗಿ, ತಳಮಟ್ಟದ ಪ್ರಜಾಪ್ರಭುತ್ವವನ್ನು ಸಕ್ರಿಯಗೊಳಿಸುತ್ತದೆ.

**ಚರ್ಚೆಗೆ ವಿರಳ ಅವಕಾಶ:** ನಮ್ಮಲ್ಲಿ ಚರ್ಚೆಯನ್ನು ನಿಗ್ರಹಿಸುವ ಮತ್ತು ಸಂಸತ್ತಿನ ಸದಸ್ಯರ ಯೋಜನೆಗಳನ್ನು ಪ್ರೋತ್ಸಾಹಿಸದಿರುವ ಅಪಾಯಕಾರಿ ಮಾನಸಿಕತೆ ಬೆಳೆದಿದೆ. ಪಕ್ಷಾಂತರ ವಿರೋಧಿ ಕಾನೂನು ಪಕ್ಷಾಂತರ ಮಾಡುವ ಸಂಸದ ಅಥವಾ ಶಾಸಕರನ್ನು ಶಿಕ್ಷಿಸುತ್ತದೆ. ಪಕ್ಷದ ವಿಪ್‌ಅನ್ನು ಉಲ್ಲಂಘಿಸಿದರೆ ಸಂಸದರು ತಮ್ಮ ಸ್ಥಾನ ಕಳೆದುಕೊಳ್ಳಬೇಕಾಗುತ್ತದೆ. ಇದರಿಂದಾಗಿ ಶಾಸನ ರೂಪಿಸುವ ಪ್ರಕ್ರಿಯೆಯಲ್ಲಿ ಸಂಸದ/ಶಾಸಕನಿಗೆ ಸಕ್ರಿಯವಾಗಿ ಪಾಲ್ಗೊಳ್ಳಲು ಸಾಧ್ಯವಾಗುತ್ತಿಲ್ಲ. ಭಾರತದಲ್ಲಿ ರಾಜಕೀಯ ಪಕ್ಷಗಳೇ ಸಂಸದರ ನಿಲುವನ್ನು ನಿರ್ಧರಿಸುತ್ತವೆ. 543 ಲೋಕಸಭಾ ಸ್ಥಾನಗಳಲ್ಲಿ, 250 ಮಂದಿ ತಮ್ಮನ್ನು 'ರೈತ' ರೆಂದು ಹೇಳಿಕೊಂಡಿದ್ದಾರೆ. ಅದರೆ ಈ ರೈತರಲ್ಲಿ ಕೆಲವರಿಗೆ ಮಾತ್ರ ಕೃಷಿ ಕಾನೂನುಗಳ ಮೇಲಿನ ಚರ್ಚೆಯಲ್ಲಿ ದನಿ ಎತ್ತಲು ಸಾಧ್ಯವಾಯಿತು. ಸಂಸತ್ತಿನಂಥ ಘನವೆತ್ತ ವೇದಿಕೆಯಲ್ಲಿ ಸಂಸದ ತನ್ನ ಆತ್ಮಸಾಕ್ಷಿಗೆ ಪೂರಕವಾಗಿ ಮತ ಹಾಕವುದು ಬಹಳ ಅಪರೂಪ.

ಭಾರತದ ಸಂಸತ್ತಿನ ಸದಸ್ಯನೊಬ್ಬ ಸರಾಸರಿ 25ಲಕ್ಷಕ್ಕೂ ಹೆಚ್ಚು ನಾಗರಿಕರನ್ನು ಪ್ರತಿನಿಧಿಸುತ್ತಾನೆ. ಈ ಸಂಖ್ಯೆ ಭೋಟ್ಸ್ವಾ ನಾ, ಸ್ಲೊವೇನಿಯಾ, ಎಸ್ಟೋನಿಯಾ ಮತ್ತು ಭೂತಾನ್ ನಂಥ ದೇಶಗಳ ಜನಸಂಖ್ಯೆಗಿಂತ ದೊಡ್ಡದು. ಯುನೈಟೆಡ್ ಕಿಂಗ್‌ಡಮ್‌ನ ವೆಸ್ಟ್ ಮಿನಿಸ್ಟರ್‌ನಲ್ಲಿರುವ ಪ್ರತಿ ಸಂಸದರು ಸರಾಸರಿ 92 ಸಾವಿರ ನಾಗರಿಕರನ್ನು ಪ್ರತಿನಿಧಿಸುತ್ತಾರೆ. ಅಮೆರಿಕದ 'ಹೌಸ್ ಆಫ್ ರೆಪ್ರೆಸೆಂಟೇಟಿವ್ಸ್' ನ ಪ್ರತಿಯೊಬ್ಬ ಸದಸ್ಯರು 7ಲಕ್ಷ ಜನರಿಗೆ ಜವಾಬ್ದಾರರಾಗಿರುತ್ತಾರೆ. ಇಷ್ಟು ದೊಡ್ಡ ಸಂಖ್ಯೆಗಳಿದ್ದಾಗ, ಯಾವುದೇ ಸಂಸದ ತನ್ನ ಮತದಾರರ ಹಿತಾಸಕ್ತಿಗಳನ್ನು ಸಮರ್ಪಕವಾಗಿ ಪ್ರತಿನಿಧಿಸಲು ಸಾಧ್ಯವಿಲ್ಲ. 2026ರ ವೇಳೆಗೆ ಲೋಕಸಭೆಯು ಸಾವಿರಕ್ಕೂ ಹೆಚ್ಚು ಸ್ಥಾನಗಳನ್ನು ಹೊಂದಬಹುದು. ಪ್ರಾತಿನಿಧ್ಯವನ್ನು ಖಾತ್ರಿಪಡಿಸುವುದು ಮುಖ್ಯವಾದರೂ, ಸಂಸದರಿಗೆ ಮಾತನಾಡುವ ಸಮಯ ಬಹಳ ಕಡಿಮೆಯಿದೆ. 1956ರಲ್ಲಿ, ಫಿರೋಜ್ ಗಾಂಧಿಯವರು ಸಂಸತ್ ಕಲಾಪಗಳ ವರದಿಗಾರಿಕೆ ಕುರಿತ ಖಾಸಗಿ ಸದಸ್ಯರ ಮಸೂದೆ ಪರಿಚಯಿಸಿದರು; ಇದು ನಂತರದಲ್ಲಿ ಸಂಸತ್ ಕಲಾಪ (ಪ್ರಕಟಣೆಯ ರಕ್ಷಣೆ) ಕಾಯಿದೆ (1956) ಎಂದು ಪರಿಷ್ಕೃತಗೊಂಡಿತು. ನಮ್ಮ ಸಂಸತ್ತು ಹೊಸ ಭಾರತದ ಬದಲಾಗುತ್ತಿರುವ ಆಕಾಂಕ್ಷೆಗಳು, ಸಮಸ್ಯೆ-ಸವಾಲು ನಿಭಾಯಿಸುವ ಮತ್ತು ಮಹತ್ವಾಕಾಂಕ್ಷೆಯನ್ನು ಪ್ರತಿಬಿಂಬಿಸುವ ವೇದಿಕೆಯಾಗಬೇಕು.

ಲೇಖಕರು: ವರುಣ್ ಗಾಂಧಿ,
ಲೋಕಸಭಾ ಸದಸ್ಯರು.
ಆಧಾರ: ವಿಜಯವಾಣಿ, ದಿನಾಂಕ:13.05.2022.

## 12. ಆಧುನಿಕ ಶಿಕ್ಷಣದ ಗುರಿ ಹೇಗಿರಬೇಕು

ಮಾನವ ನಿರ್ಮಿತ ಜ್ಞಾನಗಳನ್ನು ಶಿಕ್ಷಣದಲ್ಲಿ ಅಳವಡಿಸುವಾಗ ಅವುಗಳಲ್ಲಿರುವ ಸಾರ್ವತ್ರಿಕ ಸತ್ಯಾಂಶಗಳನ್ನು ಒರೆಹಚ್ಚಿ ಹೆಕ್ಕಿ ತೆಗೆದು ಅಳವಡಿಸಬೇಕು. ವಿವಾದಾತ್ಮಕ ವ್ಯಕ್ತಿಗಳ ಜೀವನಚರಿತ್ರೆ ಮತ್ತು ಅಭಿಪ್ರಾಯಗಳನ್ನು ಬೋಧಿಸದೇ ಸಾರ್ವತ್ರಿಕವಾಗಿ ಒಪ್ಪಿಗೆಯಾದ ನಿರ್ವಿವಾದ ವ್ಯಕ್ತಿಗಳ ವಿಚಾರಗಳನ್ನು ಮಾತ್ರ ಶಿಕ್ಷಣದಲ್ಲಿರಬೇಕು.

ಮನುಷ್ಯ ಸೃಷ್ಟಿಯ ಉದ್ಭವ ಮತ್ತು ವಿಕಾಸ ಕ್ರಿಯೆಯ ಇಂದಿನ ಹಂತದ ಅತ್ಯಂತ ಶ್ರೇಷ್ಠಜೀವಿ. ಅವನ ಮುಂದಿನ ಹಂತದ ವಿಕಾಸ ನಿಗೂಢ, ಅವನೇ ಬಲ್ಲ! ಆಲೋಚನೆಗಳು, ಭಾವಗಳು, ಬುದ್ಧಿ ವಿಮರ್ಶೆ, ನಿರ್ಧಾರ, ಅನುಷ್ಠಾನ ಇತ್ಯಾದಿ ಕಾರ್ಯಗಳನ್ನು ಕೌಶಲ್ಯದಿಂದ ನಿರ್ವಹಿಸುವ ಉತ್ಕೃಷ್ಟ ಮೆದುಳು ಮತ್ತು ಮನಸ್ಸನ್ನು ಹೊಂದಿರುವುದರಿಂದ ಅವನು ಇನ್ನಿತರ ಜೀವಿಗಳಿಗಿಂತ ಭಿನ್ನ, ಮನುಷ್ಯ ಮಿಲಿಯನ್‌ಗಳಷ್ಟು ಜೀವಕೋಶಗಳಿಂದ ರಚಿತವಾಗಿದ್ದು, ಮೆದುಳಿನ ಜೀವಕೋಶಗಳನ್ನೂ ಒಳಗೊಂಡಂತೆ ಪ್ರತಿಯೊಂದು ಜೀವಕೋಶವು ತನ್ನ ಹಿಂದಿನ ವಿಕಾಸ ಕ್ರಿಯೆಯ ಎಲ್ಲ ಪೂರ್ವ ಇತಿಹಾಸದ ವೈಜ್ಞಾನಿಕ ಹಂತಗಳ ಮಾಹಿತಿಯನ್ನು ತನ್ನ ಒಡಲಿನಲ್ಲಿ ಸಂಗ್ರಹಿಸಿಕೊಂಡಿರುವ ಸಾಫ್ಟ್‌ವೇರ್ ಆಗಿರುವುದು ವೈಜ್ಞಾನಿಕ ಸಂಶೋಧನೆಗಳಿಂದ ದೃಢಪಟ್ಟಿರುವ ಅಂಶವಾಗಿರುತ್ತದೆ.

ಮನುಷ್ಯ ಸೃಷ್ಟಿಯ ಪ್ರತಿಬಿಂಬವಾಗಿರುವುದರಿಂದ ಸೃಷ್ಟಿಯ ಎಲ್ಲವುಗಳ ಬಗೆಗಿನ ಮಾಹಿತಿ ಜೀವಕೋಶಗಳಲ್ಲಿ ಅಡಗಿವೆ. ಇವು ಪ್ರಧಾನವಾಗಿ ವಂಶವಾಹಿಗಳಲ್ಲಿ ರಾಸಾಯನಿಕ ರೂಪದಲ್ಲಿ

ಶೇಖರಣೆಯಾಗಿವೆ. ಒಂದೊಂದು ಮಾಹಿತಿ ಅಂಶವೂ ಒಂದೊಂದು ಬಗೆಯ ರಚನಾತ್ಮಕ ರಾಸಾಯನಿಕ ರೂಪದಲ್ಲಿ ಸಂಗ್ರಹವಾಗಿರುತ್ತದೆ. ಇವು ಅವಶ್ಯಕತೆ ಇದ್ದಾಗ ವಿದ್ಯುತ್ ಸಿಗ್ನಲ್‌ಗಳಾಗಿ ಪರಿವರ್ತನೆ ಹೊಂದಿ ವ್ಯಕ್ತವಾಗುತ್ತವೆ. ಮೆದುಳಿನ ಜೀವಕೋಶಗಳು ಎಲ್ಲ ಪೂರ್ವ ಮತ್ತು ಪ್ರಸ್ತುತ ಮಾಹಿತಿಗಳ ಉಗ್ರಾಣಗಳಾಗಿವೆ. ಮೆದುಳಿನ ಜೀವಕೋಶಗಳಲ್ಲಿ ತಲೆಮಾರುಗಳಿಂದ ವರ್ಗಾವಣೆಯಾಗಿ ಬಂದ ಮಾಹಿತಿಗಳು ಅಡಕವಾಗಿದ್ದು, ಅವು ತಾವಾಗಿಯೇ ವ್ಯಕ್ತವಾಗಬಹುದು ಅಥವಾ ನೀಡುವ ತರಬೇತಿಯಿಂದ ಮೇಲುಸ್ತರಕ್ಕೆ ಬಂದು ಅನಾವರಣಗೊಳ್ಳಬಹುದು. ಮೆದುಳಿನಲ್ಲಿ ಈಗಾಗಲೇ ಅಡಗಿರುವ ಅಥವಾ ಪ್ರಸ್ತುತ ಶೇಖರಿಸಲಾಗುವ ಸತ್ಯಸಂಗತಿಗಳೇ ಜ್ಞಾನ. ಸುಳ್ಳುಗಳು ಜ್ಞಾನವಲ್ಲ.

ಶಿಕ್ಷಣ ಈಗಾಗಲೇ ಮೆದುಳಿನಲ್ಲಿ ಸುಪ್ತವಾಗಿ ಅಡಗಿರುವ ಜ್ಞಾನವನ್ನು ಮೇಲುಸ್ತರಕ್ಕೆ ತಂದು ವ್ಯಕ್ತವಾಗಿಸುವ ಕೌಶಲ್ಯಯುತ ತರಬೇತಿ. ಮೆದುಳಿನಲ್ಲಿ ಅಡಗಿರುವ ಮನುಷ್ಯನ ಕನಿಷ್ಠ ಬದುಕಿಗೆ ಅವಶ್ಯಕವಿರುವ ಜ್ಞಾನ ಯಾವ ತರಬೇತಿ ಇಲ್ಲದಿದ್ದರೂ ಸಂದರ್ಭಕ್ಕನುಗುಣವಾಗಿ ಅವೇ ವ್ಯಕ್ತವಾಗುತ್ತವೆ. ಪ್ರೌಢಾವಸ್ಥೆಯಲ್ಲಿ ಉಂಟಾಗುವ ಲೈಂಗಿಕಾಸಕ್ತಿ, ಹಸಿವು, ನಿದ್ರೆ ಇತ್ಯಾದಿ ಗರ್ಭಕೂಸಿನ 12ನೇ ವಾರದಲ್ಲಿ ಎಲ್ಲ ಅಂಗಾಂಗಗಳ ಬೆಳವಣಿಗೆಯಾಗಿದ್ದು 12–16ನೇ ವಾರದಲ್ಲಿ ಮೆದುಳಿನ ಬೆಳವಣಿಗೆಯಾಗಿದ್ದು, 20ನೇ ವಾರಕ್ಕೆ ಗರ್ಭಕೂಸಿನ ಮೆದುಳು ವಯಸ್ಕರ ಮೆದುಳಿನ ಉನ್ನತ ಕಾರ್ಯಗಳಾದ ಸ್ಪರ್ಶಾನುಭವ, ಕೇಳುವಿಕೆ, ಕಣ್ಣುಗಳು ಬೆಳಕಿಗೆ ಸ್ಪಂದಿಸುವಿಕೆ, ಹೊರಗಿನ ಶಬ್ಧಗಳ ಗ್ರಹಿಕೆಗಳನ್ನು ಕಲಿತಿರುತ್ತದೆ. 15ನೇ ವಾರದಲ್ಲಿಯೇ ಗರ್ಭ ಕೂಸಿನ ಕಣ್ಣು ಮುಚ್ಚಿದ್ದರೂ ತಾಯಿಯ ಹೊಟ್ಟೆಯ ಮೇಲೆ ಬೀಳುವ ಬೆಳಕನ್ನು ಗ್ರಹಿಸುತ್ತದೆ. ಈ ಸಂಶೋಧನಾತ್ಮಕ ಅಂಶಗಳು ಜ್ಞಾನದ ಅರಿವು ಜನ್ಮದತ್ತವಾಗಿಯೇ ಮಗುವಿನಲ್ಲಿದ್ದು, ಯಾವ ಶೈಕ್ಷಣಿಕ ತರಬೇತಿಯೂ ಇಲ್ಲದೇ ಅವು ತಮಗೆ ತಾವೇ ಕಾಲ ಮತ್ತು ಸಂದರ್ಭಕ್ಕನುಗುಣವಾಗಿ ಅನಾವರಣಗೊಳ್ಳುತ್ತವೆ ಎಂಬ ಅಂಶ ವೈಜ್ಞಾನಿಕವಾಗಿ ಸಾಬೀತಾಗಿರುತ್ತವೆ. ಮಹಾಭಾರತದಲ್ಲಿ ಅಭಿಮನ್ಯು ತನ್ನ ತಾಯಿಯ ಗರ್ಭದಲ್ಲಿಯೇ ಸಮರಕಲೆ ಕಲಿತ್ತಿದ್ದ ಎಂಬ ದೃಷ್ಟಾಂತ ಇದನ್ನು ಸಾಕ್ಷೀಕರಿಸುತ್ತದೆ.

ಮಗು ಹುಟ್ಟಿದ ಆನಂತರ ಜನ್ಮದತ್ತವಾಗಿ ಬಂದ ಕಲಿಕೆಗಳು ವಯೋಧರ್ಮಕ್ಕನುಗುಣವಾಗಿ ಹಂತ ಹಂತವಾಗಿ ವ್ಯಕ್ತವಾಗಿ ಪಕ್ವಗೊಳ್ಳುತ್ತವೆ. ಪರಿಸರ ಜನ್ಮದತ್ತ ಸ್ವಯಂ ಕಲಿಕಾ ಮೆದುಳಿನ ವ್ಯವಸ್ಥೆಯ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಮಗು ಹುಟ್ಟಿದ ದಿನದಿಂದಲೇ ಪರಿಸರದ ಪ್ರಭಾವ, ಅದರ ಮೇಲೆ ಗಂಭೀರವಾಗಿ ಪ್ರಾರಂಭವಾಗುವುದರಿಂದ ಶೈಕ್ಷಣಿಕ ತರಬೇತಿ ಅಂದಿನಿಂದಲೇ ಪ್ರಾರಂಭವಾಗಬೇಕು. ತಾಯಿಯೇ ಮೊದಲ ಗುರುವಾಗುವುದರಿಂದ ಈ ಎಲ್ಲ ಮಾಹಿತಿಗಳನ್ನು ತಾಯಿ ಮತ್ತು ಸುತ್ತಮುತ್ತಲಿನ ಸಮಾಜ ಅರಿತು ಅದಕ್ಕನುಗುಣವಾಗಿ ಮಗುವಿನ ಶಿಕ್ಷಣದ ತರಬೇತಿ ಪ್ರಾರಂಭದಿಂದಲೇ ಶುರುವಾಗುವುದರಿಂದ ಮೆದುಳಿನಲ್ಲಿ ಅದಮ್ಯವಾಗಿರುವ ಎಲ್ಲ ಜ್ಞಾನದ ಮಾಹಿತಿಗಳನ್ನು ಹಂತಹಂತವಾಗಿ ವ್ಯಕ್ತವಾಗಿಸಲು ಸಹಕಾರಿಯಾಗುತ್ತದೆ. ಆದುದರಿಂದ ತಾಯಿಯ ಶಿಕ್ಷಣ ಅತಿ ಮುಖ್ಯ. ಇದಲ್ಲದೆ ಅದಮ್ಯ ಮೆದುಳಿನ ಜ್ಞಾನವನ್ನು ಸ್ವಯಂ ವ್ಯಕ್ತವಾಗದಂತೆ ದಮನಮಾಡುವ ಕ್ರಿಯೆಗಳಿಂದ ಮುಂದಿನ ದಿನಗಳಲ್ಲಿ ಮಗುವಿನಲ್ಲಿ ಕಲಿಕಾ ದೋಷವುಂಟಾಗುತ್ತದೆ.

ಶಿಕ್ಷಣ ಜ್ಞಾನ ವಿಕಾಸವಾಗಲು ಹೊರಗಿನಿಂದ ಕೊಡುವ ತರಬೇತಿಯಾದುದರಿಂದ ಯಾವ ಬಗೆಯ ಜ್ಞಾನವನ್ನು ಯಾವ ವಯಸ್ಸಿನಲ್ಲಿ ಎಷ್ಟರ ಮಟ್ಟಿಗೆ ಮಗುವಿನ ಮೆದುಳಿಗೆ ತುಂಬಬೇಕು ಎಂಬುದು ಅತ್ಯವಶ್ಯಕ. ಮೆದುಳಿಗೆ ಅಗಾಧವಾದ ಕಲಿಕಾ ಸಾಮರ್ಥ್ಯವಿದ್ದರೂ ಅದಕ್ಕೂ ಶ್ರಮದ ಇತಿಮಿತಿ ಇದ್ದು, ಬದುಕಿನಲ್ಲಿ ಸಂತೋಷವಾಗಿ ಬದುಕಲು ಅವಶ್ಯವಿರುವ ಜ್ಞಾನವನ್ನು ಮೂಲಭೂತವಾಗಿ ಪ್ರಾರಂಭದಲ್ಲಿಯೇ ಕಲಿಸುವುದು ಅತ್ಯವಶ್ಯಕ.

ಕಲಿಕೆಗೆ ಭಾಷೆ ಅದರಲ್ಲೂ ಮಾತೃಭಾಷೆ ಬಹುಮುಖ್ಯವಾದ ಮಾಧ್ಯಮವಾಗಿದ್ದು, ಮಗುವಿಗೆ ಪ್ರಾರಂಭದಿಂದಲೇ ಮಾತೃಭಾಷೆ ಮತ್ತು ಜ್ಞಾನ ಯಥೇಚ್ಚವಾಗಿ ಲಭ್ಯವಿರುವ ಇನ್ನಿತರ ಭಾಷೆಯನ್ನು ಬಹಳ ಚೆನ್ನಾಗಿ ಓದಲು ಬರೆಯಲು ಮತ್ತು ಮಾತನಾಡಲು ಬರುವ ಕೌಶಲ ಇರುವಂತೆ ಕಲಿಸುವುದು ಶಿಕ್ಷಣದ ಮೊದಲ ಆದ್ಯತೆಯಾಗಬೇಕು. ಭಾಷೆಯ ಪ್ರೌಢಿಮೆ ಇಲ್ಲದಿದ್ದರೆ ಜ್ಞಾನದ ಅರಿವು ಮತ್ತು ಪ್ರಸಾರ ಸಮಂಜಸವಾಗಿರುವುದಿಲ್ಲ.

1838ರಲ್ಲಿ ಥಾಮಸ್ ಬ್ಯಾಬಿನ್‌ಟನ್ ಮೆಕಾಲೆ ಶಿಕ್ಷಣ ನೀತಿ ಜಾರಿಗೆ ಬರುವ ಮುನ್ನ ಭಾರತದಲ್ಲಿ ಸಂಸ್ಕೃತ, ಅರೆಬಿಕ್ ಮತ್ತು ಪ್ರಾದೇಶಿಕ ಭಾಷೆಗಳಲ್ಲಿ ಶಿಕ್ಷಣ ಲಭ್ಯವಾಗುತ್ತಿತ್ತು. ಅಂದಿನ ಬಹುತೇಕ ಶಿಕ್ಷಣ ಮೌನವೀಯ ಮೌಲ್ಯಗಳು, ಅಧಾತ್ಮಿಕ ಚಿಂತನೆಗಳು, ಸೃಷ್ಟಿಯ ಜ್ಞಾನ, ತತ್ವಶಾಸ್ತ್ರ ಇತ್ಯಾದಿ ಬದುಕಿಗೆ ಸಂಬಂಧಿಸಿದ ಸಂತೋಷಕರವಾಗಿ ಬದುಕುವ, ವ್ಯಕ್ತಿತ್ವವನ್ನು ರೂಪಿಸುವ ಅಂಶಗಳನ್ನು ಒಳಗೊಂಡಿತ್ತು. ಮೆಕಾಲೆ ಶಿಕ್ಷಣ ನೀತಿ ಬಂದ ನಂತರ ಆಂಗ್ಲ ಭಾಷೆಯ ಶಿಕ್ಷಣ ಪ್ರಾರಂಭವಾಗಿ ಜ್ಞಾನ ಮತ್ತು ಆಡಳಿತಕ್ಕೆ ಸಂಬಂಧಿಸಿದ ಶಿಕ್ಷಣ ಮೇಲುಗೈ ಪಡೆದು ವ್ಯಕ್ತಿತ್ವ ನಿರ್ಮಾಣದ ಪ್ರಾದೇಶಿಕ ಭಾಷೆಯಲ್ಲಿನ ಶಿಕ್ಷಣ ಕ್ರಮೇಣ ಮರೆಯಾಗಿ ಇಂದು ಶಿಕ್ಷಣ, ಹಣ ಮತ್ತು ಅಧಿಕಾರ, ಸಂಪಾದಿಸುವ ಭೌತಿಕ ಸಂಪತ್ತುಗಳ ಹುಚ್ಚಿನಾಸಕ್ತ ವ್ಯಕ್ತಿತ್ವ ನಿರ್ಮಾಣ ಮಾಡುವ ತರಬೇತಿಯಾಗಿ ಪ್ರಪಂಚಾದ್ಯಂತ ಮಾರ್ಪಟ್ಟಿರುವುದು ದುರಂತದ ಸಂಗತಿಯಾಗಿದೆ.

ಜ್ಞಾನದಲ್ಲಿ ಸೃಷ್ಟಿಕರ್ತ ನಿರ್ಮಿತ, ಮನುಷ್ಯನನ್ನೂ ಒಳಗೊಂಡಂತೆ ಸೃಷ್ಟಿಯಲ್ಲಿರುವ ಎಲ್ಲವುಗಳ ಬಗೆಗಿನ ವೈಜ್ಞಾನಿಕ ಅಂಶಗಳನ್ನು ಒಳಗೊಂಡ ಸೃಷ್ಟಿಯ ಜ್ಞಾನ ಮತ್ತು ಮಾನವ ತನ್ನ ಬದುಕಿಗೆ ಅವನೇ ರೂಢಿಸಿಕೊಂಡಿರುವ ಸಾಮಾಜಿಕ ಸಾಂಸ್ಕೃತಿಕ, ಆರ್ಥಿಕ, ರಾಜಕೀಯ, ಆಡಳಿತಾತ್ಮಕ, ಕಾನೂನಾತ್ಮಕ, ವೃತ್ತಿಯಾತ್ಮಕ, ಧಾರ್ಮಿಕ ಇತ್ಯಾದಿಗಳಿಗೆ ಸಂಬಂಧಿಸಿದ ಮಾನವ ನಿರ್ಮಿತ ಜ್ಞಾನ ಎಂಬ ಎರಡು ಪ್ರಮುಖ ಕವಲು ಜ್ಞಾನಗಳಿಗೆ. ಸೃಷ್ಟಿಯ ಜ್ಞಾನ ವಿಶ್ವಾದ್ಯಂತ ಸಾರ್ವತ್ರಿಕವಾಗಿದ್ದು, ಪ್ರತಿಯೊಬ್ಬರಿಗೂ ಈ ಜ್ಞಾನದ ಅರಿವು ಅತ್ಯವಶ್ಯಕ. ಮನುಷ್ಯನ ರಚನೆ ಮತ್ತು ಬೆಳವಣಿಗೆ, ಅವನ ಆರೋಗ್ಯ ನಿಯಂತ್ರಣ, ಮನಸ್ಸಿನ ನಿಯಂತ್ರಣ, ಸೃಷ್ಟಿಯ ಅಂತಿಮ ಸತ್ಯಗಳಿಗೆ ಸಂಬಂಧಿಸಿದ ಜ್ಞಾನ ಇತ್ಯಾದಿಗಳು ಸೃಷ್ಟಿಯ ಜ್ಞಾನದ ಪರಿಮಿತಿಗೆ ಬರುತ್ತವೆ. ಮನುಷ್ಯ ಸೃಷ್ಟಿಯನ್ನು ಸಂಪೂರ್ಣವಾಗಿ ಇನ್ನೂ ಅರ್ಥಮಾಡಿಕೊಂಡಿಲ್ಲ. ಅರ್ಥಮಾಡಿಕೊಳ್ಳಬೇಕಾಗಿರುವ ಸೃಷ್ಟಿಯ ಸಂಗತಿಗಳು ಅಸಂಖ್ಯಾತ. ಈ ಬಗ್ಗೆ ನಿರಂತರ ಸಂಶೋಧನೆಗಳು ಜರುಗುತ್ತಲೇ ಇವೆ. ಸೃಷ್ಟಿಗೆ ಸಂಬಂಧಿಸಿದ ಎಲ್ಲ ವೈಜ್ಞಾನಿಕ ವಿಚಾರಗಳು ಇಂದು ಅಧ್ಯಾತ್ಮಿಕ ಜ್ಞಾನ, ಭೌತವಿಜ್ಞಾನ, ರಾಸಾಯನಿಕ ವಿಜ್ಞಾನ, ಜೈವಿಕ ವಿಜ್ಞಾನ, ಖಗೋಳ ಶಾಸ್ತ್ರ, ಪರಿಸರ ಜ್ಞಾನ, ಭೂಗೋಳ ಜ್ಞಾನ, ಕೃಷಿ ವಿಜ್ಞಾನ, ವೈದ್ಯ ವಿಜ್ಞಾನ, ಇತ್ಯಾದಿ ಹಲವಾರು ಕವಲು ವಿಜ್ಞಾನಗಳಾಗಿ ವಿಂಗಡಣೆಯಾಗಿದ್ದು, ಇಂದು ಹಾಲಿ ಶಿಕ್ಷಣದಲ್ಲಿ ಎಲ್ಲ ವಿದ್ಯಾರ್ಥಿಗಳಿಗೂ ಈ ಎಲ್ಲ ಜ್ಞಾನಗಳು ಲಭಿಸುತ್ತಿಲ್ಲ. ಆಸಕ್ತರು ಮಾತ್ರ ವಿಶೇಷವಾಗಿ ಒಂದೊಂದು ಈ ಕವಲು ವಿಜ್ಞಾನಗಳನ್ನು ಅಭ್ಯಾಸ ಮಾಡುವುದರಿಂದ ಸೃಷ್ಟಿಯ ಜ್ಞಾನದ ಸಮಗ್ರನೋಟ ಲಭಿಸದೇ ವಿಧ್ಯಾರ್ಥಿಗಳಲ್ಲಿ ಸಮಗ್ರ ದೃಷ್ಟಿಯ ವ್ಯಕ್ತಿತ್ವ ರೂಪಿತವಾಗುತ್ತಿಲ್ಲ. ಮನುಷ್ಯನ ಮನಸ್ಸು ಚಂಚಲಶೀಲವಾಗಿದ್ದು, ಅದನ್ನು ಅಧ್ಯಾತ್ಮಿಕ ಚಿಂತನೆಗಳಿಂದ ಮಾತ್ರ ಶಾಂತಪಡಿಸಲು ಸಾಧ್ಯ ಎಂಬ ವೈಜ್ಞಾನಿಕ ಅಂಶದ ಅರಿವಿದ್ದರೂ ಮನಸ್ಸನ್ನು ತರಬೇತಿಗೊಳಿಸುವ ಶಿಕ್ಷಣ ಇಂದು ಲಭ್ಯವಿಲ್ಲ. ಇಂದಿನ ಸಾಮಾಜಿಕ ಅಶಾಂತ ಸ್ಥಿತಿಗೆ ಇದೇ ಬಹುಮುಖ್ಯ ಕಾರಣ.

ಮಾನವ ನಿರ್ಮಿತ ವಿಜ್ಞಾನಗಳು ಅವರವರ ಚಿಂತನೆಗಳು, ಅನುಭವ, ಅನುಕೂಲ, ಸಂದರ್ಭ ಇತ್ಯಾದಿಗಳಿಗನುಗುಣವಾಗಿ ಕಂಡುಕೊಂಡ ಸಾಂದರ್ಭಿಕ ಜ್ಞಾನಗಳೇ ಹೊರತು ಅವು ವಿಶ್ವ ವ್ಯಾಪ್ತಿಯಲ್ಲ, ಎಲ್ಲರಿಗೂ ಅನ್ವಯಿಸುವಂಥವುಗಳಲ್ಲ. **ಉದಾ**: ಸಾಮಾಜಿಕ ವ್ಯವಸ್ಥೆ ಧಾರ್ಮಿಕ ನಂಬಿಕೆಗಳು, ರಾಜಕೀಯ ಮತ್ತು ಆರ್ಥಿಕ ಇವುಗಳಿಗೆ ಸಂಬಂಧಿಸಿದ ಜ್ಞಾನಗಳು ರಾಜ್ಯ ಮತ್ತು ದೇಶ, ದೇಶಕ್ಕೂ ಭಿನ್ನ, ಇವುಗಳಲ್ಲಿ ಸತ್ಯಗಳಿಲ್ಲದೆ ಹಲವಾರು ಸುಳ್ಳುಗಳೂ ಸಹ ಅಡಗಿರಬಹುದು. ಮಾನವ ನಿರ್ಮಿತ ಜ್ಞಾನಗಳನ್ನು ಶಿಕ್ಷಣದಲ್ಲಿ ಅಳವಡಿಸುವಾಗ ಅವುಗಳಲ್ಲಿರುವ ಸಾರ್ವತ್ರಿಕ ಸತ್ಯಾಂಶಗಳನ್ನು ಒರೆಹಚ್ಚಿ ಹೆಕ್ಕಿ ತೆಗೆದು ಅಳವಡಿಸಬೇಕು. ವಿವಾದಾತ್ಮಕ ವ್ಯಕ್ತಿಗಳ ಜೀವನಚರಿತ್ರೆ ಮತ್ತು ಅಭಿಪ್ರಾಯಗಳನ್ನು ಬೋಧಿಸದೇ ಸಾರ್ವತ್ರಿಕವಾಗಿ ಒಪ್ಪಿಗೆಯಾದ ನಿರ್ವಿವಾದ ವ್ಯಕ್ತಿಗಳ ವಿಚಾರಗಳು ಮಾತ್ರ ಶಿಕ್ಷಣದಲ್ಲಿರಬೇಕು. ಉದಾಹರಣೆಗೆ ಗಾಂಧೀಜಿ, ಬುದ್ಧ, ಬಸವ, ಅಂಬೇಡ್ಕರ್ ಇವರುಗಳ ವಿಚಾರಗಳು ಎಲ್ಲರೂ ಒಪ್ಪುವಂತಹವುಗಳು ಇತ್ಯಾದಿ.

ಶಿಕ್ಷಣದ ಪ್ರಮುಖ ಗುರಿ ಮನುಷ್ಯನನ್ನು ಸೃಷ್ಟಿಯೊಡನೆ ಬೆಸೆದು, ಪ್ರೀತಿ ಹಂಚುವ ಮೌಲ್ಯಯುತ ಜ್ಞಾನ, ಮನುಷ್ಯ ಸಂಘಜೀವಿಯಾಗಿದ್ದು, ಸಮಾಜದೊಂದಿಗೆ ಕೂಡಿಸಿಕೊಂಡು ಬದುಕುವ ಸಾಮಾಜಿಕ ಜ್ಞಾನ, ಸಾಂಸ್ಕೃತಿಕ ಜ್ಞಾನ, ಬದುಕಲು ವೃತ್ತಿ ಕೌಶಲ ನೀಡುವ ವೈಜ್ಞಾನಿಕ ಜ್ಞಾನ, ಅಧ್ಯಾತ್ಮಿಕ ಜ್ಞಾನ ಮತ್ತು

ಮೆದುಳಿನ ಬುದ್ಧಿವಂತಿಕೆಯನ್ನು ಗರಿಷ್ಠವಾಗಿ ವೃದ್ಧಿಸುವ ತರಬೇತಿ ಜ್ಞಾನಗಳನ್ನು ನೀಡುವ ಉದ್ದೇಶವಾಗಿದ್ದಲ್ಲಿ ಮಾತ್ರ ವ್ಯಕ್ತಿಯ ಸರ್ವತೋಮುಖ ಬೆಳವಣಿಗೆ ಸಾಧ್ಯ.

ಇದುವರೆಗೆ ಬಂದಿರುವ ಯಾವ ಶಿಕ್ಷಣ ನೀತಿಯಲ್ಲಿಯೂ ಮೇಲಿನ ಅಂಶಗಳನ್ನೊಳಗೊಂಡ ಶಿಕ್ಷಣ ಅನುಷ್ಠಾನಕ್ಕೆ ಬಾರದಿರುವುದು ದುರದೃಷ್ಟಕರ, ಪ್ರಸ್ತುತ ಜಾರಿಗೆ ತಂದಿರುವ ಹೊಸ ಶಿಕ್ಷಣ ನೀತಿ–2020ರಲ್ಲಿ ಪ್ರಧಾನವಾಗಿ 10+2ರ ಹಂತಗಳ ಶಿಕ್ಷಣವನ್ನು 5+3+3+4 ಹಂತಗಳಾಗಿ ವಿಂಗಡಿಸಲಾಗಿದ್ದು, ಕೇವಲ ಈ ವಿಂಗಡಣೆಯಿಂದಲೇ ಸಮಗ್ರ ವ್ಯಕ್ತಿತ್ವದ ಬೆಳವಣಿಗೆ ಸಾಧ್ಯವಿಲ್ಲ. 5+3ರ ಹಂತದಲ್ಲಿ ಮಕ್ಕಳಿಗೆ ಭಾಷೆ ಮತ್ತು ಸೃಷ್ಟಿಯ ವಿಜ್ಞಾನವನ್ನೊಳಗೊಂಡ ಶಿಕ್ಷಣವನ್ನು ಎಲ್ಲರಿಗೂ ನೀಡುವಂತಾಗಬೇಕು. ಈ ಹಂತದಲ್ಲಿ ಸದೃಢ ದೇಹ, ಭಾಷೆ ಮತ್ತು ಸದೃಢ ಮನಸ್ಸನ್ನು ಕಟ್ಟುವ ಸಮಗ್ರ ಜ್ಞಾನವನ್ನು ನೀಡಿದಲ್ಲಿ ಬೆಳವಣಿಗೆಯ ಮೆದುಳಿನಲ್ಲಿ ನೈಜ ವಿಜ್ಞಾನ ನಾಟಿಯಾಗಿ ಮುಂದಿನ ದಿನಗಳಲ್ಲಿ ಮಾನವ ನಿರ್ಮಿತ ಜ್ಞಾನವನ್ನು ಹಂಸ ಕ್ಷೀರ ನ್ಯಾಯದಂತೆ ಗ್ರಹಿಸಲು ಮಕ್ಕಳು ಸದೃಢರಾಗುತ್ತಾರೆ. 3+4ರ ಹಂತಗಳಲ್ಲಿಯೂ ಸೃಷ್ಟಿಯ ಜ್ಞಾನದ, ಉನ್ನತ ಜ್ಞಾನದ ಜೊತೆ ಜೊತೆಗೆ ಮಾನವ ನಿರ್ಮಿತ ವಿಜ್ಞಾನಗಳನ್ನೂ ಕೂಡ ಜೋಡಿಸಿ ಶಿಕ್ಷಣ ನೀಡುವಂತಾಗಬೇಕು. ಈ ದಿಕ್ಕಿನಲ್ಲಿ ಪಠ್ಯಪುಸ್ತಕಗಳು ರಚನೆಯಾದಲ್ಲಿ ಮಾತ್ರ ಹೊಸ ಶಿಕ್ಷಣ ನೀತಿಯ ಆಶಯ ಈಡೇರುತ್ತದೆ. ಹಾಗಾಗಲಿ ಎಂದು ಆಶಿಸೋಣ.

ಲೇಖಕರು:–ಡಾ:ಎಸ್.ಪಿ.ಯೋಗಣ್ಣ

ಆಧಾರ:ವಿಜಯ ಕರ್ನಾಟಕ, ದಿನಾಂಕ:24.05.2022

## 13. ಪೂಜಾ ಸ್ಥಳಗಳ ನಿರ್ವಹಣೆಗೂ ಕಾಯಿದೆಯುಂಟು

ಉತ್ತರ ಭಾರತದ ವಾರಣಾಸಿ, ಮಥುರಾ, ದಿಲ್ಲಿಯಲ್ಲದೇ ಕರ್ನಾಟಕದ ಮಂಗಳೂರು, ಶ್ರೀರಂಗಪಟ್ಟಣ ಸೇರಿದಂತೆ ಕೆಲವು ಪ್ರದೇಶಗಳಲ್ಲಿ ಧಾರ್ಮಿಕ ಸ್ಥಳಗಳ ಹಕ್ಕುದಾರಿಕೆ ವಿವಾದದ ಸ್ವರೂಪ ಪಡೆದುಕೊಳ್ಳಲಾರಂಭಿಸಿದೆ. ಹಿಂದು, ಮುಸ್ಲಿಂ ಸಂಘರ್ಷಕ್ಕೆ ಕಾರಣವಾಗಿದೆ. ಇಂಥ ವಿವಾದಗಳನ್ನು ನಿರ್ವಹಿಸುವ ದೃಷ್ಟಿಯಿಂದ ಭಾರತದ ಸಂಸತ್ 1991ರಲ್ಲಿಯೇ ಪೂಜಾ ಸ್ಥಳಗಳ ಕಾಯಿದೆಯನ್ನು ರೂಪಿಸಿದೆ. ಆ ಕಾಯಿದೆ ಏನು ಹೇಳುತ್ತದೆ? ಇದರ ಮೂಲಾಂಶಗಳೇನು ಎಂಬುದರತ್ತ ವಿಜಯ ಕರ್ನಾಟಕದ ಒಂದು ನೋಟ.

**ಹಸ್ತಾಂತರ ಪರಿವರ್ತನೆಗೆ ನಿಷೇಧ:**

- ಈ ಕಾಯಿದೆ 3ನೇ ಸೆಕ್ಷನ್–ಯಾವುದೇ ಧಾರ್ಮಿಕ ಪಂಥದ ಪೂಜಾ ಸ್ಥಳವನ್ನು ಸಂಪೂರ್ಣವಾಗಿ ಅಥವಾ ಭಾಗಶಃ, ಒಂದು ವಿಭಿನ್ನ ಧಾರ್ಮಿಕ ಪಂಥದ ಪೂಜಾ ಸ್ಥಳವಾಗಿ ಅಥವಾ ಅದೇ ಧಾರ್ಮಿಕ ಪಂಥದ ಬೇರೆ ವಿಭಾಗವಾಗಿ ಪರಿವರ್ತಿಸುವುದನ್ನು ನಿರ್ಬಂಧಿಸುತ್ತದೆ.
- 1947ರ ಆಗಸ್ಟ್ 15ರಂದು, ಒಂದು ಆರಾಧನಾ ಸ್ಥಳದ ಧಾರ್ಮಿಕ ಸ್ವರೂಪವು "ಅಸ್ತಿತ್ವದಲ್ಲಿದ್ದಂತೆಯೇ ಮುಂದುವರಿಯುತ್ತದೆ" ಎಂದು ಕಲಮು 4(1) ಘೋಷಿಸುತ್ತದೆ.

**ಹೊಸದಾವೆ, ಕಾನೂನು ಪ್ರಕ್ರಿಯೆ ರದ್ದು**: ಸೆಕ್ಷನ್ 4(2)ಏನು ಹೇಳುತ್ತದೆ ಎಂದರೆ 1947ರ ಆಗಸ್ಟ್ 15ರಂದು ಅಸ್ತಿತ್ವದಲ್ಲಿರುವ ಯಾವುದೇ ಆರಾಧನಾ ಸ್ಥಳದ ಧಾರ್ಮಿಕ ಸ್ವರೂಪವನ್ನು ಪರಿವರ್ತಿಸಲು ಸಂಬಂಧಿಸಿದ ಯಾವುದೇ ದಾವೆ ಅಥವಾ ಕಾನೂನು ವ್ಯವಹರಣೆಯನ್ನು ಯಾವುದೇ ನ್ಯಾಯಾಲಯದ ಮುಂದೆ ಬಾಕಿಯಿರುವ ಯಾವುದೇ ದಾವೆ ಅಥವಾ ಕಾನೂನು ಪ್ರಕ್ರಿಯೆಗಳನ್ನು ರದ್ದುಪಡಿಸತಕ್ಕದ್ದು ಮತ್ತು ಯಾವುದೇ ಹೊಸ ದಾವೆ ಅಥವಾ ಕಾನೂನು ಪ್ರಕ್ರಿಯೆಗಳನ್ನು ಮಾನ್ಯ ಮಾಡಬಾರದು.

ವಾರಣಾಸಿಯ ಅಂಜುಮನ್ ಇಂತೆಜಾಮಿಯಾ ನಿರ್ವಹಿಸುತ್ತಿರುವ ಜ್ಞಾನವಾಪಿ ಮಸೀದಿ ಸಂಕೀರ್ಣದಲ್ಲಿ ಶೃಂಗಾರ ಗೌರಿ ಮಂದಿರದ ವಿಡಿಯೊ ಸಮೀಕ್ಷೆ ನಡೆಸಲು ಸ್ಥಳೀಯ ಕೋರ್ಟ್ ನೀಡಿದ ಆದೇಶವನ್ನು ಸುಪ್ರೀಂಕೋರ್ಟ್ ವಿಚಾರಣೆಗೆ ಅಂಗೀಕರಿಸಿದೆ. ವಿಡಿಯೊ ಸಮೀಕ್ಷೆ ಆದೇಶವನ್ನು

ಅಲಹಾಬಾದ್ ಹೈಕೋರ್ಟ್ ಏಪ್ರಿಲ್ 21ರಂದು ಎತ್ತಿಹಿಡಿದಿತ್ತು. ಇದನ್ನು ಪ್ರಶ್ನಿಸಿ ಸುಪ್ರೀಂ ಮೆಟ್ಟಿಲು ಹತ್ತಿರುವ ಅಂಜುಮಾನ್ ಇಂತೆಜಾಮಿಯಾ, ಕೋರ್ಟ್ ಆದೇಶಗಳು 1991ರ ಪೂಜಾ ಸ್ಥಳಗಳ ಕಾಯಿದೆಯ ಸ್ಪಷ್ಟ ಉಲ್ಲಂಘನೆ ಎಂದು ಪ್ರತಿಪಾದಿಸಿದೆ. ವಿಡಿಯೊ ಸಮೀಕ್ಷೆಗೆ ಅನುಮತಿ ಮಾನ್ಯವಲ್ಲ ಎಂದು ವಾದಿಸಿದೆ.

ಇದಕ್ಕೆ ಪ್ರತಿಯಾಗಿ ಹಿಂದೂ ಸೇನೆ, ಇಂತೆಜಾಮಿಯಾ ಅರ್ಜಿಯನ್ನು ರದ್ದುಗೊಳಿಸಬೇಕು ಎಂದು ಮನವಿ ಮಾಡಿಕೊಂಡಿದೆ. ಈ ಮೇಲ್ಮನವಿಯನ್ನು ವಜಾಗೊಳಿಸುವಂತೆ ಕೋರಿ ಹಿಂದೂ ಸೇನಾ ಅಧ್ಯಕ್ಷರು ಸುಪ್ರೀಂಕೋರ್ಟ್‌ಗೆ ಪ್ರತಿ ಅರ್ಜಿ ಸಲ್ಲಿಸಿದ್ದಾರೆ. ಕಾಶಿ ವಿಶ್ವನಾಥ ದೇವಾಲಯ ಮತ್ತು ಮಸೀದಿ ಸಂಕೀರ್ಣದೊಳಗಿನ ಗೌರಿ ದೇವಾಲಯವು ಪ್ರಾಚೀನ ಸ್ಮಾರಕಗಳು, ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಕಾಯ್ದೆ 1958ರ ಅಡಿಯಲ್ಲಿ ಬರುತ್ತದೆ ಎಂಬುದನ್ನು ಸುಪ್ರೀಂ ಅವಗಾಹನೆಗೆ ತಂದಿದೆ.

**ಏನಿದು ಕಾಯಿದೆ: ಜಾರಿಗೆ ಬಂದಿದ್ದು ಯಾವಾಗ:–**

ರಾಮ ಜನ್ಮಭೂಮಿ ಆಂದೋಲನ ಉತ್ತುಂಗದಲ್ಲಿದ್ದಾಗ ಜಾರಿಗೆ ಬಂದ ಆರಾಧನಾ ಸ್ಥಳಗಳ ಕಾಯಿದೆಯು ದೇಶದ ಸ್ವಾತಂತ್ರ್ಯ ಬಂದ ದಿನ, ಅಂದರೆ 1947ರ ಆಗಸ್ಟ್ 15ರ ನಂತರ ಯಾವ ಧಾರ್ಮಿಕ ಸ್ಥಳದಲ್ಲಿ ಯಾವ ಧರ್ಮದ ಆಚರಣೆ ಇತ್ತೋ, ಅದೇ ಆಚರಣೆ ಮುಂದೆಯೂ ನಿರಂತರವಾಗಿ ಮುಂದುವರೆಯಬೇಕು ಎಂದು ತಿಳಿಸುತ್ತದೆ. ಪೂಜಾ ಸ್ಥಳಗಳ ಸ್ವರೂಪದ ಬಗ್ಗೆ ವಿವಾದ ಎಬ್ಬಿಸುವ ಪ್ರಕರಣಗಳನ್ನು ನ್ಯಾಯಾಲಯಗಳು ಪುರಸ್ಕರಿಸದಂತೆ ಕಾಯಿದೆಯ ಸೆಕ್ಷನ್ 4 ನಿರ್ಬಂಧ ವಿಧಿಸುತ್ತದೆ. ಈ ಕಾಯಿದೆಯನ್ನು ಆಗ ಪ್ರಮುಖ ಪ್ರತಿ ಪಕ್ಷವಾಗಿದ್ದ ಬಿಜೆಪಿ ಇದನ್ನು ತೀವ್ರವಾಗಿ ವಿರೋಧಿಸಿತ್ತು.

**ಬಿಜೆಪಿ ತೀವ್ರ ವಿರೋಧ**: ಧಾರ್ಮಿಕ ಸ್ಥಳಗಳಿಗೆ ಸಂಬಂಧಿಸಿದಂತೆ 1947ರಲ್ಲಿ ಇರುವಂತೆ ಯಥಾ ಸ್ಥಿತಿಯನ್ನು ಕಾಯ್ದುಕೊಳ್ಳುವುದು ಹೇಗಿದೆ ಎಂದರೆ ಬೆಕ್ಕುಗಳು ಮುಂದಡಿ ಇಟ್ಟರೆ ಕಣ್ಣುಮುಚ್ಚಿ ಕುಳಿತ ಪಾರಿವಾಳಗಳಂತೆ ಆಗುತ್ತದೆ ಎಂದು ಅಂದಿನ ಸಂಸದೆ ಉಮಾ ಭಾರತಿ ಕಿಡಿಕಾರಿದ್ದರು. ಮುಂಬರುವ ಪೀಳಿಗೆಗೆ ಪ್ರಕ್ಷುಬ್ಧತೆಯನ್ನು ಕಾಯ್ದುಕೊಂಡಂತೆ ಆಗುತ್ತದೆ ಎಂದಿದ್ದರು. ಆಯೋಧ್ಯಯ ವಿವಾದಿತ ಭೂಮಿಯನ್ನು ಹಿಂದೂಗಳಿಗೆ ನೀಡುವ 2019ರ ಸುಪ್ರೀಂಕೋರ್ಟ್ ಸರ್ವಾನುಮತದ ತೀರ್ಪಿನ ನಂತರ, ವಾರಣಾಸಿ ಮತ್ತು ಮಥುರಾದಲ್ಲಿ ಇದೇ ರೀತಿಯ ಆಂದೋಲನಗಳ ಬೇಡಿಕೆಗಳಿಂದ ಆರ್‌ಎಸ್‌ಎಸ್ ದೂರವಿರಲು ಪ್ರಯತ್ನಿಸಿತು.

1991ರ ವೇಳೆಯಲ್ಲಿ ಬಾಬರಿ ಮಸೀದಿ ಪ್ರಕರಣ ಕೋರ್ಟ್ ಕಟಕಟೆ ಹತ್ತಿದ ಪರಿಣಾಮ, ಅದೊಂದನ್ನು ಹೊರತುಪಡಿಸಿ, ಎಲ್ಲ ಪೂಜಾ ಸ್ಥಳಗಳಿಗೂ ಇದು ಅನ್ವಯಿಸುವಂತೆ ಕಾಯಿದೆ ರೂಪುಗೊಂಡಿದೆ. ಹಾಗಾಗಿ, ರಾಮಜನ್ಮಭೂಮಿ– ಬಾಬರಿ ಮಸೀದಿ ಪ್ರಕರಣಕ್ಕೆ ಮತ್ತು ಅದಕ್ಕೆ ಸಂಬಂಧಿಸಿದ ಯಾವುದೇ ದಾವೆ, ಮೇಲ್ಮನವಿ ಅಥವಾ ಪ್ರಕ್ರಿಯೆಗೆ ಅನ್ವಯಿಸುವುದಿಲ್ಲ ಎಂದು ಸೆಕ್ಷನ್ 5 ಹೇಳುತ್ತದೆ.

**ಸುಪ್ರೀಂ ಹೊಸ ವ್ಯಾಖ್ಯಾನ**: ಆರಾಧನಾ ಸ್ಥಳಗಳ ಕಾಯಿದೆಯಲ್ಲಿ ಪೂಜಾ ಸ್ಥಳದ ಧಾರ್ಮಿಕ ಸ್ವರೂಪವನ್ನು ಖಚಿತಪಡಿಸಿಕೊಳ್ಳುವುದನ್ನು ನಿರ್ಬಂಧಿಸಿಲ್ಲ ಎಂದು ಸುಪ್ರೀಂಕೋರ್ಟ್ ಮೌಖಿಕವಾಗಿ ಹೇಳಿದೆ. ಜ್ಞಾನವಾಪಿ–ಕಾಶಿ ವಿಶ್ವನಾಥ ಪ್ರಕರಣದ ವಿಚಾರಣೆಯ ಸಂದರ್ಭದಲ್ಲಿ ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಅವರು, 1991ರ ಕಾಯಿದೆ ಸೆಕ್ಷನ್ 3ರ ಅಡಿ ಪೂಜಾ ಸ್ಥಳದ ಧಾರ್ಮಿಕ ಸ್ವರೂಪವನ್ನು ಖಚಿತ ಪಡಿಸಿಕೊಳ್ಳುವುದನ್ನು ನಿರ್ಬಂಧಿಸಿಲ್ಲ. ಒಂದು ಪಾರ್ಸಿ ದೇವಾಲಯವಿದ್ದು, ಅಲ್ಲಿ ಮೂಲೆಯಲ್ಲಿ ಒಂದು ಶಿಲುಬೆ ಇದೆ ಎಂದು ಭಾವಿಸೋಣ. ಆಗ ಆ ಶಿಲುಬೆಯ ಇರುವಿಕೆಯು ಆ ಸ್ಥಳವನ್ನು ಅಗ್ಯಾರಿ (ಪಾರ್ಸಿಗಳ ದೇವಾಲಯ) ಆಗಿಸುತ್ತದೆಯೋ ಅಥವಾ ಅಗ್ಯಾರಿ ಕ್ರಿಶ್ಚಿಯನ್ ಆಗಿಸುತ್ತದೆಯೋ? ಎಂದರು. ಇದಕ್ಕೆ ಪ್ರತಿ ಉತ್ತರ ನೀಡಿದ ಅಹ್ಮದಿ ಅವರು "ನೀವು ಹಾಗೆ ಭಾವಿಸಬಹುದು. ಇದಕ್ಕೆ ಅನುಮತಿಸಿದರೆ 1991ರ ಕಾಯಿದೆಯು ಉಪಯೋಗಕ್ಕೆ ಬಾರದ

ಕಾಗದವಾಗುತ್ತದೆ. ಇಂಥ ವಿವಾದಗಳನ್ನು ನಿರ್ಬಂಧಿಸುವುದು ಆ ಕಾಯಿದೆಯ ಉದ್ದೇಶವಾಗಿದೆ" ಎಂದರು.

**ಕರ್ನಾಟಕದ ಹೊಸ ಕಾಯಿದೆ ಏನು ಹೇಳುತ್ತದೆ:** ರಾಜ್ಯದಲ್ಲಿ ಅನಧಿಕೃತ ಧಾರ್ಮಿಕ ಕಟ್ಟಡಗಳ ತೆರವು ತಡೆಯಲು ರಾಜ್ಯ ಸರ್ಕಾರವು ಕರ್ನಾಟಕ ಧಾರ್ಮಿಕ ಕಟ್ಟಡಗಳ ಸಂರಕ್ಷಣೆ ವಿಧೇಯಕ–2021 ಹೆಸರಿನ ಮಹತ್ವದ ಮಸೂದೆಯನ್ನು ಕಳೆದ ವರ್ಷ ವಿಧಾನಸಭೆಯಲ್ಲಿ ಮಂಡಿಸಿ, ಅದನ್ನು ಅಂಗೀಕರಿಸಿತು. ಇದರಡಿ ಕಾನೂನಿನ ನಿಯಮಗಳಲ್ಲಿ ಏನೇ ಇದ್ದರೂ, ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ, ಪ್ರಾಧಿಕಾರಗಳು ಯಾವುದೇ ತೀರ್ಪು ಅಥವಾ ಆದೇಶ ನೀಡಿದ್ದರೂ ಕಾಯಿದೆ ಅನುಷ್ಠಾನವಾಗುವ ದಿನದಿಂದ ಸರ್ಕಾರ ರೂಪಿಸುವ ನಿಯಮಗಳ ಅನ್ವಯ ಧಾರ್ಮಿಕ ಕಟ್ಟಡಗಳಿಗೆ ಸಂಪೂರ್ಣ ರಕ್ಷಣೆ ಕಲ್ಪಿಸುವುದಾಗಿ ಸ್ಪಷ್ಟಪಡಿಸಲಾಗಿದೆ.

**ಎಂಥ ಸನ್ನಿವೇಶದಲ್ಲಿ ಈ ಕಾನೂನು ಜಾರಿ:** ರಾಮಮಂದಿರ ಆಂದೋಲನ ಉತ್ತುಂಗದಲ್ಲಿದ್ದ ಸಮಯದಲ್ಲಿ ಪ್ರಧಾನಿ ಪಿ.ವಿ.ನರಸಿಂಹ ರಾವ್ ಅವರ ಕಾಂಗ್ರೆಸ್ ಸರ್ಕಾರ ಈ ಕಾಯಿದೆಯನ್ನು ತಂದಿತು. ಬಾಬರಿ ಮಸೀದಿ ಇದ್ದಂತೆಯೇ ಇತ್ತು. ಆದರೆ ಎಲ್.ಕೆ. ಅಡ್ವಾಣಿಯವರ ರಥಯಾತ್ರೆ, ಬಿಹಾರದಲ್ಲಿ ಅವರ ಬಂಧನ ಮತ್ತು ಉತ್ತರ ಪ್ರದೇಶದಲ್ಲಿ ಕರಸೇವಕರ ಮೇಲೆ ನಡೆದ ದಾಳಿಯು ಕೋಮು ಉದ್ವಿಗ್ನತೆಯನ್ನು ಹೆಚ್ಚಿಸಿತ್ತು. ಈ ಮಸೂದೆಯನ್ನು ಅಂದಿನ ಗೃಹ ಸಚಿವ ಎಸ್.ಬಿ.ಚವಾಣ್ ಅವರು ಸಂಸತ್ತಿನಲ್ಲಿ ಮಂಡಿಸಿದರು. "ಕೋಮು ವಾತಾವರಣವನ್ನು ಹಾಳು ಮಾಡುವ ಶಕ್ತಿಗಳನ್ನು ಹಿಮ್ಮೆಟ್ಟಿಸಲು, ಪ್ರಾರ್ಥನಾ ಸ್ಥಳಗಳ ಪರಿವರ್ತನೆಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಉದ್ಭವಿಸುವ ವಿವಾದಗಳನ್ನು ಗಮನದಲ್ಲಿಟ್ಟುಕೊಂಡು ಇದನ್ನು ನಿರ್ಬಂಧಿಸುವ ಘನ ಉದ್ದೇಶವನ್ನಿಟ್ಟುಕೊಂಡು ಈ ಮಸೂದೆಯನ್ನು ರೂಪಿಸಲಾಗಿದೆ. ಈ ಮಸೂದೆಯನ್ನು ಅಂಗೀಕರಿಸುವುದರಿಂದ ಯಾವುದೇ ಪೂಜಾಸ್ಥಳದ ಪರಿವರ್ತನೆಗೆ ಸಂಬಂಧಿಸಿದಂತೆ ಯಾವುದೇ ಹೊಸ ವಿವಾದಗಳು ಉದ್ಭವಿಸದಂತೆ ಪರಿಣಾಮಕಾರಿಯಾಗಿ ತಡೆಯುತ್ತದೆ ಎಂದು ಹೇಳಿದ್ದರು.

**ಪೂಜಾ ಕಾಯಿದೆ ಪ್ರಶ್ನಿಸಿ ಅರ್ಜಿಗಳು:** ಲಖನೌ ಮೂಲದ ವಿಶ್ವಭದ್ರ ಪೂಜಾರಿ ಪುರೋಹಿತ್ ಮಹಾಸಂಘ ಮತ್ತು ಸನಾತನ ವೈದಿಕ ಧರ್ಮದ ಕೆಲವು ಅನುಯಾಯಿಗಳು ಮತ್ತು ಬಿಜೆಪಿ ಮುಖಂಡ ಅಶ್ವಿನಿ ಉಪಾಧ್ಯಾಯ ಅವರು ಈ ಕಾಯ್ದೆಯನ್ನು ಪ್ರಶ್ನಿಸಿ ಸಲ್ಲಿಸಿದ ಕನಿಷ್ಠ ಎರಡು ಅರ್ಜಿಗಳು ಸುಪ್ರೀಂಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿ ಇವೆ.

ಆಧಾರ:ವಿಜಯ ಕರ್ನಾಟಕ, ದಿನಾಂಕ:27.05.2022

## 14.Why Misuse of Aadhaar Information Is A Real Danger

UIDAI's withdrawn advisory on not sharing Aadhaar card photocopies with unregulated players like hotels and movie theatres unsurprisingly raised more questions on safety.

The key question is what happens if your Aadhaar copy is compromised? Worse, what happens if your Aadhaar linked mobile –OTP (or biometrics) and Aadhaar copy are both compromised? Let's find out.

**What happens if your Aadhaar copy is stolen?**

Before we answer this question, let's understand how your identity can be verified using your Aadhaar copy. One way is to scan the QR code on your Aadhaar copy (through UIDAI;s QR Code Reader app).

By scanning the QR code the entity (that wants to verify your identity) receives a document with your personal details and photo. This document is digitally signed by

UIDAI, which makes it tamper-proof. The entity can then match the details on your Aadhaar copy with this digitally signed document.

So, if someone morphs your Aadhaar copy, the fraud will be caught once the QR code is scanned because details on the Aadhaar copy won't match the ones on the QR Code Reader app. This makes verifying Aadhaar cards easier and more reliable compared to other physical IDs that are not QR code-enabled.

Scanning the QR code tells the entity of the Aadhaar copy if genuine (or not). It won't however tell them if the person who submitted the Aadhaar copy is you. That is, it won't alert them if a fraudster has presented your Aadhaar copy to impersonate you. To check this, entity must match the photo thrown up by the scanned Aadhaar QR code with your face in person. Or like banks and other RBI regulated entities, conduct video verification.

Unfortunately, not all players follow this process. Often service providers simply accept the Aadhaar copy as proof of identity without scanning the QR code on UIDAI's QR Code Reader app. They also don't verify if you are who you say you are, through in-person, video or live selfie-based verification. If a service provider fails to conduct this diligence a fraudster can use a stolen Aadhaar copy to impersonate you.

**What happens if Aadhaar OTP or biometrics are also stolen?**

If fraudsters access your Aadhaar linked OTP or biometrics along with the Aadhaar copy, they cause more harm. The illegal data market is thriving and scammers have devised ingenious methods to steal a person's OTP or biometrics.

The modus operandi followed by scammers is varied. Some infect the victim's phone with malware to mirror the screen and steal OTPs. Others trick victims into sharing OTPs under false pretexts. Biometrics are also susceptible to theft. A victim's fingerprints can be lifted from objects she has touched. OR her iris scans can be captured using advanced cameras from a distance.

Once a scammer has access to OTP or biometrics, it becomes easier to commit financial frauds. A concrete example of this is the Telengana police's recent warning about frauds perpetrated using the Aadhaar enabled Payment System (AePS).

AePS is a facility that lets you perform banking transactions like cash withdrawal and fund transfer. These transactions are done through a mini-ATM carried by a banking correspondent. For an AePS transaction, all you need is a person's Aadhaar number, bank name and fingerprints.

So, criminals can withdraw funds from a victim's bank account by stealing her Aadhaar number and biometrics. This type of AePS related fraud recently happened in Haryana with criminal's allegedly stealing victim's biometrics from a government website.

**Does misuse of Aadhaar pose a higher risk than misuse of other IDs**?

Yes and no. On one hand, a QR code-enabled Aadhaar copy can be verified more reliably than other IDs. So, perpetrating frauda by misusing an Aadhar Copy is

harder if the service provider scans the QR code. On the other hand because, of its ubiquity the risk of profiling is higher in case of Aadhaar.

A 2019 report by Dalberg estimated that 95% of Indians have Aadhaar and use it once a month on average. Because Aadhaar has become the default ID for man, the Aadhaar number can become a common link that ties disparate data points together. From hospital visits to holiday trips, multiple spares of our lives can be linked by this unique identifier. And by putting these pieces together, a determined adversary can find ways to harm us.

**What do we need to ensure more protection**?

UIDAI's mixed messaging has confused the public and failed to address the real problem. To protect the public against misuse of Aadhaar data, a data protection law is critical. Without it, we are at the mercy of every hotel, movie theatre, school or employer who wants to check if we are who we claim we are.

Courtesy: Times of India, Dated: 01.06.2022

## 15. FRESH AND FROZEN DECIDE RAJYA SABHA CHOICES

HILE losing the Lok Sabha election is certainly a downer, a Rajya Sabha seat is definitely an Upper. In Britain, the Mother of Parliaments, the Upper House accommodates aristocrats. Indian Parliament copied its alma mater to lodge its political aristocrats in its own Upper House- the Rajya Sabha. The indolence of acquiring power sans hard work is their privilege as the people's unelectable become politicians' selectablse. Last week, the Election Commission announced the dates to elect new RS MPs to fill 57 seats. The battle is on the seize seats in the 245 member House of Elders, not necessarily by seniors but political newcomers as well. Both national parties, BJP and the Congress have adopted a goulash strategy of fielding young and old faces. The regional parties prefer unknown faces, but with the right connections in the right places. Since more than 90 percent of RS MPs rarely get a chance to speak for more than a few minutes during their six-year term, their presence is required only to shout and vote and follow the party whip. But they do enjoy perks that cost the taxpayer around Rs.10 lakhs per month per member.

In vogue is a new Rajya Sabha model of choosing between the fresh and the frozen. The BJP prefers the fresh items, with over a dozen sitting MPs including former Union Ministers and other parliamentary paratroopers left out in the cold. The Congress is betting of frozen ones with experience and to hell with the expiry date. The BJP dumping its three Muslim faces indicates that it no longer bets on, or cares about, the minority vote. An internal party assessment indicated that these ejected MPs were incapable of netting additional Muslim votes for the party; maintaining a symbolic farce at the cost of ideologically committed workers looked counterproductive. Ostensibly, the BJP is undertaking a full-spectrum social re-engineering exercise by accommodating various sections like women, tribal's, most backwards; and to some extent building new state leaders. PM is prioritising local leaders over outsiders. He has kayoed defectors claiming their pound of flesh in the form of Rajya Sabha seats; turncoats from Congress and regional parties with

Lutyen's backing had been expecting rewards for acting as TV marshals on BJP's behalf. His selection is effectively eclectic. Six of the 16 candidates are women. Only Finance Minister a Tamilian by birth and an Andhraite by marriage is fielded for the third time from Karnataka. The BJP leadership has chucked the appeasement policy of re-nominating leaders for three to four terms; Mukhtar Abbas Naqvi was dropped after completing three consecutive terms. Previously netas who lost elections were gifted tickets to the Upper House. Now the BJP's 75 years age limit for candidates has become flexible. Ghanshyam Tiwari from Rajasthan is 72 and would be 78 after his retirement. According to BJP sources, he has been elevated to be projected as the party's Brahmin face. Moreover, Vasundhara Raje is his betenoire. BJP continues its tactic of breaking other parties by putting up extra candidates in Rajasthan. Maharashtra and Haryana who are persons of eminence and resources. However, the fifth round of Rajya Sabha elections since Modi came to power will completely modify the look, composition and demeanour of the saffron elders. Modi needs to army in the Upper House to get various Constitutional amendments passed to achieve his mission of restructing the establishment.

It looks like the Congress is clued into the Modi Army's long term plan and is filling the Upper House with faithful foot soldiers. Its promoters claim that Sonia's choice reflects a unique method in missionary and visionary madness. Clearly her mission is to retain and consolidate her complete control over the party's organisational and legislative wings in spite of its shrinking geographical domain. She aims to collect enough loudspeakers in the Rajya Sabha to match the din unleashed by the treasury benches. Her advisors feel that most of the 35 odd Congress MPS are either too docile or afraid of the ruling party in the House. And some of them have become bench fixtures for ages and are compromised by the government.

Sonia's choice also reflects her usual determination to keep out any leader who can pose a political threat to Rahul. She has taken a huge gamble by fielding only outsiders for its three winnable seats from Rajasthan. What baffles insiders is that her Rahul roulette is happening in a state facing Assembly elections next year. The BJP sword has been hanging over the Ashok Gehlot government's head for the past two years. Instead of choosing local luminaries and uniting warring factions, the Gandhis backed individuals with resources and loyalty. For example, Pramod Tewari, a permanent Congress leader from UP where the party has been reduced to a cipher, gets the third seat. He has been the Congress legislature part leader for decades and has never lost his Assembly seat. Obviously, the Congress has no future in UP for at least the next two decades. The Gandhis prefer resourceful and experienced politicians like Tewari in the Rajya Sabha for their networking skills and support in times of trouble. Rat racer Randeep Singh Surjewala trumped local leaders due to family fidelity. He has both won and lost elections in Haryana. But the Gandhis have also concluded that Haryana can't be won under his leadership. Moreover, he has been at loggerheads with former CM Bhupinder Singh Hooda, the most powerful and popular Congress leader in the state. The Gandhis had been ignoring Hooda for the past few years and trusting Surjewala. But reality has dawned on them at last. Now Hooda has

been given a free hand to lead the state and prepare the party for 2024. The Gandhis dropped Kumari Shelja, a Dalit leader from both the state party president ship and the Rajya Sabha and fielded loyalist Ajay Maken who is acceptable to Hooda. Maken is a hardworking Congress worker. Mukul Wasnik a Dalit from Maharashtra has been part of the establishment run by three generations of Gandhi's. He is required at the AICC to coordinate with the old and the new generations of the Congress since he was once the Indian Youth Congress president. Sonia has chosen Imran Pratapgari, a Muslim leader from Uttar Pradesh to contest the lone Congress seat from Maharashtra. Both Tewari and Pratapagari hail from the same district. While Tewari represents the Brahamins, Pratapgari is one of the party's most aggressive Muslim voices and an expert at delivering provocative speeches. In Chhattisgarh the Gandhis have chosen Ranjeet Ranjan, wife of Pappu Yadav an infamous Bihar don. She had lost in 2019 but has been rewarded with an RS ticket because the Congress expects the couple to push its agenda in Chhattisgarh with resources and muscle power. The selection of former Finance Minister P.Chidambaram, jesting jackanapes Jairam Ramesh leading legal light Vivek Tankha and Rajiv Shukla in uniform civil mode is driven by their legal expertise and ability to formulate intraparty and alliance strategies on behalf of the Gandhis.

Even the rapidly growing AAP is betting on resourceful and new faces. It is the fifth largest party in the Upper House but half of them have business connections or have previous links with other parties. Some regional parties have stuck to loyalists. Odisha's Naveen Patnaik and Tamil Nadu's MK Stalin resisted all attempts to give tickets to outsiders with money power.

Looking back, the Rajya Sabha has been a springboard sanctuary for the unelectable. Both Dr.Manmohan Singh who lost one election and IK Gujral who never stood in one, became PMs through the Upper Houses backdoor. Dynasty enjoyed its moment in the son, as third generation dynast Jayant Chaudhary of the RLD got himself an RS seat after losing the ballot war. It is evident now that the outcome of the current round would influence the next Presidency and lay the contours of future political paradigms of the BJP and its foes and friends. This configuration will also define the road map for Mandate 2024. "Respect your elders" is an old and valued advice. Now, respecting the elevated Elders will depend on how they finally perform for democracy.

Courtesy: Indian Express, Dated: 05.06.2022

## 16.ಮೇಲ್ಮನೆಯ ನಾಲ್ಕು ಸ್ಥಾನಕ್ಕೆ ಸಮರ್ಥರ ಬೇಟೆ

ಸಂವಿಧಾನದ ರಚನಾಕಾರರು ಮೇಲ್ಮನೆಯ ಸದಸ್ಯರನ್ನು ಆಯ್ಕೆ ಮಾಡುವ ವಿಶೇಷ ಅಧಿಕಾರವನ್ನು ಕೇವಲ ಪದವೀಧರರಿಗೆ ಮತ್ತು ಪ್ರೌಢಶಾಲೆಗೆ ಮೇಲ್ಪಟ್ಟ ಶಿಕ್ಷಕರಿಗೆ ನೀಡಿರುವುದರ ಹಿಂದಿನ ಮಹತ್ವವನ್ನು ಅರಿತುಕೊಂಡು ಮತ ಚಲಾಯಿಸಿದಾಗ ಮಾತ್ರ ಸಂವಿಧಾನದ ಆಶಯ ಈಡೇರುತ್ತದೆ.

ಸಂವಿಧಾನದ ರಚನೆಯ ಸಂದರ್ಭದಲ್ಲಿ ಸಂವಿಧಾನದ ಕರ್ತೃಗಳು ಸಾಕಷ್ಟು ಚರ್ಚೆ ಮತ್ತು ಸಂವಾದಗಳ ನಂತರ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮೇಲ್ಮನೆಯ ಕಲ್ಪನೆಯೊಂದಿಗೆ ಉಭಯ ಸದನಗಳ ಶಾಸಕಾಂಗದ ರಚನೆಗೆ ಅನುವು ಮಾಡಿಕೊಟ್ಟಿದ್ದಾರೆ. ಜೊತೆಗೆ ಸಾಕಷ್ಟು

ಪೂರ್ವಾಲೋಚನೆಯೊಂದಿಗೆ ಮೇಲ್ಮನೆಯ ಸದಸ್ಯರ ಆಯ್ಕೆಗೆ ಅಗತ್ಯವಿರುವ ಮಾನದಂಡಗಳನ್ನು ಮತ್ತು ಸದಸ್ಯರ ಆಯ್ಕೆಯ ಕ್ಷೇತ್ರಗಳನ್ನು ನಿರ್ಣಯಿಸಿದ್ದಾರೆ. ಕೇಂದ್ರದಲ್ಲಿನ ರಾಜ್ಯಸಭೆ ಮತ್ತು ಲೋಕಸಭೆಗಳ ಮಾದರಿಯಲ್ಲಿ ವಿಧಾನ ಪರಿಷತ್ ಮತ್ತು ವಿಧಾನ ಸಭೆಯನ್ನು ಹೊಂದಿರುವ ಉಭಯ ಸದನಗಳ ಶಾಸಕಾಂಗ ನಮ್ಮ ದೇಶದ ಸುಮಾರು 8 ರಾಜ್ಯಗಳಲ್ಲಿ ಕಾರ್ಯವೆಸಗುತ್ತಿದೆ.

ಕರ್ನಾಟಕ ರಾಜ್ಯದ ವಿಧಾನ ಪರಿಷತ್ತಿನಲ್ಲಿ 75 ಸ್ಥಾನಗಳಿದ್ದು, 25 ಸದಸ್ಯರು ವಿಧಾನ ಸಭೆಯಿಂದ, 25 ಸದಸ್ಯರು ಸ್ಥಳೀಯ ಸಂಸ್ಥೆಗಳಿಂದ, 7 ಸದಸ್ಯರು ಪದವೀಧರರ ಕ್ಷೇತ್ರದಿಂದ, 7 ಸದಸ್ಯರು ಶಿಕ್ಷಕರ ಕ್ಷೇತ್ರದಿಂದ ಹಾಗೂ 11 ನಾಮನಿರ್ದೇಶಿತ ಸದಸ್ಯರನ್ನು ಆಯ್ಕೆ ಮಾಡಲಾಗುತ್ತದೆ.

ಇದೇ ಬರುವ ಜೂನ್ 13, 2022 ರಂದು ವಿಧಾನ ಪರಿಷತ್ತಿನ 2 ಪದವೀಧರ ಕ್ಷೇತ್ರದ ಮತ್ತು 2 ಶಿಕ್ಷಕರ ಕ್ಷೇತ್ರದ ಚುನಾವಣೆ ನಡೆಯಲಿದ್ದು, ನೊಂದಣಿ ಮಾಡಿಸಿಕೊಂಡಿರುವ ಪದವೀಧರ ಮತ್ತು ಶಿಕ್ಷಕ ಮತದಾರರು ಮುಂದಿನ 6 ವರ್ಷಗಳ ಅವಧಿಗೆ ಕರ್ನಾಟಕ ರಾಜ್ಯದ ಮೇಲ್ಮನೆಗೆ ಜನಪ್ರತಿನಿಧಿಗಳನ್ನು ಆಯ್ಕೆ ಮಾಡಲಿದ್ದಾರೆ. ದೇಶದ ಯಾವುದೇ ಅಧಿಕೃತ ವಿಶ್ವವಿದ್ಯಾಲಯದಿಂದ 3 ವರ್ಷಗಳ ಹಿಂದೆ ಪದವಿ ಪಡೆದು ಚುನಾವಣಾ ಕ್ಷೇತ್ರದಲ್ಲಿ ನೊಂದಣಿ ಮಾಡಿಸಿರುವ ಪದವೀಧರರು ಪದವೀಧರ ಕ್ಷೇತ್ರಕ್ಕೆ ಮತದಾರರು. ಅದೇ ರೀತಿ ಪ್ರೌಢಶಾಲೆ ಮತ್ತು ಮೇಲ್ಮಟ್ಟದ ಶಿಕ್ಷಣ ಸಂಸ್ಥೆಗಳಲ್ಲಿ ಕನಿಷ್ಟ 3 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ, ಚುನಾವಣಾ ಕ್ಷೇತ್ರದಲ್ಲಿ ನೋಂದಣಿ ಮಾಡಿಸಿಕೊಂಡಿರುವ ಶಿಕ್ಷಕರು ಶಿಕ್ಷಕರ ಕ್ಷೇತ್ರದ ಮತದಾರರು.

**ಮೇಲ್ಮನೆಯಲ್ಲಿ ಮಹತ್ವದ ಚರ್ಚೆ:** ಸದನಗಳು ನಡೆಯುವ ಸಂದರ್ಭದಲ್ಲಿ ಜನಸಾಮಾನ್ಯರ ಜೀವನದಲ್ಲಿ ಅಗಾಧ ಪರಿಣಾಮ ಬೀರಬಲ್ಲ ವಿಧೇಯಕಗಳನ್ನು ಜಾರಿಗೆ ತರುವ ಮುನ್ನ ಸಾಕಷ್ಟು ಗಂಭೀರವಾದ ಚರ್ಚೆ ನಡೆದು, ಸಾಧಕ ಬಾಧಕಗಳನ್ನು ವಿಮರ್ಶಿಸಿ ನಿರ್ಣಯ ತೆಗೆದುಕೊಳ್ಳುವ ಅಗತ್ಯವಿದ್ದು, ಕೆಳಮನೆಗಳಲ್ಲಿನ ಸಂಖ್ಯೆ ಹಾಗೂ ಸಮಯದ ಮಿತಿ ಅಲ್ಲದೇ ಜನರಿಂದ ನೇರವಾಗಿ ಆಯ್ಕೆಯಾದ ಜನಪ್ರತಿನಿಧಿಗಳು ಅಭಿವೃದ್ಧಿಯ ಎಲ್ಲಾ ಆಯಾಮಗಳಲ್ಲೂ ವಿಸ್ತೃತ ವಿಮರ್ಶೆಗೆ ಅವಕಾಶಗಳು ಲಭ್ಯ ಇಲ್ಲದಿರುವ ಸಾಧ್ಯತೆಗಳಿಂದ ಮೇಲ್ಮನೆಯ ರಚನೆ ಅತ್ಯಂತ ಮಹತ್ವದ್ದಾಗಿರುತ್ತದೆ. ಮೇಲ್ಮನೆಯ ಸದಸ್ಯರ ಸಂಖ್ಯೆ ಕೆಳಮನೆಯ ಒಟ್ಟು ಸಂಖ್ಯೆಯ 1/3ರಷ್ಟು ಇರುವುದರಿಂದ ಮೇಲ್ಮನೆಯಲ್ಲಿ ಕೆಳಮನೆಯ 3 ರಷ್ಟು ಅವಧಿ ಚರ್ಚೆಗೆ ಲಭ್ಯವಿರುತ್ತದೆ. ಇದರಿಂದಾಗಿ ಯಾವುದೇ ವಿಷಯಗಳ ಕುರಿತು ವಿಸ್ತೃತ ಚರ್ಚೆಗೆ ಹೆಚ್ಚಿನ ಕಾಲಾವಕಾಶ ಲಭ್ಯವಿರುತ್ತದೆ.

**ಪ್ರಜ್ಞಾವಂತ ಮತದಾರರಿಂದ ಆಯ್ಕೆ:** ಸಂವಿಧಾನದ ರಚನಾಕಾರರು ಮೇಲ್ಮನೆಯ ಸದಸ್ಯರನ್ನು ಆಯ್ಕೆ ಮಾಡುವ ವಿಶೇಷ ಅಧಿಕಾರವನ್ನು ಕೇವಲ ಪದವೀಧರರಿಗೆ ಮತ್ತು ಪ್ರೌಢಶಾಲೆಗೆ ಮೇಲ್ಪಟ್ಟ ಶಿಕ್ಷಕರಿಗೆ ನೀಡಿರುವುದರ ಹಿಂದಿನ ಮಹತ್ವವನ್ನು ಅರಿತುಕೊಂಡು ಮತ ಚಲಾಯಿಸಿದಾಗ ಮಾತ್ರ ಸಂವಿಧಾನದ ಆಶಯ ಈಡೇರಲು ಸಹಾಯವಾಗುತ್ತದೆ. ಜನರಿಂದ ನೇರವಾಗಿ ಕೆಳಮನೆಗೆ ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಸಂಭವಿಸಬಹುದಾದ ಲೋಪದೋಷಗಳು ಅತ್ಯಂತ ಪ್ರೌಢ ಮತ್ತು ಪ್ರಜ್ಞಾವಂತ ಮತದಾರರಾದ ಪದವೀಧರರು ಮತ್ತು ಶಿಕ್ಷಕರಿಂದ ಆಗುವುದಿಲ್ಲ ಎಂಬ ವಿಶ್ವಾಸದಿಂದ ಈ ವಿಶೇಷ ಜವಾಬ್ದಾರಿಯನ್ನು ಪದವೀಧರರಿಗೆ ಮತ್ತು ಶಿಕ್ಷಕರಿಗೆ ನೀಡಿರುವುದರಿಂದ ಸಾಂವಿಧಾನಿಕ ಸಂಸ್ಥೆಯಾದ ಶಾಸಕಾಂಗದ ರಚನೆಯಲ್ಲಿ ಪ್ರಜ್ಞಾವಂತ ಮತದಾರರಾದ ಪದವೀಧರ ಮತ್ತು ಶಿಕ್ಷಕರ ಜವಾಬ್ದಾರಿ ಇಂದಿನ ಸಂದರ್ಭದಲ್ಲಿ ಇನ್ನೂ ಹೆಚ್ಚು ಮಹತ್ವಪೂರ್ಣವಾಗಿದೆ.

ಕರ್ನಾಟಕ ರಾಜ್ಯದ ಮೇಲ್ಮನೆಗೆ ಪದವೀಧರ ಕ್ಷೇತ್ರ ಮತ್ತು ಶಿಕ್ಷಕರ ಕ್ಷೇತ್ರಗಳಿಗೆ ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ನಮ್ಮ ರಾಜ್ಯದ ಈ ಕ್ಷೇತ್ರಗಳ ಅತ್ಯಂತ ಪ್ರಜ್ಞಾವಂತ ಹಾಗೂ ಪ್ರೌಢ ಮತದಾರರು ನಿರಂತರವಾಗಿ ಭಾರತೀಯ ಜನತಾ ಪಾರ್ಟಿಯ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಂಡು ಬರುತ್ತಿರುವುದು ವಾಸ್ತವ, ಡಿ.ಹೆಚ್.ಶಂಕರಮೂರ್ತಿ, ಕೃ.ನರಹರಿ, ಡಾ:ಎಂ.ಆರ್.ತಂಗ, ಕರಂಬಳ್ಳಿ ಸಂಜೀವಶೆಟ್ಟಿ, ರಾಮಚಂದ್ರಗೌಡ ಮತ್ತು ಬಾಲಕೃಷ್ಣ ಭಟ್ಟ ಮುಂತಾದವರು ಈ ನಿಟ್ಟಿನಲ್ಲಿ ಮೇಲ್ಮನೆಯ ಮಾದರಿ ಸದಸ್ಯರಾಗಿ ಕಾರ್ಯನಿರ್ವಹಿಸಿರುವುದು ನಮ್ಮೆಲ್ಲರಿಗೆ ಹೆಮ್ಮೆ ತಂದಿದೆ.

**ಸಮರ್ಥ ಅಭ್ಯರ್ಥಿಗಳನ್ನು ಆರಿಸಿ:** ದೇಶವು ಅನುಭವಿಸುತ್ತಿರುವ ಅದ್ಭುತವಾದ ಬದಲಾವಣೆಯ ಪರ್ವಕಾಲದಲ್ಲಿ ನಮ್ಮ ರಾಜ್ಯ ಅತ್ಯಂತ ಪ್ರಜ್ಞಾವಂತ ಮತ್ತು ಪ್ರಬುದ್ಧ ಪದವೀಧರ ಮತ್ತು ಶಿಕ್ಷಕ ಮತದಾರರು ಮೇಲ್ಮನೆಯ 2 ಪದವೀಧರ ಮತ್ತು 2 ಶಿಕ್ಷಕರ ಕ್ಷೇತ್ರಗಳಿಂದ ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವ ಸುವರ್ಣಾವಕಾಶವನ್ನು ಹೊಂದಿದ್ದಾರೆ. ದೇಶದ ಸಾಂಸ್ಕೃತಿಕ ಪುನರುತ್ಥಾನ, ಅತ್ಯಂತ ಪರಿಣಾಮಕಾರಿ ಅಂತರರಾಷ್ಟ್ರೀಯ ನೀತಿ, ಶಿಕ್ಷಣ ಕ್ಷೇತ್ರದ ಆಮೂಲಾಗ್ರ, ಬದಲಾವಣೆಗಾಗಿ ರಾಷ್ಟ್ರೀಯ ಶಿಕ್ಷಣ ನೀತಿ 2020, ದೊಡ್ಡ ಸಂಖ್ಯೆಯಲ್ಲಿ ಎ.ಐ.ಐ.ಎಂ., ಐ.ಐ.ಟಿ, ಐ.ಐ.ಎಂ ಮುಂತಾದ ಸಂಸ್ಥೆಗಳ ಪ್ರಾರಂಭ, ಪಾರದರ್ಶಕ ಆಡಳಿತ, ಸೋರಿಕೆ ಇಲ್ಲದ ಗರೀಬ್ ಕಲ್ಯಾಣ ಯೋಜನೆಗಳು, ಸ್ವಚ್ಛ ಭಾರತದ ಯೋಜನೆಯ ಅನುಷ್ಠಾನ, ರಸ್ತೆ, ರೈಲು, ವಿಮಾನಯಾನ ಹಾಗೂ ಜಲಯಾನಗಳ ಯೋಜನೆಗಳಲ್ಲಿ ಗುಣಮಟ್ಟದ ಮೂಲಭೂತ ಸೌಕರ್ಯಗಳ ನಿರ್ಮಾಣ, ಗಡಿ ಭದ್ರತೆ, ಸೇನೆಗಳಿಗೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಪೂರೈಕೆ, ಆಂತರಿಕ ಸುರಕ್ಷತೆ, ಕಾಶ್ಮೀರದ ಸಮಸ್ಯೆಗೆ ಪರಿಹಾರ, ಪ್ರತ್ಯೇಕತೆ–ಮೂಲಭೂತವಾದ–ಭಯೋತ್ಪಾದನೆಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ, ಜಗತ್ತು ಎದುರಿಸಿದ ಕೋವಿಡ್ ಮಹಾಮಾರಿ ಮತ್ತು ಉಕ್ರೇನ್–ರಷ್ಯಾ ಯುದ್ಧದ ಗಂಭೀರ ಆರ್ಥಿಕ ಪರಿಣಾಮಗಳನ್ನು ಸಮರ್ಥವಾಗಿ ಎದುರಿಸಿ ಪ್ರಪಂಚದಲ್ಲೇ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿ ಹೊರಹೊಮ್ಮಿರುವುದು ವಿಶ್ವ ಭೂಪಟದಲ್ಲಿ ಭಾರತವನ್ನು ಅತ್ಯಂತ ಪ್ರಮುಖ ರಾಷ್ಟ್ರವನ್ನಾಗಿ ಗುರುತಿಸುವಂತೆ ಮಾಡಿದೆ.

ರಾಜ್ಯದಲ್ಲಿ ಭಾರತೀಯ ಜನತಾ ಪಾರ್ಟಿ ಅಧಿಕಾರ ವಹಿಸಿಕೊಂಡ ಸಂದರ್ಭದಲ್ಲಿ ಅನೇಕ ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಜೆ.ಓ.ಸಿ. ಶಿಕ್ಷಕ/ಉಪನ್ಯಾಸಕರ ಸಮಸ್ಯೆಗಳಿಗೆ ಪರಿಹಾರ ನೀಡಿರುವುದು, ಮೊರಾರ್ಜಿ ವಸತಿ ಶಾಲೆಗಳ ಶಿಕ್ಷಕರ ಖಾಯಮಾತಿ, 191 ಪದವಿ ಕಾಲೇಜುಗಳ ಪ್ರಾರಂಭ, 14 ಇಂಜಿನಿಯರಿಂಗ್ ಕಾಲೇಜುಗಳ ಪ್ರಾರಂಭ, ಶಾಶ್ವತ ಅನುದಾನರಹಿತ ಎನ್ನುವ ಹಿಂದಿನ ಸರ್ಕಾರದ ನೀತಿಯನ್ನು ತಿದ್ದಿ 87–92 ಹಾಗೂ 92–95ರವರೆಗೆ ಪ್ರಾರಂಭಿಸಿದ ಶಾಲಾ ಕಾಲೇಜುಗಳನ್ನು ಅನುದಾನದ ವ್ಯಾಪ್ತಿಗೆ ಒಳಪಡಿಸಿರುವುದು, ಅನುದಾನಿತ ಶಾಲೆಗಳಲ್ಲಿ ಖಾಲಿ ಹುದ್ದೆಗಳನ್ನು ತುಂಬಲು ಅನುಮತಿ ನೀಡಿರುವುದು, ಶಿಕ್ಷಕ ಮತ್ತು ಉಪನ್ಯಾಸಕರ ನೇಮಕಾತಿಗೆ ಕೈಗೊಂಡಿರುವ ಕ್ರಮಗಳು ಮುಂತಾದ ಮಹತ್ತರ ನಿರ್ಣಯಗಳ ಮೂಲಕ ಶಿಕ್ಷಣ ಕ್ಷೇತ್ರವನ್ನು ಆದ್ಯತೆಯ ಕ್ಷೇತ್ರವನ್ನಾಗಿ ಪರಿವರ್ತಿಸಿದೆ.

ನಮ್ಮ ದೇಶವು ವಿಶ್ವದ ಅಗ್ರಮಾನ್ಯ ರಾಷ್ಟ್ರವಾಗುವ ನಿಟ್ಟಿನಲ್ಲಿ ದಾಪುಗಾಲು ಇಡುತ್ತಿದ್ದು, ಈ ಸಂದರ್ಭದಲ್ಲಿ ಪದವೀಧರ ಮತ್ತು ಶಿಕ್ಷಕ ಕ್ಷೇತ್ರದ ಪ್ರಜ್ಞಾವಂತ ಮತದಾರರು ಸಂವಿಧಾನ ನೀಡಿದ ಈ ವಿಶೇಷ ಜವಾಬ್ದಾರಿಯನ್ನು ಅರ್ಥೈಸಿಕೊಂಡು, ಪ್ರಲೋಭನೆಗಳಿಗೆ ಒಳಗಾಗದೆ ಮೇಲ್ಮನೆಗೆ ಸಮರ್ಥ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಾಂವಿಧಾನಿಕ ಜವಾಬ್ದಾರಿಯನ್ನು ನಿರ್ವಹಿಸುವುದು ನಮ್ಮೆಲ್ಲರ ಕರ್ತವ್ಯ. ನಮ್ಮ ಪ್ರಜಾಪ್ರಭುತ್ವ ಯಶಸ್ವೀ ಪ್ರಜಾಪ್ರಭುತ್ವವಾಗುವಲ್ಲಿ ಪ್ರಜೆಗಳಾಗಿ ನಮ್ಮ ಜವಾಬ್ದಾರಿಯನ್ನು ಅತ್ಯಂತ ಪರಿಣಾಮಕಾರಿಯಾಗಿ ನಿರ್ವಹಿಸುವುದು ನಮ್ಮ ಪ್ರಾಥಮಿಕ ಕರ್ತವ್ಯ ಮತ್ತು ಆದ್ಯತೆಯಾಗಬೇಕು.

ಲೇಖಕರು:– ಕ್ಯಾಪ್ಟನ್ ಗಣೇಶ್ ಕಾರ್ಣಿಕ್,
ರಾಜ್ಯ ಬಿಜೆಪಿ ವಕ್ತಾರರು,
ಆಧಾರ:–ಕನ್ನಡ ಪ್ರಭ, ದಿನಾಂಕ:12.06.2022

## 17.ಹೆರಾಲ್ಡ್ ಕೇಸ್: ಏನಿದರ ರಹಸ್ಯ

ದೇಶದಲ್ಲೀಗ ಎಲ್ಲೆಡೆ ನ್ಯಾಷನಲ್ ಹೆರಾಲ್ಡ್ ಪ್ರಕರಣದ್ದೇ ಸದ್ದು. ಸ್ವಾತಂತ್ರ್ಯ ಪೂರ್ವದಲ್ಲಿ ಭಾರೀ ಸುದ್ದಿಯಲ್ಲಿದ್ದ ಈ ಪತ್ರಿಕೆ ಇದೀಗ ಗಾಂಧಿ ಕುಟುಂಬದ ಮೇಲೆ ಅಕ್ರಮ ಹಣ ವರ್ಗಾವಣೆಯ ಗಂಭೀರ ಆರೋಪಕ್ಕೆ ಎಡೆ ಮಾಡಿಕೊಟ್ಟಿದೆ. ಈ ಹಿನ್ನೆಲೆಯಲ್ಲಿ ಇಡೀ ಪ್ರಕರಣದ ಕುರಿತ ಹಿನ್ನೋಟ ಇಲ್ಲಿದೆ.

**ಯಾವುದೀ ನ್ಯಾಷನಲ್ ಹೆರಾಲ್ಡ್ ಪತ್ರಿಕೆ:** 1938ರಲ್ಲಿ ಅಂದಿನ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಪಂಡಿತ್ ಜವಾಹರಲಾಲ್ ನೆಹರೂ ಅವರು ನ್ಯಾಷನಲ್ ಹೆರಾಲ್ಡ್ ಎಂಬ ಪತ್ರಿಕೆ ಸ್ಥಾಪಿಸಿದ್ದರು. ಬ್ರಿಟೀಷರ ವಿರುದ್ಧ ಪಕ್ಷದ ಧ್ವನಿಯಾಗಲು ಇದನ್ನು ಆರಂಭಿಸಲಾಗಿತ್ತು. 5000 ಸ್ವಾತಂತ್ರ್ಯ ಹೋರಾಟಗಾರರೇ ಈ ಪತ್ರಿಕೆಯ

ಪಾಲುದಾರರಾಗಿದ್ದರು. ಪತ್ರಿಕೆಯ ಮುದ್ರಣದ ಹೊಣೆಯನ್ನು ಅಸೋಸಿಯೇಟೆಡ್ ಜರ್ನಲ್ಸ್(ಲಿ) ಹೊತ್ತಿತ್ತು. ಸ್ವಾತಂತ್ರ್ಯಾ ನಂತರದಲ್ಲಿ ಈ ಪತ್ರಿಕೆ ಕಾಂಗ್ರೆಸ್‌ನ ಮುಖವಾಣಿಯಾಯಿತು. ಇಂಗ್ಲೀಷ್‌ನಲ್ಲಿ ನ್ಯಾಷನಲ್ ಹೆರಾಲ್ಡ್ ಉರ್ದುವಿನಲ್ಲಿ ಖ್ವಾಮಿ ಅವಾಜ್ ಮತ್ತು ಹಿಂದಿಯಲ್ಲಿ ನವಜೀವನ್ ಹೆಸರಲ್ಲಿ ಪತ್ರಿಕೆ ಮುದ್ರಣವಾಗುತ್ತಿತ್ತು.

**ಅವನತಿಯತ್ತ ಹಾದಿ:** ಸ್ವಾತಂತ್ರ್ಯಾ ನಂತರದಲ್ಲಿ ಹಂತಹಂತವಾಗಿ ಪತ್ರಿಕೆ ತನ್ನ ಮಹತ್ವ ಮನ್ನಣೆ ಕಳೆದುಕೊಂಡಿತು. ಅಷ್ಟು ಮಾತ್ರವಲ್ಲ ಸುಮಾರು ರೂ.90 ಕೋಟಿ ಸಾಲದ ಸುಳಿಗೆ ಸಿಕ್ಕಿತು. ಅಂತಿಮವಾಗಿ 2008ರಲ್ಲಿ ಪತ್ರಿಕೆ ಬಾಗಿಲು ಹಾಕಿತು. ಆದರೆ ಎಜೆಎಲ್ ದೆಹಲಿ, ಮುಂಬೈ, ಲಖನೌ, ಪಟನಾ, ಪಂಚಕುಲ ಸೇರಿ ದೇಶದ ಹಲವು ನಗರಗಳಲ್ಲಿ ಸುಮಾರು ರೂ.2000 ಕೋಟಿ ಮೌಲ್ಯದ ಸ್ತಿರಾಸ್ಥಿ ಹೊಂದಿತ್ತು.

**ಎಜೆಎಲ್ ಮರುಜೀವಕ್ಕೆ ರೂ.90 ಕೋಟಿ ಸಾಲ:** ಅಸೋಸಿಯೇಟೆಡ್ ಜರ್ನಲ್ಸ್ ಹೊಂದಿದ್ದ ಸಾಲವನ್ನು ತೀರಿಸುವ ಸಲುವಾಗಿ ಮತ್ತು ಪತ್ರಿಕೆಗೆ ಮರುಜೀವ ನೀಡುವ ಸಲುವಾಗಿ ಕಾಂಗ್ರೆಸ್ ಪಕ್ಷವು 2008ರಲ್ಲಿ ಎಜೆಎಲ್‌ಗೆ ರೂ.90 ಕೋಟಿ ಬಡ್ಡಿ ರಹಿತ ಸಾಲ ನೀಡಿತು. ಆದರೆ ಪತ್ರಿಕೆಗೆ ಮರು ಜೀವ ನೀಡುವ ಉದ್ದೇಶ ಫಲಕೊಡಲಿಲ್ಲ. ಜೊತೆಗೆ ಕಾಂಗ್ರೆಸ್ ನೀಡಿದ್ದ ಸಾಲವನ್ನು ಮರು ಪಾವತಿ ಮಾಡುವುದೂ ಎಜೆಎಲ್‌ಗೆ ಸಾಧ್ಯವಾಗಲಿಲ್ಲ.

**ಯಂಗ್ ಇಂಡಿಯಾ ಸ್ಥಾಪನೆ:** ಕೇಂದ್ರದಲ್ಲಿ ಯುಪಿಎ–2 ಸರ್ಕಾರ ಅಧಿಕಾರಕ್ಕೆ ಬಂದ ಮಾರನೇ ವರ್ಷ ಅಂದರೆ 2010ರಲ್ಲಿ ಯಂಗ್ ಇಂಡಿಯಾ ಲಿ. ಎಂಬ ಸರ್ಕಾರೇತರ ಸಂಸ್ಥೆ ಸ್ಥಾಪಿಸಲಾಯಿತು. ಇದಕ್ಕೆ ರಾಹುಲ್ ಗಾಂಧಿ ನಿರ್ದೇಶಕರಾಗಿದ್ದರು. ಕಂಪನಿಯಲ್ಲಿ ರಾಹುಲ್ ಮತ್ತು ಸೋನಿಯಾ ತಲಾ ಶೇ.37ರಷ್ಟು ಷೇರು ಹೊಂದಿದ್ದರೆ, ಉಳಿದ 26 ರಷ್ಟು ಷೇರುಗಳನ್ನು ಮೋತಿಲಾಲ್ ವೋಹ್ರಾ, ಆಸ್ಕರ್ ಫರ್ನಾಂಡಿಸ್ ಮೊದಲಾದ ಕಾಂಗ್ರೆಸ್ ನಾಯಕರು ಹೊಂದಿದ್ದರು. ಕಂಪನಿ ಕೇವಲ ರೂ.5 ಲಕ್ಷ ಬಂಡವಾಳ ಹೊಂದಿತ್ತು.

**ಎಜೆಎಲ್ ಷೇರು ಯಂಗ್ ಇಂಡಿಯಾಗೆ ವರ್ಗ:** ಈ ನಡುವೆ 2011ರಲ್ಲಿ ಕಾಂಗ್ರೆಸ್ ತಾನು ಎಜೆಎಲ್‌ಗೆ ನೀಡಿದ್ದ ಸಾಲವನ್ನು ಯಂಗ್ ಇಂಡಿಯಾ ಹೆಸರಿಗೆ ವರ್ಗಾಯಿಸಿತು. ಅದರರ್ಥ, ಎಜೆಎಲ್ ತಾನು ಕಾಂಗ್ರೆಸ್‌ನಿಂದ ಪಡೆದ ಸಾಲವನ್ನು ಯಂಗ್ ಇಂಡಿಯಾಗೆ ಪಾವತಿಸಬೇಕಿತ್ತು. ಈ ಬೆಳವಣಿಗೆ ಬೆನ್ನಲ್ಲೇ ತಾನು ರೂ.90 ಕೋಟಿ ಪಾವತಿಸುವ ಸ್ಥಿತಿಯಲ್ಲಿ ಇಲ್ಲ ಎಂದು ಎಜೆಎಲ್ ಘೋಷಿಸಿತು. ಇದೇ ಕಾರಣ ಮುಂದಿಟ್ಟುಕೊಂಡು ಸಂಸ್ಥೆ ತನ್ನೆಲ್ಲಾ ಷೇರುಗಳನ್ನು ಯಂಗ್ ಇಂಡಿಯಾಗೆ ವರ್ಗಾಯಿಸಿತು. ಇದಕ್ಕೆ ಬದಲಿಯಾಗಿ ಯಂಗ್ ಇಂಡಿಯಾ ಸಂಸ್ಥೆ ಎಜೆಎಲ್‌ನ ರೂ. 2000 ಕೋಟಿ ಮೌಲ್ಯದ ಆಸ್ತಿ ಸೋನಿಯಾ ಮತ್ತು ರಾಹುಲ್ ಸದಸ್ಯರಾಗಿರುವ ಯಂಗ್ ಇಂಡಿಯಾ ಸಂಸ್ಥೆಯ ಪಾಲಾಯಿತು.

**ಹಗರಣದ ವಾಸನೆ ಹಿಡಿದ ಸ್ವಾಮಿ:** ಎಜೆಎಲ್ ಷೇರು ವರ್ಗಾವಣೆಯಲ್ಲಿ ಭಾರೀ ಅಕ್ರಮ ನಡೆದಿದೆ. ಕೇವಲ ರೂ. 50 ಲಕ್ಷ ನೀಡಿ ರೂ. 2000 ಕೋಟಿ ಮೌಲ್ಯದ ಆಸ್ತಿಯನ್ನು ಗಾಂಧಿ ಕುಟುಂಬ ಕಬಳಿಸಿದೆ ಎಂದು ಆರೋಪಿಸಿ ಬಿಜೆಪಿ ನಾಯಕ ಸುಬ್ರಮಣಿಯನ್ ಸ್ವಾಮಿ 2012ರಲ್ಲಿ ದೆಹಲಿ ಕೋರ್ಟ್‌ನ ಮೆಟ್ಟಿಲೇರಿದರು. ಐಟಿ ಕಾಯ್ದೆಯನ್ವಯ ಯಾವುದೇ ರಾಜಕೀಯ ಪಕ್ಷ 3ನೇ ವ್ಯಕ್ತಿಯೊಂದಿಗೆ ಹಣಕಾಸಿನ ವಹಿವಾಟು ನಡೆಸುವಂತಿಲ್ಲ. ಆದರೆ ಕಾಂಗ್ರೆಸ್ ಪಕ್ಷ ಎಜೆಎಲ್‌ಗೆ ವಾಣಿಜ್ಯ ಉದ್ದೇಶದಿಂದ ರೂ.90 ಕೋಟಿ ಸಾಲ ನೀಡಿದೆ. ಇದು ಅಕ್ರಮ ಜೊತೆಗೆ ಲಾಭದ ಉದ್ದೇಶದಿಂದಲೇ ಸೋನಿಯಾ ಮತ್ತು ರಾಹುಲ್‌ಗಾಂಧಿ ನ್ಯಾಷನಲ್ ಹೆರಾಲ್ಡ್‌ಗೆ ಸೇರಿದ ಆಸ್ತಿ ಖರೀದಿಸಿದ್ದಾರೆ. ಸಾರ್ವಜನಿಕ ಹಣ (ಕಾಂಗ್ರೆಸ್)ವನ್ನು ಖಾಸಗಿ ಉದ್ದೇಶಕ್ಕೆ ಬಳಸಿಕೊಳ್ಳಲಾಗಿದೆ ಎಂದು ಸ್ವಾಮಿ ಆರೋಪಿಸಿದರು.

ಆಧಾರ:ಕನ್ನಡ ಪ್ರಭ,ದಿನಾಂಕ:16.06.2022

## 18. ನಮ್ಮ ಮಕ್ಕಳಿಗೆ ಎಂತಹ ಶಿಕ್ಷಣ ನೀಡಬೇಕು

ಗ್ರೀಕ್ ನಾಗರೀಕತೆ ಕಲಿಸುವ ಮೊದಲು ಭಾರತದ ಜ್ಞಾನ–ಪರಂಪರೆಯ ವ್ಯಾಪ್ತಿ, ನಮ್ಮ ದೇಶ ಶಿಲ್ಪಕಲೆ, ನಮ್ಮ ಕಲಾಪ್ರಕಾರಗಳ ಪರಿಚಯ ಮಾಡಿಸಬೇಕು. ಅಲೆಕ್ಸಾಂಡರ್ ಅಕ್ಬರನನ್ನು ವೈಭವೀಕರಿಸುವ ಬದಲು ಶಿವಾಜಿ, ರಾಣಿಚೆನ್ನಮ್ಮ, ಪೋರ್ಚುಗೀಸರಿಗೆ ಸಡ್ಡು ಹೊಡೆದ ರಾಣಿ ಅಬ್ಬಕ್ಕನಂಥವರು ಇತಿಹಾಸ ಪಠ್ಯದಲ್ಲಿ ಸ್ಥಾನ ಪಡೆಯಬೇಕು. ದೇಶದ ಸ್ವಾತಂತ್ರ್ಯಕ್ಕೆ ಗಾಂಧೀಜಿಯವರ ಜೊತೆಗೆ ಸುಭಾಷ್ ಚಂದ್ರ ಬೋಸ್, ಲಾಲಾ ಲಜಪತ್ ರಾಯ್, ಬಾಲ ಗಂಗಾಧರ ತಿಲಕ್, ಬಿಪಿನ್ ಚಂದ್ರಪಾಲ್ ಹಾಗೂ ಇತರೆ ಕ್ರಾಂತಿಕಾರಿಗಳ ಕೊಡುಗೆಗಳನ್ನೂ ತಿಳಿಸಬೇಕು.

ಎರಡನೇ ಮಹಾಯುದ್ದದ ವೇಳೆಗೆ ಜಪಾನ್ ಸಂಪೂರ್ಣ ನೆಲಕಚ್ಚಿತ್ತು. ಕ್ಯೋಟೋ ನಗರದ ಹೊರತು ಅಷ್ಟೂ ನಗರಗಳು ಧೂಳೀಪಟವಾಗಿದ್ದವು. ಎಲ್ಲಾ ರೀತಿಯ ಸಂಪನ್ಮೂಲಗಳಿಂದ ಆ ದೇಶ ವಂಚಿತವಾಗಿತ್ತು. ಆದರೆ ಒಂದೇ ತಲೆಮಾರು ಬೆಳೆದು ನಿಲ್ಲುವ ಕಾಲದಲ್ಲಿ, ಎರಡೇ ದಶಕಗಳಲ್ಲಿ ಪುಟಿದೆದ್ದು ನಿಂತಿತು. ದೇಶ ಕಟ್ಟಲು ಒಂದಿಡೀ ತಲೆಮಾರನ್ನೇ ತಯಾರು ಮಾಡಿದ್ದು, ಅಲ್ಲಿನ ಶಿಕ್ಷಣ ವ್ಯವಸ್ಥೆ. ಇಂದಿಗೂ ಅಲ್ಲಿ ಪ್ರಾಥಮಿಕ ಹಂತದ ಶಿಕ್ಷಣ ಮಕ್ಕಳಲ್ಲಿ ಒಳ್ಳೆಯ ಗುಣ–ನಡತೆ ಬೆಳೆಸಿ ಉತ್ತಮ ವ್ಯಕ್ತಿತ್ವ ನಿರ್ಮಾಣ ಮಾಡುವ ಕಡೆಗಷ್ಟೇ ಗಮನ ಕೇಂದ್ರೀಕರಿಸುತ್ತದೆ. ಆರ್ಥಿಕವಾಗಿ ಎಷ್ಟೇ ಮುಂದುವರಿದಿದ್ದರೂ ಜಪಾನೀಯರು ತಮ್ಮ ಸಾಂಸ್ಕೃತಿಕ ಹಿನ್ನೆಲೆ ಮರೆಯದಂತೆ ಮಾಡಿರುವುದು ಅಲ್ಲಿನ ಶಿಕ್ಷಣ ಪದ್ಧತಿ. ಒಂದು ಜನಾಂಗ ತನ್ನ ಸಾಂಸ್ಕೃತಿಕ ಶ್ರೀಮಂತಿಕೆ ಅರಿತಾಗಲಷ್ಟೇ ತನ್ನತನ ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ. ಅಂಥ ಜನಾಂಗದಿಂದ ಮಾತ್ರ ದೇಶ ಕಟ್ಟಲು ಸಾಧ್ಯ.

ದ್ವಿತೀಯ ಮಹಾಯುದ್ದ ಕಳೆದ ಎರಡೇ ವರ್ಷಗಳಲ್ಲಿ ಭಾರತವೂ ಸ್ವಾತಂತ್ರ್ಯ ಪಡೆಯಿತು. ಆದರೆ ಆಳುವ ಅಧಿಕಾರ ಪಡೆದ ಕಾಂಗ್ರೆಸ್ ದುರದೃಷ್ಟವಶಾತ್ ದಾಸ್ಯದ ಮನಸ್ಥಿತಿಯಿಂದ ಮುಕ್ತವಾಗಲಿಲ್ಲ. ಕಾಂಗ್ರೆಸ್‌ನ ದಾಸ್ಯದ ಮನಸ್ಥಿತಿ ಇಂದಿಗೂ ಬದಲಾಗಿಲ್ಲ ನಿಜ. ಆದರೆ ದೇಶ ಬದಲಾದ ಕಾರಣ ಅದೀಗ ಕಾಂಗ್ರೆಸ್‌ನ ಆಂತರಿಕ ವಿಚಾರವಾಗಿ ಉಳಿದಿದೆ. ಸಮಸ್ಯೆ ಉಂಟುಮಾಡಿರುವುದು ಈ ಹಿಂದೆ ಇಟ್ಟ ತಪ್ಪು ಹೆಜ್ಜೆಗಳು. ಶಿಕ್ಷಣ ವ್ಯವಸ್ಥೆಯಲ್ಲಿ ಭಾರತೀಯತೆಗೆ ಒತ್ತು ಕೊಟ್ಟು ಸದೃಡ ಸಮಾಜ ನಿರ್ಮಾಣ ಮಾಡುವ ಉತ್ತಮ ಅವಕಾಶ ಕಾಂಗ್ರೆಸ್ ಪಕ್ಷಕ್ಕೆ ಇತ್ತು. ಆದರೆ ಬ್ರಿಟಿಷ್ ಮನಸ್ಥಿತಿ ರೂಢಿಸಿಕೊಂಡಿದ್ದ ಕಾಂಗ್ರೆಸ್‌ನ ಅಧಿಕಾರ ರೂಢಿ ನಾಯಕರು ಐಷಾರಾಮಿತನದ ಆಸ್ವಾದನೆಯಲ್ಲಿ ತಲ್ಲೀನರಾಗಿದ್ದರು. ಹಾಗಾಗಿ ಆರ್ಥಿಕ ನೀತಿಯನ್ನು ಸೋವಿಯತ್ ಒಕ್ಕೂಟದಿಂದ ಎರವಲು ಪಡೆದು, ಶೈಕ್ಷಣಿಕ ನೀತಿಯ ಜವಾಬ್ದಾರಿಯನ್ನು ಎಡಪಂಥೀಯರಿಗೆ ಗುತ್ತಿಗೆ ನೀಡಿದರು. ನೆಹರೂ ಅವರು ಆಯಕಟ್ಟಿನ ವಿವಿಗಳಲ್ಲಿ ಎಡಪಂಥೀಯರನ್ನು ಕೂರಿಸಿ ಶಿಕ್ಷಣ ಸಚಿವರ ಸ್ಥಾನದಲ್ಲಿ ಇಸ್ಲಾಮಿಕ್ ಶಿಕ್ಷಣದಲ್ಲಿ ಪರಿಣತಿ ಹೊಂದಿದವರನ್ನು ಕೂರಿಸಿದರು. 1947 ರಿಂದ 1968ರ ವರೆಗೆ ಕೇಂದ್ರ ಶಿಕ್ಷಣ ಸಚಿವರಾಗಿ ಬರೋಬ್ಬರಿ ಹನ್ನೊಂದು ವರ್ಷ ಕೂತಿದ್ದವರು ಓರ್ವ ಮೌಲಾನಾ ಆಗ ಅದು ಕೋಮುವಾದವಲ್ಲ. ಆದರೆ ಈಗಿನ ನಿರ್ಣಯಗಳು ಕೋಮುವಾದಿ ಧೋರಣೆ ಹೊಂದಿವೆ. ಬ್ರಾಹ್ಮಣ್ಯ ಪೋಷಿಸುತ್ತಿದೆ, ಎನ್ನುತ್ತಿರುವುದು ಪರಿಸ್ಥಿತಿಯ ವ್ಯಂಗ್ಯ, ಅನುಕೂಲಸಿಂಧು ರಾಜಕಾರಣ.

**ಕಾಂಗ್ರೆಸ್‌ಗೆ ಮತ ಬ್ಯಾಂಕ್ ಭೀತಿ:** ಇವತ್ತಿಗೂ ಕಾಂಗ್ರೆಸ್ ತಪ್ಪುಕಲ್ಪನೆಯ ಸುಳಿಯಲ್ಲಿ ಸಿಲುಕಿದೆ. ರಾಷ್ಟ್ರೀಯವಾದ ಎಂದ ಕೂಡಲೇ ಅದನ್ನು ಕೇಸರಿಕರಣ, ಬಿಜೆಪಿಯ ಹಿತಾಸಕ್ತಿಗಳ ಪ್ರದರ್ಶನ ಎಂದು ಭಾವಿಸುತ್ತಿದೆ. ರಾಷ್ಟ್ರೀಯವಾದ ಬಲಗೊಂಡರೆ ತನ್ನ ಮತಬ್ಯಾಂಕ್ ಬಲಹೀನಗೊಳ್ಳುತ್ತದೆ ಎಂಬ ಗಾಬರಿಯಲ್ಲಿ ಕಾಂಗ್ರೆಸ್ ಆ ರೀತಿ ವರ್ತಿಸುತ್ತಿದೆ. ವಾಸ್ತವದಲ್ಲಿ ಹಿಂದುತ್ವ ಎಂದರೆ ಜಾತಿವಾದವಲ್ಲ. ಅದು ಜೀವನ ಪದ್ಧತಿ, ಹಿಂದುತ್ವ ಎಲ್ಲರನ್ನೂ ಒಳಗೊಳ್ಳುವ ಪದ್ದತಿ. ಇವತ್ತಿಗೂ ಆಫ್ಘಾನಿಸ್ಥಾನ, ಇರಾನ್ ಕಡೆಯಲ್ಲೆಲ್ಲ ಭಾರತೀಯರನ್ನು ಹಿಂದೂಸ್ಥಾನಿ ಎಂದೇ ಕರೆಯುತ್ತಾರೆ. ನಮ್ಮ ಮುಸಲ್ಮಾನರನ್ನೂ ಅವರು ಗುರುತಿಸುವುದು ಹಿಂದೀ ಎಂದು. ಹಿಂದೂ ಎಂದರೆ ಭಾರತವೆಂಬ ರಾಷ್ಟ್ರದ ಪರಿಧಿಯಲ್ಲಿರುವ ಮಂದಿ ಎಂಬುದು ಐತಿಹಾಸಿಕವಾಗಿ ನಡೆದುಬಂದ ಪರಿಪಾಠ. ಅದು ಜಾತೀಯ ಗುರುತಿಸುವಿಕೆಯಲ್ಲ. ಭಾರತವೆಂಬ ಸಾಂಸ್ಕೃತಿಕ ಅಂಗದ ಗುರುತು.

**ಕಮ್ಯುನಿಷ್ಟರು ರೂಪಿಸಿದ ಶಿಕ್ಷಣ:** ಆರಂಭದಲ್ಲಿ ಭಾರತದ ಶಿಕ್ಷಣ ವ್ಯವಸ್ಥೆ ರೂಪರೇಷೆ ಸಿದ್ಧಪಡಿಸಲು ಅನುವಾದ ಕಮ್ಯುನಿಸ್ಟರಿಗೆ ನಮ್ಮ ಐತಿಹಾಸಿಕ ಅಸ್ಮಿತೆ, ಸಾಂಸ್ಕೃತಿಕ ವೈಭವ ಅನಗತ್ಯ ಸರಕುಗಳಾದವು ಕಮ್ಯುನಿಸ್ಟ್ ಸಿದ್ದಾಂತಕ್ಕೂ ಸಾಂಸ್ಕೃತಿಕತೆಗೂ ಎಣ್ಣೆ ಸೀಗೇಕಾಯಿ ಸಂಬಂಧ, ಬೆಳೆ ಇದ್ದಲ್ಲಿ ಕಳೆಗೆ ಹೇಗೆ ಜಾಗವಿಲ್ಲವೋ ಹಾಗೆ ಸಾಂಸ್ಕೃತಿಕತೆ ಇದ್ದಲ್ಲಿ ಕಮ್ಯುನಿಸಮ್‌ಗೆ ಮನ್ನಣೆ ಸಿಗುವುದಿಲ್ಲ. ಪರಿಣಾಮವಾಗಿ ಶಿಕ್ಷಣ ಕ್ಷೇತ್ರದ ಮೂಲಕ ನಮ್ಮ ಸಾಂಸ್ಕೃತಿಕ ಹಿನ್ನೆಲೆಯನ್ನು ಕಡೆಗಣಿಸುವ ಕೈವಾಡ ಕಮ್ಯುನಿಸ್ಟರಿಂದ ನಡೆಯಿತು. ಭಾರತದ ವೀರ ಸೇನಾನಿಗಳಿಗಿಂತ ಹೆಚ್ಚು ದೇಶವನ್ನು ಕೊಳ್ಳೆ ಹೊಡೆದ ಡಕಾಯಿತರು ಪಠ್ಯಪುಸ್ತಕಗಳ ಹೆಚ್ಚಿನ ಪುಟಗಳಲ್ಲಿ ಪ್ರಾಶಸ್ತ್ಯ ಪಡೆಯಲು ಇದೇ ಕಾರಣ.

**ನಿಜವಾದ ಇತಿಹಾಸ ಹೇಳಬೇಕು:** ಹಾಗಾದರೆ ನೀವು ಇತಿಹಾಸವನ್ನು ಬದಲಾಯಿಸುತ್ತೀರಾ ? ಎಂದು ಪ್ರಮುಖ ರಾಜಕಾರಣಿಯೊಬ್ಬರು ಪ್ರಶ್ನೆ ಮಾಡುತ್ತಾರೆ. ಈ ರೀತಿ ಪ್ರಶ್ನೆಗೆ ಕಾರಣ ಗುಪ್ತ ಹಿತಾಸಕ್ತಿಗಳ ಶಿಕ್ಷಣ ವ್ಯವಸ್ಥೆ. ತಮ್ಮಲ್ಲಿ ಊಟಕ್ಕಿಲ್ಲದೆ ಭಾರತಕ್ಕೆ ದಾಳಿ ಮಾಡಿದ ಬಂಡುಕೋರರ ಕತೆಗಳನ್ನೇ ಇತಿಹಾಸ ಎಂದು ತುರುಕಿ ಬೋಧಿಸಿದಾಗ ಸತ್ಯವನ್ನೇ ಪ್ರಶ್ನಿಸುವ ಒಂದು ತಲೆಮಾರು ಹುಟ್ಟಿಕೊಳ್ಳುವುದು ಸಹಜ. ಕದಂಬರು ಮಿಶ್ರ ಬೆಳೆ ಬೇಸಾಯ ಪದ್ಧತಿ ಅನುಸರಿಸಿ ಆಹಾರ ಭದ್ರತೆ ಕಾಪಾಡಿದ್ದರು. ಕದಂಬರ ಕಾಲದಲ್ಲಿ ಮಹಿಳೆಯರಿಗೆ ಗ್ರಾಮದ ಮುಖ್ಯಸ್ಥೆ ಸ್ಥಾನ ಕೊಡಲಾಗುತ್ತಿತ್ತು. ಇಂದಿನ ಕಲಬುರಗಿಯ ರಾಷ್ಟ್ರಕೂಟರ ಆಡಳಿತ ಯಮುನಾ ನದಿ ತೀರದವರೆಗೂ ವಿಸ್ತರಿಸಿತ್ತು. ಹೊಯ್ಸಳರ ಶಿಲ್ಪಕಲೆಗೆ ಶತಮಾನಗಳ ದಾಳಿ ನಂತರ ಇಂದಿಗೂ ಸಾಕ್ಷಿಯಾಗಿ ನಿಲ್ಲುವ ಶಕ್ತಿಯಿದೆ. ಚೀನಾ, ಈಜಿಪ್ಟ್, ಅರೇಬಿಯಾ, ಪರ್ಶಿಯಾಕ್ಕೆ ವಸ್ತ್ರ ವಜ್ರ–ವೈಢೂರ್ಯ ಮಾತ್ರವಲ್ಲದೆ ಜೀವನಾವಶ್ಯಕ ಉಪ್ಪನ್ನೂ ರಫ್ತು ಮಾಡುತ್ತಿದ್ದು ನಮ್ಮ ಹೊಯ್ಸಳ ಸಾಮ್ರಾಜ್ಯ, ಪರದೇಶಿಗಳಿಗೆ ಕಣ್ಣು ಕುಕ್ಕುವ ಸಂಪತ್ತದು. ನಾವು ಎಂದಿಗೂ ಮರೆಯಲಾರದ ವಿಜಯನಗರ ಸಾಮ್ರಾಜ್ಯ ಪಶ್ಚಿಮದ ಕಡಲಿನಿಂದ ಪೂರ್ವದ ಕಡಲವರೆಗೆ ವಿಸ್ತರಿಸಿದ್ದಂಥದ್ದು. ಭಾರತವನ್ನು ಜಾಗತಿಕ ವ್ಯಾಪಾರ ಕೇಂದ್ರವಾಗಿಸಿದ್ದ ಆಡಳಿತವದು. ಯಾವುದೇ ಆಡಳಿತ ಕಲೆ–ಸಂಸ್ಕೃತಿಗೆ ಒತ್ತು ಕೊಡುವ ಮೊದಲು ತನ್ನ ಜನರ ಹೊಟ್ಟೆ ತುಂಬಿಸಬೇಕು. ವಿಜಯನಗರದ ಸಾಂಸ್ಕೃತಿಕ ವೈಭವದ ಕುರುಹುಗಳು ಇಂದು ಕನ್ನಡಿಗರಲ್ಲೇ ಉಳಿದು ಬಂದಿದೆ. ಅದರ ಮೇಲೆ ನಿರಂತರ ದಾಳಿ ನಡೆಸಿದ ಬಹಮನಿ ಸುಲ್ತಾನ ಗೆಲುವು ಸಾಧಿಸಲು ಸಾಧ್ಯವಾಗಲಿಲ್ಲ. ಕೊನೆಗೆ ವಿಜಯನಗರ ಕೊಳ್ಳೆ ಹೊಡೆಯಲು ಆದಿಲ್‌ಶಾಹಿ ಜೊತೆ ಮೂವರು ಮುಸ್ಲಿಂ ರಾಜರು ಒಂದಾಗಬೇಕಾಯಿತು. ಚಿನ್ನವಿರುವ ಮನೆಗೇ ಅಲ್ಲವೆ ಕಳ್ಳರು ಕನ್ನ ಹಾಕುವುದು. ಹಾಗಾಗಿ ದಂಗೆಕೋರರು ಇಲ್ಲಿಗೆ ಬಂದರು ಎಂಬುದು ಇತಿಹಾಸದ ಭಾಗವಲ್ಲವೇ? ದೋಚಿದ ಸಂಪತ್ತಿನ ಪಟ್ಟಿ ಕೊಟ್ಟರೆ ಇತಿಹಾಸದ ತಿರುಚುವಿಕೆಯೇ? ಪೃಥ್ವಿರಾಜ್ ಚೌಹಾಣ್ ಎದುರು 16 ಬಾರಿ ಸೋತ ಮಹಮ್ಮದ್ ಘೋರಿ 17ನೆಯ ಸಲ ಮೋಸದಿಂದ ಗೆಲ್ಲುತ್ತಾನೆ. ಸಣ್ಣ ರಾಜ್ಯ, ಪುಟ್ಟ ಸೇನೆ ಹೊಂದಿದ್ದ ಮಹಾರಾಣಾ ಪ್ರತಾಪ ಮೊಘಲರ ವಿರುದ್ಧ ಏಕಾಂಗಿ ಹೋರಾಟ ನಡೆಸುತ್ತಾನೆ. ಆದಿಲ್‌ಶಾಹಿಯ ಬೆವರಿಳಿಸಿದ್ದು ಛತ್ರಪತಿ ಶಿವಾಜಿ ಎಂಬ ವಿಚಾರಗಳನ್ನೆಲ್ಲ ವಿಸ್ತೃತವಾಗಿ ತಿಳಿಸುವುದು ಇತಿಹಾಸದ ಬದಲಾವಣೆಯಲ್ಲ, ವಾಸ್ತವಿಕ ಚಿತ್ರಣ.

**ಸಿಕ್ಯೂಬ್ ಮಾಫಿಯಾ ಹಿತಾಸಕ್ತಿ:** ಪರಂಪರೆ ಮರೆತ ತಲೆಮಾರನ್ನು ಸೃಷ್ಟಿಸುವ ಅನಿವಾರ್ಯವಿದ್ದ ಇನ್ನೊಂದು ವ್ಯವಸ್ಥೆ ಮತಾಂತರ ಮಾಫಿಯಾ. ತನ್ನತನವಿರುವ, ತನ್ನ ಪರಂಪರೆ ಅರಿತ ವ್ಯಕ್ತಿಯನ್ನು ಮತಾಂತರ ಮಾಡುವುದು ಅಸಾಧ್ಯ. ಕ್ರೈಸ್ತ ಮಿಷನರಿಗಳು ಬ್ರಿಟಿಷ್ ಕಾಲದಿಂದಲೇ ಶೈಕ್ಷಣಿಕ ವಲಯದಲ್ಲಿ ಸಕ್ರಿಯವಾಗಿದ್ದರೂ ಭಾರತೀಯರಿಂದ ಪರಂಪರೆ ಬೇರ್ಪಡಿಸುವಲ್ಲಿ ಸಂಪೂರ್ಣ ಯಶ ಕಾಣಲಿಲ್ಲ. ಭಾರತೀಯನ ತಲೆಗೆ ಇತಿಹಾಸವನ್ನು ತಪ್ಪಾಗಿ ತುಂಬಬಹುದು, ಆದರೆ ತನ್ನ ಅಪ್ಪ–ಅಜ್ಜ–ಮುತ್ತಜ್ಜಂದಿರ ಕೊಂಡಿ ಕಳಚುವುದು ಸುಲಭವಲ್ಲ. ಹಾಗಾಗಿ ತಲೆಮಾರಿನಿಂದ ತಲೆಮಾರಿಗೆ ವ್ಯವಸ್ಥಿತವಾಗಿ ಪಾರಂಪರಿಕ ಮೌಲ್ಯಗಳ ಕತ್ತು ಹಿಸುಕಲು ಜಾತ್ಯಾತೀತ ಮತ್ತು ಎಡಪಂಥೀಯ ವಾದಿಗಳ ಜೊತೆ ಮತಾಂತರ ಮಾಫಿಯಾ ಕತ್ತಲಲ್ಲಿ ಕೈಜೋಡಿಸಿತು. ಇದು ಬಹುಕಾಲ ಭಾರತದ ಮೇಲೆ ಪರಿಣಾಮ ಬೀರಿದೆ ಎಂಬುದಕ್ಕೆ 60 ರಿಂದ 80ರ ದಶಕದ ತಲೆಮಾರು ಸಾಕ್ಷಿ. ಭಾರತದಲ್ಲೇ ಉನ್ನತ ವ್ಯಾಸಂಗ ಪಡೆದು, ಇಲ್ಲೇ ಪರಿಣತಿ ಪಡೆದ ನಂತರ ದೇಶ ಕಟ್ಟುವ ಹಂಬಲಕ್ಕಿಂತ ಹೆಚ್ಚು ಅವರಿಗೆ ವಿದೇಶಿ ನೌಕರಿ ಮೇಲೆ ಆಸಕ್ತಿ ಹುಟ್ಟಿತು. ಭಾರತ ಜ್ಞಾನಿಗಳ ಸೋರಿಕೆಯ ಸಮಸ್ಯೆ ಎದುರಿಸಿತು.

ಸಿ ಕ್ಯೂಬ್ ಎಂದು ಕರೆಯಬಹುದಾದ ಕಾಂಗ್ರೆಸ್, ಕಮ್ಯುನಿಸ್ಟ್ ಮತ್ತು ಕನ್ವರ್ಷನ್ ಮಾಫಿಯಾ ಉಂಟುಮಾಡಿದ ಹಿತಾಸಕ್ತಿಗಳ ಪರಿಣಾಮವಿದು. ನಿರ್ದಿಷ್ಟವಾಗಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಹಂತದಲ್ಲಿ ನಿರಭಿಮಾನ, ನಿರಾಕರಣೆ ಮತ್ತು ಸ್ವಾರ್ಥದ ಬೀಜ ಬಿತ್ತುವುದು ಈ ಮೂರೂ ಹಿತಾಸಕ್ತಿಗಳ ಮುಖ್ಯ ಕಾರ್ಯ, ಕ್ರೈಸ್ತಮತ ಪ್ರೀತಿಯ ಸಂಕೇತ ಹಾಗೂ ಇಸ್ಲಾಂ ಶಾಂತಿಯ ಸಂಕೇತ ಎಂದು ಅವುಗಳ ದೌರ್ಬಲ್ಯ ಮರೆಮಾಚಿ, ದೇಶಿಯ ಮೌಲ್ಯಗಳನ್ನು ಕಡೆಗಣಿಸಿ ಸತ್ಯ ತಿರುಚಿ ಮಕ್ಕಳಿಗೆ ಓದಿಸಲಾಯ್ತು. ಸಮಾಜ ಪಾಠದಲ್ಲಿ ಈ ರೀತಿಯ ಪರೋಕ್ಷ ಧರ್ಮ ಪ್ರಚಾರಕ್ಕಿಂತ ಹೆಚ್ಚು ಅಗತ್ಯವಿರುವುದು ಸಾಮಾಜಿಕ ಜವಾಬ್ದಾರಿಗಳ ಬಗೆಗಿನ ಪಠ್ಯ, ನಿಸರ್ಗದ ಮಹತ್ವ ಅದರ ಅಗತ್ಯ, ಪ್ರಕೃತಿ–ಮಾನವ ಸಂಬಂಧ ನಮ್ಮ ಮೇಲಿರುವ ಪ್ರಾಕೃತಿಕ ಉಳಿವಿನ ಜವಾಬ್ದಾರಿಗಳನ್ನು ಮಕ್ಕಳಿಗೆ ಕಲಿಸಬೇಕಿರುವುದು ಅತ್ಯಗತ್ಯ. ಜೊತೆ ಜೊತೆಗೆ ವ್ಯಾವಹಾರಿಕ ಪರಿಜ್ಞಾನ ಜಾಗೃತಗೊಳಿಸುವ ಕಾರ್ಯಗಳಾಗಬೇಕು. ಸಹಕಾರಿ ಸಂಸ್ಥೆಗಳ ಧ್ಯೇಯೋದ್ದೇಶ, ಕಂಪನಿ ಸ್ಥಾಪನೆಯ ಪ್ರಾಥಮಿಕ ಮಾಹಿತಿಗಳನ್ನು ಮಕ್ಕಳಿಗೆ ನೀಡುವ ಮೂಲಕ ಉದ್ಯಮಶೀಲ ಮನೋವೃತ್ತಿ ಬೆಳೆಸಬೇಕು. ಐದು ಸಾವಿರ ವರ್ಷ ಇತಿಹಾಸವಿರುವ, ಜಾಗತಿಕವಾಗಿ ಮನ್ನಣೆ ಪಡೆದ ಯೋಗವಿದ್ಯೆಯ ಪರಿಚಯ ಪಠ್ಯಗಳಲ್ಲಾಗಬೇಕು.

**ಜನಾಂಗೀಯ ವಿಭಜನೆ ಹುನ್ನಾರ:** ಈ ಎಲ್ಲಾವುಗಳ ಅನುಪಸ್ಥಿತಿಯ ಕಾರಣ ಯಾವುದೇ ವ್ಯವಹಾರಿಕ ಜ್ಞಾನವೂ ಇಲ್ಲದೆ, ಸಾಮಾಜಿಕ ಪರಿಕಲ್ಪನೆಯಿಲ್ಲದ, ಸಂವಿಧಾನಿದ ಆಶಯವನ್ನೂ ತಿಳಿಯಲು ಅಶಕ್ತರಾದ ಮಕ್ಕಳು ಪ್ರೌಢಶಾಲೆಯಿಂದ ಹೊರಬರುತ್ತಿದ್ದಾರೆ. ವಿಶ್ವಾಸಾತ್ಮಕ ಚಿಂತನೆ ಮಾಡಬೇಕಾದವರು ಕಾನೂನಿನ ಪರಿಕಲ್ಪನೆ ಇಲ್ಲದೆ ಸ್ವತಃ ನಿರ್ಬಂಧಕ್ಕೆ ಒಳಗಾಗುತ್ತಿದ್ದಾರೆ. ಹಿಜಾಬ್ ಪರ ಹೋರಾಟಕ್ಕಿಳಿಯುವ ಮನೋವೃತ್ತಿ ನಿರ್ಮಾಣ ಮಾಡಿದ್ದು ಮಾನವೀಯ ಮೌಲ್ಯಗಳ ಹಿನ್ನೆಲೆಯಲ್ಲೂ ಖೇದಕರ ಬೆಳವಣಿಗೆ, ಹಿಜಾಬ್ ಹಾಕಿ ವಿಶ್ವಮಾನವರಾಗಲು ಹೇಗೆ ಸಾಧ್ಯ? ಈ ಕೋನದಿಂದ ಸಮಸ್ಯೆಯನ್ನು ವಿಶ್ಲೇಷಿಸುವ ಬದಲಾಗಿ ನಮ್ಮಲ್ಲಿ ವಿಚಾರವಾದಿ ಅನಿಸಿಕೊಂಡವರು ವಿನಾಕಾರಣ ಕುವೆಂಪು, ಬಸವಣ್ಣನವರಿಗೆ ಅವಮಾನವಾಗಿದೆ ಎಂದು ಹುರುಳಿಲ್ಲದ ಆರೋಪ ಮಾಡುತ್ತಿದ್ದಾರೆ. ಈ ಆರೋಪಗಳು ದಿಕ್ಕುತಪ್ಪಿಸಿ ಜನಾಂಗೀಯ ವಿಭಜನೆ ಮಾಡುವ ಹುನ್ನಾರವೇ ಹೊರತು ಬೇರೇನಲ್ಲ.

**ನಮ್ಮ ಸಾಧಕರ ಇತಿಹಾಸ ಹೇಳೋಣ:** ಹಾಗಾದರೆ ನಮ್ಮ ಶಿಕ್ಷಣ ವ್ಯವಸ್ಥೆ ಹೇಗಿರಬೇಕು ಎಂಬ ಪ್ರಶ್ನೆಗೆ ಉತ್ತರ ಸರಳ, ಗ್ರೀಕ್ ನಾಗರೀಕತೆ ಕಲಿಸುವ ಮೊದಲು ಭಾರತದ ಜ್ಞಾನ–ಪರಂಪರೆಯ ವ್ಯಾಪ್ತಿ, ನಮ್ಮ ದೇಶದ ಶಿಲ್ಪಕಲೆ, ನಮ್ಮ ಕಲಾಪ್ರಕಾರಗಳ ಪರಿಚಯ ಮಾಡಿಸಬೇಕು. ಅಲೆಕ್ಸಾಂಡರ್, ಅಕ್ಬರನನ್ನು ವೈಭವೀಕರಿಸುವ ಬದಲು ಶಿವಾಜಿ, ರಾಣಿ ಚೆನ್ನಮ್ಮ, ಪೋರ್ಚುಗೀಸರಿಗೆ ಸಡ್ಡು ಹೊಡೆದ ರಾಣಿ ಅಬ್ಬಕ್ಕ, ನಿರಂತರ 54 ವರ್ಷ ಆಡಳಿತ ನಡೆಸಿದ ವಿದೇಶಿ ವ್ಯಾಪಾರ ಪರಿಣತೆ ಕರ್ನಾಟಕದ ಚನ್ನಭೈರಾದೇವಿ – ಇಂಥವರು ಇತಿಹಾಸ ಪಠ್ಯದಲ್ಲಿ ಸ್ಥಾನ ಪಡೆಯಬೇಕು. ಸ್ವಾತಂತ್ರ್ಯ ಹೋರಾಟಗಾರರ ವಿಚಾರಕ್ಕೆ ಬಂದಾಗ ಗಾಂಧೀಜಿಯವರ ಜೊತೆಗೆ ಸುಭಾಷ್ ಚಂದ್ರ ಬೋಸ್, ಲಾಲಾ ಲಜಪತ್ ರಾಯ್, ಬಾಲ ಗಂಗಾಧರ ತಿಲಕ್, ಬಿಪಿನ್ ಚಂದ್ರ ಪಾಲ್ ಹಾಗೂ ಇತರೆ ಕಾಂತ್ರಿಕಾರಿಗಳ ಕೊಡುಗೆಗಳನ್ನೂ ತಿಳಿಸಬೇಕು. ಷೆಕ್ಸ್‌ಪಿಯರನನ್ನು ಪರಿಚಯಿಸುವ ಮೊದಲು ಕಾಳಿದಾಸನ ಪರಿಚಯವಾಗಬೇಕು. ಜೀವನ ಮೌಲ್ಯ ಕಲಿಸಲು ಎಲ್ಲೆಲ್ಲಿಂದಲೋ ಪಠ್ಯ ಆಯ್ಕೆ ಮಾಡುತ್ತೇವೆ. ಕ್ರಿ.ಪೂ.200ರಲ್ಲೇ ಪಂಚತಂತ್ರ ಜೀವತಳೆದ ನಾಡು ನಮ್ಮದು.

**ಇದರಲ್ಲಿ ರಾಜಕೀಯ ಬೇಡ:** ಮೇಲ್ನೋಟಕ್ಕೆ ಸರಳವಾಗಿ ಕಾಣುವ ಈ ತಿದ್ದುಪಡಿಗಳು ಉಂಟು ಮಾಡುವ ಪರಿಣಾಮ ಅಪಾರ. ಎಳವೆಯಲ್ಲಿಯೇ ರಾಷ್ಟ್ರಪ್ರೇಮ ಬೆಳೆಸುತ್ತದೆ. ಚಿಂತನೆಗೆ ಪ್ರೇರೇಪಿಸುತ್ತದೆ, ಸಬಲ ವ್ಯಕ್ತಿತ್ವ ನಿರ್ಮಾಣ ಮಾಡುತ್ತದೆ. ಶಿಕ್ಷಣವೆಂದರೆ ನೂರು ಮೀಟರ್ ಓಟವಲ್ಲ, ಅದೊಂದು ಮ್ಯಾರಥಾನ್, ಮಕ್ಕಳ ಪ್ರಯತ್ನದ ಜೊತೆಗೆ ಸರ್ಕಾರದ ಪ್ರಯತ್ನವೂ ನಿರಂತರ. ಅಂದ ಮಾತ್ರಕ್ಕೆ ಇದು ಕೇಸರೀಕರಣವಾಗಲೀ, ಬ್ರಾಹ್ಮಣೀಕರವಾಗಲಿ ಅಲ್ಲ. ಆದರೆ ಇದರಿಂದ ರಾಜಕೀಯವಾಗಿ ಸಿ ಕ್ಯೂಬ್ ಒಕ್ಕೂಟಕ್ಕೆ ಭಾರಿ ನಷ್ಟವಾಗುತ್ತದೆ. ಈ ಸತ್ಯದ ಅರಿವಿರುವ ಕಾರಣಕ್ಕೇ ಆ ಒಕ್ಕೂಟ ಬಿಜೆಪಿಯನ್ನು ವಿರೋಧಿಸುವ ಭರದಲ್ಲಿ ರಾಷ್ಟ್ರೀಯತೆಯ ವಿರೋಧಕ್ಕೆ ಟೊಂಕ ಕಟ್ಟಿದೆ. ವಿರೋಧಕ್ಕೆ ಬೇಕಾದಷ್ಟು ಸರಕು ಸಿಗದ ಕಾರಣ ಪ್ರಾದೇಶಿಕತೆಯ ವಾದ ಮುಂದಿಡಲಾಗುತ್ತಿದೆ. ಇದೂ ಸತ್ವರಹಿತ ವಾದ. ಹಲವು

ಪ್ರಾದೇಶಿಕತೆಯ ಸಮ್ಮಿಲನವೇ ಭಾರತ. ನಮ್ಮಲ್ಲಿ ಪ್ರತಿ 20 ಕಿಲೋಮೀಟರಿಗೆ ಪ್ರಾದೇಶಿಕತೆ ಬದಲಾಗುತ್ತದೆ. ಹಾಗೆಂದು ಲಾಗಾಯ್ತಿನಿಂದಲೂ ಪ್ರಾದೇಶಿಕ ಕೊಡು-ಕೊಳ್ಳುವಿಕೆ ನಡೆಯುತ್ತಲೇ ಬಂದಿದೆ. ಸಾಂಸ್ಕೃತಿಕ ಅಸ್ತಿತ್ವ ಪಡೆದಿರುವುದು. ಆದರೆ ಇದನ್ನೇ ದೇಶ ಒಡೆಯುವ ಹುನ್ನಾರವನ್ನಾಗಿ ಬಳಸಿಕೊಂಡು ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಮನಸ್ಥಿತಿ ತೀರಾ ಕೆಳಮಟ್ಟದ ರಾಜಕಾರಣ. ಮಕ್ಕಳ ಮೇಲೆ ಅಂಥ ರಾಜಕಾರಣದ ಪ್ರಭಾವ ಆಗುತ್ತಿರುವುದು ವಿಪರ್ಯಾಸ.

ಲೇಖಕರು:-ಸಿ.ಟಿ.ರವಿ,

ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ಬಿಜೆಪಿ.

ಆಧಾರ:ಕನ್ನಡ ಪ್ರಭ, ದಿನಾಂಕ:20.06.2022

## 19.ಚುನಾವಣೆ ಸುಧಾರಣೆ ಅಗತ್ಯ

ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ ಎನಿಸಿಕೊಂಡಿರುವ ಭಾರತದಲ್ಲಿ ಚುನಾವಣಾ ಸುಧಾರಣೆಗಳ ಬಗ್ಗೆ ಆಗಾಗ ಚರ್ಚೆಗಳಾಗುತ್ತವೆ. ಲೋಕಸಭೆ, ವಿಧಾನಸಭೆಯಂತಹ ಶಾಸನ ಸಭೆಗಳಲ್ಲಿ ಸಾಕಷ್ಟು ಮಹನೀಯರು ಈ ಬಗ್ಗೆ ಚಿಂತನ ಮಂಥನ ನಡೆಸಿದ್ದಾರೆ. ಕೆಲವೊಂದಿಷ್ಟು ಸುಧಾರಣೆಗಳು ಜಾರಿಗೆ ಬಂದಿವೆ. ಮತ್ತೊಂದಿಷ್ಟು ಇನ್ನೂ ಚರ್ಚೆಯ ಹಂತದಲ್ಲೇ ಇವೆ ಅಥವಾ ಅವುಗಳನ್ನು ಅನುಷ್ಠಾನಕ್ಕೆ ತರಲು ನಮ್ಮ ರಾಜಕೀಯ ವ್ಯವಸ್ಥೆಗೆ ಇಷ್ಟವಿಲ್ಲದೇ ಹಾಗೆ ಉಳಿದಿವೆ. ಈ ಪೈಕಿ, ಒಬ್ಬ ಅಭ್ಯರ್ಥಿ ಏಕಕಾಲಕ್ಕೆ ಎರಡು ಕ್ಷೇತ್ರಗಳಲ್ಲಿ ಚುನಾವಣೆಗೆ ಸ್ಪರ್ಧಿಸುವುದನ್ನು ನಿರ್ಬಂಧಿಸುವ ಸುಧಾರಣೆಯೂ ಮಹತ್ವದ್ದಾಗಿದೆ. ಕೇಂದ್ರ ಚುನಾವಣಾ ಆಯೋಗವು ಈ ಬಗ್ಗೆ ಹಲವು ವರ್ಷಗಳಿಂದ ಶಿಫಾರಸ್ಸು ಮಾಡುತ್ತಲೇ ಇದೆ. ಆದರೆ, ಇದುವರೆಗೂ ಕೇಂದ್ರದಲ್ಲಿ ಆಡಳಿತ ನಡೆಸಿರುವ ಮತ್ತು ನಡೆಸುತ್ತಿರುವ ಪಕ್ಷಗಳು ಈ ಶಿಫಾರಸ್ಸು ಕಿವಿಗೆ ಹಾಕಿಕೊಂಡಿಲ್ಲ.

ಕೇಂದ್ರ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರು ಮತ್ತೆ ಈ ಶಿಫಾರಸ್ಸು ಅನ್ನು ಸಚಿವಾಲಯದ ಶಾಸಕಾಂಗ ಕಾರ್ಯದರ್ಶಿಯ ಜೊತೆಗೆ ಚರ್ಚಿಸಿದ್ದಾರೆ. ಆಯೋಗಕ್ಕೆ ಸಂಬಂಧಿಸಿದ ಎಲ್ಲ ವ್ಯವಹಾರಗಳನ್ನು ನಿರ್ವಹಿಸುವ ಶಾಸಕಾಂಗ ಇಲಾಖೆಗೆ ಆಯುಕ್ತರು ಈ ವಿಷಯವನ್ನು ಮನವರಿಕೆ ಮಾಡಿಕೊಟ್ಟಿದ್ದಾರೆ. ಆಯೋಗದ ಈ ನಡೆ ನಿಜಕ್ಕೂ ಸ್ವಾಗತಾರ್ಹ.

ರಾಜಕೀಯ ಕಾರಣಕ್ಕಾಗಿ ನಮ್ಮಲ್ಲಿ ಬಹಳಷ್ಟು ಅಭ್ಯರ್ಥಿಗಳು ಪ್ರಮುಖ ನಾಯಕರೆಲ್ಲರೂ ಏಕಕಾಲಕ್ಕೆ ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಾರೆ. ಒಂದೊಮ್ಮೆ ಎರಡು ಕ್ಷೇತ್ರಗಳಲ್ಲೂ ಗೆದ್ದರೆ, ಒಂದು ಕ್ಷೇತ್ರವನ್ನು ಬಿಟ್ಟುಕೊಡಬೇಕಾಗುತ್ತದೆ. ಆಗ ಆ ಕ್ಷೇತ್ರದಲ್ಲಿ ಮತ್ತೆ ಚುನಾವಣೆ ನಡೆಸಬೇಕಾಗುತ್ತದೆ. ಸಮಯ, ಹಣ ಮತ್ತು ಮಾನವ ಸಂಪನ್ಮೂಲ ನಷ್ಟಕ್ಕೆ ಅತ್ಯುತ್ತಮ ಉದಾಹರಣೆ ಎನಿಸಿಕೊಳ್ಳುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಪ್ರಜಾಪ್ರಭುತ್ವದ ಆಶಯಗಳು ಈಡೇರುವುದಿಲ್ಲ. ಹಾಗೆ ನೋಡಿದರೆ, ಪ್ರಜಾಪ್ರತಿನಿಧಿ ಕಾಯಿದೆಯ ಕೆಲವು ಸೆಕ್ಷನ್‌ಗಳಿಗೆ ತಿದ್ದುಪಡಿ ತಂದು ಏಕಕಾಲಕ್ಕೆ ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸುವುದನ್ನು ನಿರ್ಬಂಧಿಸುವ ಪ್ರಸ್ತಾಪವನ್ನು ಕೇಂದ್ರ ಚುನಾವಣಾ ಆಯೋಗವು 2004ರಲ್ಲಿ ಮುಂದಿಟ್ಟಿತ್ತು. ಅದರ ಈಡೇರಿಕೆಗೆ ಅಂದಿನ ಸರ್ಕಾರವು ಉತ್ಸುಕವಾಗಿತ್ತು. ಆದರೆ, ರಾಜಕೀಯ ಇಚ್ಛಾಶಕ್ತಿ ಕೊರತೆಯಿಂದಾಗಿ ಪ್ರಸ್ತಾಪ ಮೂಲೆಗುಂಪಾಯಿತು. ಇನ್ನೂ ಆಸಕ್ತಿಕರ ಸಂಗತಿ ಏನೆಂದರೆ 1996ಕ್ಕಿಂತ ಮುಂಚೆ ವ್ಯಕ್ತಿಯೊಬ್ಬ ಎಷ್ಟು ಕ್ಷೇತ್ರಗಳಲ್ಲಿ ಬೇಕಾದರೂ ಸ್ಪರ್ಧಿಸಬಹುದಾಗಿತ್ತು. ಚುನಾವಣಾ ಸುಧಾರಣೆಯ ಭಾಗವಾಗಿ ಆ ವರ್ಷ ಪ್ರಜಾಪ್ರತಿನಿಧಿ ಕಾಯಿದೆಗೆ ತಿದ್ದುಪಡಿ ತಂದು ಒಬ್ಬ ಅಭ್ಯರ್ಥಿ ಎರಡು ಕ್ಷೇತ್ರಗಳಿಗಿಂತ ಹೆಚ್ಚಿನ ಕ್ಷೇತ್ರಗಳಲ್ಲಿ ಸ್ಪರ್ಧಿಸುವುದನ್ನು ನಿರ್ಬಂಧಿಸಲಾಯಿತು.

2004 ರಲ್ಲಿ ಆಯೋಗ ಮಾಡಿರುವ ಪ್ರಸ್ತಾಪದ ಪ್ರಕಾರ ಚುನಾವಣಾ ನಿಯಮ ಮೀರಿ ಸ್ಪರ್ಧಿಸಿದರೆ ದಂಡವನ್ನು ವಿಧಿಸುವುದಕ್ಕೆ ಅವಕಾಶ ನೀಡಬೇಕು. ರಾಜ್ಯ ವಿಧಾನಸಭೆ ಚುನಾವಣೆ ವೇಳೆ ಎರಡು ಕ್ಷೇತ್ರಗಳಿಗೆ ನಿಯಮ ಮೀರಿ ಸ್ಪರ್ಧಿಸಿದರೆ ರೂ.5ಲಕ್ಷ ಹಾಗೂ ಲೋಕಸಭೆ ಚುನಾವಣೆ ಎರಡು ಕ್ಷೇತ್ರಗಳಲ್ಲಿ ಸ್ಪರ್ಧೆಗೆ ಮುಂದಾದರೆ ರೂ. 10ಲಕ್ಷ ದಂಡ ವಿಧಿಸುವ ಪ್ರಸ್ತಾಪವಿತ್ತು. ಈ ದಂಡದ

ಮೊತ್ತವನ್ನು ಪರಿಷ್ಕರಿಸುವ ಅಗತ್ಯವನ್ನೂ ಆಯೋಗ ಕೇಂದ್ರ ಸರ್ಕಾರಕ್ಕೆ ಮನದಟ್ಟು ಮಾಡುವ ಪ್ರಯತ್ನವನ್ನು ಮಾಡುತ್ತಿದೆ. ಕೇಂದ್ರ ಚುನಾವಣಾ ಆಯೋಗ ಈ ಶಿಫಾರಸ್ಸಿಗೆ ಮುಖ್ಯ ಕಾರಣವೇ ಖಜಾನೆಗೆ ಆಗುವ ವೆಚ್ಚದ ಭಾರವನ್ನು ತಗ್ಗಿಸುವುದು. ಜೊತೆಗೆ, ಹಾಗೆ ಖಾಲಿ ಮಾಡಲಾದ ಕ್ಷೇತ್ರಕ್ಕೆ ಹೊಸದಾಗಿ ಚುನಾವಣೆ ನಡೆಸುವವರೆಗೂ ನಿರ್ವಾತವಾಗಿಡುವುದು ಸಂವಿಧಾನದ ಮತ್ತು ಪ್ರಜಾಪ್ರಭುತ್ವ ಆಶಯಗಳಿಗೆ ವಿರುದ್ಧವಾದ ನಡೆ. ಯಾವುದೇ ದೃಷ್ಟಿಯಿಂದ ನೋಡಿದರೂ ಇದೊಂದು ಅತ್ಯುತ್ತಮ ಪ್ರಸಾಪವಾಗಿದ್ದು ಸರ್ಕಾರವು ಅಂಗೀಕರಿಸಲಿ.

ಆಧಾರ:ವಿಜಯಕರ್ನಾಟಕ, ದಿನಾಂಕ:25.06.2022

## 20. ನಮ್ಮ ಸೇನೆಗೆ ಅಗ್ನಿಪಥ ಅನಿವಾರ್ಯವೇ

ಇಂದಿನ ದಿನ ಭಾರತೀಯ ಸಶಸ್ತ್ರ ಪಡೆಗಳ ಯೋಧರ ಸರಾಸರಿ ವಯಸ್ಸು ಮೂವತ್ತೆರಡು. ಅಗ್ನಿ ಪಥದಿಂದಾಗಿ ಸೈನಿಕರ ಸರಾಸರಿ ವಯಸ್ಸು ಇಪ್ಪಾತ್ತಾರರ ಆಸುಪಾಸಿಗೆ ಇಳಿಯುವುದರಿಂದ ಯುದ್ಧ ಭೂಮಿಯಲ್ಲಿ ಸೇನೆಗೆ ಹೆಚ್ಚಿನ ಲಾಭವಾಗುವುದರ ಜೊತೆಗೆ ಸೇನೆಯ ಕಾರ್ಯಕ್ಷಮತೆ ಹೆಚ್ಚಾಗುವುದೆಂದು ಸರ್ಕಾರವು ಘೋಷಿಸಿದೆ. ಭಾರತೀಯ ಸಶಸ್ತ್ರ ಪಡೆಗಳನ್ನು ಹೆಚ್ಚು ಯುವ, ಆಧುನಿಕ ಮತ್ತು ಟೆಕ್‌ಸ್ನೇಹಿ ಮಾಡುವುದು ಈ ಅಗ್ನಿವೀರರ ಪ್ರವೇಶದಿಂದ ಸಾಧ್ಯವಾಗಲಿದೆಯೆಂದು ಲೆಫ್ಟಿನೆಂಟ್ ಜನರಲ್ ಅನಿಲ್ ಪುರಿ ನುಡಿದದ್ದನ್ನು ಮೊನ್ನೆ ಮಾಧ್ಯಮಗಳು ದಾಖಲಿಸಿವೆ. ಅಗ್ನಿವೀರರಿಗೆ ಕೊಡುವ ಸಂಬಳ ಮತ್ತು ಸೌಲಭ್ಯಗಳು ಜೊತೆಗೆ ಶೇ.25 ಸೈನಿಕರನ್ನು ಹದಿನೈದು ವರ್ಷಗಳ ಕಾಲ ಪಿಂಚಣಿ ಸೌಲಭ್ಯವಿರುವ ದೀರ್ಘಕಾಲದ ಸೇವೆಗೆ ಉಳಿಸಿಕೊಳ್ಳಲಾಗುತ್ತದೆಯೆಂಬ ವಿಚಾರಗಳನ್ನು ಅಗ್ನಿಪಥ ಯೋಜನೆಯಲ್ಲಿ ಪ್ರಸ್ತಾಪಿಸಲಾಗಿದೆ.

ಈ ಅಗ್ನಿಪಥ ಯೋಜನೆಯ ಕುರಿತಾಗಿ ಭಾರತ ಸರ್ಕಾರವು ಹಲವಾರು ವರ್ಷಗಳಿಂದ ಚಿಂತನೆ ನಡೆಸಿರುವುದರ ಹಿಂದೆ ಇತರ ಕಾರಣಗಳೂ ಇದ್ದವು. ಐದು ಲಕ್ಷ ಕೋಟಿಗಿಂತಲೂ ಹೆಚ್ಚಿರುವ ರಕ್ಷಣಾ ಬಜೆಟಿನಲ್ಲಿ ಸುಮಾರು ಒಂದು ಕಾಲು ಲಕ್ಷ ಕೋಟಿ ಹಣವನ್ನು ಮಾಜಿ ಸೈನಿಕರ ಪಿಂಚಣಿಗೆ ಮೀಸಲಿಡಲಾಗುತ್ತದೆ. ಮಾಜಿ ಸೈನಿಕರ ಪಿಂಚಣಿ ಮತ್ತು ಸಶಸ್ತ್ರ ಪಡೆಗಳ ಮಾಸಿಕ ಸಂಬಳಕ್ಕೆ ಡಿಫೆನ್ಸ್ ಬಜೆಟಿನಲ್ಲಿ ಹಣವನ್ನು ಎತ್ತಿಟ್ಟ ನಂತರ ಉಳಿಯುತ್ತಿದ್ದ ಕಾಲು ಭಾಗದಲ್ಲಿ ಸೇನೆಯ ಆಧುನೀಕರಣಕ್ಕೆ ಆರ್ಥಿಕ ಸಂಪನ್ಮೂಲಗಳು ಮಿಕ್ಕುತ್ತಿರಲಿಲ್ಲ. ಭಾರತ ಸಹಿತ ಎಲ್ಲಾ ದೇಶಗಳಲ್ಲಿ ಹೆಚ್ಚುತ್ತಿರುವ ಜನರ ಜೀವಿತಾವಧಿಯ ಕಾರಣದಿಂದಾಗಿ ಸೈನಿಕರಿಗೆ ಪಿಂಚಣಿ ನೀಡುವ ಆರ್ಥಿಕ ಹೊರೆಯನ್ನು ಕಡಿಮೆ ಮಾಡಿಕೊಳ್ಳುವ ಬಗ್ಗೆ ಸರ್ಕಾರವು ದೀರ್ಘಕಾಲದಿಂದ ಚಿಂತಿಸುತ್ತಿತ್ತು.

ಸೇನೆಯಲ್ಲಿ ಅಲ್ಪಾವಧಿಯ ಪಿಂಚಣಿ ರಹಿತ ಸೇವೆಯನ್ನು ಸಲ್ಲಿಸಲು ಸರ್ಕಾರಗಳು ಯೋಜನೆಗಳನ್ನು ತಯಾರಿಸಿ ಕಾರ್ಯರೂಪಕ್ಕೆ ತಂದಿರುವುದು ಇದೇ ಮೊದಲಲ್ಲ. ಅಧಿಕಾರಿಗಳ ವಿಭಾಗದಲ್ಲಿ ಐದು ಮತ್ತು ಹತ್ತು ವರ್ಷಗಳ ಪಿಂಚಣಿ ರಹಿತ ಸೇವೆಯಾದ ಶಾರ್ಟ್ ಸರ್ವಿಸ್ ಕಮೀಷನ್ ಯೋಜನೆಗಳು ಭಾರತಿಯ ಆರ್ಮಿ, ನೇವಿ ಮತ್ತು ವಾಯುಸೇನೆಯಲ್ಲಿ ಪುರುಷರು ಮತ್ತು ಮಹಿಳೆಯರಿಗಾಗಿ ಹಲವಾರು ದಶಕಗಳಿಂದ ಜಾರಿಯಲ್ಲಿದೆ. ಆ ಯೋಜನೆಯನ್ನು ಆರಂಭಿಸುವಾಗಲೂ ಭಾರತೀಯ ಯುವ ಜನತೆಯನ್ನು ಸರ್ಕಾರ Use and throw ಮಾಡುವ ಹುನ್ನಾರದಲ್ಲಿದೆಯೆಂಬ ಅಪಸ್ವರಗಳು ಎದ್ದಿದ್ದವು. ಆದರೆ ಭಾರತೀಯ ಸಶಸ್ತ್ರ ಪಡೆಗಳಲ್ಲಿ ಶಾರ್ಟ್ ಸರ್ವಿಸ್ ಸೇವೆ ಸಲ್ಲಿಸಿದವರು ತಮ್ಮ ಕರ್ತವ್ಯವನ್ನು ಸಮರ್ಪಕವಾಗಿ ನಿರ್ವಹಿಸಿದ್ದಾರೆ ಮತ್ತು ತಮ್ಮ ಸೇವೆಯ ಅವಧಿ ಮುಗಿದ ನಂತರ ಸೇನೆಯ ಮೌಲ್ಯಗಳನ್ನು ತಾವು ಕೆಲಸ ಮಾಡುವ ನಾಗರಿಕ ಸಮಾಜದಲ್ಲಿ ಅಳವಡಿಸಿಕೊಂಡಿದ್ದಾರೆ. ಪಂಜಾಬಿನ ಮಾಜಿ ಮುಖ್ಯಮಂತ್ರಿ ಕ್ಯಾಪ್ಟನ್ ಅಮರಿಂದರ್ ಸಿಂಗ್, ಡೆಕ್ಕನ್ ಏರ್‌ಲೈನ್ಸ್ ಸ್ಥಾಪಕ ಕ್ಯಾಪ್ಟನ್ ಗೋಪಿನಾಥ್, ಮಾಜಿ ಸಚಿವ ಕ್ಯಾಪ್ಟನ್ ಜಸ್ವಂತ್ ಸಿಂಗ್ ಮುಂತಾದವರು ಕೂಡ ಸೇನೆಯಲ್ಲಿ ಅಲ್ಪಾವಧಿಯ ಪಿಂಚಣಿರಹಿತ ಸೇವೆ ಸಲ್ಲಿಸಿದವರಾಗಿದ್ದಾರೆ. ಮಹಿಳಾ ಅಧಿಕಾರಿಗಳ ನೇಮಕಾತಿಯಾದಾಗಲೂ ಎದ್ದ ಅಪಸ್ವರಗಳನ್ನು ಅಡಗಿಸುವಲ್ಲಿ ಸಶಸ್ತ್ರ ಪಡೆಗಳಲ್ಲಿ ಮಹಿಳೆಯರ

ಸಾಧನೆಯು ಎಷ್ಟು ಯಶಸ್ವಿಯಾಗಿದೆಯೆಂದರೆ, ಈಗ ಮಹಿಳೆಯರು ವಾಯುಸೇನೆಯಲ್ಲಿ ಫೈಟರ್ ಪೈಲೆಟ್‌ಗಳಾಗಿ ನೇಮಕವಾಗಿದ್ದಾರೆ.

ಇಸ್ರೇಲ್, ಸ್ವೀಡನ್, ನಾರ್ವೆ, ರಷ್ಯಾ ಮುಂತಾದ ದೇಶಗಳಲ್ಲಿ ಪಿಂಚಣಿರಹಿತ ಅಲ್ಪಾವಧಿಯ ಮಿಲಿಟರಿ ಸೇವೆಯನ್ನು ಕಡ್ಡಾಯ ಮಾಡಲಾಗಿದೆ. ಇಸ್ರೇಲ್ ದೇಶದಲ್ಲಿ ಪುರುಷರಿಗೆ ಮತ್ತು ಮಹಿಳೆಯರಿಗೆ ಕ್ರಮವಾಗಿ 30 ಮತ್ತು 22 ತಿಂಗಳ ಮಿಲಿಟರಿ ಸೇವೆಯನ್ನು ಕಡ್ಡಾಯ ಮಾಡಿರುವುದರಿಂದ ಆ ದೇಶವಾಸಿಗಳಲ್ಲಿರುವ ರಾಷ್ಟ್ರೀಯ ಪ್ರಜ್ಞೆ ಇಸ್ರೇಲ್ ಅನ್ನು ಶತ್ರು ರಾಷ್ಟ್ರಗಳ ನಡವೆಯೂ ತಲೆಯೆತ್ತಿ ನಿಲ್ಲುವಂತೆ ಮಾಡಿದೆ. ಪ್ರಪಂಚದ ಅನೇಕ ರಾಷ್ಟ್ರಗಳಲ್ಲಿ ಕಡ್ಡಾಯವಲ್ಲದ ಅಲ್ಪಾವಧಿಯ ಮಿಲಿಟರಿ ಸೇವೆ ಮಾಡಬಹುದಾದ ಅವಕಾಶವನ್ನು ಆಯಾ ರಾಷ್ಟ್ರಗಳು ತಮ್ಮ ನಾಗರಿಕರಿಗೆ ತೆರೆದಿಟ್ಟಿವೆ.

ಎಲ್ಲ ಉದ್ಯೋಗಗಳು ಮನುಷ್ಯನ ಜೀವನಶೈಲಿಯನ್ನು ಸುಖಮಯಗೊಳಿಸಿದರೆ, ಮಿಲಿಟರಿ ಮಾತ್ರ ವಿರುದ್ಧ ದಿಕ್ಕಿನಲ್ಲಿ ಕೆಲಸ ಮಾಡುತ್ತದೆ. ಮಿಲಿಟರಿ ಆರಾಮದ ವಾತಾವರಣದಲ್ಲಿದ್ದವರನ್ನು ಹಿಮಪರ್ವತಗಳ ಮೇಲೆ ಮತ್ತು ಮರುಭೂಮಿಯಲ್ಲಿ ಗಡಿಕಾಯಲು ತಯಾರು ಮಾಡುತ್ತದೆ. ಸಂಬಳ ಮತ್ತು ಸೌಲಭ್ಯಗಳ ಆಚೆಗೂ ಯೋಚಿಸಬಲ್ಲ ಮಾನಸಿಕತೆಯಿಲ್ಲದವರಿಗೆ ಮಿಲಿಟರಿ ಜೀವನ ಹೇಳಿಮಾಡಿಸಿದ್ದಲ್ಲ. ಸಂಬಳ ಅಥವಾ ಪಿಂಚಣಿರಹಿತವಾದ ಅಲ್ಪಾವಧಿಯ ಸೇವೆ ಸಲ್ಲಿಸಲು ಭಾರತದಂಥ ದೇಶದಲ್ಲಿ ಕೋಟ್ಯಾಂತರ ಜನರು ತಯಾರಿರುವಾಗ ಅಂಥ ಉತ್ಸಾಹಿಗಳನ್ನು ದೇಶಕಾಯಲು ಬಳಸಿಕೊಂಡರೆ ತಪ್ಪೇನು?

ಹತ್ತನೆಯ ತರಗತಿ ಪಾಸಾಗಿರುವ ಈ ಅಗ್ನಿವೀರ ಸೈನಿಕರಿಂದ ಒಬ್ಬ ಜನರಲ್ ಡ್ಯೂಟಿ ಸೈನಿಕನ ಕೆಲಸಗಳನ್ನು ಮಾತ್ರ ಮಾಡಿಸಲು ಸಾಧ್ಯವಾಗುತ್ತದೆ. ಸಶಸ್ತ್ರ ಪಡೆಗಳ ರಾಡಾರ್, ಮಿಸೈಲ್, ವೈದ್ಯಕೀಯ ಮತ್ತು ಎಂಜಿನಿಯರಿಂಗ್ ವಿಭಾಗಗಳಲ್ಲಿ ಸೇವೆ ಸಲ್ಲಿಸಲು ಹೆಚ್ಚಿನ ತರಬೇತಿಯ ಅಗತ್ಯವಿರುವುದರಿಂದ ಅಗ್ನಿವೀರರಲ್ಲಿ ಶಾಶ್ವತವಾಗಿ ನೇಮಕಾತಿಯಾಗುವ 25% ಸೈನಿಕರನ್ನು ಈ ವಿಭಾಗದಲ್ಲಿ ಮುಂದೆ ತರಬೇತುಗೊಳಿಸಲಾಗುತ್ತದೆ. ಮಿಲಿಟರಿಯ ಜೀವನ ವಿಧಾನಕ್ಕೆ ಹೊಂದಿಕೊಳ್ಳಲು ಕಷ್ಟವಾಗುವ ಸೈನಿಕರಿಗೆ ಮಿಲಿಟರಿಯಿಂದ ಹೊರಗೆ ಹೋಗುವ ವ್ಯವಸ್ಥೆ ಕಲ್ಪಿಸದಿದ್ದರೆ ಸೇನೆಯಲ್ಲಿ ಅತೃಪ್ತರ ಸಂಖ್ಯೆಯು ಹೆಚ್ಚಾಗಿ ಅಲ್ಲಿನ ವಾತಾವರಣವು ನಕಾರಾತ್ಮಕವಾಗುವ ಸಂಭವವೂ ಇದೆ. ನಾಲ್ಕು ವರ್ಷಗಳ ಸೇವೆಯ ತರುವಾಯ ಪ್ರತಿಯೊಬ್ಬ ಯುವಕನಿಗೂ ಸೇನೆಯ ವಾತಾವರಣದ ಸ್ಪಷ್ಟವಾದ ಚಿತ್ರಣ ಸಿಗುತ್ತದೆ. ತನ್ನ ಸಾಮರ್ಥ್ಯಕ್ಕೆ ಮಿಲಿಟರಿ ತಕ್ಕದಾದ ವೇದಿಕೆಯಲ್ಲದಿದ್ದರೆ ಸೇನೆಯಲ್ಲಿ ಮೈಗೂಡಿಸಿಕೊಂಡ ಕೌಶಲ್ಯಗಳೊಂದಿಗೆ ಆತ ನಾಗರಿಕ ಸಮಾಜದ ಜೀವನಕ್ಕೆ ಮರಳುವ ಅವಕಾಶ ಕಲ್ಪಿಸುವುದರಿಂದ ಅದೇ ಜಾಗದಲ್ಲಿ ಸೇವೆ ಸಲ್ಲಿಸಲು ಮತ್ತೊಬ್ಬ ಉತ್ಸಾಹಿ ಯುವಕನಿಗೆ ಅವಕಾಶ ದೊರಕುತ್ತದೆ. ನಾಲ್ಕು ವರ್ಷಗಳ ಅಲ್ಪಾವಧಿಯ ವಾಲಂಟರಿ ಸೇವೆಯಾದ ಈ ಯೋಜನೆಯಿಂದ ನಮ್ಮ ದೇಶದ ಯುವ ಜನತೆಗೆ ಉದ್ಯೋಗಾವಕಾಶಗಳು ಹೆಚ್ಚಾಗುತ್ತವೆ ಮತ್ತು ವರ್ಷಗಳು ಕಳೆದಂತೆ ಸೇನೆಯ ವಾತಾವರಣದಲ್ಲಿ ಕೆಲಸ ಮಾಡಿ ಅನುಭವವಿರುವ ಲಕ್ಷಾಂತರ ಜನರು ನಮ್ಮ ನಾಗರಿಕ ಸಮಾಜಕ್ಕೆ ಮರಳುತ್ತಿದೆ. ಸೇನೆಯ ಮೌಲ್ಯಗಳಾದ ಶಿಸ್ತು, ಸಮಯಪಾಲನೆ, ಕರ್ತವ್ಯ ಪ್ರಜ್ಞೆ, ಜಾತ್ಯತೀತ ನಿಲುವುಗಳು ಮತ್ತು ದೇಶದ ಅಖಂಡತೆಯ ಬಗ್ಗೆ ಗೌರವವಿರುವ ಲಕ್ಷಾಂತರ ಜನರು ನಾಗರಿಕ ಸಮಾಜದಲ್ಲಿದ್ದರೆ ದೇಶದ ಆಂತರಿಕ ಮತ್ತು ಸಾಮಾಜಿಕ ವಾತಾವರಣ ಹೆಚ್ಚು ಸ್ವಚ್ಛವಾಗಿರುತ್ತದೆ.

ಅಗ್ನಿಪಥ ಯೋಜನೆಯನ್ನು ಕಾರ್ಯರೂಪಕ್ಕೆ ತರುವಲ್ಲಿ ಎದುರಾಗುವ ಸವಾಲುಗಳನ್ನು ಯಶಸ್ವಿಯಾಗಿ ನಿಭಾಯಿಸದಿದ್ದರೆ ಸಶಸ್ತ್ರ ಪಡೆಗಳಲ್ಲಿ ಗೊಂದಲವುಂಟಾಗಿ ದೇಶದ ಭದ್ರತೆಗೆ ತೊಡಕಾಗಬಹುದು. ಸಾಮಾನ್ಯ ಸೈನಿಕರಿಗೆ 9 ತಿಂಗಳಿಂದ ಒಂದು ವರ್ಷಗಳ ಕಾಲವಿದ್ದ ಮಿಲಿಟರಿ ತರಬೇತಿಯನ್ನು ಈ ಯೋಜನೆಯಲ್ಲಿ 6 ತಿಂಗಳುಗಳಿಗೆ ಕಡಿತಗೊಳಿಸಲಾಗಿದೆ. ಆ ಕಾರಣದಿಂದಾಗಿ ಅಗ್ನಿವೀರರ ತರಬೇತಿ ಮಾದರಿಯೂ ಇತರ ದೇಶಗಳಂತೆ ಹೆಚ್ಚು ಆಧುನಿಕವಾಗಿರುತ್ತದೆ. ಧೀರ್ಘಕಾಲ ಒಂದೇ ರೆಜಿಮೆಂಟಿನಲ್ಲಿ ಸೇವೆ ಸಲ್ಲಿಸುವವರ ಸಂಖ್ಯೆ ಕಡಿಮೆಯಾಗುವುದರಿಂದ ಭಾರತೀಯ ಸೇನೆಯ ರೆಜಿಮೆಂಟಲ್ ಪರಂಪರೆ ಕೂಡ ಮೊದಲಿನಂತಿರುವುದಿಲ್ಲ. ಎರಡು ಶತಮಾನಗಳ ಹಿಂದೆ ಬ್ರಿಟಿಷರು ಪಾಲಿಸುತ್ತಿದ್ದ ಆಲದ ಮರಕ್ಕೆ ಸುತ್ತು ಬರುವ ಕೆಲವು ಸಂಪ್ರದಾಯ ಕಾಲಾವಧಿ ಮುಗಿದಿರುವುದನ್ನು

ವಿಶ್ವದ ಇತರ ದೇಶದ ಸೇನೆಗಳು ಗುರುತಿಸಿವೆ. ಅಂತೆಯೇ, ಭಾರತೀಯ ಸೇನೆಯೂ ತನ್ನ ಕೆಲವು ಕೊಲೋನಿಯಲ್ ಕ್ರಮಗಳ ಬಗ್ಗೆ ಪುನರ್ ಪರಿಶೀಲಿಸಲು ಇದು ಸಕಾಲವಾಗಿದೆ.

ಅಗ್ನಿಪಥ ಯೋಜನೆಯ ಕೆಲವು ನೀತಿ–ನಿಯಮಗಳನ್ನು ಸರ್ಕಾರ ಮುಂದಿನ ದಿನಗಳಲ್ಲಿ ಪುನರ್‌ಪರಿಶೀಲಿಸಬೇಕಾಗಬಹುದು. ಗರಿಷ್ಠ ವಯೋಮಿತಿಯನ್ನು 23 ವರ್ಷಗಳಿಗೆ ಇಳಿಸಿರುವುದರಿಂದ ಈಗಾಗಲೇ ಪದವಿ ಶಿಕ್ಷಣ ಪಡೆದು ಸೇನೆಗೆ ಸೇರುವ ಆಕಾಂಕ್ಷೆಯಿದ್ದ ಒಂದಷ್ಟು ಯುವಸಮೂಹ ವಯಸ್ಸಿನ ಕಾರಣದಿಂದ ಈ ಅವಕಾಶದಿಂದ ವಂಚಿತವಾಗಲೂಬಹುದು. ಗ್ರಾಚ್ಯುಟಿ ಹಣ ಪಡೆಯಲು ನಿಯಮಗಳ ಪ್ರಕಾರ ಕನಿಷ್ಠ ಐದು ವರ್ಷಗಳ ಸೇವೆ ಸಲ್ಲಿಸುವುದು ಅನಿವಾರ್ಯವಾಗಿರುತ್ತದೆ. ನಾಲ್ಕು ವರ್ಷಗಳ ಕಾಲ ಸೇವೆಸಲ್ಲಿಸಿದವರಿಗೆ ಗ್ರಾಚ್ಯುಟಿ ಸೌಲಭ್ಯ ನೀಡಲು ಬರುವುದಿಲ್ಲ ಮತ್ತು ಈಗಿರುವ ನಿಯಮಗಳ ಪ್ರಕಾರ  ಗ್ರಾಚ್ಯುಟಿ ಪಡೆಯದೆ ಸೇನೆಯಿಂದ ಹೊರಬಂದರೆ ಅವರನ್ನು ಮಾಜಿಸೈನಿಕರು ಎಂದು ಪರಿಗಣಿಸಲು ತಾಂತ್ರಿಕ ತೊಡಕಾಗುತ್ತದೆ. 5 ವರ್ಷಗಳ ಸೇವೆ ಸಲ್ಲಿಸಿ ಗ್ರಾಚ್ಯುಟಿಗೆ ಅರ್ಹರಾದರೆ ಅಗ್ನಿವೀರರಿಗೆ ಒಂದಷ್ಟು ಆರ್ಥಿಕ ಲಾಭವಾಗುವುದು ಮತ್ತು ಅದು ಪಿಂಚಣಿಯಂತೆ ಪ್ರತಿ ತಿಂಗಳು ನೀಡಬೇಕಾದ ಆರ್ಥಿಕ ಹೊರೆಯಾಗುವುದಿಲ್ಲ ಅಗ್ನಿಪಥ ಯೋಜನೆಯು ದೇಶದ ಯುವಸಮೂಹವನ್ನು ಎಳ್ಳಷ್ಟೂ ಆಕರ್ಷಿಸದಿದ್ದರೆ ಪ್ಯಾರಾಮಿಲಿಟರಿ, ಪೊಲೀಸ್ ನೌಕರಿಯನ್ನು ಯುವ ಸಮೂಹ ಮೊದಲಿಗೆ ಆಯ್ದು, ಸಶಸ್ತ್ರ ಪಡೆಗಳು ಯುವಜನತೆಯ ಕಡೆಯ ಆಯ್ಕೆಯಾಗಬಹುದು.

ಅಗ್ನಿಪಥದ ಕೆಲವು ನೀತಿನಿಯಮಗಳನ್ನು ದೇಶದ ಆರ್ಥಿಕ ಪರಿಸ್ಥಿತಿ, ಸೇನೆಯ ಮನೋಬಲ ಮತ್ತು ಅಗ್ನಿವೀರರ ಭವಿಷ್ಯ ಮನಸಿನಲ್ಲಿಟ್ಟುಕೊಂಡು ಸರ್ಕಾರ ಕೊಂಚ ತಿದ್ದುಪಡಿ ಮಾಡಲೂಬಹುದು. ಆದರೆ  ಭಾರತಿಯ ಸೇನೆಯ ನೇಮಕಾತಿ ಪ್ರಕ್ರಿಯೆಯ ನವೀಕರಣ ಮತ್ತು ಡಿಫೆನ್ಸ್ ಬಜೆಟಿನ ಮೇಲಿರುವ ಪಿಂಚಣಿ ಹೊರೆ ತಗ್ಗಿಸುವುದು ದೇಶದ ಹಿತದೃಷ್ಟಿಯಿಂದ ಅನಿವಾರ್ಯ. ಭಾರತ ದೇಶದ ಸುರಕ್ಷತೆಗಾಗಿ ಸೇನೆಯಿದೆಯೇ ಹೊರತು, ಪಾಕಿಸ್ತಾನದಲ್ಲಿ ನಡೆಯುವಂತೆ ಸೇನೆಯ ಎಲ್ಲಾ ಬೇಡಿಕೆ ಪೂರೈಸಲು ದೇಶವನ್ನು ಅಡವಿಡಲು ಬರುವುದಿಲ್ಲ.

ಈ ಅಗ್ನಿಪಥ ಯೋಜನೆಯನ್ನು ಜಾರಿಗೊಳಿಸುವಲ್ಲಿ ತೋರಿಸುತ್ತಿರುವ ಉತ್ಸಾಹವನ್ನು ಇದೇ ಅಗ್ನಿವೀರರು ತಮ್ಮ 4 ವರ್ಷಗಳ ಸೇವಾವಧಿ ಮುಗಿಸಿ ಹೊರಬರುವಾಗಲೂ ಸರ್ಕಾರ ತೋರಿಸಬೇಕಾಗುತ್ತದೆ. ಶಾರ್ಟ್ ಸರ್ವಿಸ್ ಕಮಿಷನ್ ಸೇವೆ ಸಲ್ಲಿಸಿ ಹೊರಬಂದ ಅಧಿಕಾರಿಗಳಿಗೆ ದೇಶದ ಪ್ರಖ್ಯಾತ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸಂಸ್ಥೆಗಳಲ್ಲಿ 6 ತಿಂಗಳ ಉಚಿತ ಕೋರ್ಸ್ ಮಾಡುವ ಅವಕಾಶವನ್ನು ಕಲ್ಪಿಸಿ ಅವರ ಉದ್ಯೋಗಾವಕಾಶಗಳನ್ನು ಹೆಚ್ಚಿಸಿದಂತೆ ದೇಶಕ್ಕಾಗಿ ತಮ್ಮ ಯೌವ್ವನವನ್ನು ಸಮರ್ಪಿಸಿದ ಅಗ್ನಿವೀರರನ್ನೂ ಸರ್ಕಾರವೂ ಮರೆಯುವಂತಿಲ್ಲ. ಅಗ್ನಿವೀರರು ತಮ್ಮ ಅವಧಿ ಮುಗಿದ ನಂತರ ಹೊರಬರುವಾಗ, 12ನೇ ತರಗತಿಯ ವಿದ್ಯಾರ್ಹತೆಯ ಪ್ರಮಾಣ ಪತ್ರವನ್ನು ಸೇನೆಯ  ಕೋರ್ಸಿನ ಮೂಲಕ ಪಡೆದಿರುವುದರಿಂದ, ಹೆಚ್ಚಿನ ಶಿಕ್ಷಣ ಪಡೆಯಲು ಆಸಕ್ತಿಯಿರುವ ಅಗ್ನಿವೀರರಿಗೆ ಸರ್ಕಾರವು ದೇಶದ ಎಲ್ಲಾ ಯೂನಿವರ್ಸಿಟಿಗಳಲ್ಲಿ ಉಚಿತ ಪದವಿ ಶಿಕ್ಷಣಕ್ಕೆ ಮೀಸಲಾತಿ ಕಲ್ಪಿಸಬೇಕಾಗುತ್ತದೆ. ಅಗ್ನಿವೀರರಿಗೆ ಪೊಲೀಸ್ ಮತ್ತು ಸರ್ಕಾರದ ವಿವಿಧ ಇಲಾಖೆಗಳ ನೌಕರಿಗಳಲ್ಲಿ ಸೂಕ್ತ ಮೀಸಲಾತಿಯನ್ನು  ಕಲ್ಪಿಸಿದಲ್ಲಿ ನಿವೃತ್ತ ಅಗ್ನಿವೀರರಿಗೆ ಉದ್ಯೋಗಾವಕಾಶಗಳು ಹೆಚ್ಚಾಗುತ್ತವೆ. ಸಮಗ್ರವಾಗಿ ಯೋಚಿಸಿ ಸಮರ್ಪಕವಾಗಿ ಜಾರಿಗೊಳಿಸಿದ್ದಲ್ಲಿ ಅಗ್ನಿಪಥದಿಂದಾಗಿ ದೇಶಕ್ಕೂ, ಸಶಸ್ತ್ರ ಪಡೆಗೂ ಮತ್ತು ಅಗ್ನಿವೀರರಿಗೂ ಒಳಿತಾಗುತ್ತದೆ. 90ರ ದಶಕದ ಆರ್ಥಿಕ ಉದಾರೀಕರಣದಂತೆ, ಈಗ ಸಶಸ್ತ್ರ ಪಡೆಗಳ ನೇಮಕಾತಿಯ ನವೀಕರಣವೂ ನಮ್ಮ ದೇಶಕ್ಕೆ ವಾಸ್ತವದ ಜೊತೆಗೆ ಹೆಜ್ಜೆ ಹಾಕಬೇಕಾದ ಅನಿವಾರ್ಯತೆಯಿದೆ. ಒಂದು ಕಡೆ ಪಾಕಿಸ್ತಾನ, ಮತ್ತೊಂದು ಕಡೆ ಚೀನಾ ನಮ್ಮತ್ತ ಕಣ್ಣಿಟ್ಟಿರುವಾಗ ಸಶಸ್ತ್ರ ಪಡೆಗಳನ್ನು ಸಶಕ್ತಗೊಳಿಸುವಲ್ಲಿ ಭಾರತ ಎಡವದಂತೆ ಹೆಜ್ಜೆ ಹಾಕುವುದು ಅತ್ಯಗತ್ಯವಾಗಿದೆ.

ಲೇಖಕರು– ಮೇಜರ್ ಡಾ. ಖುಶ್ವಂತ್ ಕೋಳಿಬೈಲು.

ಆಧಾರ: ವಿಜಯ ಕರ್ನಾಟಕ, ದಿನಾಂಕ:20.06.2022.

# 21. ನ್ಯಾಷನಲ್ ಹೆರಾಲ್ಡ್ ಪ್ರಕರಣದ ಸುತ್ತಮುತ್ತ

ಜಾರಿ ನಿರ್ದೇಶನಾಲಯದ ಅಧಿಕಾರಿಗಳು ನ್ಯಾಶನಲ್ ಹೆರಾಲ್ಡ್ ಪತ್ರಿಕೆಯ ವಹಿವಾಟಿಗೆ ಸಂಬಂಧಪಟ್ಟಂತೆ ನಡೆದಿದೆ ಎನ್ನಲಾದ ಅಕ್ರಮ ಹಣ ವರ್ಗಾವಣೆ ಪ್ರಕರಣದ ಕುರಿತು ರಾಹುಲ್ ಗಾಂಧಿ ಮತ್ತು ಸೋನಿಯಾ ಗಾಂಧಿ ಅವರನ್ನು ಪ್ರಶ್ನೆ ಮಾಡುತ್ತಲೇ ಇದ್ದಾರೆ. ತನಿಖೆಯ ಸ್ವರೂಪವೇನು? ಅದು ಯಾವ ಹಂತದಲ್ಲಿದೆ? ಸಂಪೂರ್ಣ ವಿವರಗಳು ಇಲ್ಲಿವೆ ನೋಡಿ.

ನ್ಯಾಷನಲ್ ಹೆರಾಲ್ಡ್ ಪತ್ರಿಕೆಯ ಒಡೆತನ ಹೊಂದಿರುವ ಕಂಪನಿಗಳಲ್ಲಿ ಅಕ್ರಮ ಹಣ ವರ್ಗಾವಣೆ ನಡೆದಿರುವ ಪ್ರಕರಣಕ್ಕೆ ಸಂಬಂಧಪಟ್ಟಂತೆ ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರನ್ನು ಈ ವಾರ ಜಾರಿ ನಿರ್ದೇಶನಾಲಯ (ಇಡಿ) ಅಧಿಕಾರಿಗಳು ಸತತ ಮೂರು ದಿನಗಳ ಕಾಲ ವಿಚಾರಣೆ ನಡೆಸಿದ್ದಾರೆ. ರಾಹುಲ್ ಅವರನ್ನು ಇ.ಡಿ. ಅಧಿಕಾರಿಗಳು ಕರೆಸಿಕೊಂಡು ಪ್ರಶ್ನೆಗಳ ಮೇಲೆ ಪ್ರಶ್ನೆಗಳನ್ನು ಕೇಳಿದ್ದಾರೆ. ಅವರ ತಾಯಿ ಸೋನಿಯಾ ಗಾಂಧಿ ಅವರನ್ನು ಜೂನ್ 23 ರಂದು ವಿಚಾರಣೆಗೆ ಒಳಪಡಿಸುವುದಾಗಿ ಹೇಳಲಾಗಿದೆ. ಇದಕ್ಕೂ ಮುನ್ನ ಇ.ಡಿ. ಅಧಿಕಾರಿಗಳು ಕಾಂಗ್ರೆಸ್ ಮುಖಂಡರಾದ ಮಲ್ಲಿಕಾರ್ಜುನ್ ಖರ್ಗೆ ಮತ್ತು ಪವನ್ ಬನ್ಸಾಲ್ ಅವರನ್ನೂ ವಿಚಾರಣೆಗೆ ಒಳಪಡಿಸಿದ್ದರು.

**ಈ ಪ್ರಕರಣದ ಹೂರಣವೇನು:** 2013ರಲ್ಲಿ ಬಿಜೆಪಿ ಸಂಸದ ಸುಬ್ರಹ್ಮಣ್ಯಯನ್ ಸ್ವಾಮಿ ಅವರು ಸಲ್ಲಿಸಿದ್ದ ಪಿಟಿಷನ್ ಮೇಲೆ ನಡೆದ ವಿಚಾರಣೆಯ ಫಲವಾಗಿ ವಿಚಾರಣಾ ನ್ಯಾಯಾಲಯವು ಆದೇಶವೊಂದನ್ನು ಪ್ರಕಟಿಸಿದ್ದು, ಅದರಂತೆ ನ್ಯಾಷನಲ್ ಹೆರಾಲ್ಡ್ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಸೋನಿಯ ಮತ್ತು ರಾಹುಲ್ ಗಾಂಧಿಯವರ ವರಮಾನ ತೆರಿಗೆ ಲೆಕ್ಕಾಚಾರ ಸಲ್ಲಿಕೆಯ ಕುರಿತಾಗಿ ಪುನರ್ ತನಿಖೆ ಮಾಡಲು ಆದೇಶಿಸಿದೆ.

ನ್ಯಾಷನಲ್ ಹೆರಾಲ್ಡ್ ಪತ್ರಿಕೆಯನ್ನು ತಮ್ಮ ಸ್ವಾಧೀನಕ್ಕೆ ಒಳಪಡಿಸಿಕೊಳ್ಳುವ ವಹಿವಾಟಿನಲ್ಲಿ ಗಾಂಧಿ ಕುಟುಂಬ ನಡೆಸಿರುವ ಹಣ ವರ್ಗಾವಣೆಯಲ್ಲಿ ಅಕ್ರಮ, ಮೋಸ ಮತ್ತು ಭ್ರಷ್ಟಾಚಾರ ನಡೆದಿದೆ ಎಂಬುದು ಸ್ವಾಮಿಯವರ ದೂರಿನ ಸಾರಂಶ. ಗಾಂಧಿ ಕುಟುಂಬ ನ್ಯಾಶನಲ್ ಹೆರಾಲ್ಡ್ ಪತ್ರಿಕೆಯನ್ನು ಅದು ಹೊಂದಿರುವ ಸ್ಥಿರಾಸ್ತಿಗಳ ಸಹಿತವಾಗಿ ಅದರ ಮೂಲ ಪಬ್ಲಿಶಿಂಗ್ ಕಂಪನಿಯಿಂದ ಖರೀದಿ ಮಾಡಿದೆ ಎಂಬುದು ಆರೋಪ.

ಯಂಗ್ ಇಂಡಿಯನ್ ಎಂಬ ಕಂಪನಿಯನ್ನು ಹುಟ್ಟುಹಾಕಲಾಗಿದ್ದು, ಅದರಲ್ಲಿ ಶೇ.76 ಷೇರು ಹೊಂದಿರುವ ಇವರು ಅಸೋಸಿಯೇಟೆಡ್ ಜರ್ನಲ್ಸ್ ಲಿಮಿಟೆಡ್ ಮಾಲೀಕತ್ವದಲ್ಲಿದ್ದ ನ್ಯಾಶನಲ್ ಹೆರಾಲ್ಡ್ ಪತ್ರಿಕೆಯನ್ನು ಅದು ಹೊಂದಿದ್ದ ಎಲ್ಲ ಸ್ಥಿರಾಸ್ತಿಗಳ ಸಹಿತ ಖರೀದಿಸಿದೆ. 50 ಲಕ್ಷದ ಷೇರು ಬಂಡವಾಳದೊಂದಿಗೆ ಸ್ಥಾಪಿತವಾದ ಯಂಗ್ ಇಂಡಿಯನ್ ಕಂಪನಿಯು ಅಸೋಸಿಯೇಟೆಡ್ ಜರ್ನಲ್ಸ್ ಲಿಮಿಟೆಡ್‌ಗೆ ಕಾಂಗ್ರೆಸ್ ಪಕ್ಷದ ವತಿಯಿಂದ ರೂ.90.25 ಕೋಟಿ ಪಾವತಿ ಕೊಡಿಸಿದ್ದು, ಅಲ್ಲಿ ಅಕ್ರಮ ಹಣ ವರ್ಗಾವಣೆ ಮತ್ತು ಭ್ರಷ್ಟಾಚಾರ ನಡೆದಿದೆ ಎಂಬುದು ಆರೋಪ. ಈ ಪ್ರಕರಣದಲ್ಲಿ ಸೋನಿಯಾ ಮತ್ತು ರಾಹುಲ್ ಅವರಿಗೆ ನ್ಯಾಯಲಯವು 19, ಡಿಸೆಂಬರ್ 2015 ರಂದು ಜಾಮೀನು ಮಂಜೂರು ಮಾಡಿತ್ತು.

**ಪ್ರತಿ ಬಾರಿ 2010ರ ತನಕ ಕೊಡುತ್ತ ಬಂತು. ಆಮೇಲೆ ಏನಾಯಿತು:** 2010ರ ಕೊನೆಯ ವೇಳೆಗೆ ಎಜೆಎಲ್ ಕಂಪನಿಗೆ ಕೊಡಲಾಗಿದ್ದ ಒಟ್ಟು ಸಾಲದ ಅಸಲು ಮೊತ್ತ 90.21 ಕೋಟಿ ರೂಪಾಯಿಗಳಷ್ಟಾಗಿತ್ತು. ಅದರ ಮ್ಯಾನೇಜ್‌ಮೆಂಟ್ ಮಂಡಳಿಯವರು ಎಐಸಿಸಿಗೆ ಹಿಂತಿರುಗಿಸಬೇಕಾದ ಸಾಲದ ಬಗ್ಗೆ ಯಾವುದೇ ಕ್ರಮ ವಹಿಸಿರಲಿಲ್ಲ. ವರಮಾನ ತೆರಿಗೆ ಅಧಿಕಾರಿಗಳ ತನಿಖೆಯ ವೇಳೆ ದಾಖಲಾದಂತೆ ಎಜೆಎಲ್ ಕಂಪನಿಯ ಸ್ಥಿರಾಸ್ತಿಗಳ ಮಾರುಕಟ್ಟೆ ಮೌಲ್ಯ 413 ಕೋಟಿ ರೂಪಾಯಿಗಳಷ್ಟಿತ್ತು.

ನವೆಂಬರ್ 23, 2010 ರಂದು ಯಂಗ್ ಇಂಡಿಯನ್ ಪ್ರೈವೇಟ್ ಲಿಮಿಟೆಡ್ ಎಂಬ ವಿಧಿ–25 ರಡಿ ಕಂಪನಿಯು ಸ್ಥಾಪಿತವಾಯಿತು. ಸುಮನ್ ದುಬೆ ಮತ್ತು ಸತ್ಯನ್ ಗಂಗಾರಾಮ (ಸ್ಯಾಮ್) ಪಿತ್ರೋಡಾ ಅದರ ನಿರ್ದೇಶಕರಾಗಿದ್ದರು. ಭಾರತದ ಯುವ ಸಮೂಹದಲ್ಲಿ ಪ್ರಜಾಪ್ರಭುತ್ವ ಮತ್ತು

ಜಾತ್ಯಾತೀತ ಸಮಾಜ ನಿರ್ಮಾಣದ ಕುರಿತಾಗಿ ಅರಿವು ಮೂಡಿಸುವುದು ಆ ಕಂಪನಿಯ ಮೂಲ ಉದ್ದೇಶ ಎಂದು ಹೇಳಲಾಗಿತ್ತು.

ಕಂಪನಿ ಸ್ಥಾಪನೆಯಾದ ಕೂಡಲೇ ಆ ಇಬ್ಬರು ನಿರ್ದೇಶಕರು ತಮ್ಮ ಬಳಿ ಇದ್ದ ಷೇರುಗಳನ್ನು ಕಾಂಗ್ರೆಸ್ ನಾಯಕರಾದ ಆಸ್ಕರ್ ಫರ್ನಾಂಡಿಸ್, ಸೋನಿಯ ಗಾಂಧಿ, ರಾಹುಲ್ ಗಾಂಧಿ ಮತ್ತು ಮೋತಿಲಾಲ್ ವೋರಾ ಅವರಿಗೆ ವರ್ಗಾವಣೆ ಮಾಡಿದರು. ಸೆಪ್ಟಂಬರ್ 13, 2010ರಲ್ಲಿ ರಾಹುಲ್ ಗಾಂಧಿ ನಿರ್ದೇಶಕರಾಗಿ ನೇಮಕವಾದರು ಮತ್ತು ಜನವರಿ 22, 2011ರಲ್ಲಿ ಸೋನಿಯಾ ಗಾಂಧಿ ನಿರ್ದೇಶಕ ಮಂಡಳಿಗೆ ಸೇರಿಕೊಂಡರು.

ಮಾರ್ಚ್ 2017ರಲ್ಲಿ ಸೋನಿಯಾ ಮತ್ತು ರಾಹುಲ್ ಗಾಂಧಿಯವರು ತಲಾ 38% ಷೇರುಗಳ ಮಾಲೀಕತ್ವ ಪಡೆದುಕೊಂಡರೆ, ಮಿಕ್ಕುಳಿದ 24% ಷೇರುಗಳನ್ನು ವೋರ ಮತ್ತು ಫರ್ನಾಂಡಿಸ್ ಅವರಿಗೆ ಸಮಾನವಾಗಿ ಹಂಚಲಾಗಿತ್ತು. ಯಂಗ್ ಇಂಡಿಯನ್ ಕಂಪನಿಯು ವರಮಾನ ತೆರಿಗೆ ಕಾಯಿದೆ ಸೆಕ್ಷನ್ 12ಎ ಅಡಿಯಲ್ಲಿ ಚಾರಿಟೇಬಲ್ ಸಂಸ್ಥೆಯಾಗಿ ಸ್ಥಾಪಿತವಾಗಿತ್ತು, 100% ತೆರಿಗೆ ವಿನಾಯಿತಿ ಅರ್ಹತೆಯನ್ನು ಪಡೆದುಕೊಂಡಿತ್ತು.

**ಎಜೆಎಲ್–ಯಂಗ್ ಇಂಡಿಯನ್–ಎ.ಐ.ಸಿ.ಸಿ ನಡುವಿನ ವ್ಯವಹಾರವೇನು:** ಎಐಸಿಸಿಗೆ ಕೊಡಬೇಕಾಗಿದ್ದ 90ಕೋಟಿ ಮೊತ್ತದ ಎಜೆಎಲ್ ಕಂಪನಿಯ ಸಾಲದ ಪಾವತಿ ಹೊಣೆಯನ್ನು ಹೊಸತಾಗಿ ರಚಿತವಾದ ಯಂಗ್ ಇಂಡಿಯನ್ ಕಂಪನಿಗೆ ಹಸ್ತಾಂತರಿಸುವುದಕ್ಕೆ ಎಐಸಿಸಿ ತೀರ್ಮಾನಿಸಿತು ಮತ್ತು ಅದರಂತೆ ಈ ವಹಿವಾಟಿಗೆ ಕೇವಲ 50 ಲಕ್ಷ ರೂಪಾಯಿಗಳ ಪಾವತಿ ವಹಿವಾಟು ನಡೆಯಿತು. ಈ ಸಾಲದ ಬಾಬ್ತಿನ ಮೊತ್ತಕ್ಕೆ ಪ್ರತಿಯಾಗಿ ಎಜೆಎಲ್ ಕಂಪನಿಯು 9,02,16,899 ಈಕ್ವಿಟಿ ಷೇರುಗಳನ್ನು ಯಂಗ್ ಇಂಡಿಯಾ ಕಂಪನಿಗೆ ಹಂಚಿಕೆ ಮಾಡಿತು. ಈ ರೂಪದಲ್ಲಿ ಎಜೆಎಲ್ ಕಂಪನಿಯ 99.99% ಷೇರುಗಳು ಯಂಗ್ ಇಂಡಿಯನ್ ಕಂಪನಿಯ ಪಾಲಾದವು.

ವರಮಾನ ತೆರಿಗೆ ಇಲಾಖೆಯ ಆರೋಪವೇನೆಂದರೆ ಎಜೆಎಲ್ ಕಂಪನಿಯ 100% ಷೇರುಗಳನ್ನು ಹೊಂದುವ ಹುನ್ನಾರದ ಭಾಗವಾಗಿ, ರಾಹುಲ್ ಗಾಂಧಿ ಮತ್ತು ಪ್ರಿಯಂಕಾ ಗಾಂಧಿ ವಾದ್ರಾ ಅವರು ಅನುಕ್ರಮವಾಗಿ 47,513 ಮತ್ತು 2,62,411 ಷೇರುಗಳನ್ನು ರತನ್ ದೀಪ್ ಟ್ರಸ್ಟ್ ಮತ್ತು ಜನಹಿತ ನಿಧಿ ಟ್ರಸ್ಟ್ ಹೆಸರುಗಳಲ್ಲಿ ಖರೀದಿ ಮಾಡಿಕೊಂಡರು.

ಎಜೆಎಲ್ ಕಂಪನಿಯನ್ನು ವಶಪಡಿಸಿಕೊಳ್ಳುವ ವೇಳೆಯಲ್ಲಿ ಯಂಗ್ ಇಂಡಿಯಾ ಕಂಪನಿ ಹೊಂದಿದ್ದ ಬಂಡವಾಳ 5ಲಕ್ಷ ಮಾತ್ರ ಆಗಿತ್ತು. ಎಜೆಎಲ್ ಕಂಪನಿಯನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಬೇಕಾದ ಐವತ್ತು ಲಕ್ಷ ರೂಪಾಯಿ ಅದರ ಬಳಿ ಇರಲಿಲ್ಲ. ಹಾಗಾಗಿ ಅದು ಒಂದು ಕೋಟಿ ರೂಪಾಯಿ ಸಾಲವನ್ನು ಕೋಲ್ಕತ್ತಾ ಮೂಲದ ಡಾಟೆಕ್ಸ್ ಮರ್ಚಂಡೈಸ್ ಪ್ರೈ. ಲಿಮಿಟೆಡ್ ಕಂಪನಿಯಿಂದ ಪಡೆಯಲು ತೀರ್ಮಾನಿಸಿತು. ವರಮಾನ ತೆರಿಗೆ ಇಲಾಖೆಯ ಆರೋಪದ ಪ್ರಕಾರ ಆರ್.ಪಿ.ಜಿ ಗ್ರೂಪಿನ ಮಾಲೀಕತ್ವಕ್ಕೆ ಸೇರಿರುವ ಡಾಟೆಕ್ಸ್ ಕಂಪನಿಯು ಕಮೀಷನ್ ವ್ಯವಹಾರ ನಡೆಸುವ ಸಂಸ್ಥಾಪನೆಯಾಗಿರುತ್ತದೆ. ಹಣಕಾಸು ಸಚಿವಾಲಯದ ಫೈನಾನ್ಸಿಯಲ್ ಇಂಟೆಲಿಜೆನ್ಸ್ ವಿಂಗ್ ಪ್ರಕಾರ ಈ ಒಂದು ಕೋಟಿ ರೂಪಾಯಿ ಸಾಲ ಕೂಡ ಅನುಮಾನಸ್ಪದ ವ್ಯವಹಾರವೆಂದು ಪರಿಗಣಿತವಾಗಿರುತ್ತದೆ. ಎಜೆಎಲ್ ಕಂಪನಿಯ ದಾಖಲೆ ಪುಸ್ತಕಗಳಲ್ಲಿ ಈ ಹಣ ವರ್ಗಾವಣೆಯ ಉಲ್ಲೇಖವಿದೆಯೇ ಹೊರತು ಬೇರಾವುದೇ ದಾಖಲೆಗಳ ಆಧಾರ ಹಣ ವರ್ಗಾವಣೆ ಕುರಿತಾಗಿ ಇಲ್ಲ ಎಂಬುದು ವರಮಾನ ತೆರಿಗೆ ಇಲಾಖೆಯ ಇನ್ನೊಂದು ಆರೋಪ.

**ಈ ವಹಿವಾಟಿನ ಸುತ್ತಮುತ್ತ ಎದ್ದ ಪ್ರಶ್ನೆಗಳೇನು:** ಕೇವಲ 50 ಲಕ್ಷ ರೂಪಾಯಿ ಮೊತ್ತಕ್ಕೆ ಎಐಸಿಸಿ ತಾನು ಕೊಟ್ಟಿದ್ದ ಸಾಲವನ್ನು ಯಂಗ್ ಇಂಡಿಯನ್ ಕಂಪನಿಗೆ ವರ್ಗಾವಣೆ ಮಾಡಿತ್ತು. ಎಜೆಎಲ್ ಕಂಪನಿಯು ಹಣ ಮರುಪಾವತಿ ಮಾಡುವ ಸ್ಥಿತಿಯಲ್ಲಿ ಇಲ್ಲ ಎಂದು ಆಗ ಉಲ್ಲೇಖಿಸಲಾಗಿತ್ತು. ವರಮಾನ ತೆರಿಗೆ ಇಲಾಖೆಯ ಪ್ರಕಾರ ನೂರಾರು ಕೋಟಿ ಸ್ಥಿರಾಸ್ತಿ ಹೊಂದಿದ್ದ ಎಜೆಎಲ್ ಕಂಪನಿ ಸಾಲ ಮರುಪಾವತಿ ಮಾಡುವ ಶಕ್ತಿ ಹೊಂದಿತ್ತು.

ಇನ್ನೊಂದು ಪ್ರಮುಖ ಆರೋಪವೆಂದರೆ ಹಿಂದೆ ಎಐಸಿಸಿ ಖಜಾಂಚಿಯಾಗಿದ್ದ ಮೋತಿಲಾಲ್ ವೋರಾ ಎಜೆಎಲ್ ಕಂಪನಿಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರೂ ಆಗಿದ್ದು, ಯಂಗ್ ಇಂಡಿಯಾದಲ್ಲೂ ನಿರ್ದೇಶಕರಾಗಿದ್ದರು. ಹೀಗೆ ಒಬ್ಬನೇ ವ್ಯಕ್ತಿ ಮೂರೂ ಸಂಸ್ಥಾಪನೆಗಳ ಆಯಕಟ್ಟಿನ ಜಾಗದಲ್ಲಿ ಅಧಿಕಾರದಲ್ಲಿರುವುದು ಅಸಹಜ ಮತ್ತು ಅನುಮಾನಕ್ಕೆ ಎಡೆಕೊಡುವ ನಡೆಯಾಗಿದೆ. ಅಲ್ಲದೇ ಜನಪ್ರತಿನಿಧಿ ಕಾಯಿದೆ–1950ರ ಪ್ರಕಾರ ಯಾವುದೇ ರಾಜಕೀಯ ಪಕ್ಷವು ಇತರರಿಗೆ ಸಾಲ ಕೊಡುವುದಕ್ಕೆ ಅವಕಾಶವಿರುವುದಿಲ್ಲ.

**ಐ.ಟಿ.ಪ್ರಕರಣಗಳು ಪ್ರಸ್ತುತ ಯಾವ ಹಂತದಲ್ಲಿದೆ:** ಯಂಗ್ ಇಂಡಿಯನ್ ಕಂಪನಿಯಲ್ಲಿ ತಾನು ನಿರ್ದೇಶಕನಾಗಿರುವ ವಿಚಾರವನ್ನು ಮುಚ್ಚಿಟ್ಟ ಬಗ್ಗೆ ಆರೋಪಿಸಿ ಐ.ಟಿ. ಇಲಾಖೆಯು ರಾಹುಲ್‌ಗೆ ಈ ಹಿಂದೆ ನೋಟೀಸ್ ಜಾರಿ ಮಾಡಿತ್ತು. ರಾಹುಲ್ ಹೊಂದಿರುವ ಷೇರುಗಳ ಮೌಲ್ಯ 154 ಕೋಟಿ ರೂಪಾಯಿ ಎಂದು ಐ.ಟಿ ಇಲಾಖೆ ಅಂದಾಜು ಮಾಡಿತ್ತು. ಆದರೆ ಅದಕ್ಕೂ ಮುನ್ನ ಈ ಷೇರುಗಳ ಮೌಲ್ಯ ರೂ.68 ಲಕ್ಷ ಎಂದು ದಾಖಲಿಸಲಾಗಿತ್ತು. ಇಂತಹದೇ ನೋಟಿಸ್‌ಗಳನ್ನು ಸೋನಿಯಾ ಮತ್ತು ಫರ್ನಾಂಡಿಸ್ ಅವರಿಗೂ ಜಾರಿ ಮಾಡಲಾಗಿತ್ತು. ಪ್ರಸ್ತುತ ಮಾರುಕಟ್ಟೆ ಮೌಲ್ಯವನ್ನು ಆಧರಿಸಿ ಅಸೆಸ್‌ಮೆಂಟ್ ಮಾಡುವ ಉದ್ದೇಶದಿಂದ ಕಡತವನ್ನು ಮತ್ತೆ ತೆರೆದು ವಿಚಾರಣೆಗೆ ಒಳಪಡಿಸುವುದಕ್ಕೆ ಇಲಾಖೆ ತೀರ್ಮಾನಿಸಿತ್ತು.

ಅಸೆಸ್‌ಮೆಂಟ್ ವೇಳೆ ಯಾವುದೇ ವರಮಾನವನ್ನೂ ಮುಚ್ಚಿಟ್ಟಿಲ್ಲ ಮತ್ತು ಎಲ್ಲ ಸಂಗತಿಗಳನ್ನೂ ಅರುಹಲಾಗಿದೆ ಎಂಬುದು ರಾಹುಲ್, ಸೋನಿಯಾ ಮತ್ತು ಫರ್ನಾಂಡಿಸ್ ಅವರ ವಾದ. ಈ ವಾದ ಸರಣಿಯ ನಡುವೆಯೇ ಪರಿಗಣಿಸಬೇಕಾದ ಇನ್ನೊಂದು ಅಂಶವೆಂದರೆ, ಯಂಗ್ ಇಂಡಿಯನ್ ಸೆಕ್ಷನ್–25ರಡಿ ರಚಿತವಾದ ಕಂಪನಿಯಾಗಿದ್ದು, ಅದು ವರಮಾನ ತೆರಿಗೆ ಕಾಯಿದೆಯ ಸೆಕ್ಷನ್–12ಎ ಅಡಿಯಲ್ಲಿ ವಿನಾಯಿತಿ ಕೋರಿಕೆ ಅರ್ಜಿ ದಾಖಲಿಸಿತ್ತು ಮತ್ತು ಮೇ 9, 2011 ರಲ್ಲಿ ಅದು ಮಂಜೂರು ಕೂಡ ಆಗಿತ್ತು.

ಅಕ್ಟೋಬರ್ 26, 2017ರಲ್ಲಿ ವರಮಾನ ತೆರಿಗೆ ಆಯುಕ್ತರು ಯಂಗ್ ಇಂಡಿಯನ್ ಕಂಪನಿಗೆ ಈ ಹಿಂದೆ ಕೊಡಲಾಗಿದ್ದ ಸೆಕ್ಷನ್ 12ಎ ಸ್ಥಾನಮಾನವನ್ನು ರದ್ದುಪಡಿಸಿ, ಕಂಪನಿ ಉದ್ದೇಶಿತ ಚಾರಿಟೇಬಲ್ ಸಂಗತಿಗಳಡಿ ಯಾವುದೇ ಕಾರ್ಯಾಚರಣೆ ಮಾಡಿಲ್ಲದ ಕಾರಣ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ವಿಶ್ಲೇಷಣೆ ಮಾಡಿದರು. ಐ.ಟಿ.ಟ್ರಿಬ್ಯುನಲ್ ಕೂಡ ಈ ತೀರ್ಮಾನವನ್ನು ಎತ್ತಿ ಹಿಡಿಯಿತು.

**ಕಾಂಗ್ರೆಸ್ ಈ ವಿಚಾರದಲ್ಲಿ ಹೇಗೆ ರಕ್ಷಣಾತ್ಮವಾಗಿದೆ:** ಹಣದುಬ್ಬರ, ಜಿಡಿಪಿ ಕುಸಿತ ಮತ್ತು ಸಾಮಾಜಿಕ ಅಶಾಂತಿ ಇರುವ ಈ ದಿನಗಳಲ್ಲಿ ಜನರ ಗಮನವನ್ನು ಬೇರೆಡೆಗೆ ಸೆಳೆಯುವ ಉದ್ದೇಶದಿಂದ ಮತ್ತು ರಾಜಕೀಯ ದ್ವೇಷದ ಹಿನ್ನೆಲೆಯಲ್ಲಿ ಬಿಜೆಪಿ ಸರ್ಕಾರ ಸುಖಾಸುಮ್ಮನೆ ಕಾಂಗ್ರೆಸ್ ಮೇಲೆ ಗೂಬೆ ಕೂರಿಸಲು ಇಂತಹದೊಂದು ಕಥೆಯನ್ನು ಸೃಷ್ಟಿಸಿದೆ ಎಂದು ಕಾಂಗ್ರೆಸ್ ಹೇಳುತ್ತಿದೆ. ಕಾಂಗ್ರೆಸ್ ನಾಯಕ ಅಭಿಷೇಕ್ ಮನು ಸಿಂಘ್ವಿ ಅವರ ಪ್ರಕಾರ ಕಳೆದ ಹಲವಾರು ದಶಕಗಳಿಂದ ಎ.ಜೆ.ಎಲ್. ಕಂಪನಿಯು ಆರ್ಥಿಕ ಹಿನ್ನಡೆ ಕಂಡಿದ್ದು, ಕಾಂಗ್ರೆಸ್ ಹಲವಾರು ಬಾರಿ ನೆರವಿನ ರೂಪದಲ್ಲಿ 90 ಕೋಟಿ ರೂಪಾಯಿಗಳನ್ನು ಅದಕ್ಕೆ ಕೊಟ್ಟಿದೆ. ತಾನು ಹೊಂದಿರುವ ಸಾಲದ ಹೊರೆಯಿಂದ ಹೊರಬರಲು ಬೇರಾವುದೇ ಕಂಪನಿ ಏನು ಮಾಡಬಹುದಿತ್ತೋ ಅದನ್ನೇ ಎ.ಜೆ.ಎಲ್ ಕಂಪನಿ ಕೂಡ ಮಾಡಿದೆ. ಹಾಗಾಗಿ ಸ್ವಾಭಾವಿಕವಾಗಿಯೇ ಯಂಗ್ ಇಂಡಿಯನ್ ಕಂಪನಿಗೆ ಷೇರುಗಳ ಮತ್ತು ಸಾಲದ ಹಂಚಿಕೆ ಮತ್ತು ಹಸ್ತಾಂತರ ಸಹಜ ಸ್ವರೂಪದಲ್ಲಿ ಆಗಿದೆ. ಯಂಗ್ ಇಂಡಿಯನ್ ಲಾಭಕ್ಕಾಗಿ ಸ್ಥಾಪಿತವಾದ ಸಂಸ್ಥಾಪನೆ ಅಲ್ಲವಾದ್ದರಿಂದ ಅದರ ಷೇರುದಾರರಿಗೆ ಡಿವಿಡೆಂಡ್ ಅಥವಾ ಲಾಭಾಂಶ ಕೊಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎನ್ನುತ್ತಾರೆ ಅಭಿಷೇಕ ಮನು ಸಿಂಘ್ವಿ.

ಆಧಾರ: ವಿಶ್ವವಾಣಿ, ದಿನಾಂಕ:20.06.2022.

* * * * *

ನಿರ್ದೇಶಕರು, ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು, ಕಾಸೂ 494 – 500 ಪ್ರತಿಗಳು